ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಅಂತರ್ ಸಂಬಂಧಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗೆಂದು ಸಲ್ಲಿಸಲಾದ ಮಹಾಪ್ರಬಂಧ)

ಸಂಶೋಧನಾ ಅಭ್ಯರ್ಥಿ

ಕೆ.ಎನ್. ಕವನ

ಮಾರ್ಗದರ್ಶಕ

ಡಾ|| ಕೆ.ಸಿ. ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ತೀರ್ಥಪಳ್ಳಿ (ತಾ), ಶಿವಮೊಗ್ಗ (ಜಿ).

ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಅಂತರ್ ಸಂಬಂಧಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗೆಂದು ಸಲ್ಲಿಸಲಾದ ಮಹಾಪ್ರಬಂಧ)

ಸಂಶೋಧನಾ ಅಭ್ಯರ್ಥಿ

ಕೆ.ಎನ್. ಕವನ

ಮಾರ್ಗದರ್ಶಕ

ಡಾ॥ ಕೆ.ಸಿ. ಶಿವಾರೆಡ್ಡಿ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿ

ಕನ್ನಡ ವಿಶ್ವವಿಧ್ಯಾಲಯ, ಹಂಪಿ

ತೀರ್ಥಹಳ್ಳಿ (ತಾ), ಶಿವಮೊಗ್ಗ (ಜಿ).

ಮಾರ್ಗದರ್ಶಕರ ದೃಢೀಕರಣ ಪತ್ರ

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿಯ ಸಂಶೋಧನಾ ವಿದ್ಯಾರ್ಥಿಯಾದ ಕೆ.ಎನ್.ಕವನ ನನ್ನ ಮಾರ್ಗದರ್ಶನದಲ್ಲಿ "ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಅಂತರ್ ಸಂಬಂಧಗಳು" ಎಂಬ ವಿಷಯದ ಕುರಿತು ಸಂಶೋಧನೆ ನಡೆಸಿದ್ದು, ಈ ಸಂಶೋಧನಾ ಪ್ರಬಂಧವನ್ನು ಪಿಹೆಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ ಈ ಪ್ರಬಂಧದ ಯಾವುದೇ ಒಂದು ನಿಶ್ಚಿತ ಭಾಗವು ಈ ಹಿಂದೆ ಎಲ್ಲಿಯೂ ಪ್ರಕಟವಾಗಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : ೨೭-೧೧-೨೦೦೯
ಸ್ಥಳ : ವಿದ್ಯಾರಣ್ಯ

ಡಾ॥ಕೆ.ಸಿ.ಶಿವಾರೆಡ್ಡಿ,
ಪ್ರವಾಚಕರು,
ಭಾಷಾಂತರ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ
ಹಂಪಿ

ದೃಢೀಕರಣ ಪತ್ರ,

ಕುವೆಂಪು ಕನ್ನಡ ಅಧ್ಯಯನ ಕೇಂದ್ರ, ಕುಪ್ಪಳಿಯ ಸಂಶೋಧನಾ ವಿದ್ಯಾರ್ಥಿಯಾದ ನಾನು ಡಾ|| ಕೆ.ಸಿ.ಶಿವಾರೆಡ್ಡಿಯವರ ಮಾರ್ಗದರ್ಶನದಲ್ಲಿ "ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಅಂತರ್ ಸಂಬಂಧಗಳು" ಎಂಬ ವಿಷಯವನ್ನು ಕುರಿತು ಸಂಶೋಧನಾ ಪ್ರಬಂಧವನ್ನು ರಚಿಸಿ ಮಾರ್ಗದರ್ಶಕರ ಅನುಮತಿಯೊಂದಿಗೆ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ಯಾವುದೇ ಒಂದು ನಿಶ್ಚಿತ ಭಾಗವು ಈ ಹಿಂದೆ ಎಲ್ಲಿಯೂ ಪ್ರಕಟವಾಗಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಕೆ. ಎನ್. ಕವನ

ದಿನಾಂಕ : 27-11-2009
ಸ್ಥಳ : ಬೆಂಗಳೂರು

ಕೆ.ಎನ್. ಕವನ,
ಸಂಶೋಧನಾ ವಿದ್ಯಾರ್ಥಿ,
ಕುವೆಂಪು ಕನ್ನಡ ಅಧ್ಯಯನ ಕೇಂದ್ರ,
ಕುಪ್ಪಳಿ

ಪರಿವಿಡಿ

ಕನ್ನಡ ಸಾಹಿತ್ಯ ಮತ್ತು ಪತ್ರಿಕೋದ್ಯಮದ ಅಂತರ್‌ಸಂಬಂಧಗಳು

ಭಾಗ ೧: ಪ್ರವೇಶ

ಎರಡು ಸಾವಿರ ವರ್ಷಗಳಿಂದ ಬೆಳೆದುಬಂದಿರುವ ಕನ್ನಡ ಸಾಹಿತ್ಯ ಜನಮಾನಸದ ಮೂಲಕವೇ ಇಲ್ಲಿಯತನಕ ಬೆಳೆದುಬಂದಿದೆ ಹಾಗು ಇನ್ನೂ ಜೀವಂತವಾಗಿದೆ. ಆಧುನಿಕ ಯುಗದಲ್ಲಿ ಪತ್ರಿಕೆಗಳಾದರೂ ಈ ಜನಮಾನಸದ ಮೂರ್ತರೂಪಗಳೇ ಆಗಿವೆ. ಇಂದು ಸಾಹಿತ್ಯ ಪ್ರಚಾರದ ಕೈಂಕರ್ಯವನ್ನು ಪ್ರಧಾನವಾಗಿ ಪತ್ರಿಕೆಗಳೇ ನಿರ್ವಹಿಸುತ್ತಿವೆ. ಕನ್ನಡದ ಎಲ್ಲ ಶ್ರೇಷ್ಠ ಲೇಖಕರೂ ಸೇರಿದಂತೆ ಎಲ್ಲರೂ ಮೊದಲಬಾರಿಗೆ ಕನ್ನಡ ಸಂಸ್ಕೃತಿಯಲ್ಲಿ ನೆಲೆಗೊಂಡದ್ದು ಪತ್ರಿಕೆಗಳ ಮೂಲಕವೇ. ಪುಸ್ತಕಗಳ ಮುದ್ರಣದಿಂದ ಹೆಸರುವಾಸಿಯಾದದ್ದು ಆಮೇಲೆ. ಇದಕ್ಕೆ ಕಾರಣ ಸಾಹಿತ್ಯ ರಚನೆ ಹಾಗು ಪತ್ರಿಕೋದ್ಯಮಗಳ ಮೂಲ ಆಶಯಗಳು ಬೇರೆಬೇರೆಯವಲ್ಲ. ಎರಡೂ ಜನಜೀವನ, ಜನಸಂಸ್ಕೃತಿಯತ್ತ ಮುಖಮಾಡಿವೆ. 'ಯಶಸೇ, ಅರ್ಥಕೃತೇ ವ್ಯವಹಾರವಿದೇ' ಇತ್ಯಾದಿ ಕಾವ್ಯರಚನೆಯ ಉದ್ದೇಶಗಳು ಪತ್ರಿಕೋದ್ಯಮದ ಉದ್ದೇಶಗಳಿಗೂ ಅನ್ವಯಿಸುತ್ತವೆ.

ಸರ್ವಜ್ಞ ಕವಿ 'ಸಾಹಿತ್ಯವೆಲ್ಲರಿಗಲ್ಲ' ಎಂಬ ಮಾತನ್ನು ಹೇಳಿದ್ದಾನೆ. ನಮ್ಮ ಕಾವ್ಯಮೀಮಾಂಸೆಯೂ ಸಾಹಿತ್ಯದ ಓದುಗನಿಗೆ ಕೆಲವು ವಿಶಿಷ್ಟ ಗುಣಗಳಿರತಕ್ಕದ್ದು ಎಂದು ವಿವರಿಸಿದೆ. ತನ್ನ ಕೃತಿ ಲೋಕದಾದ್ಯಂತ ಹರಡಲಿ, ಶಾಶ್ವತವಾಗಿ ಉಳಿಯಲಿ ಎಂದು ಹಂಬಲಿಸುವ ಕವಿಯೂ ಸಹ ಕೃತಿ ರಚನೆ ಮಾಡುವಾಗ ವಿಶಿಷ್ಟ ಸಂವೇದನೆಯ ಓದುಗನನ್ನು ಮಾತ್ರ ಗಮನದಲ್ಲಿರಿಸಿಕೊಂಡು ಕೃತಿ ರಚನೆ ಮಾಡುವನಲ್ಲದೆ ಲೋಕಕ್ಕೆ ಒಂದು ಅಮೂಲ್ಯ ಸಂದೇಶವನ್ನು ಹರಡುವ ಧಾಟಿಯಲ್ಲಿ ತನ್ನ ಕೃತಿಯನ್ನು ನಿರೂಪಿಸುವುದಿಲ್ಲ. ಹಾಗಾಗಿ ಒಂದು ಸಾಹಿತ್ಯ ಕೃತಿ ಇಡೀ ತಲೆಮಾರಿನ ಮನಸ್ಸನ್ನು ವಿಶಿಷ್ಟ ರೀತಿಯಲ್ಲಿ ಪ್ರಭಾವಿಸುವ ಶಕ್ತಿಯನ್ನು ಹೊಂದಿದ್ದರೂ ಆ ಸಾಹಿತ್ಯಕೃತಿ ದಕ್ಕುವುದು ಎಲ್ಲೋ ಬೆರಳೆಣಿಕೆಯಷ್ಟು ಮಂದಿಗೆ ಮಾತ್ರ. ಅಂದರೆ ಸಾಹಿತ್ಯದ ಪ್ರಭಾವ ತೀವ್ರವಾದುದಾದರೂ ಅದರ ವ್ಯಾಪ್ತಿ ತುಂಬ ಕಿರಿದು. 'ನಾನೇರುವೆತ್ತರಕೆ' ಎಂಬ ಕವಿಧೋರಣೆಯೂ ಇದನ್ನೇ ಸೂಚಿಸುತ್ತದೆ. ಪತ್ರಿಕೆಯ ವ್ಯಾಪ್ತಿಯಾದರೂ ತುಂಬ ಹಿರಿದು. ಇಡೀ ಜನಸಮೂಹವನ್ನೇ ಅದು ಏಕ ಕಾಲಕ್ಕೆ ತಲುಪಿಬಿಡಬಲ್ಲುದು. ಅನಕ್ಷರಸ್ಥ ಎನಿಸಿಕೊಂಡವನೂ ಸಹ ಪತ್ರಿಕೆಯಲ್ಲಿನ ವಿಷಯಗಳನ್ನು ತಿಳಿಯಲು ಕುತೂಹಲವನ್ನ ಇರಿಸಿಕೊಂಡಿರುತ್ತಾನೆ. ಸಹಜವಾಗಿಯೆ ರಾಜಾಶ್ರಯದಲ್ಲೋ ಮಠಮಾನ್ಯಗಳಲ್ಲೋ ವಿದ್ವಜ್ಜನರ ಕೃಪೆಯಲ್ಲೋ ಜೀವಿಸುತ್ತಿದ್ದ ಸಾಹಿತ್ಯವು

ಆಧುನಿಕ ಯುಗದಲ್ಲಿ ಪತ್ರಿಕೆಗಳ ಮೊರೆ ಹೋದವು. ಪತ್ರಿಕೆಗಳ ಆಶ್ರಯದಲ್ಲಿ ಜೀವಪಡೆದವು. ಹಾಗೆಯೇ ಪತ್ರಿಕೋದ್ಯಮವೂ ಸಾಹಿತ್ಯದಿಂದಲೇ ತನ್ನ ಸತ್ವವನ್ನು ಬೆಳೆಸಿಕೊಂಡಿತು. ಪ್ರಾರಂಭದಲ್ಲಿ ಇವೆರಡೂ ಅಭಿನ್ನವೆನಿಸಿಕೊಂಡಿದ್ದವು. ಅನಂತರದ ಕಾಲಘಟ್ಟದಲ್ಲಿ ಇವೆರಡೂ ಅನ್ಯೋನ್ಯಾಶ್ರಯಿಗಳಾದವು. . ಈ ಅನ್ಯೋನ್ಯ ಪ್ರಭಾವಗಳ ಅಧ್ಯಯನವೇ ತುಂಬ ಕುತೂಹಲಗಳಿಂದ ಕೂಡಿದ್ದು.

ಪತ್ರಿಕೋದ್ಯಮ ಸಾಹಿತ್ಯವನ್ನು ಪ್ರಚಾರ ಪಡಿಸಿದ್ದೊಂದೇ ಅಲ್ಲ, ಸಾಹಿತ್ಯವು ಹಲವು ರೂಪಗಳಲ್ಲಿ ಮೈದೋರುವ ಚೈತನ್ಯವನ್ನೂ ಪತ್ರಿಕೆಗಳೇ ನೀಡಿದವು. ದಲಿತ, ಬಂಡಾಯ, ಸ್ತ್ರೀವಾದ, ನವ್ಯ, ನವೋದಯ, ಮೊದಲಾದ ಸಾಹಿತ್ಯ ಮಾರ್ಗಗಳಲ್ಲದೆ ಇನ್ನೂ ಹಲುಗೆಯ ಹಲಸ್ತರದ ಸಂವೇದನೆಗಳು ಬೆಳಕಿಗೆ ಬರಲು ಪತ್ರಿಕೋದ್ಯಮವೇ ನೆರವಾಯಿತು. ಆಧುನಿಕ ಯುಗದಲ್ಲಿ ಸಾಹಿತ್ಯವು ಹೊಸ ಉತ್ಸಾಹವನ್ನು ಪಡೆದದ್ದೇ ಪತ್ರಿಕೋದ್ಯಮದಿಂದ. ಈ ಹಿಂದೆ ಹೇಳಿದಂತೆ ಇವೆರಡನ್ನೂ ಪ್ರತ್ಯೇಕಿಸಲು ಬರುವುದಿಲ್ಲ. ಸಾಹಿತ್ಯೋದ್ಯೋಗವು ತನ್ನ ಉಳಿವು ಪ್ರಚಾರಗಳಿಗಾಗಿ ಪತ್ರಿಕೋದ್ಯಮಕ್ಕೆ ಜನ್ಮ ನೀಡಿತು ಎಂದರೂ ತಪ್ಪಾಗಲಾರದು. ಏಕೆಂದರೆ ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕರೆನಿಸಿಕೊಂಡವರು ಪ್ರಧಾನತಃ ಕನ್ನಡ ಸಾಹಿತಿಗಳೇ ಆಗಿದ್ದಾರೆ.

ಪತ್ರಿಕೆಗಳ ಅಸ್ತಿತ್ವಕ್ಕೂ ಜಗತ್ತಿನಾದ್ಯಂತ ನಡೆದ ವ್ಯಾಪಕವಾದ ಸಾಮಾಜಿಕ ಸಾಂಸ್ಕೃತಿಕ ಸ್ಥಿತ್ಯಂತರಕ್ಕೂ ನೇರವಾದ ಸಂಬಂಧಗಳಿವೆ. ಪಾಶ್ಚಿಮಾತ್ಯ ಪ್ರಭಾವದಿಂದ ಉಂಟಾದ ಅಸಂಖ್ಯ ಪ್ರಭಾವಗಳು ನಮ್ಮ ದೇಶದಲ್ಲೂ ವ್ಯಾಪಕವಾಗಿ ಹರಡಿತು. ಅದರಲ್ಲಿ ಅಕ್ಷರ ಸಂಸ್ಕೃತಿಗೆ ಸಂಬಂಧಿಸಿದ ಬದಲಾವಣೆ ಬಂದುದು ಮುದ್ರಣ ಸಂಸ್ಕೃತಿಯ ಪ್ರಸಾರದಿಂದ. ಮುದ್ರಣ ಸಂಸ್ಕೃತಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ತಂದ ಕ್ರಾಂತಿಕಾರೀ ಬದಲಾವಣೆಗಳು ತುಂಬ ಮಹತ್ವದ್ದು. ಆಧುನಿಕಪೂರ್ವ ಸಮಾಜದಲ್ಲಿ ಶಾಸನ, ಕೈಬರಹ, ಲಿಪಿಕಾರ ಸಂಸ್ಕೃತಿ, ಓಲೆಗರಿ ಕಡತಗಳ ಮೂಲಕ ಬರವಣಿಗೆ ಪ್ರಸಾರಕ್ಕೆ ಬರುತ್ತಿತ್ತು. ಅಷ್ಟೇ ಅಲ್ಲದೆ ಬರವಣಿಗೆ ಸಂಸ್ಕೃತಿ ಕೆಲವು ವರ್ಗಗಳಲ್ಲಿಯೇ ನೆಲೆಗೊಂಡಿದ್ದವು. ಮುದ್ರಣ ಸಂಸ್ಕೃತಿಯೊಂದಿಗೆ ಹೊಸ ವಿದ್ಯಾಭ್ಯಾಸದ ಪದ್ಧತಿ ಬಂದಿದ್ದೇ ವಸಾಹತು ಕಾಲದಲ್ಲಿ. ಭಾರತಕ್ಕೆ ಯಂತ್ರಸಂಸ್ಕೃತಿ ಪ್ರವೇಶವಾದದ್ದೇ ವಸಾಹತುಶಾಹಿಯ ಮೂಲಕ. ಇದರಿಂದಾಗಿ ಆಧುನಿಕಪೂರ್ವ ಸಂಸ್ಕೃತಿಯಲ್ಲಿ ನಿರ್ಮಾಣಗೊಂಡ ವಿಭಿನ್ನ ಕ್ಷೇತ್ರಗಳ ಬರವಣಿಗೆಯ ಮೂಲಕ ಹೊರಬರುವಂತಾಯಿತು. ನಮ್ಮ ಪ್ರಾಚೀನ ಹಾಗು ಮಧ್ಯಕಾಲೀನಗಳಲ್ಲಿ ನಿರ್ಮಾಣಗೊಂಡ ವಿವಿಧ ಕ್ಷೇತ್ರದ ಪಠ್ಯಗಳು ಈ ಹೊಸ ಮುದ್ರಣ ಸಂಸ್ಕೃತಿಯ ಮೂಲಕ ಹಂತಹಂತವಾಗಿ ಬೆಳಕಿಗೆ ಬರಲು ಕಾರಣವಾಯಿತು. ಮುದ್ರಣ ಸಂಸ್ಕೃತಿ ಆರಂಭಗೊಳ್ಳುವ ಪೂರ್ವದಲ್ಲೇ ನಮ್ಮ ಸಾಹಿತ್ಯದ ಅನೇಕ ಕೃತಿಗಳು ಕಲ್ಲಚ್ಚಿನಂಥ ತಂತ್ರವಿಧಾನಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಾರ ಪ್ರಚಾರಗಳಿಗೆ ಕಾರಣವಾಗಿರುವುದನ್ನು ಗಮನಿಸಬೇಕು. ಇಂಥ ಪ್ರಯೋಗಗಳು ಮಂಗಳೂರು, ಮೈಸೂರು, ಬಳ್ಳಾರಿ ಧಾರವಾಡ ಹೀಗೆ ಅನೇಕ ಕಡೆಗಳಲ್ಲಿ ಪ್ರಚಾರಕ್ಕೆ ಬಂದವು. ಅನಂತರದ ದಿನಗಳಲ್ಲಿ ಮುದ್ರಣ ಸಂಸ್ಕೃತಿ ತನ್ನ ಅಸ್ತಿತ್ವವನ್ನು ಕಂಡುಕೊಂಡಿತು.

ಪ್ರವೇಶ ಈ ಅಧ್ಯಯನವು ಅನೇಕ ಮಾಹಿತಿಗಳನ್ನು ಸಂಘಟಿಸಿ ನಡೆಸಿರುವ ಅಧ್ಯಯನವಾಗಿದೆ. ಮುಖ್ಯವಾಗಿ ಕನ್ನಡ ಸಾಹಿತ್ಯದ ಪ್ರಸಾರ, ಅಭಿರುಚಿ ನಿರ್ಮಾಣ ಹಾಗು ವಿಮರ್ಶಾ ಪರಿಕಲ್ಪನೆಗಳ ಮಂಡನೆಯ ನೆಲೆಗಳು ಹೇಗೆ ಕಾಲದಿಂದ ಕಾಲಕ್ಕೆ ಮೈತಳೆದು ಬಂದಿವೆ ಹಾಗು ವಿಕಾಸಗೊಳ್ಳುತ್ತಿವೆ ಎಂಬುದರ ಅಧ್ಯಯನವಾಗಿದೆ. ಪತ್ರಿಕಾ ವ್ಯವಸಾಯ ಹಾಗು ಸಾಹಿತ್ಯದ ಅಂತರ್‌ಸಂಬಂಧ ತುಂಬ ಗಂಭೀರವಾದುದು. ಸಾಹಿತ್ಯ ಎಂದರೆ ಬರವಣಿಗೆಯ ಅಸಂಖ್ಯ ರೂಪಗಳನ್ನು ಪ್ರತಿನಿಧಿಸುತ್ತದೆ. ಹೀಗಾಗಿ ಸಾಹಿತ್ಯ ಸಂಸ್ಕೃತಿ ಅಸಂಖ್ಯ ಉಪಕ್ರಮಗಳಲ್ಲಿ ಪಾಲ್ಗೊಂಡ ಕಾಲ ಇದಾಗಿದೆ. ಬರವಣಿಗೆ ಒಳಗೊಂಡ ಎಲ್ಲವೂ ಸಾಹಿತ್ಯದ ಕಕ್ಷೆಗೆ ಒಳಪಡುವಂತಹ ಸಂದರ್ಭದಲ್ಲಿ ನಾವಿದ್ದೇವೆ. ಅದರಲ್ಲಿಯೂ ಪತ್ರಿಕಾ ಮಾಧ್ಯಮಗಳು ಸಾಹಿತ್ಯ ಸಂವೇದನೆಯನ್ನು ವಿಭಿನ್ನ ರೀತಿಗಳಲ್ಲಿ ಪ್ರಸ್ತುತ ಪಡಿಸುವ ಒಂದು ವೇದಿಕೆಯನ್ನೇ ನಿರ್ಮಿಸಿವೆ. ಕಥಾ ಸ್ಪರ್ಧೆ, ಕಾವ್ಯಸ್ಪರ್ಧೆ, ಮಕ್ಕಳ ಸಾಹಿತ್ಯದ ಬಗೆಗಿನ ಸ್ಪರ್ಧೆಗಳು ಹಾಗು ಇನ್ನಿತರ ಪ್ರಕಾರಗಳ ಸ್ಪರ್ಧಾ ಜಗತ್ತು ಹೊಸ ಲೇಖಕರನ್ನು ಗುರುತಿಸುವಲ್ಲಿ ಸಫಲವಾಗುತ್ತವೆ. ಅದರೆ ದೂರದರ್ಶನ ಅನೇಕ ಸಂಸ್ಥೆಗಳ ವೆಬ್‌ಸೈಟುಗಳು, ಸಾಹಿತ್ಯಾಸಕ್ತರಿಂದ ರೂಪುಗೊಳ್ಳುತ್ತಿರುವ ವೆಬ್‌ಸೈಟ್ ಪತ್ರಿಕೆಗಳು ವೈಯಕ್ತಿಕ ಆಸಕ್ತಿಯಿಂದ ಮೂಡಿಬರುತ್ತಿರುವ ಬ್ಲಾಗ್‌ಗಳ ರಚನೆ, ಇನ್ನಿತರ ವೈಯಕ್ತಿಕ ಮಾಹಿತಿಗಳೂ ನಮ್ಮ ಅಂತರ್ಜಾಲದಲ್ಲಿ ಹಬ್ಬುತ್ತಿವೆ.

ಪತ್ರಿಕೆಯ ಕಲ್ಪನೆಯೇ ಪಲ್ಲಟಗೊಳ್ಳುತ್ತಿರುವ ಕಾಲದಲ್ಲಿ ನಾವಿದ್ದೇವೆ. ಯಾವುದೇ ಪತ್ರಿಕೆಯ ಓದು ಕೇವಲ ಸಾಂಪ್ರದಾಯಿಕ ಓದಿಗೆ ಸೀಮಿತವಾಗದೇ ವಿಭಿನ್ನ ಓದುಗಳತ್ತ ಮುಖ ಮಾಡಿವೆ. ಈ ಹಿನ್ನೆಲೆಯಲ್ಲಿ ಕೇವಲ ಮುದ್ರಣ ಸಂಸ್ಕೃತಿಯ ಭಾಗವಾಗಿರದೆ ಕನ್ನಡ ಪತ್ರಿಕಾ ವ್ಯವಸಾಯ ಅಸಂಖ್ಯ ಹೊರಚಾಚುಗಳನ್ನು ಪಡೆದುಕೊಳ್ಳುತ್ತಿರುವುದನ್ನು ಹೊಸ ಅಧ್ಯಯನಗಳಿಗೆ ದಾರಿ ಮಾಡಿಕೊಡುವುದು ಎಂಬ ಅಪೇಕ್ಷೆ ಈ ಅಧ್ಯಯನಕ್ಕಿದೆ. ಇಂತಹುದನು ಕೈಗೊಳ್ಳುವ ಬಯಕೆಯೂ ಪ್ರಸ್ತುತ ಅಧ್ಯಯನಕ್ಕಿದೆ ಎಂಬುದನ್ನು ಈ ಮೂಲಕ ಸೂಚಿಸ ಬಯಸಲಾಗುತ್ತದೆ.

ಭಾಗ ೨

ಸ್ವಾತಂತ್ರ್ಯಪೂರ್ವ ಘಟ್ಟ

೧. ಸ್ವಾತಂತ್ರ್ಯಪೂರ್ವ ಕನ್ನಡ ಪತ್ರಿಕೋದ್ಯಮ – ಚಾರಿತ್ರಿಕ ಅವಲೋಕನ
೨. ಸ್ವಾತಂತ್ರ್ಯಪೂರ್ವದ ಪತ್ರಿಕೆಗಳು ಮತ್ತು ಅವುಗಳ ಸಾಂಸ್ಕೃತಿಕ ಮಹತ್ವ
೩. ಕನ್ನಡ ಸಾಹಿತ್ಯಿಕ ಪತ್ರಿಕೆಗಳಲ್ಲಿ ನವೋದಯ ಕಾವ್ಯದ ಅವಲೋಕನ
೪. ಪ್ರಬುದ್ಧ ಕರ್ನಾಟಕ – ನವೋದಯ ಸಾಹಿತ್ಯಕ್ಕೆ ಅದರ ಕೊಡುಗೆ
೫. ಹೊಸಗನ್ನಡ ನವೋದಯ ವಿಮರ್ಶೆ ಹಾಗು ಪತ್ರಿಕೆಗಳು
೬. ಕನ್ನಡ ಪತ್ರಿಕೆಗಳು ಮತ್ತು ನವೋದಯ ಕಾಲದ ಸಣ್ಣಕತೆ ಹಾಗು ಕಾದಂಬರಿ ಪ್ರಕಾರಗಳು
೭. ನವೋದಯ ಕಾಲದ ನಾಟಕಗಳು ಹಾಗು ಪತ್ರಿಕೆ
೮. ಸಾಹಿತ್ಯಿಕ ಪತ್ರಿಕೆಗಳಲ್ಲಿ ಪ್ರಾಚೀನ ಹಾಗು ಮಧ್ಯಕಾಲೀನ ಸಾಹಿತ್ಯದ ವಿವೇಚನೆಯ ಅವಲೋಕನ

೧. ಸ್ವಾತಂತ್ರ್ಯಪೂರ್ವ ಕನ್ನಡ ಪತ್ರಿಕೋದ್ಯಮದ ಚಾರಿತ್ರಿಕ ಅವಲೋಕನ

ಮೊದಲ ಹಂತದಲ್ಲಿ ವಸಾಹತು ಸಂದರ್ಭ ಧರ್ಮ ಪ್ರಸಾರಕ್ಕೆ ಹೊಸ ಸಾಧನಗಳನ್ನು ಬಳಸಿಕೊಳ್ಳಲು ಆರಂಭಿಸಿತು. ಇದು ಕರ್ನಾಟಕ ಮಾತ್ರವಲ್ಲದೆ ಭಾರತದ ಎಲ್ಲ ಭಾಗಗಳಲ್ಲೂ ಬೇರೆಬೇರೆ ಮಟ್ಟದಲ್ಲಿ ಬಳಕೆಗೊಂಡವು. ಕ್ರೈಸ್ತ ಮಿಷನರಿಗಳು ಧರ್ಮಪ್ರಸಾರದೊಂದಿಗೆ ಹೊಸ ಶಿಕ್ಷಣ ಪದ್ಧತಿಯೊಂದನ್ನು ರೂಪಿಸಿದ ಕಾಲ ಇದಾಗಿತ್ತು. ಇದರೊಂದಿಗೆ ತನ್ನ ಆಡಳಿತ ನಿರ್ವಹಣೆಗೆ ಅಗತ್ಯವಾದ ಪರಿಕರಗಳನ್ನು ಸಿದ್ಧಗೊಳಿಸಿಕೊಳ್ಳುವ ಉದ್ದೇಶವೂ ಸೇರಿತ್ತು. ಭಾರತಕ್ಕೆ ವಸಾಹತು ಸಂದರ್ಭದಲ್ಲಿ ರೈಲುವ್ಯವಸ್ಥೆ, ಅಂಚೆ ಸಾಗಾಣಿಕೆ, ಹೊಸವೈದ್ಯ ಪದ್ಧತಿ ವಿವಿಧ ಬಗೆಯ ವಾಣಿಜ್ಯ ವ್ಯವಹಾರಗಳ ವಿಸ್ತಾರ ಹಂತ ಹಂತವಾಗಿ ಬಳಕೆಯಾಗುತ್ತ ಪ್ರಸಾರಗೊಂಡವು. ಈ ನೆಲೆ ದಿನೇ ದಿನೆ ಪ್ರಬಲಗೊಂಡಿತು. ವಸಾಹತು ಕಾಲಮಾನ ನಮ್ಮ ಸಂದರ್ಭದಲ್ಲಿ ಅನೇಕ ನೋವು ವಿಷಾದಗಳ ವಾತಾವರಣಕ್ಕೆ ದಾರಿ ಮಾಡಿಕೊಟ್ಟಿತಾದರೂ ಅದರ ಗರ್ಭದಲ್ಲಿಯೇ ಹೊಸ ಹೊಸ ಪ್ರಗತಿಯ ನೆಲೆಗಳೂ ಕಾಲಿಟ್ಟಿದ್ದನ್ನು ಕುರಿತು ಸಾಕಷ್ಟು ಗಂಭೀರವಾಗಿ ಚಿಂತಕರು ವಿಚಾರ ವಿಶ್ಲೇಷಣೆಗೆ ಒಳಗುಪಡಿಸಿದ್ದಾರೆ. ಈ ನೆಲೆಯಲ್ಲಿಯೇ ನಮ್ಮ ನಾಡಿನಲ್ಲಿಯೂ ಪತ್ರಿಕೋದ್ಯಮದ ಹೊಸ ನೆಲೆಗಳು ಆರಂಭವಾಯಿತು.

೧೯ನೆಯ ಶತಮಾನ ಭಾರತದ ಪತ್ರಿಕೋದ್ಯಮ ಇತಿಹಾಸದಲ್ಲಿ ಅತ್ಯಂತ ಮಹತ್ವದ ಕಾಲಘಟ್ಟವಾಗಿದೆ. ಭಾರತೀಯ ಭಾಷೆಗಳಲ್ಲಿ ಪತ್ರಿಕೋದ್ಯಮ ಆರಂಭವಾದದ್ದೂ ಈ ಕಾಲದಲ್ಲೇ. ಬ್ರಿಟಿಷ್ ಸರ್ಕಾರದ ಕಟ್ಟುನಿಟ್ಟಿನ ಶಾಸನ ಹಾಗು ನಿಷೇಧಗಳ ನಡುವೆಯೂ ಪತ್ರಿಕೋದ್ಯಮ ತನ್ನ ಇತಿಮಿತಿಯಲ್ಲೇ ಕಾರ್ಯನಿರ್ವಹಿಸಿದ್ದು ಕಂಡು ಬರುತ್ತದೆ. ೧೯ನೆಯ ಶತಮಾನದ ಆರಂಭಿಕ ವರ್ಷಗಳಲ್ಲಿ ಬ್ರಿಟಿಷ್ ಗವರ್ನರ್ ಜನರಲ್ ವೆಲ್ಲೆಸ್ಲಿಯವರು ಮುದ್ರಣದ ಮೇಲೆ ಬಿಗಿ ಹಿಡಿತವನ್ನಿಟ್ಟಿದ್ದರು. ಭಾರತದ ಪತ್ರಿಕೆಗಳ ಮೇಲೆ ಎಷ್ಟೇ ಬಿಗಿ ಹಿಡಿತವಿದ್ದರೂ ಸಹ ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಪತ್ರಿಕೋದ್ಯಮಗಳು ಆಗಾಗ್ಗೆ ಸೊಲ್ಲೆತ್ತುತ್ತಿದ್ದವು. ಉದಾಹರಣೆಗೆ, ಮೈಸೂರಿನ ಅರಸ ಟಿಪ್ಪು ಸುಲ್ತಾನ್, ಫ್ರೆಂಚರು ಯುರೋಪಿಯನ್ ಸಮುದಾಯದ ಕುರಿತಾದ ವರದಿಗಳನ್ನು ದಾಖಲೆ ಮುಖಾಂತರ ಕಾಣಬಹುದಾಗಿದೆ.[೧]

೧೭೯೯ರಲ್ಲಿ ಬ್ರಿಟಿಷ್ ಸರ್ಕಾರ ಭಾರತೀಯ ಪತ್ರಿಕೆಗಳ ಮೇಲೆ ನಿಯಂತ್ರಣ ಹೇರುವ ಕಾಯ್ದೆ ಜಾರಿಗೊಳಿಸಿತು. ಅದರ ಪ್ರಕಾರ ಯಾವುದೇ ಪತ್ರಿಕೆ ಅಚ್ಚಾಗುವ ಮುನ್ನ ಸರ್ಕಾರದ ಕಾರ್ಯದರ್ಶಿ ಅಥವ ಸಂಬಂಧಿಸಿದ ಅಧಿಕಾರಿಗಳ ಅನುಮತಿ ಪಡೆಯಬೇಕಾಗಿತ್ತು. ಈ ರೀತಿ ನಿಯಂತ್ರಣಕ್ಕೊಳಪಟ್ಟ

ಪತ್ರಿಕೆಗಳೆಂದರೆ ದಿ ಮಾರ್ನಿಂಗ್ ಪೋಸ್ಟ್, ದಿ ಟೆಲಿಗ್ರಾಫ್, ದಿ ಕಲ್ಕತ್ತ ಕೊರಿಯರ್, ದಿ ಓರಿಯೆಂಟಲ್ ಸ್ಟಾರ್, ದಿ ಇಂಡಿಯನ್ ಗೆಜೆಟ್, ದಿ ಏಷ್ಯಾಟಿಕ್ ಮಿರರ್ ಮೊದಲಾದವು. ಈ ಎಲ್ಲ ಪತ್ರಿಕೆಗಳೂ ಕಲ್ಕತ್ತಾ ಮೂಲದ ಪತ್ರಿಕೆಗಳಾಗಿದ್ದುದು ವಿಶೇಷ.[೨]

೧೮೧೩ರಲ್ಲಿ ಬಂದ ಹೇಸ್ಟಿಂಗ್ಸ್ ಭಾರತದ ಪತ್ರಿಕೋದ್ಯಮದ ಮೇಲೆ ಸಡಿಲ ನೀತಿಯನ್ನು ಜಾರಿಗೊಳಿಸಿದ್ದಷ್ಟೇ ಅಲ್ಲದೆ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ವಿಶೇಷ ಆಸ್ಥೆ ಹೊಂದಿದ್ದನು. ಭಾರತೀಯ ಪತ್ರಿಕೆಗಳಿಗಷ್ಟೇ ಸೀಮಿತವಾಗಿದ್ದ ಸರ್ಕಾರದ ನಿಯಂತ್ರಣ ೧೮೧೩ರಲ್ಲಿ ಚಾರ್ಟರ್ ಕಾಯಿದೆಯಿಂದಾಗಿ ಕ್ರಿಶ್ಚಿಯನ್ ಮಿಶನರಿಗಳು ಹೊರಡಿಸುತ್ತಿದ್ದ ಪತ್ರಿಕೆಗಳೂ ಸಹ ಬ್ರಿಟಿಶ್ ಸರ್ಕಾರದ ಪರವಾನಗಿ ಪಡೆಯುವಂತಾಯಿತು.[೩] ಈ ಕಾಲದಲ್ಲಿದ್ದ ಡಾ. ಬ್ರೈಸ್ ತಮ್ಮ ಪತ್ರಿಕಾ ಚಟುವಟಿಕೆಗಳಿಂದ ಭಾರತದ ಪತ್ರಿಕೋದ್ಯಮಕ್ಕೆ ಹೆಚ್ಚಿನ ಚಾಲನೆ ತಂದುಕೊಟ್ಟರು. ಇವರು ಕಲಕತ್ತಾದ ಪ್ರಮುಖ ಪತ್ರಿಕೆ ದಿ ಏಷ್ಯಾಟಿಕ್ ಮಿರರ್‌ನ ಸಂಪಾದಕರಾಗಿದ್ದರು. ಇಷ್ಟೆಲ್ಲ ನಿಯಂತ್ರಣ, ನಿಷೇಧಗಳ ನಡುವೆಯೂ ಭಾರತದಲ್ಲಿ ಅಚ್ಚಾದ ಮೊದಲ ಪತ್ರಿಕೆಯನ್ನು ಜನವರಿ ೨೯, ೧೭೮೦ರಲ್ಲಿ ಪ್ರಾರಂಭಿಸಿದ ಕೀರ್ತಿ ಜೇಮ್ಸ್ ಆಗಸ್ಟಸ್ ಹಿಕ್ಕಿ ಅವರಿಗೆ ಸಲ್ಲುತ್ತದೆ. ದ ಬೆಂಗಾಲ್ ಗೆಜೆಟ್ ಅಥವ ದಿ ಕಲ್ಕತ್ತಾ ಜನರಲ್ ಅಡ್ವೈಟೈಸರ್ಸ್ ಎಂಬ ಹೆಸರಿನ ಪತ್ರಿಕೆಯ ಮೊದಲನೆ ಪ್ರತಿ ಹೊರಬಂದು ಸಾರ್ವಜನಿಕರ ಕೈಸೇರಿತು.[೪]

ಕ್ರಿ.ಶ. ೧೮೨೧ರಲ್ಲಿ 'ಸಂವಾದ ಕೌಮುದಿ' ಎಂಬ ಪತ್ರಿಕೆ ಬಂಗಾಳಿ ಭಾಷೆಯಲ್ಲಿ ಹೊರಬಂದಿತು. ಅದರ ಸಂಪಾದಕರಾಗಿದ್ದವರು ರಾಜಾರಾಮ್ ಮೋಹನರಾಯರು. ಹಿಂದೂ ಸಮಾಜ ಸುಧಾರಣೆ ಕುರಿತ ತನ್ನ ವಿಚಾರಗಳನ್ನು ವ್ಯಕ್ತಪಡಿಸಲು ಇದು ವೇದಿಕೆಯಾಯಿತು.[೫] ಇವರ ಸಮಾಜ ಸುಧಾರಣಾ ಕಾರ್ಯವನ್ನು ಬಾಳಶಾಸ್ತ್ರ ಜಂಭೇಕರ್ ಹಾಗು ಕೃಷ್ಣಶಾಸ್ತ್ರಿ ಮರಾಠಿಯಲ್ಲಿಯೂ ಭರತೇಂದು ಹರಿಶ್ಚಂದ್ರ ಮತ್ತು ವೀರೇಶಲಿಗಂ ಪಂತುಲು ಇವರು ಹಿಂದಿ ಹಾಗು ತೆಲುಗು ಭಾಷೆಗಳಲ್ಲಿ ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು. ಮಿಷನರಿ ಪತ್ರಿಕೋದ್ಯಮವಂತೂ ಹಲವು ಭಾಷೆಗಳಲ್ಲಿ ಬಂದಿತಲ್ಲದೆ ಅನೇಕ ಭಾಷೆಗಳಲ್ಲಿ ಅವರೇ ಮೊದಲಿಗರಾದರು. ೧೮೧೮ ಏಪ್ರಿಲ್‌ನಲ್ಲಿ ಸಿರಾಂಪುರ್ ಮಿಷನರಿಗಳು ಪ್ರಾರಂಭಿಸಿದ 'ದಿಗ್ದರ್ಶನ' ಎಂಬ ಬಂಗಾಳಿ ಮಾಸ ಪತ್ರಿಕೆ ಭಾರತದ ಮೊದಲ ಪತ್ರಿಕೆ ಎನಿಸಿದೆ. ಡಾ. ಕ್ಯಾರ್‌ಮ್ ಇದರ ಸಂಸ್ಥಾಪಕರು. ಅನಂತರ ಇದೇ ಮಿಶನರಿಯವರು ಬಂಗಾಳ ಮತ್ತು ಸುತ್ತಮುತ್ತಲಿನ ಪ್ರದೇಶ ಸಮಾಚಾರವನ್ನು ಪ್ರಕಟಿಸುತ್ತಿದ್ದ 'ಸಂಚಾರ ದರ್ಪಣಮ್' ಎಂಬ ವಾರಪತ್ರಿಕೆ ಪ್ರಾರಂಭಿಸಿದರು. ಇದು ೧೯೪೦ರ ವರೆಗೂ ಚಾಲ್ತಿಯಲ್ಲಿತ್ತು. ಹಾಗೆಯೆ ಮದ್ರಾಸಿನ ಸ್ಕೂಲ್ ಬುಕ್ ಸೊಸೈಟಿ ಮಿಶನರಿಗಳು ೧೮೩೦ರಲ್ಲಿ ಮೊಟ್ಟ ಮೊದಲ ತಮಿಳು ಪತ್ರಿಕೆಯನ್ನು ಹೊರಡಿಸಿದರು. ಇದೇ ರೀತಿ ಮತಪ್ರಚಾರಕ್ಕೆಂದು ಬಂದ ಕ್ರೈಸ್ತ ಮಿಶನರಿಗಳು ಇಲ್ಲಿನ ಭಾಷೆ, ಸಾಹಿತ್ಯ, ಕಾವ್ಯ, ವ್ಯಾಕರಣ, ಛಂದಸ್ಸು, ಇತಿಹಾಸ, ಶಾಸನಸಂಗ್ರಹ, ಜನಪದ ಸಾಹಿತ್ಯ, ನಿಘಂಟು, ಪುರಾತತ್ವ ಶೋಧನೆ - ಈ ಎಲ್ಲದರಲ್ಲಿಯೂ ಆಸಕ್ತಿ ವ್ಯಕ್ತಪಡಿಸಿದಂತೆಯೇ ಕರ್ನಾಟಕದ ಪತ್ರಿಕೋದ್ಯಮದಲ್ಲಿಯೂ ಆದ್ಯ ಪ್ರವರ್ತಕರಾದರು. ಕನ್ನಡ ಪತ್ರಿಕೋದ್ಯಮದ ಇತಿಹಾಸವನ್ನು ಗಮನಿಸುವಾಗ ಈ ಮೇಲ್ಕಂಡ ಅಂಶಗಳನ್ನು ಕಡೆಗಣಿಸುವಂತಿಲ್ಲ.

೧೮೩೦ರಲ್ಲಿ ಮಂಗಳೂರಿನ ಬಾಸೆಲ್ ಮಿಶನ್ ಸಂಸ್ಥೆ ಮೊಟ್ಟ ಮೊದಲ ಮುದ್ರಣ ಕಾರ್ಯವನ್ನು ಕರ್ನಾಟಕದಲ್ಲಿ ಆರಂಭಿಸಿತು. ಪತ್ರಿಕೋದ್ಯಮದ ಹೆಸರಿನಲ್ಲಿ ಕರ್ನಾಟಕದಾದ್ಯಂತ ಮತಪ್ರಚಾರಕ್ಕೆ ಯತ್ನಿಸಿದರೂ ಈ ನೆಪದಲ್ಲಿ ಕನ್ನಡಿಗರು ಒಂದಾಗಲು, ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಸಾಧ್ಯವಾಯಿತು. ಕಲ್ಲಚ್ಚಿನಲ್ಲಿ ಮುದ್ರಿತವಾಗುತ್ತಿದ್ದ ಮಂಗಳೂರು ಸಮಾಚಾರ ೧೮೪೩ರಲ್ಲಿ ಪ್ರಾರಂಭವಾದ ಕನ್ನಡದ ಮೊದಲ ಪತ್ರಿಕೆ. ಮಿಶನರಿಗಳಿಂದ ಪ್ರಾರಂಭವಾದ ಕನ್ನಡ ಪತ್ರಿಕೆಗಳ

ಪ್ರಾರಂಭದ ಆಶಯ ಮತಪ್ರಚಾರವಾಗಿದ್ದರೂ ಜೊತೆಗೆ ಸುತ್ತಲಿನ ಆಗುಹೋಗುಗಳನ್ನು ನೀಡುವ ಉದ್ದೇಶವೂ ಕ್ರಮೇಣ ಮುಖ್ಯವಾಯಿತು. ಪತ್ರಿಕೆಗಳ ಸ್ವರೂಪ ಹೇಗಿರಬೇಕು ಎಂಬುದನ್ನು ಮಂಗಳೂರು ಸಮಾಚಾರದ ಸಂಪಾದಕ ಮೊಗ್ಲಿಂಗ್ ಹೀಗೆ ಪಟ್ಟಿ ಮಾಡಿದ್ದಾನೆ:

೧. ಊರ ವರ್ತಮಾನಗಳು

೨. ಸರ್ಕಾರದ ನಿರೂಪ/ಕಾನೂನು

೩. ಸುಬುದ್ಧಿ ಹೇಳುವ ನೀತಿ, ಹಾಡು

೪. ಕಥೆಗಳು

೫. ಸರ್ವರಾಜ್ಯ ವರ್ತಮಾನಗಳು [೬]

ಸಂಪಾದಕ ಹೀಗೆ ಹೇಳಿದ್ದರೂ ಪ್ರಾರಂಭದಲ್ಲಿ ಮೊದಲೆರಡು ಅಂಶಗಳಿಗೇ ಹೆಚ್ಚಿನ ಮಹತ್ವ ಸಿಕ್ಕಿತ್ತು. ಮುಂದೆ ಡಾ. ಮೊಗ್ಲಿಂಗ್ ಈ ಪತ್ರಿಕೆಯನ್ನು 'ಕಂನಡ ಸಮಾಚಾರ' ಎಂದು ಕರೆದು ಮುದ್ರಣದ ಗುಣಮಟ್ಟ, ವಿನ್ಯಾಸಗಳನ್ನು ಅಭಿವೃದ್ಧಿಪಡಿಸಿದರು. ಮತಪ್ರಚಾರದೊಂದಿಗೆ ನಿತ್ಯದ ಸುದ್ದಿಗಳನ್ನು ನೀಡುತ್ತಿದ್ದ ಈ ಪತ್ರಿಕೆ ನಾಡಿನ ನಾನಾ ಭಾಗಗಳಲ್ಲಿ – ಮೈಸೂರು, ಬಳ್ಳಾರಿ, ಹುಬ್ಬಳ್ಳಿ ಇನ್ನೂ ಹಲವೆಡೆ – ಜನಪ್ರಿಯವಾಯಿತು.[೭] ಡಾ. ಮೊಗ್ಲಿಂಗ್ ಇದಕ್ಕಾಗಿ ಭಾಷೆ ಕಲಿತು, ಯಾವ ಕನ್ನಡಿಗನ ಸಹಾಯವನ್ನೂ ಪಡೆಯದೆ ಸ್ವತಂತ್ರವಾಗಿ ಬರೆದನು. ಮುಂದೆ ಅವನೇ ೧೮೫೭ರಲ್ಲಿ ಮರಾಠಿಯಲ್ಲಿ ಕಂನಡ್ ವಾರ್ತಿಕ್ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ. ಇದರಿಂದ ಸ್ಫೂರ್ತಿ ಪಡೆದು ಸಾಲು ಸಾಲಾಗಿ ಕ್ರೈಸ್ತ ಪತ್ರಿಕೆಗಳು ಹುಟ್ಟಿಕೊಂಡವು. ಅವುಗಳಲ್ಲಿ 'ಮಂಗಳೂರು ಕ್ರೈಸ್ತ ಸಭಾ', ಮುಂಬಯಿಯ 'ಕಂನಡ್ ಸುವಾರ್ತಕ್' ಹಾಗು 'ಕಂನಡ್ ಸುವಾರ್ತೆ' ಮುಖ್ಯವಾದವು. ಕಂನಡ್ ಸುವಾರ್ತೆ ದಶಕದ ಕಾಲ ನಡೆದದ್ದು ಸಾಮಾನ್ಯ ಸಂಗತಿಯಲ್ಲ. ಅರುಣೋದಯ ಎಂಬ ಮತ್ತೊಂದು ಮಾಸಪತ್ರಿಕೆ ಬೆಂಗಳೂರಿನಿಂದ ಪ್ರಕಟವಾಯಿತು. ಹೀಗೆ ವಿದೇಶಿಯರಿಂದ ಪ್ರಾರಂಭವಾದ ಪತ್ರಿಕೋದ್ಯಮ ಅನಂತರದ ದಿನಗಳಲ್ಲಿ ದೇಶೀಯರನ್ನೂ ಆಕರ್ಷಿಸಿತು. ಅದನ್ನು ಮುಂದಿನ ಅಧ್ಯಾಯಗಳಲ್ಲಿ ವಿಸ್ತೃತವಾಗಿ ಪರಿಶೀಲಿಸಲಾಗಿದೆ.

೧೯ನೆಯ ಶತಮಾನದಲ್ಲಿ ಸಾಹಿತ್ಯ ಪತ್ರಿಕೆಗಳ ಕೆಲಸ ಅಷ್ಟಾಗಿ ನಡೆಯಲಿಲ್ಲ. ಅದಕ್ಕೆ ಪೂರಕವಾದ ಸಾಂಸ್ಕೃತಿಕ ಸಾಮಾಜಿಕ ವಾತಾವರಣವೂ ಇರಲಿಲ್ಲ ಎಂಬುದೂ ಅಷ್ಟೇ ನಿಜ. ಅದು ವಿದೇಶಿಯರ ಆಕ್ರಮಣ ಆಧಿಪತ್ಯಗಳಿಂದ ಕನ್ನಡ ಸಾಹಿತ್ಯ ಸಂಸ್ಕೃತಿಗಳು ಅಂಚಿಗೆ ತಳ್ಳಲ್ಪಟ್ಟಿದ್ದ ಕಾಲ. ಕವಿ ಕಲಾವಿದರುಗಳಿಗೆ ಆಶ್ರಯ ನೀಡುತ್ತಿದ್ದ ಅಂದಿನ ರಾಜ ಮಹಾರಾಜರುಗಳು ಬ್ರಿಟಿಶರ ಆಜ್ಞಾಪಾಲಕರಂತೆ ವರ್ತಿಸುತ್ತಿದ್ದ ಕಾಲವದು. ಜೊತೆಗೆ ಮರಾಠರ ಪ್ರಾಬಲ್ಯವೂ ಇದ್ದುದರಿಂದ ಮೈಸೂರಿನಲ್ಲೂ ಕನ್ನಡ ಸಂಸ್ಕೃತಿ ಅಷ್ಟು ಉಜ್ವಲವಾಗಿರಲಿಲ್ಲ.[೮] ಇಂತಹ ಪರಿಸ್ಥಿತಿಯಲ್ಲಿ ಅಂದಿನ ಪತ್ರಿಕೆಗಳ ಆಶಯಗಳು ಹೀಗಿದ್ದವು:[೯]

೧. ಶೈಕ್ಷಣಿಕ ಉದ್ದೇಶಗಳು: ಪಾಶ್ಚಿಮಾತ್ಯ ವಿಚಾರಗಳನ್ನು ಪ್ರಧಾನವಾಗಿ ಪರಿಚಯ ಮಾಡಿಕೊಡುವುದು. ಉದಾಹರಣೆಗೆ, ಬ್ರಿಟಿಷ್ ಸರ್ಕಾರವೂ, ಮಿಷನರಿಗಳೂ ಭಾರತಕ್ಕೆ ಆಧುನಿಕ ಶಿಕ್ಷಣವನ್ನು ಜಾರಿಗೆ ತಂದದ್ದರಿಂದ ಇಂಗ್ಲಿಷ್ ಭಾಷೆ ದೇಶದಾದ್ಯಂತ ವ್ಯಾಪಿಸಿತು.

೨. ರಾಜಕೀಯ ಉದ್ದೇಶಗಳು: ಬ್ರಿಟಿಷ್ ಆಡಳಿತದ ಸ್ವರೂಪವನ್ನು ನಿರೂಪಿಸುವ ಮೂಲಕ ಬ್ರಿಟಿಷರ ಆಡಳಿತದ ಅನುಕೂಲಗಳ ಬಗ್ಗೆ ಒಂದು ಸಾರ್ವಜನಿಕ ಅಭಿಪ್ರಾಯ ಮೂಡಿಸುವುದು.

೩. ಧಾರ್ಮಿಕ ಉದ್ದೇಶಗಳು: ಕ್ರಿಶ್ಚಿಯನ್ ಮತಪ್ರಚಾರ ಮಾಡುವುದು.
೪. ಸಾಹಿತ್ಯಿಕ ಉದ್ದೇಶಗಳು: ಆಗ ಕನ್ನಡದಲ್ಲಿ ಲಲಿತ ಸಾಹಿತ್ಯ ರಚನೆ ಇರಲಿಲ್ಲವಾದ ಕಾರಣ ಹಳೆಯ ಕಾವ್ಯಗಳನ್ನೇ ಪರಿಷ್ಕರಿಸಿ ಪತ್ರಿಕೆಗಳಲ್ಲಿ ಪ್ರಕಟಿಸುವ ಕಾರ್ಯ ನಡೆಯುತ್ತಿತ್ತು. ಇದು ಕನ್ನಡದ ವಿಷಯದಲ್ಲಷ್ಟೇ ಅಲ್ಲ, ಎಲ್ಲ ದೇಶಭಾಷೆಗಳಲ್ಲೂ ಈ ಚಟುವಟಿಕೆ ನಡೆಯುತ್ತಿತ್ತು.

ಶೈಕ್ಷಣಿಕ ಉದ್ದೇಶದ ಪತ್ರಿಕೆಗಳು ದೇಶೀಯ ಪತ್ರಿಕೆಗಳ ಉದಯಕ್ಕೂ ಪ್ರೇರಣೆಯಾಯಿತು. ಉದಾಹರಣೆಗೆ, ಜ್ಞಾನಬೋಧಕ (೧೮೬೧, ವೆಂಕಟರಂಗೋ ಕಟ್ಟಿ), ಕನ್ನಡ ಶಾಲಾಪತ್ರಿಕೆ (೧೮೭೦, ಡೆಪ್ಯೂಟಿ ಚೆನ್ನಬಸಪ್ಪ) ಮೊದಲಾದವು ಪ್ರಮುಖ ಪತ್ರಿಕೆಗಳು.[೧೦]

ಆ ಕಾಲದ ಕನ್ನಡ ಪತ್ರಿಕೋದ್ಯಮದ ಎರಡು ಪ್ರಮುಖ ಘಟ್ಟಗಳನ್ನು ಶ್ರೀನಿವಾಸ ಹಾವನೂರರು ಹೀಗೆ ಗುರುತಿಸಿದ್ದಾರೆ:

೧. ೧೮೪೪ರಿಂದ ೧೮೮೮ರವರೆಗಿನದು ಪ್ರಥಮ ಘಟ್ಟ. ಈ ಕಾಲದಲ್ಲಿ ಜನರಿಗೆ ಸುದ್ದಿ ತಲುಪಿಸಿ ಅವರ ಜ್ಞಾನವನ್ನು ಹೆಚ್ಚಿಸುವುದೊಂದೇ ಪತ್ರಿಕೆಗಳ ಗುರಿಯಾಗಿತ್ತು.
೨. ಎರಡನೆಯ ಘಟ್ಟವು ೧೮೮೮ರಿಂದ ೧೯೨೦ರ ಅಂದರೆ ಗಾಂಧೀಜಿಯವರ ಪ್ರಭಾವ ಪ್ರಾರಂಭವಾಗುವವರೆಗೆ. ಈ ಹಂತದಲ್ಲಿ ಇದು ಒಂದು ಉದ್ಯಮವೆನಿಸಿತು, ಒಂದು ಪರಂಪರೆಯ ಪ್ರಾರಂಭ ಎನಿಸಿತು. ಮಾಹಿತಿ ತಿಳುವಳಿಕೆ ನೀಡುವುದೊಂದೇ ಪತ್ರಿಕೆಯ ಕೆಲಸವಾಗದೇ ಸಮೂಹದಲ್ಲಿ ಒಂದು ಹೊಸ ಪ್ರಜ್ಞೆಯನ್ನು ಮೂಡಿಸುವ ಒಂದು ಮುಖ್ಯ ಸಾಧನ ಎನಿಸಿತು.[೧೧]

೧೮೯೩ರಲ್ಲಿ ರಾವ್ ಬಹದ್ದೂರ್ ಶ್ಯಾಮರಾಯರ ಸಂಪಾದಕತ್ವದಲ್ಲಿ 'ವಿದ್ಯಾದಾಯಿನಿ' ಎಂಬ ಶೈಕ್ಷಣಿಕ ಪತ್ರಿಕೆ ಪ್ರಾರಂಭವಾಯಿತು. ಅನಂತರ ಮಹರಾಜಾ ಕಾಲೇಜಿನ ಇತಿಹಾಸದ ಪ್ರಾಧ್ಯಾಪಕರಾಗಿದ್ದ ಬಾಪು ಸುಬ್ಬರಾಯರು ಇದನ್ನು ನಡೆಸಿದರು. ೧೯೨೧ರಲ್ಲಿ ಸುಬ್ಬರಾಯರ ನಿಧನಾನಂತರ ನಿಂತು ಹೋಗಿದ್ದ ಈ ಪತ್ರಿಕೆ ೧೯೨೬ರಿಂದ ೧೯೩೩ರವರೆಗೆ ವಿದ್ಯಾ ಇಲಾಖೆಯ ಅಧಿಕಾರಿಗಳ ಸಹಕಾರದೊಂದಿಗೆ ಜಿ ಹನುಮಂತರಾಯರು ನಡೆಸಿದರು. ನಂತರದ ದಿನಗಳಲ್ಲಿ ಟಿ.ಎಸ್. ಗಾರ್ಡನ್ ಅವರು ಇದನ್ನು ನಡೆಸಿದರು. ಪ್ರತಿ ಸಂಚಿಕೆಯಲ್ಲಿ ೩೦-೩೪ಪುಟಗಳಿದ್ದು ಒಂದು ಸಂಪುಟ ೩೬೦-೩೮೦ ಪುಟಗಳಿತ್ತು. ಜಯರಾಮಾಚಾರ್ಯ, ಎಂ.ಎಸ್. ಪುಟ್ಟಣ್ಣ, ಎಂ.ಎಲ್.ಶ್ರೀಕಂಠೇಶಗೌಡ, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ, ನಾ.ಕಸ್ತೂರಿ, ತೀನಂಶ್ರೀ, ಎ. ಎನ್. ಮೂರ್ತಿರಾಯರು ಮೊದಲಾದ ವಿದ್ವಾಂಸರು ತಮ್ಮ ಲೇಖನಗಳನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಭಾಷಾಸಮಸ್ಯೆ, ಪಠ್ಯಪುಸ್ತಕ ಸ್ವರೂಪ, ಕನ್ನಡ ಬಾಲಬೋಧೆಯಲ್ಲಿ ಮಾಡಬೇಕಾದ ಬದಲಾವಣೆ, ಪಾಠಶಾಲೆಯ ಆಟ, ಚರ್ಚಾಸ್ಪರ್ಧೆ, ಸಂಗೀತದ ಸ್ಥಾನ, ಕುಶಲಕಲೆಗಳು, ವಿದೇಶದಲ್ಲಿನ ಸ್ತ್ರೀವಿದ್ಯಾಭ್ಯಾಸ, ಭೂಗೋಳ, ಖಗೋಳಶಾಸ್ತ್ರ, ಗಣಿತ, ವಿಜ್ಞಾನ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಮಾದರಿ ಪಾಠಗಳು ಇದರಲ್ಲಿ ಲಭ್ಯವಿದ್ದವು. ನಾಡಿನ ಶಿಕ್ಷಣ ಕ್ಷೇತ್ರಕ್ಕೆ ವಿದ್ಯಾದಾಯಿನಿಯ ಕೊಡುಗೆ ಮಹತ್ತರವಾದುದು. "ಹೊಸಗನ್ನಡದ ಉಗಮ ಕಾಲದಲ್ಲಿಯೇ ಕನ್ನಡ ಪತ್ರಿಕೋದ್ಯಮವೂ ಹುಟ್ಟಿಕೊಂಡಿತು. ಇಲ್ಲಿ ಪತ್ರಿಕೆ-ಸಾಹಿತ್ಯಗಳು ಜೊತೆಜೊತೆಯಾಗೇ ನಡೆದಿರುವುದು

ಕಾಣಿಸುತ್ತದೆ. ಆರಂಭದಲ್ಲಿ ಪತ್ರಿಕೆಗಳಲ್ಲಿ ಸಾಹಿತ್ಯಕ್ಕೆ ಅಷ್ಟೇನೂ ಮಹತ್ವ ಇರದಿದ್ದರೂ ಕ್ರಮೇಣ ಮಹತ್ವ ಹೆಚ್ಚಾಗುತ್ತ ಹೋಯಿತು"[೧೨]

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಪತ್ರಿಕೆಗಳು:

ಈ ಎರಡರ ಸಂಬಂಧದ ಕುರಿತು ಅನೇಕರು ಚಿಂತಿಸಿದ್ದಾರೆ "ಪತ್ರಿಕೆ ಮತ್ತು ಸಾಹಿತ್ಯಗಳು ಪರಸ್ಪರ ಪೂರಕ ಕ್ಷೇತ್ರಗಳಾಗಿವೆ. ಸಾಹಿತ್ಯ ಪ್ರಸಾರಕ್ಕೆ ಪತ್ರಿಕೆಗಳ ಪಾತ್ರ ಅತ್ಯಂತ ಹಿರಿದು. ಇದರಿಂದ ಸಾಹಿತ್ಯ ನಿಂತ ನೀರಾಗದೆ ಕಾಲಕಾಲಕ್ಕೆ ಹೊಸ ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತ ಸಾಗಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯದಲ್ಲಿ ನವೋದಯ, ಪ್ರಗತಿಶೀಲ, ಬಂಡಾಯ, ನವ್ಯ ದಲಿತ ಸಾಹಿತ್ಯ ನೆಲೆಗಳು ಪ್ರಾರಂಭವಾಗಿ ಜನಮನ್ನಣೆ ಗಳಿಸಲು ಕಾರಣವಾದದ್ದು ಪತ್ರಿಕೋದ್ಯಮದಿಂದಲೇ.[೧೩]

೧೯ನೆಯ ಶತಮಾನದಲ್ಲಿ ನಮ್ಮಲ್ಲಿ ರೂಪುಗೊಂಡ ಪ್ರಗತಿಪರವಾದ ಅನೇಕ ನಿರ್ಧಾರಗಳು ಹಂಚಿ ಹೋಗಿದ್ದ ಹಲವು ಸಂಗತಿಗಳ ಪುನರ್ ಸಂಘಟನೆಗೆ ವ್ಯಾಪಕವಾದ ಪ್ರಯತ್ನ ನಡೆಯಿತು. ಈ ಹಿನ್ನೆಲೆಯಲ್ಲಿ ಕನ್ನಡ ಪತ್ರಿಕಾ ಪ್ರಕಟಣೆಯ ವಲಯವೂ ನಿರ್ಮಾಣವಾಯಿತು. ದೈನಿಕ, ನಿಯತಕಾಲಿಕ ಪತ್ರಿಕೆಗಳು ಏಕಕಾಲಕ್ಕೆ ಪ್ರಾರಂಭವಾದವು. "ಸಾಮಾನ್ಯವಾಗಿ ಸಾಹಿತ್ಯ ಪತ್ರಿಕೆಗಳನ್ನು ಪ್ರಾರಂಭಿಸಿದವರು ಸಾಹಿತಿಗಳೋ ಅಥವ ಸಾಹಿತ್ಯಾಸಕ್ತರೋ ಆಗಿದ್ದರೆಂಬುದು ಮುಖ್ಯ. ಆದರೆ ಈ ಪತ್ರಿಕೆಗಳಲ್ಲಿ ಅಂದಿನ ಬದುಕಿನ ಮುಖ್ಯ ವಿಚಾರಗಳು, ಚಿಂತನೆಗಳು ಕೂಡ ಪ್ರಸ್ತಾಪಿತವಾದವು. ಈ ಸಾಹಿತ್ಯ ಪತ್ರಿಕೆಗಳು ಆಯಾ ಕಾಲದಲ್ಲಿ ಮೂಡಿಬಂದ ಸಾಹಿತ್ಯದ ಹೊಸ ಹೊಸ ಮಾರ್ಗಗಳು ರೂಪುಗೊಳ್ಳುವ ಸಂದರ್ಭದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ"[೧೪] ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ, ಅದರಲ್ಲಿಯೂ ಸಾಹಿತ್ಯದಲ್ಲಿ ಆಸಕ್ತಿಯಿರುವವರೊಂದಿಗೆ ಸಂವಹನ ಮಾಡಲು ಅನೇಕ ಪತ್ರಿಕೆಗಳು ಹುಟ್ಟಿಕೊಂಡವು. ಕನ್ನಡದ ಮಹತ್ವದ ಪತ್ರಿಕೆಗಳಾದ ಜಯಂತಿ, ಜಯಕರ್ನಾಟಕ, ವಾಗ್ಭೂಷಣ, ವಚನ ಸಾಹಿತ್ಯವನ್ನು ಪ್ರಸಾರ ಮಾಡಲು ಪ್ರಾರಂಭವಾದ ಹಳಕಟ್ಟಿಯವರ ಶಿವಾನುಭವ, ಬಿ.ಶಿವಮೂರ್ತಿಶಾಸ್ತ್ರಿಗಳ ಶರಣಸಾಹಿತ್ಯ ಪತ್ರಿಕೆ ಮೊದಲಾದವು ಆರಂಭವಾದವು.

೧೮೮೪ ರಿಂದ ೧೮೯೦ರವರೆಗೆ ಸುಮಾರು ಆರು ವರ್ಷಗಳ ಕಾಲ ಎಂ. ವೆಂಕಟಕೃಷ್ಣಯ್ಯ ಹಾಗು ಎಂ.ಎಸ್. ಪುಟ್ಟಣ್ಣನವರ ಸಂಪಾದಕತ್ವದಲ್ಲಿ ಬೆಂಗಳೂರು ಹಾಗು ಮಾಗಡಿಗಳಿಂದ ಪ್ರಕಟವಾಗುತ್ತಿದ್ದ 'ಹಿತಬೋಧಿನಿ' ಮಾಸಪತ್ರಿಕೆಯನ್ನು ಇಲ್ಲಿ ಗಮನಿಸಬಹುದು. ಪುಟ್ಟಣ್ಣನವರು ಸಾಹಿತಿಗಳು, ವೆಂಕಟಕೃಷ್ಣಯ್ಯನವರು ಜನಸೇವಾಸಕ್ತರು. ಪುಟ್ಟಣ್ಣನವರಿಗೆ ಜನರಲ್ಲಿ ಸಾಹಿತ್ಯಾಸಕ್ತಿ, ಆ ಮೂಲಕ ನೈತಿಕ ಮೌಲ್ಯ ಬೆಳೆಸುವುದು ಮುಖ್ಯವಾಗಿತ್ತು. ವೆಂಕಟಕೃಷ್ಣಯ್ಯನವರಿಗೆ ಸಾಮಾಜಿಕ ಎಚ್ಚರ ಮೂಡಿಸುವುದು ಮುಖ್ಯವಾಗಿತ್ತು. ಪರಿಣಾಮವಾಗಿ ಹಿತಬೋಧಿನಿ ಇವೆರಡರ ಸೊಬಗನ್ನೂ ಮೈಗೂಡಿಸಿಕೊಂಡಿತು.[೧೫] "ನಮ್ಮ ಶಾಸ್ತ್ರಗಳಲ್ಲಿರುವ ವಿಷಯಗಳನ್ನು ಹೇಳುವುದಲ್ಲದೆ ಇಂಗ್ಲಿಷ್‌ನಲ್ಲಿರತಕ್ಕ ನೂತನ ಕುಶಲ ವಿದ್ಯೆಯ ಸಂಗತಿಗಳನ್ನು ಆಗಾಗ್ಗೆ ಈ ಪತ್ರಿಕೆಯಲ್ಲಿ ಬರೆಯುತ್ತ ಬರುವೆವು. ವಿನೋದಕರವಾಗಿಯೂ ನೀತಿಪ್ರದರ್ಶಕವಾಗಿಯೂ ಇರುವ ಕಥೆಗಳೂ ಇದರಲ್ಲಿ ಬರೆಯಲ್ಪಡುವುವು" 'ಹಿತಬೋಧಿನಿ'ಯ ೧೮೮೭ರ ಸೆಪ್ಟೆಂಬರ್ ಆವೃತ್ತಿಯಲ್ಲಿ ಕಾವ್ಯದ ಕುರಿತು ಟೀಕೆಯೊಂದು ಪ್ರಕಟವಾಗಿದೆ. ಅಂದಿನ ತಲೆಮಾರು ಸಾಹಿತ್ಯದ ಕುರಿತು ಹೇಗೆ ಪ್ರತಿಕ್ರಿಯಿಸುತ್ತಿದ್ದರು ಎನ್ನುವುದಕ್ಕೆ ಇದೊಂದು ನಿದರ್ಶನವಾಗಿದೆ.

'ಕರ್ನಾಟಕ ಭಾಷಾಭಿಮಾನಿ' ಎನ್ನುವವರು ಬರೆದ ಅಭಿಪ್ರಾಯ ಹೀಗಿದೆ: "ಪಾದಕ್ಕೆ ಇಷ್ಟು ಅಕ್ಷರ ಅಥವ ಮಾತ್ರೆಗಳಿದ್ದರೆ ಸರಿ ಎನ್ನುವುದನ್ನು ಮಾತ್ರ ತಿಳಿದುಕೊಂಡು ಕವಿತ್ವ ಮಾಡಿರುವವರು ತಮ್ಮ ಕವಿತ್ವದ ವಿಷಯದಲ್ಲಿ ಯಾರಾದರೂ ಪೂರ್ವಪಕ್ಷವನ್ನು ಮಾಡಿದರೆ ಏನು ಸಮಾಧಾನ ಹೇಳುವರೋ ತಿಳಿಯದು. ಯೋಗ್ಯತೆ ಇಲ್ಲದೆ ಬರೀ ಚಾಪಲ್ಯದಿಂದ, ಛಂದಸ್ಸಿಗೆ ಸರಿ ಅಕ್ಷರಗಳನ್ನು ಕೂಡಿಸುವುದನ್ನು ಕಲಿತು ಶಬ್ದದೋಷ, ಅರ್ಥದೋಷ, ವಾಕ್ಯದೋಷಗಳಿಗೆ ಜನ್ಮಭೂಮಿ ಎನಿಸುವ ಶುಷ್ಕ ಕವಿತೆಯನ್ನು ಮಾಡಿ ವಿದ್ವಾಂಸರ ಹಾಸ್ಯಕ್ಕೆ ಪಾತ್ರರಾಗುವುದಕ್ಕಿಂತ ವಿಷಪಾನ ಮಾಡುವುದು ಉತ್ತಮ"[೧೧]

ಶಾಸ್ತ್ರೀಯ ವಿಷಯಗಳನ್ನಲ್ಲದೆ ಹೊಸ ಸಾಹಿತ್ಯ ರೂಪಗಳನ್ನೂ ಈ ಪತ್ರಿಕೆ ಪುರಸ್ಕರಿಸುತ್ತಿತ್ತು ಎನ್ನುವುದಕ್ಕೆ ಮೇಲಿನ ಸಾಲುಗಳೇ ಸಾಕ್ಷಿ. ಇದೇ ಕಾಲಘಟ್ಟದಲ್ಲಿ ಅಂದರೆ ೧೮೮೫ರಲ್ಲಿ 'ವೃತ್ತಾಂತ ಚಿಂತಾಮಣಿ' ಎಂಬ ದಿನಪತ್ರಿಕೆ ಪ್ರಾರಂಭವಾಯಿತು. ಇದರಲ್ಲಿ ಮುಖ್ಯವಾಗಿ ಸಾಹಿತ್ಯ, ಅರ್ಥಶಾಸ್ತ್ರ ಹಾಗೂ ವಿಜ್ಞಾನಗಳಿಗೆ ಸಂಬಂಧಿಸಿದ ಲೇಖನಗಳು ಇರುತ್ತಿದ್ದವು. ಇಂಥದೇ ಉದ್ದೇಶವನ್ನಿಟ್ಟುಕೊಂಡು ಉತ್ತರ ಕರ್ನಾಟಕದಲ್ಲಿ 'ಕರ್ನಾಟಕ ಭಾಷಾಸೇವಕ' ಹಾಗು 'ವಾಗ್ಭೂಷಣ' ಪತ್ರಿಕೆಗಳು ಪ್ರಾರಂಭವಾದವು. 'ಕರ್ನಾಟಕ ಭಾಷಾಸೇವಕ' ಪತ್ರಿಕೆಯನ್ನು ವಿಜಾಪುರದ ಮೂವರು ತರುಣ ಶಿಕ್ಷಕರು ಸೇರಿ ೧೮೯೪ರಲ್ಲಿ ಪ್ರಾರಂಭಿಸಿದರು. ಸಂಸ್ಕೃತ ಹಾಗು ಇಂಗ್ಲಿಷ್ ಕೃತಿಗಳ ಪಾಠವನ್ನು ಕನ್ನಡದಲ್ಲಿ ಸರಳ ಗದ್ಯರೂಪದಲ್ಲಿ ನೀಡುವುದು ಈ ಪತ್ರಿಕೆಯ ಉದ್ದೇಶವಾಗಿತ್ತು. ಅಂತೆಯೇ ಶಾಕುಂತಲ ನಾಟಕವನ್ನು ಆಧರಿಸಿ 'ಕೇಡು ತಂದ ಉಂಗುರ', 'ಲವ್ ಆಫ್ ಹಾರೆಮ್'ನ ಭಾಷಾಂತರ ಅಂತಃಪುರ ರಹಸ್ಯ(ಅನು:ಶೇಷಗಿರಿರಾವ್ ಕೊಣ್ಣೂರ), 'ಮಾಲತೀ ಮಾಧವ' ಕಥಾನುವಾದ 'ಕರುಳಿನ ಬಕುಳಹಾರ' (ಅನು: ಹಣುಮಂತರಾವ್ ಸಗರ) ಇವೇ ಮೊದಲಾದ ಕೃತಿಗಳು ಧಾರಾವಾಹಿಯ ರೂಪದಲ್ಲಿ ಈ ಪತ್ರಿಕೆಯಲ್ಲಿ ಪ್ರಕಟವಾದವು. ಅನಂತರ ಪುಸ್ತಕ ರೂಪವನ್ನೂ ತಾಳಿದವು.

೧೮೬೯–೧೮೭೨ರ ಅವಧಿಯಲ್ಲಿ ಬೆನೆಗಲ್ ರಾಮರಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ವಾಗ್ಭೂಷಣ' ಹಲವು ದೃಷ್ಟಿಯಿಂದ ಮುಖ್ಯವಾದ ಸಾಹಿತ್ಯ ಪತ್ರಿಕೆಯಾಗಿದೆ. ಇದೊಂದು ಮಾಸಪತ್ರಿಕೆಯಾಗಿದ್ದು ಭರ್ತೃಹರಿಯ ಒಂದು ಸುಭಾಷಿತದಿಂದಲೇ ಇದರ ಪ್ರತಿ ಸಂಚಿಕೆಯೂ ಪ್ರಾರಂಭವಾಗುತ್ತದೆ. ಭಾಷೆಗಿಂತ ಸಾಹಿತ್ಯಕ್ಕೇ ಈ ಪತ್ರಿಕೆಯಲ್ಲಿ ಪ್ರಾಧಾನ್ಯ. ಆಗಷ್ಟೇ ಸಾಹಿತ್ಯದಲ್ಲಿ ಹೊಸ ಪ್ರಯೋಗಗಳನ್ನು ಕನ್ನಡ ಭಾಷೆಯು ಕಾಣುತ್ತಿದ್ದುದರಿಂದ ಭಾಷೆಯ ಬಗೆಗಿನ ಈ ಬಗೆಯ ಔದಾರ್ಯದ ನಿಲುವು ಭಾಷೆಯ ಸಾಹಿತ್ಯವನ್ನು ಕಟ್ಟಲು ಅನುಕೂಲಕರವೇ ಆಯಿತು. ಈ ಪತ್ರಿಕೆಯಲ್ಲಿ ಕನ್ನಡ ಸಂಸ್ಕೃತ ಇಂಗ್ಲಿಷ್ ಹಿಂದಿ ಹೀಗೆ ಎಲ್ಲ ಭಾಷೆಗಳ ಸಾಹಿತ್ಯದ ಪರಿಚಯ, ಚರ್ಚೆಗಳನ್ನು ಕಾಣಬಹುದು. 'ಶ್ರಿಸಮರ್ಥರ ಕವಿತೆ', 'ಕರ್ನಾಟಕದ ಲೈಬ್ರರಿಗಳು', 'ಅಶೋಕನ ವ್ಯಕ್ತಿಜೀವನದ ಚಿತ್ರಗಳು' ಎಂಬ ಬಂಗಾಳೀ ಅನುವಾದ ಇವನ್ನೆಲ್ಲ ಒಳಗೊಂಡಿದೆ. ಮಹಮ್ಮದ್ ಪೈಗಂಬರ್, ಕನ್ನಡ ಗೀತಾರಹಸ್ಯದಿಂದ ಹಿಡಿದು ಇನ್‌ಫ್ಲೂಯೆಂಜ಼ಾ ಅಥವ ಗುದ್ದಪ್ಪನ ಬೇನೆಯವರೆಗೆ ಇಲ್ಲಿ ಲೇಖನಗಳಿವೆ. ಆ ಕಾಲದ ಸಾಮಾಜಿಕ ಸಮಸ್ಯೆಗಳಿಗೆ ಸಾಹಿತ್ಯ ಪತ್ರಿಕೆಗಳು ಕಿವುಡಾಗಿಲ್ಲ, ಕುರುಡಾಗಿಲ್ಲ, ಮೂಕವಾಗಿಲ್ಲ ಎಂಬುದು ನಮಗೆ ಮುಖ್ಯ.[೧೨] ಆ ಕಾಲದ ಕನ್ನಡದ ಪ್ರಸಿದ್ಧ ಸಾಹಿತಿಗಳೆಲ್ಲ ಒಂದೊಂದು ಪತ್ರಿಕೆಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಎಂಬುದು ಇಲ್ಲಿ ಮುಖ್ಯ: ಬೇಂದ್ರೆ–ಜಯಕರ್ನಾಟಕ, ಬೆಟಗೇರಿ ಕೃಷ್ಣಶರ್ಮ–ಜಯಂತಿ, ಮಾಸ್ತಿ–ಜೀವನ, ಬಸವರಾಜ ಕಟ್ಟೀಮನಿ–ಉಷಾ, ಶಿವರಾಮ ಕಾರಂತ–ವಸಂತ,

ಕುವೆಂಪು-ಪ್ರಬುದ್ಧ ಕರ್ನಾಟಕ ಹೀಗೆ ಸಾಹಿತಿಗಳು ಒಂದೋ ಪತ್ರಿಕೆಯ ಸಂಪಾದಕರಾಗಿದ್ದರು ಇಲ್ಲವೆ ಪತ್ರಿಕೆಯ ಜೊತೆಗೆ ನಿಕಟ ಸಂಬಂಧ ಹೊಂದಿದ್ದರು ಎಂಬುದು ಕಂಡು ಬರುತ್ತದೆ.

೧೯ನೆಯ ಶತಮಾನದ ಕೊನೆಯಲ್ಲಿ ಕನ್ನಡ ಸಾಹಿತ್ಯ ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಸ್ಥಿತಿ ತಲುಪಿತ್ತು. ಎಂ.ಎಸ್.ಪುಟ್ಟಣ್ಣನವರ 'ಹೇಮಚಂದ್ರ ರಾಜವಿಲಾಸವು' (೧೮೯೯) ಆ ಕಾಲದ ಸಾಹಿತ್ಯದ ಒಂದು ಮಾದರಿಯ್ಯಾಗಿದೆ. ಕನ್ನಡ ಸಾಹಿತ್ಯದ ಅರುಣೋದಯಕ್ಕೆ ಅಂದಿನ ಪತ್ರಿಕೆಗಳ ಕೊಡುಗೆಗಳನ್ನು ಮರೆಯುವಂತಿಲ್ಲ. ೧೮೮೩ ರಿಂದ ೧೯೨೦ರವರೆಗಿನ ಕನ್ನಡ ಆಧುನಿಕ ಸಾಹಿತ್ಯ ನಿಧಾನವಾಗಿ ಮೈದಳೆದ ಪ್ರಕ್ರಿಯೆಯನ್ನು ಪತ್ರಿಕೆಗಳು ನಿರಂತರವಾಗಿ ದಾಖಲಿಸುತ್ತ ಬಂದಿವೆ ಎಂದರೆ ತಪ್ಪಾಗದು. ೧೯೦೬-೧೯೨೫ರ ಅವಧಿಯಲ್ಲಿ 'ಅವಕಾಶ ತೋಷಿಣೀ' ಪತ್ರಿಕೆಯನ್ನು ನಡೆಸಿದ ಬಿ.ವೆಂಕಟಾಚಾರ್ಯರು ತಮ್ಮ ಅನುವಾದಗಳಿಂದಲೇ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಹೆಸರನ್ನು ಪಡೆದವರು. ಈಶ್ವರಚಂದ್ರ ವಿದ್ಯಾಸಾಗರರೊಡನೆ ಪತ್ರ ವ್ಯವಹಾರ ಮಾಡುತ್ತಲೇ ಬಂಗಾಳಿ ಭಾಷೆ ಕಲಿತು ಅಲ್ಲಿನ ಕೃತಿಗಳನ್ನು ಕನ್ನಡಿಗರಿಗೆ ಪರಿಚಯಿಸಿದವರು. ಅನುವಾದಗಳ ಮೂಲಕ ಭಾಷೆ-ಸಂಸ್ಕೃತಿಗಳ ಏಕೀಕರಣಕ್ಕೆ ದುಡಿದವರು. ವೆಂಕಟಾಚಾರ್ಯರು 'ಅವಕಾಶ ತೋಷಿಣಿ'ಯಲ್ಲಿ ಬಂಗಾಲಿಯ ಅನೇಕ ಕೃತಿಗಳನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ.

೧೯೦೫ರ ಸುಮಾರಿಗೆ ಪ್ರಾರಂಭವಾದ 'ಸೂರ್ಯೋದಯ ಪ್ರಕಾಶಿಕ'ದ ಸಂಪಾದಕತ್ವ ವಹಿಸಿದವರು ನವರತ್ನ ಅನಂತರಾಯರು. ಡಿವಿಜಿ ವಿಧ್ಯುಕ್ತವಾಗಿ ಪತ್ರಿಕೋದ್ಯಮದಲ್ಲಿ ತೊಡಗಿಸಿಕೊಂಡಿದ್ದು ಇಲ್ಲಿಂದಲೇ. ಮದ್ರಾಸಿನ ಉದ್ಯಮಿ ರಾಮರಾವ್ ಅವರು ಚೆನ್ನಕೇಶವ ಅಯ್ಯಂಗಾರ್ ಅವರ ಸಂಪಾದಕತ್ವದಲ್ಲಿ 'ವೀರಕೇಸರಿ' ಪತ್ರಿಕೆಯನ್ನು ನಡೆಸಿದರು. ಇದು ಹಿಂದೆ ಸಿದ್ಧಾಂತ ಶಿವಶಂಕರ ಶಾಸ್ತ್ರಿಗಳ ಸಂಪಾದಕತ್ವದಲ್ಲಿ 'ನುಡಿಗನ್ನಡಿ' ಎಂಬ ಹೆಸರಿನಲ್ಲಿ ಪ್ರಕಟವಾಗುತ್ತಿತ್ತು. ಚನ್ನಕೇಶವ ಅಯ್ಯಂಗಾರ್‌ರ ನಂತರ ಡಿವಿಜಿ ಸಂಪಾದಕತ್ವ ವಹಿಸಿಕೊಂಡರು. ಮುಂದೆ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರೋತ್ಸಾಹದಿಂದ ಡಿವಿಜಿ ೧೯೧೩ರಲ್ಲಿ 'ಕರ್ನಾಟಕ ಪತ್ರಿಕೆ'ಯನ್ನು ಸ್ಥಾಪಿಸಿದರು. ತಮ್ಮ ವಿಶಿಷ್ಟ ಒಳನೋಟಗಳಿಂದ ಕೂಡಿದ ಸಂಪಾದಕೀಯದಿಂದಲೇ ಡಿವಿಜಿ ಜನಮನದಲ್ಲಿ ಶಾಶ್ವತವಾಗಿ ನೆಲೆಸಿಬಿಟ್ಟರು. ಇದಲ್ಲದೆ ಇನ್ನೂ ಹಲವು ಪತ್ರಿಕೆಗಳನ್ನು ಡಿವಿಜಿ ಸ್ಥಾಪಿಸಿದರು, ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು.

೧೯೧೯ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪ್ರಕಟಿಸಲು ಆರಂಭಿಸಿದ 'ಪ್ರಬುದ್ಧ ಕರ್ನಾಟಕ' ತ್ರೈಮಾಸಿಕ, ಪೂರ್ಣಪ್ರಮಾಣದ ಸಾಹಿತ್ಯ ಪತ್ರಿಕೆಯಾಗಿ ಕಾಣಿಸಿಕೊಂಡಿತು. ಇದರಲ್ಲಿ ಮುಖ್ಯವಾಗಿ ಕನ್ನಡದ ವಿದ್ವಾಂಸರು ಭಾಗವಹಿಸಿದರು. ಪ್ರತಿ ಸಂಚಿಕೆಯನ್ನೂ ವಿಶೇಷವಾದ ಹೆಸರುಗಳಿಂದ ಕರೆಯಲಾಗಿದೆ: ದೀಪಾವಳಿ ಸಂಚಿಕೆ, ವಿನಾಯಕನ ಸಂಚಿಕೆ, ಕಾಮನ ಸಂಚಿಕೆ, ಇತ್ಯಾದಿ. ಇಲ್ಲಿಂದ ನಂತರ ಸಾಹಿತ್ಯ ಪತ್ರಿಕೆಗಳು ತಮ್ಮ ಗುರಿ, ದಾರಿ, ರೂಪು-ರೇಷೆಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಲಾರಂಭಿಸಿದವು. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ ಮುಂತಾದವರ ಮಾರ್ಗದರ್ಶನದಲ್ಲಿ ಹೊಸ ಚಿಂತನೆಗಳನ್ನು ಮೂಡಿಸಿಕೊಂಡು 'ಪ್ರಬುದ್ಧ ಕರ್ನಾಟಕ' ಹೆಚ್ಚು ಕಲಾತ್ಮಕವಾಯಿತು. ಇದರ ಸಂಪಾದಕೀಯಗಳು ಕನ್ನಡ ಸಾಹಿತ್ಯದ ಆಗು ಹೋಗುಗಳನ್ನು ತುಂಬ ಉತ್ಸಾಹದಿಂದ ಹಾಗು ಗಂಭೀರವಾಗಿ ಚರ್ಚಿಸಿತು. ಪುಸ್ತಕ ಪ್ರದರ್ಶನಗಳ ವರದಿ, ಸಾಹಿತ್ಯ ಸಮ್ಮೇಳನಗಳ ವರದಿ, ಸಮ್ಮೇಳನಾಧ್ಯಕ್ಷರ ಪರಿಚಯ ಇತ್ಯಾದಿ ವಿವರಗಳು ಪತ್ರಿಕೆಯಲ್ಲಿ ಬರಲಾರಂಭಿಸಿದವು. ಕವಿ-ಕಾವ್ಯ ಪರಿಚಯದೊಂದಿಗೆ ತೌಲನಿಕ ಅಧ್ಯಯನಗಳು ಆರಂಭವಾದವು. ಕರ್ನಾಟಕದ ಜನಪದ ಸಾಹಿತ್ಯ,

ಜೀವಕೋಶ, ವಸ್ತುಕೋಶ, ಕನ್ನಡದಲ್ಲಿ ವಿಜ್ಞಾನದ ಪರಿಭಾಷೆಗಳ ನಿರ್ಮಾಣ, ಕಾವ್ಯಾವಲೋಕನ, ಪುಸ್ತಕ ವಿಮರ್ಶೆ, ಪರಿಚಯ, ಸಣ್ಣಕಥೆ, ನಾಟಕ, ಅನುವಾದ ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಆದ್ಯತೆ ನೀಡಿತು. ಕನ್ನಡದ ಓದುಗರನ್ನು ಹೊಸ ಸಂವೇದನೆಗಳಿಗೆ ಪರಿಚಯಿಸಿತು. ಹೀಗೆ ಸಾಹಿತ್ಯ ಪತ್ರಿಕೆಗಳ ಇತಿಹಾಸದಲ್ಲಿ 'ಪ್ರಬುದ್ಧ ಕರ್ನಾಟಕ' ಒಂದು ಮೈಲಿಗಲ್ಲಾಗಿದೆ. ೨೦ನೆಯ ಶತಮಾನದ ಆರಂಭಕಾಲವನ್ನು ಆಧುನಿಕ ಸಾಹಿತ್ಯದ ಆರಂಭದ ಕಾಲ ಎನ್ನಬಹುದು. ಏಕೆಂದರೆ ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ, ಜಯಂತಿ, ವಾಗ್ಭೂಷಣ ಮೊದಲಾದ ಪತ್ರಿಕೆಗಳು ಹೊಸಗನ್ನಡ ನವೋದಯವನ್ನು ಪೋಷಿಸುವಲ್ಲಿ ಗಣನೀಯ ಪಾತ್ರ ವಹಿಸಿತು. ಈ ಕಾರಣಕ್ಕಾಗಿಯೇ ಮಾಸ್ತಿಯವರು ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿಯವರಿಬ್ಬರನ್ನು ಹೊಸಗನ್ನಡದ ಅಶ್ವಿನಿ ದೇವತೆಗಳು ಎಂದು ಕರೆದಿದ್ದಾರೆ. ಹೊಸ ಸಾಹಿತ್ಯವನ್ನು ಕಲಿತಂತೆ ನಾವು ಹೊಸ ವಿಮರ್ಶೆಯನ್ನೂ ಇಂಗ್ಲಿಷ್‌ನಿಂದ ಕಲಿಯಬೇಕಾಯಿತು ಇದಕ್ಕೆ ಪ್ರಬುದ್ಧ ಕರ್ನಾಟಕ ನೆರವಾಯಿತು ಎಂದು ಮಾಸ್ತಿ ತಿಳಿಸಿದ್ದಾರೆ.

ಕೊನೆಯದಾಗಿ, ೧೯ನೆಯ ಶತಮಾನದ ಉತ್ತರಾರ್ಧವನ್ನು ಕನ್ನಡ ಪತ್ರಿಕೋದ್ಯಮದ ಆರಂಭಿಕ ಕಾಲ ಎನ್ನಬಹುದು. ಪ್ರಾರಂಭದಲ್ಲಿ ಧರ್ಮ ಪ್ರಚಾರ, ಶಿಕ್ಷಣ ಪ್ರಸಾರಗಳು ಪತ್ರಿಕೆಗಳ ಉದ್ದೇಶವಾಗಿದ್ದು ೧೮೮೦ರ ನಂತರ ಪತ್ರಿಕಾ ಪರಂಪರೆಯೊಂದು ರೂಪುಗೊಂಡದ್ದನ್ನು ಕಾಣುತ್ತೇವೆ. ೧೯ನೆಯ ಶತಮಾನದ ಪತ್ರಿಕೆಗಳಲ್ಲಿ ಸಾಹಿತ್ಯದ ಕೆಲಸ ಅಷ್ಟಾಗಿ ನಡೆಯಲಿಲ್ಲವಾದರೂ ಅದಕ್ಕೆ ಪೂರಕವಾದ ಅಂಶಗಳು ಆ ಕಾಲದಲ್ಲಿ ಸಿದ್ಧಗೊಂಡವು. ಅಲ್ಲದೆ ಕನ್ನಡ ಸಾಹಿತ್ಯ ಪ್ರಚಾರಕ್ಕೆ ಸೂಕ್ತ ಸಾಮಾಜಿಕ, ಸಾಂಸ್ಕೃತಿಕ ವಾತಾವರಣವೂ ಆಗ ಸಿದ್ಧಗೊಂಡಿರಲಿಲ್ಲ. ೧೯ನೆ ಶತಮಾನದ ಕಡೆಯ ದಶಕಗಳು ಹಾಗು ೨೦ನೆಯ ಶತಮಾನದ ಮೊದಲ ಎರಡು ದಶಕಗಳು ಕರ್ನಾಟಕದ ಸಂದರ್ಭದಲ್ಲಿ, ಹಾಗೆಯೆ ಭಾರತದ ಸಂದರ್ಭದಲ್ಲಿಯೂ ಅತ್ಯಂತ ಮಹತ್ವದ ಕಾಲ. ಪಶ್ಚಿಮದ ಸಂಸ್ಕೃತಿ, ವಿಚಾರಗಳು ಇಡೀ ದೇಶವನ್ನು ಪ್ರಭಾವಿಸಲು ಮೊದಲಾದ ಕಾಲಘಟ್ಟವದು. ಕರ್ನಾಟಕ ಪ್ರಕಾಶಿಕ (೧೮೬೫), ವೃತ್ತಾಂತ ಚಿಂತಾಮಣಿ (೧೮೮೭), ಮೊದಲಾದ ಪತ್ರಿಕೆಗಳು ಪ್ರಜೆಗಳ ಕುಂದು ಕೊರತೆಗಳಿಗೆ ಕನ್ನಡಿ ಹಿಡಿಯುವ ಪ್ರಯತ್ನ ಮಾಡಿದವು. ಜನರಲ್ಲಿ ಹೊಸ ಪ್ರಜ್ಞೆ ಮೂಡಿಸಲು ಆಡುಭಾಷೆಯನ್ನು ಸುಲಲಿತವಾಗಿ ಬಳಸಿದವು. ಜೊತೆಗೆ ಎಲ್ಲವನ್ನೂ ಪ್ರಶ್ನಿಸುವ, ಸ್ವತಂತ್ರವಾಗಿ ವಿಶ್ಲೇಷಣೆ ಮಾಡುವ ಮನೋಧರ್ಮವೂ ಇವೆಲ್ಲದರ ಪರಿಣಾಮದಿಂದ ಪರಿಚಯವಾಯಿತು. ಭಾರತದ ಸ್ವಾತಂತ್ರ್ಯ ಹೋರಾಟ, ರಾಷ್ಟ್ರಾಭಿಮಾನಗಳು ಸಾಹಿತ್ಯದ ಮೇಲೆ ಪತ್ರಿಕೆಗಳ ಮೂಲಕ ಪ್ರಭಾವ ಉಂಟುಮಾಡಿದವು. ರಂ.ಶ್ರೀ. ಮುಗಳಿಯವರು ೧೮೨೦–೧೯೨೦ರ ೧೦೦ ವರ್ಷಗಳ ಅವಧಿಯನ್ನು ಹೊಸಗನ್ನಡ ಸಾಹಿತ್ಯದ ಮೊದಲ ಹಂತ ಎಂದಿದ್ದಾರೆ. ಈ ಅವಧಿಯಲ್ಲಿ ಕವಿ–ಸಹೃದಯ ಸಂಬಂಧದ ಸ್ವರೂಪವೇ ಪತ್ರಿಕೆಗಳ ಕಾರಣದಿಂದ ಮಾರ್ಪಾಟಾಯಿತು. ಪತ್ರಿಕೆಗಳ ಆಗಮನಕ್ಕೆ ಮುನ್ನ ಕವಿಗಳು ರಾಜಾಶ್ರಯವನ್ನು ಎದುರುನೋಡಬೇಕಾಗಿತ್ತು. ಅವರ ಅಭಿರುಚಿಗೆ ತಕ್ಕಂತೆ ಸಾಹಿತ್ಯಸೃಷ್ಟಿ ಮಾಡಬೇಕಾಗಿತ್ತು. ಪಂಡಿತರ ಮಾನ್ಯತೆಗಾಗಿ ಹಾತೊರೆಯುತ್ತಿದ್ದ ಸಾಹಿತ್ಯ ಜನಸಾಮಾನ್ಯರಿಂದ ದೂರವೇ ಉಳಿದಿತ್ತು. ಪತ್ರಿಕೆಗಳಾದರೂ ಸಾಹಿತಿ–ಸಮಾಜಗಳ ನಡುವೆ ಹಿಂದೆಂದೂ ಇರದಿದ್ದ ಒಂದು ಅಪರೂಪದ ಸಂಬಂಧವನ್ನು ಏರ್ಪಡಿಸಿತು. ಈ ದೃಷ್ಟಿಯಿಂದ ಕರ್ನಾಟಕ ಗ್ರಂಥಮಾಲ (೧೮೯೩), ವಾಗ್ಭೂಷಣ (೧೮೯೬), ಸುವಾಸಿನಿ (೧೯೦೦), ಸುಬೋಧಿನಿ (೧೯೦೫), ಶ್ರೀಕೃಷ್ಣಸೂಕ್ತಿ (೧೯೦೫) ಮೊದಲಾದ ಪತ್ರಿಕೆಗಳ ಕೊಡುಗೆಗಳನ್ನು ಸ್ಮರಿಸಬೇಕಾಗುತ್ತದೆ.

ಅಡಿಟಿಪ್ಪಣಿಗಳು

೧. Prof. Nadig Krishnamurthy, Indian Journalism, Prasaranga, Mysore University, 1966, pp.26
೨. ಆದೇ ಪುಟ ೨೬
೩. ಆದೇ ಪುಟ ೨೯
೪. ಆದೇ ಪುಟ ೧೩
೫. ಆದೇ ಪುಟ ೪೦
೬. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೮, ಪುಟ ೪೮೩
೭. ಆದೇ ಪುಟ ೪೮೮–೪೮೯
೮. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ,ಮೈಸೂರು ೧೯೭೮, ಪುಟ ೫
೯. ಆದೇ ಪುಟ ೪೭೯
೧೦. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು, ಶಿವರಾಮ ಕಾರಂತ ಅಧ್ಯಯನ ಕೇಂದ್ರ,೨೦೦೧, ಪುಟ ೭೪
೧೧. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೮, ಪುಟ ೫೧೭
೧೨. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ೨೦೦೧, ಪುಟ ೧೬೦
೧೩. ಡಾ. ಸರಜೂ ಕಾಟ್ಕರ್, ಸಾಹಿತ್ಯ ಮತ್ತು ಪತ್ರಿಕೆ ಸಂಬಂಧ, ಪತ್ರಿಕೆ ಮತ್ತು ಸಾಹಿತ್ಯ ಅನ್ವೇಷಣ ಪ್ರಕಾಶನ, ಬೆಂಗಳೂರು, ಪುಟ ೪
೧೪. ಡಾ. ಮಂಗಳಾ ಪ್ರಿಯದರ್ಶಿನಿ, ಸಾಹಿತ್ಯ ಪತ್ರಿಕೆಗಳ ಇತಿಹಾಸ, ಕನ್ನಡ ಸಾಹಿತ್ಯ ಪತ್ರಿಕೆಗಳು ಇತಿಹಾಸ, ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪುಟ ೬
೧೫. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಪತ್ರಿಕೆಗಳು, ಇತಿಹಾಸ ವರ್ತಮಾನ ಪುಟ ೬
೧೬. ಡಾ. ಸರಜೂ ಕಾಟ್ಕರ್, ಸಾಹಿತ್ಯ ಮತ್ತು ಪತ್ರಿಕೆ ಸಂಬಂಧ, ಪತ್ರಿಕೆ ಮತ್ತು ಸಾಹಿತ್ಯ ಅನ್ವೇಷಣ ಪ್ರಕಾಶನ, ಬೆಂಗಳೂರು, ಪುಟ ೧೫
೧೭. ವಿವಿಧ ಲೇಖಕರು, ಕನ್ನಡ ಸಾಹಿತ್ಯ ಪತ್ರಿಕೆಗಳು, ಇತಿಹಾಸ-ವರ್ತಮಾನ, ಪುಟ ೭.
೧೮. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು, ಪುಟ ೧೬೧

೨. ಸ್ವಾತಂತ್ರ್ಯಪೂರ್ವದ ಪತ್ರಿಕೆಗಳು ಮತ್ತು ಅವುಗಳ ಸಾಂಸ್ಕೃತಿಕ ಮಹತ್ವ

ಕನ್ನಡ ಸಾಹಿತ್ಯದೊಂದಿಗೆ ಸಂಬಂಧವನ್ನು ಬೆಳೆಸಿದ ಅನೇಕ ಪತ್ರಿಕೆಗಳು ೨೦ನೆಯ ಶತಮಾನದ ಮೊದಲ ದಿನಗಳಲ್ಲಿ ಪ್ರಕಟವಾದವು. ಇವುಗಳ ಸಾಂಸ್ಕೃತಿಕ ಮಹತ್ವ ಅನನ್ಯವಾದುದು. ಇವುಗಳಲ್ಲಿ ಸುವಾಸಿನಿ, ಶ್ರೀಕೃಷ್ಣಸೂಕ್ತಿ, ಕರ್ನಾಟಕ ಕಾವ್ಯನಿಧಿ, ಸದ್ಬೋಧ ಚಂದ್ರಿಕೆ ಮುಂತಾದ ಪತ್ರಿಕೆಗಳು ಗಮನಾರ್ಹವಾದುದು. ಈ ಪತ್ರಿಕೆಗಳು ಸಾಹಿತ್ಯಕ್ಕೆ ಸಂಬಂಧಿಸಿದ ಅನೇಕ ಮಾಹಿತಿಗಳನ್ನು ನೀಡುವುದರೊಂದಿಗೆ ಕವಿಯ ಕಾಲ ಮತ ಇವುಗಳ ನಿರ್ಣಯ ಚರ್ಚೆಗಳಿಗೆ ಮೀಸಲಾದ ಲೇಖನಗಳನ್ನು ಪ್ರಕಟಿಸಿದವು. ಜೊತೆಗೆ ಸಾಹಿತ್ಯವನ್ನು ಕುರಿತ ವಿಚಾರ ವಿವರಣೆಗಳೊಂದಿಗೆ ಅನೇಕ ಮಹತ್ವದ ಸಾಹಿತ್ಯ ಕೃತಿಗಳನ್ನು ಪತ್ರಿಕೆ ಭಾಗವಾಗಿ ಪ್ರಕಟಿಸಲಾಗುತ್ತಿತ್ತು. ಹೀಗಾಗಿ ಓಲೆಗರಿ ಹಾಗು ಕಾಗದದ ಪ್ರತಿಗಳಲ್ಲಿ ಇದ್ದ ಸಾಹಿತ್ಯಕೃತಿಗಳು ಈ ಬಗೆಯ ಪತ್ರಿಕೆಗಳ ಮೂಲಕ ಬೆಳಕಿಗೆ ಬರುವಂತೆ ಆಯಿತು. ಕನ್ನಡ ಭಾಷೆಯ ಅಭಿವೃದ್ಧಿಯಲ್ಲಿ ಈ ಪತ್ರಿಕೆಗಳ ಪಾತ್ರ ಪ್ರಮುಖವಾದುದು. ಸಾಹಿತ್ಯವನ್ನು ವಿವರಿಸುವ ವಿಶ್ಲೇಷಿಸುವ ಹೊಸ ಸಾಹಿತ್ಯದ ಪರಿಕಲ್ಪನೆಗಳನ್ನು ಆ ಹೊತ್ತಿನ ಲೇಖಕರು ತಮ್ಮ ಲೇಖನಗಳ ಮೂಲಕ ಪ್ರಚಾರಕ್ಕೆ ತಂದರು.

ಈ ಹೊತ್ತಿಗಾಗಲೇ ನಮ್ಮ ಶಿಕ್ಷಣ ಕ್ರಮದಲ್ಲಿ ಸಾಹಿತ್ಯದ ಬೋಧನೆಯೊಂದಿಗೆ ಇನ್ನಿತರ ವಿಷಯಗಳ ಬೋಧನೆಯೂ ಆರಂಭಗೊಂಡಿತ್ತು. ಆ ಹೊತ್ತಿನ ಸಾಹಿತ್ಯದ ಮತ್ತು ಇನ್ನಿತರ ವಿಷಯಗಳ ಬೋಧನೆಗೆ ತಕ್ಕ ನುಡಿಗಟ್ಟನ್ನು ರೂಪಿಸುವ ಹೊಣೆಗಾರಿಕೆಯನ್ನು ಕನ್ನಡ ಲೇಖಕರು ಈ ಪತ್ರಿಕೆಗಳ ಮೂಲಕ ರೂಪಿಸಿದ್ದು ಆ ಹೊತ್ತಿನ ಲೇಖಕರ ಹಾಗು ಪತ್ರಿಕೆಗಳ ಸಾಂಸ್ಕೃತಿಕ ಹೊಣೆಗಾರಿಕೆಯಾಗಿ ಪರಿಣಮಿಸಿತು. ಈ ಪತ್ರಿಕೆಗಳಲ್ಲಿನ ಭಾಷಾ ಪ್ರಯೋಗ ಪ್ರತ್ಯೇಕವಾದ ಅಧ್ಯಯನಕ್ಕೆ ಒಳಪಡುವಂತಿದೆ. ಭಾಷಾ ಪರಂಪರೆಯಿಂದ ವಿಕಾಸಗೊಂಡು ಬಂದಿದ್ದ ಕನ್ನಡ ಭಾಷೆಯ ಹೊಸ ಅವಸ್ಥಾಂತರಗಳತ್ತ ಚಲಿಸುತ್ತಿರುವ ಪ್ರಕ್ರಿಯೆಯನ್ನು ಈ ಪತ್ರಿಕೆಗಳು ಸಮರ್ಥವಾಗಿ ದಾಖಲಿಸಿವೆ.

ಅಲ್ಲದೆ ನಾಡಿನ ಆ ಹೊತ್ತಿನ ಅನೇಕ ಬದಲಾವಣೆಗಳನ್ನು ಕುರಿತ ಚಿಂತನೆ ಈ ಪತ್ರಿಕೆಗಳದ್ದಾಗಿದೆ. ಸಾಹಿತ್ಯದೊಂದಿಗೆ ಧರ್ಮ ಕೃಷಿ ಕೈಗಾರಿಕೆ ಮತ್ತು ವಿದ್ಯಾಭ್ಯಾಸ, ಅದರಲ್ಲಿಯೂ ಸ್ತ್ರೀ ವಿದ್ಯಾಭ್ಯಾಸದ ಅಗತ್ಯತೆ, ಇವುಗಳನ್ನು ಕುರಿತ ಚಿಂತನೆಗೆ ಈ ಪತ್ರಿಕೆಗಳು ವೇದಿಕೆಯನ್ನು ಒದಗಿಸಿಕೊಟ್ಟಿವೆ. ಕನ್ನಡ ಪರಿಸರವು ಹೊಸ ಪಲ್ಲಟಗಳನ್ನು ಎದುರಿಸಲು ಸಜ್ಜುಗೊಳ್ಳುತ್ತಿದ್ದ ಈ ಕಾಲಮಾನ ಚಾರಿತ್ರಿಕವಾಗಿಯೂ ಸಾಮಾಜಿಕವಾಗಿಯೂ ಎದುರಿಸುತ್ತಿದ್ದ ಸವಾಲುಗಳನ್ನು ಈ ಪತ್ರಿಕೆಗಳು ಪ್ರತಿಬಿಂಬಿಸಿವೆ. ಹೀಗಾಗಿ ನಮ್ಮ ಸಾಂಸ್ಕೃತಿಕ ಚಿಂತನೆಗೆ ಅದರಲ್ಲಿಯೂ ಒಂದು ಕಾಲಮಾನದ ಸಂಗತಿಗಳ ಅಧ್ಯಯನಕ್ಕೆ ಅನೇಕ

ಮಾಹಿತಿಗಳನ್ನು ಈ ಕಾಲದ ಪತ್ರಿಕೆಗಳು ಒಂದು ಭಿತ್ತಿಯನ್ನು ನಿರ್ಮಿಸಿವೆ. ಈ ಕೆಳಗೆ ಅಂತಹ ಕೆಲವು ಪತ್ರಿಕೆಗಳನ್ನು ಉಲ್ಲೇಖಿಸಿ ಅವುಗಳ ಕೊಡುಗೆಗಳನ್ನು ವಿವೇಚಿಸಲಾಗಿದೆ:

ವಾಗ್ಭೂಷಣ: ಕನ್ನಡ ನಾಡು-ನುಡಿಯ ಸೇವೆಯನ್ನೇ ಉದ್ದೇಶವಾಗಿಟ್ಟುಕೊಂಡು ೧೮೯೦ರಲ್ಲಿ ಪ್ರಾರಂಭವಾದ ಸಂಸ್ಥೆಯೇ ಧಾರವಾಡದ ವಿದ್ಯಾವರ್ಧಕ ಸಂಘ. ಅದರ ಮೊದಲ ಅಧ್ಯಕ್ಷರಾಗಿದ್ದವರು ಶಾಮರಾಯ ಕಾಯ್ಕಿಣಿ. ಕಾರ್ಯದರ್ಶಿ ಅ.ರಾ.ದೇಶಪಾಂಡೆ, ಬಿ.ಎಲ್.ರೈಸ್, ಫರ್ಡಿನೆಂಡ್ ಕಿಟೆಲ್, ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು, ಎ.ಆರ್.ಕೃಷ್ಣಶಾಸ್ತ್ರಿಗಳಂತಹ ಕನ್ನಡದ ದಿಗ್ಗಜರುಗಳು ಈ ಸಂಘದ ಸದಸ್ಯರುಗಳಾಗಿದ್ದರು. ಈ ಸಂಘದಿಂದ ಆರಂಭಗೊಂಡ ಪತ್ರಿಕೆಯೇ 'ವಾಗ್ಭೂಷಣ'. ಇದು ಕನ್ನಡದ ಮೊದಲ ಪರಿಪೂರ್ಣ ಸಾಹಿತ್ಯಿಕ ಪತ್ರಿಕೆಯಾಗಿದೆ. ಹಳಗನ್ನಡದ ಗ್ರಂಥಪರಿಶೋಧನೆ, ಪರಿಷ್ಕರಣೆ, ಹಾಗು ಹೊಸಗನ್ನಡ ಸಾಹಿತ್ಯ ನಿರ್ಮಾತೃಗಳಿಗೆ ಈ ಪತ್ರಿಕೆ ಪ್ರೋತ್ಸಾಹ ನೀಡಿತು. ಈ ಪತ್ರಿಕೆಯಲ್ಲಿ ಸಂಘದ ವಿವಿಧ ಸುದ್ದಿಗಳು, ಇತರ ಲೇಖನಗಳು ಜೊತೆಗೆ ಗ್ರಂಥಾವಳಿಯ ಭಾಗಗಳು ಇರುತ್ತಿದ್ದವು. ಕರ್ನಾಟಕ ಗ್ರಂಥಮಾಲೆಯಂತೆಯೆ ಈ ಪತ್ರಿಕೆಯೂ ಸಹ ಹೊಸ ಲೇಖಕರನ್ನು ಬೆಳಕಿಗೆ ತಂದಿದೆ. ಭಾಷಾಭೇದವಿಲ್ಲದೆ ಕನ್ನಡ, ಸಂಸ್ಕೃತ, ಇಂಗ್ಲಿಷ್, ಹಿಂದಿ ಹೀಗೆ ಎಲ್ಲ ಭಾಷೆಗಳ ಸಾಹಿತ್ಯದ ಪರಿಚಯವನ್ನು 'ವಾಗ್ಭೂಷಣ' ಮಾಡುತ್ತಿತ್ತು. ಜೊತೆಗೆ ಅಂದಿನ ಸಾಮಾಜಿಕ ಸಮಸ್ಯೆಗಳನ್ನು ಸಹ ಪ್ರತಿಬಿಂಬಿಸುವ ಕೆಲಸ ಮಾಡುತ್ತಿದ್ದುದು ಕಂಡುಬರುತ್ತದೆ.

ಅನೇಕ ದೃಷ್ಟಿಗಳಿಂದ ಮುಖ್ಯವಾದ ಈ ಮಾಸಪತ್ರಿಕೆಯ ಪ್ರತಿ ಸಂಚಿಕೆಯ ಪ್ರಾರಂಭದಲ್ಲಿ ಸಂಸ್ಕೃತದ ಭರ್ತೃಹರಿಯ ಸುಭಾಷಿತವಿದೆ. 'ಶ್ರೀಸಮರ್ಥರ ಕವಿತೆ', 'ಕರ್ನಾಟಕದೊಳಗಿನ ಲಾಯಬ್ರೆರಿಗಳು', ಅಶೋಕ ಅಥವ ಪ್ರಿಯದರ್ಶಿಗಳಂತಹ ವ್ಯಕ್ತಿಗಳ ಜೀವನಚಿತ್ರದ ಬಂಗಾಳಿಯ ಅನುವಾದ ಎಲ್ಲವನ್ನೂ ಒಳಗೊಂಡಿವೆ. ಮಹಮ್ಮದ್ ಪೈಗಂಬರ್, ಕನ್ನಡ ಗೀತಾರಹಸ್ಯದಿಂದ ಹಿಡಿದು ಇನ್‌ಫ್ಲೂಯೆಂಜ಼ಾ ಅಥವ ಗುದ್ದಪ್ಪನ ಬೇನೆಯ ವರೆಗೆ ಇಲ್ಲಿ ಲೇಖನಗಳಿವೆ. ಅ ಕಾಲದ ಸಾಮಾಜಿಕ ಸಮಸ್ಯೆಗಳಿಗೆ ಸಾಹಿತ್ಯ ಪತ್ರಿಕೆಗಳು ಕಿವುಡಾಗಿಲ್ಲ, ಕುರುಡಾಗಿಲ್ಲ, ಮೂಕವಾಗಿಲ್ಲ ಎಂಬುದು ನಮಗೆ ಮುಖ್ಯ.[೧] ಗಳಗನಾಥರ ಮೊದಲ ಕಾದಂಬರಿ 'ಪದ್ಮನಯನಾ' ಧಾರಾವಾಹಿಯಾಗಿ ಪ್ರಕಟಗೊಂಡುದು ವಾಗ್ಭೂಷಣದಲ್ಲೇ. ಕನ್ನಡ ನವೋದಯ ಕಾವ್ಯಕ್ಕೆ ಹೊಸ ದಿಕ್ಕು ತೋರಿಸಿದ, ಅಂದು 'ಪ್ರಾಸ'ದ ಬಗ್ಗೆ ಗಂಭೀರ ಚರ್ಚೆ, ವಾಗ್ವಾದ ನಡೆಸಿಡ ಪತ್ರಿಕೆ ಇದಾಗಿದೆ.

'ವಾಗ್ಭೂಷಣ'ದ ಕೊಡುಗೆ ಕುರಿತು ಕನ್ನಡದ ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಹೀಗೆ ಬರೆಯುತ್ತಾರೆ. "ವಿಮರ್ಶೆ, ಸಂಶೋಧನೆ, ವ್ಯಾಖ್ಯಾನ, ಪರಿಷ್ಕರಣ, ಹೊಸ ಸಾಹಿತ್ಯದ ನಿರ್ಮಿತಿ ಮುಂತಾದವುಗಳಿಗೆ ಮೀಸಲಾಗಿದ್ದ ವಾಗ್ಭೂಷಣ ಒಳ್ಳೆಯ ಸಾಹಿತ್ಯ ಪತ್ರಿಕೆಯಾಗಿತ್ತು ಎಂದು ಅದರ ಹಳೆಯ ಸಂಚಿಕೆಗಳ ಪರಿಶೀಲನೆಯಿಂದ ತಿಳಿಯುತ್ತದೆ".[೨] ಹೀಗೆ ವಿದ್ಯಾವರ್ಧಕ ಸಂಘದ ಮುಖವಾಣಿಯಾಗಿ ಪ್ರಾರಂಭಗೊಂಡ ಈ ಪತ್ರಿಕೆ ಆರ್ಥಿಕ ಸಂಕಷ್ಟದಿಂದಾಗಿ ೧೯೧೦ರ ನಂತರ ನಿಂತುಹೋಯಿತು. ಮತ್ತೆ ೧೯೩೮ರಲ್ಲಿ ಪ್ರಾರಂಭಗೊಂಡು ೧೯೭೩ರವರೆಗೂ ಮುಂದುವರೆದು ತರುವಾಯ ನಿಂತು ಹೋಗಿರುವುದು ಕಂಡುಬರುತ್ತದೆ.

ಅಂದಿನ ಕಾಲದ ವಿದ್ವಾಂಸರ ಸಹೃದಯತೆ, ಪ್ರಾಮಾಣಿಕತೆಗಳಿಗೆ ಇಲ್ಲಿ ಸಾಕಷ್ಟು ನಿದರ್ಶನಗಳು ಸಿಗುತ್ತವೆ. ವಾಗ್ಭೂಷಣದ ೧೯೧೯ರ ಸಂಚಿಕೆಯೊಂದರಲ್ಲಿ ಪಂಪ-ನಾಗವರ್ಮರ ಮೂಲ ಸ್ಥಲಗಳನ್ನು ಕುರಿತು ತಾವೇ ಹಿಂದೆ ನೀಡಿದ್ದ ಹೇಳಿಕೆಯನ್ನು ಪುನಃ ಪರಿಶೀಲಿಸಿದ ಹಟ್ಟಂಗಡ ನಾರಾಯಣರಾಯರು

ಅಧ್ಯಯನಾನಂತರ ತಪ್ಪೆಂದು ತಿಳಿದಾಗ ತಮ್ಮ ಮೊದಲ ಅಭಿಪ್ರಾಯವನ್ನು ತಿದ್ದಿಕೊಳ್ಳಬೇಕೆಂದು ಹೇಳಿಕೊಂಡಿದ್ದಾರೆ. ಇಂತಹ ಪ್ರಾಮಾಣಿಕತೆ ಹಾಗು ವಸ್ತುನಿಷ್ಠತೆಗಳು ಅಂದಿನ ಪತ್ರಿಕೋದ್ಯಮವನ್ನು ಬೆಳೆಸಿತು ಎಂದು ಹೇಳಿದರೆ ತಪ್ಪಾಗದು.[೩]

'ಮುಕುಂದ ದಾನಾಮೃತ'ದ ಕರ್ತೃ ಶಾಂತಕವಿ ಬಾಳಾಚಾರ್ಯರ ಕನ್ನಡಾಭಿಮಾನ ತೋರುವ ಪದ್ಯವೊಂದು ೧೯೧೮ರ ವಾಗ್ಭೂಷಣದ ಸಂಪುಟ ೨೨, ಸಂಚಿಕೆ ೮ರಲ್ಲಿ ಕಾಣಬಹುದಾಗಿದೆ.

ಕನ್ನಡ ಮಾತಿನ ತಂದೆ ತಾಯಿಗಳಿಂದ
ಚೆನ್ನ ಚೆನ್ನೆಯರೆಲ್ಲ ಹುಟ್ಟಿದಿರಿ

ಹೊಟ್ಟೆಗಿಲ್ಲದೆ ಬಂದ ದಾಸಯ್ಯನಿವನಲ್ಲ
ದಿಟ್ಟಿಸಿ ದಿಟ್ಟಿಸಿ ಕೊಡಬಂದ ಕೈಗಳ
ನೊಟ್ಟು ಸೇರಿಸಿ ಪದ ಕಟ್ಟುವನು

ಎಂದು ಹೇಳುತ್ತ ತನ್ನನ್ನು ತಾನು 'ಕನ್ನಡದ ದಾಸಯ್ಯ' ಎಂದು ಕರೆದುಕೊಂಡಿದ್ದಾರೆ.

೧೯೭೩ರ ಮೇ ಸಂಚಿಕೆಯಲ್ಲಿ "ಸಿದ್ಧಹಸ್ತರಾದ ಹಿರಿಯ ಸಾಹಿತಿಗಳ ಲೇಖನಗಳನ್ನು ಪ್ರಕಟಿಸುವುದರ ಜೊತೆಗೆ ಯೋಗ್ಯತಾ ಸಂಪನ್ನ ಉದಯೋನ್ಮುಖ ಕಿರಿಯ ಸಾಹಿತಿಗಳ ಲೇಖನಗಳನ್ನು ಪ್ರಕಟಿಸಿ ಅವರಿಗೆ ಪ್ರೋತ್ಸಾಹ ನೀಡುವ ಉದ್ದೇಶವನ್ನು ವಾಗ್ಭೂಷಣ ಹೊಂದಿದೆ" ಎಂಬುದಾಗಿ ತಿಳಿಸಲಾಗಿದೆ. ೧೯೭೩ರ ಸಂಪಾದಕ ಮಂಡಲಿ ಪಾಟೀಲ ಪುಟ್ಟಪ್ಪ, ಸ.ಸ.ಮಾಳವಾಡ, ಎನ್ಕೆ ಕುಲಕರ್ಣಿ, ಕೆ.ಎಸ್. ದೇಶಪಾಂಡೆ ಹಾಗು ಇತರ ಒಂಬತ್ತು ಜನ ಸದಸ್ಯರನ್ನು ಒಳಗೊಂಡಿತ್ತು. ೧೯೭೩ರ ಪ್ರಕಟವಾದ ವಾಗ್ಭೂಷಣದ ಕೊನೆಯ ಸಂಚಿಕೆಯ ಸಂಪಾದಕೀಯ ಹೀಗಿದೆ: "ಇನ್ನೂರು ಪುಟಗಳಿಗೂ ಮಿಕ್ಕಿದ ಈ ವಿಶೇಷ ಸಂಚಿಕೆ ಸುಮಾರು ಮೂರು ದಶಕಗಳ ನಂತರ ಮತ್ತೆ ಕನ್ನಡ ವಾಚಕರ ಕೈ ಸೇರುತ್ತಿದೆ. ಇನ್ನು ಮುಂದೆಯೂ ವಾಗ್ಭೂಷಣ ನಿಯತಕಾಲಿಕವಾಗಿ ಅಲ್ಲದಿದ್ದರೂ ವರ್ಷಕ್ಕೊಮ್ಮೆಯಾದರೂ ಬೆಳಕಿಗೆ ಬಂದು ಕನ್ನಡದ ಬಾವುಟವನ್ನು ಎತ್ತಿ ಹಿಡಿಯಬೇಕೆಂಬುದು ನಮ್ಮ ಅಭಿಲಾಷೆ". ಆದರೆ ಈ ಅಭಿಲಾಷೆ ಕನಸಾಗಿಯೇ ಉಳಿದುದು ಕನ್ನಡಿಗರ ದೌರ್ಭಾಗ್ಯ ಎನ್ನಬಹುದು.

ಶೋಧಕ ಮತ್ತು ಲೋಕಶಿಕ್ಷಕ (೧೮೭೫): ಶಿಕ್ಷಣದ ಮಹತ್ವವನ್ನರಿತಿದ್ದ ವೆಂಕಟರಂಗೋ ಕಟ್ಟಿ 'ಕನ್ನಡ ಜನತೆಯ ಬೌದ್ಧಿಕ ವಿಕಾಸವಾಗಬೇಕು, ವಿಜ್ಞಾನ ಇತಿಹಾಸಗಳಂತಹ ಹೊಸ ವಿಚಾರಗಳನ್ನು ಜನರಿಗೆ ಮುಟ್ಟಿಸಬೇಕು' ಎಂಬ ಅಭಿಲಾಷೆಯಿಂದ ೧೮೭೫ರಲ್ಲಿ 'ಶೋಧಕ' ಮತ್ತು 'ಲೋಕಶಿಕ್ಷಕ' ಎಂಬ ಪತ್ರಿಕೆಗಳನ್ನು ಪ್ರಾರಂಭಿಸಿದರು. ಅವರೇ ಹೇಳುವಂತೆ ಲೋಕಶಿಕ್ಷಣ ಆ ಎರಡು ಪತ್ರಿಕೆಗಳ ಉದ್ದೇಶವಾಗಿತ್ತು. ಶೋಧಕದ ಪ್ರಥಮ ಸಂಪಾದಕೀಯ ಹೀಗಿತ್ತು: "ಕೊಲ್ಲಾಪುರ, ಬೀದರ, ನೀಲಗಿರಿ, ಪಶ್ಚಿಮ ಸಮುದ್ರ ಈ ನಾಲ್ಕು ಮರ್ಯಾದೆಗಳ ಮಧ್ಯದಲ್ಲಿ ವಿಸ್ತಾರವಾಗಿ ಹಬ್ಬಿದ ಶೀಮೆಯು ಕರ್ನಾಟಕ ಎಂದೆನಿಸಿಕೊಳ್ಳುತ್ತದೆ. ಈ ದೇಶದ ಕ್ಷೇತ್ರಫಲವು ಸುಮಾರು ಅರವತ್ತಾರು ಸಾವಿರ ಚೌಕು ಮೈಲು, ಜನಸಂಖ್ಯೆ ಎಪ್ಪತ್ತೇಳು ಲಕ್ಷ. ಆದರೆ ನಮ್ಮ ನೆರೆಯ ಮಹಾರಾಷ್ಟ್ರ ದೇಶವು ಇದಕ್ಕೂ ಚಿಕ್ಕದಿದ್ದಾಗ್ಯೂ ಇವೆರಡೂ ದೇಶಗಳ ಈಗಿನ ಸ್ಥಿತಿ-ಗತಿಗಳನ್ನು ಸರಿ ನೋಡಲಾಗಿ ಅತಿ ಖೇದಕರ ವ್ಯತ್ಯಾಸವು

ಕಂಡುಬರುತ್ತದೆ..ಮಹಾರಾಷ್ಟ್ರವು ಶೈಕ್ಷಣಿಕವಾಗಿ ಮುಂದುವರೆದಿದ್ದು (ಹಲವಾರು ಕಾಲೇಜುಗಳಿದ್ದು) ಕರ್ನಾಟಕದಲ್ಲಿ ಕಾಲೇಜು ಎಂಬ ಹೆಸರೇ ಗೊತ್ತಿಲ್ಲ..ಮಹಾರಾಷ್ಟ್ರದಲ್ಲಿ ಮೂವತ್ತಕ್ಕಿಂತ ಹೆಚ್ಚು ವರ್ತಮಾನ ಪತ್ರಿಕೆಗಳು, ಸುಮಾರು ಇಪ್ಪತ್ತು ಮಾಸಿಕ ಪುಸ್ತಕಗಳು ಸದ್ಯ ನಡೆಯುತ್ತಿವೆ. ಕರ್ನಾಟಕ ಭಾಷೆಯಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ವರ್ತಮಾನ ಪತ್ರಿಕೆಗಳಿಲ್ಲ. ಅವೂ ಬೆಂಗಳೂರು ಶೀಮೆಯ ಹೊರಗೆ ಯಾರಿಗೂ ಗೊತ್ತಿಲ್ಲ..'' ಹೀಗೆ ಕರ್ನಾಟಕದ, ವಿಶೇಷವಾಗಿ ಮುಂಬಯಿ ಕರ್ನಾಟಕದ ಅಂದಿನ ಸ್ಥಿತಿಗತಿಯ ಮಾರ್ಮಿಕ ಚಿತ್ರಣವನ್ನು ಇದು ನೀಡಿದೆ. ಈ ಪತ್ರಿಕೆಯಲ್ಲಿ ದೊಡ್ಡವರ ಚರಿತ್ರೆಯ ವಿಭಾಗವನ್ನು ಭಾ.ಯ.ಜಠಾರ, ವೈದ್ಯಕೀಯ ವಿಷಯಗಳನ್ನು ಕೃಷ್ಣಾಚಾರ್ಯ ರಾಯಚೂರ, ಸಂಸಾರಕ್ರಮದ ಶೀರ್ಷಿಕೆಯನ್ನು ರಾ.ಹ.ದೇಶಪಾಂಡೆ ಮತ್ತು ನಡೆನುಡಿಗಳ ವಿಚಾರವನ್ನು ಸಂಗಪ್ಪ ಅಂಕಲೆ ವಹಿಸಿಕೊಂಡಿದ್ದರು. ಇದರಲ್ಲಿ ಚತುರತನದಿಂದ ಕೂಡಿದ ಬರ್ಥೋಲ್ಡನ ಕಥೆಯನ್ನು ವೆಂಕಟರಂಗೋ ಕಟ್ಟಿಯವರು ಬರೆದಿರುವುದು ಕಂಡು ಬರುತ್ತದೆ.[೪]

ಕರ್ನಾಟಕ ಕಾವ್ಯನಿಧಿ/ಕರ್ನಾಟಕ ಕಾವ್ಯಮಂಜರಿ (೧೮೯೨-೧೮೯೯): ಪ್ರಾಚೀನ ಕಾವ್ಯಗಳನ್ನು ಮತ್ತು ಆಧುನಿಕ ಗದ್ಯಕೃತಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ತರುವ ಪದ್ಧತಿಯನ್ನು ೧೯ನೆಯ ಶತಮಾನದ ಅಂತ್ಯಭಾಗದಲ್ಲಿ ಕಾಣಬಹುದು. ಅದಕ್ಕಾಗೇ ಮೀಸಲಾದ ಹಲವು ಪತ್ರಿಕೆಗಳಿದ್ದವು. ಅವುಗಳಲ್ಲಿ 'ಕರ್ನಾಟಕ ಕಾವ್ಯನಿಧಿ/ಕರ್ನಾಟಕ ಕಾವ್ಯಮಂಜರಿ' ಪ್ರಮುಖವಾದವು. ಇವುಗಳ ರೂವಾರಿಯಾಗಿದ್ದವರು ಎಂ.ಎ. ರಾಮಾನುಜಯ್ಯಂಗಾರ್ ಹಾಗು ಎಸ್.ಜಿ. ನರಸಿಂಹಾಚಾರ್ಯ. ಇವರ ಸಾಹಿತ್ಯಸೇವೆ ಚಿರಸ್ಮರಣೀಯವಾದುದು.

'ನಾನಾವಿಧ ಪ್ರಾಚೀನ ಕಾವ್ಯನಾಟಕಚ್ಛಂದೋಲಂಕಾರ ವ್ಯಾಕರಣ ನಿಘಂಟು ವೈದ್ಯ ಸೂಪ ಶಿಲ್ಪಗ್ರಂಥ ಸಂಗ್ರಹದ ಮಾಸಪತ್ರಿಕೆ' ಎಂಬ ಅಭಿಧಾನವನ್ನು ಕಾವ್ಯಮಂಜರಿಗೆ ನೀಡಲಾಗಿತ್ತು. ಕಾವ್ಯಮಂಜರಿಯಿಂದ ಒಂದೊಂದು ಗ್ರಂಥಗಳು ಹೊರಬಂದಾಗಲೂ ಅವು ಮುಂಬಯಿ, ಮದ್ರಾಸು, ಮೈಸೂರು ಸೀಮೆಗಳಲ್ಲಿನ ಮೇಲ್ದರ್ಜೆಯ ಕನ್ನಡದ ಪರೀಕ್ಷೆಗಳಿಗೆ ಪಠ್ಯಗಳಾಗಿ ಆಯ್ಕೆಯಾಗುತ್ತಿದ್ದವು ಎನ್ನಲಾಗಿದೆ'[೫]

೧೮೯೨ರಿಂದ ಅರು ವರ್ಷಗಳವರೆಗೆ ಪ್ರಕಟಗೊಂಡು ಬಳಿಕ ನಿಂತು ಹೋದ ಕರ್ನಾಟಕ ಕಾವ್ಯಮಂಜರಿ ಮತ್ತೆ ಎರಡು ವರ್ಷಗಳ ನಂತರ 'ಕರ್ನಾಟಕ ಕಾವ್ಯಕಲಾನಿಧಿ' ಎಂಬ ಹೆಸರಿನಲ್ಲಿ ಮುಂದುವರೆದಿರುವುದು ಕಂಡುಬರುತ್ತದೆ. ಮುದ್ದಣನ 'ರಾಮಾಶ್ವಮೇಧವು' ಎಂಬ ಪ್ರೌಢ ಕಾವ್ಯ ಧಾರಾವಾಹಿಯಾಗಿ ಮೊತ್ತಮೊದಲು ಪ್ರಕಟಗೊಂಡುದು 'ಕಾವ್ಯಕಲಾನಿಧಿ'ಯಲ್ಲಿಯೇ.

ಕರ್ನಾಟಕ ವೃತ್ತ (೧೮೮೫) ಮತ್ತು ಧನಂಜಯ: 'ಕನ್ನಡದ ಕೃಷ್ಣರಾಯರು' ಎಂದೇ ಪ್ರಖ್ಯಾತವಾಗಿದ್ದ ಮುದವೀಡು ಕರ್ನಾಟಕ ಏಕೀಕರಣ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಉತ್ತರ ಕರ್ನಾಟಕದಲ್ಲಿ ಮರಾಠರ ಕಾಲ್ತುಳಿತಕ್ಕೆ ಸಿಕ್ಕಿದ್ದ ಕನ್ನಡವನ್ನು ಉದ್ಧರಿಸಿದ ಮುಖ್ಯರಲ್ಲಿ ಇವರೂ ಒಬ್ಬರು. ಧಾರವಾಡದಿಂದ ಪ್ರಕಟವಾಗುತ್ತಿದ್ದ ಈ ವಾರಪತ್ರಿಕೆಗಳ ಮುಖ್ಯ ಆಶಯಗಳನ್ನು ಸಂಪಾದಕರಾದ ಮುದವೀಡು ಕೃಷ್ಣರಾಯರು ಹೀಗೆ ಉಲ್ಲೇಖಿಸುತ್ತಾರೆ:

೧. ಕನ್ನಡದ ಮೇಲಾಗುತ್ತಿದ್ದ ಮರಾಠಿ ದುಷ್ಪರಿಣಾಮವನ್ನು ಹೋಗಲಾಡಿಸುವುದು.

೨. ಸರ್ಕಾರದ ದಬ್ಬಾಳಿಕೆಯ ಚಟುವಟಿಕೆಗಳನ್ನು ಸಾರ್ವಜನಿಕರಿಗೆ ತಿಳಿಸುವುದು.

೩. ಕರ್ನಾಟಕದ ಏಕೀಕರಣಕ್ಕೆ ಜನಾಭಿಪ್ರಾಯವನ್ನು ಸಜ್ಜುಗೊಳಿಸುವುದು.

ಈ ಚಳುವಳಿಯ ಹಿಂದೆ ಊರುಗೋಲಾಗಿ ನಿಂತವರು ಮುದವೀಡು ಕೃಷ್ಣರಾಯರು. ತಮ್ಮ ನಿಲುವುಗಳನ್ನು ಜನರಿಗೆ ಮನವರಿಕೆ ಮಾಡಿಸಲು ಅವರು 'ಕರ್ನಾಟಕ ವೃತ್ತ' ಪತ್ರಿಕೆಯನ್ನು ಮೂವತ್ತೈದು ವರ್ಷಗಳ ಕಾಲ ನಡೆಸಿಕೊಂಡು ಬಂದರು. ಅನ್ಯಾಯ, ಭ್ರಷ್ಟಾಚಾರ, ದುರಾಡಳಿತಗಳ ವಿರುದ್ಧ ದನಿ ಎತ್ತುವ ಗಡುಸುತನ ರಾಯರಲ್ಲಿತ್ತು. ಅವರ ಲೇಖನಗಳಲ್ಲಿ ಈ ಬಗೆಯ ಸಾಮಾಜಿಕ ಕಾಳಜಿಗಳಲ್ಲದೆ ದೇಶಾಭಿಮಾನ, ವೀರರಸಗಳೂ ತುಂಬಿರುತ್ತಿದ್ದವು. ಜೊತೆಗೆ ಅವರ ಭಾಷಣಗಳೂ ಜನರನ್ನು ಆಳವಾಗಿ ಪ್ರಭಾವಿಸಿದವು.

ಕರ್ನಾಟಕ ಗ್ರಂಥಮಾಲಾ: ಮೈಸೂರಿನ Graduate Trading Association (GTA) ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಆರಂಭಿಸಿದ ಕನ್ನಡ ಸೇವೆ, ಭಾಷೆ ಹಾಗು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಮಹತ್ತರವಾದುದು. ಮುದ್ರಿತ ಗ್ರಂಥಗಳ ಪ್ರಸಾರವನ್ನು ಆರಂಭಿಕ ಉದ್ದೇಶವಾಗಿಟ್ಟುಕೊಂಡುಕೊಂಡ ಈ ಸಂಸ್ಥೆ ಮುಂದೆ ಹಲವಾರು ಗ್ರಂಥಗಳನ್ನು ಪ್ರಕಟಿಸಿತು. ಈ ಪ್ರಕಟಣೆಗಳಿಗಾಗಿ ಅವರು ಪತ್ರಿಕೆಯನ್ನು ಮಾಧ್ಯಮವಾಗಿಟ್ಟುಕೊಂಡರು. ಅಂತಹ ಪತ್ರಿಕೆಯೇ 'ಕರ್ನಾಟಕ ಗ್ರಂಥಮಾಲಾ'. ಇಂಗ್ಲಿಷ್, ಬಂಗಾಲಿ, ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿ ಈ ಗ್ರಂಥಮಾಲೆಯಲ್ಲಿ ಅನುಕ್ರಮವಾಗಿ ಪ್ರಕಟಿಸಲಾಗುತ್ತಿತ್ತು. ಎಲ್. ಜಯರಾವ್, ಎಂ.ಶಾಮರಾವ್, ಬಿ.ಸುಬ್ಬರಾಯರು ಮತ್ತು ಅಪ್ಪಣ್ಣಶೆಟ್ಟಿ ಈ ಗ್ರಂಥಮಾಲೆಯನ್ನು ಆರಂಭಿಸಿದವರು. ಈ ಗ್ರಂಥಮಾಲೆಯ ವತಿಯಿಂದ ಪ್ರಕಟವಾದ ಮೊದಲ ಪುಸ್ತಕ ಬಾಪು ಸುಬ್ಬರಾಯರ ಗದ್ಯಕೃತಿಗಳಾದ 'ಚಂಡಮಾರುತ', 'ಸಿಂದಬಾದದ ನಾವಿಕ' ಹಾಗು 'ನಿರ್ಭಾಗ್ಯ ಮುರಾದ'. ೧೮೯೩ರ ಭಾರತದ ವಿವಿಧ ಭಾಷಾ ಸಾಹಿತ್ಯದ ವಾರ್ಷಿಕ ಸಮೀಕ್ಷೆ ಈ ಪತ್ರಿಕೆಯ ಹಾಗು ಕರ್ನಾಟಕ ಕಾವ್ಯಮಂಜರಿಯ ಕನ್ನಡ ಸಾಹಿತ್ಯ ಸೇವೆಯನ್ನು ಈ ರೀತಿ ಶ್ಲಾಘಿಸಿದೆ:

> "the promoters of the Granthamala and Kavya Manjari are doing excellent service by concentrating the efforts of modern educated men and pundits desirous to improve and enrich modern Kannada literature".

ಸುವಾಸಿನಿ: ಬೆನಗಲ್ ರಾಮರಾಯರ ಸಂಪಾದಕತ್ವದಲ್ಲಿ ಈ ಪತ್ರಿಕೆ ಜುಲೈ ೧, ೧೯೦೦ರಂದು ಆರಂಭವಾಯಿತು. ಬೋಳಾರು ವಿಠಲ್‌ರಾವ್ ಇದರ ವ್ಯವಸ್ಥಾಪಕರಾಗಿದ್ದರು. ಮಂಗಳೂರಿನಿಂದ ಹೊರಡುತ್ತಿದ್ದ ಈ ಪತ್ರಿಕೆ ಅಲ್ಲಿನ ಬಾಸೆಲ್ ಮಿಶನ್ ಟ್ರಸ್ಟಿನಲ್ಲಿ ಮುದ್ರಣವಾಗುತ್ತಿತ್ತು. 'ವಿದ್ಯಾವರ್ಧನ, ತತ್ವಶಾಸ್ತ್ರ, ಕಲಾಕೌಶಲ – ಈ ವಿಷಯಗಳನ್ನು ವರ್ಣಿಸುವಂಥ ಮಾಸಿಕ ವಹಿ' ಎಂಬ ಘೋಷವಾಕ್ಯವನ್ನು ಹೊತ್ತಿತ್ತು.[೬] ಪತ್ರಿಕೆಯ ಉದ್ದೇಶವನ್ನು ಸಂಪಾದಕರು ಮೊದಲ ಸಂಚಿಕೆಯ 'ಸ್ಫುಟವಿಷಯ' ಎಂಬ ಸಂಪಾದಕೀಯದಲ್ಲಿ ಹೀಗೆ ಬರೆದಿರುತ್ತಾರೆ "ನಿಮ್ಮ ಮನಸ್ಸನ್ನು ಹೇಗೆ ರಂಜಿಸುವೆನೆಂದು ಕೇಳುವಿರೋ,

ನನ್ನ ಚತುರೋಕ್ತಿಯಿಂದ ಸರ್ವರನ್ನು ನಗಿಸುವೆನು, ಲೇಖನಗಳಿಂದಲೂ ಉಪನ್ಯಾಸಗಳಿಂದಲೂ ಲೋಕದ ಜ್ಞಾನವನ್ನು ವರ್ಧಿಸುವೆನು. ಕಥೆಗಳಿಂದ ನೀತಿಯನು ಉಪದೇಶಿಸುವೆನು. ನಿಮಗೆ ಬೇಸರಬಾರದಂತೆ ಬೇರೆಬೇರೆ ವಿಚಿತ್ರ ವಿಷಯಗಳನ್ನು ಹೇಳುವೆನು".[೬] ಈ ಪತ್ರಿಕೆಯಲ್ಲಿ ಚಿಕ್ಕ ಕತೆಗಳು, ಕವನಗಳು, ಚಾರಿತ್ರಿಕ ವಿಷಯಗಳು, ಪ್ರಬಂಧಗಳು ಪ್ರಕಟವಾಗುತ್ತಿದ್ದುದರ ಜೊತೆಗೆ 'ಸ್ಫುಟವಿಷಯ'

ಎಂಬ ಸಂಪಾದಕೀಯ ವಿವಿಧ ವಿಷಯ ಸಂಗ್ರಹ, ಸಂಕ್ಷಿಪ್ತ ಸಮಾಚಾರ, ಹಾಸ್ಯಾರ್ಣವ ಎಂಬ ಸ್ಥಿರ ಶೀರ್ಷಿಕೆಗಳು ಇರುತ್ತಿದ್ದವು. ಹಾಸ್ಯಾರ್ಣವ ಎಂಬ ಮೇಲ್ಪಟ್ಟದ ಹಾಸ್ಯವನ್ನು ಸಂಪಾದಕರೇ ಬರೆಯುತ್ತಿದ್ದರು. ನೂತನ ರೀತಿಯನ್ನು ಅನುಸರಿಸಿ ಬರೆದ ಚಿಕ್ಕ ಕಲ್ಪನಾ ಕಥೆಗಳಿಗೂ, ಸ್ತ್ರೀಯರು ಬರೆದು ಕಳುಹಿಸಿದ ಲೇಖನಗಳಿಗೂ ಎಲ್ಲಕ್ಕಿಂತ ಮುಂದಾಗಿ ಸ್ಥಳ ಕೊಡುವೆವು"೬ ಎಂದು ಮೊದಲ ಸಂಚಿಕೆಯಲ್ಲಿಯೇ ಸಂಪಾದಕರು ಸಾರಿದ್ದಾರೆ. ಸುವಾಸಿನಿಯಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಕಾದಂಬರಿಗಳೆಂದರೆ ಬಿ.ವೆಂಕಟರಾಯರ 'ಉನ್ಮಾದಿನಿ' ಹಾಗು ಬೆನಗಲ್ ರಾಮರಾಯರ 'ರಮಾಮಾಧವ'. ಅಲ್ಲದೆ ಪಂಜೆ ಮಂಗೇಶರಾಯರ 'ಪ್ರತುಲ', 'ದುರ್ಗಾವತಿ', 'ನನ್ನ ಚಿಕ್ಕ ತಂದೆ', 'ನನ್ನ ಚಿಕ್ಕ ತಾಯಿ', 'ಚಂಡಿಕಾ ರಹಸ್ಯ', 'ಸಮಾಜ', 'ನನ್ನ ಹೆಂಡತಿ' ಮೊದಲಾದ ಕಥೆಗಳು ಪ್ರಕಟವಾದವು. ಸಂಪಾದಕರಾಗಿದ್ದ ಬೆನಗಲ್ ರಾಮರಾಯರು ಪತ್ರಿಕೋದ್ಯಮದ ಭಾಷೆಯ ಸ್ವರೂಪವನ್ನು ಸುಧಾರಿಸಿದ್ದಲ್ಲದೆ ಗ್ರಂಥ ರಚನೆಯಲ್ಲಿಯೂ ತೊಡಗಿ ಆ ಕಾಲದ ಸೃಜನಶೀಲ ಸಾಹಿತ್ಯದ ಭಾಷಾ ಸ್ವರೂಪಕ್ಕೂ ಒಂದು ಮಾದರಿ ಹಾಕಿಕೊಟ್ಟಿದ್ದಾರೆ. ಅವರ 'ರೆನೈಸಾನ್ಸ್ ಇನ್ ಮಾಡರ್ನ್ ಕನ್ನಡ' ಎಂಬ ಪ್ರಬಂಧ ಹೊಸಗನ್ನಡದ ಮೊದಲ ಸಮಾಲೋಚನೆ ಎನಿಸಿದೆ.

ಹಾ.ತಿ. ಕೃಷ್ಣೇಗೌಡರು ಹೇಳುವಂತೆ ಸುವಾಸಿನಿ "ಮೇಲ್ಮಟ್ಟದ ಸಾಹಿತ್ಯಿಕ ಪತ್ರಿಕೆಯಾಗಿದ್ದರಿಂದ ಇದರಲ್ಲಿ ದಕ್ಷಿಣ ಕನ್ನಡದ ಬರಹಗಾರರಲ್ಲದೆ ನಾಡಿನ ನಾನಾ ಭಾಗಗಳಿಂದ ಲೇಖಕರು ಬರೆಯುತ್ತಿದ್ದರು" ಕನ್ನಡದಲ್ಲಿ ಸಣ್ಣಕತೆ ಎಂಬ ಸಾಹಿತ್ಯ ಪ್ರಕಾರ ಮೊದಲಾದದ್ದೇ ಈ ಪತ್ರಿಕೆಯ ಮೂಲಕ. ಕನ್ನಡ ಸಣ್ಣಕತೆಗಳ ಜನಕ ಎಂದು ಹೆಸರಾಂತ ಪಂಜೆಯವರ ಹಲವು ಕತೆಗಳು ಇದರಲ್ಲೇ ಪ್ರಕಟವಾಯಿತು ಎಂಬುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ಅಲ್ಲದೆ ಪಂಜೆ ಅವರ 'ಕಬ್ಬಿಣದ ಬುದ್ಧಿವಾದ', 'ಪರೀಕ್ಷೆಯಲ್ಲಿ ಪರಾಜಿತನಾದ ವಿದ್ಯಾರ್ಥಿಯ ಪ್ರಲಾಪ' ಮೊದಲಾದ ಸರಸ ಸುಂದರ ಕವಿತೆಗಳು ಈ ಪತ್ರಿಕೆಯಲ್ಲಿ ರಾ.ಮ.ಪ. ಎಂಬ ಹೆಸರಿನಲ್ಲಿ ಪ್ರಕಟಗೊಂಡವು. ಜೊತೆಗೆ ಹೊಸ ಸಾಹಿತ್ಯದ ಹಲವು ಪ್ರಕಾರಗಳು ಇದರಲ್ಲಿ ಮೊದಲ ಬಾರಿಗೆ ಬೆಳಕು ಕಂಡವು. ಕನ್ನಡದ ಆದ್ಯ ಲಲಿತ ಪ್ರಬಂಧಗಳಲ್ಲೊಂದಾದ ಎಂ.ಎನ್. ಶ್ರೀನಿವಾಸರಾಯರ 'ಮೋಡ ಮೊಳೆಯುವ ಬಿತ್ತು', ಚರಿತ್ರೆಗೆ ಸಂಬಂಧಿಸಿದ ಉಲ್ಲಾಳ ಮಂಗೇಶರಾಯರ 'ಚೀನಾ ಸಾಮ್ರಾಜ್ಯ', ವಿಜ್ಞಾನಕ್ಕೆ ಸಂಬಂಧಿಸಿದ ಎಚ್. ನಾರಾಯಣರಾಯರ 'ಭೂಮಿಶಾಸ್ತ್ರ' ಇವು ಈ ಪತ್ರಿಕೆಯಲ್ಲಿ ಸಚಿತ್ರ ಧಾರಾವಾಹಿಯಾಗಿ ಬಂದಿವೆ. ಸಂಪಾದಕರೆಡೆಗೆ ಬರುತ್ತಿದ್ದ ಹೊಸ ಪುಸ್ತಕಗಳನ್ನು 'ಪುಸ್ತಕ ಸ್ವೀಕಾರ' ಎಂಬ ಶೀರ್ಷಿಕೆಯಡಿ ವಿಮರ್ಶೆ ಮಾಡಲಾಗುತ್ತಿತ್ತು.೯ ಪಂಜೆಯವರ 'ಮರಳಿ ನೀ ತಮ್ಮನ ಕರೆಯಪ್ಪ(Oh, call my brother back to me),'ಉತ್ತಮರಾಜ್ಯ'(the better land) ಮುಂತಾದ ಭಾಷಾಂತರ ಕವಿತೆಗಳು ಸುವಾಸಿನಿಯಲ್ಲಿ ಪ್ರಕಟವಾಗಿವೆ. ಸೆಪ್ಟೆಂಬರ್ ೧೯೦೦ರ ಸಂಚಿಕೆಯಲ್ಲಿ 'ಕಾದಂಬರೀ' ಪದದ ಬಗ್ಗೆ ನಡೆದಿರುವ ಚರ್ಚೆ ಹೊಸ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ತುಂಬ ಮಹತ್ವದ್ದು.

೧೯೦೦ರ ಜುಲೈನಲ್ಲಿ ಪ್ರಾರಂಭವಾದ ಈ ಪತ್ರಿಕೆ ಕಾರಣಾಂತರಗಳಿಂದ, ಪ್ರಧಾನವಾಗಿ ಆರ್ಥಿಕ ಮುಗ್ಗಟ್ಟಿನಿಂದ, ೧೯೦೧ರ ಮೇ ತಿಂಗಳಲ್ಲಿ ೧೧ ಸಂಚಿಕೆಗಳ ನಂತರ ನಿಂತು ಹೋಯಿತು. ಮತ್ತೆ ೧೯೦೨ರ ಜೂನ್‌ನಲ್ಲಿ ಮರುಹುಟ್ಟು ಪಡೆಯಿತು. ಈ ಸಂಚಿಕೆಯ 'ಕ್ಷಮಾಪಣೆ' ಶೀರ್ಷಿಕೆಯಡಿ ಸಂಪಾದಕೀಯದಲ್ಲಿ ಸಂಪಾದಕರು "ನಮ್ಮ ದುರದೃಷ್ಟದಿಂದ ಸುವಾಸಿನಿಯ ೧೧ನೆಯ ಸಂಚಿಕೆ ಹೊರಟು ೧೦-೧೧ ತಿಂಗಳು

ಕಳೆದ ಮೇಲೆ ಈ ೧೨ನೆಯ ಸಂಚಿಕೆಯನ್ನು ಕಳುಹಿಸಬೇಕಾಯಿತು. ಇದರ ಕಾರಣಗಳನ್ನು ಇಲ್ಲಿ ಕೊಟ್ಟು ಪ್ರಯೋಜನವಾಗಲಾರದು. ಆದರೂ ಇತರೆ ಕಾರಣಗಳೊಂದಿಗೆ ಧನಾಭಾವವೂ ಒಂದಾಗಿತ್ತೆಂಬುದನ್ನು ನಮ್ಮ ಸೂಕ್ಷ್ಮ ಪಾಠಕರು ತಿಳಿಯದೆ ಹೋಗಲಾರರು...ಸ್ತ್ರೀವಿದ್ಯಾಭ್ಯಾಸವನ್ನು ಪ್ರೋತ್ಸಾಹಗೊಳಿಸಿ ಅದರೊಂದಿಗೆ ದೇಶಭಾಷೆಯನ್ನು ಅಭಿವೃದ್ಧಿಗೆ ತರತಕ್ಕ ಪತ್ರಿಕೆಯೂ ಕನ್ನಡದಲ್ಲಿ ಇದೊಂದೇ ಆಗಿರುವುದರಿಂದ ಇದನ್ನು ಬಿಡಿಸಿ ನಡೆಯಿಸಬೇಕೆಂದೂ, ತಮ್ಮಿಂದಾದ ಮಟ್ಟಿಗೆ ಸಹಾಯವನ್ನು ಮಾಡದೆ ಇರಲಾರೆವೆಂದೂ ನಮ್ಮ ಮಿತ್ರರನೇಕರು ಆಗಾಗ್ಗೆ ಬರೆಯುತ್ತಲೇ ಇರುವುದರಿಂದ ಈ ಪತ್ರಿಕೆಯನ್ನು ಕಡಿಮೆಯ ಪಕ್ಷಕ್ಕೆ ಇನ್ನೊಂದು ವರ್ಷದವರೆಗೆ ಆದರೂ ನಡೆಯಿಸಬೇಕೆಂದು ನಾವು ಉದ್ದೇಶಿಸಿರುವೆವು". ಮತ್ತೆ ೧೯೦೩ರ ಜುಲೈನಲ್ಲಿ ಅಸ್ತಂಗತವಾದ ಈ ಪತ್ರಿಕೆ ಮತ್ತೆ ೧೯೨೫ರ ಅಕ್ಟೋಬರಿನಲ್ಲಿ ಕಡೇಕಾರು ರಾಜಗೋಪಾಲರಾಯರ ('ಶ್ರೀಕೃಷ್ಣಸೂಕ್ತಿ' ಪತ್ರಿಕೆಯ ಸಂಪಾದಕರು) ಸಂಪಾದಕತ್ವದಲ್ಲಿ ಪ್ರಾರಂಭಗೊಂಡಿತು. ಈ ಹೊತ್ತಿಗೆ ಹೊಸಗನ್ನಡ ಸಾಹಿತ್ಯ ಚಟುವಟಿಕೆಗಳು ಪ್ರಾರಂಭಗೊಂಡಿದ್ದರಿಂದ ಎಲ್ಲ ಪ್ರಕಾರದ ಬರಹಗಳು ಈ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಅನೇಕ ಸಾಹಿತ್ಯ ಪತ್ರಿಕೆಗಳ ಪ್ರತಿಸ್ಪರ್ಧೆಯ ನಡುವೆಯೂ ಈ ಪತ್ರಿಕೆ ಮೂರು ವರ್ಷಗಳ ಕಾಲ ಪ್ರಕಟಗೊಂಡು ಅನಂತರ ಕಣ್ಮರೆಯಾಯಿತು. ಒಟ್ಟಿನಲ್ಲಿ ಸುವಾಸಿನಿ ಪತ್ರಿಕೆ ಹೊಸಗನ್ನಡ ಸಾಹಿತ್ಯದ ಹುಟ್ಟಿಗೆ ಕಾರಣವಾದ ಕನ್ನಡ ನವೋದಯಕ್ಕೆ ಭದ್ರವಾದ ಬುನಾದಿ ಹಾಕಿದ ಸಾಹಿತ್ಯ ಪತ್ರಿಕೆಗಳಲ್ಲಿ ಒಂದಾಗಿದೆ.

ಶ್ರೀಕೃಷ್ಣಸೂಕ್ತಿ: ಇದು ಸುವಾಸಿನಿಯ ಆಶಯಗಳನ್ನೇ ಹೊತ್ತ ಇನ್ನೊಂದು ಮಾಸ ಪತ್ರಿಕೆಯಾಗಿದೆ. ಕೆರೋಡಿ ಸುಬ್ಬರಾಯರ ಸಂಪಾದಕತ್ವದ ಈ ಪತ್ರಿಕೆ ೧೯೦೬ರ ಜನವರಿಯಲ್ಲಿ ಜನ್ಮ ತಾಳಿತು. ಕೊಳಲು ನುಡಿಸುತ್ತಿರುವ ಕೃಷ್ಣನ ಚಿತ್ರವನ್ನು ಪ್ರತಿಸಂಚಿಕೆಯ ಮುಖಪುಟದಲ್ಲಿ ಕಾಣಬಹುದಾಗಿದೆ. ಈ ಚಿತ್ರದ ಕೆಳಗೆ 'A high class Monthly Journal in Canaries' ಎಂಬ ಇಂಗ್ಲಿಷ್ ವಾಕ್ಯವಿತ್ತು ಪತ್ರಿಕೆಯ ಒಳಪುಟದಲ್ಲಿ 'ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ದೇಸ್ಯಾತ್ ಕ್ಷೋಭರಹಿತಃ ಸದ್ಭಕ್ತಾಃ ಸಂತು ನಿರ್ಭಯಾಃ' ಎಂಬ ಶ್ಲೋಕವಿತ್ತು.

"ನಮ್ಮ ಸ್ವದೇಶ ಧರ್ಮಸಮ್ಮತವಾದ ಕಾರಣ ಸಮೇತವಾಗಿಯೂ ಈಗ ಪ್ರಚಾರಕ್ಕೆ ಬಂದಿರುವ ಪಾಶ್ಚಿಮಾತ್ಯದ ಭೌತಿಕ ಶಾಸ್ತ್ರಾಧಾರಿತವಾಗಿಯೂ ಇರುವಂತೆ ಯಥಾವಿಹಿತವಾಗಿ ವರ್ಣಾಶ್ರಮ ಧರ್ಮವಿಚಾರಗಳು ನಮ್ಮ ದೇಶದ ಪ್ರಕೃತ ಸ್ಥಿತಿಗತಿ ದುರಾಚಾರ ವ್ಯವಹಾರಗಳು, ಕ್ಷಾಮ ರೋಗಾದಿ ದುಷ್ಕಾಲ ಸೂಚಕ ಈತಿಬಾಧೆಗಳು, ತತ್ವ ವಿಚಾರ ಪ್ರದಾಯಕಗಳಾದ ಶೋಧನೆಗಳು, ಕೃಷಿ ಕೈಗಾರಿಕೆ ಮೊದಲಾದ ಉದ್ಯೋಗ ಕರ್ಮಗಳು ಇವೇ ಮುಂತಾಗಿ ಅನೇಕ ವಿಷಯಗಳನ್ನು ವರ್ಣಿಸುವೆವು"[೧೦] ಎಂದು ಸಂಪಾದಕರು ಈ ಪತ್ರಿಕೆಯ ಮೂರನೆಯ ಸಂಚಿಕೆಯಲ್ಲಿ ವಿವರಿಸಿದ್ದಾರೆ. ಇದರಿಂದ ಅವರು ಇದು ಸಾಹಿತ್ಯಕ್ಕಷ್ಟೇ ಮೀಸಲಾದ ಪತ್ರಿಕೆಯಲ್ಲ ಎಂಬುದನ್ನೂ ಸೂಚಿಸುತ್ತಿದ್ದಾರೆ. ಒಂದು ವರ್ಷದ ನಂತರ ಆರ್ಥಿಕ ಸಂಕಷ್ಟದಿಂದಾಗಿ ಪತ್ರಿಕೆಯನ್ನು ನಿಲ್ಲಿಸಬೇಕಾಗಿ ಬಂದದ್ದಕ್ಕೆ ಸಂಪಾದಕರು ಹೀಗೆ ಹೇಳಿಕೊಂಡಿದ್ದಾರೆ "ಈ ಪತ್ರಿಕಾ ವೃತ್ತಿಯಿಂದ ನಮ್ಮ ಪ್ರಯೋಜನವಂತಿರಲಿ, ತನ್ನನ್ನು ಕೊಂಡು ತಾನು ಹೋಗುವ ಸ್ಥಿತಿಯಲ್ಲದಿದ್ದರೆ ನಮ್ಮ ಪುಣ್ಯೋದಯವೆಂದು ಭಾವಿಸುತ್ತಿದ್ದೆವು. ಪ್ರಾರಂಭದ ವರ್ಷದಲ್ಲಿಯೇ ನೂರಾರು ರೂಪಾಯಿ ಕೈಬಿಟ್ಟ ಕಾರಣ ಈ ಹನ್ನೆರಡನೆಯ ಸಂಚಿಕೆಯಲ್ಲಿ ನಮ್ಮ ಭಾರತದ ಹತ್ತೊಂಬತ್ತನೆಯ ಪರ್ವವನ್ನು ಪ್ರಕಟಿಸಬೇಕಾಯಿತು"[೧೧]

ಆದರೂ ಶ್ರೀಕೃಷ್ಣಸೂಕ್ತಿಯ ಪ್ರಕಟಣೆ ನಿಲ್ಲದೆ ಮುಂದುವರಿದು ೧೯೦೭ರ ಏಪ್ರಿಲ್‌ನಲ್ಲಿ ಕಡೇಕಾರು ರಾಜಗೋಪಾಲ್ ಕೃಷ್ಣರಾಯರು ಸಂಪಾದಕೀಯ ಮಂಡಲಿಯ ಸದಸ್ಯರಾಗಿ ಸೇರಿಕೊಂಡರು. ಇವರು ಪತ್ರಿಕೆಯ ಸ್ವರೂಪವನ್ನು ಬಹಳಷ್ಟು ಬದಲಾಯಿಸುವುದರ ಜೊತೆಗೆ ಹಾಸ್ಯಲಹರಿ, ಗ್ರಂಥವಿಮರ್ಶೆ, ವಿವಿಧ ವಿಷಯಾವಳಿ, ಪತ್ರಾಂತರ ಅಭಿಪ್ರಾಯ ಮುಂತಾದ ಹೊಸ ಅಂಕಣಗಳನ್ನು ಪ್ರಾರಂಭಿಸಿದರು. ಮುಂದೆ ಉತ್ತರ ಕನ್ನಡದ 'ವಿನೋದಿನಿ'(೧೯೦೮) ಎಂಬ ಪತ್ರಿಕೆ ಶ್ರೀಕೃಷ್ಣಸೂಕ್ತಿಯೊಂದಿಗೆ ವಿಲೀನವಾಗುವ ಮೂಲಕ 'ಸುವಿನೋದವಾದ ಶ್ರೀಕೃಷ್ಣಸೂಕ್ತಿ' ಎಂಬ ಹೆಸರು ಪಡೆಯಿತು.

ಆರಂಭದಲ್ಲಿ ಧಾರ್ಮಿಕ ಪತ್ರಿಕೆಯಾಗಿದ್ದ ಇದು ನಂತರ ಸಾಹಿತ್ಯ ಪತ್ರಿಕೆಯ ರೂಪವನ್ನು ಪಡೆಯಿತು. ಆ ಕಾಲಕ್ಕೆ ಪ್ರಸಿದ್ಧರಾಗಿದ್ದ ಆಲೂರು ವೆಂಕಟರಾವ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಹುರಳಿ ಭೀಮರಾವ್, ಬೆನಗಲ್ ರಾಮರಾವ್, ಹೊಸಕೆರೆ ಚಿದಂಬರಯ್ಯ ಮೊದಲಾದವರ ಬರಹಗಳು ಪ್ರಕಟಗೊಂಡವು. ಅಂದು ರಾಜಕೀಯವಾಗಿ ಹಂಚಿಹೋಗಿದ್ದ ಕರ್ನಾಟಕದ ಸಾಹಿತ್ಯ, ಸಂಸ್ಕೃತಿಗಳನ್ನು ಒಗ್ಗೂಡಿಸುವಲ್ಲಿ ಈ ಪತ್ರಿಕೆಯ ಪಾತ್ರ ಮಹತ್ವದ್ದು.

"ಶ್ರೀಕೃಷ್ಣಸೂಕ್ತಿಯಲ್ಲಿ ಹೊಸಗನ್ನಡದ ಸಾಹಿತ್ಯಕ್ಕೆ ಸಂಬಂಧಿಸಿದ ಎಲ್ಲ ಸಾಹಿತ್ಯ ಪ್ರಕಾರಗಳೂ ಪ್ರಕಟವಾಗಿದೆ. ಇದರಲ್ಲಿ ಸ್ವತಂತ್ರ ಹಾಗು ಅನುವಾದ ಕೃತಿಗಳೆರಡೂ ಉಂಟು. ಕಾದಂಬರಿಗಳು, ನಾಟಕಗಳು ಧಾರಾವಾಹಿಯಾಗಿ ಪ್ರಕಟಗೊಂಡಿವೆ. ವೈಚಾರಿಕ ಲೇಖನಗಳಿಗೂ ಇಲ್ಲಿ ಅವಕಾಶವಿತ್ತು. ಅನುವಾದದಲ್ಲಿ ಬಂಗಾಳಿ ಅನುವಾದಗಳೇ ಹೆಚ್ಚಾಗಿವೆ. ಅನೇಕ ಅನುವಾದಿತ ಇಂಗ್ಲಿಷ್ ಕವನಗಳೂ ಮೂಲದೊಂದಿಗೆ ಪ್ರಕಟವಾಗಿವೆ. ಒಟ್ಟಿನಲ್ಲಿ ಅಂದಿಗೆ ಕನ್ನಡಿಗರ ಅಭಿರುಚಿಯನ್ನು ತಿದ್ದಿ ಬೆಳೆಸುವಲ್ಲಿ ಇವೆಲ್ಲವೂ ಅಪಾರವಾಗಿ ನೆರವಾಗಿವೆ"[೨] ಎಂಬ ಟಿ.ಕೆ. ಇಂದೂಬಾಯಿಯವರ ಅಭಿಪ್ರಾಯಗಳು ಗಮನಾರ್ಹವಾದದ್ದಾಗಿದೆ.

ಶ್ರೀಕೃಷ್ಣಸೂಕ್ತಿಯ ಅಕ್ಟೋಬರ್ ೧೯೦೭ರ ಸಂಚಿಕೆಯಲ್ಲಿ "ಹೊಸವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಯಬೇಕೆಂಬ ಉತ್ಸಾಹ ಬರಹಗಾರರಿಗೆ ಇದ್ದಿರಲಿಕ್ಕಿಲ್ಲ"ಎಂಬ ಮಾತನ್ನು ಸಂಪಾದಕರು ಬರೆದಿದ್ದಾರೆ. "ಹಿಂದೆ ಇದ್ದವುಗಳನ್ನೇ ಗದ್ಯರೂಪವಾದುದನ್ನು ಪದ್ಯರೂಪವಾಗಿಯೂ, ಪದ್ಯವನ್ನು ವಚನವನ್ನಾಗಿಯೂ ಷಟ್ಪದಿಯನ್ನು ಚಂಪುವಾಗಿಯೂ, ಚಂಪುವನ್ನು ಷಟ್ಪದಿಯಾಗಿಯೂ ಬದಲಾಯಿಸಿ ಬರೆಯುತ್ತ ಬರುವುದೇ ರೂಢಿಯಲ್ಲಿ ಬಂದಿರುವುದಲ್ಲದೆ ಹೊಸ ವಿಷಯಗಳನ್ನು ತಿಳಿಸತಕ್ಕ ಗ್ರಂಥ ರಚನೆಯು ಕಡಿಮೆ" ಎಂದು ಸಂಪಾದಕರು ಕಟುವಾಗಿ ಬರೆದಿದ್ದಾರೆ.

ಹೊಸಗನ್ನಡ ಆರಂಭ ಕಾಲದಲ್ಲಿದ್ದ ಕರ್ನಾಟಕದ ಪ್ರಸಿದ್ಧ ಗ್ರಂಥಮಾಲೆಗಳಲ್ಲಿ 'ಸತಿ ಹಿತೈಷಿಣಿ'ಗೆ ವಿಶಿಷ್ಟ ಸ್ಥಾನವಿದೆ. ೧೯೧೩ರಲ್ಲಿ ಶ್ರೀಮತಿ ತಿರುಮಲಮ್ಮನವರಿಂದ ಪ್ರಾರಂಭವಾದ ಈ ಗ್ರಂಥಮಾಲೆ ಹೊಸ ಸಾಹಿತ್ಯದ ಪ್ರಕಟಣೆ, ಪ್ರಸಾರಗಳಲ್ಲಿ ಕೈಗೊಂಡ ಕಾರ್ಯ ಗಮನಾರ್ಹವಾದುದು. ಈ ಗ್ರಂಥಮಾಲೆಯು ಏಳು ಹೊಸ ಸಾಹಿತ್ಯಕೃತಿಗಳನ್ನು ಮಾಸ್ತಿಯವರು ಶ್ರೀಕೃಷ್ಣಸೂಕ್ತಿಯಲ್ಲಿ ವಿಮರ್ಶಿಸಿ ವಿಸ್ತಾರವಾದ ಲೇಖನಗಳನ್ನು ಬರೆದಿದ್ದಾರೆ. ವಿಮರ್ಶೆ ಎಂಬ ಬರವಣಿಗೆಯೇ ಇಲ್ಲದಿದ್ದ ಕಾಲದಲ್ಲಿ ಮಾಸ್ತಿಯವರು ಆರಂಭ ಮಾಡಿದ ಈ ಸಾಹಿತ್ಯ ವಿಮರ್ಶೆ ಕಾಲದ ದೃಷ್ಟಿಯಿಂದ, ಮಾಸ್ತಿಯವರ ವಿಮರ್ಶಾ ಧೋರಣೆಯ ದೃಷ್ಟಿಯಿಂದ ಇಂದಿಗೂ ಗಮನಾರ್ಹವಾಗಿದೆ.

“ಮಾಸ್ತಿಯವರ ಈ ವಿಮರ್ಶಾ ಲೇಖನಗಳ ಸಂದರ್ಭ ಅಂದರೆ ಈ ಶತಮಾನದ ಮೊದಲ ದಶಕದಲ್ಲಿ ಕಾದಂಬರಿ ಸಾಹಿತ್ಯ ಪ್ರಕಾರ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಆಗ ‘ಕಾದಂಬರಿ’ ಎಂಬ ಹೆಸರು ಚಾಲ್ತಿಯಲ್ಲಿ ಇರಲಿಲ್ಲ. ಬದಲಾಗಿ **novel** ಎಂಬ ಪದ ಬಳಕೆಯಾಗುತ್ತಿದ್ದುದು ಕಂಡು ಬರುತ್ತದೆ. ಶ್ರೀಕೃಷ್ಣಸೂಕ್ತಿಯಲ್ಲಿ ವಿಮರ್ಶೆಗೊಂಡ ತಿರುಮಲಮ್ಮನವರ ಕೃತಿಗಳು: ಸುಶೀಲೆ, ಸತೀತ್ವರಕ್ಷಣೆ ಅಥವ ನಭಾಭಾಗ, ವಿದ್ಯುಲ್ಲತಾ, ವಿರಾಗಿಣಿ, ದಕ್ಷಕನ್ಯಾ, ಕರ್ನಾಟಕ ಮಾತೃನಂದಿನಿ, ರಮಾನಂದ”[೧೩] “ಸುಶೀಲೆ ಮಧುರವಾಣಿ ಪತ್ರಿಕೆಯ ಬಹುಮಾನ ಸ್ಪರ್ಧೆಗಾಗಿ ಬರೆಯಲ್ಪಟ್ಟುದರಿಂದ ಹಾಗು ಇದು ಅವರ ಪ್ರಥಮ ಪ್ರಯತ್ನವಾದುದರಿಂದ ಇದೊಂದು ಅವಸರದ ಬರವಣಿಗೆಯಾಗಿದೆ” ಎಂದು ಮಾಸ್ತಿ ವಿಮರ್ಶಿಸಿದ್ದಾರೆ. ಮುಂದುವರೆದು “ಪುಸ್ತಕಗಳಲ್ಲಿ ನೀತಿಯನ್ನು ತಿಳಿಸುವುದು ಅವಶ್ಯಕವಾದರೂ ಅವುಗಳನ್ನು ತಿಳಿಸುವುದಕ್ಕೆಂದು ಒಂದೊಂದು ಪಾತ್ರದ ಬಾಯಲ್ಲಿ ಒಂದೊಂದು ವಿಷಯವನ್ನು ಕುರಿತ ಒಂದೊಂದು ಲೆಕ್ಚರನ್ನು ಇಟ್ಟರೆ ಅದು ಕತೆಯಾಗುವುದಿಲ್ಲ” ಎಂದಿದ್ದಾರೆ.[೧೪] ಕಾದಂಬರಿ ಪಾಶ್ಚಾತ್ಯ ಸಾಹಿತ್ಯದ ಅನುಕರಣವಾಗಿ ಬೆಳೆಯದೆ ಅದು ನಮ್ಮ ನಿಜ ಜೀವನದ ಹಿನ್ನೆಲೆಯಲ್ಲಿ ಬೆಳೆಯಬೇಕು ಎಂಬ ಮಾಸ್ತಿಯವರ ಎಂದಿನ ಆಶಯವೇ ಈ ವಿಮರ್ಶಾ ನುಡಿಗಳಲ್ಲಿಯೂ ಕಂಡುಬರುತ್ತದೆ. “ಹೀಗೆ ಅಸಂಭವವಾದ ಪಾತ್ರಗಳು, ಅಸಂಭವವಾದ ನಡೆ ನುಡಿಗಳಲ್ಲಿ ವರ್ಣಿಸಲ್ಪಟ್ಟಿರುವುದರಿಂದ ಇವರ ಬೇರೆ ಪುಸ್ತಕಗಳಲ್ಲಿಯೂ ನಿಜವೆಂಬ ಭಾವವೇ ಕಡಿಮೆಯಾಗುತ್ತದೆ. ನಭಾ ಪುಸ್ತಕದ ಕಡೆಯ ಸನ್ನಿವೇಶವನ್ನು ಓದಿದರೆ ಈ ಅಂಶ ವಿಶದವಾಗುತ್ತದೆ. ಬರಹಗಾರನಿಗೆ ಸ್ವಾತಂತ್ರ್ಯವಿದ್ದರೂ ದೂಷ್ಯ ಸನ್ನಿವೇಶಗಳನ್ನು ನಿರೂಪಿಸುವುದರಿಂದ ಸಾಹಿತ್ಯದ ಗುಣಮಟ್ಟ ಕಡಿಮೆಯಾಗುತ್ತದೆ” ಎಂದು ‘ವಿರಾಗಿಣಿ’ ಕಾದಂಬರಿಯ ವಿಮರ್ಶೆಯಲ್ಲಿ ಹೇಳಿದ್ದಾರೆ.[೧೫]

‘ವಿದ್ಯುಲ್ಲತಾ’ ಕುರಿತಂತೆ ಕಥೆಯಲ್ಲಿ ಅಸಂಭವವಾದ ಘಟನೆಗಳಿದ್ದರೂ ನವೀನ ನಾಗರೀಕತೆಗೆ ಬರಬಹುದಾದ ವಿಚಾರಗಳಿರುವುದಾಗಿ ಮಾಸ್ತಿ ವಿವರಿಸಿದ್ದಾರೆ. ‘ದಕ್ಷಕನ್ಯಾ’ ಕಥನದೃಷ್ಟಿಯಿಂದ ಮೇಲ್ಮಟ್ಟದ ಕೃತಿ ಎಂಬುದು ಮಾಸ್ತಿಯವರ ಅಭಿಪ್ರಾಯ. ‘ರಮಾನಂದ’ ಕುರಿತಂತೆ ‘ವಾಚಕರು ಪೂರ್ವಕಾಲದ ಸಮಾಜ ಸ್ಥಿತಿಯನ್ನು ಕಲ್ಪಿಸುವಷ್ಟು ವಿಲಕ್ಷಣವಾಗಿದೆ’ ಎಂದು ಬರೆದಿದ್ದಾರೆ.[೧೬] ‘ಕರ್ನಾಟಕ ಮಾತೃನಂದಿನಿ’ ಕುರಿತಂತೆ ಹೇಳುವಾಗ ಸ್ತ್ರೀಯರಿಗೆ ಗುಣವೇ ಭೂಷಣವಾಗಿದ್ದರೂ ಅವರಿಗೆ ಇಷ್ಟವಾದ ಭೂಷಣಗಳನ್ನು ಅವು ಇದ್ದ ಪಕ್ಷದಲ್ಲಿ ತೊಡುವುದರಲ್ಲಿ ಯಾವ ತಪ್ಪೂ ಇಲ್ಲ ಎಂಬುದು ಮಾಸ್ತಿಯವರ ಅಭಿಮತ. ಮೇಲಿನ ಪುಸ್ತಕಗಳ ಭಾಷೆ ಮತ್ತು ಶೈಲಿ ಕುರಿತಂತೆ “ಪುಸ್ತಕಗಳನ್ನು ಬರೆಯುವಾಗ ಸಂಸ್ಕೃತದ ಮತ್ತು ರೂಢವಲ್ಲದ ಪದಗಳನ್ನು ಸೇರಿಸಿ ಶೈಲಿ ತೊಡಕಾಗುವಂತೆ ಮಾಡಬಾರದು, ಆಡು ಭಾಷೆಯಂತೆ ವಾಡಿಕೆಯಲ್ಲಿ ಇರುವ ಪದಗಳನ್ನು ಬಳಸಬೇಕು” ಎಂದು ಸೂಚಿಸಿದ್ದಾರೆ.

‘ವಿರಾಗಿಣಿ’ಯ ವಿಮರ್ಶೆಯಲ್ಲಿ ಮಾಸ್ತಿಯವರ ಸಾಂಸ್ಕೃತಿಕ ಕಾಳಜಿಯನ್ನು ಕಾಣಬಹುದು “ಹರಿಕಥೆ ಮತ್ತು ಪುರಾಣಗಳಲ್ಲಿಯ ಶ್ರೇಷ್ಠ ಬದುಕಿನ ದರ್ಶನದಿಂದ ಒಳ್ಳೆಯ ಮಾರ್ಗದರ್ಶನವನ್ನು ಯಾರಾದರೂ ಪಡೆಯಬಹುದು. ಅವುಗಳಿಗೆ ದುಷ್ಟರು ಬರುವುದಿಲ್ಲ ಎಂದಲ್ಲ. ಆದರೆ ಪೂರ್ವಿಕರು ಯಾವ ಸದಭಿಪ್ರಾಯಗಳನ್ನು ಇಟ್ಟುಕೊಂಡು ಇವುಗಳನ್ನು ಏರ್ಪಡಿಸಿರುವರೋ ಅದು ಕಣ್ಮರೆಯಾಗದಂತೆ ನೋಡಿಕೊಳ್ಳಬೇಕಾದ ಅಗತ್ಯವಿದೆ. ನಮ್ಮ ಸೀಮೆಯಲ್ಲಿ ಈಗ ಪ್ರಾಚೀನ ನಾಗರೀಕತೆಯು ನವೀನ

ನಾಗರೀಕತೆಯೂ ಸಂಧಿಸಿ ಲೆಕ್ಕವಿಲ್ಲದಷ್ಟು ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಆದರೆ ಅದನ್ನು ಪೂರ್ತಿ ಮಾಡಲು ಸಾಮಾಜಿಕ ಕಾಳಿದಾಸರಿಲ್ಲ"[೧೭]

ಈ ವಿಮರ್ಶಾ ಬರವಣಿಗೆ ಬರೆದ ಒಂಬತ್ತು ವರ್ಷಗಳ ನಂತರ ವಿಮರ್ಶೆ ಯಾವ ಧೋರಣೆಯಿಂದ ಕೂಡಿರಬೇಕು, ಉತ್ತಮ ವಿಮರ್ಶಕನ ಮನೋಧರ್ಮ ಹೇಗಿರಬೇಕು ಎಂಬ ಕುರಿತು ಆಲೋಚಿಸಿದ್ದಾರೆ. ಅಂದರೆ ತಮ್ಮ ವಿಮರ್ಶೆಯ ಕುರಿತು ತಾವೇ ಪುನರವಲೋಕನ ಮಾಡಿಕೊಂಡಿದ್ದಾರೆ. ಈ ಕುರಿತ ವಿವೇಚನೆಯಲ್ಲಿ "ಆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿಣವಾದುವೆಂದು ಈಚೆಗೆ ನನಗೆ ತೋರಿದೆ. ನಮ್ಮಲ್ಲಿ ಇಂಗ್ಲಿಷ್ ಕಲಿತು ಕನ್ನಡವನ್ನು ನೋಡುವವರು ಹೊಸತರಲ್ಲಿ ಇಂಗ್ಲಿಷಿನ ಉತ್ತಮ ಕೃತಿಗಳಿಗೆ ಸಮಾನವಾದ ಕೃತಿಗಳು ಕನ್ನಡದಲ್ಲಿ ಬರದೆ ಇದ್ದರೆ ಬಹಳ ಅಸಮಾಧಾನ ಪಡುವೆವು. ಈ ರೀತಿಯ ಗುಣಮಾಪನದ ಆಶಯವೇನೋ ಉಚಿತವೇ. ಆದರೆ ಹೀಗೆ ಮಾಪನ ಮಾಡುವಲ್ಲಿ ಯಾವ ಭಾಷೆಯಲ್ಲಾಗಲಿ ಬಹುಜನರು ಬರೆದು ಬರಹ ಸಂಪ್ರದಾಯಗಳು ಏರ್ಪಟ್ಟ ಮೇಲೆ ಉತ್ತಮ ಕಾವ್ಯ ಬಂದೀತಲ್ಲದೆ ಒಮ್ಮೆಗೆ ಬರಲಾರದು ಎಂಬುದನ್ನು ಮರೆತಂತಾಗುತ್ತದೆ. ಒಂಬತ್ತು ವರ್ಷಗಳ ಹಿಂದೆ 'ಸತಿ ಹಿತೈಷಿಣಿ' ಗ್ರಂಥಮಾಲೆಯನ್ನು ಕುರಿತು ವಿಮರ್ಶಿಸುವಲ್ಲಿ ಈ ಭಾವಕ್ಕೆ ನಾನು ಸಾಕಷ್ಟು ಗಮನ ಕೊಡಲಿಲ್ಲ"[೧೮]

ಸದ್ಬೋಧ ಚಂದ್ರಿಕೆ: ಕನ್ನಡ ಸಾಹಿತ್ಯಿಕ/ಸಾಂಸ್ಕೃತಿಕ ಪತ್ರಿಕೆಗಳ ಸಾಲಿನಲ್ಲಿ 'ಸದ್ಬೋಧ ಚಂದ್ರಿಕೆ' ವಿಶಿಷ್ಟ ಸ್ಥಾನ ಹೊಂದಿದೆ. ಇದು ಪ್ರಾರಂಭವಾದದ್ದು ೧೯೦೭ರಲ್ಲಿ, ಗದಗ ಸಮೀಪದ ಅಗಡಿ ಆನಂದವನ ಆಶ್ರಮದ ಆಶ್ರಯದಲ್ಲಿ. ಇಂದಿಗೂ ಈ ಪತ್ರಿಕೆ 'ಕನ್ನಡಿಗರಲ್ಲಿ ವಾಚನಾಭಿರುಚಿ ಬೆಳೆಸಬೇಕು' ಎಂಬ ಆಶಯದಿಂದ ನಡೆಯುತ್ತಲೇ ಇದೆ. ವೈ.ಜಿ. ಕುಲಕರ್ಣಿ ಸಂಪಾದಕರಾಗಿದ್ದ ಈ ಪತ್ರಿಕೆಯ ಯಶಸ್ಸು ವೆಂಕಟೇಶ ಕುಲಕರ್ಣಿ (ಗಳಗನಾಥ) ಅವರಿಗೆ ಸಲ್ಲಬೇಕು. ಸಂಪಾದಕರು ಭಕ್ತಿಪರ ನೀತಿ ಲೇಖನಗಳನ್ನು ಬರೆದರೆ ಗಳಗನಾಥರು ಐತಿಹಾಸಿಕ ಕಾದಂಬರಿಗಳನ್ನು ಬರೆಯುತ್ತಿದ್ದರು.[೧೯]

ಈ ಪತ್ರಿಕೆ ಹುಟ್ಟಿದ ಸಮಯದಲ್ಲಿ ನಡುಗನ್ನಡದ ಪ್ರಭಾವ ಕಡಿಮೆಯಾಗಿ ಹೊಸಗನ್ನಡ ಸಾಹಿತ್ಯ ನಿರ್ಮಾಣಕ್ಕೆ ಕನ್ನಡ ಸಜ್ಜಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಬಂದ ಈ ಪತ್ರಿಕೆ ಜನರಿಗೆ ಹತ್ತಿರವಾದ ಭಾಷೆಯನ್ನು ಬಳಸುವ ಮೂಲಕ ಕನ್ನಡಿಗರಲ್ಲಿ ವಾಚನಾಭಿರುಚಿ ಬೆಳೆಸಿತು. 'ಸದ್ಬೋಧ ಚಂದ್ರಿಕೆ'ಯನ್ನು ಗದಗದಿಂದ ಹೊರತರುವ ಸಾಹಸ ಎಷ್ಟು ಕಷ್ಟಕರವಾಗಿತ್ತು ಎಂಬುದನ್ನು ಆನಂದವನ ವಜ್ರಮಹೋತ್ಸವ ಸ್ಮರಣ ಸಂಚಿಕೆಯಲ್ಲಿ ವಿವರಿಸಲಾಗಿದೆ "ಪ್ರತಿತಿಂಗಳು ಒಂದು ವಾರ ಕಾಲ ಹುಬ್ಬಳ್ಳಿಯಲ್ಲಿ ನಿಂತು ಶ್ರೀಕೃಷ್ಣ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿಸಿಕೊಂಡು ಕುಲಕರ್ಣಿಯವರು ಬರಬೇಕು. ಅಷ್ಟೇ ಶ್ರಮವಹಿಸಿ ಚಂದಾದಾರರ ವಿಳಾಸ ಬರೆದು ಚಕ್ಕಡಿ ಗಾಡಿಯಲ್ಲಿ ಹೇರಿಕೊಂಡು ಹೋಗಿ ಹಾವೇರಿಗೆ ತಲುಪಿಸಬೇಕು...ಎರಡನೆಯ ವರ್ಷದಲ್ಲಿ ಚಂದಾದಾರರು ಒಂದು ಸಾವಿರ ತಲುಪಿದರೂ ಕನ್ನಡದಲ್ಲಿ ಕಾದಂಬರಿಗಳನ್ನು ಧಾರಾವಾಹಿಯಾಗಿ ಪ್ರತಿತಿಂಗಳೂ ಕೊಡುವ ನವೀನ ಪದ್ಧತಿ 'ಸದ್ಬೋಧ ಚಂದ್ರಿಕೆ'ಯಿಂದಲೇ ಆರಂಭವಾಯಿತು.[೨೦]

ನವೋದಯ ಕಾಲದ ಹಿರಿಯ ಬರಹಗಾರರಿಗೆ ಈ ಪತ್ರಿಕೆ ಪ್ರೇರಕ ಶಕ್ತಿಯಾಗಿದ್ದುದು ಕಂಡು ಬರುತ್ತದೆ. ಬೆಟಗೇರಿ ಕೃಷ್ಣಶರ್ಮರು ಚಂದ್ರಿಕೆಯಲ್ಲಿ ಪ್ರಕಟವಾದ ಕಾದಂಬರಿಗಳನ್ನು ಎರಡನೆಯ ಬಾರಿ ಓದುತ್ತಿದ್ದುದಾಗಿ ಹೇಳಿಕೊಂಡಿದ್ದಾರೆ. ಬಸವರಾಜ ಕಟ್ಟೀಮನಿಯವರು ಕಾದಂಬರಿಕಾರರಾಗಲು ಮೂಲ ಪ್ರೇರಣೆ ಒದಗಿಸಿದೆ ಎನ್ನಲಾದ ಗಳಗನಾಥರ ಕಾದಂಬರಿ 'ಪದ್ಮನಯನ' ಚಂದ್ರಿಕೆಯಲ್ಲೇ

ಪ್ರಕಟವಾಗಿದ್ದು. ೧೯೨೮ರ ವೇಳೆಗೆ ಆರುಸಾವಿರ ಚಂದಾದಾರರನ್ನು ಹೊಂದಿದ್ದ ಈ ಪತ್ರಿಕೆ ಕನ್ನಡ ವಿಶೇಷಾಸಕ್ತಿ ಪತ್ರಿಕೆಗಳ ಇತಿಹಾಸದಲ್ಲೇ ಮೈಲಿಗಲ್ಲಾಗಿದೆ. ಒಂದು ಕಾಲದಲ್ಲಿ ಕನ್ನಡಿಗರಲ್ಲಿ ವಾಚನಭಿರುಚಿಯನ್ನು ಸಾಹಿತ್ಯಾಭಿರುಚಿಯನ್ನು ಮೂಡಿಸಿದ್ದ ಈ ಪತ್ರಿಕೆ ಈಚಿನ ವರ್ಷಗಳಲ್ಲಿ ಆಧ್ಯಾತ್ಮಿಕ ಪತ್ರಿಕೆಯಾಗಿ ಪರಿವರ್ತನೆಗೊಂಡಿದೆ.

ಕಂಠೀರವ: ೧೯೧೯ರಲ್ಲಿ ಪ್ರಾರಂಭವಾದ ಈ ಪತ್ರಿಕೆಗೆ ಹುರುಳಿ ಭೀಮರಾಯರು, ಎಂ.ಎನ್.ಕಾಮತ್, ಗೋವಿಂದ ಪೈ, ಕಡೆಂಗೊಡ್ಲು ಶಂಕರಭಟ್ಟರು, ಪಂಜೆ ಮಂಗೇಶರಾಯರು ಮೊದಲಾದವರು ಲೇಖನಗಳನ್ನು ಬರೆಯುತ್ತಿದ್ದುದು ಕಂಡುಬರುತ್ತದೆ.

ಸ್ವದೇಶಾಭಿಮಾನಿ ಪತ್ರಿಕೆ: ಸ್ವಾತಂತ್ರ್ಯಪೂರ್ವ ಘಟ್ಟದ ಪತ್ರಿಕೆಗಳಲ್ಲಿ ಪ್ರಮುಖವಾದ ಈ ಪತ್ರಿಕೆ ಆರಂಭವಾದದ್ದು ೧೯೦೭ರಲ್ಲಿ. ಮಂಗಳೂರಿನಿಂದ ಪ್ರಕಟವಾಗುತ್ತಿದ್ದ ಇದರ ಸಂಪಾದಕರು ಶ್ರೀನಿವಾಸ ಕಾಮತರು. ೧೯೧೯ರಲ್ಲಿ ವಾರಪತ್ರಿಕೆಯ ರೂಪವನ್ನು ತಳೆದ ಇದರಲ್ಲಿ ವಿದೇಶ ವೃತ್ತಾಂತ, ರಾಷ್ಟ್ರೀಯ ವಿಷಯಗಳು, ಉತ್ತರ ಹಿಂದೂಸ್ಥಾನ, ದಕ್ಷಿಣ ಹಿಂದೂಸ್ಥಾನ, ದಕ್ಷಿಣ ಕನ್ನಡ – ಹೀಗೆ ವಿವಿಧ ಸುದ್ದಿ ವಿಭಾಗಗಳಿದ್ದವು. ಜೊತೆಗೆ ಕತೆ, ಕವನ, ವಿಚಾರಾತ್ಮಕ ಬರಹಗಳೂ ಕಂಡು ಬರುತ್ತಿದ್ದವು. ಎರಡು ವರ್ಣರಂಜಿತ ಕಾಂಗ್ರೇಸ್ ಧ್ವಜಗಳ ನಡುವೆ ಭಾರತಮಾತೆಯ ಚಿತ್ರ ಅದರ ಕೆಳಗೆ 'ವಂದೆ ಮಾತರಂ' ಎಂಬ ದೇವನಾಗರೀ ಬರಹ, ಅದರಡಿ

ದೊರೆಯಲನುಪಮ ರತ್ನಗಳು ಸಾ
ಗರವ ಮಥಿಸಲು ಸುರರಿಗದರಿಂ
ಹರುಷವಾಯಿತೆ ಮತ್ತೆ ವಿಶ್ವವ ಸುಡಲು ಬರುತಿರುವ
ಗರಲಕವರಂಜಿದರೆ ಸುಧೆಯನು
ಮರೆತು ಕ್ಷುದ್ರರ ತೆರದಿ ಕುಳಿತರೆ
ತೆರಳಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು

ಎಂಬ ಷಟ್ಪದಿಯ ಪದ್ಯವೊಂದು ಇರುತ್ತಿತ್ತು. ಮುಖಪುಟದ ಉಳಿದ ಭಾಗವೆಲ್ಲ ಜಾಹಿರಾತುಗಳಿಂದ ತುಂಬಿರುತ್ತಿತ್ತು. ಒಳಪುಟದ ಆರಂಭದಲ್ಲಿ ಸಂಪಾದಕೀಯ ಬರಹ, ಅನಂತರ ಇತರ ವಿಷಯ ವಿಭಾಗಗಳೂ ಕ್ರಮವಾಗಿ ಇರುತ್ತಿದ್ದವು.[೨೧]

ಇದೇ ಕಾಲಘಟ್ಟದಲ್ಲಿ ದಕ್ಷಿಣ ಕನ್ನಡದಿಂದ ಪ್ರಕಟವಾಗುತ್ತಿದ್ದ ಇತರ ಪತ್ರಿಕೆಗಳೆಂದರೆ 'ನವಯುಗ' ಹಾಗು 'ರಾಷ್ಟ್ರಬಂಧು'. ೧೭೯೯ರಲ್ಲಿ ಟಿಪ್ಪು ಆಡಳಿತ ಪತನವಾಯಿತು. ಅನಂತರದಲ್ಲಿ ಈ ಭಾಗ ನೇರವಾಗಿ ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಕಾರಣ ಇಂಗ್ಲಿಷ್ ವಿದ್ಯಾಭ್ಯಾಸ ಕೂಡ ದೊರಕಿತು. ಅದು ಜನರಲ್ಲಿ ಆಧುನಿಕ ವೈಚಾರಿಕತೆಯನ್ನು ಮೈಗೂಡಿಸಿತು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸ್ವದೇಶಾಭಿಮಾನಿ ಪತ್ರಿಕೆಯ ಪಾತ್ರವೇನು ಎಂಬುದನ್ನು ಅದರ ಸಂಪಾದಕೀಯ ಹಾಗು ಅದರ ಇತರ ಬರಹಗಳು ತಿಳಿಸುತ್ತವೆ. ಕೇವಲ ಸಮಕಾಲೀನ ರಾಜಕೀಯ ಆಗುಹೋಗುಗಳನ್ನು ದಾಖಲಿಸದೆ ಅದರ ಕುರಿತ ಪತ್ರಿಕೆಯ ನಿಲುವನ್ನು ಪ್ರಕಟಿಸಿದಾಗ ಮಾತ್ರ ಜನಾಭಿಪ್ರಾಯ ಮೂಡಿಸಲು ಸಾಧ್ಯವಾಗುತ್ತದೆ. ಈ ಪತ್ರಿಕೆ ಅಂತಹ ಕೆಲಸ ಮಾಡಿತು. ಪತ್ರಿಕೆಯ ಸಂಪಾದಕೀಯದ ಕೆಲವು ಶೀರ್ಷಿಕೆಗಳನ್ನು ಗಮನಿಸಬಹುದು:

೧. ಸತ್ಯಾಗ್ರಹ ವಿವರಣೆ[೨೨]
೨. ಆಗ್ರಹದ ಸೂಚನೆ[೨೩]

೩. ರಾಷ್ಟ್ರೀಯ ಸಭೆಯೂ ರಾಷ್ಟ್ರೀಯ ಬಾಷೆಯೂ[೨೪]

ಜಯಕರ್ನಾಟಕದಲ್ಲಿ ಪ್ರಕಟವಾದ ಶ್ರೀಮತಿ ಕನಕಲಕ್ಷ್ಮಮ್ಮನವರ ಲೇಖನ 'ಸ್ತ್ರೀಯರು ರಂಗಭೂಮಿಯ ಮೇಲೆ ಬರಬಹುದೇ'[೨೫] ಕುರಿತು ಅಂದಿನ ಪತ್ರಿಕೆಗಳಲ್ಲಿ ಚರ್ಚಿತವಾಗಿರುವುದು ಕಂಡುಬರುತ್ತದೆ. ಸ್ವಾತಂತ್ರ್ಯಪೂರ್ವದಲ್ಲೇ ಬಂದ ಈ ಲೇಖನ ಸ್ತ್ರೀ ಸ್ವಾತಂತ್ರ್ಯ ಕುರಿತಾದದ್ದು. ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು, ತಮ್ಮಿಚ್ಛೆಯಂತೆ ರಂಗಭೂಮಿಯನ್ನಾಗಲಿ ಅಥವ ಇನ್ನಾವುದೇ ಕ್ಷೇತ್ರವನ್ನಾಗಲಿ ಪ್ರವೇಶಿಸಲು ಅವರಿಗೆ ಯಾವುದೇ ಅಡ್ಡಿ ಇರಬಾರದು, ಅವರಿಗಿಂದು ಸ್ವಾತಂತ್ರ್ಯದ ಅವಶ್ಯಕತೆ ಇದೆ ಎಂಬುದು ಈ ಲೇಖನದ ಸಾರಾಂಶ. ಇದನ್ನು ಟೀಕಿಸಿ ಬರೆದ ಎರಡು ಸಂಪಾದಕೀಯಗಳು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟವಾಗಿವೆ.

'ಸ್ತ್ರೀಸ್ವಾತಂತ್ರ್ಯ ಲೇಖ' ಎಂಬ ಶೀರ್ಷಿಕೆಯ ಸಂಪಾದಕೀಯ ಲೇಖನದಲ್ಲಿ ಸಂಪಾದಕರು ಕನಕಲಕ್ಷ್ಮಮ್ಮನವರ ಲೇಖನವನ್ನು ಟೀಕಿಸುತ್ತ ಆಧುನಿಕತೆಯಿಂದ ಪೂರ್ವಸಂಸ್ಕೃತಿಗೆ ಧಕ್ಕೆ ಉಂಟಾಗುತ್ತದೆ ಎಂದು ಆತಂಕ ವ್ಯಕ್ತಪಡಿಸುತ್ತಾರೆ.

"ಪ್ರಕೃತ ಸಮಾಜದ ಪರಿಸ್ಥಿತಿಯಲ್ಲಿ ಸಾಮಾನ್ಯ ಬಾಲಕಿಯರಿಗೆ ಸಾಮಾನ್ಯ ವಿದ್ಯಾಭ್ಯಾಸವೇ ಸಾಕಾಗುತ್ತಿರುವಾಗ ಹೈಸ್ಕೂಲು ಕಾಲೇಜು ವಿದ್ಯಾಭ್ಯಾಸಗಳು ಹುಡುಗರಿಗೇನೇ ಹಾನಿಕಾರಕ ಎಂದು ತಿಳಿದೂ ಹುಡುಗಿಯರನ್ನು ಅಂತಹ ಪರಭಾಷಾ ಸಂಸ್ಕೃತಿಗೂ, ಪರಮತ ಸಂಸ್ಕೃತಿಗೂ ಅಧೀನ ಮಾಡಿ ದೇಶೀಯ ಸಂಸ್ಕೃತಿಯ ಅರಿವೇ ಅವರಲ್ಲಿ ಉಂಟಾಗದಂತೆ...ಅದಾವುದೋ ಅದೃಶ್ಯ ಶಕ್ತಿಯಿಂದ ಪ್ರತಿಯೊಬ್ಬರಲ್ಲಿಂದ ಮೆಲ್ಲನೆ ಪೂರ್ವಸಂಸ್ಕೃತಿಯ ಪೂರ್ಣ ನಾಶಕ್ಕಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ ಎಂದು ತಿಳಿದು ಬರುವುದು"[೨೬]

ನವಕರ್ನಾಟಕ: 'ಶಿವಾನುಭವ'ವನ್ನು ಹಳಕಟ್ಟಿಯವರು ಕನ್ನಡ ಸಾಹಿತ್ಯ-ಸಂಸ್ಕೃತಿಯ ಏಳಿಗೆಗೆ ಉಪಯೋಗಿಸಿಕೊಂಡರೆ, ೧೯೨೭ರ ಅಕ್ಟೋಬರ್ ೬ರಂದು ಪ್ರಾರಂಭಿಸಿದ 'ನವಕರ್ನಾಟಕ' ವಾರಪತ್ರಿಕೆಯನ್ನು ಕರ್ನಾಟಕದ ಏಕೀಕರಣಕ್ಕೆ, ರಾಜಕೀಯ ಸಂಘಟನೆಗೆ ಉಪಯೋಗಿಸಿಕೊಂಡರು. 'ನವಕರ್ನಾಟಕ'ದ ಪ್ರಥಮ ಸಂಚಿಕೆಯ ಸಂಪಾದಕೀಯದಲ್ಲಿ ಪತ್ರಿಕೆಯ ಉದ್ದೇಶವನ್ನು ಹೀಗೆ ವಿವರಿಸಿದ್ದಾರೆ:

> "ಇದರಲ್ಲಿ ರಾಜಕೀಯ, ಸಾಮಾಜಿಕ, ಔದ್ಯೋಗಿಕ, ಶೈಕ್ಷಣಿಕ ಮುಂತಾದ ವಿಷಯಗಳಲ್ಲಿ ಕರ್ನಾಟಕಸ್ಥರು ಹೇಗೆ ಮುಂದುವರೆಯಬೇಕು ಎಂಬುದರ ವಿವೇಚನೆಗಳೂ ಆ ಬಗ್ಗೆ ಪ್ರಯತ್ನಗಳೂ ಈ ಪತ್ರಿಕೆಯ ದ್ವಾರಾ ಮಾಡಲ್ಪಡುವವು. ಇದು ಸಮಾಜ, ಪಂಗಡ ಜಾತಿ ಈ ಬಗ್ಗೆ ಯಾವ ತರಹದ ಭೇದಭಾವವನ್ನೂ ಎಣಿಸದೆ ಯಾವುದು ಸತ್ಯವಾದದ್ದೊ, ನ್ಯಾಯವಾದದ್ದೋ ಅದನ್ನೆ ನಿಷ್ಪಕ್ಷಪಾತತೆಯಿಂದಲೂ ನಿರ್ಭಯದಿಂದಲೂ ಜರುಗಿಸಲಿಕ್ಕೆ ಸಿದ್ಧವಾಗಿರುವುದು. ಇದರಲ್ಲಿ ಕರ್ನಾಟಕ ಸಂಸ್ಕೃತಿಯ ಹೆಚ್ಚಳವು ಬಹು ವಿಶದವಾಗಿ ವಾಚಕರ ಮುಂದೆ ಇಡಲ್ಪಡುವುದು. ಸರ್ವವಿಧದಲ್ಲೂ ಕರ್ನಾಟಕವು ಮುಂದುವರಿದು 'ನವಕರ್ನಾಟಕ'ವನ್ನು ಸಿದ್ಧಗೊಳಿಸುವುದೇ ಈ ಪತ್ರಿಕೆಯ ಮುಖ್ಯ ಧ್ಯೇಯ"
>
> ಎಂದಿದ್ದಾರೆ.[೨೭]

ಅಲ್ಲದೇ ಇದೇ ಸಂಚಿಕೆಯ ಸಂಪಾದಕೀಯ ವಿಭಾಗದಲ್ಲಿ ಹಳಕಟ್ಟಿಯವರು-

"ಕರ್ನಾಟಕಸ್ಥರೆಂದರೆ ಕನ್ನಡ ನುಡಿಯುವವರು ಎಂದು ತಿಳಿಯುವುದು ತಪ್ಪಾದದ್ದು. ಈ ಶಬ್ದವು ಸಮಾಜ ವಾಚಕವಲ್ಲ, ಧರ್ಮವಾಚಕವಲ್ಲ. ಅದರಲ್ಲಿ ವಾಕ್ಯಕಾರ್ಥವಿದೆ. ಅದು ದೇಶವಾಚಕವು. ಈ ದೇಶದಲ್ಲಿರುವಂಥವರು ಅವರು ಯಾವ ಭಾಷೆ ಮಾತನಾಡುತ್ತಿದ್ದರೂ ಅವರು ಕರ್ನಾಟಕಸ್ಥರು. ಇದಲ್ಲದೆ ಏಕೀಕರಣದ ಪ್ರಶ್ನೆಯೂ ರಾಜಕೀಯ ಪ್ರಶ್ನೆಯಾಗಿದೆ. ಹಿಂದೂಸ್ಥಾನ ದೇಶವು ಅತ್ಯಂತ ವಿಸ್ತಾರವಾದದ್ದಿರುತ್ತದೆ. ಇಂತಹ ದೇಶವನ್ನು ಒಂದೆಡೆಗೆ ಕೇಂದ್ರೀಕರಿಸಿ ಆಳುವುದು ಅಸತ್ಯವೂ ಅಲ್ಲ. ಪ್ರಜೆಗಳಿಗೆ ಹಿತವೂ ಅಲ್ಲ. ಅದ್ದರಿಂದ ಇದರಲ್ಲಿ ತಕ್ಕ ಭೂಭಾಗಗಳನ್ನು ಮಾಡಿ ಯಾವ ಯಾವ ಸ್ಥಲಗಳಲ್ಲಿ ರಾಜ್ಯದ ಕ್ರಮಗಳು ಹ್ಯಾಗೆ ಹ್ಯಾಗೆ ಇದ್ದರೆ ಪ್ರಜೆಗಳಿಗೆ ಹಿತವಾದೀತು ಎಂಬುದನ್ನು ವಿಚಾರಿಸಿ ಹಾಗೆ ಪ್ರಾಂತಗಳನ್ನು ರಚಿಸುವುದು ಇರುತ್ತದೆ.., ವ್ಯಾಪಾರದ ಅನುಕೂಲಗಳು, ಪರಸ್ಪರ ಸಾನ್ನಿಧ್ಯ, ದೇಶ ಆಚಾರಗಳ ಅಭಿನ್ನತ್ವ ಇವುಗಳನ್ನೆಲ್ಲ ಕಂಡು ಹಿಡಿದು ವಿಷಮತೆಯು ಕಡಿಮೆಯಾಗಿ ಜನರು ಒಗ್ಗಟ್ಟಾಗಿ ನಡೆಯುವ ಸಾಧ್ಯತೆ ಎಲ್ಲಿ ಹೆಚ್ಚೋ ಆ ಭಾಗಗಳನ್ನು ಒಂದುಗೂಡಿಸಿ ಪ್ರಾಂತ ರಚನೆ ಮಾಡುವುದೇ ಈ ಪ್ರಾಂತ ವಿಭಾಗದ ತತ್ವವಾಗಿರುವುದು,.. ಇದರಿಂದಲೇ ಹಿಂದೂಸ್ಥಾನ ರಾಜ್ಯಕ್ಕೆ ಒಂದು ಕಟ್ಟು ಮತ್ತು ಬಲವು ಉಳಿಯುವುದೆಂದು ತಿಳಿದು ಈ ಪ್ರಯತ್ನಕ್ಕೆ ತೊಡಗುವುದು ಇರುತ್ತದೆ"[೨೭]

ಅಡಿಟಿಪ್ಪಣಿಗಳು

೧. ಡಾ. ಸರಜೂ ಕಾಟ್ಕರ್, ಪತ್ರಿಕೆ ಮತ್ತು ಸಾಹಿತ್ಯ, ಅನ್ವೇಷಣ ಪ್ರಕಾಶನ, ಬೆಂಗಳೂರು ಪುಟ,೧೬
೨. ವೆಂಕಟಾಚಲ ಶಾಸ್ತ್ರಿ ಟಿ.ವಿ., ಹೊಸಗನ್ನಡ ಸಾಹಿತ್ಯದ ಕೆಲವು ನೋಟಗಳು, ೧೯೮೨, ಪುಟ ೨೭
೩. ಡಾ. ಮಂಗಳಾ ಪ್ರಿಯದರ್ಶಿನಿ, ಕನ್ನಡ ಸಾಹಿತ್ಯ ಪತ್ರಿಕೆಗಳು ಇತಿಹಾಸ-ವರ್ತಮಾನ, ಸಾಹಿತ್ಯ ಅಕಾಡೆಮಿ, ೧೯೯೩, ಪುಟ ೭
೪. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಮೈಸೂರು ವಿಶ್ವವಿದ್ಯಾನಿಲಯ, ೧೯೭೪, ಪುಟ ೫೧೦
೫. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು ಪುಟ ೬೬
೬. ಟಿ.ಕೆ. ಇಂದಿರಾಬಾಯಿ, ಮಾಸ ಪತ್ರಿಕೆಗಳು, ಚಿತ್ರಗುಪ್ತ ಸ್ಮರಣೆ, ೧೯೯೫, ಪುಟ ೩೧೦
೭. ಬೆನಗಲ್ ರಾಮರಾಯ (ಸಂ), ಸುವಾಸಿನಿ, ಸಂಪಾದಕೀಯ, ಸಂಪುಟ ೧, ಸಂಚಿಕೆ ೧, ೧೯೦೦, ಪುಟ ೧
೮. ಅದೇ, ಪುಟ ೩೬
೯. ಹಾ.ತಿ. ಕೃಷ್ಣೇಗೌಡ, ಕೆರೋಡಿ ಸುಬ್ಬರಾಯರು ಜೀವನ ಮತ್ತು ಕೃತಿಗಳು, ಪೂರ್ವೋಕ್ತ, ಪುಟ ೧೭-೧೮
೧೦. ಕೆರೋಡಿ ಸುಬ್ಬರಾಯರು (ಸಂ), ಶ್ರೀಕೃಷ್ಣಸೂಕ್ತಿ, ಸಂಪುಟ ೧, ಸಂಚಿಕೆ ೩, ೧೯೦೬
೧೧. ಶ್ರೀಕೃಷ್ಣಸೂಕ್ತಿ, ಪೂರ್ವೋಕ್ತ ಸಂಪುಟ ೧, ಸಂಚಿಕೆ ೧೨, ಡಿಸೆಂಬರ್ ೧೯೦೬
೧೨. ಟಿ.ಕೆ. ಇಂದಿರಾಬಾಯಿ, ಮಾಸ ಪತ್ರಿಕೆಗಳು, ಚಿತ್ರಗುಪ್ತ ಸ್ಮರಣೆ, ೧೯೯೫, ಪುಟ ೩೦೨
೧೩. ಡಾ.ಜಿ.ಎಂ. ಹೆಗಡೆ, ಮಾಸ್ತಿಯವರ ವಿಮರ್ಶೆ: ಒಂದು ಅಧ್ಯಯನ, ೧೯೯೧, ಪುಟ ೨೪೩
೧೪. ಮಾಸ್ತಿ: ವಿಮರ್ಶೆ ೧, ಸತಿಹಿತೈಷಿಣಿ ಗ್ರಂಥಮಾಲೆ, ಪುಟ ೫೧
೧೫. ಅದೇ ಪುಟ ೫೪
೧೬. ಅದೇ ಪುಟ ೫೪
೧೭. ಅದೇ ಪುಟ ೬೬
೧೮. ಮಾಸ್ತಿ: ವಿಮರ್ಶೆ ೧, ೧೯೫೪, ಮುನ್ನುಡಿ
೧೯. ಅದೇ ಪುಟ ೭೪
೨೦. ಆನಂದವನ, ಸದ್ಬೋಧ ಚಂದ್ರಿಕೆ ವಜ್ರಮಹೋತ್ಸವ ಸ್ಮರಣ ಸಂಚಿಕೆ
೨೧. ನಾಡು ನುಡಿ ಪ್ರತಿನಿಧೀಕರಣ ಕಥನ, ಸಂ: ಡಾ.ಬಿ. ಶಿವರಾಮಶೆಟ್ಟಿ, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ಪುಟ ೧೫
೨೨. ಸ್ವದೇಶಾಭಿಮಾನಿ ಪತ್ರಿಕೆ, ಜನವರಿ ೧೬, ೧೯೨೦, ಸಂಚಿಕೆ ೩
೨೩. ಅದೇ, ಸಂಚಿಕೆ ೪
೨೪. ಅದೇ, ಸಂಚಿಕೆ ೫, ಜನವರಿ ೩೦
೨೫. ಅದೇ, ಸಂಚಿಕೆ ೫, ೨೩-೫-೧೯೩೦
೨೬. ಫ.ಗು. ಹಳಕಟ್ಟಿ, ನವಕರ್ನಾಟಕ, ಸಂಪುಟ ೧, ಸಂಚಿಕೆ ೧, ಅಕ್ಟೋಬರ್, ೧೯೨೭
೨೭. ಡಾ ಬಿ.ಎಂ. ಪಾಟೀಲ, ಫ.ಗು. ಹಳಕಟ್ಟಿ, ಪ್ರಜಾವಾಣಿ, ಭಾನುವಾರ, ಏಪ್ರಿಲ್ ೧, ೨೦೦೭, ಪುಟ ೩

೪.ಕನ್ನಡ ಸಾಹಿತ್ಯಿಕ ಪತ್ರಿಕೆಗಳಲ್ಲಿ ಕನ್ನಡ ನವೋದಯ ಕಾವ್ಯದ ಅವಲೋಕನ

ಕನ್ನಡ ಕಾವ್ಯ ಹಾಗು ಕಾವ್ಯವಿಮರ್ಶೆ ವಿಕಾಸಗೊಂಡದ್ದೇ ಆ ಹೊತ್ತಿನ ಸಾಹಿತ್ಯಿಕ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವಿಮರ್ಶೆಗಳ ಮೂಲಕ. ಈ ಹೊತ್ತು ಮಹತ್ವದ ಲೇಖಕರ ಕೃತಿಗಳನ್ನು ಎಷ್ಟು ಸಮಗ್ರವಾಗಿ ವಿಮರ್ಶೆಗೆ ಒಳಪಡಿಸುತ್ತಿದ್ದರೆಂಬುದನ್ನು ಅಂದಿನ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ವಿಮರ್ಶೆಗಳ ಮೂಲಕ ತಿಳಿಯಬಹುದು. ವಿಮರ್ಶೆ, ವಾಗ್ವಾದಗಳು ಪುಸ್ತಕಗಳಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಮುಖ್ಯವಾಗಿ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವಿಮರ್ಶೆ ಇನ್ನೂ ಬೆಳೆಯುವ ಹಂತದಲ್ಲಿತ್ತು. ಅದಕ್ಕೆ ಖಚಿತವಾದ ಸ್ವರೂಪವನ್ನು ನೀಡುವಲ್ಲಿ 'ಪ್ರಬುದ್ಧ ಕರ್ನಾಟಕ', 'ಜಯಕರ್ನಾಟಕ', 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', 'ಜಯಂತಿ', 'ಸುಬೋಧ', 'ಒಕ್ಕಲಿಗರ ಪತ್ರಿಕೆ', 'ಶಿವಾನುಭವ' ಹೀಗೆ ಅನೇಕ ಪತ್ರಿಕೆಗಳು ಕಾರಣವಾಗಿವೆ. ಬೇಂದ್ರೆಯವರು ತಮ್ಮ 'ಗರಿ' ಸಂಕಲನವನ್ನು ಪ್ರಕಟಿಸಿದ್ದು ೧೯೩೨ರಲ್ಲಿ. ಆ ಹೊತ್ತಿಗೆ ಅವರು ಕನ್ನಡದ ಮಹತ್ವದ ಕವಿಗಳಲ್ಲಿ ಒಬ್ಬರಾಗಿದ್ದರು. ಅವರ ಬಿಡಿ ಕವಿತೆಗಳು ಅಂದಿನ ಪತ್ರಿಕೆಗಳ ಮೂಲಕವೇ ಓದುಗರ, ಕಾವ್ಯಾಸಕ್ತರ ಗಮನ ಸೆಳೆದಿದ್ದವು. ಕುವೆಂಪು, ಪು.ತಿ.ನರಸಿಂಹಾಚಾರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಡಿ.ವಿ. ಗುಂಡಪ್ಪ ಹೀಗೆ ಲೇಖಕರು ಪತ್ರಿಕಾ ವ್ಯವಸಾಯದೊಂದಿಗೆ ಗಂಭೀರ ಸಂಬಂಧವನ್ನು ಇರಿಸಿಕೊಂಡಿರುವುದನ್ನು ಕಾಣುತ್ತೇವೆ. ಓದುಗರ ನಿರ್ಮಾಣ ಹಾಗು ಅಭಿರುಚಿಯ ನಿರ್ಮಿತಿ ಇವೆರಡೂ ಏಕಕಾಲಕ್ಕೆ ಸಾಧ್ಯವಾಗಿಸಿದ ಸಾಧನೆ ಇದು.

ನವೋದಯ ಎಂದರೆ ಹೊಸತು ಎಂದರ್ಥ. ಇಂಗ್ಲಿಷ್ ಕಲಿತ ಕನ್ನಡದ ಬರಹಗಾರರಿಗೆ ಇಂಗ್ಲಿಷ್ ಭಾಷಾ ಸಾಹಿತ್ಯದಂತೆಯೆ ನಮ್ಮಲ್ಲೂ ಹೊಸ ಸಾಹಿತ್ಯ ರಚನೆಯಾಗಬೇಕು ಎಂಬ ಬಯಕೆ ಇತ್ತು. ತಾವು ಅಭ್ಯಾಸ ಮಾಡಿದ ಇಂಗ್ಲಿಷ್ ಕೃತಿಗಳನ್ನು ನೇರವಾಗಿ ಅನುವಾದ ಮಾಡುವ ಇಲ್ಲವೇ ಅದರಿಂದ ಪ್ರೇರಿತರಾಗಿ ತಮ್ಮ ಸಂದರ್ಭಕ್ಕೆ ಅನುಗುಣವಾಗಿ ಹೊಸ ಕೃತಿಗಳ ರಚನೆ ಮಾಡುವ ಪ್ರಯತ್ನಗಳನ್ನು ಕಾಣಬಹುದು. ಇದರಿಂದಾಗಿ ಭಾಷೆ-ಸಾಹಿತ್ಯಗಳೆರಡೂ ಬೆಳೆದವು.[೧] ಇದನ್ನೇ ಜಿ.ಎಸ್.ಶಿವರುದ್ರಪ್ಪನವರು

> "ವಸಾಹತುಶಾಹಿ ಸಂದರ್ಭದಲ್ಲಿ ಪಶ್ಚಿಮದ ಪ್ರೇರಣೆ ಪ್ರಭಾವಗಳಿಂದ ಯಾವ ಒಂದು 'ಪುನರುಜ್ಜೀವನ' ಭಾರತೀಯ ಭಾಷಾ ಸಾಹಿತ್ಯಗಳಲ್ಲಿ ಸಂಭವಿಸಿತೋ ಯಾವುದು ಕನ್ನಡದಲ್ಲಿಯೂ ನವೋದಯ ಎನಿಸಿಕೊಂಡಿತೋ ಅದು ಬಹುಮಟ್ಟಿಗೆ ಪಶ್ಚಿಮದ ಅನುಸರಣೆಯಾಗಲಿ, ಅನುಕರಣವಾಗಲಿ ಆಗದೆ ಕನ್ನಡದ ಪ್ರಾದೇಶಿಕ

ಪ್ರತಿಭೆಗಳು ಪಶ್ಚಿಮದ ಪ್ರೇರಣೆ ಪ್ರಭಾವಗಳಿಗೆ ತೋರಿದ ಸೃಜನಾತ್ಮಕ ಪ್ರತಿಕ್ರಿಯೆಗಳ ಪರಿಣಾಮವಾಗಿದೆ ಎಂದಿದ್ದಾರೆ. ಹೀಗೆ ಸಾಹಿತ್ಯಮಾರ್ಗಗಳು ಅಂದಂದಿನ ಸಾಹಿತ್ಯಿಕ, ಚಾರಿತ್ರಿಕ, ಸಾಂಸ್ಕೃತಿಕ ಒತ್ತಡಗಳ ಪರಿಣಾಮದಿಂದಲೇ ರೂಪುಗೊಳ್ಳುತ್ತ ಅಂದಂದಿಗೆ ಅಪರಿಚಿತವಾದ ಅನೇಕ ಅನುಭವ ಪ್ರಪಂಚಗಳನ್ನು ಅನಾವರಣಗೊಳಿಸುತ್ತಾ ಬಂದಿವೆ. ಒಟ್ಟಾರೆಯಾಗಿ ಹೇಳುವುದಾದಲ್ಲಿ ನವೋದಯ ಕಾಲ ಸಮೃದ್ಧವಾದುದು. ಆ ಕಾಲದಲ್ಲಿಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ನಡೆಯಿತು. ಅನುವಾದ, ಸ್ವತಂತ್ರ ಕೃತಿಗಳ ರಚನೆಯ ಮೂಲಕ ನೂರಾರು ಜನ ಲೇಖಕರು ಸಾಹಿತ್ಯರಚನೆಯಲ್ಲಿ ತೊಡಗಿರುವುದನ್ನು ಈ ಕಾಲದಲ್ಲಿ ಕಾಣಬಹುದು. ಇದರಲ್ಲಿ ಬಿಎಂಶ್ರೀ, ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರಿ, ಮಾಸ್ತಿ, ಕುವೆಂಪು, ಬೇಂದ್ರೆ, ಪುತಿನ, ಕೆ.ಎಸ್.ನ., ಪ್ರಮುಖರು"[೨]

೧೯೦೦-೧೯೨೫ರ ಅವಧಿಯಲ್ಲಿ ಬಹುತೇಕ ಕವಿಗಳು ಕಾವ್ಯದ ವಸ್ತು ಹಾಗು ಅಭಿವ್ಯಕ್ತಿಯಲ್ಲಿ ಹೊಸತನ ಹುಡುಕುತ್ತಿದ್ದುದು ಕಂಡು ಬರುತ್ತದೆ. ಈ ಅವಧಿಯಲ್ಲಿನ ಕವಿಗಳು ಇಂಗ್ಲಿಷ್ ಕಾವ್ಯಗಳ ಅನುವಾದದ ಜೊತೆಗೆ ಸ್ವತಂತ್ರ ಕವನಗಳನ್ನು ರಚಿಸಿದರು. ಅಂತಹ ಕವಿಗಳ ಪ್ರಯೋಗಗಳಿಗಿಂತ ಬಿಎಂಶ್ರೀಯವರು ೧೯೨೧ರಲ್ಲಿ 'ಇಂಗ್ಲಿಷ್ ಗೀತಗಳು' ಪ್ರಕಟಿಸುವ ಮೂಲಕ ನವೋದಯ ಕಾವ್ಯಕ್ಕೆ ನಾಂದಿ ಹಾಡಿದರು. ಬಿಎಂಶ್ರೀ ರೀತಿಯಲ್ಲೇ ಬೇಂದ್ರೆಯವರು ಧಾರವಾಡದಲ್ಲಿ 'ಗೆಳೆಯರ ಗುಂಪಿ'ನ ಮೂಲಕ ನವೋದಯದ ವಿಕಾಸಕ್ಕೆ ಕಾರಣರಾದರು. ಮಂಗಳೂರಿನಲ್ಲಿ ಕೂಡ ಈ ಹೊಸ ಗಾಳಿ ಬೀಸಿರುವುದನ್ನು ಗೋವಿಂದ ಪೈ, ಕಡೆಂಗೋಡ್ಲು ಶಂಕರಭಟ್ಟ ಮೊದಲಾದವರ ಹೊಸ ಕಾವ್ಯ ರಚನೆಗಳಲ್ಲಿ ಕಾಣಬಹುದಾಗಿದೆ. ಹೀಗೆ ನವೋದಯದ ಪ್ರಗತಿ ಪೋಷಣೆಗಳಲ್ಲಿ ಪ್ರಬುದ್ಧ ಕರ್ನಾಟಕ, ಪರಿಷತ್ಪತ್ರಿಕೆ, ಜಯಂತಿ, ಜಯಕರ್ನಾಟಕದಂತಹ ಪತ್ರಿಕೆಗಳು ವಹಿಸಿದ ಪಾತ್ರ ತುಂಬ ಮುಖ್ಯವಾದುದು. ಧಾರವಾಡದ ಗೆಳೆಯರ ಗುಂಪು, ಜಯಕರ್ನಾಟಕ ಹೇಗೋ ಹಾಗೆ ಬೆಂಗಳೂರಿನಲ್ಲಿ ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘ ಹಾಗು ಪ್ರಬುದ್ಧ ಕರ್ನಾಟಕ ಇವುಗಳು ಮೂರ್ತಶಿಲ್ಪ ಶಾಲೆಗಳಾದವು. ಆಗ ಕನ್ನಡದ ಬರಹಗಾರರೆಂದು ಕರೆಸಿಕೊಂಡವರೆಲ್ಲ ಮೇಲಿನೆರಡು ಪತ್ರಿಕೆಗಳ ಆಶ್ರಯ ಪಡೆದೇ ಇರುವರೆಂದರೆ ಮೇಲಿನ ಮಾತಿನ ಸತ್ಯದ ಅರಿವಾಗುತ್ತದೆ[೩]

ಹಳೆಯದನ್ನು ಮರೆಯದೆ ಹೊಸತನ್ನು ಕಾಣುವ, ಎರಡನ್ನೂ ಸಾಧ್ಯವಾದರೆ ಸಮೀಕರಿಸುವ ಶ್ರೀಯವರ ದೂರದೃಷ್ಟಿಯಿಂದ ಕನ್ನಡ ಸಾಹಿತ್ಯವು ಸಂಸ್ಕೃತದ ಸಂಕೋಲೆಯನ್ನು ಮುರಿದು ಇಂಗ್ಲಿಷ್‌ಗೆ ಸಂಪೂರ್ಣ ದಾಸರಾಗದೆ ತನ್ನ ಸ್ವಂತಿಕೆ ರೂಪಿಸಿಕೊಳ್ಳಲು ಶಕ್ತವಾಯಿತು. ಕನ್ನಡ ಭಾಷೆಯ ಸತ್ವವನ್ನು ಜಾನಪದದಲ್ಲಿ ಗುರುತಿಸಿ ಅದರಿಂದ ಸತ್ವವನ್ನು ಸ್ವೀಕರಿಸಬೇಕು ಎಂದು ಅವರು ತೋರಿದರು

> "ಕನ್ನಡ ಬದುಕಿದೆ, ಬೆಳೆಯುತ್ತಿದೆ. ಅದು ಇಂದಿನ ಅವಶ್ಯಕತೆಗಳಿಗೆಲ್ಲ ಒದಗಿ ಕನ್ನಡಿಗರ ಜೀವಾಳವಾಗಬೇಕು. ಅವರ ಆತ್ಮವಿಕಾಸಕ್ಕೆ ಆಧಾರವಾಗಬೇಕು, ಕ್ರಾಂತಿಯಾಗಬೇಕು. ಹಳೆಯ ನುಡಿ ಹೊಸತಾಗಬೇಕು, ಗ್ರಾಮ್ಯವಾಗಿಯೇ ನಿಲ್ಲದೆ ವ್ಯಾಕರಣ ನಿಯಮಕ್ಕೆ ಒಳಪಟ್ಟು ಸಾಹಿತ್ಯ ಸಂಸ್ಕೃತಿಗಳ ಮಟ್ಟಕ್ಕೇರಿ ಸಾವಿರಾರು ವರ್ಷಗಳಿಂದ ಬೆಳೆದು ಬಂದು ಇನ್ನು ಬೆಳೆಯುವ ಸಾಧ್ಯತೆ ಹೊಂದಿರುವುದೆಲ್ಲ 'ಸಂಸ್ಕೃತ'ಗಳೇ. ಅವು ಜನತೆಗಾಗಿ ಹೆಚ್ಚಿ (ಪಂಡಿತರಿಗೆ ಅಲ್ಲ) ಬ್ರಹ್ಮಾನುಭವಕ್ಕೆ

ಒದಗಬೇಕು ಎಂಬುದೇ ನನ್ನ ಬಯಕೆ. ಕನ್ನಡ ಹೀಗೆ ಏಳಿಗೆ ಹೊಂದಬೇಕು ಎಂಬುದೇ ನನ್ನ ದೀಕ್ಷೆ"

ಹೀಗೆ ಜೀವನ ಮಂತ್ರವನ್ನು ಸಾರಿದ ಶ್ರೀಯವರಿಂದ ಕನ್ನಡ ನವೋದಯ ಬೆಳೆಯಿತು. ಶ್ರೀಯವರ ಮಾತುಗಳಲ್ಲಿ ಕನ್ನಡ ಹೇಗೆ ಬದಲಾವಣೆ ಹೊಂದಬೇಕು ಎಂಬ ಸೂಚನೆಗಳಿವೆ

"ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣ ಗ್ರಂಥದಿಂದ ಸ್ವಲ್ಪಮಟ್ಟಿಗೆ ತಿಳಿಯಬಹುದಾಗಿದೆ. 'ಭಾಷಾಂತರಕಾರರು ಕೊಲೆಗಾರರು' ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆಯುಂಟು. ನಾನು ಆ ಅಪವಾದದಿಂದ ತಪ್ಪಿಸಿಕೊಂಡಿರುವೆನೆಂದು ತಿಳಿದಿಲ್ಲ. ಆದರೆ ನನ್ನ ಬುದ್ಧಿಗೆ ಬಂದಿರುವ ಮಟ್ಟಿಗೂ ಮೂಲವನ್ನು ಪ್ರತಿಬಿಂಬಿಸುವ ಕರ್ತವ್ಯವನ್ನೇ ಮುಂದಿಟ್ಟುಕೊಂಡು ಕೆಲಸ ಮಾಡಿದ್ದೇನೆ. ಕೆಲವು ಕಡೆ ಹೆಸರು ಭಾವ ಮುಂತಾದುವನ್ನು ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿದ್ದರೂ ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ – ಇವೆಲ್ಲವೂ ಮೂಲ ಕವಿಯ ವ್ಯಕ್ತಿತ್ವವನ್ನು ಅನುಸರಿಸಿವೆ. ಕನ್ನಡದ ಜಾಯಮಾನವನ್ನು ಮೀರದೆ ಎಷ್ಟರ ಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸನ್ನು ಹೋಲಬಹುದೋ ಅಷ್ಟು ಮಟ್ಟಿಗೆ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಿಸಿರುತ್ತೇನೆ. ಇಂಗ್ಲಿಷ್ ಬಲ್ಲವರು ಇದನ್ನು ತಿಳಿಯುವರು. ಅಚ್ಚ ಕನ್ನಡಿಗರು ಈ ಭಾಗದಲ್ಲಿ ಅಸಮಾಧಾನ ಪಡಬಾರದೆಂದು ನನ್ನ ಪ್ರಾರ್ಥನೆ. ಮುಖ್ಯ

ಹೇಳಿದ್ದೇ ಹೇಳುವರು, ಕೇಳಿದ್ದೇ ಕೇಳುವರು
ಕೇಳಿದ್ದೇ ಕೇಳಿ ಸುಖಿಸುವರು – ಗುರುಗಳ
ಹೇಳಿಕೆಯೆ ಬೇರೆ ಸರ್ವಜ್ಞ

ಎಂಬ ವಚನದಂತೆ ಸಂಪ್ರದಾಯ ಮಾರ್ಗವನ್ನೇ ಛಲ ಹಿಡಿಯದೆ ವಿಶ್ವ ಕವಿತಾ ವಿಷಯಗಳಾದ ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿಸೌಂದರ್ಯ, ಮಾನವ ಜನ್ಮದ ಸುಖದುಃಖ, ರಾಗದ್ವೇಷ, ಪುರುಷಾರ್ಥಗಳು, ಜನ್ಮಾಂತರ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಭಾಷೆಯಲ್ಲಿ ಸೌಂದರ್ಯ ರಚನೆ ಮಾಡಿರುವರೋ ಅದನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ ಧೈರ್ಯವನ್ನು ಶಿಕ್ಷಣಬದ್ಧ ಸ್ವಾತಂತ್ರ್ಯವನ್ನು ವಹಿಸಿ ಕನ್ನಡ ಕವಿಗಳು ಹಿಂದಿಗಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆ"

ಎಂದಿದ್ದಾರೆ.

ಇನ್ನು ಕಾವ್ಯದ ವಿಷಯಕ್ಕೆ ಬರುವುದಾದರೆ, ಆಧುನಿಕ ಯುಗದಲ್ಲಿ ಕಾವ್ಯ ತನ್ನ ಸ್ವರೂಪ, ವಸ್ತುವಿಷಯ, ಆಕೃತಿ, ಆಶಯಗಳಲ್ಲಿ ಹಲವು ಮಾರ್ಪಾಟುಗಳನ್ನು ಮಾಡಿಕೊಂಡಿತು. ಅಂದಿನ ಕನ್ನಡ ಕಾವ್ಯ ಇಟ್ಟ ಒಂದು ಮುಖ್ಯ ಹೆಜ್ಜೆ ಪ್ರಾಸವನ್ನು ಬಿಟ್ಟದ್ದು. ಕನ್ನಡದಲ್ಲಿ ಕವಿರಾಜಮಾರ್ಗದ ಕಾಲದಿಂದಲೂ ಆದಿಪ್ರಾಸ ಬಳಕೆಯಲ್ಲಿದೆ. ಅನೇಕ ಕವಿಗಳು ಇಂಗ್ಲಿಷಿನಿಂದ ಕವನವನ್ನು ಅನುವಾದ ಮಾಡಿದಾಗಲೂ ಇಂಗ್ಲಿಷಿನ ಅಂತ್ಯಪ್ರಾಸವನ್ನು ಬಿಟ್ಟು ಆದಿಪ್ರಾಸವನ್ನೇ ಉಳಿಸಿಕೊಂಡರು, ಷಟ್ಪದಿ, ಕಂದ, ವೃತ್ತಗಳನ್ನೇ ಬಳಸಿಕೊಂಡು ಅನುವಾದ ಮಾಡಿದರು. ಪ್ರಾಸವನ್ನೇ ಕೈಬಿಡುವಂತಹ ಧೈರ್ಯವನ್ನಂತೂ ಯಾರೂ

ಮಾಡಿರಲಿಲ್ಲ. ಅಂತಹದೊಂದು 'ದಿಟ್ಟ' ಪ್ರಯೋಗವನ್ನು ಮೊದಲ ಬಾರಿಗೆ ಮಾಡಿದವರು ಗೋವಿಂದ ಪೈಗಳು, ೧೯೦೦ರಲ್ಲಿ. 'ಕಂನಡ ಸಾಹಿತ್ಯಜ್ಞರ ಆತ್ಮಕಥನ'ದಲ್ಲಿ ಹೀಗೆ ಬರೆದಿದ್ದಾರೆ

> "ಪ್ರಾಸವನ್ನು ಬಿಟ್ಟು ಬರೆಯಬೇಕೆಂದು ನನಗೆ ಪದೇ ಪದೆ ಸ್ಫುರಿಸುತ್ತಿತ್ತು. ಆದರೆ ಚೇಳಿನ ಮಂತ್ರ ಬಾರದೆ ಹಾವಿನ ಗುದ್ದಿನಲ್ಲಿ ಕೈಹಾಕಲಾರದೆ ಈ ಬಗ್ಗೆ ಬಲ್ಲವರು ಬೆನ್ನು ತಟ್ಟಿದಲ್ಲದೆ ಹಾಗೆ ಬರೆಯಲಿಕ್ಕೆ ಮನಸ್ಸು ಅಳುಕುತ್ತಿತ್ತು. ಈ ಕಾರಣ ಒಮ್ಮೆ ಪಂಜೆಯವರನ್ನು ಕೇಳಿದೆ 'ಪ್ರಾಸವನು ಬಿಟ್ಟರೆ ಹೇಗೆ' ಎಂದು ಅವರು ಅಡ್ಡನಗೆಯಲ್ಲಿ ಏನೋ ಕೊಕ್ಕೆ ಮಾತನಾಡಿ ನನ್ನ ಪ್ರಶ್ನೆಯನ್ನು ತೇಲಿಸಿಬಿಟ್ಟರು. ೧೯೧೧ನೆಯ ಏಪ್ರಿಲ್ ತಿಂಗಳಿನಲ್ಲಿ ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪಥ ಗೈಯುತ್ತಿದ್ದಾಗ ಹಠಾತ್ತಾಗಿ 'ಆಗೋದು ಹೋಗೋದು ದೇವರಿಚ್ಛೆ, ಉತ್ತೋದು ಬಿತ್ತೋದು ನನ್ನಿಚ್ಛೆ. ಇನ್ನು ಮೀನ ಮೇಷ ನೋಡದೆ ಪ್ರಾಸವನ್ನೀಗಲೆ ತೊರೆದುಬಿಡುವುದು ನಿಶ್ಚಯ ಎಂದಾಯಿತು". ಪ್ರಾಸವಿಲ್ಲದ 'ಹೊಲೆಯನು ಯಾರು' ಎಂಬ ಕವನ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟವಾಯಿತು. ಪ್ರಾಸ ಬಿಟ್ಟು ಬರೆದಿದ್ದು ಆ ಕಾಲಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಕ್ರಾಂತಿಯೆ ಆಯಿತು. ಅನೇಕರು ಗೋವಿಂದ ಪೈಗಳ ಪ್ರಯೋಗವನ್ನು ಖಂಡಿಸಿದರು. ಪೈಗಳು 'ಇಂದು ಒಬ್ಬನೇ ನಡೆದ ಮೇಕೆ ದಾರಿಯೇ ಮುಂದೆ ತೇರೆಳೆವ ಹೆದ್ದಾರಿ' ಎಂದು ಉತ್ತರಿಸಿದರು ಅಥವ ಭವಿಷ್ಯವನ್ನು ನುಡಿದರು.[೪]

ಕನ್ನಡ ಸಾಹಿತ್ಯದ ನವೋದಯಕ್ಕೆ ಕಾರಣರಾದ ಕವಿಗಳಲ್ಲಿ ಕಾಲದ ದೃಷ್ಟಿಯಿಂದ ಗೋವಿಂದ ಪೈ ಮೊದಲಿಗರಲ್ಲಿ ಒಬ್ಬರು. ಹನ್ನೆರಡನೆಯ ವಯಸ್ಸಿನಲ್ಲೆ ಒಂದು ನಾಟಕವನ್ನು ಒಂದೇ ದಿನದಲ್ಲಿ ಬರೆದು ರೂಪಿಸಿದ ಹಿರಿಮೆ ಅವರದು. ಈ ಸನ್ನಿವೇಶವನ್ನು ಕುರಿತು ಅವರೇ ಹೇಳಿರುವ ಮಾತುಗಳು ಹೀಗಿವೆ "ಹೀಗೆ ಸಾಹಿತ್ಯ ಮಂದಿರಗ ಹೊಸ್ತಿಲಲ್ಲಿ ಅಕಾರಣವಾಗಿ ಎಡವಿದೆ. ಮುಚ್ಚು ಕದಕ್ಕೆ ಡಿಕ್ಕಿ ಹೊಡೆದೆ, ಅಗಳಿ ಇಲ್ಲದ ಬಾಗಿಲು ಹಾರಿತು. ನನ್ನ ಜೀವಮಾನದಲ್ಲಿ ಅದೊಂದು ಅಮಗ". ಅಮಗ ಎಂದರೆ ಹಬ್ಬ ಎಂದರ್ಥ. ಇದು ಅವರಿಗೆ ಮಾತ್ರ ಹಬ್ಬವಾಗದೆ ಕನ್ನಡ ನಾಡಿಗೇ ಹಬ್ಬವಾಯಿತು. ಗೋವಿಂದ ಪೈಗಳ ಸಾಧನೆಗೆ ಎಣೆಯೇ ಇಲ್ಲವೆನ್ನಬಹುದು. ಹಳಗನ್ನಡ ಗ್ರಂಥಗಳು, ವ್ಯಾಕರಣ ಸೂತ್ರಗಳು, ಛಂದೋಲಕ್ಷಣಗಳು ಮೊದಲಾದವುಗಳನ್ನು ಅಭ್ಯಾಸ ಮಾಡಿ ಹದಿನಾರು ವರ್ಷಗಳ ಕಾಲ ವೃತ್ತ ಕಂದಗಳಲ್ಲೂ ವಿವಿಧ ಛಂದಸ್ಸುಗಳಲ್ಲೂ ಅನೇಕ ಪದ್ಯಗಳನ್ನು ಬರೆದಿದ್ದಾರೆ. ಸಾಹಿತ್ಯ ಕ್ಷೇತ್ರಕ್ಕೆ ತೊಡಗಿದ ಪ್ರಾರಂಭದಲ್ಲೇ ಅಂದರೆ ೧೯೦೦ರಲ್ಲೆ ಮಂಗಳೂರಿನ 'ಸುವಾಸಿನಿ' ಪತ್ರಿಕೆಗೆ ಮೂರು ಕಂದಪದ್ಯಗಳನ್ನು ಬರೆದು ಐದು ರೂಪಾಯಿ ಬಹುಮಾನವನ್ನು ಪಡೆದಿದ್ದರು.

ಕನ್ನಡಕ್ಕೆ ದ್ವಿತೀಯಾಕ್ಷರ ಪ್ರಾಸ ಪರಂಪರಾಗತವಾಗಿ ಬಂದದ್ದು. ಆ ಕಾಲಕ್ಕೆ ಪ್ರಾಸವಿಲ್ಲದ ಪದ್ಯ ಪದ್ಯವೇ ಅಲ್ಲ ಎಂಬ ಭಾವನೆ ಇತ್ತು. ಉದಾಹರಣೆಗೆ 'ಹಿತಬೋಧಿನಿ' ಪತ್ರಿಕೆ ಸೆಪ್ಟೆಂಬರ್ ೧೮೮೬ರ ಒಂದು ಸಂಚಿಕೆಯಲ್ಲಿ "ಯೋಗ್ಯತೆ ಇಲ್ಲದೆ ಬರೀ ಚಾಪಲ್ಯದಿಂದ ಛಂದಸ್ಸಿಗೆ ಸರಿಯಾಗಿ ಅಕ್ಷರಗಳನ್ನು ರೂಪಿಸುವುದನ್ನು ಕಲಿತು ಶಬ್ದದೋಷ, ಅರ್ಥದೋಷ, ವಾಕ್ಯದೋಷಗಳಿಗೆ ಜನ್ಮಭೂಮಿ ಎನಿಸುವ ಶುಷ್ಕ ಕವಿತೆಯನ್ನು ಮಾಡಿ ವಿದ್ವಾಂಸರ ಹಾಸ್ಯಕ್ಕೆ ಪಾತ್ರರಾಗುವುದಕ್ಕಿಂತಲೂ ವಿಷಪಾನ ಮಾಡುವುದು

ಉತ್ತಮವು''[೫] ಎನ್ನುವಷ್ಟರ ಮಟ್ಟಿಗೆ ಪ್ರಾಸವಿರೋಧಿಗಳನ್ನು ವ್ಯಂಗ್ಯ ಮಾಡಿತ್ತು. ಗೋವಿಂದ ಪೈಗಳಾದರೂ ಆದಿಪ್ರಾಸವನ್ನು ಬಿಟ್ಟು ತಮ್ಮ 'ಹೊಲೆಯನು ಯಾರು?' ಎಂಬ ಕವಿತೆಯನ್ನು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟಿಸಿದಾಗ ಉಂಟಾದ ವಿರೋಧವನ್ನು ಅವರ ಆತ್ಮಕಥನ 'ಕಂನಾಡ ಸಾಹಿತ್ಯಜ್ಞರು'ದಲ್ಲಿ ಹೀಗೆ ವಿವರಿಸಿದ್ದಾರೆ "ಕನ್ನಡ ಕಾವ್ಯಮಾರ್ಗದಲ್ಲಿ ಹುಲಿ! ಹುಲಿ! ಎಂದು ನನ್ನ ಪ್ರಾಸತ್ಯಾಗವನ್ನು ಬಿರುಸಾಗಿ ಖಂಡಿಸಿ 'ಸ್ವದೇಶಾಭಿಮಾನಿ' ಆ ಪತ್ರಿಕೆಯಲ್ಲಿ ಪತ್ರ ವ್ಯವಹಾರದ ಹೂಲಿ ಎದ್ದಿತು. ಅದಕ್ಕೆ ಪ್ರತಿಯಾಗಿ ಕನ್ನಡಕ್ಕೆ ಪ್ರಾಸವೇನು ವೇದವಾಕ್ಯವೂ ಅಲ್ಲ, ಶಾಶ್ವತವೂ ಅಲ್ಲ ಇಂದು ಒಬ್ಬನೇ ನಡೆದ ಮೇಕೆ ದಾರಿಯೇ ಮುಂದೆ ತೇರೆಳೆವ ಹೆದ್ದಾರಿ ಎಂದು ಆ ಪತ್ರಿಕೆಯಲ್ಲಿ ಬರೆದೆ" ಎಂದಿದ್ದಾರೆ.[೬]

ಹೀಗೆ ಹೊಸಗನ್ನಡ ಸಾಹಿತ್ಯದ ಉದಯ ಕಾಲದಲ್ಲಿ ಸಂಪ್ರದಾಯವಾದಿಗಳಿಗೂ ಪ್ರಯೋಗಶೀಲರಿಗೂ ವಾಗ್ವಾದಗಳು ನಡೆದಿರುವುದು ಕಂಡುಬರುತ್ತದೆ. ಪ್ರತಿಯೊಂದು ಹೊಸ ಮಾರ್ಗ ಪ್ರಾರಂಭವಾಗುವ ಮುನ್ನ ಇಂಥದೊಂದು ವಾಗ್ವಾದ ನಡೆಯುವುದು ಸಹಜವೇ. ಈ ಬಗೆಯ ವಾಗ್ವಾದಗಳಿಗೆ ಎಲ್ಲ ಕಾಲಕ್ಕೂ ಅಂದಿನ ಪತ್ರಿಕೆಗಳೇ ವೇದಿಕೆಗಳಾಗಿದ್ದವು. ಹಾಗಿಲ್ಲದಿದ್ದಲ್ಲಿ ಈ ರೀತಿಯ ಸಾಹಿತ್ಯಿಕ ಬೆಳವಣಿಗೆಗಳನ್ನು ದಾಖಲಿಸಲು ಸಾಧ್ಯವೇ ಆಗುತ್ತಿರಲಿಲ್ಲ.

ಪೈಗಳು 'ಹೊಲೆಯ' ಎಂಬ ಪದಕ್ಕೆ ಹೊಲದಲ್ಲಿ ದುಡಿಯುವವನು ಎಂದು ಅರ್ಥೈಸಿದ್ದಾರೆ. ೧೯೧೧ರಷ್ಟು ಹಿಂದೆಯೇ ಅಸ್ಪೃಶ್ಯತಾ ನಿವಾರಣೆಗೆಂದು ಬಂಡಾಯ ಹೂಡಿದ್ದ ಪೈ ಅವರ 'ಹೊಲೆಯನಾರು' ಎಂಬ ಕವನದ ಈ ಸಾಲುಗಳನ್ನು ನೋಡೋಣ

ಶುದ್ಧ ತಾನೆಂದು ಪರರನು ಮುಟ್ಟದವ ಹೊಲೆಯ
ಹೊಲೆಯನೆಂದವರನ್ನು ಕರೆವವನೆ ಹೊಲೆಯ
ತಾನು ಮೇಲೆಂದುಬ್ಬಿ ಹೀನೈಸುವವ ಹೊಲೆಯ
ಕೀಳು ದೆಸೆಯವರನ್ನುದ್ಧರಿಸದವ ಹೊಲೆಯ

ಪೈ ಅವರ ಕಾವ್ಯದ ಭಾಷೆ ಸುಲಲಿತವಲ್ಲ ಎಂಬುದು ನಿಜವಾದರೂ ಕನ್ನಡ ಕಾವ್ಯಪರಂಪರೆಯನ್ನು ಆಳವಾಗಿ ಅಭ್ಯಾಸ ಮಾಡಿದ ಅವರು ಕನ್ನಡದಲ್ಲಿ ಹೊಸತನ್ನು ನಿರ್ಮಿಸುವಾಗ ಕನ್ನಡ ಇಂದಿನಂತೆ ಬೆಳೆದಿರಲಿಲ್ಲ. ಅವರೇ ಬೆಳೆಸಬೇಕಾಗಿತ್ತು. ಶಬ್ದರೂಪಗಳನ್ನು ಸೃಷ್ಟಿಸಬೇಕಾಗಿತ್ತು. 'ಇಸು' ಪ್ರತ್ಯಯವನ್ನು ಧಾರಾಳವಾಗಿ ಬಳಸುವ ಅವರ ಶಬ್ದಗಳು: ಸವ್ಯಸಾಚಿಸು, ಕಥಿಸು, ಕವನಿಸು, ಅರುಗಿಸು, ಪುನರುಕ್ತಿಸು, ಮುಂತಾದವುಗಳೇ ಸಾಕ್ಷಿ. ವಿಮರ್ಶಕನನ್ನು ಕುರಿತ ಅವರ ಮಾತೊಂದು ಸ್ವಾರಸ್ಯಕರವಾಗಿದೆ.

ಬಿತ್ತರಿಸದೆ ತಾಂ ಕಾವ್ಯವ
ಗೊತ್ತರಿಯಲಳನೆ ಕವಿಯೆದೆಯಂ? ಕವಿಯೆದೆಯಂ
ಗೊತ್ತಿರದ ವಿಮರ್ಶಕನೇಂ
ಹೆತ್ತರಿಯದ ಬಂಜೆ ಸೂಲಗಿತ್ತಿಯೇ ಜಗದಿ?

೧೮೭೦ ರಿಂದ ೧೯೨೦ರ ವರೆಗಿನ ಅವಧಿ ಸಾಹಿತ್ಯಸೃಷ್ಟಿಯಲ್ಲಿ ಪ್ರಯೋಗಗಳು ನಡೆದ ಕಾಲಘಟ್ಟವಾಗಿದೆ. ಇಂತಹ ಪ್ರಯೋಗಗಳಿಗೆ ಅಂದಿನ ಪತ್ರಿಕೆಗಳು ವೇದಿಕೆಯಾಗಿ ಕಾರ್ಯನಿರ್ವಹಿಸಿದವು. ಈ ಹಂತದಲ್ಲಿ ಹಟ್ಟಂಗಡಿ ನಾರಾಯಣರಾಯರು, ಪಂಜೆಯವರು ಮೊದಲಾದವರ ಕವನಗಳಲ್ಲಿ ಹೊಸ

ಹೊಸ ಭಾವನೆಗಳು ಸರಳಗನ್ನಡದಲ್ಲಿ ಅಭಿವ್ಯಕ್ತಿಗೊಂಡಿದ್ದವು. ಪಂಜೆ ಮಂಗೇಶರಾಯರು ಸರಳಗನ್ನಡದಲ್ಲಿ ಉನ್ನತ ದರ್ಜೆಯ ಕಾವ್ಯಗಳನ್ನೇ ರಚಿಸಿದ್ದರು. ಗೋವಿಂದ ಪೈಗಳು ಆದಿಪ್ರಾಸ ಬಿಟ್ಟು ಹೊಸ ಹಾದಿ ತುಳಿದಿದ್ದರು. ಅನುವಾದಿತ ಪದ್ಯಗಳಲ್ಲಿ ಇಂಗ್ಲಿಷ್ ಪ್ರಭಾವ ಕಾಣಬಹುದು. ಭಾಷಾಂತರಗಳು, ರೂಪಾಂತರಗಳು ಸಾಹಿತ್ಯವನ್ನು ಜನಸಾಮಾನ್ಯರ ಹತ್ತಿರ ತೆಗೆದುಕೊಂಡು ಹೋದವು. ಈ ಎಲ್ಲ ಕಾರಣಗಳಿಂದ ಸಾಹಿತ್ಯ ಪಾರಮಾರ್ಥಿಕ ವಿಷಯಗಳಿಂದ ದೂರಸರಿದು ರಾಷ್ಟ್ರಿಯ, ಸಾಮಾಜಿಕ ಚಾರಿತ್ರಿಕ ವಿಷಯಗಳತ್ತ ಮುಖ ಮಾಡಿತು. ಭಾರತದ ರಾಜಕೀಯ ಇತಿಹಾಸದಲ್ಲಿ ಗಾಂಧೀಯುಗ ಎಂದೇ ಕರೆಯಲ್ಪಡುವ ಈ ಅವಧಿಯ ಕನ್ನಡ ಸಾಹಿತ್ಯವನ್ನು 'ನವೋದಯ ಯುಗ' ಎಂದೇ ಕರೆಯಲಾಗುತ್ತದೆ. ಇದು ಕನ್ನಡ ಸಾಹಿತ್ಯ ಹೊಸ ಹುಟ್ಟು ಪಡೆದುಕೊಂಡುದರ, ಹೊಸ ಆರಂಭಕ್ಕೆ ಮುನ್ನುಡಿ ಇಟ್ಟ ಕಾಲ ಸೂಚಕವಾಗಿದೆ.[೭]

ಅದು ಸಂಪ್ರದಾಯ-ಆಧುನಿಕತೆ, ಪೂರ್ವ-ಪಶ್ಚಿಮ, ವ್ಯಕ್ತಿ-ಸಮಾಜ, ಮಾರ್ಗ-ದೇಸೀ ಹೀಗೆ ಹತ್ತು ಹಲವು ಸಂಗತಿಗಳು ಮುಖಾಮುಖಿ ಆಗಿದ್ದಂತಹ ಕಾಲ. ದ್ವಿತೀಯಾಕ್ಷರ ಪ್ರಾಸ ಕುರಿತಂತೆ ಗೋವಿಂದ ಪೈ ಹಾಗು ಇತರರ ನಡುವೆ ನಡೆದ ವಾಗ್ವಾದ, ರುದ್ರನಾಟಕ ಕುರಿತು ಬಿಎಂಶ್ರೀ ಹಾಗು ಬೇಂದ್ರೆ ನಡುವಿನ ಸಂವಾದ, ಶೂದ್ರ ತಪಸ್ವಿ ಕುರಿತು ಕುವೆಂಪು-ಮಾಸ್ತಿ ನಡುವಣ ವಾಗ್ವಾದ, ನಲವತ್ತರ ದಶಕದ ನವೋದಯ ಪ್ರಗತಿಶೀಲರ ವಾಗ್ವಾದ ಹಾಗು ಐವತ್ತರ ದಶಕದಲ್ಲಿ ನಡೆದ ನವೋದಯ-ನವ್ಯರ ಸಾಹಿತ್ಯಿಕ ವಾಗ್ವಾದಗಳು - ಇವೆಲ್ಲ ಅಂದು ಕನ್ನಡ ಸೃಜನಶೀಲತೆ ಎದುರಿಸಿದ ಸವಾಲುಗಳ ಸೂಚಕಗಳು.[೮]

ಈ ಹಿನ್ನೆಲೆಯಲ್ಲಿ ೧೯೨೦ರಿಂದ ೧೯೪೦ರವರೆಗಿನ ಪತ್ರಿಕೆಗಳನ್ನು ಅದರಲ್ಲೂ ವಿಶೇಷವಾಗಿ ಸಾಹಿತ್ಯಿಕ ಪತ್ರಿಕೆಗಳನ್ನು ಅಭ್ಯಾಸ ಮಾಡಬಹುದು. ಅವುಗಳಲ್ಲಿ ಪ್ರಬುದ್ಧ ಕರ್ನಾಟಕ, ಸಾಹಿತ್ಯ ಪರಿಷತ್ಪತ್ರಿಕೆ, ಜಯಕರ್ನಾಟಕ ಪತ್ರಿಕೆಗಳು ಮುಖ್ಯವಾದವುಗಳು. ೧೯೨೦ರ ನಂತರ ಕನ್ನಡ ಸಾಹಿತ್ಯ ಒಂದು ನಿಶ್ಚಿತ ಹೊರಳನ್ನು ಪಡೆದುದನ್ನು ಕಾಣಬಹುದು. ಹಾಗಾಗಿ ಈ ಕಾಲಘಟ್ಟವನ್ನು ಕನ್ನಡ ನವೋದಯದ ವಿಭಿನ್ನ ಪ್ರಯೋಗ ಹಾಗು ಪರಿಣತಿಯ ಕಾಲವಾಗಿದೆ.

೧೯೨೪ರಲ್ಲಿ 'ಪ್ರಬುದ್ಧ ಕರ್ನಾಟಕ' ಮುದ್ದಣನ ವಿಶೇಷ ಸಂಚಿಕೆಯನ್ನು ಪ್ರಕಟಿಸಿತು. ಅದರಲ್ಲಿ ಆ ಕಾಲದ ಹಲವು ವಿಮರ್ಶಕರು ಲೇಖನಗಳನ್ನು ಬರೆದಿದ್ದರು. ಪ್ರಾರಂಭಿಕ ಮುನ್ನುಡಿಯಲ್ಲಿ ಡಿವಿಜಿ ರಾಮಾಶ್ವಮೇಧವನ್ನು ಕುರಿತಂತೆ "ಅವನು ಹುಟ್ಟುಕವಿ, ಆತ ನೂತನ ಮಾರ್ಗ ಹುಡುಕಲಾರಂಭಿಸಿದ. ಅದು ಹಳೆಯ ವಸ್ತು ಆದರೆ ರೀತಿ ನವೀನ. ಅದು ಗದ್ಯ ಪ್ರಬಂಧ, ಸಂಭಾಷಣೆಯ ರೂಪದಲ್ಲಿದೆ. ಈ ಸಂಭಾಷಣೆಯ ರೀತಿಯನ್ನು ಆಧುನಿಕ ಕಾದಂಬರಿಗಳಲ್ಲಿ ಕಾಣಬಹುದು" ಎಂದಿದ್ದಾರೆ. ಈ ಸಂಪುಟದ ಮೊದಲ ಭಾಗದಲ್ಲಿ ಮುದ್ದಣನ ಜೀವನವನ್ನು ಕುರಿತಂತೆ ಲೇಖನಗಳನ್ನು ಆರ್. ನರಸಿಂಹಾಚಾರ್ಯರು, ಪಂಜೆಯವರು, ಹುರುಳಿ ಭೀಮರಾಯರು ಬರೆದಿದ್ದಾರೆ. ಎರಡನೆಯ ಭಾಗದಲ್ಲಿ ಗ್ರಂಥವಿಮರ್ಶೆ ಇದ್ದು ಮಹದೇವ ಪ್ರಭಾಕರ ಪೂಜಾರ, ಮಾಸ್ತಿ ಮೊದಲಾದವರ ಲೇಖನಗಳಿವೆ. ಮಾಸ್ತಿ "ಕಾವ್ಯದೃಷ್ಟಿಯಿಂದ ನೋಡಿದಲ್ಲಿ ರಾಮಾಶ್ವಮೇಧ ಹಾಗು ಶ್ರೀರಾಮಪಟ್ಟಾಭಿಷೇಕ ಕೃತಿಗಳು ಸಂಸ್ಕೃತದ ರಾಮಾಶ್ವಮೇಧವನ್ನು ಮೀರಿವೆ" ಎಂದಿದ್ದಾರೆ. ಈ ವಿಮರ್ಶೆಯಾದ ಸರಿ ಸುಮಾರು ಏಳು ವರ್ಷಗಳ ನಂತರ ಎಸ್.ವಿ. ರಂಗಣ್ಣನವರು 'ಪ್ರಬುದ್ಧ ಕರ್ನಾಟಕ'ದಲ್ಲಿ ಬರೆದ 'ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ವಿಮರ್ಶಾ ಲೇಖನದಲ್ಲಿ ಮುದ್ದಣನ ರಾಮಾಶ್ವಮೇಧವನ್ನು ಚರ್ಚಿಸಿದ್ದಾರೆ. ಆದರೆ

ರಂಗಣ್ಣನವರು ಸಂಭಾಷಣೆ, ರಸಿಕತನ, ತಿಳಿಹಾಸ್ಯ ಇವುಗಳನ್ನು ಮಾತ್ರ ಮೆಚ್ಚಿಕೊಂಡಿದ್ದು ಚಿತ್ರ-ಚೌಕಟ್ಟುಗಳ ಸಂಬಂಧಕ್ಕೆ ಹೆಚ್ಚು ಗಮನ ನೀಡದಿರುವುದು ಕಂಡು ಬರುತ್ತದೆ

ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಗಳ ತಲಸ್ಪರ್ಶಿ ಜ್ಞಾನವಿದ್ದ ತೀನಂಶ್ರೀ ಅವರ ಅವಲೋಕನಗಳ ಬಗೆಯೇ ಬೇರೆ. ಬರವಣಿಗೆಯಲ್ಲಿ ವಸ್ತು ವಿಷಯಗಳಷ್ಟೇ ರೂಪ ರಚನೆ ಕಲಾತ್ಮಕತೆ ಸೌಂದರ್ಯಗಳ ಕಡೆಗೂ ಅವರು ಮಹತ್ವ ನೀಡುತ್ತಿದ್ದರು. ಇವರ ಭಾರತೀಯ ಕಾವ್ಯಮೀಮಾಂಸೆ ಭಾರತದ ಕಾವ್ಯತತ್ವದ ಬೆಳವಣಿಗೆಯನ್ನು ಐತಿಹಾಸಿಕವಾಗಿ ಅವಲೋಕಿಸುವ ಪುಸ್ತಕವಾಗಿದೆ. ತೀನಂಶ್ರೀ ಅವರ ಈ ಪುಸ್ತಕ ಸಂಸ್ಕೃತದ ಕಾವ್ಯಲಕ್ಷಣ ಗ್ರಂಥಗಳನ್ನು ಅವಲಂಬಿಸಿದುದಾಗಿದೆ. ತೀನಂಶ್ರೀ ಅವರ ಅಗಾಧವಾದ ವಿದ್ವತ್ತು, ಸೂಕ್ಷ್ಮ ಸಂವೇದನಾ ಶೀಲವಾದ ಕವಿಹೃದಯ, ಸತ್ಯ ಪಕ್ಷಪಾತಿಯಾದ ವಿಮರ್ಶನ ದೃಷ್ಟಿ, ಅಕೃತವಾದ ನಿರೂಪಣಾ ಸಾಹಿತ್ಯ ಇವುಗಳಿಗೆ ಈ ಗ್ರಂಥ ಸಾಕ್ಷಿಯಾಗಿದೆ.[೧೦] ಬೇಂದ್ರೆಯವರ 'ಗರಿ' ಸಂಕಲನ ಕುರಿತ ಇಪ್ಪತ್ತೊಂದು ಪುಟಗಳ ವಿಮರ್ಶೆಯಲ್ಲಿ "ಅಂಬಿಕಾತನಯದತ್ತರ ಪ್ರಣಯ ಗೀತಗಳಲ್ಲಿ ಜೀವನದ ಉಲ್ಲಾಸವೂ ಇದೆ, ಜೀವನದ ಯಾತನೆಯೂ ಇದೆ. ಈ ಯಾತನೆಯ ಅನುಭವವು ಪ್ರೇಮಕ್ಕೆ ಒಂದು ಹೊಸ ಅರ್ಥವನ್ನು ಕೊಟ್ಟಿದೆ. ಈ ಪ್ರೇಮವು ಮುಗಿಲಿನ ಬಣ್ಣಗಳಲ್ಲಿ ಕಟ್ಟತಕ್ಕ ಗಾಳಿಗೋಪುರ ಮಾತ್ರವಲ್ಲ, ಬರಿಯ ಕಣ್ಣ ಬೆರಗು ಮಾತ್ರವಲ್ಲ. ಅದು ಬಾಳಿನ ಕೆಸರಿನಲ್ಲಿ ಆಳವಾಗಿ ಬೇರೂರಿದ್ದು. ಗಾಳಿ, ಮಳೆ, ಬಿಸಿಲುಗಳನ್ನು ತಡೆದದ್ದು. ಆದ್ದರಿಂದಲೇ ಕೊನೆಯ ತನಕ ನಿಲ್ಲತಕ್ಕದ್ದು" (ಜಯಕರ್ನಾಟಕ, ೧೯೩೩) ಎಂದು ಬರೆದಿದ್ದಾರೆ.

ತೀನಂಶ್ರೀ ಅವರು ಬೇಂದ್ರೆಯವರ 'ಸಖೀಗೀತ'ವನ್ನು ಕುರಿತು 'ಪ್ರಬುದ್ಧ ಕರ್ನಾಟಕ'ದಲ್ಲಿಯೂ ವಿಮರ್ಶಾ ಲೇಖನವನ್ನು ಬರೆದಿದ್ದಾರೆ

> "ಬೇಂದ್ರೆಯವರ ಕವನಗಳನ್ನೆಲ್ಲ ಓದಿದರೆ ಒಂದೇ ಹೆಸರಿನಲ್ಲಿ ಇಬ್ಬರು ಕವಿಗಳೂ ಬರೆಯುತ್ತಿರುವಂತೆ ಒಮ್ಮೊಮ್ಮೆ ಅನ್ನಿಸುತ್ತದೆ. ನಿಬದ್ಧವಾದ ಛಂದಸ್ಸಿನ ಗ್ರಾಂಥಿಕ ಭಾಷೆಯಲ್ಲಿ ಅವರು ಬರೆದ ಕವನಗಳಿಗೂ ಹಳ್ಳಿಯ ಸಾಂಗತ್ಯಗಳ ಧಾಟಿಯಲ್ಲಿ ಹಳ್ಳಿಗರ ಮಾತಿನಲ್ಲಿ ಅವರು ಕಟ್ಟಿದ ಹಾಡುಗಳಿಗೂ ತುಂಬ ಭೇದ ಕಾಣಿಸುತ್ತದೆ. ಎರಡರಲ್ಲೂ ಆಳವಾದ ವಿಚಾರಗಳಿವೆ. ಸೂಕ್ಷ್ಮವಾದ ಅನುಭವವಿದೆ. ಆದರೆ ಇದರ ಅಭಿವ್ಯಕ್ತಿ ಮಾತ್ರ ಎರಡರಲ್ಲೂ ಬೇರೆಬೇರೆಯಾಗುತ್ತದೆ. ಎಷ್ಟೋ ಬಾರಿ ಒಂದು ಕಬ್ಬಿಣದ ಕಡಲೆಯಾದರೆ ಇನ್ನೊಂದು 'ನಾದದ ನವನೀತವಾಗುತ್ತದೆ'. ಈ ಎರಡನೆಯ ಗುಂಪಿಗೆ ಸೇರಿದ ಗೀತದಲ್ಲಿ ಎಲ್ಲ ಭಾವವೂ ಒಮ್ಮೆಗೇ ಹೊಳೆಯದಿದ್ದರೂ ಅದರ ದನಿಯ ಇಂಪಿನಲ್ಲೇ ರಸಿಕನು ತಲ್ಲೀನನಾಗಿ ಬಿಡುತ್ತಾನೆ. ಮಾತಿನ ಶಕ್ತಿಗೆ ಸಾಮಾನ್ಯವಾಗಿ ಮೀರಿ ಗಾಯನದಲ್ಲಿ ಮಾತ್ರ ಛಾಯೆದೋರುವ ಅಪೂರ್ವ ಭಾವಗಳನ್ನು ತಮ್ಮ ಹಾಡುಗಳಲ್ಲಿ ಹಿಡಿದಿಡುವ ಶಕ್ತಿ ಬೇಂದ್ರೆಯವರಿಗೆ ವಿಶೇಷವಾಗಿ ಇದೆ. ನಾಯಕನೂ ಅವನಿಗೆ 'ವಿಧಿ ತಂದ ವಧುವೂ' ಮೈ ಸಲಿಗೆ ಮನಸಲಿಗೆಗಳನ್ನು ಬೆಳೆಸಿ ಸಾವು ನೋವುಗಳನ್ನು ಜೊತೆಯಾಗಿ ಕಂಡು ಕಷ್ಟ ಸುಖಗಳನ್ನು ಒಟ್ಟಿಗೆ ಉಂಡು ಇಷ್ಟಾದರೂ ಒಬ್ಬೊಬ್ಬರ ಬಾಲ್ಯ ಸಂಸ್ಕಾರಗಳೂ ಮನಸ್ಸಿನ ಪರಿಪಾಕಗಳೂ ಬೇರೆ ಬೇರೆಯಾದ್ದರಿಂದ ಗಂಡಿನ ಉತ್ಸಾಹ ಉದ್ಯಮಗಳು ಹೆಣ್ಣಿಗೆ ಅರ್ಥವಾಗದೆ ಹೆಣ್ಣಿನ ಮೌನ ಮುದ್ರೆಯನ್ನೊಡೆದು ಸಂತೈಸಲು ಗಂಡಿಗೆ ಸಾಗದೆ ಒಟ್ಟಿಗೆ ಬಾಳುತ್ತಿದ್ದರೂ ಮನಸ್ಸುಗಳು ಕೆಲವು ಕಾಲ ಆಗಲಿ, ಈ ನಡುವೆ ಸತ್ಯಾಗ್ರಹದ ಚಳುವಳಿಯ ಇವು ನಾಯಕನಿಗೂ ತಟ್ಟಿ

(ಹೆಳವನಿದ್ದಲ್ಲಿಗೆ ಹೊಳೆ ಬಂದಿತು!) ಈತನು ಸೆರೆಮನೆ ವಾಸಗಳೆಲ್ಲದರ ಬವಣೆ ಪಡುವುದು. ಇನ್ನೊಂದೆಡೆ, ಈತನ ಕಾವ್ಯ ಕಲ್ಪನೆಯ ತುದಿಗೇರಿ 'ಕೊಟ್ಟಿದ್ದೆ ರೂಪವು, ಇಟ್ಟಿದ್ದೆ ಹುರುಳೆಂಬ ರೀತಿಯಲ್ಲಿ ಸಾಗುವುದು ಈ ಸತ್ವ ಪರೀಕ್ಷೆಯ ಕತೆ ಪ್ರಣಯದ ಎಲ್ಲ ಮುಖಗಳನ್ನು ಕಂಡು ಪರಿಪಾಕ ಹೊಂದುತ್ತಿರುವ ಜೀವಗಳ ಕತೆ – ಇಲ್ಲಿ ಉದ್ದಕ್ಕೂ ಬಂದಿದೆ. ಇದು ಮುಗಿಯದ ಕತೆ. ಇನ್ನು ಮುಂದೆ ಇದು ಹೇಗೆ ತಿರುಗುವದೋ ಯಾವ ನೆಲೆ ಮುಟ್ಟುವುದೋ..ತನ್ನ ಕಾವ್ಯಕ್ಕೆ ತಾನೇ ನಾಯಕನಾದ ಕವಿಗೆ ತಾನೇ ಹೇಗೆ ತಿಳಿಯಬೇಕು''[೧೧]

ಎಂದಿದ್ದಾರೆ.

ಮುಂದುವರೆದು "ಆತ್ಮಕಥೆಯನ್ನು ಹದಗೆಡಿಸದೆ ಬರೆಯುವುದು ಕಠಿಣ. ಅದನ್ನು ಗೀತವಾಗಿ ಹಾಡಿ ರಸವುಕ್ಕಿಸುವುದಂತೂ ಅತಿ ಕಠಿಣ. ಇಂತಹ ಕಾರ್ಯವನ್ನು 'ಸಖೀಗೀತ'ದಲ್ಲಿ ಬೇಂದ್ರೆಯವರು ಮನೋಹರವಾಗಿ ಸಾಧಿಸಿದ್ದಾರೆ". ರೂಪ, ವಸ್ತು, ಕಾಣ್ಕೆ ಈ ಮೂರನ್ನು ಹದಗೊಳಿಸಿ ಪಾಕ ತೆಗೆದಂತಿರುವ ಈ ಕಾವ್ಯಾವಲೋಕನ ಅಪರೂಪವಾದುದು. 'ಗರಿ' ಕವನ ಸಂಕಲನದ ಭಾಷೆ ಮತ್ತು ಶೈಲಿ ಕುರಿತು "ಭಾಷೆ ಶೈಲಿ ಇವುಗಳ ದೃಷ್ಟಿಯಿಂದ ಇಲ್ಲಿನದು ತುಂಗಭದ್ರೆಯ ಉತ್ತರಾಪಥದ ದೇಶೀ ಮಾರ್ಗ' ಅರ್ಥ ಧ್ವನಿ ಭಾವಪುಷ್ಟಿಗಳ ದೃಷ್ಟಿಯಿಂದ ಯಾವ ಮಾರ್ಗಕ್ಕಾದರೂ ಗೌರವ ತರುವಂಥದ್ದು" ಹಾಗೆಯೆ ಕಾವ್ಯದ ರೂಪಕ ಸಾಮರ್ಥ್ಯವನ್ನು ಕುರಿತು

"ಬೇಂದ್ರೆಯವರು ರೂಪಕಪ್ರಿಯರು ಎಂಬುದು ಈವರೆಗೂ ತಿಳಿದುಬಂದಿರುವುದು ಕವಿತೆಗಳು ರೂಪಕಗಳಿಂದ ತುಂಬಿದೆ ಎಂಬ ಒಂದೇ ಕಾರಣದಿಂದಲ್ಲ. ಇಡೀ ಕವನಸಂಕಲನವೇ ಒಂದು ಅಖಂಡ ರೂಪಕವಾಗಿದೆ. ಧ್ವನಿಮಂಡಲಗಳು ಅವರಿಗೆ ಬರಿ ಬೆಳಗಲ್ಲ, ಶಾಂತಿರಸವು ಮೈದೋರುವ ಸಂಧಿ. ಕವಿ ಮುದ್ದಣನ ನುಡಿಗಳು ಕೇವಲ ಕವಿವಾಣಿಯಲ್ಲ, ಕೋಗಿಲೆ ಅವರಿಗೆ ಸಾಮಾನ್ಯವಾದ ವನದ ಹಕ್ಕಿಯಲ್ಲ, ಅದು ಬ್ರಹ್ಮಾಂಡಗಳನ್ನು ಒಡೆಯಲು ಹೊಂಚು ಹಾಕಿದಂತೆ ದಿಕ್ಕುಗಳ ಅಂಚನ್ನು ಮುಟ್ಟಿ ಆಚೆಗೂ ಚುಂಚನ್ನು ಚಾಚಿ ಹಾರುತ್ತಿರುವ ಹಕ್ಕಿ, ಅದು ಕಾಲಪಕ್ಷಿ. ಹೀಗೆ ಇವರ ಗರಿಯಲ್ಲಿ ಭಾವದ ಉಸಿರಾಗಿ ಅರ್ಥದ ತಿರುಳಾಗಿ ಕವಿತೆಗೆ ವೀರ್ಯವನ್ನು ವ್ಯಕ್ತಿತ್ವವನ್ನು ಕೊಡುತ್ತಿರುವವು ಅಲ್ಲಿನ ಉತ್ತಮ ರೂಪಕಗಳು. ಹೂವಿನಂಥ ಕೆಲವು ಪದ್ಯಗಳಲ್ಲಿ ಯಾವೊಂದು ಭಾಗವನ್ನೇ ಆಗಲಿ ನಷ್ಟವಿಲ್ಲದೆ ಪ್ರತ್ಯೇಕಿಸಲು ಕೂಡ ಶಕ್ಯವಿಲ್ಲ''[೧೨]

ಹೀಗೆ ನವೋದಯ ಕಾವ್ಯದ ಆರಂಭಕ್ಕೆ ಪತ್ರಿಕೆಗಳು ಮುಖ್ಯವಾಗಿ 'ಜಯಕರ್ನಾಟಕ' – ಉತ್ತರ ಕರ್ನಾಟಕದಲ್ಲಿ ಹಾಗು 'ಪ್ರಬುದ್ಧ ಕರ್ನಾಟಕ' ಮೈಸೂರು ಕರ್ನಾಟಕದಲ್ಲಿ ಮಹತ್ವದ ಪಾತ್ರವನ್ನು ವಹಿಸಿದವು. ಪತ್ರಿಕೆಗಳ ಪಾತ್ರದೊಂದಿಗೆ ಮಾಸ್ತಿ, ಡಿವಿಜಿ, ತೀನಂಶ್ರೀ ಮೊದಲಾದ ವಿಮರ್ಶಕರ ಪ್ರೋತ್ಸಾಹವೂ ನವೋದಯದ ಕಾವ್ಯಕ್ಕೆ ಅಗತ್ಯವಾದ ಚೈತನ್ಯವನ್ನು ನೀಡಿತು. ಎಲ್ಲಕ್ಕಿಂತ ಮಿಗಿಲಾಗಿ ಹೊಸ ಭಾವದ, ಹೊಸ ಸಂವೇದನೆಯ ಕಾವ್ಯಕ್ಕೆ ಬ್ರಿಟಿಷರ ಶೈಕ್ಷಣಿಕ ಪದ್ಧತಿಯ ಪ್ರಭಾವದಿಂದ ಹೊಸ ಕಾವ್ಯಾಸಕ್ತ ಮನಸ್ಸುಗಳು ಸಿದ್ಧವಾಗಿದ್ದವು. ಈ ಎಲ್ಲ ಸಂಗತಿಗಳೂ ಅಂದಿನ ಪತ್ರಿಕೆಗಳ ಮೂಲಕ ತಮ್ಮ ಆಶಯವನ್ನು ಕಂಡುಕೊಂಡವು.

ಅಡಿಟಿಪ್ಪಣಿಗಳು

೧. ಬರಗೂರು ರಾಮಚಂದ್ರಪ್ಪ, ಪ್ರಧಾನ ಸಂಪಾದಕರು, ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨, ಪುಟ ೨೩೪
೨. ಅದೇ,ಪುಟ ೨೩೫
೩. ಎಸ್. ಅನಂತನಾರಾಯಣ, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಪುಟ ೧೦೬
೪. ಎಲ್.ಎಸ್. ಶೇಷಗಿರಿ ರಾವ್, ಶತಮಾನದ ಕನ್ನಡ ಸಾಹಿತ್ಯ, ಪುಟ ೨೩
೫. ಎಸ್. ಅನಂತನಾರಾಯಣ, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಪುಟ ೧೯
೬. ಗೋವಿಂದ ಪೈ, ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಮಿಂಚಿನ ಬಳ್ಳಿ ಪ್ರಕಾಶನ, ೧೯೪೬, ಪುಟ ೪
೭. ಡಾ.ಎಂ.ಜಿ. ಹೆಗಡೆ, ಕಾವ್ಯ ೧೯೦೦–೧೯೫೦, ಶತಮಾನದ ಸಾಹಿತ್ಯ ೨೦೦೦, ಪುಟ ೩೧
೮. ಡಾ.ಎಂ.ಜಿ. ಹೆಗಡೆ, ಕಾವ್ಯ ೧೯೦೦–೧೯೫೦, ಶತಮಾನದ ಸಾಹಿತ್ಯ ೨೦೦೦, ಪುಟ ೩೨
೯. ಎಲ್.ಎಸ್. ಶೇಷಗಿರಿ ರಾವ್, ಶತಮಾನದ ಕನ್ನಡ ಸಾಹಿತ್ಯ, ಪುಟ ೨೫೦
೧೦. ಜಿ.ಎಸ್. ಶಿವರುದ್ರಪ್ಪ, ಕನ್ನಡ ಕಾವ್ಯತತ್ವಚಿಂತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭, ಪುಟ ೧೮೬
೧೧. ತೀನಂಶ್ರೀ, ಸಖೀಗೀತ: ವಿಮರ್ಶೆ, ಪ್ರಬುದ್ಧ ಕರ್ನಾಟಕ, ಸಂಪುಟ ೨೨, ಸಂಚಿಕೆ ೪
೧೨. ಅದೇ, ಸಂಚಿಕೆ ೨೨, ಸಂಪುಟ ೪

೪. ಪ್ರಬುದ್ಧ ಕರ್ನಾಟಕ – ನವೋದಯ ಸಾಹಿತ್ಯಕ್ಕೆ ಅದರ ಕೊಡುಗೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮೈಲುಗಲ್ಲು ಎನ್ನಬಹುದಾದ ಈ ಪತ್ರಿಕೆ ಪ್ರಾರಂಭವಾದದ್ದು ೧೯೧೯ರಲ್ಲಿ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಿಂದ ಪ್ರಾರಂಭಗೊಂಡು ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಗೊಳ್ಳುತ್ತಿರುವ ಈ ಪತ್ರಿಕೆ ತನ್ನ ಸೃಜನಶೀಲ ಮತ್ತು ಸಂಶೋಧನಾತ್ಮಕ ಬರಹಗಳಿಂದ, ವಿಮರ್ಶೆ ಸಂಪಾದನೆ, ಪ್ರಕಟಣೆಗಳಿಂದ, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವುದರ ಜೊತೆಗೆ ಅನೇಕ ಹೊಸ ಪ್ರತಿಭೆಗಳನ್ನು ಸೃಷ್ಟಿಸಿದೆ.

> "೧೯೨೦ರ ವೇಳೆಗೆ ಕನ್ನಡದ ಕೆಲಸ ಮಾಡಲು ಸಿಕ್ಕ 'ಅಶ್ವಿನಿ ದೇವತೆಗಳು' ಎಂದು ಮಾಸ್ತಿಯವರು ಟಿ.ಎಸ್. ವೆಂಕಣ್ಣಯ್ಯ ಹಾಗು ಎ.ಆರ್. ಕೃಷ್ಣಶಾಸ್ತ್ರಿಗಳನ್ನು ಕರೆದಿದ್ದಾರೆ. ಈ ಕೆಲಸಕ್ಕಾಗಿ ಒಂದು ತ್ರೈಮಾಸಿಕವನ್ನು ಎ.ಆರ್. ಕೃಷ್ಣಶಾಸ್ತ್ರಿಗಳು ಆರಂಭಿಸಿದರು. ಅದುವೆ 'ಪ್ರಬುದ್ಧ ಕರ್ನಾಟಕ'"
>
> ಎಂದು ಮಾಸ್ತಿ ಹೇಳಿದ್ದಾರೆ.[೧]

ದೇಜಗೌ ಹೇಳುವಂತೆ

> "ಒಂದು ಪತ್ರಿಕೆ ಪ್ರಬಲ ಬೋಧನ ಮಾಧ್ಯಮವಾಗಿರುವಂತೆ ನವೋನವ ಚಲನ ವಿಶ್ವಕೋಶವಾಗಿರುವಂತೆ, ಸಾಮಾಜಿಕ ರಾಜಕೀಯ ವಿಚಾರಗಳ ಸಮರ್ಥ ಪ್ರಸಾರ ಸಾಧನವಾಗಿರುವಂತೆ, ತನ್ನ ನಾಡಿನ ಭಾಷಾ ಸಾಹಿತ್ಯಗಳ ತುಂಬು ಬೆಳವಣಿಗೆಗೆ ಪ್ರೇರಕ ಹಾಗು ಆಶ್ರಯ ಶಕ್ತಿಯಾಗಿರುತ್ತದೆ.[೨]

ಎನ್ನುವ ಮಾತಿಗೆ ಪ್ರಬುದ್ಧ ಕರ್ನಾಟಕ ಅತ್ಯುತ್ತಮ ಉದಾಹರಣೆಯಾಗಿದೆ. ಇಂಗ್ಲಿಷ್‌ನಲ್ಲಿ ಆಗ 'ಪ್ರಬುದ್ಧ ಭಾರತ' ಹಾಗು ಮಲೆಯಾಳಂನಲ್ಲಿ 'ಪ್ರಬುದ್ಧ ಕೇರಳಂ' ಎಂಬ ಪತ್ರಿಕೆಗಳು ಚಾಲ್ತಿಯಲ್ಲದ್ದವು. ಈ ಪ್ರೇರಣೆಗಳಿಂದ ಈ ಪತ್ರಿಕೆಗೆ 'ಪ್ರಬುದ್ಧ ಕರ್ನಾಟಕ' ಎಂದು ಹೆಸರಿಡಲಾಯಿತು.

> "ಮುಖಪುಟದಲ್ಲ ಮೂಡುವ ರವಿಯ ಚಿತ್ರವನ್ನು ಪತ್ರಿಕೆ ಹೊಂದಿತ್ತು. ಮುಖಪುಟ ಚಿತ್ರವು ಶ್ರೀರಾಮಕೃಷ್ಣ ಮಠದಿಂದಲೇ ಪ್ರೇರಿತವಾಗಿತ್ತು. ಅದರ ಸಾಹಿತ್ಯದ ಪ್ರತೀಕವಾಗಿ ರಾಜಯೋಗ, ಜ್ಞಾನಯೋಗ,ಭಕ್ತಿಯೋಗ ಹಾಗು ಕರ್ಮಯೋಗಗಳನ್ನು ಸೂಚಿಸಿರುವ ಮುದ್ರೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕನ್ನಡ ನಾಡಿನ ಸೂರ್ಯದೇವನ ಸನ್ನಿಧಿಯಲ್ಲಿ ಆಗಲೇ ಅರಳಿರುವ ಮತ್ತು ಇಂದು ಮೊಗ್ಗಾಗಿ, ಮುಂದೆ

ಅರಳಬೇಕಾಗಿರುವ ಹೃತ್ಕಮಲಗಳನ್ನು ಸೂಚಿಸಿ ಬರೆದ ಚಿತ್ರವಿದು ಎಂದು ಅದರ ಸಂಪಾದಕರಾದ ಎ.ಆರ್. ಕೃಷ್ಣಶಾಸ್ತ್ರಿಗಳು ಹೇಳಿದ್ದಾರೆ. ಒಳಪುಟದಲ್ಲಿ ಅಂದರೆ ಮೊದಲನೆಯ ಹಾಳೆಯಲ್ಲಿ ಸೆಂಟ್ರಲ್ ಕಾಲೇಜಿನ ಚಿತ್ರವಿರುತ್ತಿತ್ತು"[೩]

೧೯೩೭ರಲ್ಲಿ ಪ್ರಬುದ್ಧ ಕರ್ನಾಟಕವನ್ನು ಬೆಂಗಳೂರಿನಿಂದ ಮೈಸೂರಿಗೆ ಸ್ಥಳಾಂತರಿಸಲಾಯಿತು. ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಲಾಂಛನ ಹೊಂದಿದ್ದ ಈ ಪತ್ರಿಕೆಯ ಮುಖಪುಟದಲ್ಲಿ ಇತ್ತೀಚೆಗೆ ಏಕೀಕೃತ ಕರ್ನಾಟಕದ ಭೂಪಟ ಕಾಣಬಹುದಾಗಿದೆ.

ಪತ್ರಿಕೆಯ ಧ್ಯೇಯ ಧೋರಣೆಯ ಕುರಿತು ಎ. ಅರ್. ಕೃಷ್ಣಶಾಸ್ತ್ರಿ ಮೊದಲ ಸಂಚಿಕೆಯಲ್ಲಿಯೇ ಹೀಗೆಂದಿದ್ದಾರೆ

"ಈಗಿನ ನಮ್ಮ ದೇಶದಲ್ಲಿ ಒಬ್ಬಿಬ್ಬರು ತಕ್ಕಮಟ್ಟಿಗೆ ಸ್ವಾರಸ್ಯವಾಗಿ ಬರೆಯುವ ಸ್ವತಂತ್ರ ಗ್ರಂಥಗಳು ಗೋಚರಿಸುತ್ತವೆ. ಇವು ನೀರು ಬೆರೆಸಿದ ಹಾಲಿನಂತೆಯೂ, ಗಿಡಕ್ಕೆ ನೀರು ಗೊಬ್ಬರಗಳಿಲ್ಲದೆ ಬಿಡುವ ಪೀಚುಹಣ್ಣುಗಳಂತೆಯೂ ಇರುತ್ತವೆ. ಇದಕ್ಕೋಸ್ಕರ ಒಂದು ಕಡೆ ಸಸಿಗಳಿಗೆ ನೀರು ಗೊಬ್ಬರಗಳನ್ನು ಒದಗಿಸುವುದಲ್ಲದೆ ನೀರು ಹಾಲಿನಂತಿರುವ ಜಲಾಂಶವನ್ನು ತೆಗೆದು ಅದು ಕುಡಿದರೆ ಆನಂದ ಕೊಡುವ ಸಕ್ಕರೆ ಕೇಸರಿ ಏಲಕ್ಕಿ ಮುಂತಾದ ದ್ರವ್ಯಗಳನ್ನು ತಂದು ಸೇರಿಸುವ ಬಗೆಯನ್ನು ಹೇಳಿಕೊಡಬೇಕು. ಅಂದರೆ ಇಂಗ್ಲಿಷ್ ಭಾಷೆಯಲ್ಲಿ ದೊರಕುವ ಪ್ರಪಂಚದ ಸಾಹಿತ್ಯ ಸಾರವನ್ನು ಕನ್ನಡಕ್ಕೆ ತಂದು ಒದಗಿಸಿಕೊಡುವುದಲ್ಲದೆ ಆ ಸಾಹಿತ್ಯವನ್ನೆಲ್ಲ ತುಲನಾಪೂರ್ವಕವಾಗಿ ವಿಮರ್ಶೆ ಮಾಡಿ ನಮ್ಮ ಕವಿಗಳಲ್ಲಿರುವ ಗುಣದೋಷಗಳೇನು ಸತ್ಕಾವ್ಯದ ಲಕ್ಷಣಗಳೇನು ಎಂಬುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರ ಮಾಡಿಕೊಳ್ಳಬೇಕು. ಇದಕ್ಕಾಗಿ ಇಂತಹ ವಿಷಯಗಳ ಮೇಲೆ ವಿದ್ಯಾರ್ಥಿಗಳು ಬರೆದು ಕರ್ನಾಟಕ ಸಂಘದಲ್ಲಿ ಕೊಡುವ ಪ್ರಬಂಧಗಳು, ವಿದ್ವಾಂಸರುಗಳು ಕೊಡತಕ್ಕ ಉಪನ್ಯಾಸಗಳು ಈ ಪತ್ರಿಕೆಯಲ್ಲಿ ಪ್ರಕಟವಾಗುವವು"[೪]

ಪ್ರಬುದ್ಧ ಕರ್ನಾಟಕ ಪ್ರಾರಂಭದಿಂದಲೂ ವಿಮರ್ಶಾತ್ಮಕ ಪತ್ರಿಕೆಯಾಗಿಯೇ ನಿಲ್ಲಬೇಕು ಎಂದು ಸಂಕಲ್ಪ ಮಾಡಿರುವುದನ್ನು ಅದರ ಆರಂಭಿಕ ಸಂಚಿಕೆಗಳಲ್ಲಿ ಕಾಣಬಹುದಾಗಿದೆ "ನಮ್ಮ ಮುಖ್ಯ ಕೆಲಸವೇನೆಂದರೆ ಕಾವ್ಯಸೃಷ್ಟಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವುದು. ..ಯಾವುದರಿಂದ ಕನ್ನಡ ಕಾವ್ಯಮಾಲೆಯು ಶ್ರೇಷ್ಠ ರೀತಿಯಲ್ಲಿ ಬೆಳೆಯಬಹುದು ಎಂಬುದು ನಮಗೆ ದೃಢವಾದ ನಂಬಿಕೆ ಇದೆಯೋ ಅಂತಹ ವಿಷಯಗಳನ್ನು ಕನ್ನಡಗರಿಗೆ ಕಾಣಿಕೆಯಾಗಿ ತಂದೊಪ್ಪಿಸುವ ಕೆಲಸವನ್ನು ಪ್ರಬುದ್ಧ ಕರ್ನಾಟಕಕ್ಕೆ ಒಪ್ಪಿಸಿದ್ದೇವೆ"[೫]

ಈ ಪತ್ರಿಕೆಯ ಆಶಯ ಅಂದಿನಿಂದ ಇಂದಿನ ವರೆಗೆ ಏಕಪ್ರಕಾರವಾಗಿ ಮುಂದುವರೆದು ಬಂದಿದೆ. ಮೊದಲ ಎರಡು ವರ್ಷಗಳ ಕಾಲ ನಾಲ್ಕು ತಿಂಗಳಿಗೊಮ್ಮ ಸಂಚಿಕೆ ಹೊರಬರುತ್ತಿತ್ತು. ನಂತರ ಅದು ತ್ರೈಮಾಸಿಕವಾಗಿ ಮುಂದುವರೆಯಿತು. ಪತ್ರಿಕೆಯ ಆಕಾರ, ಅದರಲ್ಲಿ ಪ್ರಕಟವಾಗುವ ಕವಿತೆ, ಲೇಖನಗಳ ಸಂಯೋಜನೆ ಮೊದಲಾದವುಗಳಲ್ಲ ಹೆಚ್ಚು ಮಾರ್ಪಟುಗಳು ಆಗಿಲ್ಲ. ಇದರ ಮತ್ತೊಂದು ವಿಶೇಷ ಎಂದರೆ ಪ್ರಾರಂಭದಿಂದ ಮುಖಪುಟದ ಮೇಲೆ ಭಾರತೀಯ ಸಂವತ್ಸರಗಳನ್ನು ಪ್ರಧಾನವಾಗಿ ಕಾಣುವಂತೆ ಪ್ರಕಟಿಸುತ್ತ ಬಂದಿರುವುದು. ಮೊದಲ ಸಂಚಿಕೆ 'ಸಿದ್ಧಾರ್ಥಿ ಸಂವತ್ಸರದ ಯುಗಾದಿ ಹಬ್ಬದ ಕೊಡುಗೆ'ಯಿಂದ ಆರಂಭವಾಗಿ ರೌದ್ರಿ, ದುರ್ಮತಿ ಸ್ವಭಾನು ಹೀಗೆ ಸಂವತ್ಸರದ ಸಂಪುಟಗಳನ್ನು

ಕಾಣಬಹುದು. ಸಂಚಿಕೆಗಳನ್ನೂ ಸಹ ೧೯೫೦ರ ವರೆಗೆ ಹಿಂದೂ ಹಬ್ಬಗಳಿಗೆ ಹೊಂದಿಸಿ ವಿನಾಯಕನ ಹಬ್ಬ, ದೀಪಾವಳಿ, ಸಂಕ್ರಾಂತಿ ಹಾಗು ಕಾಮನ ಹಬ್ಬ ಎಂದು ಹೆಸರಿಸಲಾಗಿದೆ. ೧೯೫೦ರಿಂದೀಚೆಗೆ ಸಂಚಿಕೆಗಳನ್ನು ಚೈತ್ರ, ಆಷಾಢ, ಆಶ್ವಯುಜ ಎಂದು ಕರೆಯಲಾಗಿದೆ. ಇದು ನಮ್ಮ ಸಂಸ್ಕೃತಿಯ ಪಂಚಾಂಗ ಪದ್ಧತಿಗೆ ಕೊಟ್ಟ ಪ್ರಾಮುಖ್ಯತೆಯಾಗಿದೆ.

ಇದು ಕನ್ನಡದ ಹೊಸ ವಿಮರ್ಶನ ಪದ್ಧತಿಯನ್ನು ಸ್ಥಾಪನೆ ಮಾಡಿತೆಂದು ಮಾಸ್ತಿ ಹೇಳಿದ್ದಾರೆ.

> ‘ಒಂದು ಕೃತಿಯ ಗುಣವನ್ನು ಪ್ರಕಟಿಸುವುದೂ, ಅದರ ಪ್ರಭಾವವನ್ನು ವಿಶದ ಪಡಿಸುವುದೂ, ಅದರ ಕುರಿತು ವಿಮರ್ಶಕರ ಅಭಿಪ್ರಾಯ ತಿಳಿಸುವುದೂ, ಈ ಎಲ್ಲ ಕೆಲಸಗಳಿಂದ ಜನರ ಮನಸ್ಸನ್ನು, ರುಚಿಯನ್ನು ತಿದ್ದುವುದು ವಿಮರ್ಶೆಯ ಕಾರ್ಯಗಳೇ.. ಒಪ್ಪಿದ ಗ್ರಂಥವನ್ನು ಕುರಿತು ವಿಮರ್ಶೆ, ಒಪ್ಪದ ಗ್ರಂಥದ ಕುಂದನ್ನು ವಿವರಿಸುವುದರಲ್ಲಿ ಸಕಾರಣವಾದ ತಕ್ಕಷ್ಟು ವಿಸ್ತಾರವಾದ ಪರಿಶೀಲನೆ ಇದು ನಮ್ಮಲ್ಲಿ ವಾಡಿಕೆ ಇರಲಿಲ್ಲ. ಹೊಸ ಸಾಹಿತ್ಯ ಕಲಿತಂತೆ ಹೊಸ ವಿಮರ್ಶೆಯನ್ನೂ ನಾವು ಇಂಗ್ಲಿಷಿನಿಂದ ಕಲಿಯಬೇಕಾಯಿತು. ಅದು ಪ್ರಬುದ್ಧ ಕರ್ನಾಟಕದ ಮೂಲಕ ನಡೆಯಿತು’.[೧]

ಎಂದು ಮಾಸ್ತಿ ಅದರ ಸಂಪಾದಕದ್ವಯರ ಆಶಯವನ್ನು ಅದು ನೆರವೇರಿದ ಬಗ್ಗೆ ಕೆಲವು ನಿದರ್ಶನಗಳನ್ನು ನೀಡಿ ವಿವರಿಸಿದ್ದಾರೆ.

> “ಪ್ರಬುದ್ಧ ಕರ್ನಾಟಕ, ಜಯಕರ್ನಾಟಕ ಮುಂತಾದ ಪತ್ರಿಕೆಗಳಲ್ಲಿ ವಿಮರ್ಶೆಯನ್ನು ಅಚ್ಚುಕಟ್ಟಾಗಿ ಕಾವ್ಯತತ್ವಗಳ ಆಧಾರದ ಮೇಲೆ ಮಾಡುತ್ತಿದ್ದರು. ಈ ಪತ್ರಿಕೆಗಳು ವಿಮರ್ಶೆಯ ಶಾಲೆಗಳಾಗಿದ್ದವು. ಪ್ರಬುದ್ಧ ಕರ್ನಾಟಕವು ಹಳೆಯ ಸಾಹಿತ್ಯದ ಪ್ರಚಾರ, ಸಾಹಿತ್ಯವಿಮರ್ಶೆ, ಸಂಶೋಧನೆಗಳಲ್ಲಿ ದೊಡ್ಡ ಆದರ್ಶಗಳನ್ನು ಪಾಲಿಸಿಕೊಂಡು ಬಂದಿತೇ ಹೊರತು ಯಾವತ್ತೂ ಪಂಥ, ಗುಂಪುಗಳಿಗೆ ಆಸ್ಪದ ಕೊಡಲಿಲ್ಲ. ವಿಶ್ವವಿದ್ಯಾಲಯದ ಆಶ್ರಯದಲ್ಲಿದ್ದರೂ ಕನ್ನಡದ ಹಿತರಕ್ಷಣೆಗೆ ಸಂಬಂಧಿಸಿದಂತೆ ತನ್ನ ದೃಢವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಹಿಂಜರಿಯಲಿಲ್ಲ”[೨]

ಎಂಬುದು ಹಾಮಾನಾರ ಸ್ಪಷ್ಟನುಡಿ.

ಪ್ರಬುದ್ಧ ಕರ್ನಾಟಕ ಹಲವಾರು ವಿಶೇಷಾಂಕಗಳನ್ನು ಪ್ರಕಟಿಸಿದೆ. ಅವುಗಳಲ್ಲಿ ಪ್ರಮುಖವಾದವುಗಳು, ಮುದ್ದಣನ ಸಂಚಿಕೆ (೧೯೨೫), ಬೆಳ್ಳಿಯ ಸಂಚಿಕೆ (೧೯೪೬), ಗಾಂಧೀಜಿ ಸ್ಮರಣ ಸಂಚಿಕೆ (೧೯೪೭), ವಿಜ್ಞಾನ ವಿಶೇಷಾಂಕ (೧೯೫೭), ರವೀಂದ್ರಾಂಕ (೧೯೬೧), ವಿವೇಕಾನಂದ ಸಂಚಿಕೆ (೧೯೬೪), ಮೆಂಡಲ್ ವಿಶೇಷಾಂಕ (೧೯೬೫), ಇವಲ್ಲದೆ ಬಿಎಂಶ್ರೀ, ಎ.ಆರ್.ಕೃ, ಟಿ.ಎಸ್.ವೆಂಕಣ್ಣಯ್ಯ, ಟಿ.ಪಿ. ಕೈಲಾಸಂ, ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತಂತೆಯೂ ವಿಶೇಷಾಂಕಗಳು ಪ್ರಕಟವಾಗಿವೆ. ಇದರ ಸಂಪಾದಕರಾಗಿ ೧೯೧೯ರಿಂದ ೧೯೩೨ರವರೆಗೆ ಪತ್ರಿಕೆಯನ್ನು ನಡೆಸಿದ ಕೀರ್ತಿ ಎ.ಆರ್. ಕೃಷ್ಣಶಾಸ್ತ್ರಿಗಳದು. ೨೮-೦೧-೧೯೪೬ರ ಪ್ರಬುದ್ಧ ಕರ್ನಾಟಕದ ಎ.ಆರ್.ಕೃ ಕುರಿತ ವಿಶೇಷ ಸಂಚಿಕೆಯಲ್ಲಿನ ಹಾಮಾನಾ ಅವರ ಸಂಪಾದಕೀಯ ಎ.ಆರ್.ಕೃ ಅವರ ಸೇವೆಯನ್ನು ಹೀಗೆ ಕೊಂಡಾಡಿದೆ.

> “ಪ್ರಬುದ್ಧ ಕರ್ನಾಟಕವೆಂದರೆ ಅವರು, ಅವರೆಂದರೆ ಪ್ರಬುದ್ಧ ಕರ್ನಾಟಕ ಎಂಬಷ್ಟರ ಮಟ್ಟಿಗೆ ಆಪ್ತವಾದುದು, ಆತ್ಮೀಯವಾದುದು ಅವರ ಬಾಂಧವ್ಯ. ಅದನ್ನು ಸ್ಥಾಪಿಸಿದವರು, ನಡೆಸಿದವರು, ಅದಕ್ಕೆ ಯೋಗ್ಯತೆ ಕೀರ್ತಿ ತಂದವರು ಅವರು. ಅಷ್ಟು

ಮಾತ್ರ ಮಾಡಿಬಿಟ್ಟಿದ್ದರೂ ಅವರ ಕೀರ್ತಿ ಹೊಸಗನ್ನಡ ಸಾಹಿತ್ಯ ಪ್ರಪಂಚದಲ್ಲಿ ನೆಲೆಯಾಗಿ ನಿಲ್ಲುತ್ತಿತ್ತು. ನಿರ್ಮಲಾನಂದ ಸ್ವಾಮಿಗಳು ಉದ್ದೇಶಿಸಿದ್ದು ಧಾರ್ಮಿಕ ಪತ್ರಿಕೆ, ಕೃಷ್ಣಶಾಸ್ತ್ರಿಗಳು ಆರಂಭಿಸಿದ್ದೂ ಧಾರ್ಮಿಕ ಪತ್ರಿಕೆ. ಆದರೆ ಇಬ್ಬರ ಉದ್ದೇಶಿತ ಧರ್ಮಗಳೂ ತೀರಾ ಭಿನ್ನ. ಎಚ್ಚೆತ್ತ ಕನ್ನಡ ನಾಡಿನ ವಿಕಸಿತಗೊಂಡ ಕನ್ನಡ ಮನಸ್ಸಿನ ಸಂಕೇತ ಪ್ರಬುದ್ಧ ಕರ್ನಾಟಕ. ಶಾಸ್ತ್ರಿಗಳದು ಕನ್ನಡಧರ್ಮ, ಕನ್ನಡದ ಕಾರಣವನ್ನು ಅವರು ಧರ್ಮಪ್ರಚಾರಕರ ಶ್ರದ್ಧೆ ಉತ್ಸಾಹ ಭಕ್ತಿಗಳಿಂದ ಎತ್ತಿಕೊಳ್ಳದಿದ್ದರೆ ಕನ್ನಡ ಇವತ್ತು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ”[೮]

ಎ.ಆರ್. ಕೃಷ್ಣಶಾಸ್ತ್ರಿಗಳಿಗೆ ತಮ್ಮ ಕೆಲಸ ತೃಪ್ತಿ ನೀಡಿದೆ ಎಂಬುದನ್ನು ಅವರ ಮಾತುಗಳಲ್ಲೇ – ಪ್ರಬುದ್ಧ ಕರ್ನಾಟಕದ ಬೆಳ್ಳಿಯ ಸಂಚಿಕೆಯಲ್ಲಿ – ಕೇಳಬಹುದು

“ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಎಷ್ಟೋ ಉತ್ತಮವಾದ ವ್ಯವಸಾಯ ನಡೆದಿದೆ, ಪ್ರಬುದ್ಧ ಕರ್ನಾಟಕವು ಅದು ನಡೆಯುವಂತೆ ಸ್ವಲ್ಪವಾದರೂ ನಿಧಾನವಾಗಿ ಕಾಡು ಕಡಿದು ಭೂಮಿಯನ್ನು ಮತ್ತು ನೆಲವನ್ನು ಹದ ಮಾಡಿ ಬೇಲಿ ಹಾಕಿ ಅಷ್ಟೋ ಇಷ್ಟೋ ನೀರು ಬೀಜ ಗೊಬ್ಬರಗಳನ್ನು ಒದಗಿಸಿಕೊಟ್ಟಿದೆ ಎಂದು ನಾನು ನಂಬಿದ್ದೇನೆ. ಪ್ರಬುದ್ಧ ಕರ್ನಾಟಕದಲ್ಲಿ ಸೃಜನಶೀಲ ಸಾಹಿತ್ಯಕ್ಕೆ ಮೊದಲ ಆದ್ಯತೆ. ಕವಿತೆ ವಿಮರ್ಶೆ, ನಾಟಕ, ಕಾವ್ಯಾವಲೋಕನ (ಪುಸ್ತಕ ವಿಮರ್ಶೆ) ಕಲೆ ಎಲ್ಲವನ್ನೂ ಈ ಪತ್ರಿಕೆಯಲ್ಲಿ ನಾವು ಕಾಣಬಹುದು. “ಕಥೆ ಎಲ್ಲ ಕಾಲದಲ್ಲೂ ಎಲ್ಲರಿಗೂ ಪ್ರಿಯವಾದುದು. ಅದು ಇದ್ದರೆ ಪುಟ ತುಂಬುವುದಕ್ಕೂ ಅನುಕೂಲ ಮೂರನೆಯ ಸಂಪುಟದ ಎರಡನೆಯ ಸಂಚಿಕೆಯಿಂದೀಚೆಗೆ ಪ್ರತಿ ಸಂಚಿಕೆಯಲ್ಲೂ ಒಂದೊಂದು ಒಳ್ಳೆಯ ಕತೆಯನ್ನು ಪ್ರಕಟಿಸುತ್ತ ಬಂದೆವು. ಕತೆ ಸ್ವತಂತ್ರವಾಗಿರಬೇಕೆಂದೂ, ಕೈಲಾದ ಮಟ್ಟಿಗೆ ಅನುವಾದ, ಭಾಷಾಂತರಗಳಾಗಿರಬಾರದು ಎಂದೂ, ಇರುವುದರಲ್ಲೇ ಉತ್ತಮವಾದುದನ್ನು ಆರಿಸಿಕೊಂಡು ಹಾಕಬೇಕೆಂದು ಸಂಘವು ನಿರ್ಧರಿಸಿತು. ಇದೇ ನೀತಿಯನ್ನು ಇಂದಿಗೂ ಅನುಸರಿಸುತ್ತಾ ಬಂದಿದೆ”.[೯]

ಹೀಗೆ ವಿದ್ವತ್ತು ಸಂಶೋಧನೆ ಮಾನವಿಕ ವಿಷಯಗಳಷ್ಟೇ ಸಮವಾದ ಅವಕಾಶವನ್ನು ಸೃಷ್ಟ್ಯಾತ್ಮಕ ಬರಹಕ್ಕೂ ಕಲ್ಪಿಸಿಕೊಟ್ಟ ಕೀರ್ತಿ ಪ್ರಬುದ್ಧ ಕರ್ನಾಟಕಕ್ಕೆ ಸಲ್ಲುತ್ತದೆ. ಮೈಸೂರು ವಿಶ್ವವಿದ್ಯಾಲಯ ದ ಆಡಳಿತ ವ್ಯಾಪ್ತಿಗೆ ಈ ಪತ್ರಿಕೆ ಸೇರಿದ ಮೇಲೆ ಅಂದರೆ ೧೯೩೨ರ ಅನಂತರ ಬಿಎಂಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಕೆ.ವಿ.ಪುಟ್ಟಪ್ಪ, ಡಿ.ಎಲ್. ನರಸಿಂಹಾಚಾರ್, ದೇಜಗೌ, ಹಾಮಾನಾ, ಜೀಶಂಪ, ಹೀಗೆ ಹಲವಾರು ಸುಪ್ರಸಿದ್ಧ ಲೇಖಕರು ಇದರ ಪ್ರಧಾನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಸಂಪಾದಕರುಗಳಾಗಿ ಟಿ.ಎಸ್. ವೆಂಕಣ್ಣಯ್ಯ, ವೀಸೀ, ಕೆ.ವಿ. ರಾಘವಾಚಾರ್, ಎನ್. ಅನಂತರಂಗಾಚಾರ್, ಟಿ.ಎಸ್. ಶಾಮರಾವ್, ಎಸ್.ವಿ. ಪರಮೇಶ್ವರಭಟ್ಟ, ಸುಬ್ಬರಾಯಾಚಾರ್, ಪ್ರಭುಶಂಕರ್, ಸುಜನಾ, ಜಿ. ವರದರಾಜರಾವ್, ಮಾನಪ್ಪ ನಾಯಕ, ಸಿ.ಪಿ.ಕೆ., ಟಿ.ವಿ.ವೆಂಕಟಾಚಲಶಾಸ್ತ್ರಿ, ಸುಧಾಕರ, ಎಚ್.ಎಂ. ಚನ್ನಯ್ಯ, ಪ.ವಿ. ಚಂದ್ರಶೇಖರ್, ರಾಮೇಗೌಡ, ಪ್ರಧಾನ ಗುರುದತ್ ಹೀಗೆ ಹಲವಾರು ಪ್ರಮುಖರು ಸಂಪಾದಕರುಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಈ ಪತ್ರಿಕೆಗೆ ಸುಮಾರು ಅರ್ಧ ಶತಮಾನಗಳ ಕಾಲ ನಿರಂತರವಾಗಿ ಕವಿತೆ ಲೇಖನಗಳನ್ನು ಬರೆದುಕೊಟ್ಟು ಬೆಳೆಸಿದ ಕುವೆಂಪು ಅವರನ್ನು ಒಳಗೊಂಡಂತೆ ಬಹುತೇಕ ಎಲ್ಲ ಸಂಪಾದಕರು, ಪ್ರಧಾನ ಸಂಪಾದಕರುಗಳು ಒಳ್ಳೆಯ ಲೇಖಕರೂ ಆಗಿದ್ದುದರಿಂದ

ಅತ್ಯುತ್ತಮ ಲೇಖನಗಳನ್ನು ಬರೆದುಕೊಟ್ಟಿದ್ದಾರೆ. ಜೊತೆಗೆ ಅನೇಕ ಕಿರಿಯ ಹಿರಿಯ ಲೇಖಕರೂ ಪ್ರಬುದ್ಧ ಕರ್ನಾಟಕಕ್ಕೆ ಬರೆದಿದ್ದಾರೆ.

ಸಂಪಾದಕೀಯದಲ್ಲಿ ಪ್ರಚಲಿತ ಸಾಹಿತ್ಯ, ಸಾಹಿತಿಗೆ ಸಂಬಂಧಿಸಿದ ವಿದ್ಯಮಾನಗಳನ್ನು ಪ್ರಸ್ತಾಪಿಸಿರುವುದು ಕಂಡು ಬರುತ್ತದೆ. ಆ ಅವಧಿಯಲ್ಲಿ ಮರಣ ಹೊಂದಿದ ಲೇಖಕರ ಕುರಿತು ಜೊತೆಗೆ ಕನ್ನಡಕ್ಕೆ ಸಂದ ಗೌರವ ಪ್ರಶಸ್ತಿಗಳ ವಿಚಾರಗಳ ಕುರಿತು ಬರೆದಿರುವದನ್ನು ಕಾಣಬಹುದು. ಕೆಲವು ಕಾಲ 'ಪ್ರಾಚ್ಯ ಲೇಖನ ಮಾಲೆ' ಪತ್ರಿಕೆಯ ಕಡೆಯ ಪುಟದಲ್ಲಿ ಇರುತ್ತಿತ್ತು. 'ವಸ್ತುಕೋಶ' ಎಂಬ ವಿಭಾಗ ಇತ್ತೀಚಿನ ದಿನಗಳ ವರೆಗೂ ಕಂಡುಬರುತ್ತಿದೆ. ಇಲ್ಲಿ ನಾನಾ ವಿಷಯಗಳು ಹಾಗು ಸಾಹಿತ್ಯಕ್ಕೆ ಸಂಬಂಧಿಸಿದ ಚಿಂತನೆಗಳಿವೆ. 'ಕಾವ್ಯಾವಲೋಕನ' ಎಂಬ ವಿಭಾಗದಲ್ಲಿ ಈ ಹಿಂದೆಯೇ ತಿಳಿಸಿದಂತೆ ಗ್ರಂಥವಿಮರ್ಶೆ ನಡೆದುಕೊಂಡು ಬಂದಿದೆ. ಕಮ್ಮಟದ ಕಿಡಿಗಳು ವಿಭಾಗದಲ್ಲಿ 'ನಿಷ್ಪತ್ತಿ ಶಾಸ್ತ್ರ'ಕ್ಕೆ ಸಂಬಂಧಿಸಿದ ವಿದ್ವತ್ಪೂರ್ಣ ಜಿಜ್ಞಾಸೆ ಇದೆ. ೧೯೬೦ರವರೆಗೂ ಪರಿವಿಡಿಯನ್ನು ಮುಖಪುಟದ ಹೊರಭಾಗದಲ್ಲಿ ಕೊಡಲಾಗುತ್ತಿತ್ತು. ಅನಂತರದ ದಿನಗಳಲ್ಲಿ ಇದನ್ನು ಒಳಪುಟಗಳಲ್ಲಿ ಪ್ರತ್ಯೇಕವಾಗಿ ಕೊಡಲಾಯಿತು. ಇತ್ತೀಚೆಗೆ ಲೇಖಕರ ಕಿರು ಪರಿಚಯವನ್ನೂ ನೀಡಲಾಗುತ್ತಿದೆ.

ಪ್ರಬುದ್ಧ ಕರ್ನಾಟಕದಲ್ಲಿ ವಿಜ್ಞಾನ ಸಂಬಂಧಿ ಬರಹಗಳಿಗೂ ಜಾಗವಿತ್ತು. ಕ್ರಮೇಣ ಜನಪ್ರಿಯ ವಿಜ್ಞಾನ ಬರಹಗಳು ಸಾಕಷ್ಟು ಬರತೊಡಗಿದ್ದರಿಂದ ವಿಶ್ವವಿದ್ಯಾಲಯವು ವಿಜ್ಞಾನದ ಬರವಣಿಗೆಗೆಂದೇ ಮೀಸಲಾದ 'ವಿಜ್ಞಾನ ಕರ್ನಾಟಕ' ಪತ್ರಿಕೆಯನ್ನು ಪ್ರಾರಂಭಿಸಿತು. ಆದರೆ ಇತಿಹಾಸ, ಮನೋವಿಜ್ಞಾನ, ಸಮಾಜಶಾಸ್ತ್ರ, ಭೂಗೋಳ, ಅರ್ಥಶಾಸ್ತ್ರ, ಶಾಸನಗಳು ವಾಸ್ತುಶಿಲ್ಪ ಇತ್ಯಾದಿ ವಿಷಯಗಳ ಕುರಿತು ಲೇಖನಗಳು ಹೆಚ್ಚು ಹೆಚ್ಚು ಬರಲಾರಂಭಿಸಿದಾಗ ಮತ್ತೆ ಪ್ರಬುದ್ಧ ಕರ್ನಾಟಕ ತನ್ನ ಸಾಹಿತ್ಯಿಕ ಸ್ವರೂಪವನ್ನು ಕಾಪಾಡಿಕೊಳ್ಳುವುದು ಕಷ್ಟವಾಯಿತು. ಈ ಸಂದರ್ಭದಲ್ಲಿ ಮತ್ತೊಂದು ಕವಲಾಗಿ ಹುಟ್ಟಿದುದು 'ಮಾನವಿಕ ಕರ್ನಾಟಕ' ಇದರಿಂದಾಗಿ ಪ್ರಬುದ್ಧ ಕರ್ನಾಟಕ ಒಂದು ಉತ್ಕೃಷ್ಟ ಸಾಹಿತ್ಯ ಪತ್ರಿಕೆಯಾಗಿ ನೆಲೆ ನಿಲ್ಲಲು ಅನುಕೂಲವಾಯ್ತು.

ಪ್ರಬುದ್ಧ ಕರ್ನಾಟಕದ ಮತ್ತೊಂದು ಹೆಗ್ಗಳಿಕೆ ಇದರ ಮುದ್ರಣಶುದ್ಧಿಗೆ ಸಂಬಂಧಿಸಿದ್ದು. ಉತ್ತಮ ಬರಹಗಳಂತೆಯೇ ಮುದ್ರಣ ಕೂಡ ತಪ್ಪುಗಳಿಲ್ಲದೆ ಅಂದವಾಗಿ ಮೂಡಿಬರುತ್ತಿತ್ತು. ಪ್ರಶಂಸನೀಯವಾದ ಮತ್ತೊಂದು ಸಂಗತಿಯಂದರೆ ಸಂಭಾವನೆಗೆ ಸಂಬಂಧಿಸಿದ್ದು. ಸಂಪಾದಕರು ಹಾಗು ಲೇಖಕರು ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಲೇಖನಗಳನ್ನು ಬರೆಯುವುದನ್ನು ಒಂದು ಪ್ರೀತಿಯ ಕಾಯಕವನ್ನಾಗಿ ಸ್ವೀಕರಿಸಿದ್ದರು. ಹೀಗೆ ಸಾಹಿತ್ಯ ಪತ್ರಿಕೆಯೊಂದು ಸರಿ ಸುಮಾರು ಎಂಬತ್ತೈದಕ್ಕೂ ಹೆಚ್ಚು ವರ್ಷಗಳ ಕಾಲ ನಿಲ್ಲದೆ ನಡೆದು ಬರುತ್ತಿರುವುದು ಹೆಮ್ಮೆಯ ಸಂಗತಿ. "ನವೋದಯದ ಸಂದರ್ಭದಲ್ಲಿ ಅನೇಕ ಲೇಖಕರಿಗೆ ತಮ್ಮ ಲೇಖನ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾಗಿದೆ ಎಂಬುದು ಹೆಮ್ಮೆಯ ಸಂಗತಿಯಾಗಿದ್ದನ್ನು ಕಾಣಬಹುದು. ಇದಕ್ಕೆ ಉದಾಹರಣೆಯಾಗಿ, ಕೆ.ಎಸ್. ನರಸಿಂಹಸ್ವಾಮಿಯವರು ತಮ್ಮ ಒಂದು ಕವನ ಪ್ರಬುದ್ಧ ಕರ್ನಾಟಕದಲ್ಲ ಪ್ರಕಟವಾದಾಗ 'ನಾನೊಬ್ಬ ಕವಿಯಾದೆ' ಎಂದು ಉದ್ಗರಿಸಿದ್ದರಂತೆ (ಕಬ್ಬಿಗನ ಕೂಗು – ೧೯೪೨). ಕುವೆಂಪು ಅವರ 'ಬೆರಳ್‌ಗೆ ಕೊರಳ್', ಆನಂದರ ಕತೆಗಳು, ಮಾಸ್ತಿಯವರ ಬಹುತೇಕ ಕತೆಗಳು ಜನರನ್ನು ತಲುಪಿದ್ದು ಈ ಪತ್ರಿಕೆಯ ಮೂಲಕವೇ. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ಕೃತಿಯ ಹಲವು ಭಾಗ ಈ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ಕಾಣಬಹುದು. ಇಲ್ಲಿ ಪ್ರಕಟಗೊಂಡು ಬಳಿಕ ಪುಸ್ತಕರೂಪವನ್ನು ಪಡೆದ ಬರಹಗಳಿಗೆ ಲೆಕ್ಕವಿಲ್ಲ.

ಅಂಗುಲಿಮಾಲ (ಪ್ರಭುಶಂಕರ), ಚಂದ್ರಹಾಸ (ಕುವೆಂಪು), ವಸಂತ ಚಂದನ (ಪುತಿನ), ಆನಂದವರ್ಧನನ ಕಾವ್ಯಮೀಮಾಂಸೆ (ಸಂ:ಕೆ.ಕೃಷ್ಣಮೂರ್ತಿ), ಮಹಾಕಾವ್ಯ ಲಕ್ಷಣ (ಟಿ.ವಿ. ವೆಂಕಟಾಚಲಶಾಸ್ತ್ರಿ), ಹೊರೆಸನ ಸಾಹಿತ್ಯ ವಿಮರ್ಶೆ (ಎನ್. ಬಾಲಸುಬ್ರಹ್ಮಣ್ಯ) ಇತ್ಯಾದಿ.

ವೈಜ್ಞಾನಿಕ ಬರಹಗಳಾದ ಜಿ. ಹನುಮಂತರಾಯರ 'ವಿಜ್ಞಾನ', ಆರ್.ಎಲ್. ನರಸಿಂಹಯ್ಯನವರ 'ಜಗತ್ತುಗಳ ಹುಟ್ಟು ಸಾವು' ಮೊದಲು ಬಂದದ್ದು ಈ ಪತ್ರಿಕೆಯಲ್ಲೇ. ಯಾವುದೇ ಲೇಖನವಿರಲಿ ಪ್ರಕಟಿಸುವ ಮುಂಚೆ ಅದನ್ನು ಕೂಲಂಕುಶವಾಗಿ ಪರಿಶೀಲಿಸಲಾಗುತ್ತಿತ್ತು. ಉದಾಹರಣೆಗೆ, ಮಾಸ್ತಿಯವರ 'ಸುಬ್ಬಣ್ಣ' ಕಥೆ ಪ್ರಕಟವಾದಾಗ ಎ.ಆರ್.ಕೃಷ್ಣಸಾಸ್ತ್ರಿಗಳು ಅದರಲ್ಲಿನ ಒಂದು ವಾಕ್ಯವನ್ನು ಬದಲಿಸುವಂತೆ ಮಾಸ್ತಿಯವರಿಗೆ ಸೂಚಿಸಿದರಂತೆ. ತಿದ್ದುವುದಿಲ್ಲ ಎನ್ನುವುದು ಮಾಸ್ತಿಯವರ ಹಟ. ಕೊನೆಗೆ ಸಮಸ್ಯೆ ಇತ್ಯರ್ಥವಾಗಿ ಕಥೆ ಪ್ರಕಟವಾಗಲು ಆರು ತಿಂಗಳು ಹಿಡಿಯಿತು. ಕೃಷ್ಣಶಾಸ್ತ್ರಿಗಳೂ ತಮ್ಮ ಅಭಿಪ್ರಾಯವನ್ನು ಎಲ್ಲರ ಮೇಲೂ ಹೇರುತ್ತಿದ್ದರು ಎಂದರ್ಥವಲ್ಲ. ಅವರು ಚಿಕ್ಕವರ ಅಭಿಪ್ರಾಯಗಳಿಗೂ ಬೆಲೆ ನೀಡುತ್ತಿದ್ದರು. ಒಮ್ಮೆ ಕೃಷ್ಣಶಾಸ್ತ್ರಿಗಳು ತಮ್ಮ 'ಶ್ರಿಪತಿಯ ಕಥೆಗಳ'ನ್ನು ಪ್ರಕಟಿಸುವ ಮುನ್ನ ಅದು ತಮ್ಮ ಕಥೆ ಎಂದು ತಿಳಿಸದೆ ಅದನ್ನು ಆಗಷ್ಟೇ ಕಾಲೇಜಿನಲ್ಲಿ ಅಧ್ಯಾಪನ ಆರಂಭಿಸಿದ್ದ ಜಿ. ವೆಂಕಟಸುಬ್ಬಯ್ಯನವರ ಅವಗಾಹನೆಗೆ ತೋರಿಸಿದರು. ಅವರ ಅಭಿಪ್ರಾಯ ತಿಳಿದು ಅದು ಪ್ರಕಟಣೆಗೆ ಯೋಗ್ಯವೆಂದು ನಿರ್ಣಯವಾದ ಮೇಲೆಯೇ ಅದರ ಕರ್ತೃ ತಾವೆಂದು ಹೇಳಿಕೊಂಡರು ಹಾಗು ಪ್ರಕಟಿಸಿದರು. ಇದು ಅವರ ಸಂಕೋಚದ ಸ್ವಭಾವವನ್ನಷ್ಟೇ ತೋರಿಸದೇ ಚಿಕ್ಕವರಿಗೂ ಪರೋಕ್ಷವಾಗಿ ತರಬೇತಿ ನೀಡಿ ಹೊಸ ತಲೆಮಾರಿಗೆ ಸಿದ್ಧಗೊಳಿಸುತ್ತಿದ್ದ ಅವರ ಸ್ವಭಾವವನ್ನು ಪರಿಚಯಿಸುತ್ತದೆ.

ಪ್ರಬುದ್ಧ ಕರ್ನಾಟಕ ತನ್ನ ಐವತ್ತು ವರ್ಷಗಳ ಅವಧಿಯಲ್ಲಿ ಸುಮಾರು ಐನೂರ ಅರವತ್ತು ಲೇಖಕರ ಎರಡುಸಾವಿರದ ಐವತ್ತೊಂಬತ್ತು ಲೇಖನಗಳನ್ನು ಪ್ರಕಟಿಸಿದೆ. ಅದರಲ್ಲಿ ಐನೂರ ಇಪ್ಪತ್ತೆಂಟು ಸಾಹಿತ್ಯಿಕ ಲೇಖನಗಳು, ಎಂಟುನೂರ ಎಂಬತ್ತ ನಾಲ್ಕು ಕವಿತೆಗಳು, ಇನ್ನೂರ ನಲವತ್ತ ನಾಲ್ಕು ಕತೆಗಳು, ಎಂಟುನೂರ ಐವತ್ತಾರು ವಿಮರ್ಶೆಗಳು ಎಂದು ಅಂದಾಜಿಸಲಾಗಿದೆ. ಹೀಗೆ ನವೋದಯ ಕಾಲದಲ್ಲ ಕಾವ್ಯ, ವಿಮರ್ಶೆ, ನಾಟಕ, ಸಣ್ಣಕತೆ, ಎಲ್ಲ ಪ್ರಕಾರಗಳು ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಈ ಪತ್ರಿಕೆ ಕಾರಣವಾಗಿರುವುದು ಕಂಡು ಬರುತ್ತದೆ.

ಅಡಿಟಿಪ್ಪಣಿಗಳು

೧. ಪ್ರಬುದ್ಧ ಕರ್ನಾಟಕ ಬೆಳ್ಳಿ ಸಂಚಿಕೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೪೫, ಪುಟ ೩೦
೨. ದೇ.ಜವರೇಗೌಡ, ಪ್ರಧಾನ ಸಂಪಾದಕರು, ಪ್ರಬುದ್ಧ ಕರ್ನಾಟಕ, ಚಿನ್ನದ ಸಂಚಿಕೆ, ೧೯೬೯, ಪುಟ ೮
೩. ಆರತಿ ಎಚ್.ಎನ್., ಕನ್ನಡದಲ್ಲಿ ಸಂಶೋಧನಾ ಪತ್ರಿಕೆಗಳು, ಚಿತ್ರಗುಪ್ತ ಸ್ಮರಣೆ, ೧೯೯೫, ಪುಟ ೩೮೭
೪. ಎ. ಆರ್. ಕೃಷ್ಣಶಾಸ್ತ್ರಿ, ಪ್ರಬುದ್ಧ ಕರ್ನಾಟಕ, ಸಂಚಿಕೆ ೧, ಸಂಪುಟ ೧, ೧೯೧೯
೫. ಪ್ರಬುದ್ಧ ಕರ್ನಾಟಕ ಬೆಳ್ಳಿ ಸಂಚಿಕೆ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೧೯೪೫, ಪುಟ ೬
೬. ಮಾಸ್ತಿ, ನಮ್ಮ ಹೊಸಸಾಹಿತ್ಯದ ಅಶ್ವಿನಿ ದೇವತೆಗಳು, ಪ್ರಸಂಗ ೧, ಜೀವನ ಕಾರ್ಯಾಲಯ,
೭. ಹಾಮಾನಾ, ಸಾಹಿತ್ಯ ಸಲ್ಲಾಪ, ಕನ್ನಡಪ್ರಭ, ಮಾರ್ಚ್ ೧೯೬೯
೮. ಹಾಮಾನಾ,(ಸಂ), ಎ.ಆರ್.ಕೃ ವಿಶೇಷ ಸಂಚಿಕೆ, ಪ್ರಬುದ್ಧ ಕರ್ನಾಟಕ,
೯. ಡಾ.ವಿಜಯಶ್ರೀ ಕೆ. ಕನ್ನಡ ಪತ್ರಿಕೆಗಳು ಮತ್ತು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ, ೨೦೦೦. ಪುಟ ೨೦೫

೫.ಹೊಸಗನ್ನಡ ನವೋದಯ ವಿಮರ್ಶೆ ಹಾಗು ಪತ್ರಿಕೆಗಳು

ಕನ್ನಡದ ಹೊಸಸಾಹಿತ್ಯ ಇಂಗ್ಲಿಷ್ ಹಾಗು ಸಂಸ್ಕೃತಗಳಿಂದ ಹಿಂದೆಂದೂ ಇಲ್ಲದ ರೀತಿಯಲ್ಲಿ ಪ್ರಭಾವ ಪಡೆದಿದ್ದ ಕಾಲವದು. ವಿಮರ್ಶೆಯ ಮಾದರಿಗಳೂ ಆಗಷ್ಟೇ ಕನ್ನಡ ಜಗತ್ತಿಗೆ ಪರಿಚಯವಾಗುತ್ತಿದ್ದ ಆ ಕಾಲದಲ್ಲಿ ಹೊಸ ಸಾಹಿತ್ಯಕ್ಕೆ ಉತ್ತೇಜಕ ವಿಮರ್ಶೆಯ ಅಗತ್ಯವಿತ್ತು. ಈ ಕೆಲಸವನ್ನು ಅಂದಿನ ಪತ್ರಿಕೆಗಳು ಸಮರ್ಥವಾಗಿ ನಿರ್ವಹಿಸಿದವು. ಹಾಗೆಂದೊಡನೆ ಅದು ದೋಷವನ್ನೂ ಗುಣವೆಂದು ಪರಿಗಣಿಸುವ ಉದಾರ ವಿಮರ್ಶೆಯಲ್ಲ, ಹೊಸ ಸಾಹಿತ್ಯ ರಚನೆ ಮಾಡುವವರಿಗೆ ಮಾರ್ಗಸೂಚಿಗಳನ್ನು ಹಾಕಿಕೊಡುವಂಥ, ಹೊಸ ಸಾಧ್ಯತೆಗಳನ್ನು ತೋರಿಸುವಂತಹ ವಿಮರ್ಶೆಗಳಾಗಿದ್ದವು. ಅನ್ವಯ ವಿಮರ್ಶೆಯ ಪ್ರಥಮ ಪ್ರಯತ್ನಗಳನ್ನು ಆ ಕಾಲದಲ್ಲಿ ಕಾಣಬಹುದಾಗಿದೆ. ಈ ಕಾಲದ ವಿಮರ್ಶೆಯನ್ನು ಬಹುಮಟ್ಟಿಗೆ ವಿವರಣೆಯ ಮತ್ತು ಮೆಚ್ಚುಗೆಯ ವಿಮರ್ಶೆ ಎನ್ನಬಹುದು. ಪ್ರಬುದ್ಧ ಕರ್ನಾಟಕ, ಜಯಕರ್ಣಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಮುಂತಾದ ಪತ್ರಿಕೆಗಳು ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಗಳನ್ನು ಇಟ್ಟವು. ಆ ಕಾಲದ ವಿಮರ್ಶೆಗಳಲ್ಲಿ ಕಥೆ, ಕಾದಂಬರಿಯ ಕಥಾವಸ್ತು, ಪಾತ್ರನಿರೂಪಣೆ, ವರ್ಣನೆ ಮುಂತಾದ ಅಂಶಗಳನ್ನು ಹೆಚ್ಚು ಗಮನಿಸಲಾಗುತ್ತಿತ್ತು.[೧]

ಉದಾಹರಣೆಗೆ, ಬಂಕಿಮಚಂದ್ರರ 'ವಿಷವೃಕ್ಷ'ವನ್ನು 'ಪ್ರಬುದ್ಧ ಕರ್ನಾಟಕ'ದ ಕಾವ್ಯಾವಲೋಕನದಲ್ಲಿ[೨] ಈ ರೀತಿಯಾಗಿ ವಿಮರ್ಶಿಸಲಾಗಿದೆ

> "ಒಂದೊಂದು ಸಣ್ಣ ಅಂಶವೂ ಅನಾದೃಶವಾದ ಸಾಮರ್ಥ್ಯವನ್ನು ಗ್ರಂಥನ ಶ್ಲಾಘ್ಯತೆಯನ್ನು ವ್ಯಕ್ತಪಡಿಸುತ್ತದೆ. ಈ ಕಥೆ ನೈಸರ್ಗಿಕವಾಗಿದ್ದು ನಿಜತ್ವದ ಭ್ರಾಂತಿ ಮೂಡಿಸುತ್ತದೆ. ಆ ಪಾತ್ರಗಳು ಎಷ್ಟರ ಮಟ್ಟಿಗೆ ಜೀವಿತ ಮನುಷ್ಯರಂತೆ ನಡೆ ನುಡಿ ಸ್ವಭಾವಗಳನ್ನು ತೋರ್ಪಡಿಸುತ್ತವೆ ಎಂದರೆ ನಮ್ಮ ಕಷ್ಟದಲ್ಲಿ ತಾವು ಮರುಗುವಂತೆಯೂ, ಸುಖದಲ್ಲಿ ಹಿಗ್ಗುವಂತೆಯೂ ಮಾಡುತ್ತವೆ".

ಇದರರ್ಥ ಉತ್ತೇಜಕ ವಿಮರ್ಶೆಯ ಹೆಸರಿನಲ್ಲಿ ದೋಷಗಳಿಗೂ ಜಾಣಕುರುಡುತನ ತೋರಿಸುತ್ತಿದ್ದವು ಎಂದಲ್ಲ.

ನಂಜನಗೂಡು ತಿರುಮಲಮ್ಮನವರ 'ಪೂರ್ಣಕಲಾ' ಕಾದಂಬರಿಯನ್ನು ವಿಮರ್ಶಿಸುತ್ತ ಅದನ್ನು 'ನೈತಿಕ ಕಾದಂಬರಿ' ಎಂದು ಕರೆಯಲಾಗಿದೆ. "ಕಾದಂಬರಿಯಲ್ಲಿ ನೀತಿಬೋಧೆಯೇ

ಅಧಿಕವಾಗಿರುವುದರಿಂದ ನೀತಿಯು, ಕಾವ್ಯ ಸೌಂದರ್ಯಕ್ಕೂ ರಸಸ್ಫೂರ್ತಿಗೂ ಹಾನಿ ಮಾಡಿದೆ"[೩] ಎಂದು ನಿರ್ದಾಕ್ಷಿಣ್ಯವಾಗಿಯೇ ವಿಮರ್ಶಿಸಲಾಗಿದೆ.

ಅಂದಿನ ವಿಮರ್ಶಾ ಪ್ರಸ್ಥಾನದಲ್ಲಿ ಎಲ್.ಎಸ್. ಶೇಷಗಿರಿರಾಯರು ಗುರುತಿಸುವಂತೆ ಕೆಳಕಂಡ ಅಂಶಗಳನ್ನು ಗುರುತಿಸಬಹುದು:

೧. ಸೈದ್ಧಾಂತಿಕವಾಗಿ ಪ್ರತಿಪಾದಿಸುವಾಗ ಭಾರತೀಯ ಕಾವ್ಯ ಮೀಮಾಂಸೆಯನ್ನು ಆಧಾರವಾಗಿ ಇಟ್ಟುಕೊಂಡು ವಿಮರ್ಶೆ ಮಾಡಲಾಗಿದೆ.

೨. ಪ್ರಾಚೀನ ಭಾರತೀಯ ಕೃತಿಗಳ ವಿಮರ್ಶೆಯಲ್ಲಿ ಮಾತ್ರ ರಸಸಿದ್ಧಾಂತ ಮೊದಲಾದ ಪ್ರಾಚೀನ ತತ್ವಗಳನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ.

೩. ಸಮಕಾಲೀನ ಕನ್ನಡ ಕೃತಿಗಳ ವಿಮರ್ಶೆಯಲ್ಲಿ ಸಹೃದಯ ಮಾರ್ಗ, ಇಂಗ್ಲಿಷ್ ಸಾಹಿತ್ಯ ಮಾರ್ಗವನ್ನು ಬಳಸಿಕೊಳ್ಳಲಾಗಿದೆ.[೪]

ಈ ಹಿಂದೆಯೇ ಹೇಳಿದಂತೆ ವಿಮರ್ಶೆಯ ಭಾಷಾ ಮಾದರಿ ಆಗಿನ್ನೂ ಸಿದ್ಧವಾಗುತ್ತಿದ್ದ ಕಾಲ ಅಂದಿನ ಭಾಷಾ ಮಾದರಿಗೊಂದು ಉದಾಹರಣೆ ನೀಡುವುದಾದರೆ

> "ಸಾಹಿತ್ಯವು ಮನ್ಮಥನ ಹಸ್ತಗತವಾದ ಕುಸುಮಾಯುಧದಂತೆ ಮನೋಹರವಾದ ವಿಶ್ವವಿಜಯಿಯಾದ ಒಂದು ಆಯುಧ. ಇದನ್ನು ಗ್ರಂಥಕರ್ತರು ಸರಿಯಾಗಿ ಉಪಯೋಗಿಸಿದರೆ ಪರಿಣಾಮದಲ್ಲಿ ನಿರ್ಘೃಣವಾದ ಕತ್ತಿಯನ್ನು ಹಿರಿದು ಮಾಡುವ ಯುದ್ಧಕ್ಕಿಂತ ಹೆಚ್ಚು ಉಪಯೋಗವು, ಮಂಗಳವು ಆಗಬಹುದು. ಇದಕ್ಕಾಗಿ ಸಾಹಿತ್ಯ ಸಮಸ್ತ ಭೋಗೈಶ್ವರ್ಯಗಳಿಗಿಂತಲೂ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬಹುದು".[೫]

ಮುಂದೆ ವಿಮರ್ಶೆಯ ಭಾಷೆ ವಿಕಾಸ ಹೊಂದಿ ಮಾಸ್ತಿ, ಬೆಟಗೇರಿ ಕೃಷ್ಣಶರ್ಮ, ಎಂ.ಆರ್.ಶ್ರೀನಿವಾಸ ಮೂರ್ತಿ, ಸೇಡಿಯಾಪು ಮೊದಲಾದವರ ಲೇಖನಿಗಳಲ್ಲಿ ಸರಳವೂ ಸ್ಫುಟವೂ ಆಗಿರುವುದನ್ನು ಅಂದಿನ ಪತ್ರಿಕೆಗಳಲ್ಲಿ ಕಾಣಬಹುದಾಗಿದೆ.

ಇಂಗ್ಲಿಷ್ ಸಾಹಿತ್ಯದ ಜೊತೆಗೆ ವಿಜ್ಞಾನದ ಪ್ರಭಾವವನ್ನು ಸಹ ಈ ಯುಗದಲ್ಲಿ ಲೇಖಕರಲ್ಲಿ ಕಾಣಬಹುದಾಗಿದೆ. ಪ್ರಬುದ್ಧ ಕರ್ನಾಟಕದ ಮೊದಲ ಸಂಚಿಕೆಯಲ್ಲಿ "ನಮ್ಮ ಮನಸ್ಸಿಗೆ ಆಹ್ಲಾದ ಉಂಟಾಗಬೇಕು ಎಂಬುದೇ ಕಾವ್ಯದ ಓದಿನ ಮುಖ್ಯ ಉದ್ದೇಶ. ವಿಜ್ಞಾನ ಬೋಧಿಸುವಂತೆ ವಸ್ತುಗಳ ಸ್ವರೂಪ ಲಕ್ಷಣಗಳನ್ನು ತಿಳಿದುಕೊಳ್ಳುವುದಲ್ಲ" ಎಂಬ ಮಾತಿದೆ. ಆದರೆ ವಸ್ತುವಿನ ನಿಜಸ್ಥಿತಿಗೆ ವಿರುದ್ಧವಾದ ಸಂಗತಿಗಳನ್ನು ಯಾವ ಶ್ರೇಷ್ಠ ಕಾವ್ಯವೂ ಹೇಳುವುದಿಲ್ಲ ಎಂಬ ವಿವೇಕವೂ ಅಂದಿನ ವಿಮರ್ಶಾ ಪ್ರಸ್ಥಾನಕ್ಕಿತ್ತು. ಇದಕ್ಕೆ ಕುವೆಂಪು ಅವರ 'ನಿಯತಿಕೃತ ನಿಯಮರಾಹಿತ್ಯ'ದಂತಹ ಕಾವ್ಯಮೀಮಾಂಸೆಯ ಲೇಖನಗಳೇ ಸಾಕ್ಷಿ. ಈ ಬಗೆಯ ಲೇಖನಗಳು ಮೊದಲು ಪ್ರಕಟವಾದದ್ದು 'ಪ್ರಬುದ್ಧ ಕರ್ನಾಟಕ'ದಲ್ಲಿ

ಕನ್ನಡ ಮೂಲೆಗುಂಪಾಗಿದ್ದ ಆ ಕಾಲದಲ್ಲಿ ಯಾವ ಧನಸಹಾಯವೂ ಇಲ್ಲದೆ ಕೃಷ್ಣಶಾಸ್ತ್ರಿ ಮೊದಲಾದವರು ಪ್ರಬುದ್ಧ ಕರ್ನಾಟಕದಂತಹ ಪತ್ರಿಕೆಯನ್ನು ಪ್ರಕಟಿಸುವ ಆಲೋಚನೆ ಅಪೂರ್ವವಾದುದು. ಕನ್ನಡದ ಪುಣ್ಯವೆಂಬಂತೆ ಕೃಷ್ಣಶಾಸ್ತ್ರಿಗಳಿಗೆ ವಿದ್ಯಾರ್ಥಿಗಳ ಬೆಂಬಲ ದೊರೆಯಿತು. ಜೊತೆಗೆ ವಿದ್ಯಾರ್ಥಿಗಳಿಗೂ ಪ್ರಬುದ್ಧ ಕರ್ನಾಟಕದಂತಹ ಪತ್ರಿಕೆಯಿಂದ ತಮ್ಮ ಪ್ರತಿಭೆ ಬೆಳಕಿಗೆ ಬರಲು ಅವಕಾಶ ಒದಗಿದಂತಾಯಿತು. ಅಂತಹ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಸಿ.ಕೆ. ವೆಂಕಟರಾಮಯ್ಯನವರ

ಕಾದಂಬರಿ 'ಸಂಯುಕ್ತಾಪಹರಣ' ಪ್ರಬುದ್ಧ ಕರ್ನಾಟಕದಲ್ಲಿ ಮೊದಲ ಸಂಚಿಕೆಯಲ್ಲೇ ಪ್ರಕಟವಾಗಿದೆ. ಅದರ ಒಂಬತ್ತು ಪ್ರಕರಣಗಳನ್ನು ಇದೇ ಪತ್ರಿಕೆ ಮುದ್ರಿಸಿದೆ. ಗ್ರಂಥ ಇನ್ನೂ ವಿಸ್ತಾರವಾಗುವ ಭಯದಿಂದ ಅದನ್ನು ಅಲ್ಲಿಗೇ ನಿಲ್ಲಿಸಲಾಯಿತು ಎಂದು ಸಂಪಾದಕರಾದ ಕೃಷ್ಣಶಾಸ್ತ್ರಿಗಳು ಬರೆದಿದ್ದಾರೆ. ಜೊತೆಗೆ 'ನಳಚರಿತ್ರೆ' ಬಗ್ಗೆ ಒಂದು ವಿಸ್ತಾರವಾದ ವಿಮರ್ಶೆಯನ್ನೂ ಬರೆದಿದ್ದಾರೆ.

ಇಂಗ್ಲಿಷ್ ಕಾವ್ಯ ಮತ್ತು ವಿಮರ್ಶೆಗಳ ಪ್ರಭಾವದ ಹಿನ್ನೆಲೆಯಲ್ಲಿ ಪ್ರಾಚೀನ ಕಾವ್ಯಗಳನ್ನು ಮರುಪರಿಶೀಲಿಸುವ ಪರಿಪಾಟ ಬಂದಿತು. ಅಂದರೆ ಹಿಂದಿನ ಸಾಹಿತ್ಯವನ್ನು ತುಲನಾತ್ಮಕವಾಗಿ ವಿಮರ್ಶಿಸುವ ರೀತಿ ಪ್ರಾರಂಭವಾಯಿತು. ಟಿ.ಎಸ್. ವೆಂಕಣ್ಣಯ್ಯ, ತೀನಂಶ್ರೀ, ಬೇಂದ್ರೆ, ಗೋವಿಂದ ಪೈ, ಎ.ಆರ್. ಕೃಷ್ಣಶಾಸ್ತ್ರಿ, ಎಸ್.ವಿ. ರಂಗಣ್ಣ, ಕುವೆಂಪು ಮೊದಲಾದವರು ಈ ದಿಕ್ಕಿನಲ್ಲಿ ಸಾಕಷ್ಟು ಪರಿಶೋಧನೆಗಳನ್ನು ಮಾಡಿದ್ದಾರೆ. ಅಂತಹ ಲೇಖನಗಳು 'ಪ್ರಬುದ್ಧ ಕರ್ನಾಟಕ', 'ಜಯಕರ್ನಾಟಕ', 'ಪರಿಷತ್ಪತ್ರಿಕೆ', 'ಕನ್ನಡನುಡಿ', 'ಜಯಂತಿ', 'ಜೀವನ' ಮೊದಲಾದ ಪತ್ರಿಕೆಗಳಲ್ಲಿ ಬೆಳಕಿಗೆ ಬಂದಿವೆ. ಛಂದಸ್ಸಿನ ಬಗ್ಗೆ ಮೇವುಂಡಿ ಮಲ್ಲಾರಿಯವರು ಜಯಕರ್ನಾಟಕಕ್ಕೆ ಬರೆದ ಲೇಖನಗಳು, ತೀನಂಶ್ರೀ ಲೇಖನಗಳು ಗೋವಿಂದ ಪೈ ಅವರು ಪರಿಷತ್ಪತ್ರಿಕೆಯಲ್ಲಿ ಬರೆದ ಲೇಖನಗಳು ಕನ್ನಡದಲ್ಲಾಗಿರುವ ಕೆಲಸಗಳನ್ನು ಸ್ವಲ್ಪಮಟ್ಟಿಗೆ ತೋರುತ್ತವೆ. ನವೋದಯ ಸಂದರ್ಭದಲ್ಲಿ ವಿಮರ್ಶೆಯ ಸ್ಥಿತಿಗತಿ ಹೇಗಿತ್ತೆಂಬುದು ಕುವೆಂಪು ಅವರ ಒಂದು ಲೇಖನ ಸ್ಪಷ್ಟಪಡಿಸುತ್ತದೆ:

> "ಕನ್ನಡ ಸಾಹಿತ್ಯ ನವೋದಯ ತನ್ನ ಹಲವು ಶಾಖೆಗಳಲ್ಲಿ ಚಿಗುರಿ ಬೆಳೆದು ಮುಂಬರಿಯುತ್ತಿದೆ. ಆದರೆ ಕಾವ್ಯ ಮೀಮಾಂಸೆಯ ಮತ್ತು ಸಾಹಿತ್ಯವಿಮರ್ಶೆಯ ಶಾಖೆಗಳು ಅಲ್ಲಲ್ಲಿ ಕಣ್ಣೊಡೆದಂತೆ ತೋರಿದರೂ ಒಟ್ಟಿನಲ್ಲಿ ಬದಲಾಗಿಯೇ ತೋರುತ್ತಿದೆ. ಅದರಲ್ಲಿಯೂ ಸಾಹಿತ್ಯ ವಿಮರ್ಶೆಯ ಭಾಗಕ್ಕಿಂತ ಕಾವ್ಯಮೀಮಾಂಸೆಯ ಭಾಗ ತುಂಬ ರಿಕ್ತ ಸ್ಥಿತಿಯಲ್ಲಿದೆ".[5]

ಹಾಗೆಯೆ ಕಾವ್ಯ ಮೀಮಾಂಸೆ ಸಂಸ್ಕೃತದ ನೆರಳಿನಿಂದ ಹೊರ ಬರಬೇಕಾಗಿರುವ ಬಗ್ಗೆ ಕುವೆಂಪು

> "ಇದುವರೆಗೆ ಕನ್ನಡ ಸಾಹಿತ್ಯದಲ್ಲಿ ಮಾಡಿರುವ ಕಾವ್ಯ ಮೀಮಾಂಸೆ ಏನಿದ್ದರೂ ಅದೆಲ್ಲ ಸಂಸ್ಕೃತದ ಪಡಿನೆಳಲಿನಂತಿದೆ.. ನಮ್ಮ ಮುಂದಿನ ಕಾವ್ಯ ಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಗಳು ಪಾಶ್ಚಾತ್ಯ ಮತ್ತು ಭಾರತೀಯ ಕಾವ್ಯಮೀಮಾಂಸೆಗಳಿಂದ ಮಾತ್ರವಲ್ಲದೆ ತತ್ವಶಾಸ್ತ್ರ, ಯೋಗವಿಜ್ಞಾನ, ಸೌಂದರ್ಯ ಮೀಮಾಂಸೆ ಮತ್ತು ಮನಃಶಾಸ್ತ್ರಗಳಿಂದಲೂ ಬಳಸು ಪಡೆದು ಧೀರವಾಗಿ ಸ್ವತಂತ್ರವಾಗಿ ಪೂರ್ಣದೃಷ್ಟಿಯ ಕಡೆಗೆ ಮುನ್ನುಗ್ಗಬೇಕಾಗುತ್ತದೆ".[6]

ಡಿವಿಜಿಯವರ ಜೀವನಸೌಂದರ್ಯ ಮತ್ತು ಸಾಹಿತ್ಯದಲ್ಲಿ ಕಾವ್ಯವಿಮರ್ಶೆಯ ಬಗ್ಗೆ ಹೇಳುತ್ತ "ಕಾವ್ಯ ಸೌಂದರ್ಯ ದರ್ಶನವು ರಸಾನುಭವವೂ ವೈಯಕ್ತಿಕ ಸಾಕ್ಷ್ಯವುಳ್ಳದ್ದು. ಅದು ಪ್ರತಿ ಮನುಷ್ಯನಿಗೂ ಅವನ ಮನೋಧರ್ಮ ಸಂಸ್ಕಾರಗಳಿಗೆ ಅನುಗುಣವಾಗಿರುತ್ತದೆ" ಎಂದಿದ್ದಾರೆ. ಹಾಗೆಯೆ ಕಾವ್ಯದ ಆಂತರಿಕ ಸ್ವರೂಪ ಹೇಗಿರಬೇಕು ಎನ್ನುವುದಕ್ಕೆ ಡಿವಿಜಿ ಕೇವಲ ಬುದ್ಧಿ ಕಾರ್ಯವು ಶಾಸ್ತ್ರವೆನಿಸುವುದು. ಬುದ್ಧಿಯ ಸ್ಪರ್ಶವೇ ಇಲ್ಲದ ಶಬ್ದೋದ್ಗಾರವು ಅಸಂಬದ್ಧ ಪ್ರಲಾಪ ಎನಿಸುವುದು. ಒಳ್ಳೆಯ ಕಾವ್ಯದಲ್ಲಿ ಮನೋಬುದ್ಧಿಗಳೆರಡೂ ಬಟ್ಟೆಯ ಹಾಸು ಹೊಕ್ಕುಗಳಂತೆ ಒಂದಾಗಿ ಸೇರಿರುತ್ತವೆ..ಹೀಗಿರತಕ್ಕವಳು ಕಾವ್ಯದೇವಿ. ಮೇಲೆ ಅಲಂಕಾರ ಒಯ್ಯಾರ, ಒಳಗೆ ಚಿಂತೆ, ಪ್ರಜ್ಞೆ, ಶಮೆ ಎಂದಿದ್ದಾರೆ. ಸಾಹಿತ್ಯವು

ಜೀವನಕ್ಕೆ ಕನ್ನಡಿಯಾಗಿರುತ್ತದೆ. ಕಾವ್ಯವು ಜೀವನದ ಮುಖ್ಯ ಲಕ್ಷಣಗಳನ್ನು ಪ್ರತಿಬಿಂಬಿಸತಕ್ಕದ್ದಾಗಿದೆ. ಒಳ್ಳೆಯ ಸಜೀವ ಕಾವ್ಯಗಳು ಹುಟ್ಟಬೇಕಾದರೆ ಅವುಗಳನ್ನು ಬರೆಯುವವರ ಸುತ್ತಮುತ್ತ ಹೊಸ ಭಾವನೆಗಳ ಪರಸ್ಪರ ಸಂಘರ್ಷಣೆ ಇರಬೇಕು.[೭]

೧೯೪೨ರ ಅನಂತರದ 'ಪ್ರಬುದ್ಧ ಕರ್ನಾಟಕ'ದ ಸಂಚಿಕೆಗಳಲ್ಲಿ ಕಾವ್ಯಮೀಮಾಂಸೆಯ ಕುರಿತಂತೆ ಹಲವಾರು ಲೇಖನಗಳೂ ಪ್ರಕಟವಾಗಿದೆ. ಅದರಲ್ಲಿ ಜನಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯವೇ ಉತ್ತಮ ಸಾಹಿತ್ಯ ಎಂಬ ವಿಚಾರ ಗಮನಾರ್ಹವಾದುದಾಗಿದೆ. ೧೯೪೫ರಲ್ಲಿ ಮದ್ರಾಸ್ ಬಾನುಲಿ ಕೇಂದ್ರದವರು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಬೇಂದ್ರೆ, ರಾಶಿ, ಕೈಲಾಸಂ, ಜಿ.ಪಿ.ರಾಜರತ್ನಂ, ಮಾಸ್ತಿ, ನಾ. ಕಸ್ತೂರಿ, ವಿ.ಸೀತಾರಾಮಯ್ಯ, ಸಿ.ಕೆ. ವೆಂಕಟರಾಮಯ್ಯ, ಚಕ್ರವರ್ತಿ ರಾಜಗೋಪಾಲಾಚಾರ್ ಭಾಗವಹಿಸಿದ್ದರು. ಈ ವಿಚಾರ ಸಂಕಿರಣದಲ್ಲಿ ಚರ್ಚಿತವಾದ ಸಂಗತಿಗಳು ಪ್ರಬುದ್ಧ ಕರ್ನಾಟಕದಲ್ಲಿ ಒಂದು ಲೇಖನಮಾಲೆಯಾಗಿ ಪ್ರಕಟವಾಯಿತು.[೮] ಈ ಚರ್ಚೆಯಲ್ಲಿ ಪ್ರಧಾನವಾಗಿ ಇಂಗ್ಲಿಷಿನಲ್ಲಿ 'literature is the reflection of life' ಎಂಬ ಪ್ರಸಿದ್ಧ ನಾಣ್ಣುಡಿಯಿದೆ. ಪ್ರತಿಬಿಂಬ ಎಂಬ ಮಾತು ಇಂಗ್ಲಿಷ್‌ನ reflection ಎಂಬ ಏನೆಲ್ಲ ಸೂಚಿಸುತ್ತದೆಯೋ ಅದನ್ನೆಲ್ಲ ಸೂಚಿಸುವಷ್ಟು ಸಮರ್ಥವಾಗಿಲ್ಲ ಹಾಗು ಜೀವನವನ್ನು ಪ್ರತಿಬಿಂಬಿಸಲು ಸಾಹಿತ್ಯ ಒಂದು ನಿರ್ಜೀವ ಕನ್ನಡಿಯಲ್ಲ ಎಂಬ ನೆಲೆಗೆ ಬಂದು ಈ ಗಂಭೀರ ಚರ್ಚೆ ಬಂದು ತಲುಪಿತು.

ಸುಜನಾ ಅವರು ತಮ್ಮ ವಿಮರ್ಶಾ ಲೇಖನಗಳಲ್ಲಿ ಕವಿಕರ್ಮದ ಬಗ್ಗೆ ವಿಶಿಷ್ಟ ಒಳನೋಟಗಳನ್ನು ನೀಡುತ್ತಾರೆ[೯]:

> "ಆಗಂತುಕ ಪ್ರಜ್ಞೆ ಎಂದರೆ ಪರಿಚಿತತೆಯಲ್ಲಿ ಅಪೂರ್ವತೆಯನ್ನು ಕಾಣುವ, ವಿಸ್ಮಯತೆಯನ್ನು ಉಂಟುಮಾಡುವ ಅಥವ ಪಡೆಯುವ ಶಕ್ತಿ. ಕವಿಯಲ್ಲಿ ಈ ಆಗಂತುಕ ಪ್ರಜ್ಞೆ ಇರುವುದರಿಂದಲೇ ಅವನಿಗೆ ವಸ್ತುವಿನಲ್ಲಿ ಲೌಕಿಕ ಅನುಭವಕ್ಕಿಂತ ಮಿಗಿಲಾದ ರಸಾನುಭವ ಉಂಟಾಗುತ್ತದೆ. ಕವಿ ವ್ಯಕ್ತಿ ನಿಕೇತನದಿಂದ ಅನಿಕೇತನಗೊಳಿಸಿಕೊಂಡು ಅನ್ಯಜೀವ ನಿಕೇತನ ನಾಗಬೇಕಾಗುತ್ತದೆ, ಅನ್ಯಭಾವ ನಿಕೇತನನಾಗಬೇಕಾಗುತ್ತದೆ. ಎಷ್ಟರ ಮಟ್ಟಿಗೆ ತಮ್ಮನ್ನು ತಾವು ತಮ್ಮಿಂದ ಬೇರಾಗಿಸಿಕೊಂಡು ಬೇರೆಯವರಲ್ಲಿ ಒಂದಾಗುವ ಶಕ್ತಿ ಕವಿಗಳಿಗಿದೆಯೋ ಅಷ್ಟು ಅನಿಕೇತನ ಪ್ರಜ್ಞೆ ಅವರಲ್ಲಿದೆ ಎಂದು ಒಪ್ಪಬೇಕು".

ಕೀಟ್ಸ್, ಟಿ.ಎಸ್. ಎಲಿಯೆಟ್, ಸ್ಟೀಫನ್ ಸ್ಪೆಂಡರ್, ಅಭಿನವಗುಪ್ತ, ಪುತಿನ, ಕುವೆಂಪು ಇವರೆಲ್ಲರ ಚಿಂತನೆಯ ಒಟ್ಟು ಸಾರ ಈ ಲೇಖನ ಎನ್ನಬಹುದು. ಹೀಗೆ ಅತ್ಯಂತ ಶ್ರೇಷ್ಠ ವಿದ್ವಾಂಸರ ಗಂಭೀರವಾದ ಚಿಂತನೆಗಳು ಅತ್ಯಂತ ಸುಲಭವಾಗಿ, ಸರಳವಾಗಿ ವಿದ್ಯಾರ್ಥಿಗಳ ಹಾಗು ಸಾಹಿತ್ಯಾಸಕ್ತರ ತನಕ ತಲುಪಲು 'ಪ್ರಬುದ್ಧ ಕರ್ನಾಟಕ'ದಂತಹ ಪತ್ರಿಕೆಗಳು ಶ್ರಮಿಸಿವೆ. ಕಾವ್ಯಮೀಮಾಂಸೆಯ ಕುರಿತಾದ ಮತ್ತೊಂದು ಲೇಖನ ನಿರಂಜನರ 'ಬೆಲ್ಸಿಂಕಿಯ ಕಾವ್ಯಮೀಮಾಂಸೆ'.[೧೦] ಇದು ೧೮೧೧ರಿಂದ ೧೮೪೮ರ ವರೆಗೆ ಬದುಕಿದ್ದ ರಷ್ಯಾ ಸಾಹಿತಿ ಬೆಲ್ಸಿಂಕಿಯ ಕಾವ್ಯಮೀಮಾಂಸೆಗೆ ಸಂಬಂಧಿಸಿದ ವಿಚಾರಗಳ ಕುರಿತಾದದ್ದು. ವಾಸ್ತವವಾದಿಯಾಗಿದ್ದ ಬೆಲ್ಸಿಂಕಿಯದು 'ಬದುಕಿಗಾಗಿ ಕಲೆ' ಎಂಬ ದೃಷ್ಟಿ. 'ವಾಸ್ತವ ಮತ್ತು ನೈಜ ವಿಚಾರಗಳ ಕಲೆಯೇ ಕಾವ್ಯ, ಸಲ್ಲದ ಭಾವವೈಪರೀತ್ಯವಲ್ಲ' ಎಂಬುದು ಈ ಲೇಖನದ ಸಾರ. 'Rasa, its meaning and scope' ಎಂಬ ಗೋಕಾಕರ ಲೇಖನದ ಅನುವಾದ 'ರಸ ಹಾಗು ಅದರ ವ್ಯಾಪ್ತಿ' ಎಂಬ ರಾಜಪುರೋಹಿತರ ಲೇಖನದಲ್ಲಿ ರಸವನ್ನು ಮನಃಶಾಸ್ತ್ರೀಯ ನೆಲೆಯಲ್ಲಿ ವಿವೇಚಿಸಲಾಗಿದೆ.[೧೧]

ನರಹಳ್ಳಿ ಬಾಲಸುಬ್ರಮಣ್ಯ 'ರುದ್ರಸಾಹಿತ್ಯದಲ್ಲಿ ಆನಂದಸ್ವಾದ' ಎಂಬ ಲೇಖನ ಭಾರತೀಯ ರಸತತ್ವದ ಹಿನ್ನೆಲೆಯಲ್ಲಿ ಅರಿಸ್ಟಾಟಲಿನ ಕಾವ್ಯತತ್ವವನ್ನು ಪ್ರೌಢವಾದ ರೀತಿಯಲ್ಲಿ ವಿವೇಚಿಸಿದ್ದಾರೆ.[೧೨] ೧೯೬೬ರಲ್ಲಿ ಪ್ರಕಟವಾದ ಟಿ.ವಿ. ವೆಂಕಟಾಚಲಶಾಸ್ತ್ರಿಯವರ 'ಮಹಾಕಾವ್ಯ ಲಕ್ಷಣ' ಎಂಬ ಲೇಖನ.[೧೩] ಸಂಸ್ಕೃತ ಕನ್ನಡ ಆಲಂಕಾರಿಕ ಗ್ರಂಥಗಳಲ್ಲಿ ಬಂದಿರುವ ಮಹಾಕಾವ್ಯ ಲಕ್ಷಣಗಳನ್ನು ಕುರಿತ ವಿವರವಾದ ವಿಷಯ ಸಂಗ್ರಹದ ಶಾಸ್ತ್ರೀಯ ನಿರೂಪಣೆಯಾಗಿದೆ. ಒಂದೊಂದು ಲಕ್ಷಣಕ್ಕೂ ಶಾಸ್ತ್ರಿಗಳು ತಮ್ಮದೇ ಆದ ವ್ಯಾಖ್ಯಾನವನ್ನು ಬರೆದಿದ್ದಾರೆ. ಶ್ರಮ, ಸಾಹಸ ತಾಳ್ಮೆಗಳ ಪ್ರತೀಕದಂತಿರುವ ಈ ಲೇಖನ ಮಹಾಕಾವ್ಯವನ್ನು ಕುರಿತು ಅಭ್ಯಾಸ ಮಾಡತಕ್ಕವರು ಅಗತ್ಯವಾಗಿ ನೋಡಬೇಕಾದದ್ದಾಗಿದೆ ಎನ್ನುತ್ತಾರೆ ಜಿ.ಎಸ್.ಶಿವರುದ್ರಪ್ಪನವರು.[೧೪]

ಇಗ್ರಾಂ ಬೈವಾಟರ್ ಅವರ ಗ್ರೀಕ್ ಮೂಲದ 'ಅರಿಸ್ಟಾಟಲನ ಕಾವ್ಯಮೀಮಾಂಸೆ'ಯನ್ನು ಎನ್.ಬಾಲಸುಬ್ರಹ್ಮಣ್ಯಂರವರು ಅನುವಾದ ಮಾಡಿದ್ದಾರೆ.[೧೫] ಇಲ್ಲಿ ಲೇಖಕರು ಭಾರತೀಯ ಕಾವ್ಯ ಸಿದ್ಧಾಂತಕ್ಕೂ, ಅರಿಸ್ಟಾಟಲನ ಕಾವ್ಯಸಿದ್ಧಾಂತಕ್ಕೂ ಇರುವ ಸಾಮ್ಯತೆಯನ್ನು ಸ್ಥೂಲವಾಗಿ ಚಿತ್ರಿಸಿದ್ದಾರೆ. ಇಂತಹ ಕಾವ್ಯಮೀಮಾಂಸೆಯ ತೌಲನಿಕ ಅಧ್ಯಯನಗಳು ತುಂಬ ಉಪಯುಕ್ತವಾಗಿದೆ. "ಭಾರತೀಯ ಕಾವ್ಯಮೀಮಾಂಸೆಗೆ ಭರತನು ಹೇಗೋ ಗ್ರೀಕ್ ಕಾವ್ಯಮೀಮಾಂಸೆಗೆ ಅರಿಸ್ಟಾಟಲ್ ಹಾಗೆ. ಇಂತಹ ಕೃತಿಯನ್ನು ಸುಬ್ರಹ್ಮಣ್ಯರು ಅನುವಾದಿಸಿರುವ ರೀತಿ ಅತ್ಯಂತ ಖಚಿತವೂ ನಿರ್ದಿಷ್ಟವೂ ಆಗಿ ಮೂಲಕೃತಿಯ ಅಭಿಪ್ರಾಯ ಏನೆಂದು ತಿಳಿಸುತ್ತದೆ. ಬರವಣಿಗೆಯ ಶೈಲಿ ಸಂಸ್ಕೃತ, ಇಂಗ್ಲಿಷ್ ಮತ್ತು ಗ್ರೀಕ್ ಸಂಸ್ಕಾರದಿಂದಾಗಿ ಪಾರಿಭಾಷಿಕವಾಗಿ ಶಾಸ್ತ್ರೀಯ ಶೈಲಿಯ ಸಮರ್ಪಕವಾದ ಒಂದು ನಿದರ್ಶನದಂತಿದೆ.[೧೬] ಹಾಗೆಯೇ ಹೊರೆಸನ ಸಾಹಿತ್ಯವಿಮರ್ಶೆ ಕುರಿತ ಬಾಲಸುಬ್ರಹ್ಮಣ್ಯರವರ ಅನುವಾದ ಲೇಖನವನ್ನು ಪ್ರಬುದ್ಧ ಕರ್ನಾಟಕದಲ್ಲಿ ಕಾಣಬಹುದಾಗಿದೆ.[೧೭]

Inspiration ಎಂದರೇನು? ಸ್ಫೂರ್ತಿಗೂ ಪ್ರತಿಭೆಗೂ ಸಂಬಂಧವೇನು? ವ್ಯತ್ಯಾಸಗಳೇನು? ಭಾವಗೀತೆ ಹ್ರಸ್ವವಾಗಿರಬೇಕು ಎಂಬ ಅಂಗೀಕೃತ ಸಿದ್ಧಾಂತದೊಂದಿಗೆ ಸ್ಫೂರ್ತಿಯ ಸಂಬಂಧವೇನು? ಭಾರತೀಯ ರಸಾವೇಶದ ಕಲ್ಪನೆಗೂ ಪಾಶ್ಚಾತ್ಯ ಸ್ಫೂರ್ತಿತತ್ವಕ್ಕೂ ಸಂಬಂಧವೇನು? ಇತ್ಯಾದಿ ವಿಷಯಗಳ ಬಗ್ಗೆ ಜಿ.ಎಸ್.ಶಿವರುದ್ರಪ್ಪ 'ಸ್ಫೂರ್ತಿ' ಎಂಬ ಪ್ರಬಂಧದಲ್ಲಿ ವಿವೇಚಿಸಿದ್ದಾರೆ[೧೮]

ಪ್ರಬುದ್ಧ ಕರ್ನಾಟಕದ ಎಲ್ಲ ಅನುವಾದಿತ ಲೇಖನಗಳನ್ನು ಗಮನಿಸಿದಾಗ ಕನ್ನಡಕ್ಕೆ ಹಲವಾರು ಕಡೆಯಿಂದ, ಹಲವು ಭಾಷೆಗಳಿಂದ ಕಾವ್ಯಮೀಮಾಂಸೆಯ ವಿಚಾರಗಳು ಬಂದಿರುವುದು ತಿಳಿಯುತ್ತದೆ. ಪ್ರಬುದ್ಧ ಕರ್ನಾಟಕದ 'ಅರಿಸ್ಟಾಟಲಿನ ಕಾವ್ಯವಿಮರ್ಶೆಯ ಪರಿಚಯ', ಶ್ರೀರಂಗರ 'ನಗೆ', ಎಸ್.ವಿ. ಪರಮೇಶ್ವರ ಭಟ್ಟರ 'ಭಾವಗೀತೆ', ತಿಪ್ಪೇರುದ್ರಸ್ವಾಮಿಯವರ ಹಲವು ಲೇಖನಗಳು ಪಾಶ್ಚಾತ್ಯ ವಿಮರ್ಶೆಯ ರೀತಿಯನ್ನು ಕಾವ್ಯ ಸಿದ್ಧಾಂತಗಳನ್ನು ಕನ್ನಡಕ್ಕೆ ಪರಿಚಯಿಸಿ ಕೊಡುವ ಪ್ರಯತ್ನಗಳಾಗಿವೆ. ಕುವೆಂಪು ಅವರ ಪ್ರಸಿದ್ಧ ಲೇಖನ 'ಭಾಷೆ: ಲೋಕೋಪಯೋಗಿ ಮತ್ತು ಭಾವೋಪಯೋಗಿ' ಭಾಷಾ ಬಳಕೆಯ ಸ್ವರೂಪ ಹಾಗು ಪರಿಣಾಮಗಳ ಕುರಿತು ಬೆಳಕು ಚೆಲ್ಲುತ್ತದೆ.[೧೯] ಇಲ್ಲಿ ಕುವೆಂಪು ಐ.ಎ. ರಿಚರ್ಡ್ಸ್ ಮೊದಲಾದ ಪಶ್ಚಿಮದ ಚಿಂತಕರ ವಿಚಾರಗಳನ್ನು ಕನ್ನಡಕ್ಕೆ ಅತ್ಯಂತ ಸಮರ್ಪಕವಾಗಿ ಪರಿಚಯಿಸುತ್ತಾರೆ. ಪಶ್ಚಿಮದ ಚಿಂತನೆಗಳು ಭಾರತೀಯ ಕಾವ್ಯಮೀಮಾಂಸೆಗೆ ಎಂದು ಪರಿಚಯವಿಲ್ಲದ ಅಪರೂಪದ ವಿಚಾರಗಳಾಗಿವೆ ಎಂಬ ಭ್ರಾಂತಿಯನ್ನು ಕಳೆದು ಭಾರತೀಯ ಕಾವ್ಯಮೀಮಾಂಸೆಯು ಪಶ್ಚಿಮದ ರೀತಿಯಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಚಿಂತಿಸಿತ್ತು ಎಂಬ ಆತ್ಮಪ್ರತ್ಯಯದ ನಿಲುವಿನಿಂದ ನಿರೂಪಿಸುತ್ತಾರೆ.

ಅದಕ್ಕಾಗಿ ಕನ್ನಡದ ಹಳೆಯ ಕಾವ್ಯಗಳನ್ನು ತೌಲನಿಕ ವಿವೇಚನೆಯ ಸಂದರ್ಭಗಳಲ್ಲಿ ಉಲ್ಲೇಖಿಸುತ್ತಾರೆ. ಹೀಗೆ ಪ್ರಬುದ್ಧ ಕರ್ನಾಟಕವು ಸಾಹಿತ್ಯ ವಿಮರ್ಶೆ, ಸಂಶೋಧನೆಗಳಲ್ಲಿ ದೊಡ್ಡ ಆದರ್ಶಗಳನ್ನು ಪಾಲಿಸಿಕೊಂಡು ಬಂದಿತೇ ಹೊರತು ಅದು ಯಾವತ್ತು ಪಂಥ, ಗುಂಪುಗಳಿಗೆ ಆಸ್ಪದ ಕೊಡಲಿಲ್ಲ. ವಿಶ್ವವಿದ್ಯಾನಿಲಯದ ಆಶ್ರಯದಲ್ಲಿದ್ದರೂ ಕನ್ನಡದ ಹಿತರಕ್ಷಣೆಗೆ ಸಂಬಂಧಿಸಿದಂತೆ ತನ್ನ ದೃಢವಾದ ಅಭಿಪ್ರಾಯವನ್ನು ವ್ಯಕ್ತಪಡಿಸಲು ಹಿಂಜರಿಯಲಿಲ್ಲ[೨೦]

೧೯೩೧ರ ಜಯಕರ್ನಾಟಕದಲ್ಲಿ ವಿ.ಕೃ.ಗೋಕಾಕರು 'ವಿಮರ್ಶೆಯ ರೀತಿ ನೀತಿಗಳು' ಎಂಬ ಲೇಖನದಲ್ಲಿ "ವಿಮರ್ಶೆ ಎಂದರೆ ಕೇವಲ ಪ್ರಸ್ತಾವಲೋಕನವಲ್ಲ. ಅದು ಸಾಹಿತ್ಯದ ಧ್ವಜಸ್ತಂಭವಾಗಿದೆ. ಸಾಹಿತ್ಯವೆಂದರೆ ಕೇವಲ ಅಬಾಧಿತ ತತ್ವಗಳ ಮೇಲೆ ನಿಂತ ಅಂತಸ್ತಿನ ಮನೆಯಾಗಿದೆ. ವಿಮರ್ಶೆಯೆಂದರೆ ಈ ತತ್ವಗಳ ಹಾಗು ಅವುಗಳ ಮೇಲೆ ನಿಂತ ಅಸ್ತಿವಾರದ ಸುಸ್ಥಿತಿಯನ್ನು ಕೆಡದಂತೆ ನೋಡಿಕೊಂಡು ಅವುಗಳ ಸೌಂದರ್ಯ ಹೆಚ್ಚಿಸುವ ಸಾಧನೆಯಾಗಿದೆ" ಎಂದಿದ್ದಾರೆ. ಹೀಗೆ ನವೋದಯದ ವಿಮರ್ಶೆ ಒಂದು ಸಿದ್ಧಾಂತದ ರೂಪವನ್ನು ಪಡೆದುಕೊಂಡಿತ್ತು. ಗೋಕಾಕರು ಹಲವು ಪ್ರಕಾರಗಳ ವಿಮರ್ಶೆಗಳನ್ನು ಪಟ್ಟಿ ಮಾಡುತ್ತಾರೆ:

೧. ನ್ಯಾಯವಿಧೇಯಕ ವಿಮರ್ಶೆ (Judicial criticism) ಸಪ್ರಮಾಣ ವಿಮರ್ಶೆ(inductive criticism)
೨. ತುಲನಾತ್ಮಕ ವಿಮರ್ಶೆ(comparative criticism)
೩. ಐತಿಹಾಸಿಕ ವಿಮರ್ಶೆ(historical criticism)
೪. ತಾತ್ವಿಕ ವಿಮರ್ಶೆ(philosophical criticism)

ವಿಮರ್ಶಕನ ಪಾತ್ರ ಎಂತಹುದು ಎಂದು ಹೇಳುವ ಈ ಲೇಖನ ನವೋದಯದ ಅಥವ ಆರಂಭಕಾಲದ ವಿಮರ್ಶೆಯನ್ನು ಬಳಸುವಲ್ಲಿ ಸಹಕಾರಿಯಾಗಿದೆ. ಇನ್ನು ಮಾಸ್ತಿಯವರು "ಹೊಸ ಸಾಹಿತ್ಯವನ್ನು ಕಲಿತಂತೆ ಹೊಸ ವಿಮರ್ಶೆಯನ್ನು ನಾವು ಇಂಗ್ಲಿಷಿನಿಂದ ಕಲಿಯಬೇಕಾಗಿದ್ದಿತು. ಅದು 'ಪ್ರಬುದ್ಧ ಕರ್ನಾಟಕ'ದ ಮೂಲಕ ನೆರವೇರಿತು"[೨೧] ಎನ್ನುವ ಮೂಲಕ ಪಾಶ್ಚಾತ್ಯ ವಿಮರ್ಶಾ ಅಧ್ಯಯನದ ಪ್ರಾಮುಖ್ಯತೆಯನ್ನು ತಿಳಿಸುತ್ತಾರೆ.

ಮಾಸ್ತಿಯವರ 'ವಿಮರ್ಶೆ' ಪುಸ್ತಕಾವಲೋಕನದಲ್ಲಿ ವಿ. ಸೀತಾರಾಮಯ್ಯ ವಿಮರ್ಶೆಯಲ್ಲಿ ತುಲನ ಪದ್ಧತಿ, ವಿದ್ವತ್ ಅಥವ ಚರ್ಚಾ ಪದ್ಧತಿ, ಚರಿತ್ರ ಪದ್ಧತಿ, ಚಿತ್ರ ಪದ್ಧತಿ, ಕವಿಯ ಅವರಣ, ಜೀವನ ಚರಿತ್ರಾದಿಗಳ ಮೇಲೆ ಆಧಾರ ಮಾಡಿ ಬರೆಯುವ ಪದ್ಧತಿ, ಶಾಸನ ಪದ್ಧತಿ ಇತ್ಯಾದಿ ಹಲವು ಪದ್ಧತಿಗಳಿವೆ. ಇವೆಲ್ಲವೂ ಪರಸ್ಪರ ಸಹಾಯಕವೇ ಹೊರತು ಒಂದನ್ನು ಬಿಟ್ಟು ಒಂದಕ್ಕೆ ಪ್ರಾಶಸ್ತ್ಯ ಕಡಿಮೆ. ಸೇಂಟ್ ಬೂವ್, ಟೈನ್ ಇವರುಗಳ ತರುವಾಯ ಬಂದಿರುವ ಶ್ರೇಷ್ಠ ವಿಮರ್ಶೆಗಳಲ್ಲೆಲ್ಲ ಈ ಎಲ್ಲ ಅಂಶಗಳು ಒಟ್ಟಿಗೆ ಕಂಡು ಬರುವವು. ನಮ್ಮ ಗ್ರಂಥಕರ್ತರು ಈಗ ಮಾಡಿರುವುದು ವಿಮರ್ಶೆಯ ಮುಖ್ಯವಾದ ಮೊದಲನೆಯ ಕೆಲಸ ಎಂದು ಹೇಳುತ್ತ

> "ಕಾವ್ಯದಿಂದ ಬರಬೇಕಾದ ಸಂಪೂರ್ಣ ಸಂಸ್ಕಾರವು ಓದುವವನಿಗೆ ಬರುವಂತೆ ಮಾಡತಕ್ಕದ್ದು ವಿಮರ್ಶಕನ ಕಾರ್ಯದ ಮುಖ್ಯಾಂಶ ಈ ಕೆಲಸಕ್ಕೆ ಕವಿಯ ಸದೃಶವಾದ ಪ್ರತಿಭೆ ವಿಮರ್ಶಕನಿಗೂ ಬೇಕು. ಆ ಪ್ರತಿಭಾ ಸಂಪತ್ತು ಇಲ್ಲದವರು ವಿಮರ್ಶೆಗೆ ಕೈಹಾಕಬಾರದು"

ಎನ್ನುತ್ತಾರೆ. 'ವಿಮರ್ಶೆ'ಯ ಕೊನೆಯ ಉಪನ್ಯಾಸ 'ಕನ್ನಡ ದೇಶದ ಲಾವಣಿ ಸಾಂಗತ್ಯಗಳ ವಿಚಾರ'ವನ್ನು ವಿಶ್ಲೇಷಿಸುತ್ತ "ವಿಮರ್ಶೆಯಾಗಲಿ ಉಪನ್ಯಾಸವಾಗಲಿ ಅದರ ಅಂತಿಮ ಗುರಿ ತಾನು ಅನುಭವಿಸಿದ ಸಾಹಿತ್ಯದ ಸುಖವನ್ನು ಇತರರಿಗೆ ಹಂಚಿಕೊಳ್ಳುವುದಾಗಿದೆ" ಎನ್ನುತ್ತಾರೆ.

ಅಡಿಟಿಪ್ಪಣಿಗಳು

೧. ಎಲ್.ಎಸ್. ಶೇಷಗಿರಿ ರಾವ್, ಶತಮಾನದ ಕನ್ನಡ ಸಾಹಿತ್ಯ, ಪುಟ ೨೪೭
೨. ವಿನಾಯಕನ ಸಂಚಿಕೆ, ಪ್ರಬುದ್ಧ ಕರ್ನಾಟಕ, ಸಿದ್ಧಾರ್ಥಿ ಸಂವತ್ಸರ, ೨, ಪುಟ ೩೩
೩. ಪ್ರಬುದ್ಧ ಕರ್ನಾಟಕ, ಯುಗಾದಿ ಸಂಚಿಕೆ ೧, ಸಿದ್ಧಾರ್ಥಿ ಸಂವತ್ಸರ, ಪುಟ ೩೫-೩೭
೪. ಎಲ್.ಎಸ್. ಶೇಷಗಿರಿ ರಾವ್, ಶತಮಾನದ ಕನ್ನಡ ಸಾಹಿತ್ಯ, ಪುಟ ೨೩೮
೫. ಪ್ರಬುದ್ಧ ಕರ್ನಾಟಕ, ಮೊದಲ ಸಂಚಿಕೆ, ೧೯೨೦
೬. ತೀನಂಶ್ರೀ, ಭಾರತೀಯ ಕಾವ್ಯಮೀಮಾಂಸೆ, ಮುನ್ನುಡಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ೧೯೫೩
೭. ಡಿವಿಜಿ, ಜೀವನ ಸೌಂದರ್ಯ ಮತ್ತು ಸಾಹಿತ್ಯ, ಡಿವಿಕೆ ಮೂರ್ತಿ, ಮೈಸೂರು, ೧೯೩೩
೮. ಪ್ರಬುದ್ಧ ಕರ್ನಾಟಕ, ಸಂ ೨೯, ಸಂ ೧, ಪುಟ ೩೯-೪೦. ೧೯೪೭
೯. ಕವಿಯಲ್ಲಿ ಆಗಂತುಕ ಪ್ರಜ್ಞೆ, ಪ್ರಬುದ್ಧ ಕರ್ನಾಟಕ, ೩೯-೪, ೧೯೫೮
೧೦. ಪ್ರಬುದ್ಧ ಕರ್ನಾಟಕ, ೩೭-೨, ೧೯೫೫-೫೬
೧೧. ಪ್ರಬುದ್ಧ ಕರ್ನಾಟಕ, ೪೧-೩, ೧೯೬೦
೧೨. ಪ್ರಬುದ್ಧ ಕರ್ನಾಟಕ, ೩೩-೧, ೧೯೫೩
೧೩. ಪ್ರಬುದ್ಧ ಕರ್ನಾಟಕ, ೪೮-೨ ಮತ್ತು ೪೮-೩, ೧೯೬೬
೧೪. ಕನ್ನಡ ಕಾವ್ಯತತ್ವ ಚಿಂತನೆ, ಡಾ. ಜಿ.ಎಸ್. ಶಿವರುದ್ರಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೦೫
೧೫. ಪ್ರಬುದ್ಧ ಕರ್ನಾಟಕ, ೪೨-೪, ೧೯೬೧
೧೬. ಜಿ.ಎಸ್.ಎಸ್., ಕನ್ನಡ ಕಾವ್ಯತತ್ವ ಚಿಂತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ ೨೦೮
೧೭. ಪ್ರಬುದ್ಧ ಕರ್ನಾಟಕ, ೪೩-೨, ೧೯೬೨
೧೮. ಪ್ರಬುದ್ಧ ಕರ್ನಾಟಕ, ೪೫-೩, ೧೯೬೩
೧೯. ಪ್ರಬುದ್ಧ ಕರ್ನಾಟಕ, ಸಂಚಿಕೆ ೩೬, ೧೯೫೫
೨೦. ಹಾಮಾನಾ, ಸಾಹಿತ್ಯ ಸಲ್ಲಾಪ, ಕನ್ನಡ ಪ್ರಭ, ಮಾರ್ಚ್ ೩, ೧೯೯೯
೨೧. ಪ್ರಬುದ್ಧ ಕರ್ನಾಟಕ, ಬೆಳ್ಳಿ ಸಂಚಿಕೆ, ೧೯೪೫, ಪುಟ ೩೦-೩೧

೬. ನವೋದಯ ಕಾಲದ ಸಣ್ಣಕತೆ ಹಾಗು ಕಾದಂಬರಿ ಪ್ರಕಾರಗಳು

ಸಣ್ಣಕತೆ, ಕಾದಂಬರಿಗಳು ಕನ್ನಡ ನವೋದಯದ ಬಹುಮುಖ್ಯ ಸಾಹಿತ್ಯ ಪ್ರಕಾರಗಳಾಗಿವೆ. ಸಣ್ಣಕತೆ, ಕಾದಂಬರಿಗಳ ಕಲ್ಪನೆ ಇಂಗ್ಲಿಷ್ ಮತ್ತು ಯುರೋಪಿಯನ್ ಸಾಹಿತ್ಯದ ಪರಿಚಯದಿಂದ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿತಾದರೂ ೨೦ನೆಯ ಶತಮಾನದಲ್ಲಿ ಕಾಲಿಟ್ಟ ಆಧುನಿಕತೆ ಜನಜೀವನವನ್ನು, ಸಾಮಾಜಿಕ, ರಾಜಕೀಯ ರಚನೆಗಳನ್ನು, ಧಾರ್ಮಿಕ ನಂಬುಗೆಗಳನ್ನು ಆಮೂಲಾಗ್ರವಾಗಿ ಬದಲಾಯಿಸಿತು. ಈ ಬದಲಾವಣೆ ಓದುಗರ ಮನೋಧರ್ಮ ಹಾಗು ಸಾಹಿತ್ಯಾಭಿರುಚಿಗಳನ್ನೂ ಪ್ರಭಾವಿಸಿತು. ಹೊಸಜಗತ್ತನ್ನು ಮತ್ತೆ ಅದೇ ಪ್ರಾಚೀನ ಕಾವ್ಯ, ಪುರಾಣಗಳ ರೂಪಕಗಳಲ್ಲಿ ಪರಿಭಾವಿಸುವುದು ಇನ್ನು ಅಸಾಧ್ಯ, ಅನವಶ್ಯಕವೆನಿಸಿತು. ಬಂಗಾಳದಲ್ಲಿ ಬಂಕಿಮಚಂದ್ರ, ರವೀಂದ್ರನಾಥ ಠಾಕೂರ್ ಮೊದಲಾದ ಲೇಖಕರು ಹೊಸ ಬಗೆಯ ಕತೆ, ಕಾದಂಬರಿಗಳನ್ನು ಬರೆಯಲು ಆರಂಭಿಸಿದ್ದರು. ಬಂಗಾಳದ ಪ್ರತಿಭೆ ಪಶ್ಚಿಮದ ಸಾಹಿತ್ಯ ವಲಯವನ್ನೂ ತನ್ನೆಡೆ ಆಕರ್ಷಿಸಿತೆಂದ ಮೇಲೆ ಭಾರತದ ಇತರ ಭಾಷೆಗಳ ಸಾಹಿತ್ಯದ ಮೇಲೆ ತನ್ನ ಪ್ರಭಾವವನ್ನು ಉಂಟುಮಾಡದೇ ಇರಲಿಲ್ಲ. ಬಿ.ವೆಂಕಟಾಚಾರ್ಯ, ಟಿ.ಎಸ್. ವೆಂಕಣ್ಣಯ್ಯ ಮೊದಲಾದ ಅಂದಿನ ವಿದ್ವಾಂಸರು, ಲೇಖಕರು ಬಂಗಾಳಿ ಭಾಷೆಯಲ್ಲಿ ರಚಿತವಾಗುತ್ತಿದ್ದ ಸಾಹಿತ್ಯವನ್ನು, ವಿಮರ್ಶಾ ಲೇಖನಗಳನ್ನು ಕನ್ನಡಕ್ಕೆ ಪರಿಚಯಿಸಿದರು. ಇವೆಲ್ಲ ಅಂಶಗಳು ಸಣ್ಣಕತೆ, ಕಾದಂಬರಿಗಳು ಕನ್ನಡದಲ್ಲೂ ರಚನೆಯಾಗಲು ಕಾರಣವಾಯಿತು. ಇದಕ್ಕೆ ಯಥಾಪ್ರಕಾರ 'ಪ್ರಬುದ್ಧ ಕರ್ನಾಟಕ', 'ಜಯಕರ್ನಾಟಕ' ಮೊದಲಾದ ಪತ್ರಿಕೆಗಳು ಪ್ರೋತ್ಸಾಹ ನೀಡುವುದರ ಜೊತೆಗೆ ಸಣ್ಣ ಕತೆಗೆಂದೇ ಮೀಸಲಾದ 'ಕಥಾಂಜಲಿ'ಯಂತಹ ಮಾಸಪತ್ರಿಕೆಗಳೂ ಹುಟ್ಟಿಕೊಂಡವು. ಕಥಾಂಜಲಿ 'ತಿಳಿಗನ್ನಡದ ಸಣ್ಣಕತೆಗಳ ಮಾಸಪತ್ರಿಕೆ' ಎಂಬ ಅಭಿಧಾನ ಹೊಂದಿದ್ದರೂ ಪದ್ಯಗಳು, ಗ್ರಂಥವಿಮರ್ಶೆಗಳೂ ಇದರಲ್ಲಿ ಪ್ರಕಟವಾಗುತ್ತಿದ್ದವು. ಜಿ.ಪಿ.ರಾಜರತ್ನಂ, ರಾಶಿ, ಕೆ.ಗೋಪಾಲಕೃಷ್ಣರಾವ್ ಮೊದಲಾದವರು ಕಥಾಂಜಲಿಯ ಲೇಖಕರ ಬಳಗದಲ್ಲಿದ್ದರು. ಇದರಲ್ಲಿ ಅನ್ಯಭಾಷೆಯ ಕತೆಗಳನ್ನೂ ಭಾಷಾಂತರಿಸಿ ಪ್ರಕಟಿಸಲಾಗುತ್ತಿತ್ತು. ನಾಟಕ ವಿಮರ್ಶೆಗಳೂ ನಿಯತವಾಗಿ ಪ್ರಕಟವಾಗುತ್ತಿದ್ದವು.

'ವಾಗ್ಭೂಷಣ' ಪತ್ರಿಕೆಯು ಕಥಾಂಜಲಿಯನ್ನು ಯಥಾರ್ಥವಾಗಿ ಪರಿಚಯಿಸಿದೆ[1]

> "ಇದೊಂದು ಚಿಕ್ಕ ಕತೆಗಳ ಮಾಸಪತ್ರಿಕೆ. ಈಗ ನಮ್ಮ ಕಡೆಗೆ ೧-೨ ಅಂಕಗಳು ಬಂದಿದ್ದು ಅವುಗಳಲ್ಲಿ ಅನೇಕ ಸುಂದರ ಕತೆಗಳು ಪ್ರಕಟವಾಗಿವೆ. ಕತೆಗಳಲ್ಲಿ ಕೆಲವು

ಕಟ್ಟುಕತೆಗಳಂತೆ ತೋರಿದರೂ ಕತೆಯ ಮಟ್ಟನ್ನು ಬಿಡದಿರುವುದರಿಂದ ಓದುಗರಿಗೆ ಅವುಗಳಿಂದ ಆನಂದವಾಗುವುದು. ಮನೋರಂಜನೆಯೊಂದಿಗೆ ಕೆಲವು ತಾತ್ವಿಕ ವಿಚಾರಗಳನ್ನು ಓದುಗರ ಮನಸ್ಸಿನಲ್ಲಿ ಬಿಂಬಿಸುತ್ತಿರುವುದರಿಂದ ಪ್ರಯೋಜನಕಾರಿಯಾಗಿದೆ. ವಾರ್ಷಿಕ ಚಂದಾ ರೂ. ೨-೮-೦ ಕನ್ನಡದಲ್ಲಿ ಇಂತಹ ಪ್ರಯತ್ನವು ಇದೇ ಮೊದಲನೆಯದಾಗಿರುವುದರಿಂದ ಎಲ್ಲರೂ ಪ್ರೋತ್ಸಾಹಿಸಿ ಸಂಪಾದಕರ ಉತ್ಸಾಹವನ್ನು ಹೆಚ್ಚಿಸಬೇಕು. ಸಂಪಾದಕರು ಕಾಗದ ಮುದ್ರಣಾದಿಗಳನ್ನು ಇನ್ನು ಹೆಚ್ಚು ಒಳ್ಳೆಯ ಸ್ಥಿತಿಗೆ ತರಬಹುದು. ಚಿತ್ರಗಳನ್ನು ಸೇರಿಸಿದರೆ ಓದುಗರಿಗೆ ಇನ್ನಷ್ಟು ಉತ್ಸಾಹ ಉಂಟಾಗಬಹುದು".

ಇಲ್ಲಿನ ವಿಮರ್ಶೆಗಳನ್ನು ರಸನಿಷ್ಠ ವಿಮರ್ಶೆ ಎಂದು ಕರೆದರೂ ತಪ್ಪಾಗುವುದಿಲ್ಲ ಮಾಸ್ತಿಯವರ ಕತೆಗಳನ್ನು ವಿಮರ್ಶಿಸುತ್ತ ಎ.ಆರ್. ಕೃಷ್ಣಶಾಸ್ತ್ರಿಯವರು

"ದೊಣ್ಣೆ ಪೆಟ್ಟು ತಿಂದಂತೆ, ಬೈಗುಳ ತಿಂದಂತೆ ಅನುಭವವಾಗುವುದಿಲ್ಲ. ಬೆಣ್ಣೆಯ ಸಿಂಹವನ್ನು ಕಂಡ ನೆನಪಾಗುತ್ತದೆ. ಪ್ರಾಣಿಯು ಸಿಂಹವೇ ಸರಿ. ಆದರೆ ಮೃದುವಾದ ವಸ್ತುವಿನಲ್ಲಿ ಎಷ್ಟು ಚೆನ್ನಾಗಿ ಕುಶಲತೆಯಿಂದ ಮಾಡಿದ್ದಾರೆ ಎನಿಸುತ್ತದೆ" ಎಂದು ಹೇಳುತ್ತಾರೆ. ರೂಪಕಗಳಲ್ಲೇ ವಿಮರ್ಶಿಸುವ ವಿಮರ್ಶಕನ ಪ್ರತಿಭೆ ಕವಿ ಪ್ರತಿಭೆಗಿಂತ ಕಡಿಮೆಯಾದುದೇನಲ್ಲ ಎಂಬುದು ಇಂತಹ ಮಾತುಗಳಿಂದ ವಿದಿತವಾಗುತ್ತದೆ".[೨]

ಪ್ರಬುದ್ಧ ಕರ್ನಾಟಕದ 'ಕಾವ್ಯಾವಲೋಕನ' [ಮಾಸ್ತಿಯವರ ಸಣ್ಣ ಕತೆಗಳು] ಅಂಕಣದಲ್ಲಿ ವಿ.ಸೀತಾರಾಮಯ್ಯನವರು ಕಥೆಗಳ ಸ್ವರೂಪ, ಲಕ್ಷಣ, ರಚನಾ ವಿನ್ಯಾಸದ ಬಗ್ಗೆ ವಿವೇಚಿಸಿದ್ದಾರೆ. ಕಾದಂಬರಿ ಹಾಗು ಸಣ್ಣಕತೆಗೆ ಇರುವ ವ್ಯತ್ಯಾಸವನ್ನು ಕುರಿತು

"ಸಣ್ಣಕತೆಗಳಲ್ಲಿ ವಿವಿಧ ವ್ಯಾಪಾರಗಳಿಗೆ ಸ್ಥಳವಿಲ್ಲ. ಅವು ಅತ್ಯಲ್ಪ ಅವಕಾಶದಲ್ಲಿ ಅತ್ಯವಸರದಿಂದ ಯಾವುದಾದರೂ ಒಂದು ಚಿತ್ರವನ್ನೋ ಭಾವವನ್ನೋ ಸಂಘಟನೆಯನ್ನೋ ಎದುರಿಗೆ ತಂದು ನಿಲ್ಲಿಸಿ ಭಾವೋದ್ರೇಕ ಮಾಡಿ ಮನಸ್ಸನ್ನಾಕರ್ಷಣೆ ಮಾಡುವುದು. ಇಲ್ಲಿರುವಷ್ಟು ಸಂಗ್ರಹವೂ ತೀವ್ರತೆಯೂ ಏಕಾಗ್ರತೆಯೂ ಕಾದಂಬರಿಯಲ್ಲಿ ಪ್ರಾಯಃ ಇಲ್ಲ. ಅಲ್ಲಿನ ವಿಸ್ತಾರ ವೈವಿಧ್ಯ ಅವಕಾಶಗಳು ಸಣ್ಣ ಕತೆಗಳಲ್ಲಿ ಇಲ್ಲ. ಸಣ್ಣಕತೆಯಲ್ಲಿ ಕಥೆಯೇ ಮುಖ್ಯವೆಂದು ಹೇಳುವವರು ಅತಿ ಧೈರ್ಯಶಾಲಿಗಳು. ಹೇಳುವ ರೀತಿಯೂ, ಮೂಲೋದ್ದೇಶ ಅಥವ ಭಾವವನ್ನು ಸುಲಭವಾಗಿ ಚಿತ್ರಿಸುವ ಕಲಾ ಚಾತುರ್ಯವೂ ಮುಖ್ಯ. ಅನಂತ ವಿಸ್ತಾರವಾದ ವಸ್ತು ವ್ಯಾಪಾರಗಳಲ್ಲಿ ಯಾವುದೋ ಒಂದು ಅಂಶವು, ಒಂದು ದೃಶ್ಯವು, ಒಂದು ಸನ್ನಿವೇಶವು ಸ್ವಲ್ಪಮಟ್ಟಿಗೆ ಸ್ವಲ್ಪ ಕಾಲದ ಮಟ್ಟಿಗೆ ಮಾತ್ರ ಗೋಚರಿಸಿ ಅನುಭವವೇದ್ಯವಾಗುವುದು..ಕತೆಯ ದೊಡ್ಡ ಅವಗುಣವೆಂದರೆ ಕತೆಯಲ್ಲಿನ ಕ್ರಿಯೆಯೂ ಆಶಯವೂ ಪರಿಣಾಮವೂ ಒಂದೇ ಒಂದು. ಒಟ್ಟು ಫಲ ಸ್ವಾರಸ್ಯವನ್ನು ದೊರಕಿಸುವಂತೆ ಸಾಧಿಸುವಂತೆ ಇರದಿದ್ದರೆ ಅದು ಕತೆಯ ದೊಡ್ಡ ಅವಗುಣ. ಕತೆಗಳಲ್ಲಿ ಮೂಲಭಾವ, ಕೊನೆಯ ಪರಿಣಾಮ ಇವುಗಳು ನಿಶ್ಚಿತವಾಗಿ ಬಿಟ್ಟರೆ ಸಾಕು. ಮಿಕ್ಕ ಎಲ್ಲ ಅಂಗೋಪಾಂಗಗಳು ಒಂದು ವಿಧವಾದ ನಿರ್ಬಂಧದಿಂದ ಅವನ್ನು ಚಾಚೂ ತಪ್ಪದೆ

ಅನುಸರಿಸಬೇಕಾಗಿ ಬರುವುದರಿಂದ ಕರ್ತೃವಿನ ಚಮತ್ಕಾರ ಕೌಶಲ್ಯಗಳೆಲ್ಲವೂ ಅತ್ಯಲ್ಪ ಅವಕಾಶದಲ್ಲಿ ಪೂರ್ಣಫಲಗಳಿಸಿ ಕಲಾದೃಷ್ಟಿಯಲ್ಲಿ ಶೋಭಿಸುವಂತಿರಬೇಕು"[೨]

ಎಂದಿದ್ದಾರೆ. ಮುಂದುವರೆದು, ಈ ಎಲ್ಲ ಕಾರಣಗಳಿಗಾಗಿ ಕಾದಂಬರಿಗಳಿಗಿಂತ ಸಣ್ಣಕತೆಗಳನ್ನು ಬರೆಯುವುದು ಕಷ್ಟ; ಅಲ್ಲಿ ರಚನಾ ರೀತಿಯೇ ಮುಖ್ಯ ಎಂದಿದ್ದಾರೆ.

ಇನ್ನು ಆ ಕಾಲದ ಕಾದಂಬರಿ ವಿಮರ್ಶೆಯಲ್ಲಿ ಡಿ.ಎಲ್. ನರಸಿಂಹಾಚಾರ್ಯರ ಬರವಣಿಗೆಗಳು ತುಂಬ ಮುಖ್ಯವಾದುದಾಗಿದೆ. ಡಿ.ಎಲ್. ನರಸಿಂಹಾಚಾರ್ಯರ 'ಪೀಠಿಕೆಗಳು ಮತ್ತು ಲೇಖನಗಳು' (೧೯೭೧) ಕೃತಿಯಲ್ಲಿ ೧೯೩೪ ರಿಂದ ೧೯೫೮ರ ಕಾಲಾವಧಿಯಲ್ಲಿ ಅವರು ಬರೆದ – ಮುಖ್ಯವಾಗಿ 'ಪ್ರಬುದ್ಧ ಕರ್ನಾಟಕ'ದಲ್ಲಿ ಬರೆದ – ಅನೇಕ ಲೇಖನಗಳು ದೊರೆಯುತ್ತವೆ. ಅವರ ಬರಹಗಳಲ್ಲಿ ಕಾಣುವ ಪ್ರಮುಖ ಅಂಶವೆಂದರೆ ಅದು ಸಾಹಿತ್ಯದ ಕೇಂದ್ರದ ಸುತ್ತನ್ನೆ ಅವಲಂಬಿಸಿ ಮುಂದುವರೆಯುವುದು. ಪ್ರಬುದ್ಧ ಕರ್ನಾಟಕದ 'ಕಾವ್ಯಾವಲೋಕನ'ಕ್ಕಾಗಿ ಅವರು ಬರೆದಿರುವ ಲೇಖನಗಳಲ್ಲಿ ಕಾಣಿಸುವ ಅಚ್ಚುಕಟ್ಟು, ಕ್ರಮ ಅನುಕರಣೀಯ. ಈ ಅವಲೋಕನಗಳು ನವೋದಯದ ಸಂದರ್ಭದಲ್ಲಿ ಪ್ರತ್ಯೇಕವಾಗಿಯೇ ಅಧ್ಯಯಿಸಬಹುದಾದ ಬರಹಗಳಾಗಿವೆ. ಸಂಶೋಧನೆಯ ದೃಷ್ಟಿಕೋನ, ಗ್ರಂಥಸಂಪಾದನೆಯ ಪರಿಚಯ ಹಾಗು ಕವಿಚರಿತ್ರೆಯನ್ನು ಕಟ್ಟುವ ಕೆಲಸಗಳು ಡಿ.ಎಲ್. ನರಸಿಂಹಾಚಾರ್ಯರಿಗೆ ಮುಖ್ಯ ತುರ್ತುಗಳಲ್ಲಿ ಒಂದಾಗಿತ್ತು.[೩] ಡಿ.ಎಲ್. ನರಸಿಂಹಾಚಾರ್ಯರು ೧೯೪೨ರ 'ಪ್ರಬುದ್ಧ ಕರ್ನಾಟಕ'ದಲ್ಲಿ ಡಾ. ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಯನ್ನು ಕುರಿತು ಸುಮಾರು ಹದಿನಾಲ್ಕು ಪುಟಗಳ ಅವಲೋಕನ ಬರೆದಿದ್ದಾರೆ. "ಆ ಕಾದಂಬರಿಯ ಬಗ್ಗೆ ಕಳೆದ ಅರವತ್ತು ವರ್ಷಗಳಲ್ಲಿ ಅನೇಕರು ಬರೆದಿದ್ದಾರೆ. ಆದರೆ ಇಂದಿಗೂ ಡಿ.ಎಲ್. ನರಸಿಂಹಾಚಾರ್ಯ ಅವರ ವಿಮರ್ಶೆ ವಾಚನ ಮನನ ಯೋಗ್ಯವಾಗಿದೆ" ಎಂದಿದ್ದಾರೆ ವಿ.ಸೀತಾರಾಮಯ್ಯ.[೪] ಡಿ.ಎಲ್. ನರಸಿಂಹಾಚಾರ್ಯ ಅವರು ಈ ವಿಮರ್ಶೆಯಲ್ಲಿ ವೆಂಕಟಾಚಾರ್ಯ, ಗಳಗನಾಥ, ಎಂ.ಎಸ್. ಪುಟ್ಟಣ್ಣ ಹಾಗು ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡಿತಿ ಬಗ್ಗೆ ಉಲ್ಲೇಖ ಮಾಡುತ್ತಾ ಕನ್ನಡ ಕಾದಂಬರಿ ಬೆಳವಣಿಗೆಯ ಬಗ್ಗೆ ಮಾತನಾಡಿದ್ದಾರೆ. ಇಲ್ಲಿನ ವಿಮರ್ಶೆ ಕುತೂಹಲಕಾರಿಯಾಗಿದ್ದು ಪ್ರಮುಖವಾಗಿ 'ಮರಳಿ ಮಣ್ಣಿಗೆ' ಕಾದಂಬರಿಯ ಓಟದ ಕಡೆಗೆ ಗಮನ ಹರಿಸಿರುವುದು ಕಂಡು ಬರುತ್ತದೆ.

> "ಮರಳಿ ಮಣ್ಣಿಗೆ ಶ್ರೀ ಕಾರಂತರ ಮಹಾ ಕಾದಂಬರಿಯಾಗಿದೆ. ಕಾಲದ ದೃಷ್ಟಿಯಿಂದ ಎರಡನೆಯದು. ಇವರಿಗೆ ಪ್ರೇರಣೆ ಅನಂತವಾದ ಕಡಲ ಹಸರ, ಅದಕ್ಕಿಂತಲೂ ಅಗಲವಾದ ಆಳವಾದ ಸಕಲ ರೂಪಗಳನ್ನು ತಾಳುವ ಜೀವನ ಸಾಗರ. ಮಂಗಳೂರಿನ ಪಡು ಕರಾವಳಿಯ ಬದುಕು ಬಡತನದೊಂದಿಗೆ ಸೆಣೆಸಿ ಬದುಕ ನಡೆಸುತ್ತಿರುವ ಬಡತನದ ಬದುಕನ್ನು ಎಳೆ ಎಳೆಯಾಗಿ ರಸರಸವಾಗಿ ಬಿಡಿಸಿ ಚಿತ್ರಸಿದ್ದಾರೆ. ಕನ್ನಡಕ್ಕೆ ಸ್ವತಂತ್ರ ಕಾದಂಬರಿಗಳು ಇಲ್ಲವೆಂಬ ಕೊರತೆಯನ್ನಷ್ಟೇ ಇದು ಹೋಗಲಾಡಿಸದೆ ಉತ್ಕೃಷ್ಟ ಕಾದಂಬರೀ ಮಾರ್ಗವೊಂದನ್ನೂ ಸೃಷ್ಟಿಸಿಕೊಟ್ಟಿದೆ"[೫]

ಶೈಲಿ ಕುರಿತು 'ಕಾರಂತರ ಶೈಲಿ ಸೂಚಿಯಾನ ಕಲೆಯಲ್ಲಿ ಪರಿಣತವಾಗಿ ಈ ಕಾದಂಬರಿಯ ವಿತಾನದಲ್ಲಿ ಚಿತ್ರಗಳ ಚೆಲುವನ್ನು ಸೃಷ್ಟಿಸಿದೆ' ಎಂದಿದ್ದಾರೆ. ಡಿ.ಎಲ್.ಎನ್. ಅವರ ಕಲಾತ್ಮಕ ಭಾಷಾಪ್ರಯೋಗ ಇಲ್ಲಿ ಕಂಡು ಬರುತ್ತದೆ. ಇನ್ನು ಪಾತ್ರಗಳ ಕುರಿತು "ಒಂದೊಂದು ಕಾದಂಬರಿಯನ್ನು ಮೀಸಲಿಟ್ಟು ವಿಸ್ತರಿಸಬಹುದಾದ ಸತ್ವಾತಿಶಯ ಈ ಪಾತ್ರಗಳಲ್ಲಿ ಉಂಟು" ಎಂದಿದ್ದಾರೆ. "ಬಡತನವೇ

ಇದಕ್ಕೆ ಒಡೆಯನಾಗಿದ್ದರೂ ಒಡೆತನವನ್ನು ಮುರಿದು ಸ್ವರಾಜ್ಯ ಸಂಪಾದಿಸಲು ಮನುಷ್ಯ ಪ್ರಯತ್ನ ಇಲ್ಲಿ ಕಾಳಗವನ್ನು ಹೂಡಿದೆ..ಬಡತನಕ್ಕೆ ನಂಜೂಡಿಸುವ ಶಕ್ತಿ ನಾಗಮಣಿಯಲ್ಲಿದೆ" ಎಂದಿದ್ದಾರೆ.

ಅನಕೃ ಅವರ ಮೊದಲ ಕಾದಂಬರಿ 'ಜೀವನಯಾತ್ರೆ'ಯನ್ನು ಅವಲೋಕಿಸುತ್ತ "ಈ ಕಾದಂಬರಿಯಲ್ಲಿ ಪ್ರಾರಂಭದಲ್ಲಿ ಕಾದಂಬರಿಯ ವಸ್ತುವನ್ನು ಧ್ಯೇಯವನ್ನು ಕುರಿತು ಮೂವತ್ತೆರಡು ಪುಟಗಳಷ್ಟು ಉದ್ದವಾದ ಮುನ್ನುಡಿ ಇದೆ. ಅದಕ್ಕೋಸ್ಕರವಾಗಿಯೇ ಕಾದಂಬರಿ ಹುಟ್ಟಿದೆಯೋ ಎನಿಸುವಂತಿದೆ. ಸಮಾಜದ ಮೇಲೆ ಬಾಂಬು ಎಸೆಯುವುದೇ ಇಲ್ಲಿ ಲೇಖಕರ ಗುರಿಯಾಗಿರುವಂತೆ ತೋರುತ್ತದೆ" ಎಂದಿದ್ದಾರೆ. ಕೃತಿಗಿಂತ ಅನಕೃ ಅವರ ಮುನ್ನುಡಿಗಳೇ ವೈಚಾರಿಕ ಲೇಖನಗಳಾಗುತ್ತವೆ. ವಾಸ್ತವವಾಗಿ ಅವರಲ್ಲಿ ಅದೊಂದು ಕ್ರಮವೇ ಆಯಿತು" ಕಾದಂಬರಿಯಲ್ಲಿ ಉಲ್ಲೇಖಿತವಾಗಿರುವ ಬಾಲ್ಯ ವಿವಾಹದಂತಹ ಸಾಮಾಜಿಕ ದೋಷಗಳನ್ನು ಕುರಿತು ಡಿ.ಎಲ್.ಎನ್. ಹೀಗೆ ಪ್ರತಿಕ್ರಿಯಿಸಿದ್ದಾರೆ "ಆ ಕೆಲವು ಆಚಾರ ನಡವಳಿಕೆಗಳೂ ಮೂಡಿ ಬಂದದ್ದು ಯಾವುದೋ ಒಂದು ಕಾಲದ ಅವಶ್ಯಕತೆಯ ಗರ್ಭದಿಂದ ಅವು ಈಗ ಕಹಿಯಾಗಿ ಪರಿಣಮಿಸಿರಬಹುದು. ಸಮಾಜದ ಸಮಸ್ಯೆಗಳೇ ಹೀಗೆ. ಒಂದನ್ನು ಮಾಡಹೋದರೆ ಇನ್ನೊಂದಾಗುತ್ತದೆ"

> "ಪ್ರಕೃತ ಕಲಾ ದೃಷ್ಟಿಯಿಂದ ಜೀವನ ಯಾತ್ರೆಯನ್ನು ನೋಡುವುದಾದರೆ, ಪಟ್ಟಣ ನೋಡುವುದಕ್ಕೆ ಹೋಗಿ ಚರಂಡಿ ಹೊಕ್ಕಂತಾಗಿದೆ. ಸಮಾಜ ಸಂಸ್ಕರಣವಾಗಬೇಕೆಂದು ಲೇಖಕರಿಗೆ ಸತ್ಯವಾದ ಹಂಬಲವಿದ್ದರೂ ಇಂತಹ ಪುಸ್ತಕಗಳನ್ನು ಬರೆಯುವುದರಿಂದ ಅವರ ಇಷ್ಟ ನೆರವೇರಲಾರದು".[2] ಇದು 'ಕೃತಿನಿಷ್ಠ' ಅವಲೋಕನವಾಗಿದ್ದು ಪ್ರಗತಿಶೀಲ ಚಳವಳಿಯ ಸಾಹಿತ್ಯದ ಬಗ್ಗೆ ಚರ್ಚೆಯಾಗಲಿ ಯಾವುದೇ ಉಲ್ಲೇಖವಾಗಲಿ ಕಾಣುವುದಿಲ್ಲ.

ವಿ.ಸೀತಾರಾಮಯ್ಯನವರ ಕಾದಂಬರೀ ವಿಮರ್ಶೆಯೂ ಆ ಕಾಲದ ಬಹುಮುಖ್ಯ ವಿಮರ್ಶೆಯಾಗಿತ್ತು. ಹಲವು ಪತ್ರಿಕೆಗಳಲ್ಲಿ ವಿ.ಸೀತಾರಾಮಯ್ಯನವರ ವಿಮರ್ಶೆಗಳು ಪ್ರಕಟವಾಗುತ್ತಿದ್ದವು. ಆನಂದಕಂದರ ಕಾವಂಬರಿ 'ಸುದರ್ಶನ'ವನ್ನು ಅವಲೋಕಿಸುತ್ತ ವೀಸೀ ಅದರ ಮುನ್ನುಡಿ ಕುರಿತಂತೆ: "ಮುನ್ನುಡಿಕಾರರು ಚತುರರು, ವಿದ್ವಾಂಸರು. ಬಡ ವಿಮರ್ಶಕನೊಬ್ಬನು ಹೇಳಬಹುದಾದ್ದೆಲ್ಲ ಪೂರ್ವಪಕ್ಷದಂತಿದ್ದು, ಸದರಿ ಎಲ್ಲ ಆಕ್ಷೇಪಣೆಗಳನ್ನು ನಮ್ಮ ಬಾಯಿಂದ ಕಸಿದು ಕೊಂಡಿದ್ದಾರೆ. ಅಲ್ಲದೆ, ನಾಕು ಹೆಜ್ಜೆ ಮುಂದೆ ಹೋಗಿ ಮುನ್ನುಡಿಯ ನೀತಿ ವಿಚಕ್ಷಣೆ ಮಾಡಿದ್ದಾರೆ. ಗ್ರಂಥದ ಅವಲೋಕನದಲ್ಲಿ ಮುನ್ನುಡಿಯ ವಿಮರ್ಶೆಯು ಅಗತ್ಯವಾಗಬಾರದು. ಆದರೂ ಈ ಮುನ್ನುಡಿಯನ್ನು ಓದಿದ ಬಳಿಕ ಒಂದು ಮನವಿ ಮಾಡಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಮುನ್ನುಡಿಯ ಸಂಪ್ರದಾಯ ಕಡೆಗೆ – ಈ ಮಾತೂ ಕೂಡ ಹೊಸದು. ಯಾರೂ ಅದನ್ನು ಹೀಗೆ ಮಾಡಬೇಕೆಂದು ಪಂಕ್ತಿ ಹಾಕಿಲ್ಲ. ಕವಿಪರಿಚಯ, ಕೃತಿ ಅವಲೋಕನ, ಮುನ್ನುಡಿ, ಇವುಗಳ ತಾರತಮ್ಯ ಮರ್ಯಾದೆಗಳನ್ನು ಹಿರಿಯರು ತೋರಿಸಿದರೆ ನಮ್ಮಂತಹವರು ಬದುಕಿಕೊಳ್ಳಬಹುದು. ಈವರೆಗೂ ಅವರವರ ಬುದ್ಧಿಗೂ ರುಚಿಗೂ ಹೊಳೆದಂತೆ ಮಾತ್ರ ಬರೆಯುವವರು ಬರೆದಾರು ಅಷ್ಟೇ ಅಲ್ಲ ಅದಕ್ಕಿಂತ ಹೆಚ್ಚು ಯಾರೂ ಎಂದೂ ಮಾಡಲಾರರು. ಎಲ್ಲ ವಿಮರ್ಶೆಗೂ ಇದೇ ಮೂಲ ತಂತ್ರ. ಕಡೆಯ ನುಡಿ ಬರೆಯಲು (ಮುನ್ನುಡಿ) ಒಪ್ಪಿದವರು ಪ್ರತಿಯೊಂದನ್ನೂ ಓದಿ ತಮಗೆ ಸರಿ ಎಂದು ತೋರಿದ ನಾಕು ಪಂಕ್ತಿಯನ್ನು ಬರೆದುಕೊಡುವವರು ಹೀಗಿರುವಾಗ ನಮ್ಮಲ್ಲಿರುವ ಪ್ರಾಮಾಣಿಕತೆ ಎಷ್ಟಾದರೂ ಇನ್ನೊಬ್ಬರಲ್ಲಿ ಇದ್ದೀತು ಎಂಬ ಔದಾರ್ಯವನ್ನು ಒಬ್ಬರಿಗೊಬ್ಬರು

ತೋರಿಸದಿದ್ದರೆ ಹೇಗೆ? ಒಬ್ಬ ಮುನ್ನುಡಿಕಾರನು ಇನ್ನೊಬ್ಬರ ಮರ್ಮ ಭೇದ ಮಾಡುವಂತೆ ನುಡಿದು ವಿಡಂಬಿಸಬೇಕೇಕೆ? ಹಾಗೆಯೇ ಒಬ್ಬ ಕಾದಂಬರಿಕಾರನು ಇನ್ನೊಬ್ಬನ ನೀತಿ ವಿಚಾರಗಳ ಕುರಿತು ಏಕೆ ಕುಚೋದ್ಯ ಆಡಬೇಕು? ಇದರಿಂದ ವೃಥಾ ಆಕ್ರೋಶ ಉಂಟಾಗಿ ಸಾಹಿತ್ಯದ ತಿಳಿನೀರು ಕಲುಷಿತವಾಗುವುದು"[5] ಎಂದಿದ್ದಾರೆ.

ಇಲ್ಲಿ ಕನ್ನಡ ಸಾಹಿತ್ಯ ಬೆಳವಣಿಗೆಯ ಬಗ್ಗೆ ವಿ.ಸೀತಾರಾಮಯ್ಯನವರ ಕಾಳಜಿ ಕಂಡು ಬರುತ್ತದೆ. ಈ ಅವಲೋಕನದಲ್ಲಿ ವೀಸೀ ಕಥಾವಸ್ತು ಪರಿಚಯವನ್ನು ಮಾಡಿರುತ್ತಾರೆ. ಕನ್ನಡದ ಅವಲೋಕನಗಳಲ್ಲಿ ಇಂದಿಗೂ ಈ ಪರಂಪರೆ ಒಂದಲ್ಲ ಒಂದು ರೂಪದಲ್ಲಿ ಕಾಣಿಸುತ್ತದೆ. ಇದರ ಉದ್ದೇಶ ಕೃತಿಯ ಸಾಮಾನ್ಯ ಪರಿಚಯವಾಗಿದೆ. ಮುಂದೆ ನವ್ಯ ಹಾಗು ಪ್ರಗತಿಶೀಲ ಸಂದರ್ಭಗಳಲ್ಲಿ ಕಾದಂಬರಿಯ ಸ್ವರೂಪ ಆಶಯಗಳೇ ಸಂಪೂರ್ಣ ಅವಸ್ಥಾಂತರ ಹೊಂದಿತು. ಆಗ ಒಂದು ಪ್ರತ್ಯೇಕ ವಿಮರ್ಶಾ ಪರಂಪರೆಯೇ ಸೃಷ್ಟಿಯಾಯಿತು. ಅದನ್ನು ಮುಂದಿನ ಭಾಗಗಳಲ್ಲಿ ಚರ್ಚಿಸಲಾಗುವುದು.

ಅಡಿಟಿಪ್ಪಣಿಗಳು

೧. ವಾಗ್ಭೂಷಣ, ಸಂಪುಟ ೨೨, ಸಂಚಿಕೆ ೩, ನವೆಂಬರ್ ೧೯೨೯
೨. ಪ್ರಬುದ್ಧ ಕರ್ನಾಟಕ, ದುರ್ಮತಿ ಸಂವತ್ಸರ, ೮, ವಿನಾಯಕನ ಸಂಚಿಕೆ, ಪುಟ ೪೫–೪೬
೩. ಪ್ರಬುದ್ಧ ಕರ್ನಾಟಕ, ಸಂಪುಟ ೭, ಸಂಚಿಕೆ ೨, ೧೯೨೫
೪. ಶತಮಾನದ ಕನ್ನಡ ಸಾಹಿತ್ಯ ವಿಮರ್ಶೆ ೧೯೨೬–೧೯೫೦, ಸಂ: ಡಾ. ಕೇಶವ ಶರ್ಮ, ಪುಟ ೨೭೪
೫. ಸಾಹಿತ್ಯಾಲೋಕನ, ವಿಮರ್ಶೆ ಸಂಪುಟ ೪, ವೀಸೀ, ಸಂ:ಎಂ.ಎಚ್. ಕೃಷ್ಣಯ್ಯ, ಪುಟ ೨೬
೬. ಪ್ರಬುದ್ಧ ಕರ್ನಾಟಕ,, ಸಂ ೨೪, ಸಂ ೪, ಪುಟ ೭೯–೯೦
೭. ಪ್ರಬುದ್ಧ ಕರ್ನಾಟಕ, ಸಂ ೧೭, ಸಂ ೧, ಪುಟ ೧೧೮–೧೨೨
೮. ವೀಸೀ, 'ಸುದರ್ಶನ' ಪ್ರಬುದ್ಧ ಕರ್ನಾಟಕ, ಸಂ:೧೫, ಸಂಪುಟ ೨, ೧೯೩೫

೭. ನವೋದಯ ಕಾಲದ ನಾಟಕಗಳು

ನವೋದಯ ಕಾಲದ ಕನ್ನಡ ನಾಟಕ ಪ್ರಕಾರಕ್ಕೆ ಪಾಶ್ಚಾತ್ಯ ಗಂಭೀರ ನಾಟಕಗಳ ಪರಿಚಯವಾಯಿತು. ಕಾಲೇಜಿನ ವಿದ್ಯಾಭ್ಯಾಸದ ಹಂತದಲ್ಲಿ ಮಾತ್ರ ಈ ನಾಟಕಗಳ ಪರಿಚಯವಾದ್ದರಿಂದ ಇಂದು ರಂಗರೂಪಕ್ಕೆ ಇಳಿಯಲು ಹಾಗು ಹೊಸ ಸಂವೇದನೆಯ ನಾಟಕಗಳು ಸಾಮಾನ್ಯ ಜನರನ್ನೂ ತಲುಪಲು ತಕ್ಷಣವೇ ಸಾಧ್ಯವಾಗಲಿಲ್ಲ. ಶೇಕ್ಸ್‌ಪಿಯರನ ನಾಟಕಗಳು ಹಾಗು ಗ್ರೀಕ್ ದುರಂತ ನಾಟಕಗಳು ಕನ್ನಡಕ್ಕೆ ಆಗಮಿಸುವ ಸಂದರ್ಭ ಅಷ್ಟೇನೂ ಸ್ವಾಗತಾರ್ಹವಾಗಿರಲಿಲ್ಲ. ಶ್ರೀಕಂಠೇಶಗೌಡ ಮೊದಲಾದ ನಾಟಕಕಾರರ ಶೇಕ್ಸ್‌ಪಿಯರನ ನಾಟಕಗಳ ಅನುವಾದಗಳ ಗುಣಮಟ್ಟ ಮೂಲಕ್ಕೆ ಸರಿಗಟ್ಟಲಾರದು ಎಂಬ ಬಗೆಯ ನಾಟಕ ರಚನಾ ಕ್ರಮದ ಬಗ್ಗೆ ವಿವಾದ ಒಂದೆಡೆಯಾದರೆ ದುರಂತ ನಾಟಕಗಳ ಆಶಯಗಳು ಹಾಗು ಕೆಲವು ನಿಯಮಗಳು ಸಾಂಪ್ರದಾಯಿಕ ರಂಗಭೂಮಿಗೆ ಒಗ್ಗಲಾರದು ಎಂಬ ತಾತ್ವಿಕ ವಿವಾದ ಇನ್ನೊಂದೆಡೆ ಇತ್ತು. ಹೀಗೆ ಸಾಮಾನ್ಯವರ್ಗವೂ, ವಿದ್ವದ್ವಲಯವೂ ಹೊಸ ನಾಟಕಗಳನ್ನು ಪ್ರಾರಂಭದಲ್ಲಿ ಅಷ್ಟು ಸುಲಭವಾಗಿ ಸ್ವೀಕರಿಸಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ನಾಟಕಗಳು ಕನ್ನಡ ಸಾಹಿತ್ಯ ವಲಯದಲ್ಲಿ ಇತರ ಎಲ್ಲ ಪ್ರಕಾರಗಳಿಗಿಂತ ಅತ್ಯಂತ ಪ್ರಧಾನವಾದ ಸ್ಥಾನವನ್ನು ಪಡೆದುಕೊಂಡಿತು ಎಂಬುದು ಸಾಹಿತ್ಯ ಚರಿತ್ರೆಯನ್ನು ಬಲ್ಲವರೆಲ್ಲರಿಗೂ ತಿಳಿದ ವಿಷಯ. ಪ್ರಸ್ತುತ ಭಾಗದಲ್ಲಿ ನವೋದಯ ನಾಟಕಗಳು ನಾಡಿನಲ್ಲಿ ನೆಲೆಯೂರುವ ವಿಷಯದಲ್ಲಿ ಪತ್ರಿಕೆಗಳು ವಹಿಸಿದ ಪಾತ್ರವೇನು ಎಂಬುದನ್ನು ಅವಲೋಕಿಸಲಾಗಿದೆ.

ಹೊಸ ಸಾಹಿತ್ಯದ ಆಗಮನವನ್ನು ಕೆಲವು ಸಂಪ್ರದಾಯಸ್ಥ ಮನಸ್ಸುಗಳು ಮುಕ್ತವಾಗಿ ಸ್ವಾಗತಿಸಲು ಹಿಮ್ಮೆಟ್ಟಿದರೂ ಆ ಆಗಮನವನ್ನು ನಿರಾಕರಿಸಲು ಅವರಿಗೆ ಸರಿಯಾದ ಕಾರಣಗಳಿರಲಿಲ್ಲ. ಅಂತಹ ಸಾಂಪ್ರದಾಯಿಕ ಪಂಡಿತರು ಹೊಸ ಸಾಹಿತ್ಯ ನಮ್ಮ ಪ್ರಾಚೀನ ಸಾಹಿತ್ಯದ ಕೆಲವು ಮೌಲ್ಯಗಳಿಗೆ ಅಧೀನವಾಗಿರುವಂತೆ ಜಾಗ್ರತೆ ವಹಿಸಿಕೊಂಡರು. ಆಧುನಿಕ ಸಾಹಿತ್ಯವು ಪಶ್ಚಿಮದ ಪ್ರಭಾವದಿಂದ ಶೀಲ-ಅಶ್ಲೀಲಗಳ ನಡುವಣ ಗೆರೆಯನ್ನು ಮರೆಯದಿರಲಿ ಎಂಬ ಉದ್ದೇಶದಿಂದ ಹಿಂದಿನ ಸಾಹಿತ್ಯದ ಒಳ್ಳೆಯ ಅಂಶಗಳನ್ನು ಪದೇ ಪದೇ ಉಲ್ಲೇಖಿಸುತ್ತಿದ್ದರು. 'ಅಭಿಜ್ಞಾನ ಶಾಕುಂತಲ'ವನ್ನು ಕುರಿತು ಸುಬ್ರಹ್ಮಣ್ಯಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ'ದಲ್ಲಿ ಹೀಗೆ ಬರೆಯುತ್ತಾರೆ

> "ಆಧುನಿಕ ಕನ್ನಡ ಸಾಹಿತ್ಯ ಕೃತಿಗಳನ್ನು ವಿಮರ್ಶೆ ಮಾಡುವಾಗ ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಪ್ರಭಾವವೇ ಹೆಚ್ಚಾಗಿ ಕಾಣಿಸುತ್ತದೆ. ಸಂಸ್ಕೃತದ ಪ್ರಭಾವ ಅಷ್ಟು ಕಾಣಿಸುವುದಿಲ್ಲ. ಸಂಸ್ಕೃತ ನಾಟಕಗಳ ವಸ್ತುಭೇದಗಳು, ವಿಷ್ಕಂಭ, ಪ್ರವೇಶ ಇವೆಲ್ಲದರ ವಿವರ ವಿಮರ್ಶಕರಿಗೆ ಗೊತ್ತಿಲ್ಲವೆಂದಲ್ಲ. ಸಂಸ್ಕೃತ ನಾಟಕಗಳು ಶೃಂಗಾರ ರಸ

ಪ್ರಧಾನವಾದರೂ ಗಂಭೀರ ಭಾವಗಳಿಂದ ನಾಟಕಗಳು ಕಲ್ಪಿತವಾಗಿವೆ. ಬಹಳ ಹೇಳುವುದೇನು? ತರುಣರಾದ ಸ್ತ್ರೀಪುರುಷರು ಇದನ್ನು ಪಠಿಸಿದರೆ ಲಜ್ಜೆಯಿಂದ ತಲೆಬಾಗಿಸುವ ಸಂದರ್ಭವಾವುದೂ ಇಲ್ಲ. ಸಂಸ್ಕೃತ ನಾಟಕಗಳ ಗೌರವಕ್ಕೆ ಇದೇ ಕಾರಣ".[೧]

ಈ ಸಂಪ್ರದಾಯಬದ್ಧತೆಗೆ ಎ.ಆರ್. ಕೃಷ್ಣಶಾಸ್ತ್ರಿಗಳಂತಹವರೂ ಹೊರತಲ್ಲ. ಟಿ.ಪಿ. ಕೈಲಾಸಂ ಅವರ 'ಟೊಳ್ಳುಗಟ್ಟಿ'ಯ ವಿಲಕ್ಷಣ ಶೈಲಿಯನ್ನು ಸುಲಭವಾಗಿ ಸ್ವೀಕರಿಸಲಾರದೆ ಕೃಷ್ಣಶಾಸ್ತ್ರಿಗಳು ಅದನ್ನು ಟೀಕಿಸಿದರು. ವಿಶೇಷವಾಗಿ ಅದರಲ್ಲಿನ ಅತಿಪ್ರಾಸ. ಅತಿಪ್ರಾಸದಿಂದ ಅನುಕೂಲ ಇಲ್ಲದೆ ಇಲ್ಲ ಆದರೆ ಈ ವಿಲಕ್ಷಣತೆ ಪ್ರತಿಭೆಯ ದ್ಯೋತಕವಲ್ಲ. ಅದರ ಕಾಲದ ನಂತರ ವಿಲಕ್ಷಣಭೂಯಿಷ್ಠ ಕೃತಿಗಳು ಸಾಯಬೇಕು[೨] ಎಂದಿದ್ದರು. 'ಟೊಳ್ಳುಗಟ್ಟಿ'ಯನ್ನು ಕುರಿತ ವಾಗ್ವಾದಗಳನ್ನು 'ಜಯಕರ್ನಾಟಕ', 'ಪ್ರಬುದ್ಧ ಕರ್ನಾಟಕ'ಗಳಲ್ಲಿ ಕಾಣಬಹುದು. ಎ.ಆರ್. ಕೃಷ್ಣಶಾಸ್ತ್ರಿಗಳು 'ಪ್ರಬುದ್ಧ ಕರ್ನಾಟಕ'ದಲ್ಲಿ ಬರೆದ ವಿಮರ್ಶೆಗೆ ಉತ್ತರವಾಗಿ 'ಜಯಕರ್ನಾಟಕ'ದ ಕಾರಹುಣ್ಣಿಮೆ ಸಂಚಿಕೆಯಲ್ಲಿ 'ಟೊಳ್ಳುಗಟ್ಟಿಯ ಗುಟ್ಟನ್ನರಿತ ಪುಟ್ಟುವಿನಂತ ಕಿಟ್ಟು' ಎನ್ನುವ ಹೆಸರಿನಲ್ಲಿ ಒಬ್ಬರು ಮಾಡಿದ ವಿಮರ್ಶೆ ಕುತೂಹಲಕಾರಿಯಾಗಿದೆ

"ಸಾಹಿತ್ಯದಲ್ಲಿ ಯಾವ ಸ್ಥಾನವಿಲ್ಲದಿದ್ದರೂ ಪ್ರಾಶಸ್ತ್ಯವಿಲ್ಲದಿದ್ದರೂ ಸಂಘ ಜೀವನದಲ್ಲಿ, ಜನಜೀವನದಲ್ಲಿ ನಟಲೋಕದಲ್ಲಿ ಅಗ್ರ ಸ್ಥಾನದಲ್ಲಿ ಇಲ್ಲದಿದ್ದರೂ ಮಾನವೀಯ ಸ್ಥಾನವನ್ನು 'ಟೊಳ್ಳುಗಟ್ಟಿ' ಪಡೆದಿದೆ ಎನ್ನುವುದು ತಿಳಿಗಣ್ಣಿನವರಿಗೆ ತಿಳಿದ ವಿಷಯ.. ಇದು ಜನಜೀವನದ ಸುಧಾರಣೆಗಾಗಿ ಬರೆಯಲ್ಪಟ್ಟಿದೆ..ನೂರಕ್ಕೆ ತೊಂಬತ್ತು ಮಂದಿ ಪುಟ್ಟುಗಳಿದ್ದಾರೆ. ಹುಳುಕುಗಳನ್ನು ವಿಸ್ತಾರ ಮಾಡಿ ತೋರಿಸದಿದ್ದರೆ ನಿಜ ಸ್ವರೂಪ ತಿಳಿಯುವುದಿಲ್ಲ".[೩]

೧೮೮೫ರಲ್ಲಿ ಶೇಕ್ಸ್‌ಪಿಯರನ ನಾಟಕಗಳು ಮೊಟ್ಟಮೊದಲ ಬಾರಿಗೆ ಅನುವಾದಗೊಂಡಿದ್ದು ಕಂಡುಬರುತ್ತದೆ. ಈ ಕಾರ್ಯದಲ್ಲಿ ಮೊದಲಿಗರೆಂದರೆ ಅ. ಆನಂದರಾಯರು, ಎಂ.ಎಲ್. ಶ್ರೀಕಂಠೇಶಗೌಡರು ಮತ್ತು ಎಂ.ಎಸ್. ಪುಟ್ಟಣ್ಣ. ಎ. ಆನಂದರಾಯರು 'ರೋಮಿಯೋ ಜೂಲಿಯೆಟ್'ನ್ನು 'ರಾಮವರ್ಮ ಲೀಲಾವತಿ' ಎಂತಲೂ ಶ್ರೀಕಂಠೇಶಗೌಡರು ಮ್ಯಾಕ್‌ಬೆತ್‌ನ್ನು 'ಪ್ರತಾಪ ರುದ್ರದೇವ' ಎಂತಲೂ ಎಂ.ಎಸ್. ಪುಟ್ಟಣ್ಣ ಕಿಂಗ್ ಲಿಯರನ್ನು 'ಹೇಮಚಂದ್ರ ರಾಜವಿಲಾಸ' ಎಂತಲೂ ರೂಪಾಂತರಿಸಿದ್ದಾರೆ. ಈ ನಾಟಕಗಳ ರೂಪಾಂತರವನ್ನು ಕುರಿತು ತೀಕ್ಷ್ಣ ಖಂಡನೆ, ಸಮರ್ಥನೆಗಳನ್ನು ಅಂದಿನ ಪತ್ರಿಕೆಗಳಲ್ಲಿ ಕಾಣುತ್ತೇವೆ. ಉದಾಹರಣೆಗೆ 'ಪ್ರತಾಪ ರುದ್ರದೇವ' ಪ್ರಕಟಗೊಂಡಾಗ 'ಭಾಷಾಭಿಮಾನಿ'ಯೊಬ್ಬರು ೧೮೯೬ರ 'ವಿದ್ಯಾದಾಯಿನಿ' ಪತ್ರಿಕೆಗೆ 'ಸೋಜಿಗವೆ ಪೇಳೆ ಕಬ್ಬಗೌಡಂ' ಎಂಬ ಶೀರ್ಷಿಕೆಯಡಿ ವಿಮರ್ಶಿಸಿ ಆಕ್ಷೇಪಿಸಿದ್ದರು. ಅವರ ಪ್ರಮುಖ ಆಕ್ಷೇಪಣೆಗಳೆಂದರೆ,

೧. ಶೇಕ್ಸ್‌ಪಿಯರ್‌ನ ಪದ್ಯಕಾವ್ಯ ಕನ್ನಡದಲ್ಲಿ ಸಮರ್ಪಕವಾಗಿ ಬಂದಿಲ್ಲ.

೨. ರಸವೆಂಬುದು ಉಚಿತ ಸ್ಥಾನದಲ್ಲಿ ಬರತಕ್ಕಂಥದ್ದು. ಭಾಷಾಂತರದಲ್ಲಿ ಸಿಕ್ಕಸಿಕ್ಕಲ್ಲಿ ಇರುವುದಾದರೂ ಹೇಗೆ?

೩. ಈ ಅನುವಾದದಲ್ಲಿ ವಿಭಕ್ತಿ ಮತ್ತು ಕ್ರಿಯಾ ಪ್ರತ್ಯಯಗಳು ಇಲ್ಲದಿರುವಿಕೆ; ಹಳಗನ್ನಡ, ಹೊಸಗನ್ನಡ ಪ್ರತ್ಯಯಗಳ ಅನುಚಿತವಾದ ಕಲಬೆರಕೆ, ಗ್ರಾಮ್ಯಶಬ್ದಗಳ ಯಥೇಚ್ಛವಾದ ಬಳಕೆ[೪]

ಈ ಲೇಖನಕ್ಕೆ ಶ್ರೀಕಂಠೇಶಗೌಡರಿಗೆ ಬದಲಾಗಿ ಮಹರಾಜ ಕಾಲೇಜಿನ ಕನ್ನಡ ಪಂಡಿತ ಪಿ.ಆರ್. ಕರಿಬಸವಶಾಸ್ತ್ರಿ ನೀಡಿರುವ ಉತ್ತರ 'ವಿದ್ಯಾದಾಯಿನಿ'ಯ ಮುಂದಿನ ಸಂಚಿಕೆಯಲ್ಲಿ ಪ್ರಕಟಗೊಂಡಿದೆ. "ಇದು ರೂಪಾಂತರ, ಭಾಷಾಂತರವಲ್ಲ. ಆದಕಾರಣ ಬಹಳ ಹೋಲಿಸುವುದು ಬೇಡ. ಇದರಲ್ಲಿಯ ಗುಣಗಳೊಂದನ್ನೂ 'ಭಾಷಾಭಿಮಾನಿ'ಯು ಗಮನಿಸಿಲ್ಲ. ಆದ್ದರಿಂದ ಇವರನ್ನು 'ದೋಷಾಭಿಮಾನಿ' ಎಂದು ಕರೆಯುವುದು ಸೂಕ್ತ" ಎಂದು ಲಘುವಾಗಿ ಗೇಲಿ ಮಾಡಿದ್ದಾರೆ.

ಒಟ್ಟಾರೆ ಹೇಳುವುದಾದರೆ ೧೯ನೆಯ ಶತಮಾನದ ಕೊನೆಯಲ್ಲಿ ಕನ್ನಡ ಸಾಹಿತ್ಯ ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಸ್ಥಿತಿ ತಲುಪಿತ್ತು. ಎಂ.ಎಸ್. ಪುಟ್ಟಣ್ಣನವರ 'ಹೇಮಚಂದ್ರ ರಾಜವಿಲಾಸ' (೧೮೯೯) ಆ ಕಾಲದ ಸಾಹಿತ್ಯದ ಒಂದು ಮಾದರಿ.[೫] ಆಗಿನ ಕಾಲದ ಪತ್ರಿಕೆಗಳಲ್ಲೂ ಸಹ ಸಾಹಿತ್ಯವೆಂದರೆ ಬರೀ ಪದ್ಯವೇ ಆಗಿತ್ತು. ಬಹುಶಃ ಎಲ್ಲವೂ ಹಳೆಯ ಕಾಲದ ಶೈಲಿ ಪ್ರಾಸಪ್ರಿಯತೆಯಿಂದ ಬಂದದ್ದು. ಉದಾಹರಣೆಗೆ ಎಂ. ಸೀತಾರಾಮಶಾಸ್ತ್ರಿಗಳ 'ಅನ್ಯಾಪದೇಶವು'[೬]

'ಸಂಸ' ಕಾವ್ಯನಾಮದಿಂದ ಪ್ರಸಿದ್ಧರಾದ ಎ.ಎನ್. ವೆಂಕಟಾದ್ರಿ ಅಯ್ಯರ್ ನವೋದಯ ಕಾಲದ ಅತಿಮುಖ್ಯ ನಾಟಕಕಾರರರು. ೧೬ನೆಯ ವಯಸ್ಸಿನಲ್ಲೇ ೧೯೧೪ರಲ್ಲಿ 'ಕೌಶಲ' ಎಂಬ ಕಥೆಯನ್ನು, ೨೦ನೆಯ ವರ್ಷದಲ್ಲಿ 'ಶ್ರೀಮಂತೋದ್ಯಾನ ವರ್ಣನಂ' ಎಂಬ ಹಳಗನ್ನಡ ಕಾವ್ಯವನ್ನು ೧೯೨೮ರಲ್ಲಿ ೩೦ ವರ್ಷದವರಿದ್ದಾಗ 'ಸಂಸಪದ' ಎಂಬ, ಅದುವರೆಗೆ ರಚಿಸಿದ್ದ ಎಲ್ಲ ಹಳಗನ್ನಡ ಕವನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. 'ಸಂಸಪದ' ಎಂಬ ಕಾವ್ಯ ಸಂಕಲನದಲ್ಲಿ ಅನೇಕ ವೃತ್ತ ಕಂದಗಳಲ್ಲಿ ಪ್ರಾಚೀನವಾದ ಕನ್ನಡ ಕಾವ್ಯದಲ್ಲಿ ಕಾಣಬಹುದಾದ ಕನ್ನಡ ಶೈಲಿಯೇ ಇದೆ. ಸಂಸ್ಕೃತ ಸಮಾಸಗಳೂ ಹೆಚ್ಚಾಗಿವೆ. ಅಪೂರ್ವವಾದ ಶಬ್ದಗಳೂ ಪ್ರಯೋಗವಾಗಿವೆ. ಎಷ್ಟೋ ವೃತ್ತಗಳ ಅರ್ಥ ಸುಲಭವಾಗಿ ಹೊಳೆಯುವುದಿಲ್ಲ. ಸ್ವಲ್ಪ ಬೌದ್ಧಿಕ ವ್ಯಾಯಾಮ ಅಪೇಕ್ಷಿಸುತ್ತದೆ. ಈ ಕೃತಿ ಸಂಸರ ವಿದ್ವತ್ತಿನ ಪರಿಚಯ ಮಾಡಿಕೊಡುತ್ತದೆ.[೭] ಸುಮಾರು ಇಪ್ಪತ್ತ ಮೂರು ನಾಟಕಗಳನ್ನು ಬರೆದಿದ್ದು ಅವುಗಳಲ್ಲಿ ಆರು ಮಾತ್ರ ಪ್ರಕಟವಾಗಿವೆ ಎಂದು ತಿಳಿದು ಬರುತ್ತದೆ. ನಾಟಕಕಾರರಾಗಿ ಸಂಸ ಒಂದು ಮಿತಿಯನ್ನು ಹಾಕಿಕೊಂಡರು. ಅದು ಆ ನಾಟಕಗಳ ವಸ್ತುವಿಗೆ ಸಂಬಂಧಿಸಿದ್ದು. ಎಲ್ಲ ನಾಟಕಗಳೂ ಚಾರಿತ್ರಿಕ ನಾಟಕಗಳು. ಎಲ್ಲವೂ ಮೈಸೂರಿನ ರಾಜರಾದ ಒಡೆಯರ ಮನೆತನಕ್ಕೆ ಸಂಬಂಧಿಸಿದ್ದು. ಕನ್ನಡ ಸಾಹಿತ್ಯದಲ್ಲಿ ನಾಟಕಗಳೇ ಕಡಿಮೆ. ಅದರಲ್ಲಿಯೂ ಚಾರಿತ್ರಿಕ ನಾಟಕಗಳ ವಿಚಾರ ಕೇಳಲೇಬೇಕಿಲ್ಲ. ಕನ್ನಡ ಸಾಹಿತ್ಯಕ್ಕೆ ಚಾರಿತ್ರಿಕ ನಾಟಕಗಳನ್ನು ನೀಡಿದ ಮೊದಲ ನಾಟಕಕಾರರು ಸಂಸ.

ಮೈಸೂರು ರಾಜಮನತನದ ಒಳಹೊರಗುಗಳನ್ನು ಸಂಸ ತುಂಬ ಆಳವಾಗಿ ಅಭ್ಯಾಸ ಮಾಡಿದ್ದರು. ಚಾರಿತ್ರಿಕವಾಗಿ ಏನೇನು ವಸ್ತುಗಳು ದೊರಕಬಹುದೋ ಅವೆಲ್ಲವನ್ನೂ ಸಂಗ್ರಹಿಸಿದ್ದರು. ನಮಗೆ ಸಿಕ್ಕಿರುವ ಆರು ನಾಟಕಗಳಲ್ಲಿ ಅರಸು ಮನೆತನದ ೧೭ನೆಯ ಶತಮಾನದ ಕಾಲಘಟ್ಟದಲ್ಲಿ ನಡೆದ ವಿದ್ಯಮಾನಗಳನ್ನು ಮಾತ್ರ ಚೆನ್ನಾಗಿ ಚಿತ್ರಿಸಿದ್ದಾರೆ. ಆ ಕಾಲದಲ್ಲಿ ಮೈಸೂರು ಅರಮನೆಯು ಅನೇಕ ಸಂಚು, ಪಿತೂರಿ, ಕುಟಿಲ ಕೈತವಗಳ ಆವಾಸಸ್ಥಾನವಾಗಿತ್ತು. ದಳವಾಯಿಗಳು ಸಿಂಹಾಸನಕ್ಕೆ ಕಣ್ಣು ಹಾಕುವ ಮಟ್ಟಕ್ಕೆ ಅವರ ಅಧಿಕಾರ ಹೆಚ್ಚಿತು. ರಾಜರು ಆ ದಳವಾಯಿಗಳಿಗೆ ಆಡಳಿತ ಸೂತ್ರವನ್ನು ಒಪ್ಪಿಸಿ ತಾವು ಅಂತಃಪುರದ ವಿಲಾಸಗಳಲ್ಲಿ ಮಗ್ನರಾಗಿರುತ್ತಿದ್ದರು. ಇಂತಹ ಸಂದರ್ಭಗಳನ್ನು ದಳವಾಯಿಗಳು ಸ್ವಾರ್ಥಕ್ಕೆ ಬಳಸಿಕೊಂಡು ರಾಜ್ಯದಲ್ಲಿ ಆಡಳಿತದ ಎಲ್ಲ ಅಂಗಗಳನ್ನೂ ತಮ್ಮ ಅಧೀನದಲ್ಲಿ ಇರಿಸಿಕೊಂಡರು. ಇಂತಹ ವಿಷಮ ಸ್ಥಿತಿಯಲ್ಲಿ ಪ್ರಜ್ಞಾವತಿಯರಾದ ಅಂತಃಪುರದ ರಾಣಿಯರು ಹೇಗೆ ನಡೆದುಕೊಂಡರು ಎಂಬ ಕಡೆಗೂ

ಸಂಸರು ಗಮನ ಹರಿಸಿದ್ದಾರೆ[9]. ಸಂಸರ ಆರೂ ನಾಟಕಗಳನ್ನು ಪರಿಶೀಲಿಸಿದಾಗ ಈ ಅಂಶವು ಸ್ಪಷ್ಟವಾಗುತ್ತದೆ.

ಬಿರುದೆಂತೆಂಬರ ಗಂಡ: ಮೈಸೂರಿನಲ್ಲಿ ಒಬ್ಬ ವ್ಯಾಪಾರಿಯು ಮೈಸೂರು ಒಡೆಯರಿಗೆ 'ಬಿರುದಂತೆಂಬರ ಗಂಡ' ಎಂಬ ಬಿರುದನ್ನು ಕೊಟ್ಟ ಕಥೆ ಇಲ್ಲಿದೆ. ಇದು ಸಂಸರ ಮೊದಲ ಏಕಾಂಕ ನಾಟಕ. ಈ ನಾಟಕ ರಚನೆಯಲ್ಲಿ ಅವರಿಗೆ ದೊರೆತ ಅನುಭವ, ಕೌಶಲ್ಯಗಳನ್ನು ಅವರ ಮುಂದಿನ ನಾಟಕಗಳಲ್ಲಿಯೂ ಕಾಣಬಹುದು. 'ಬಿರುದಂತೆಂಬರ ಗಂಡ' ಎಂಬ ಪದಕ್ಕೆ ಜಿ. ವೆಂಕಟಸುಬ್ಬಯ್ಯ ನೀಡುವ ಅರ್ಥ ಹೀಗಿದೆ: 'ನಿನಗೆ ಬಿರುದು ಎಂತು ಬಂತು ಎಂದು ಕೇಳುವವರನ್ನು ತನ್ನ ಪರಾಕ್ರಮದಿಂದ ಸದೆಬಡಿಯುವವನು' ಎಂದು.

ಸುಗುಣ ಗಂಭೀರ: ಈ ನಾಟಕದಲ್ಲಿ ತೊರೆ ಮಾವಿನ ಹಳ್ಳಿಯ ರೇಮಟ ವೆಂಕಟಾದ್ರಿ ನಾಯಕನು ತನ್ನ ಮಗಳನ್ನು ಮೈಸೂರು ಅರಸರಿಗೆ (ಬೋಳ ಚಾಮರಾಜರಿಗೆ) ಕೊಡಲು ಪ್ರಯತ್ನಿಸುತ್ತಾನೆ. ಆದರೆ ವೆಂಕಟಾದ್ರಿ ನಾಯಕನ ಮಗ ಭಾಮ ಎಂಬುವವನು ಒಬ್ಬ ಬ್ರಾಹ್ಮಣ ಸ್ತ್ರೀಯನ್ನು ಮೋಹಿಸಿ ಅವಳ ಗಂಡನನ್ನು ಕೊಲ್ಲುತ್ತಾನೆ. ಆಗ ಮದುವೆಗೆ ತೊಂದರೆಯಾಗಿ ವೆಂಕಟಾದ್ರಿ ನಾಯಕನ ವಂಶ ನಿರ್ವಂಶವಾಗಿ ಹೋಗುತ್ತದೆ. ನಾಟಕ ಭಾಮನ ಸಾವಿನೊಂದಿಗೆ ಕೊನೆಯಾಗುತ್ತದೆ. ವಸ್ತುವನ್ನು ಸಂವಿಧಾನ ಮಾಡಿರುವ ರೀತಿಯಲ್ಲಿ ದುರಂತ ಪ್ರಭಾವ ಹೆಚ್ಚುವಂತೆ ಮಾಡಿ ನಾಟಕಕಾರರು ಯಶಸ್ವಿಯಾಗಿದ್ದಾರೆ. ವೀರ, ಕರುಣ ರಸಗಳ ಸಮಮಿಶ್ರಣದಿಂದ ಈ ನಾಟಕ ರಂಗದ ಮೇಲೆ ಸೊಗಸಾಗಿ ಪ್ರಕಾಶಿಸುತ್ತದೆ.

ಬೆಟ್ಟದ ಅರಸು: ಐದನೆಯ ಚಾಮರಾಜ ಒಡೆಯರ ಕುರಿತಾದ್ದು.

ವಿಗಡ ವಿಕ್ರಮರಾಯ: ವಿಕ್ರಮರಾಯ ಈ ನಾಟಕದ ದುರಂತ ನಾಯಕ. ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಮತ್ತು ರಣಧೀರನ ಸ್ನೇಹಿತ ನಿರೀಶ ಪಾತ್ರಗಳು ವಿಶಿಷ್ಟ ನಿರ್ಧಾರದ ಕಾರ್ಯವನ್ನು ಕೈಗೊಳ್ಳುವ ಪಾತ್ರಗಳಾಗಿ ಮಿಂಚುತ್ತವೆ. ಕುತೂಹಲವನ್ನು ಹೆಚ್ಚಿಸುವ ಈ ನಾಟಕದ ಸನ್ನಿವೇಶಗಳು ನಾಟಕಕಾರನ ಅಪೂರ್ವ ಪ್ರತಿಭೆಗೆ ಸಾಕ್ಷಿಯಾಗಿದೆ[8].

ಮಂತ್ರಶಕ್ತಿ: ಈ ನಾಟಕದಲ್ಲಿ ರಣಧೀರನ್ ಮಂತ್ರಶಕ್ತಿಯು ಸಫಲವಾದ ತಿಳುವಳಿಕೆಯ ಪ್ರತಿಪಾದನೆ ಇದೆ.

ಸಂಸರ ನಾಟಕಗಳ ಸ್ಟೈಲಿ ನಡುಗನ್ನಡದ ಪೆಡಸು ಶೈಲಿ. ಚಾರಿತ್ರಿಕ ನಾಟಕಗಳಿಗೆ ಹೇಳಿ ಮಾಡಿಸಿದ್ದು. ಅರಮನೆಯ ಕಡತಗಳ ಆಳವಾದ ಅಭ್ಯಾಸದಿಂದ ಕರಗತವಾಗಿದ್ದ ಕನ್ನಡ ಶೈಲಿಯನ್ನು ಸಂಸರು ರೂಢಿಸಿಕೊಂಡ ಬಗೆಯೇ ಅವರ ಪಾಂಡಿತ್ಯಕ್ಕೆ, ಪ್ರತಿಭೆಗೆ, ದ್ಯೋತಕವಾಗಿದೆ. ಇಂತಹ ವ್ಯಕ್ತಿ ಮಾನಸಿಕ ಭ್ರಮೆಗೆ (ಫರ್ಸಿಕ್ಯೂಷನ್ ಮ್ಯಾನಿಯಾ) ಒಳಗಾಗಿ ಆತ್ಮಹತ್ಯೆ ಮಾಡಿಕೊಂಡು ಸತ್ತದ್ದು ಕನ್ನಡ ಸಾಹಿತ್ಯದ ಒಂದು ದುರಂತವಾಗಿದೆ.

ಜಿ.ಪಿ. ರಾಜರತ್ನಂ ಅವರ 'ಗಂಡುಗೊಡಲಿ' ನಾಟಕದ ಅವಲೋಕನದಲ್ಲಿ "ನಾಟಕವನ್ನು ನಮ್ಮ ಇಂದಿನ ಪರಿಸ್ಥಿತಿಗೆ ಅನ್ವಯಿಸಿಕೊಂಡು ನೋಡಿದರೆ ಅದರ ಸ್ವಾರಸ್ಯ ಚೆನ್ನಾಗಿ ತಿಳಿದುಬರುತ್ತದೆ. ಸ್ವಾತಂತ್ರ್ಯ ಸಾಧನೆಗೆ ಯಾವುದು ಒಳ್ಳೆಯ ಮಾರ್ಗ? ಜಮದಗ್ನಿಯದೇ ಅಥವ ಪರಶುರಾಮನದೇ? ಈ ಸಮಸ್ಯೆಗೆ ಉತ್ತರವೇ ಈ ನಾಟಕ. ಪರಶುರಾಮನದೇ ಸೂಕ್ತದಾರಿ ಎಂಬುದು ಕವಿಯ ನಂಬಿಕೆ ಇರಬಹುದು. ಹೇಳಬಲ್ಲವರಾರು? ಕವಿಯ ದರ್ಶನವೇ ಸರಿಯೋ, ಜಮದಗ್ನಿಯದೇ ಸರಿಯೋ ಎಂಬುದು ಕಾಲ ಕಳೆದರೆ ಎಲ್ಲ ತನ್ನಷ್ಟಕ್ಕೆ ತಾನೇ ಗೊತ್ತಾಗುತ್ತದೆ"[10] ಡಿ.ಎಲ್.ನರಸಿಂಹಾಚಾರ್ ಅವರ ಅವಲೋಕನಗಳನ್ನು

ಗಮನಿಸಿದಾಗ ಅವಲೋಕನ ಒಂದು ಕ್ರಮಬದ್ಧ ವಿವೇಚನೆಯಾಗಿದ್ದು ಅದು ಅವಲೋಕನದ ರೂಪ, ಚೌಕಟ್ಟು, ಕಥಾಸಂಗ್ರಹ, ವಸ್ತುರಚನಾ ಪರಿಚಯ, ಪಾತ್ರ ಇತ್ಯಾದಿಗಳನ್ನು ಒಳಗೊಂಡಿದೆ.[೬]

ರಾಜಾ ಮಲಯಸಿಂಹ – ನಾಟಕ (ಮೂಲ: ಅಲೆಕ್ಸಾಂಡರ್ ಡೂಮಾ) ಕನ್ನಡಕ್ಕೆ: ಎಂ.ಎ. ಶ್ರೀನಿವಾಸಾಚಾರ್ ಕೃತಿಯ ಅವಲೋಕನ ಹೀಗಿದೆ: "..ಐರೋಪ್ಯ ಸಾಮಾಜಿಕ ಪದ್ಧತಿಗಳನ್ನು ಒಳಗೊಂಡು ರಚಿತವಾಗಿರುವ ಗದ್ಯ ಅಥವ ರೂಪಕ ಪ್ರಬಂಧಗಳನ್ನು ನಮ್ಮ ಭಾಷೆಗೆ ಪರಿವರ್ತಿಸ ಹೋದರೆ ಅನೇಕ ತೊಡಕುಗಳು, ಆಭಾಸಗಳೂ, ಧರ್ಮವಿರುದ್ಧ ಪ್ರಹಸನಗಳು ಕಾಣಿಸಿಕೊಂಡು ವಿಕಾರ ರೂಪಗಳನ್ನು ಧರಿಸಿ ಮನಸ್ಸಿಗೆ ಅಸಹ್ಯವನ್ನು ಉಂಟುಮಾಡುವವು. .."ಎಂದು ಹೇಳುತ್ತ "ಪ್ರತಿಯೊಂದು ಭಾಷೆಗೂ ಒಂದು ವೈಯಕ್ತಿಕ ಮರ್ಯಾದೆಯೂ, ಆತ್ಮಶಕ್ತಿಯೂ ಇದೆ. ಇವು ಹೋದರೆ ಭಾಷೆಯ ಜೀವವೇ ಹಾರಿ ಹೋದ ಹಾಗೆ. ಆದ್ದರಿಂದ ಭಾಷಾಂತರಕಾರರು ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಎಂಬುದು ವೀಸೀಯ ಅಭಿಪ್ರಾಯ[೧೧]

ಸುಮಾರು ಆರು ದಶಕಗಳ ತಮ್ಮ ಸುದೀರ್ಘ ಸಾಹಿತ್ಯ ಬದುಕಿನಲ್ಲಿ ವಿ. ಸೀತಾರಾಮಯ್ಯನವರು ನಿರ್ವಹಿಸಿದ ಪುಸ್ತಕಾವಲೋಕನಗಳು ಅಸಂಖ್ಯ. ಪ್ರಬುದ್ಧ ಕರ್ನಾಟಕದಲ್ಲಿ ಅವರ ಕವಿತೆ ಮತ್ತು ಪುಸ್ತಕಾವಲೋಕನಗಳು ನಿರಂತರವಾಗಿ ಪ್ರಕಟವಾಗಿರುವುದು ಕಂಡು ಬರುತ್ತದೆ. ಪ್ರಬುದ್ಧ ಕರ್ನಾಟಕವಲ್ಲದೆ ಹಿಂದೂ, ತ್ರಿವೇಣಿ, ಆರ್ಯನ್ ಪಾತ್, ಯೋಜನಾ, ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ ಮುಂತಾದ ನಿಯತಕಾಲಿಕೆಗಳಲ್ಲೂ ಅವರ ಪುಸ್ತಕಾವಲೋಕನ ಪ್ರಕಟವಾಗಿದೆ.

"ಕೇವಲ ಪ್ರಾಚೀನ ಸಾಹಿತ್ಯ ಅಥವ ನವೀನ ಕಾವ್ಯ ಕತೆ ಕಾದಂಬರಿ ನಾಟಕ ವಿಮರ್ಶನ ಕೃತಿ ಮಾತ್ರವಲ್ಲದೆ ಛಂದಸ್ಸು, ವ್ಯಾಕರಣ, ಕಾವ್ಯಮೀಮಾಂಸೆ, ಸಾಹಿತ್ಯ ಚರಿತ್ರೆ, ರಾಜ್ಯಶಾಸ್ತ್ರ ವ್ಯಾಪಾರ ವಾಣಿಜ್ಯ ಸಂಬಂಧಿ ಶಾಸ್ತ್ರಗಳನ್ನು ಅವರು ಸಮೀಕ್ಷಿಸಿದ್ದುಂಟು. ಇದು ಅವರ ನಿರ್ವಹಿಸಿದ ಅವಲೋಕನಗಳ ವಸ್ತು – ವಿಷಯ ವೈವಿಧ್ಯಕ್ಕಿಂತ ವಿವಿಧ ಜ್ಞಾನಶಾಖೆಗಳನ್ನು ಕುರಿತ ಅವರ ತಿಳುವಳಿಕೆಗೂ ವಿಸ್ತಾರವಾದ ಅವರ ಅಧ್ಯಯನಕ್ಕೂ ಕಲೆ ಸಾಹಿತ್ಯ ಶಾಸ್ತ್ರಗಳ ಬಗೆಗೆ ಅವರಿಗಿದ್ದ ಗಾಢ ಪರಿಚಯಕ್ಕೂ ಸಾಕ್ಷಿಯಾಗಿವೆ"[೧೨]

ವಿ. ಸೀತಾರಾಮಯ್ಯನವರ ಅವಲೋಕನಗಳ ಹಾಗು ವಿಮರ್ಶೆಯ ಬಗ್ಗೆ ಡಾ. ಎನ್.ಎಸ್. ತಾರಾನಾಥ್ ಹೀಗೆನ್ನುತ್ತಾರೆ

> "ಪ್ರಧಾನವಾಗಿ ವೀಸೀಯವರದ್ದು ವರ್ಣನಾತ್ಮಕ ವಿಮರ್ಶೆ. ಕಾವ್ಯದ ಭಾಗಗಳನ್ನು ಉದ್ಧರಿಸುತ್ತ ಕಥೆಯ ಬೆಳವಣಿಗೆಯನ್ನು ನಿರೂಪಿಸುತ್ತ ವ್ಯಾಖ್ಯಾನಿಸುವ ವಿಮರ್ಶಿಸುವ ವಿಧಾನ ಎಲ್ಲ ಕೃತಿಗಳಲ್ಲಿಯೂ ಇವೆ. ಹಾಗೆ ನಿರೂಪಿಸುತ್ತಲೇ ಒಳನೋಟಗಳನ್ನೂ, ಹೊಸನೋಟಗಳನ್ನೂ ಬೀರುತ್ತ ಮುಂದುವರೆಯುವುದು ಅವರ ಬರಹದ ಲಕ್ಷಣ. ಕಾವ್ಯದ ರಸಸ್ಥಾನಗಳನ್ನು ಮಹತ್ವಪೂರ್ಣ ಪ್ರಸಂಗಗಳನ್ನು ಅವರು ತಟಕ್ಕನೆ ಗುರುತಿಸಬಲ್ಲರು".[೧೩]

ಆದರೆ ಅವಲೋಕನಕ್ಕೆ ವರ್ಣನಾತ್ಮಕ ವಿಮರ್ಶಾ ವಿಧಾನ ಸರಿ ಹೊಂದುವುದಿಲ್ಲ. ಜೊತೆಗೆ ಅವಕಾಶವೂ ಇರುವುದಿಲ್ಲ. ಅದಕ್ಕೆ ತನ್ನದೇ ಆದ ನಿರ್ಬಂಧಗಳಿರುತ್ತವೆ. ವೀಸಿ ಅವರ ನಿರೂಪಣಾ ಶೈಲಿಯ ವೈಶಿಷ್ಟ್ಯತೆ ಕುರಿತು ಮಾತನಾಡುವಾಗ ತಾರಾನಾಥರು ವೀಸೀ ಹೇಗೆ ನವೋದಯದ ಸಮಕಾಲೀನ ವಿಮರ್ಶಕರು ಹಾಗು ನಂತರದ ನವ್ಯ ವಿಧಾನಗಳಿಗಿಂತ ಭಿನ್ನ ಎನ್ನುವುದನ್ನು ವಿವರಿಸುತ್ತ

"ವೀಸಿ ವಿಮರ್ಶೆಯ ಮತ್ತೊಂದು ಗುಣ ಅದು ಜಾರ್ಗನ್ನು, ಪರಿಭಾಷೆ, ಕ್ಲೀಷೆಗಳಿಂದ ಮುಕ್ತವಾದುದು. ರಸ ಧ್ವನಿ ಅಲಂಕಾರ ತತ್ವಗಳಿಂದ ಬೇರೆಯಾದ ಸ್ಫೂರ್ತಿ ದುರಂತತೆ ಶೈಲಿ ಶಿಲ್ಪ ಮುಂತಾದ ಶಬ್ದಗಳು ಪದೇ ಪದೆ ಬಳಕೆಯಿಂದ ದೂರವಾದ ಒಂದು ವಿಶಿಷ್ಟ ನಿರೂಪಣೆ ಅವರದು. ಕ್ರಿಯೆ, ಕ್ರಿಯಾಕಲ್ಪ, ಕ್ರಿಯಾಚೈತನ್ಯ ಎಂಬುದು ಮಾತ್ರ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತದೆ ಅಷ್ಟೇ"[೧೪]

'ಸೂತ್ರದ ಬೊಂಬೆ' (ಮೂಲ: ಹೆನ್ರಿಕ್ ಇಬ್ಸೆನ್, ಅನು: ಎಸ್.ಜಿ.ಶಾಸ್ತ್ರಿ) ನಾಟಕದ ಅವಲೋಕನದಲ್ಲಿ ವಿ.ಸೀತಾರಾಮಯ್ಯನವರು ಶಾಸ್ತ್ರಿಗಳ ಅನುವಾದ ಹಾಗು ಸ್ತ್ರೀಸ್ವಾತಂತ್ರ್ಯದ ಬಗ್ಗೆ ವಿವೇಚಿಸಿದ್ದಾರೆ. ಇದು ಅವರ ಸಾಮಾಜಿಕ ಕಳಕಳಿಯನ್ನು, ಹೆಣ್ಣಿನ ವ್ಯಕ್ತಿತ್ವದ ಅನನ್ಯತೆ ಹಾಗು ಸ್ವಾತಂತ್ರ್ಯದ ಕುರಿತ ಚಿಂತನೆಯಾಗಿದೆ.

"ಭಾಷಾಂತರ ಚೆನ್ನಾಗಿ ಆಗಿದೆ ಎನ್ನಬಹುದು. ಶಾಸ್ತ್ರಿಗಳವರು ನಾಟಕದ ಕತೆಯನ್ನು, ವಿಶೇಷವನ್ನು, ಸವಿಮರ್ಶಕವಾಗಿ ಪೀಠಿಕೆಯಲ್ಲಿ ಹೇಳಿದ್ದಾರೆ. ಅವನ್ನೇ ಕುರಿತು ಮತ್ತೆ ಪೀಠಿಕೆಯಲ್ಲಿ ಹೇಳಬೇಕಾಗಿಲ್ಲ. ಅಲ್ಲದೆ ಯಾರ ಎಷ್ಟು ಉತ್ತಮವಾದ ಇತರ ಬರವಣಿಗೆಯೇ ಆಗಲಿ ನಾಟಕದ ಪ್ರತಿಯಾಗಿ ನಿಲ್ಲಲಾರದು".

ಸ್ತ್ರೀಸ್ವಾತಂತ್ರ್ಯ ಕುರಿತಂತೆ

"ನಮ್ಮ ಸಮಾಜದಲ್ಲಿ ಈ ಪ್ರಶ್ನೆಗೆ ಬೆಲೆಯಿಲ್ಲವೇ? ಸ್ತ್ರೀ ಸ್ವಾತಂತ್ರ್ಯ ಸಮಸ್ಯೆ ಅಲ್ಲವೇ? ನಾಟಕದಲ್ಲಿನ ನೋಡಾ, ಹೆಲ್ಮೆರ್‌ರಂಥ ಪಾತ್ರಗಳು ಮನೆಮನೆಯಲ್ಲೂ ಇದ್ದಾರಲ್ಲವೇ? ಹೆಂಗಸು ಹೀಗೆ ಬೊಂಬೆ ಮಗಳು, ಬೊಂಬೆ ಹೆಂಡತಿ ಆಗಿ ಕಾಲ ಕಳೆಯಬೇಕಾಗಿಲ್ಲ ಅಲ್ಲವೇ? ತಿಳಿವಳಿಕೆ ಇಲ್ಲದ್ದರಿಂದಲೋ ಸಮಾಜ ಭಯಕ್ಕಾಗಿಯೋ ಬೇರೆ ದಿಕ್ಕಿಲ್ಲದೆಯೋ, ಸ್ವಂತ ಯೋಚನೆ ಮಾಡಲಾರದೆ ಅಥವ ಒಲ್ಲದೆ ಸಾಂಪ್ರದಾಯಿಕವಾಗಿ ಬಂದ ನಡತೆ ಸರಿ ಎಂಬ ನಂಬಿಕೆಯಿಂದಲೋ, ಸ್ವರ್ಗದ ಆಸೆ ನರಕದ ಭೀತಿ ಇತ್ಯಾದಿಗಳಿಂದಲೋ ಹೆಂಗಸಿನ ಆತ್ಮ ಸೊರಗಿ ಕುಂದಿ ಹೋಗಿಲ್ಲವೇ? ಗಂಡಸಿನ ಸ್ವಾರ್ಥ ಬುದ್ಧಿಯಿಂದ ಸನಾತನ ಪವಿತ್ರತೆಯ ಹೆಸರಿನಲ್ಲಿ ಆಕೆಯ ವಿಧೇಯತೆಯನ್ನು ಹೀಗೆ ನಿಲ್ಲಿಸುವುದು ಒಳ್ಳೆಯದು ಎಂಬ ವಿಮೋಹಕ ವ್ಯಾಕರಣೆಯ ವ್ಯಾಖ್ಯಾನಗಳಿಂದಲೂ ಆಕೆಗೆ ದಾಸೀ ಸ್ಥಿತಿ ಸ್ಥಿರವಾಗಿದೆ. ಗಂಡಸಿಗೆ ಒಂದು ಭೋಗ ಸಾಮಗ್ರಿಯಾಗಿ ದುಡಿವ ತೊತ್ತಾಗಿ ಯಾವ ಬಗೆಯ ಮಾತಿನ ಅಥವ ಕಾರ್ಯ ಸ್ವಾತಂತ್ರ್ಯಕ್ಕೂ ಎಡೆಯಿಲ್ಲದ ಬದುಕಾಗಿದೆಯಲ್ಲವೇ ಆಕೆಯದು?

"ಸ್ವಾತಂತ್ರ್ಯವಾವುದು? ಹೆಂಗಸಿನ ಸ್ವಾತಂತ್ರ್ಯಕ್ಕೆ ಮಿತಿ ಇಲ್ಲವೇ? ಈಗ ಕಾಣುತ್ತಿರುವ ಅದರ ರೂಪಗಳು ಹಿತಕರವೇ? ಮನೆಗಳು ಹೀಗೆ ಮುರಿವಂತಾದರೆ ಸಮಾಜ ಜೀವನದ ಬಿಗಿ ಬಿಟ್ಟು ಅವ್ಯವಸ್ಥೆಗೆ ಇಟ್ಟುಕೊಳ್ಳುವುದಿಲ್ಲವೇ? ಎಂದು ಮುಂತಾಗಿ ಪ್ರತಿವಾದ ಬರುವುದು. ಆದರೆ ಬದುಕಿನಲ್ಲಿ ಒಂದೊಂದು ಸಲ ಸಂಧಿಕಾಲ ಬರುತ್ತದೆ. ಸುತ್ತಲ ಭೀಕರ ಅನ್ಯಾಯ ಕಂಡು ಎದ್ದು ನಿಂತು ಇದನ್ನು ದಾಟು, ಮೆಟ್ಟು, ಹೊರಡು ಎಂಬ ಕರೆ ಒಳಗಿನಿಂದ ಕೇಳಿಬರುತ್ತಿರುವಾಗ ಮುಂಡೆ ಅರಿವು ಹಾಯದೆ ತೊಳಲಬೇಕಾಗುವುದುಂಟು. ಆಗ್ಗೆ ಕಾಣುವ ಸ್ವತಂತ್ರ ವರ್ತನದ ರೂಪಗಳು ಬಿಟ್ಟು ಹೊರಡಬೇಕೆಂದಿರುವ ಬಾಳಿಗಿಂತ ಭಯಾನಕವಾಗಿ ಹಿತರಹಿತವಾಗಿ ಕಾಣುತ್ತಿರಬಹುದು.

ಆದರೂ ಶ್ರದ್ಧಾಳುಗಳಿಗೆ ಗತಿಯಿಲ್ಲದೆ ತಮ್ಮ ತಮ್ಮ ದಾರಿಯನ್ನು ತಾವು ಹೊಸದಾಗಿ ಕಂಡುಕೊಳ್ಳಬೇಕಾಗುವುದು. ಅಂತಹ ಪರಿಸ್ಥಿತಿ ನಮ್ಮಲ್ಲಿ ಬಂದಿರುವ ಈಗ ಈ ಬಗೆಯ ನಾಟಕಗಳಲ್ಲಿನ ಸ್ಥಿತಿದರ್ಶನವು ತೀಕ್ಷ್ಣ ಪ್ರಗತಿ ಚೈತನ್ಯವನ್ನು ಹೊತ್ತ ಒಂದು ಧರ್ಮಗರ್ಭದಂತೆ ಪೂರ್ಣಫಲವಾಗಿ ಕಾಣುವುದು''[೧೫]

ಹೀಗೆ ಇಬ್ಸನ್ನನ ನಾಟಕದ ಆಂತರ್ಯವನ್ನು ನಮ್ಮ ಸಮಾಜದ ದೃಷ್ಟಿಯಿಂದ ಪರಿಶೀಲಿಸುತ್ತ 'ಇಬ್ಸೆನ್ ವರ್ಣಿಸುವ ಜನ ನಮ್ಮ ದಿನಚರಿಯ ಲೋಕದ ಜನರು, ಅವರ ನಡೆ ನುಡಿ ವ್ಯಾಪಾರ ಸರ್ವಸಾಧಾರಣವಾದವು, ಸನ್ನಿವೇಶಗಳು ಸಹಜವಾದವು' ಎನ್ನುತ್ತಾರೆ[೧೬]

''ಅವಲೋಕನ ವಿಮರ್ಶೆಗಳೂ ಜೀವನ ವಿಮರ್ಶೆಯೇ ಆಗುತ್ತವೆ – ಮ್ಯಾಥ್ಯೂ ಆರ್ನಾಲ್ಡ್ ಹೇಳುವಂತೆ ಕೃತಿಯ ಓದಿಗೆ ಆಂತರ್ಯದ ಗ್ರಹಿಕೆಗೆ ನೆರವಾಗುವ ವಿವೇಚನೆ ವೀಸೀ ಅವಲೋಕನಗಳ ವೈಶಿಷ್ಟ್ಯ. ವರ್ತಮಾನದ ಭರದಲ್ಲಿ ಹಿಂದಿನದನ್ನು ಹಳತು ಎನ್ನಲಾಗದ ವಿಶೇಷ ದೃಷ್ಟಿ ಅವರದು'' ಎನ್ನುವ ಎಂ.ಎಚ್. ಕೃಷ್ಣಯ್ಯನವರ ಮಾತು ವೀಸೀ ಅವರ ಅವಲೋಕನದ ವಿಶಿಷ್ಟತೆಗೆ ಹಿಡಿದ ಕನ್ನಡಿಯಾಗಿದೆ.

ಅಡಿಟಿಪ್ಪಣಿಗಳು

೧. ಪ್ರಬುದ್ಧ ಕರ್ನಾಟಕ, ಯುಗಾದಿ ಸಂಚಿಕೆ, ೧ ಮೊದಲ ಸಂಚಿಕೆ, ೧೯೨೦
೨. ಪ್ರಬುದ್ಧ ಕರ್ನಾಟಕ, ಸಂ ೪, ಸಂ ೪, ೧೯೨೩
೩. ಸಿದ್ಧವನಹಳ್ಳಿ ಕೃಷ್ಣಶರ್ಮ, ಪ್ರಬುದ್ಧ ಕರ್ನಾಟಕ, ಸಂ ೫, ಸಂ ೧,
೪. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೪, ಪುಟ ೪೧೧
೫. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು, ೨೦೦೧, ಪುಟ ೧೬೧
೬. ಶ್ರೀಕೃಷ್ಣಸೂಕ್ತಿ, ಸೆಪ್ಟೆಂಬರ್ ೧೯೧೦
೭. ಜಿ.ವೆಂಕಟಸುಬ್ಬಯ್ಯ, ೨೫–೧೦–೧೯೯೪, ಕನ್ನಡಪ್ರಭ
೮. ಜಿ. ವೆಂಕಟಸುಬ್ಬಯ್ಯ, ಕನ್ನಡವನ್ನು ಉಳಿಸಿ ಬೆಳೆಸಿದವರು, ಕರ್ನಾಟಕ ಸಂಘ, ಪುತ್ತೂರು
೯. ಸಂಸ ನಾಟಕಗಳು, ಸಂ: ಬಿ.ವಿ. ವೈಕುಂಠರಾಜು, ಮುನ್ನುಡಿ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೮
೧೦. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಸಂ ೨೦, ಸಂ ೧, ಪುಟ ೧೧೨–೧೧೫
೧೧. ಪ್ರಬುದ್ಧ ಕರ್ನಾಟಕ, ಸಂ:೫–೨, ೧೯೨೩
೧೨. ಎಂ.ಎಚ್. ಕೃಷ್ಣಯ್ಯ, ಅವಲೋಕನ, ಸಾಹಿತ್ಯಾವಲೋಕನ ವಿಮರ್ಶಾ ಸಂಪುಟ ೪, ವೀಸೀ, ಪುಟ ೨೮
೧೩. ಎನ್.ಎಸ್. ತಾರಾನಾಥ್, ಪ್ರಸ್ತಾವನೆ, ವೀಸೀ ವಿಮರ್ಶೆ ಸಂಪುಟ ೨, ಕಾವ್ಯ–ನಾಟಕ, ಪುಟ ೨೮
೧೪. ಅದೇ ಪುಟ ೨೮
೧೫. ವೀಸೀ, ಪ್ರಬುದ್ಧ ಕರ್ನಾಟಕ, ಸಂಚಿಕೆ ೨, ಸಂಪುಟ ೧೮, ೧೯೩೭
೧೬. ವೀಸೀ: ಪ್ರಬುದ್ಧ ಕರ್ನಾಟಕ, ಸಂಚಿಕೆ ೨, ಸಂಪುಟ ೧೮, ೧೯೩೭

೮. ಸಾಹಿತ್ಯಿಕ ಪತ್ರಿಕೆಗಳಲ್ಲಿ ಪ್ರಾಚೀನ ಹಾಗು ಮಧ್ಯಕಾಲೀನ ಸಾಹಿತ್ಯದ ವಿವೇಚನೆ

ಕನ್ನಡದ ಸಂದರ್ಭದಲ್ಲಿ 'ಸಾಹಿತ್ಯಿಕ ಪತ್ರಿಕೆಗಳು' ಎಂದು ಕರೆಯುತ್ತಿರುವ ಪತ್ರಿಕೆಗಳು ಪ್ರಾರಂಭಗೊಂಡಿದ್ದೇ ಸರಿಸುಮಾರು ಅರವತ್ತರ ದಶಕದಲ್ಲಿ. ಅದಕ್ಕೂ ಮುಂಚೆ ಕನ್ನಡದಲ್ಲಿ ಸಾಹಿತ್ಯ ಪತ್ರಿಕೆಗಳು ಇರಲೇ ಇಲ್ಲ ಎಂದರ್ಥವಲ್ಲ. ಪ್ರಬುದ್ಧ ಕರ್ನಾಟಕ, ಜೀವನ, ಜಯಂತಿ, ಜಯಕರ್ನಾಟಕ ಮೊದಲಾದ ನಿಯತ ಕಾಲಿಕೆಗಳು ಸೃಜನಶೀಲ ಸಾಹಿತ್ಯಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದ್ದವು. ತಮ್ಮ ಪತ್ರಿಕೆಯ ಬಹುಭಾಗವನ್ನು ಕತೆ, ಕಾವ್ಯ, ವಿಮರ್ಶೆಗಳಿಗೆ ಮೀಸಲಿರಿಸಿದ್ದವು. ಇವುಗಳ ಜೊತೆಗೆ ಅಂದಂದಿನ ರಾಜಕೀಯ ಸ್ಥಿತಿಗತಿಗಳು ಇತ್ಯಾದಿ ಲೇಖನಗಳು ಇರುತ್ತಿದ್ದವು. ಆದರೆ ಇವುಗಳನ್ನು ಆಗ ಸಾಹಿತ್ಯಿಕ ಪತ್ರಿಕೆಗಳು ಎಂಬ ಹೆಸರಿನಿಂದ ಕರೆಯುತ್ತಿರಲಿಲ್ಲ.[7] ಕ್ರಮೇಣ ಜನಪ್ರಿಯ ಪತ್ರಿಕೆಗಳು ಕೌಟುಂಬಿಕ ಪತ್ರಿಕೆಗಳು ಹೆಚ್ಚಾಗ ತೊಡಗಿದ್ದರಿಂದ ಸಾಹಿತ್ಯ ಪತ್ರಿಕೆಗಳು ಸಂಪೂರ್ಣವಾಗಿ ಸಾಹಿತ್ಯಕ್ಕೇ ಮೀಸಲಾಗಬೇಕಾಯಿತು. ಇವತ್ತು ನಾವು ಕರೆಯುತ್ತಿರುವ 'ಸಾಹಿತ್ಯ ಪತ್ರಿಕೆ'ಗಳು ಪ್ರಾರಂಭವಾದದ್ದು ಈ ಹಿನ್ನೆಲೆಯಲ್ಲಿ. ಸಾಕ್ಷಿ, ಮನ್ವಂತರ, ಲಹರಿ ಮುಂತಾದ ಪತ್ರಿಕೆಗಳು ಅರವತ್ತರ ದಶಕದಲ್ಲಿ ಪ್ರಾರಂಭವಾಗುವ ಮೂಲಕ ಸಾಹಿತ್ಯ ಪತ್ರಿಕೆಗಳ ಅಧ್ಯಾಯವೊಂದು ಪ್ರಾರಂಭವಾಯಿತು.

ಸಾಹಿತ್ಯ ಪತ್ರಿಕೆಗಳ ಒಟ್ಟು ಅಧ್ಯಯನ ಒಂದು ರೀತಿಯಲ್ಲಿ ಕನ್ನಡ ಭಾಷೆಯ ಸಾಹಿತ್ಯದ ಸಮೀಕ್ಷೆಯೂ ಆಗಿದೆ. ಏಕೆಂದರೆ ಸಾಹಿತ್ಯ ಪತ್ರಿಕೆಗಳು ಅಂದಂದಿನ ಸಾಹಿತ್ಯ ಹಾಗು ಸಾಹಿತ್ಯಕ ಚಳುವಳಿಗಳನ್ನು ತಿಳಿಸುವ ದಾಖಲೆಗಳಾಗಿವೆ. ಅದಲ್ಲದೆ ಅಂದಂದಿನ ಸಾಂಸ್ಕೃತಿಕ ಸಂದರ್ಭಗಳನ್ನು, ಸಾಹಿತ್ಯಿಕ ವಾತಾವರಣವನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿವೆ. ಕಾಲಕಾಲಕ್ಕೆ ಕನ್ನಡ ಸಾಹಿತ್ಯದ ನೆಲೆ–ಬೆಲೆ ಕಟ್ಟುವುದರಲ್ಲಿ ವಿಮರ್ಶೆಯನ್ನು ಬೆಳೆಸುವುದರಲ್ಲಿ ಸಹಕಾರಿಯಾಗಿವೆ. ಹಳಗನ್ನಡವನ್ನು ಹೊಸ ಸಾಹಿತ್ಯಕ ಪರಿಕರಗಳೊಂದಿಗೆ ಪರಿಶೀಲಿಸುವ ಪರಿಪಾಟ ಆಧುನಿಕ ಯುಗದಲ್ಲಿ ಸಾಧ್ಯವಾಯಿತು. ಸಾಹಿತ್ಯಿಕ ಪತ್ರಿಕೆಗಳಾದರೂ ಈ ಎಲ್ಲ ಪರಿಶೀಲನೆ, ಪ್ರಯೋಗಗಳಿಗೆ ಒಂದು ವೇದಿಕೆಯನ್ನು ಒದಗಿಸಿ ಕೊಟ್ಟಿತು.

ಹಲವಾರು ಪತ್ರಿಕೆಗಳಲ್ಲಿ ಚರ್ಚೆ ವಾಗ್ವಾದಗಳನ್ನು ಉಂಟು ಮಾಡಿದ ಪಂಪನ 'ವಿಕ್ರಮಾರ್ಜುನ ವಿಜಯಂ'ನ ಪದ್ಯವಿದು:

ನೆತ್ತಮನಾಡಿ ಭಾನುಮತಿ ಸೋಲ್ತಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪರಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ।
ಳ್ಕುತ್ತಿರೆಯೇವಮಿಲ್ಲ ದಿವನಾಯ್ತುದೋ ತಪ್ಪದೆ ಪೆಂತೆ ತುಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ॥

ಮಾಧವ ಪೆರಾಜೆ 'ವಾಗ್ವಿಲಾಸ' ಮತ್ತು ಸಾಷಾ ಮೂಲವಾದ 'ಶಾಪ ವಿಮೋಚನೆ' ಎಂಬ ಎರಡು ಪ್ರಮುಖ ನೆಲೆಯಲ್ಲಿ ಪರಿಭಾವಿಸಿ ಚರ್ಚೆಗೊಂದು ಹೊಸ ತಿರುವು ನೀಡುವ ಉದ್ದೇಶದಿಂದ ಈ ಲೇಖನವನ್ನು ಸಂಕ್ರಮಣದಲ್ಲಿ ಪ್ರಕಟಿಸಿದ್ದಾರೆ. ಇದನ್ನು ಲೇಖನದ ಆರಂಭದಲ್ಲೇ ಹೇಳಿದ್ದಾರೆ. ಸರಿ ಸುಮಾರು ಐವತ್ತು ವರ್ಷಗಳ ಕಾಲ ಈ ಪದ್ಯದ ಕುರಿತು ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಹಾಗೆ

ಮಾಡುವ ಮೂಲಕ ನಿರಂತರವಾಗಿ ಸಾಹಿತ್ಯಿಕ ವಾತಾವರಣವನ್ನು ಅವರು ಸೃಷ್ಟಿಸಿದ್ದಾರೆ. ಈ ಪದ್ಯ ಕುರಿತಂತೆ ಮೊದಲನೆಯದಾಗಿ 'ಜಯಕರ್ನಾಟಕ' ಪತ್ರಿಕೆಯಲ್ಲಿ ವಾಗ್ವಾದಗಳು ಕಂಡು ಬರುತ್ತವೆ.

ದುರ್ಯೋಧನನ ಹೆಂಡತಿಯಾದ ಭಾನುಮತಿಯೊಡನೆ ದುರ್ಯೋಧನನ ಎದುರಿನಲ್ಲೇ ಕರ್ಣನು ಪಗಡೆಯಾಡುತ್ತಿರಲು ಭಾನುಮತಿ ಸೋಲಲು ಪಂಥದಂತೆ ಅವಳ ಮುತ್ತಿನ ಹಾರಕ್ಕೆ ಕೈಹಾಕಲು ಅದು ಹರಿದು ಹೋಗುತ್ತದೆ. ಎದುರಿಗೆ ಇದ್ದ ದುರ್ಯೋಧನನು ಈ ಪರಿಸ್ಥಿತಿಯನ್ನು ಸೌಮ್ಯದಿಂದ ನೋಡುತ್ತಿದ್ದನೇ ಹೊರತು ಕರ್ಣನನ್ನು ಆಕ್ಷೇಪಿಸಲಿಲ್ಲ. ಅಲ್ಲದೆ ಅವನ ಗಮನವು ಚೆಲ್ಲಿದ ಮುತ್ತುಗಳನ್ನು ಆರಿಸುವುದರಲ್ಲಿ ಇತ್ತು. ಕರ್ಣನ ವರ್ತನವು ಸುಲಭವಾಗಿ ಆಕ್ಷೇಪಣೀಯವಾಗ ಬಹುದಿತ್ತು. ಉತ್ತರ ಕ್ಷಣದಲ್ಲಿ ಕರ್ಣ ಎಂಥ ಅಚಾತುರ್ಯ ಮಾಡಿದೆ ಎಂದುಕೊಂಡಿರಬೇಕು. ಭಾನುಮತಿಯಲ್ಲಿ ಕರ್ಣನಿಗೆ ಇದ್ದ ಸಲುಗೆಯ ಕಾರಣ ಅವನ ವರ್ತನೆ ತಪ್ಪಾಗಿ ಪರಿಣಮಿಸಲಿಲ್ಲ. ಭಾನುಮತಿಯಾಗಲಿ, ದುರ್ಯೋಧನನಾಗಲಿ ಕರ್ಣನಲ್ಲಿ ದೋಷಾರೋಪಣೆ ಮಾಡಲಿಲ್ಲ. ಇಷ್ಟು ಸಲುಗೆಗೆ ಅವಕಾಶ ಕೊಟ್ಟಿದ್ದ ಕರ್ಣನನ್ನು ಪರಿಗಣಿಸದೆ ಅವನಲ್ಲಿ ಕೃತಘ್ನನಾಗಿ ಪಾಂಡವರ ಪಕ್ಷಪಾತಿಯಾಗುವುದು ತನಗೆ ಅಪಕೀರ್ತಿ ತರತಕ್ಕುದು ಎಂದು ಕರ್ಣ ಬಲ್ಲನು.[೨]

ಅದೇ ಸಂಪುಟದ ಹನ್ನೊಂದನೆಯ ಸಂಚಿಕೆಯಲ್ಲಿ ಮಂಗಳೂರಿನ ಶ್ರೀ ಪದ್ಮನಾಭ ಎಂಬುವರು 'ಪಂಪಭಾರತದ ಕರ್ಣನ ಪಾತ್ರ – ಒಂದು ಕಳಂಕದ ಮಾರ್ಜನ' ಎಂಬ ಲೇಖನದಲ್ಲಿ ಈ ಪದ್ಯದ ಯಥಾರ್ಥ ವಿವರಣೆ ಬರೆದಿದ್ದಾರೆ. ಅದು ಹೀಗಿದೆ

"(ರಾಜನು) ನೆತ್ತವನ್ನು ಆಡಿ ಭಾನುಮತಿ ಸೋಲಲು ಸೋಲನ್ನು ಕೊಡಬೇಕೆಂದು ಪೀಡಿಸುತ್ತಿದ್ದಾಗ ಮುತ್ತಿನ ಲಂಬಣವು ಹರಿದು ಹೋಯಿತು. (ಆಗ ಭಾನುಮತಿ) ಸುರಿದು ಬಿದ್ದ ಮುತ್ತಿನ ಕೇಡನ್ನು ನೋಡಿ ಬಳುಕುತ್ತಿರಲು (ಅರಸನು) ವ್ಯಥೆಪಡದೆ ಇವುಗಳನ್ನು ಹೆಕ್ಕೋಣವೇ ಹೇಳೆಂದು (ಅಲ್ಲಿದ್ದ ನನ್ನೊಡನೆ) ಹೇಳುವಷ್ಟು ಅನ್ಯೋನ್ಯತೆಯುಳ್ಳ ಅರಸನನ್ನು ಬಿಟ್ಟು ನಿಮ್ಮೊಡನೆ ಸೇರಿದರೆ ನಾನು ಬೇಡನಲ್ಲವೇ"[೩]

ಇದೇ ಅಭಿಪ್ರಾಯ ಸಮರ್ಥಿಸುವ ಮತ್ತೊಂದು ಲೇಖನ ಜಯಕರ್ನಾಟಕದ ೧೪ನೆಯ ಸಂಪುಟ ಸಂಚಿಕೆ ೧ರಲ್ಲಿ ಪ್ರಕಟವಾಗಿದೆ. ಅದು ಮುಳಿಯ ತಿಮ್ಮಪ್ಪಯ್ಯನವರ 'ನೆತ್ತವನ್ನಾಡಿದವರಾರು?' ಎಂಬುದು. ಅದೇ ಸಂಪುಟದ ಮೂರನೆಯ ಸಂಚಿಕೆಯಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳು 'ಭಾನುಮತಿಯೊಡನೆ ನೆತ್ತವನಾಡಿದವರಾರು?' ಎಂಬ ಲೇಖನದಲ್ಲಿ

> "ನೆತ್ತಮನಾಡಿ ಎಂಬ ಪದ್ಯಕ್ಕೆ 'ಇದ್ದಕ್ಕಿದ್ದಂತೆಯೇ ಅನ್ವಯ ಮಾಡಿ ಹೀಗೂ ಹೇಳಬಹುದು; (ನಾನು, ಎಂದರೆ ಕರ್ಣನು) ನೆತ್ತವನ್ನು ಆಡಿ ಭಾನುಮತಿ ಸೋಲಲು, ಸೋಲವನ್ನು ಕೊಡಬೇಕೆಂದು (ನಾನು) ಕಾಡುತ್ತಿದ್ದಾಗ (ಎಂದರೆ ಮುತ್ತಿನ ಲಂಬಣವನ್ನು ಎಳೆದಾಡುತ್ತಿದ್ದಾಗ) ಅದು ಹರಿದು ಹೋಯಿತು. ಆಗ (ಸುರಿದು ಹೋದ) ಮುತ್ತಿನ ಕೇಡನ್ನು ನೋಡಿ (ಆಕೆ) ಬಳುಕುತ್ತಿರಲು (ಮತ್ತು ನಾನು ಆಯ್ದು ಕೊಡಬೇಕೆಂದು ಹೋಗಲು) ಅರಸನು ಅಸಮಾಧಾನ ಪಟ್ಟುಕೊಳ್ಳದೆ 'ಇವುಗಳನ್ನು ಆಯಬೇಕೇ? (ನ್ಯಾಯವಾಗಿ) ನಿಜವಾಗಿ ಹೇಳು' ಎಂದನು. ಇಂತಹ ಅರಸನನ್ನು ಬಿಟ್ಟು ನಿಮ್ಮೊಡನೆ ಸೇರಿದರೆ ನಾನು ಬೇಡನಲ್ಲವೇ"[೪]

ಮೈತ್ರಿ ಇದ್ದರೆ ಮಿತ್ರನ ತಪ್ಪು ತಪ್ಪಾಗಿ ಕಾಣುವುದಿರಲಿ ಒಂದು ಲೋಪವಾಗಿಯೂ ಕಾಣುವುದಿಲ್ಲ. ಇದು ನಿಜವಾದ ಮೈತ್ರಿಯ ಪ್ರಧಾನ ಲಕ್ಷಣ. ಹೀಗೆ ಯಾವುದು ಸ್ವಾಭಾವಿಕವಾಗಿ, ಮಿತ್ರ ಪತ್ನಿಯಲ್ಲಿ ಅತಿ ಸ್ವಾತಂತ್ರ್ಯ ದೋಷ ಕಾರಣದಿಂದೆಂದು ಕರ್ಣನಿಗೆ ಶಂಕೆ ಹುಟ್ಟಿತೋ ಅದು ದುರ್ಯೋಧನನಿಗೆ ದೋಷವೆನಿಸಲಿಲ್ಲ, ಶಂಕೆ ಕಾಣಲಿಲ್ಲ..ಭಾನುಮತಿ ಬಳ್ಳಿದ್ದು ಗಂಡನೆದುರಲ್ಲಿ ನಾನೂ ಕರ್ಣನೂ ಇಷ್ಟು ಸಲಿಗೆಯಿಂದ ಇದ್ದೆವಲ್ಲ ಗಂಡ ಏನು ತಿಳಿದುಕೊಂಡನೋ ಎಂದೇ"[೫]

ಅದೇ ಪತ್ರಿಕೆಯ ಸಂಚಿಕೆ ೫ ರಲ್ಲಿ ಮುಳಿಯ ತಿಮ್ಮಪ್ಪಯ್ಯನವರು

"ಭೂಪೋತ್ತಮನೊಡನೆ ನೆತ್ತವನಾಡಿ ಭಾನುಮತಿ ಸೋಲಲು ಸೋಲವನ್ನು (ಸೋತವನು, ಗೆದ್ದವನಿಗೆ ಕೊಡಬೇಕೆಂಬುದು ನಿರ್ಣೀತವಾದ ವಸ್ತು – ಪಣವನ್ನು ಈವುದು ಎಂದು (ಗೆದ್ದ ಭೂಪೋತ್ತಮನು ಸೋತ ಭಾನುಮತಿಯನ್ನು) ಕಾಡುತ್ತಿರಲಿ ಲಂಬಣವು ಹರಿದು ಹೋಯಿತು. (ಹಾಗೆ ಲಂಬಣವು ಹರಿದು ಮುತ್ತುಗಳೆಲ್ಲ ಚದುರಿ ಹೋಗಲು ಆ) ಮುತ್ತಿನ ಕೇಡನ್ನೇ ಮತ್ತೂ ಮತ್ತೂ ನೋಡಿ (ಭಾನುಮತಿ) ಬಳ್ಳುತ್ತ (ಮನ ಮರುಗುತ್ತ) ಇದ್ದಳು. (ಆದ್ದರಿಂದ) ವಾದವುಂಟಾಗದೇ ಇದನ್ನು (ಸೋಲವಾಗಿ ನನಗೆ ಕೊಡಬೇಕಾದ ಈ ಮುತ್ತುಗಳನ್ನು ತಾನು) ಆಯ್ದುಕೊಳ್ಳಬಹುದೋ ತಪ್ಪದೆ (ಪಕ್ಷಪಾತವಿಲ್ಲದೆ) ಹೇಳಿರಿ' ಎಂಬ ಭೂಪೋತ್ತಮನನ್ನು ತೊರೆದು ನಿಮ್ಮೊಳಗೆ ಸೇರಿದರೆ (ಈ ಕರ್ಣನು) ಬೇಡನೆನ್ನಿಸಿಕೊಳ್ಳುವೆ'

ಎಂದಿದ್ದಾರೆ.[೬]

ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟರು

ದುರ್ಯೋಧನನ ಅಂತಃಪುರದಲ್ಲಿ, ಕರ್ಣನೂ ಇದ್ದಾಗ, ಭಾನುಮತಿಯೂ ಕೌರವನೂ ನೆತ್ತಮನಾಡುತ್ತಿದ್ದರು. ಅದರಲ್ಲಿ ಭಾನುಮತಿ ಸೋತಳು. ಸೋತ ಭಾನುಮತಿ ಸೋಲವನ್ನು ಕೊಡಬೇಕಾಗಿದ್ದರೂ ಅವಳು ಕೊಡಲಿಲ್ಲ (ಸೋತ ಹೆಣ್ಣು ಸೋಲವನ್ನು ಕೊಡದೆ ಜಾರಿಕೊಳ್ಳುವ ಸ್ವಭಾವದವಳು ಎಂದು ಮುದ್ದಣನೂ ತನ್ನ 'ರಾಮಾಶ್ವಮೇಧ'ದ ಕಟ್ಟಕಡೆಯ ಆಶ್ವಾಸದಲ್ಲಿ ತೋರಿಸಿಕೊಟ್ಟಿದ್ದಾನೆ). ಇಲ್ಲಿ ಸೋತವರು ಕೊಡಬೇಕಾದುದೇನು ಎಂದು ಸೂಚಿತವಾಗಿಲ್ಲ. ಕಿರೀಟದಿಂದ ಕೆನ್ನೆಯ ಮೇಲೆ ತೊನೆದಾಡುವಂತೆ ಇಳಿಯಬಿಟ್ಟ ಕುಚ್ಚು ಎಂದರೆ ಇಬ್ಬರ ಕಿರೀಟದಲ್ಲಿಯೂ ಇರುವ ಆ ಕುಚ್ಚೇ ಪಣವಾಗಿಟ್ಟು ಕೊಂಡಿದ್ದ ವಸ್ತುವಾಗಿತ್ತು ಎಂದು ಹೇಳುವುದು ಸರಿಯಾಗುತ್ತದೆ. ಮುತ್ತಿನ ಹಾರವೆಂದಿದ್ದರೂ ಸೊಂಟದ ಪಟ್ಟಿಯಲ್ಲಿ (ಒಡ್ಯಾಣದಲ್ಲಿ) ತೂಗಾಡುವ ಕುಚ್ಚು ಎಂದಿದ್ದರೂ ಸಮರ್ಪಿತವಾಗುತ್ತದೆ. ಇಲ್ಲಿ ಯಾವುದನ್ನು ತೆಗೆದುಕೊಳ್ಳೋಣ? ಬಿದ್ದ ಮುತ್ತುಗಳನ್ನು ಆಯ್ದುಕೊಳ್ಳುವುದೋ ಎಂಬಲ್ಲಿ ಅಗ್ರಾಮ್ಯತಾ ಗುಣದ ಶ್ಲೇಷವಿದೆ ಎಂದು ಒಪ್ಪಿಕೊಳ್ಳುವುದಾದರೆ, ಕಿರೀಟದಿಂದ ತೊನೆಯುವ ಕುಚ್ಚು ಎಂಬುದೇ ಸಮಂಜಸ. ಏಕೆಂದರೆ ಬೇಂದ್ರೆಯವರ 'ಬಡವ–ಬಡವಿ' ಎಂಬ ರೂಪಕದಲ್ಲಿ 'ಆತ ಕೊಟ್ಟ ವಸ್ತು ಒಡವೆ, ನನಗೆ ಅವಗೆ ಗೊತ್ತು! ತೋಳುಗಳಿಗೆ ತೋಳ ಬಂದಿ ಕೆನ್ನೆ ತುಂಬ ಮುತ್ತು' ಎಂಬಲ್ಲಿ ವಸ್ತುಧ್ವನಿ ಹೇಗೆ ಉದಾಹರಣೆಯಾಗುತ್ತದೆ ಎಂಬುದನ್ನು ಕೆ. ಕೃಷ್ಣಮೂರ್ತಿಯವರು ಧ್ವನ್ಯಾಲೋಕದ ಪೀಠಿಕೆಯಲ್ಲಿ ವಿಶದೀಕರಿಸಿದ್ದಾರೆ. ದುರ್ಯೋಧನನ ರಸಿಕತೆಯಿಂದ ಕೆನ್ನೆ ತುಂಬ ಮುತ್ತನ್ನು ಪಡೆದುಕೊಳ್ಳಲೇ ಎನ್ನುವಾಗಲೂ ಕರ್ಣನು ಅಲ್ಲಿಯೇ ಇದ್ದನೆಂದ

ಮೇಲೆ ಹಾಗೆ ಹೇಳುವಲ್ಲಿ ಕೌರವನಿಗೆ ಏನೂ ಜಿಗುಪ್ಸೆ (=ಪಾಪ) ಆಗಲಿಲ್ಲ, ಎನ್ನುವಾಗ ಅವನು ಕರ್ಣನಿಗೆ ಎಷ್ಟು ಸ್ನೇಹ ತೋರಿಸಿದ್ದನು ಎಂಬುದು ಸ್ಪಷ್ಟ"[೭] ಎಂದಿದ್ದಾರೆ.

ಲಂಬಣವೆಂದರೇನು?

೧. ಬಳ್ಕಿದುದು ಯಾರು?

೨. ಏವ್ ಎಂದರೇನು?

೩. ಆಯ್ವುದೋ, ಆವುದೋ ಎಂಬ ಪಾಠಾಂತರಗಳಲ್ಲಿ ಯಾವುದು ಸರಿ?

೪. ಪೇಳಿರಿ ಎಂಬುದರ ಅರ್ಥವೇನು?

೫. ನೆತ್ತವಾಡಿದುದು ಇಬ್ಬರೇ ಮೂವರೇ?

೬. ಇಬ್ಬರೇ ಆಡಿದುದಾದಲ್ಲಿ ಭಾನುಮತಿಯೊಡನೆ ಆಡಿದುದು ಕರ್ಣನೇ ದುರ್ಯೋಧನನೇ?

೭. ಪಂಪನ ದೃಷ್ಟಿ ಏನು?[೮]

ಒಂದರಿಂದ ಐದರ ವರೆಗಿನ ಅಂಶಗಳು ವ್ಯಾಕರಣ, ಅನ್ವಯಾರ್ಥಗಳಿಗೆ ಸಂಬಂಧಿಸಿದುದು. ಉಳಿದ ಮೂರು ಒಟ್ಟು ಪದ್ಯದ ಭಾವಾರ್ಥಕ್ಕೆ ಸಂಬಂಧಿಸಿದವುಗಳು. ಕಡೆಯ ಮೂರು ಅಂಶಗಳ ಕುರಿತು ವಿದ್ವಾಂಸರಲ್ಲಿ ಬಹುವಾದ ವಾಗ್ವಾದ ನಡೆದಿದೆ. ಈ ಪದ್ಯದಲ್ಲಿ ಮೂವರು ವ್ಯಕ್ತಿಗಳಿದ್ದಾರೆ – ಭಾನುಮತಿ, ದುರ್ಯೋಧನ ಹಾಗು ಕರ್ಣ. ಇಲ್ಲಿ ಭಾನುಮತಿ ನೆತ್ತಮನಾಡಿ ಸೋತಿದ್ದಾಳೆ. ಅವಳೊಡನೆ ನೆತ್ತಮನಾಡಿ ಸೋಲನು ನೀಡುವುದೆಂದು ಕಾಡುತ್ತಿರುವವರು ಯಾರು? ದುರ್ಯೋಧನನೇ ಅಥವ ಕರ್ಣನೇ?[೯] ದುರ್ಯೋಧನ ಎಂಬುದು ಪದ್ಮನಾಭ, ಮುಳಿಯ ತಿಮ್ಮಪ್ಪಯ್ಯ, ಡಿ. ರೇಣುಕಾಚಾರ್ಯ, ಶೇಷಭೀ, ಪಾಂಶವಾಡ, ವೆಂಕಟಾಚಾರ್ಯ, ಸೇಡಿಯಾಪು, ತೆಕ್ಕುಂಜೆ ಗೋಪಾಲಕೃಷ್ಣಭಟ್ಟರ ಅಭಿಪ್ರಾಯ. ಕರ್ಣನೆಂಬುದು ಡಿ.ವಿ. ಶೇಷಗಿರಿರಾವ್, ಎ.ಆರ್. ಕೃಷ್ಣಶಾಸ್ತ್ರಿ, ಬಿಎಂಶ್ರೀ, ಜಿ.ಪಿ. ರಾಜರತ್ನಂ, ಕುವೆಂಪು, ಡಿ.ಎಲ್.ಎನ್., ತ.ಸು.ಶಾಮರಾಯ, ಆರ್. ರಾಚಪ್ಪ, ಕ.ವೆಂ. ರಾಘವಾಚಾರ್ ಮುಂತಾದವರ ಅಭಿಮತ. ಇವೆರಡಕ್ಕಿಂತ ಭಿನ್ನವಾಗಿ ಕೆ.ವಿ. ಕೃಷ್ಣಭಟ್ಟರು ದುರ್ಯೋಧನ, ಕರ್ಣ ಇಬ್ಬರೂ ಎಂದಿದ್ದಾರೆ. ಬಹುಕಾಲ ನಡೆದ ಈ ವಾಗ್ವಾದಕ್ಕೆ ಅಂತಿಮ ತೀರ್ಪು ಎನ್ನಬಹುದಾದ ವಿದ್ವತ್ಪೂರ್ಣ ಲೇಖನಗಳೆರಡನ್ನು ಸೇಡಿಯಾಪು ಕೃಷ್ಣಭಟ್ಟರು ಬರೆದಿದ್ದಾರೆ. ಅವುಗಳೆಂದರೆ 'ಭಾನುಮತಿಯ ನೆತ್ತ' ಹಾಗು 'ನೆತ್ತ ಮತ್ತು ಮುತ್ತು'.

ಭಾನುಮತಿಯ ನೆತ್ತ ಪ್ರಕಟವಾದದ್ದು ೧೯೭೬ರ ಪ್ರಬುದ್ಧ ಕರ್ನಾಟಕದಲ್ಲಿ, ನೆತ್ತ ಮತ್ತು ಮುತ್ತು ಲೇಖನ ಬರೆದದ್ದು ೧೯೯೧ರಲ್ಲಿ. ಈ ಲೇಖನ ಪಂಪನ ಈ ಪದ್ಯ ಕುರಿತ ಚರ್ಚೆಯ ಮುಕ್ತಾಯ ಎನ್ನುವಂತಾಯಿತು. ಸೇಡಿಯಾಪು ಅವರು ಹೇಳುವಂತೆ 'ಶಾಪಹತ'ಳಾದ ಪಂಪನ ಮುದ್ದಿನ ಮಗಳು ಶಾಪ ವಿಮೋಚನೆ ಗೊಂಡಿದ್ದಾಳೆ. ಈ ಲೇಖನ ಅಲ್ಲಿಯವರೆಗೆ ನಡೆದ ಎಲ್ಲ ವಾಗ್ವಾದಗಳಿಗೆ ಅಂತಿಮ ತೀರ್ಪು ಎನ್ನಬಹುದಾಗಿದೆ. ಸೇಡಿಯಾಪು ಈ ಪದ್ಯವನ್ನು ಹೀಗೆ ವಿವೇಚಿಸಿದ್ದಾರೆ.

ನೆತ್ತಮನಾಡಿ,
ಭಾನುಮತಿ ಸೋಲ್ತಡೆ
ಸೋಲಮನೀವುದೆಂದು ಕಾಡುತ್ತಿರೆ
ಲಂಬಣಂ ಪರಿಯೆ
ಮುತ್ತಿನ ಕೇಡೆನೆ ನೋಡಿ, ನೋಡಿ ಬಳ್ಕುತ್ತಿರೆ

ಏವಮಿಲ್ಲದಿವನಾವುದೋ ತಪ್ಪದೆ ಪೇಳಿಯೆಂಬ ಭೂಪೋತ್ತಮನು ಬಿಸುಟಿರದೆ
ನಿಮ್ಮೊಳೆ ಪೊಕ್ಕಡೆ
ಬೇಡನಲ್ಲವೇ?

ಅದರ ಅರ್ಥವಿವರಣೆ ಹೀಗಿದೆ:

"ಈ ಕರ್ಣನ ಸಮಕ್ಷಮದಲ್ಲಿ –ತನ್ನೊಡನೆ (ಎಂದರೆ ಭೂಪೋತ್ತಮನೊಡನೆ) ಭಾನುಮತಿ ನೆತ್ತಮನಾಡಿ ಸೋತಾಗ ಪಣವನ್ನು ಕೊಡು! (ಮುತ್ತು) ಎಂದು ತಾನು (ಭೂಪೋತ್ತಮನು) ಅವಳನ್ನು ಕಾಡುತ್ತಿರುವಾಗ ಲಂಬಣ (ಮುತ್ತಿನ ಹಾರ ಅಥವ ಮುತ್ತಿನ ಕುಚ್ಚು) ಹರಿಯುವಾಗ ಮುತ್ತುಗಳು ಬೀಳುತ್ತಿರುವುದನ್ನೇ ನೋಡುತ್ತಾ ಅವಳೂ ಲಜ್ಜೆಯಿಂದ ಬಾಗುತ್ತಾ ಇರುವಾಗ, ಇವು (ಈ ಮುತ್ತುಗಳೂ) ತುಚ್ಛವೆಂಬ ಭಾವನೆಯನ್ನು ಬಿಟ್ಟು ಈ ಮುತ್ತುಗಳನ್ನಾದರೂ ಕಳೆದುಕೊಳ್ಳದೆ ಎತ್ತಿಕೊಳ್ಳುವುದೋ ಎಂದು ತನ್ನ ಯೋಚನೆ ಎನ್ನುತ್ತಿರುವ ಇಂತಹ (ಸಹೃದಯನೂ ಸುಸ್ನಿಗ್ಧನೂ ಆದ) ಭೂಪೋತ್ತಮನನ್ನು, ಯುಕ್ತಾಯುಕ್ತ ವಿವೇಕವಿಲ್ಲದೆ ದೂರ ಮಾಡಿ ನಿಮ್ಮೊಂದಿಗೆ ಕೂಡಿಕೊಂಡರೆ ಈ ಕರ್ಣನು ಅಸಭ್ಯನೇ ಸೈ!"

೧. 'ನೆತ್ತಮನಾಡಿ' ಭಾನುಮತಿ ಸೋಲ್ತೊಡೆ
೨. ಸೋಲಮನೀವುದೆಂದು ಕಾಡುತ್ತಿರೆ
೩. ಮುತ್ತಿನ ಕೇಡನೆ ನೋಡಿ ನೋಡಿ ಬಳ್ಕುತ್ತಿರೆ

ಈ ಮೂರು ಸಮಸ್ಯೆಗಳಲ್ಲಿ ಕರ್ತೃಗಳು ಅನುಕ್ತವಾಗಿರುವುದೇ ಈ ಪದ್ಯ ಪಾಷಾಣವಾಗಿರುವುದಕ್ಕೆ ಕಾರಣ ಎನ್ನುತ್ತಾರೆ ಸೇಡಿಯಾಪು.

ನೆತ್ತದಾಟದಲ್ಲಿ ಒಡ್ಡಿದ್ದ ಪಣವೇನು? ಎನ್ನುವುದಕ್ಕೆ ಸೇಡಿಯಾಪು ಇಲ್ಲಿ 'ಮುತ್ತು' ಎಂದರೆ 'ಲಂಬಣದ ಮುತ್ತುಗಳಲ್ಲ' ಬದಲಿಗೆ 'ಚುಂಬನ' ಎಂಬುದಾಗಿ ವಿವರಿಸುತ್ತಾರೆ. 'ಸೋಲಮನೀವುದೆ'ಂದು ಕಾಡಿದವನು ದುರ್ಯೋಧನನೇ ಎನ್ನುವ ಅವರು ಹಿಂದ 'ದಂಪತಿ'ಗಳು ನೆತ್ತಮನಾಡುವಾಗ ಚುಂಬನ ಪಣವಾಗಿರುತ್ತಿತ್ತು ಎಂದು ಅಂತಹ ಉಲ್ಲೇಖಗಳನ್ನು 'ಅಮರುಕ ಶತಕ' (ಅಮರುಕ ಕವಿ) 'ಶಾರ್ಙ್ಗಧರ ಪದ್ಧತಿ' (ಶಾರ್ಙ್ಗಧರ), 'ಸಾಹಿತ್ಯದರ್ಪಣ' (ವಿಶ್ವನಾಥ ಕವಿ) ಮೊದಲಾದವುಗಳಿಂದ ಸೋದಾಹರಣವಾಗಿ ಪ್ರತಿಪಾದಿಸುತ್ತಾರೆ.

ಈ ಸಂದರ್ಭದಲ್ಲಿ ಸೇಡಿಯಾಪು ನೀಡುವ ಅರ್ಥ ವಿವರಣೆ ಹೀಗಿದೆ:

"ಲಂಬಣದ ಮುತ್ತುಗಳು ನೆತ್ತದ ಪಣವಾಗಿರಲಿಲ್ಲ ಎಂಬುದನ್ನು ಸ್ಪಷ್ಟೀಕರಿಸುವುದರೊಡನೆ ಪಣವಾಗಿಟ್ಟದ್ದು ಇವಕ್ಕಿಂತ ಎಷ್ಟೋ ಮೇಲಾದ ಮುತ್ತು ಅಥವ ಮುತ್ತುಗಳು ಎಂಬುದನ್ನು ವ್ಯಂಜಿಸುತ್ತದೆ. ಹಾಗಾದರೆ ಪಣವಾಗಿಟ್ಟಿದ್ದ ಆ ಶ್ರೇಷ್ಠಕರವಾದ ಮುತ್ತು ಯಾವುದಿರಬಹುದು. ಆಲೋಚಿಸುತ್ತಾ ಹೊತ್ತು ಕಳೆಯಲು ಇಲ್ಲಿ ಅವಕಾಶವಿಲ್ಲ; 'ಮುತ್ತು' ಎಂಬ ಪದದ ಶಬ್ದಶಕ್ತಿ ಥಟ್ಟನೆ ಅದರ ಸ್ವರೂಪವನ್ನು ನಮ್ಮ ಮುಂದೆ ತಂದು ನಿಲ್ಲಿಸುತ್ತದೆ. ಅದೇ ಪಣವಾಗಿದ್ದ ಅಮೂಲ್ಯವಾದ ಮುತ್ತು–ಚುಂಬನ. ನೆತ್ತದಲ್ಲಿ ಭಾನುಮತಿ ಕ್ರೀಡಾ ನಿಯಮದಂತೆ ಅದನ್ನು ಕೊಡಬೇಕಾಗಿದ್ದರೂ

ಕಣ್ಣು ಮುಂದೆ ಬೇರೊಂದು ಗಂಡು ಉಪಸ್ಥಿತವಾಗಿರುವಾಗ ಅದನ್ನು ಆಗಲೇ ಅಲ್ಲಿಯೇ ಅವಳು ಹೇಗೆ ಕೊಡಲಾಪಳೂ? ಎಷ್ಟಾದರೂ ಅವಳು (ಹಿಂದಿನ ಕಾಲದ) ಹೆಣ್ಣಲ್ಲವೇ? ಸೋತ ವ್ಯಕ್ತಿ ಗಂಡಾಗಿರುತ್ತಿದ್ದರೆ ಆ ಪಣವನ್ನು ಅಲ್ಲಿಯೇ ಸಂದಾಯ ಮಾಡಲು ಹಿಂಜರಿಯುತ್ತಿರಲಿಲ್ಲ. ಹೆಣ್ಣಿನ ಲಜ್ಜೆಯನ್ನು ತೊಡೆಯುವುದೇ ಗಂಡಿನ ಉತ್ಸವ! ಇಲ್ಲಿ ಗೆದ್ದ ಗಂಡಿಗೆ ನೆತ್ತ ಗೆಲುವಿನ ಮನೋಲ್ಲಾಸದೊಡನೆ ಆ ವಿಜಯೋತ್ಸವವನ್ನು ನೆರವೇರಿಸುವ ಉತ್ಸಾಹ. ಆ ಕಾರಣದಿಂದ 'ಸೋಲವನೀವುದು' ಎಂಬ ಕಾಟ ಭಾನುಮತಿಯ ಒಲೆದಾಟ, ಗಂಡನ ಎಳೆದಾಟ, ಇವೆಲ್ಲದರ ಪರಿಣಾಮವಾಗಿ ಲಂಬಣ ಹರಿದು ನೆಲದ ಮೇಲೆ ಮುತ್ತುಗಳ ಚೆಲ್ಲಾಟ, ಎಷ್ಟು ಕಾಡಿದರೂ ಮೊಗ ಕೊಡದ ಭಾನುಮತಿ ಮುತ್ತುಗಳು ಬಿದ್ದುರುಳುವುದನ್ನೇ ನೋಡುತ್ತಾ ಲಜ್ಜೆಯಿಂದ ತಲೆ ಎತ್ತಲಾರದೆ ಬಾಗಿಯೇ ಇರುತ್ತಿದ್ದಾಗ, ನೆತ್ತದಲ್ಲಿ ಗೆದ್ದರೂ ಪಣಕ್ಕಾಗಿ ಮಾಡಿದ ಸಾಹಸದಲ್ಲಿ ಗೆಲವು ದೊರೆಯದೆ ಇದ್ದು ಗಂಡು ತನಗೆ ಲಭ್ಯವಾಗಬೇಕಾಗಿದ್ದ, ಆದರೆ ಲಬ್ಧವಾಗದಿದ್ದ ಆ ಅನರ್ಘ್ಯವಾದ 'ಮುತ್ತಿಗೆ' ಲಂಬಣದ ಈ ಮುತ್ತುಗಳು ತುಲ್ಯವಲ್ಲದಿದ್ದರೂ (ಹೆಸರಿನಲ್ಲಿ ತುಲ್ಯವೇ ಆಗಿದ್ದು, ಇವೂ 'ಭಾನುಮತಿಯ ಮುತ್ತು'ಗಳೇ ಆಗಿರುವ ಕಾರಣ) ಇವನ್ನೇ ಪಣವಾಗಿ ಎತ್ತಿಕೊಂಡು ತನ್ನ ವಿಜಯವನ್ನು ಘೋಷಿಸಿಕೊಳ್ಳುವ ವಿನೋದಕ್ಕೆಳಸಿತು! ಅಲ್ಲಿ ನಡೆದುದು ಇಷ್ಟೇ.

"ಅರ್ಥವನ್ನು ಈ ಸ್ಪಷ್ಟವಾದ ವಿವರಣೆಯ ಜೊತೆಗೆ ಸೇಡಿಯಾಪು ಇಲ್ಲಿನ ಚಿತ್ರದ ಕಾವ್ಯಭಾಷೆಯನ್ನು ನಿರೂಪಿಸಲು ಒಂದು ಅಡಿಟಿಪ್ಪಣಿ ಬರೆದಿದ್ದಾರೆ. ಈ ಪದ್ಯದ ಅನ್ವಿತಾರ್ಥ ಪೆಟ್ಟಿಗೆಯ ಬೀಗದ ಕೈಯಾಗಿರುವ 'ಏವಮಿಲ್ಲದಿವನಾವುದೊ ತಪ್ಪದೆ ಪೇವೆಂ', ಎಂಬ ವಾಕ್ಯವನ್ನು ಇಲ್ಲಿ ಪೋಣಿಸುವುದರ ಪ್ರಯೋಜನಗಳು ಹಲವು; ಗೆದ್ದ ವ್ಯಕ್ತಿಗೆ – ನಿಜವಾದ ಪಣ ಲಭಿಸದಿದ್ದರೂ – 'ಪಣವನ್ನು ಪಡೆದೇ ಬಿಟ್ಟೆನು' ಎಂದು ಹರ್ಷ ಪ್ರದರ್ಶನ ಮಾಡುವ ಅವಕಾಶ ಒದಗಿದ್ದು ಒಂದು. ಪುರುಷಾಂತರ ಸಮುಖದಲ್ಲಿ ಅನರ್ಘ್ಯವಾದ 'ಆ ವಸ್ತು'ವನ್ನು ಕೊಡಲಾರದ ಆ ಮಾನಿನಿಯ ಮಾನ ಉಳಿಯದು. ಇನ್ನೊಂದು, ಅಸಹ್ಯವಾದ ಅವಳ ಲಜ್ಜಾಭಾರ ಇಳಿದು ಹೋಗಿ ಅಲ್ಲಿನ ಉಳಿದಿಬ್ಬರ ಹಸನ್ಮುಖಗಳೊಡನೆ ಅವಳ ಮುಖವೂ ದರಹನಿತವಾಗಿ ಪ್ರಸನ್ನವಾಗುವಂತಾದುದು. ಮತ್ತೊಂದು, ನೆತ್ತದಲ್ಲಿ ಸೋತರೂ ಆ ಶೀಲವತಿ ಗೆದ್ದಂತೆಯೇ ಆಗುವುದು. ಮಗದೊಂದು, ವಿರಸದಲ್ಲಿ ಪರ್ಯವಸಾನವಾಗುವ ಹಾಗಿದ್ದ ಆ ಕ್ರೀಡಾ ಪ್ರಸಂಗವನ್ನು ಈ ವಾಕ್ಯವನ್ನಾಡುವ ಮೂಲಕ ವಿನೋದ ಪರ್ಯವಸಾಯಿಯಾಗಿ ಮಾರ್ಪಡಿಸಿದ ಆ ಪುರುಷ ವ್ಯಕ್ತಿಯ ಸರಸವೂ, ಉದಾರವೂ, ಶ್ಲಾಘ್ಯವೂ ಆದ ಮನೋಧರ್ಮವು ಪ್ರಕಾಶಿತವಾದುದು. ಬೇರೊಂದು, ಪ್ರತಿಭಾ ವಿಲಾಸದ, ಪ್ರಗಲ್ಭ ಕವಿತ್ವದ ರಚನಾಚಾತುರ್ಯದ ಒಂದು ಉತ್ಕರ್ಷ ನಿದರ್ಶನವನ್ನು ನಾವಿಲ್ಲಿ ಕಾಣುತ್ತೇವೆ".

ಈ ವಿಮರ್ಶೆಯನ್ನು ಓದಿದ ಮೇಲೆ ಕನ್ನಡದ ಹಿರಿಯ ಕವಿ ವೀಸೀಯವರು ಸೇಡಿಯಾಪು ಅವರಿಗೆ ಬರೆದ ಪತ್ರದಲ್ಲಿ ಹೀಗೆ ತಿಳಿಸಿದರು:

“ನಿಮ್ಮ ಲೇಖನವನ್ನು ಮುಂಚೆಯೇ ಓದಿದ್ದೆ. ಪುನಃ ಇನ್ನೊಂದು ಸಲ ಓದಿದ್ದೇನೆ. ಇಷ್ಟು ವಿದ್ವತ್ತೆಯಿಂದಲೂ ಅಂತರ್ದೃಷ್ಟಿಯಿಂದಲೂ ರಸಿಕತೆಯಿಂದಲೂ ಬರೆಯಬಲ್ಲ ನೀವು ನಿಜವಾಗಿ ಸಾಹಿತ್ಯಕೃತಿ ವಿಮರ್ಶೆಗೆ ಮಾಡಿರುವ ಸೇವೆ ದೊಡ್ಡದು. ಇಂತಹ ವ್ಯಾಖ್ಯಾನದಿಂದ ಅರ್ಥಗ್ರಹಣದಿಂದ ನಿಜವಾಗಿ ಒಂದು ವಿಶೇಷವಾದ ದೃಷ್ಟಿ ರೀತಿಯೇ ವಿಚಕ್ಷಣೆಯೇ ಬರುತ್ತಿದೆ. ನಾವು ಉಪಕೃತರು”.[೧೦]

ಇಲ್ಲಿ ಕರ್ಣನಿಗೇನು ಕೆಲಸ? ಎಂಬುದಕ್ಕೆ ಅಂತಃಪುರದಲ್ಲಿ ನಡೆದ ಈ ಸರಸ ಕೇಳಿಯು ಕರ್ಣನ ಸಮಕ್ಷಮದಲ್ಲೇ ನಡೆದಿತ್ತು. ಏಕೆಂದರೆ ಕರ್ಣ ಮತ್ತು ದುರ್ಯೋಧನರ ಸ್ನೇಹವು ‘ಒಡಲೆರಡೊಂದೆ ಜೀವ’ ಎಂಬಷ್ಟು ಪುಣ್ಯಶಾಲಿಯಾದುದಾಗಿತ್ತು.

ಮಾಧವ ಪೆರಾಜೆಯವರು ಪಂಪನ ಈ ಪದ್ಯವನ್ನು ಹೊಸಗನ್ನಡಕ್ಕೆ ಅನುವಾದ ಮಾಡಿದ್ದು ಅದರ ಅರ್ಥವಿವರಣೆ ಹೀಗಿದೆ:

“ಭಾನುಮತಿಯು ನೆತ್ತವನ್ನು ಆಡಿ ಸೋತ ಪಕ್ಷದಲ್ಲಿ (ಒಂದು ವೇಳೆ ಸೋತಳು ಎಂದಾದರೆ) ಪಣವನ್ನು ಕೊಡುವುದು ಎಂದು ಕಾಡಿದ ಪಕ್ಷದಲ್ಲಿ (ಒಂದು ವೇಳೆ ಪಣವನ್ನು ಕೊಡಲು ಕಾಡಿದ ಎಂದಾದರೆ) ಲಂಬಣವು ಹರಿದ ಪಕ್ಷದಲ್ಲಿ (ಒಂದು ವೇಳೆ ಲಂಬಣವು ಹರಿಯಿತು ಎಂದಾದರೆ) ಮುತ್ತಿನ ಕೇಡನ್ನು ನೋಡಿ ನೋಡಿ ಬಾಗುತ್ತಿದ್ದ ಪಕ್ಷದಲ್ಲಿ (ಒಂದುವೇಳೆ ಮುತ್ತಿನ ಕೇಡನ್ನು ನೋಡಿ ನೋಡಿ ಬಾಗುತ್ತಿದ್ದಳು ಎಂದಾದರೆ) (ತುಚ್ಛವೆಂದು ಭಾವಿಸದೆ ‘ಇವುಗಳನ್ನು ಹೆಕ್ಕಿಕೊಳ್ಳುವುದು’ ಎನ್ನುವ ಭೂಪೋತ್ತಮನಾದ ಕೌರವನನ್ನು ಯುಕ್ತಾಯುಕ್ತ ವಿವೇಕವಿಲ್ಲದೆ ದೂರ ಮಾಡಿ) ನಿಮ್ಮೊಂದಿಗೆ ಕೂಡಿಕೊಂಡ ಪಕ್ಷದಲ್ಲಿ (ಒಂದು ವೇಳೆ ಕೂಡಿದ ಎಂದಾದರೆ) ಈ ಕರ್ಣನು ಅಸಭ್ಯನಾಗನೆ?”

ಭಾನುಮತಿ, ನೆತ್ತಮನಾಡಿ ಸೋತ ಪಕ್ಷದಲ್ಲಿ,..ಲಂಬಣವು ಹರಿದ ಪಕ್ಷದಲ್ಲಿ,...ಮುತ್ತಿನ ಕೇಡನ್ನು ನೋಡಿ ನೋಡಿ ಬಳುಕುತ್ತಿದ್ದ ಪಕ್ಷದಲ್ಲಿ ಎಂದು ಅರ್ಥೈಸುವ ಮೂಲಕ ಪೆರಾಜೆಯವರು ಈ ಘಟನೆ ನಡೆದೇ ಇಲ್ಲ ಎನ್ನುವ ಅಭಿಪ್ರಾಯ ಹೊಂದಿದ್ದಾರೆ. ಹಾಗೆಯೆ ಕೃಷ್ಣ ‘ಸತ್ಯಂತಪ ಮುನಿಯ’ ಕಥೆ (ಕಟ್ಟುಕತೆ) ಯನ್ನು ಕರ್ಣನಿಗೆ ಹೇಳಿದನು. ಹಾಗೆಯೇ ಕರ್ಣನು ಸಹ ಈ ಕಥೆಯನ್ನು ಕಟ್ಟಿದ. ಇಲ್ಲಿ ಕರ್ಣನು ಕೃಷ್ಣನಿಗೆ ನೇರವಾಗಿ ಉತ್ತರ ನೀಡುತ್ತಿಲ್ಲ. ಇಲ್ಲಿ ವಾಚ್ಯಾರ್ಥವಿಲ್ಲ. ಬದಲಾಗಿ ಧ್ವನ್ಯರ್ಥವಿದೆ” ಎಂದಿದ್ದಾರೆ.[೧೧]

ಕರ್ಣ X ಭಾನುಮತಿ = ದುರ್ಯೋಧನ

ದುರ್ಯೋಧನ X ಭಾನುಮತಿ = ಕರ್ಣ

ಈ ತರ್ಕಕ್ಕೆ ಇಲ್ಲಿ ಆಸ್ಪದವೇ ಇಲ್ಲ. ಈ ಎರಡರಲ್ಲಿ ಯಾವುದಾದರೊಂದನ್ನು ಇಲ್ಲವೇ ಏಕಕಾಲದಲ್ಲಿ ಇವೆರಡನ್ನು ಅನ್ವಯಿಸಿಕೊಂಡು ಈ ಪದ್ಯದ ರಸಾಸ್ವಾದನೆ ಮಾಡಬಹುದು ಎನ್ನುತ್ತಾರೆ ಪೆರಾಜೆ.[೧೨] ಇದಕ್ಕೆ ಅವರು ನೀಡುವ ಕಾರಣ ನಮ್ಮ ಹಿರಿಯರ ವಾಗ್ವಾದಗಳಲ್ಲಿ – ಕಾಲ ಸೂಚಕ ಪ್ರತ್ಯಯದ ಹಿನ್ನೆಲೆಯಲ್ಲಿ – ಅರ್ಥೈಸಿದಾಗ ನೈತಿಕತೆ ಅಡ್ಡ ಬರುತ್ತಿತ್ತು. ಈಗ ಅದು ಪಕ್ಷಾರ್ಥವೆಂದಾಗ (ಅಸಂಭಾವ್ಯವೊಂದನ್ನು ಕಲ್ಪಿಸಿಕೊಳ್ಳುವುದು ಎಂದಾದಾಗ) ಈ ಸಮಸ್ಯೆ ಇಲ್ಲ ಎನ್ನುತ್ತಾರೆ.

ಭಾನುಮತಿ ನೆತ್ತದ ಬಗೆಗೆ ಈ ಚರ್ಚೆ, ಪಂಪನ ಪದ್ಯ/ಕಾವ್ಯ ಕುರಿತ ಚರ್ಚೆಯಷ್ಟೇ ಆಗದೇ ಇಡೀ ಅಭಿಜಾತ ಸಾಹಿತ್ಯ ಕುರಿತ ಚರ್ಚೆಯೊಂದರ ಆದರ್ಶ ಮಾದರಿ ಎನ್ನಬಹುದಾಗಿದೆ. ಈ ವಾಗ್ವಾದದಲ್ಲಿ ಕವಿಕೇಂದ್ರಿತ ದೃಷ್ಟಿಕೋನಗಳು ಪ್ರಬಲವಾಗಿರುವುದು ಕಂಡುಬರುತ್ತದೆ.[11]

* * *

ಈಗ ಪಂಪನ ಇನ್ನೊಂದು ಪದ್ಯ ಸಾಹಿತ್ಯಿಕ ಪತ್ರಿಕೆಗಳಲ್ಲಿ ಹೇಗೆ ವಿವೇಚಿತವಾಗಿದೆ ಎನ್ನುವುದನ್ನು ನೋಡೋಣ:

ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನೀಸುವೆಂ ಕವಿ
ವ್ಯಾಸನೆಂಬ ಗರ್ವಮೆನಗಿಲ್ಲ ಗುಣಾರ್ಣವನೊಳ್ಪು ಮನ್ಮನೋ
ವಾಸಮನೆಯ್ದೆ ಪೇಳ್ದಪೆನಲ್ಲದೆ ಗರ್ವಮೆ ದೋಷಮಳ್ತಿಗಂ
ದೋಷಮೆ ಕಾಣೆನೆನ್ನರಿವ ಮಾಳ್ಕೆಯ ಪೇಳ್ವೆನಿದಾವ ದೋಷವೋ

ಪಂಪನ ಈ ಪದ್ಯವನ್ನು ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರು 'ಸಾಕ್ಷಿ' ಪತ್ರಿಕೆಯಲ್ಲಿ ವಿಶ್ಲೇಷಿಸಿದ್ದಾರೆ. ಇಲ್ಲಿನ ಮೊದಲ ಸಾಲನ್ನು ಕುರಿತು ಭಟ್ಟರು 'ವ್ಯಾಸಮುನೀಂದ್ರರುಂದ್ರ ವಚನಾಮೃತವಾರ್ಧಿ' ಎಂಬುದು ಆರೇಳು ಶಬ್ದಗಳಿಂದ ಕೂಡಿದ ಒಂದು ಪ್ರೌಢ ಸಂಸ್ಕೃತ ಸಮಾಸ, ಸ್ವರದ ಏಳು ಬೀಳುಗಳಿಂದ ರಕಾರದ ಒತ್ತಕ್ಷರಗಳ ಬಿರುಸಿನಿಂದ ಕೂಡಿ ದುರ್ಗಮತೆಯನ್ನು ಧ್ವನಿಸುವ ದೀರ್ಘಪದ ಎಂದು ವಿವರಿಸಿ 'ವ್ಯಾಸ ಕೃತಿಯನ್ನು ಇಂತಹ ಅದ್ಭುತ ಶರಧಿ ಎಂದು ವರ್ಣಿಸಿ ಅದೇ ಉಸಿರಿನಲ್ಲಿ 'ನಾನು ಇದನ್ನು ಈಜಿ ಮುಗಿಸುತ್ತೇನೆ' ಎನ್ನುವುದು ಸಾಹಸವನ್ನು ಮೆರೆಸಲು ಬಯಸುವವನ ಭಾವಕ್ಕೆ ಹೊಂದುತ್ತದೆಯೇ ಹೊರತು ಅದನ್ನು ಮರೆಸಲು ಬಯಸುವವನ ಭಾವಕ್ಕಲ್ಲ". ಎಂದು ವಿವರಿಸಿದ್ದಾರೆ.[12]

(ಕೆಲವು ವಿದ್ವಾಂಸರ ಅರ್ಥೈಸುವಿಕೆ) 'ನಾನು ಮುನಿಶ್ರೇಷ್ಠರಾದ ವ್ಯಾಸಮುನಿಗಳ ವಿಸ್ತಾರವಾದ ಸಾಗರವನ್ನು ಈಸುತ್ತೇನೆ' ಎಂಬ ಕೆಲವು ವಿದ್ವಾಂಸರ ಅರ್ಥೈಸುವಿಕೆಗಿಂತ ಭಿನ್ನವಾದ ವ್ಯಾಖ್ಯಾನ ಭಟ್ಟರದ್ದಾಗಿದೆ. ಅವರ ಪ್ರಕಾರ 'ವ್ಯಾಸ ಮಹರ್ಷಿಗಳ ಈ ವಿಸ್ತಾರ ಕಾವ್ಯ ಸಾಗರವನ್ನು ಈಜಿಬಿಡುತ್ತೇನೆ ಎಂಬ ಗರ್ವವಾಗಲಿ, ನಾನು ಇನ್ನೊಬ್ಬ ಕವಿ ವ್ಯಾಸನೆಂಬ ಹಮ್ಮಾಗಲಿ ನನಗಿಲ್ಲ' ಎಂಬುದು ಮೊದಲ ಸಾಲಿನ ಅರ್ಥ. ಈ ವ್ಯಾಖ್ಯಾನ ಪದ್ಯದ ಉಳಿದ ಸಾಲುಗಳಲ್ಲಿ ಪ್ರತೀತವಾಗುವ ವಿನಯಕ್ಕೆ ಸರಿ ಹೊಂದುತ್ತದೆ ಎನ್ನುವುದು ಭಟ್ಟರ ಅಭಿಮತ. "ಆದರೆ ಹಿಂದಿನವರ ವ್ಯಾಖ್ಯಾನಗಳನ್ನು ತಳ್ಳಿಹಾಕಲು ಬರುವುದಿಲ್ಲ. ಏಕೆಂದರೆ 'ಈಸುವೆಂ' ಮತ್ತು 'ಪೇಳ್ದಪೆನ್' ಎನ್ನುವ ಮಾತುಗಳಲ್ಲಿ ಕಾರ್ಯ ಸಮಾನತೆ ಇದೆ. ಪಂಪನು ಬೃಹತ್, ಮಹತ್‌ಗಳಿಂದ ಕೂಡಿದ 'ಭಾರತ' ಕಥೆಯನ್ನು ಹೇಳುವ ಘನಕಾರ್ಯ ಆರಂಭಿಸಿದ್ದಾನೆ. 'ಇಂತಹ ದೊಡ್ಡವರ (ವ್ಯಾಸರ) ಕೆಲಸ ತಾನು ಮಾಡುವುದಕ್ಕೆ ಹೊರಟಿದ್ದಾನಲ್ಲ, ಇವನೇನು ಅಷ್ಟು (ವ್ಯಾಸನಷ್ಟು) ದೊಡ್ಡವನೇ?' ಎಂದು ಯಾರಾದರೂ ಭಾವಿಸಿಯಾರು ಎಂಬ ಅಳುಕು ಪಂಪನಲ್ಲಿದೆ. ಅದಕ್ಕೇ ಆತ ನಾನು ವ್ಯಾಸನೇನಲ್ಲ, ಅವನ ಹಾಗೆ ನಾನು 'ವಿಸ್ತಾರವಾದ ಕಾವ್ಯ ಸುಧಾಸಾಗರ'ವನ್ನು ಸೃಷ್ಟಿಸುತ್ತಿಲ್ಲ; ವ್ಯಾಸನು ಸೃಷ್ಟಿಸಿರುವ ವಿಸ್ತಾರವಾದ ಕಾವ್ಯಸುಧಾ ಸಾಗರದ(ವನ್ನು)ಲ್ಲಿ

ಈಸುತ್ತೇನೆ ಎಂದು ಹೇಳುತ್ತಿರುವುದು. ವಿಸ್ತಾರವಾದ ಕಾವ್ಯಸುಧಾ ಸಾಗರವನ್ನು ಸೃಷ್ಟಿಸುವುದು ಹಾಗು ಅದರಲ್ಲಿ ಈಸುವುದು ಇವೆರಡೂ ಕ್ರಿಯೆಗಳ ಅಪಾರವಾದ ಅಂತರದಲ್ಲಿಯೇ ಸಾಕಷ್ಟು ವಿನಯವಿದೆ. ವ್ಯಾಸನ ಕ್ರಿಯೆಗೆ ಹೋಲಿಸಿದರೆ ತೀರಾ ಸಣ್ಣದಾದ ಈ ಈಸುವ ಕ್ರಿಯೆಯಲ್ಲಿ ಪಂಪನು ತೊಡಗಿರುವುದೂ ಗುಣಾರ್ಣವನ ಪ್ರೀತಿಯ ಅನಿವಾರ್ಯ ಕಾರಣದಿಂದ. ಮುನೀಂದ್ರ, ವಚನಾಮೃತ ಎನ್ನುವ ಮಾತುಗಳನ್ನು ಪರಿಭಾವಿಸಿದರೆ ಈ ಈಸುವ ಕ್ರಿಯೆಯಲ್ಲಿ ಪಂಪನು ಕೃತಕೃತ್ಯತೆಯ ಧನ್ಯತೆಯ ಭಾವವನ್ನು ಅನುಭವಿಸುತ್ತಿದ್ದಾನೇನೋ ಎನಿಸುವಂತಿದೆ.

* * *

ಹಳಕಟ್ಟಿಯವರ **'ಶಿವಾನುಭವ':** ವಚನ ಪಿತಾಮಹರೆಂದೇ ಹೆಸರಾದ ಫ.ಗು. ಹಳಕಟ್ಟಿಯವರು ವೃತ್ತಿಯಲ್ಲಿ ವಕೀಲರು. ವಚನ ಸಾಹಿತ್ಯ ಅವರ ಆಸಕ್ತಿಯ ವಿಷಯ. ಹೀಗಾಗಿ ಧರ್ಮ, ಸಾಹಿತ್ಯ, ಸಂಸ್ಕೃತಿ, ಸಮಾಜ ಸೇವೆ ಮೊದಲಾದ ಕಾರ್ಯಗಳಿಗೆ ತಮ್ಮ ವೃತ್ತಿಜೀವನ ತೊಡಕಾಗಬಾರದು ಎಂದು ೧೯೨೬ರಲ್ಲಿ ತಮ್ಮ ವಕೀಲ ವೃತ್ತಿಯನ್ನೇ ತೊರೆದರು. ಬಳಿಕ ತಮ್ಮ ಜೀವಿತವನ್ನೇ ವಚನ ಸಾಹಿತ್ಯದ ಪುನರುಜ್ಜೀವನಕ್ಕಾಗಿ ಮುಡಿಪಾಗಿರಿಸಿದರು. ತತ್ಫಲವೇ 'ಶಿವಾನುಭವ' ಪತ್ರಿಕೆ. ವಚನಗಳಿಗೆ ಶಾಸ್ತ್ರ ಸ್ವರೂಪ ಒದಗಿಸಿ ಕೊಟ್ಟು ವಿಷಯಾನುಸಾರ ವರ್ಗೀಕರಿಸಿ ವಿವಿಧ ದೃಷ್ಟಿಯ ಉದ್ದೇಶಗಳಿಗಾಗಿ ಅಧ್ಯಯನ ಮಾಡುವ ಪರಂಪರೆ ಆರಂಭಗೊಂಡಿದ್ದು ಇದರಿಂದಲೇ. ಕನ್ನಡೇತರರು ವಚನ ಸಾಹಿತ್ಯದಲ್ಲಿನ ಉನ್ನತ ತತ್ವಗಳನ್ನು ತಿಳಿದುಕೊಳ್ಳಬೇಕು ಎನ್ನುವ ಉದ್ದೇಶದಿಂದ ೧೯೧೫ರಲ್ಲಿ ತಾವು ಅನುವಾದಿಸಿದ ಬಸವೇಶ್ವರರ ವಚನಗಳನ್ನು ೧೯೨೨ರಲ್ಲಿ 'ಇಂಡಿಯನ್ ಆಂಟಿಕ್ವಯರಿ' ಎಂಬ ಇಂಗ್ಲಿಷ್ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟಿಸಿದರು. ವಚನಗಳ ಅನುವಾದ ಕಾರ್ಯಕ್ಕೆ ವ್ಯವಸ್ಥಿತವಾಗಿ ಒಂದು ಅಡಿಗಲ್ಲು ಹಾಕಿದವರಲ್ಲಿ ಹಳಕಟ್ಟಿಯವರೇ ಅಗ್ರಮಾನ್ಯರು. ಅನುವಾದದ ಮೂಲಕ ವಚನ ವಾಙ್ಮಯದ ಹಿರಿಮೆಯನ್ನು ಕನ್ನಡೇತರರಿಗೆ ಪರಿಚಯಿಸಿದವರು ಹಳಕಟ್ಟಿಯವರು. ವಿಚಾರವಂತ ಸಂಪಾದಕರಾಗಿ ಸಮಾಜ ಸೇವಕರಾಗಿ ಶಿಕ್ಷಣವೇತ್ತರಾಗಿ ಎಂಬತ್ತನಾಲ್ಕು ವರ್ಷಗಳ ಸಾರ್ಥಕ ಬದುಕಿನಲ್ಲಿ ಸಾಧಿಸಿದ ಕಾರ್ಯಗಳಿಗೆಲ್ಲಕ್ಕೂ ಮೂಲವಾದದ್ದು ಅವರ ಪತ್ರಿಕೋದ್ಯಮ. ಅಲ್ಲಿಂದಲೇ ಅವರ ಸಾಹಸದ ವಿವಿಧ ಸಾಹಿತ್ಯ ರಸಗಂಗೆ ಹರಿದು ಬಂದಿತು. ವಚನ ಸಾಹಿತ್ಯದಂತೆಯೇ ಮಹತ್ವದ ಇತರ ಪ್ರಾಚೀನ ಗದ್ಯ ಪದ್ಯ ಗ್ರಂಥಗಳನ್ನು, ಶಾಸನಗಳನ್ನು ಸಂಶೋಧಿಸಿ, ಸಂಪಾದಿಸಿ ಪ್ರಕಟಿಸಿದ್ದಾರೆ. 'ಕೊಡಗಿನ ಸಂಸ್ಥಾನದ ರಾಜೇಂದ್ರನಾಮೆ', 'ಕೆಳದಿ ಸಂಸ್ಥಾಪಕ ರಾಯರ ವಂಶಾವಳಿ', 'ಹರಳಯ್ಯನ ತ್ರಿಪದಿ', 'ಅವಧೂತಗೀತ', 'ವರದಾನಿ ಗುಡ್ಡೆಮ್ಮಯ್ಯ ಚರಿತ್ರೆ', 'ಶಿವಶರಣರ ಪದಗಳೂ', 'ಕೃಷಿಜ್ಞಾನ ಪ್ರದೀಪಿಕೆ', ಇವೇ ಮೊದಲಾದ ಅಪರೂಪದ ಗ್ರಂಥಗಳನ್ನು ಪ್ರಕಟಿಸುವ ಮೂಲಕ ತಮ್ಮ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನು ಮೆರೆದಿದ್ದಾರೆ.[೧೩]

ಶಿವಾನುಭವ: ವೀರಶೈವ ಧರ್ಮದ ಸರ್ವತೋಮುಖ ಪ್ರಚಾರಕ್ಕೆ ಪುರಾತನರ ವಾಙ್ಮಯವನ್ನು ಪರಿಷ್ಕರಿಸಿ ಪ್ರಕಟಿಸಲು ಸಾಂಸ್ಕೃತಿಕ ಮತ್ತು ಐತಿಹಾಸಿಕ ವಿಷಯಗಳನ್ನು ಜನರಿಗೆ ತಿಳಿಸುವ ಸಲುವಾಗಿ ಈ ಪತ್ರಿಕೆಯನ್ನು ಫೆಬ್ರವರಿ ೨, ೧೯೨೬ರಂದು ಒಂದು ತ್ರೈಮಾಸಿಕ ಪತ್ರಿಕೆಯನ್ನಾಗಿ ಹಳಕಟ್ಟಿ ಪ್ರಾರಂಭಿಸಿದರು. 'ಶಿವಾನುಭವ' ಕೆಲವು ಕಾಲ ದ್ವೈಮಾಸಿಕವಾಗಿ, ಅನಂತರ ಒಂದು ಮಾಸಪತ್ರಿಕೆಯಾಗಿ ಪ್ರಕಟವಾಗಲಾರಂಭಿಸಿತು. ಈ ಪತ್ರಿಕೆಯ ಮೂಲಕವೇ ಹಳಕಟ್ಟಿಯವರು ತಮ್ಮ ಸಂಶೋಧನೆಯನ್ನು

ಮುಂದುವರಿಸಿದರು. ತಮ್ಮ ಸಂಶೋಧನಾ ಬರಹಗಳನ್ನಲ್ಲದೆ, ಆ ವಿಷಯದ ಕುರಿತ ಇತರರ ಸಂಶೋಧನಾ ಬರಹಗಳನ್ನೂ ಪ್ರಕಟಿಸಿದರು. ಶಿವಾನುಭವದಂತಹ ಉಚ್ಚ ಮಟ್ಟದ ಪತ್ರಿಕೆ ಆಗ ಬೇರೊಂದಿಲ್ಲ ಎನಿಸಿಕೊಂಡರೂ ಅವರ ಚಂದಾದಾರರ ಸಂಖ್ಯೆ ೨೦೦ಕ್ಕೆ ಮೀರಿರಲಿಲ್ಲ. ಆರ್ಥಿಕ ಮುಗ್ಗಟ್ಟಿದ್ದರೂ ಜಾಹಿರಾತುಗಳನ್ನು ಪ್ರಕಟಿಸುತ್ತಿರಲಿಲ್ಲ. ಈ ಪತ್ರಿಕೆ ವಚನ, ಹಾಡು ಶರಣರ ಕುರಿತಾದ ಸಂಶೋಧನಾತ್ಮಕ ಅಧ್ಯಯನಗಳಿಗೆ ಮಾತ್ರ ಮೀಸಲಾಗಿತ್ತು. ಇದರಲ್ಲಿ ಪ್ರಕಟವಾದ ಬರಹಗಳನ್ನು ಗ್ರಂಥರೂಪದಲ್ಲಿ ತರಲು 'ಶಿವಾನುಭವ ಗ್ರಂಥಮಾಲೆ'ಯನ್ನೂ ಪ್ರಾರಂಭಿಸಿದರು. ಅದರ ಮೂಲಕ ತೊಂಬತ್ತೊಂದು ಪುಸ್ತಕಗಳನ್ನು ಪ್ರಕಟಿಸಲಾಯಿತು. 'ಹೃದಯ ನಿವೇದನೆ', 'ಸ್ಫುಟವಿಷಯಗಳು' ಎಂಬ ಶೀರ್ಷಿಕೆಗಳಲ್ಲಿ ಸಂಪಾದಕೀಯವನ್ನು ಬರೆಯುತ್ತಿದ್ದರು. ಜೊತೆಗೆ ಇದರಲ್ಲಿ ಗ್ರಂಥ ವಿಮರ್ಶೆಗಳನ್ನೂ ಪ್ರಕಟಿಸಲಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ಶಿವಾನುಭವದಲ್ಲಿ ಹಳಕಟ್ಟಿಯವರು ತಮ್ಮ ನೂರ ಅರವತ್ತೆರಡಕ್ಕೂ ಹೆಚ್ಚು ಸಂಶೋಧನಾತ್ಮಕ ಲೇಖನಗಳನ್ನು ಬರೆದಿದ್ದಾರೆ.[೧೪]

ಒಟ್ಟಿನಲ್ಲಿ 'ಶಿವಾನುಭವ'ದಲ್ಲಿ ಚರ್ಚಾತ್ಮಕ, ವಿಮರ್ಶಾತ್ಮಕ ಹಾಗು ಸಂಶೋಧನಾತ್ಮಕವಾದ ಲೇಖನಗಳನ್ನು ತುಂಬ ವಿಚಾರಪೂರ್ಣವಾಗಿ ಪ್ರಕಟಿಸಿದರು. ಅಲ್ಲದೆ ಇವರ ಇತರ ಎಲ್ಲ ಲೇಖನಗಳೂ ಸಮಾಜ ಶಿಕ್ಷಣ ಮತ್ತು ಧಾರ್ಮಿಕ ಸುಧಾರಣೆಗಳಿಗೆ ಸಂಬಂಧಿಸಿದವು. ಆರ್ಥಿಕ ಕಷ್ಟ ನಷ್ಟಗಳಿಗೆ ಹಿಮ್ಮೆಟ್ಟದೆ 'ಶಿವಾನುಭವ'ವನ್ನು ತಮ್ಮ ಕೊನೆಯ ಕಾಲದವರೆಗೆ ನಡೆಸುವ ಮೂಲಕ – ಅಂದರೆ ಸರಿಸುಮಾರು ಮೂವತ್ತೈದು ವರ್ಷಗಳ ಕಾಲ – ಕನ್ನಡ ನಾಡು–ನುಡಿಗೆ ಸೇವೆ ಸಲ್ಲಿಸಿದ್ದಾರೆ. ಹಳಕಟ್ಟಿಯವರು ೧೯೪೦ರ ವೇಳೆಗೆ ಸುಮಾರು ಸಾವಿರಕ್ಕೂ ಹೆಚ್ಚು ತಾಳೆಗರಿಗಳ ಗ್ರಂಥಗಳನ್ನು ಬೆಳಕಿಗೆ ತಂದು ಕನ್ನಡಿಗರಿಗೆ ಪರಿಚಯಿಸಿದರು. ಒಂದು ವಿಶ್ವವಿದ್ಯಾಲಯ ಮಾಡಬಹುದಾದ ಹಿರಿಯ ಕೆಲಸವನ್ನು ಹಳಕಟ್ಟಿ ಒಬ್ಬರೇ ಮಾಡಿದರು. ಅವರ ಸಾಧನೆ ಅವರ ಪ್ರತಿಭೆ ಹಾಗು ವ್ಯಕ್ತಿತ್ವ ಎಂಥದು ಎಂಬುದನ್ನು ಪರಿಚಯಿಸುತ್ತದೆ. 'ಶಿವಾನುಭವ'ದಲ್ಲಿ ಪ್ರಕಟವಾದ ವಚನಗಳ ಕಠಿಣ ಶಬ್ದಗಳ ಅರ್ಥವಿವರಣೆಗಾಗಿ 'ಶಿವಾನುಭವ ಶಬ್ದಕೋಶ' ಎಂಬ ವಿವರಣಾತ್ಮಕ ನಿಘಂಟನ್ನು ಪ್ರಕಟಿಸಿದರು. ಶಿವಾನುಭವದ ಮೂಲಕ ಬೆಳಕು ಕಂಡ ವಚನಗಳು, ಹರಿಹರ ಮತ್ತು ಇತರರ ರಗಳೆಗಳು, ಶರಣರ ಭಕ್ತಿಯ ಹಾಡುಗಳು ಅಂದಿನ ಜನರಿಗೆ ವಚನ ವಾಙ್ಮಯದ ವ್ಯಾಪ್ತಿ ಎಷ್ಟಿತ್ತು ಎಂಬುದನ್ನು ಪರಿಚಯಿಸಿತು. ೧೯೫೧ರ ಡಿಸಂಬರಿನಲ್ಲಿ ಶಿವಾನುಭವದ 'ಬೆಳ್ಳಿ ಸಂಚಿಕೆ'ಯನ್ನು ಪ್ರಕಟಿಸಿದರು.[೧೫]

* * *

೧೯೬೭ರ ಸಂಕ್ರಮಣ ಪತ್ರಿಕೆಯ ಜುಲೈ–ಆಗಸ್ಟ್ ಸಂಚಿಕೆಯಲ್ಲಿ ಓ.ಎಲ್. ನಾಗಭೂಷಣ ಸ್ವಾಮಿಯವರ 'ಅಕ್ಕನ ವಚನ: ಹೊಳೆದ ಅರ್ಥ' ಪ್ರಕಟವಾಗಿದೆ. ಈ ಲೇಖನದಲ್ಲಿ ಅವರು ಅಕ್ಕನ 'ಚಿಲಿಮಿಲಿ ಎಂದೋಡುವ ಗಿಳಿಗಳಿರಾ..' ವಚನ ಕುರಿತಂತೆ ಹೊಳೆದ ಅರ್ಥವನ್ನು ಹೇಳಿದ್ದಾರೆ:

ಚಿಲಿಮಿಲಿ ಎಂದೋಡುವ ಗಿಳಿಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಸರವರದೊಳಗಾಡುವ ಹಂಸೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?

ಸರವೆತ್ತಿ ಪಾಡುವ ಕೋಗಿಲೆಗಳಿರಾ!
ನೀವು ಕಾಣಿರೇ? ನೀವು ಕಾಣಿರೇ?
ಗಿರಿಗಹ್ವರದೊಳಗಾಡುವ ನವಿಲುಗಳಿರ!
ನೀವು ಕಾಣಿರೇ? ನೀವು ಕಾಣಿರೇ?
ಚೆನ್ನಮಲ್ಲಿಕಾರ್ಜುನ ದೇವನೆಲ್ಲಿದ್ದಾನೆಂಬುದ ಬಲ್ಲಡೆ
ನೀವು ಹೇಳಿರೇ?

ಅಕ್ಕನ ಈ ಪ್ರಸಿದ್ಧ ವಚನಕ್ಕೆ ಸಂಪಾದಕರು ಸೇರಿಸಿದ ಪ್ರಶ್ನಾರ್ಥಕ ಮತ್ತು ಭಾವಸೂಚಕ ಚಿಹ್ನೆಗಳನ್ನು ಬಿಟ್ಟು **'ಅಕ್ಕನ ವಚನ: ಹೊಳೆದ ಅರ್ಥ'** ಎಂಬ ಟಿಪ್ಪಣಿಯಲ್ಲಿ ಓ.ಎಲ್. ನಾಗಭೂಷಣ ಸ್ವಾಮಿಯವರು 'ನೀವು ಕಾಣಿರೇ' ಎಂಬ ಮಾತಿಗೆ ನೀಡಿದ ಅರ್ಥ ಪರ–ವಿರೋಧ ಚರ್ಚೆಗೆ ಕಾರಣವಾಯಿತು. ನಾಗಭೂಷಣ ಸ್ವಾಮಿಯವರು ನೀಡಿರುವ ಅರ್ಥಗಳು ಹೀಗಿವೆ:

೧. ನಾನು ಕಂಡಿದ್ದೇನೆ, ನೀವು ಕಂಡಿಲ್ಲವೇ?
೨. ನಾನು ಕಂಡಿದ್ದೇನೆ, ನೀವು ಕಾಣಿರಿ.
೩. ಚೆನ್ನಮಲ್ಲಿಕಾರ್ಜುನ ನೀವೇ ಆಗಿದ್ದೀರಿ.

ಅವರನ್ನು ವಿರೋಧಿಸಿದವರು ಅವರ ಅರ್ಥಗಳನ್ನು ಗುರಿಯಾಗಿಸಿಕೊಂಡರೆ ಸಮರ್ಥಿಸಿದವರು ಅರ್ಥವೆಂಬುದು ಆಗುವ ಅನುಭವವೇ ಹೊರತು ಇರುವ ಸಂಗತಿಯಲ್ಲ ಎಂಬ ಸ್ವಾಮಿಯವರ ಅರ್ಥದ ಬಗೆಗಿನ ನಿಲುವನ್ನು ಮುಂದುಮಾಡಿದರು.[೧೬]

ಬಸವಣ್ಣನ ವಚನ: ಹೊಳೆದ ಅರ್ಥ ಎಂಬ ಲೇಖನದಡಿ ನಾಗಭೂಷಣ ಸ್ವಾಮಿಯವರು ಈ ವಚನದ ಅರ್ಥವನ್ನು ಹೀಗೆ ವಿವರಿಸುತ್ತಾರೆ:[೧೭]

ಕಣ್ಗಳು ತುಂಬಿದ ಬಳಿಕ ನೋಡಲಿಲ್ಲ
ಕಿವಿಗಳು ತುಂಬಿದ ಬಳಿಕ ಕೇಳಲಿಲ್ಲ
ಕೈಗಳು ತುಂಬಿದ ಬಳಿಕ ಪೂಜಿಸಲಿಲ್ಲ
ಮನ ತುಂಬಿದ ಬಳಿಕ ನೆನೆಯಲಿಲ್ಲ
ಮಹಂತ ಕೂಡಲ ಸಂಗಮ ದೇವ

೧. ಕಣ್ಣಿನಲ್ಲಿ/ ಕಿವಿಯಲ್ಲಿ/ ಕೈಗಳಲ್ಲಿ/ ಮನದಲ್ಲಿ ಕೂಡಲಸಂಗಮದೇವ ತುಂಬಿದ ಬಳಿಕ ನಾನು ಏನನ್ನೂ ನೋಡಲಿಲ್ಲ/ ಕೇಳಲಿಲ್ಲ/ ಪೂಜಿಸಲಿಲ್ಲ/ ನೆನೆಯಲಿಲ್ಲ.
೨. ಕಣ್ಣಿನಲ್ಲಿ/ ಕಿವಿಯಲ್ಲಿ/ ಕೈಗಳಲ್ಲಿ/ ಮನದಲ್ಲಿ ಕೂಡಲ ಸಂಗಮ ದೇವ ಭರಿತನಾದಾಗ ನೋಡಲು/ ಕೇಳಲು/ ಪೂಜಿಸಲು ನನಗೆ ಬೇರೆ ಏನೂ ಇಲ್ಲ.

ಇವು ನಾಗಭೂಷಣ ಸ್ವಾಮಿಯವರು ಮುಂದಿಡುವ ಓದಿನ ಸಾಧ್ಯತೆಗಳು. ಕಣ್ಣು, ಕಿವಿ, ಮನಸ್ಸುಗಳು ತಮ್ಮಷ್ಟಕ್ಕೆ ತುಂಬಿಕೊಂಡು 'ಈ ವಚನ ಕೂಡಲ ಸಂಗಮನನ್ನು ಇಡಿಯಾಗಿ ತುಂಬಿಕೊಂಡು ಸಂತೃಪ್ತವಾದ ಮನಃಸ್ಥಿತಿಯನ್ನು ಹೇಳುತ್ತಿದೆಯೋ ಅಥವ ಕೂಡಲ ಸಂಗನನ್ನು ಒಳಗು ಮಾಡಿಕೊಳ್ಳಲಾಗದ ವಿಷಾದವನ್ನೋ?' ಎಂದು ನಾಗಭೂಷಣಸ್ವಾಮಿಯವರು ಪ್ರಶ್ನಿಸುತ್ತಾರೆ.

ಕೊನೆಯಲ್ಲಿನ 'ಮಹಂತ' ಪದದ ಅರ್ಥ ಕುರಿತಂತೆ "ಅದು ಎಲ್ಲ ನೋಡುವಿಕೆಯ, ಕೇಳುವಿಕೆಯ, ಮಾಡುವಿಕೆಯ, ನೆನೆಯುವಿಕೆಯ ಮಹಾನ್ ಅಂತ್ಯ. ಕರ್ತೃ ಮತ್ತು ಕ್ರಿಯೆಗಳು ಒಂದರೊಳಗೆ ಒಂದುಗೂಡಿ ಸಂಗಮಿಸುವುದರ ಸೂಚನೆ ಇರಬಹುದು.. ನಿಸರ್ಗಕ್ಕೆ ಶರಣಾಗಿ ತನ್ನೊಳಗೆ ಕಾಣುವ, ಎಲ್ಲದರಲ್ಲೂ ತನ್ನನ್ನು ಕಾಣುವ.. ಹಾಗೆ ಓದಿದಾಗ ಈ ವಚನ ತೃಪ್ತಿಯ ಮಾತಾಗುತ್ತದೆ. ಅದು ಸಾಧಿಸಬಹುದಾದ ಆದರ್ಶ ಮಾತ್ರವಾಗಿದ್ದು ಇನ್ನೂ ಕೈಗೆ ಎಟುಕದಿರುವಾಗ ಕಣ್ಣು, ಕಿವಿ, ಕೈ ಮನಸ್ಸುಗಳು ತಮ್ಮಷ್ಟಕ್ಕೆ ತಮ್ಮ ತೃಪ್ತಿಯನ್ನು ಹೊರಗೆ ಹುಡುಕಿ ತುಂಬಿಕೊಳ್ಳುತ್ತಿವೆ. ನಾನು ಇನ್ನೂ ಶರಣಾಗುವುದಕ್ಕೆ ಆಗಿಲ್ಲ ಎಂಬ ಸ್ಥಿತಿಯ ಮಾತಾದಾಗ ಸಾಧಿಸಬಹುದಾದ ಆದರ್ಶ ಅದು ಇನ್ನೂ ಸಾಧ್ಯವಾಗದಿರುವುದಕ್ಕೆ ವಿಷಾದ ಕಾಣುತ್ತದೆ.

'ಹೊಳೆದ ಅರ್ಥ: ಬಸವಣ್ಣನ ಒಂದು ವಚನ'[೧೮] ಎಂಬ ಲೇಖನದಲ್ಲಿ ನಾಗಭೂಷಣಸ್ವಾಮಿ ಬಸವಣ್ಣನ ಈ ವಚನವನ್ನು ಒಂದು ಹೊಸ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಇಲ್ಲಿ ಗಿರಡ್ಡಿ ಹಾಗು ನಾಗಭೂಷಣಸ್ವಾಮಿಯವರ ಎರಡೂ ವಿಚಾರಗಳನ್ನು ತೌಲನಿಕವಾಗಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಕರಿಘನ, ಅಂಕುಶ ಕಿರಿದೆನ್ನಬಹುದೇ? ಬಾರದಯ್ಯ
ಗಿರಿಘನ, ವಜ್ರ ಕಿರಿದೆನ್ನಬಹುದೇ? ಬಾರದಯ್ಯ
ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ? ಬಾರದಯ್ಯ
ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೇ?
ಬಾರದಯ್ಯ, ಕೂಡಲಸಂಗಮದೇವ

'ಕರಿಘನ ಅಂಕುಶ ಕಿರಿದೆನ್ನಬಹುದೇ?' ಇದು ಆಲಂಕಾರಿಕ ಪ್ರಶ್ನೆಯಾಗಿರುವುದರಿಂದ ಉತ್ತರ 'ಇಲ್ಲ' ಎಂದೇ ಆಗುತ್ತದಾದರೂ ಕರಿಘನ ಅಂಕುಶ ಕಿರಿದೆನ್ನಬಹುದೇ ಎಂದರೆ 'ಎನ್ನಬಹುದು' ಎಂಬ ಉತ್ತರ ಸಿಗುವುದೂ ಸಾಧ್ಯ. ಮರಹು-ಮನಗಳ ನಡುವಿನ ಶಕ್ತಿಯ ತಾರತಮ್ಯ ಸಂಶಯಾತೀತವಲ್ಲದ್ದರಿಂದ ಈ ಬಗೆಯ ಉತ್ತರದ ಸಾಧ್ಯತೆ ಇನ್ನೂ ಹೆಚ್ಚು. ಅದ್ದರಿಂದ 'ಬಾರದಯ್ಯ' ಎಂದು ಮತ್ತೊಮ್ಮೆ ಗಟ್ಟಿಯಾಗಿ ಹೇಳಲಾಗಿದೆ' ಎಂದಿದ್ದಾರೆ. ಹಾಗೆಯೇ 'ಮರಹು ಎಷ್ಟೇ ಘನವಾಗಿದ್ದರೂ ತನ್ನ ಮನಸ್ಸು ಅದನ್ನು ನಿಯಂತ್ರಿಸಿ ಕೂಡಲಸಂಗಮದೇವನನ್ನು ನೆನೆವ ಶಕ್ತಿಯುಳ್ಳದ್ದು ಎಂದು ಬಸವಣ್ಣ ಆತ್ಮವಿಶ್ವಾಸದಿಂದ ಹೇಳಿದಂತಿದೆ'"[೧೯] ಎಂಬುದು ಗಿರಡ್ಡಿಯವರ ಅಭಿಪ್ರಾಯ. ಆದರೆ ನಾಗಭೂಷಣಸ್ವಾಮಿಯವರು ಈ ವಚನದ ಕುರಿತು ಹೀಗೆ ಹೇಳುತ್ತಾರೆ:

> "ಜನಪದರಿಗೆ ನಿಸರ್ಗವೇ ಜ್ಞಾನಕ್ಕೆ ಮೂಲ ಹಾಗು ವಚನಕಾರರಿಗೆ ಮನಸ್ಸು ಜ್ಞಾನಮೂಲ. ಆದ್ದರಿಂದ ಇದು ಅಧಿಕಾರ ಮತ್ತು ಜ್ಞಾನಮೂಲಗಳ ಚಿಂತನೆಯಾಗಿದೆ. ನಿಮ್ಮ ನೆನೆವ ಮನ ಕಿರಿದೆನ್ನಬಹುದು ಎಂಬಲ್ಲಿ 'ನಿಮ್ಮ' ಎನ್ನುವ ಪದ ದೇವರನ್ನು ಸೂಚಿಸುವಂತೆಯೇ ಸುತ್ತಲ ಜನರನ್ನು, ಸಮಾಜವನ್ನು ಉದ್ದೇಶಿಸಿದ್ದೂ ಆಗುತ್ತದೆ. ಆಗ ನಮ್ಮ ಮನಸ್ಸಿಗೆ ಇರುವ ನೆನಪಿನ ಅಗಾಧ ಸಾಮರ್ಥ್ಯದ ಅರಿವು ಮೂಡುತ್ತದೆ"[೨೦]

ಎಂದು ವ್ಯಾಖ್ಯಾನಿಸಿದ್ದಾರೆ.

* * *

ಎಂ.ಜಿ. ಕೃಷ್ಣಮೂರ್ತಿ 'ಐದು ವಚನಗಳು - ಒಂದು ವಿಶ್ಲೇಷಣೆ' ಎಂಬ ಲೇಖನದಲ್ಲಿ ಐದು ವಚನಗಳನ್ನು ವಿಶ್ಲೇಷಿಸಿದ್ದು ಅದರಲ್ಲಿನ ಮೊದಲ ವಚನ ಅಕ್ಕಮಹಾದೇವಿಯದು,

ಸಂಗದಿಂದಲ್ಲದೆ ಅಗ್ನಿ ಹುಟ್ಟದು,
ಸಂಗದಿಂದಲ್ಲದೆ ಬೀಜ ಮೊಳೆದೋರದು,
ಸಂಗದಿಂದಲ್ಲದೆ ದೇಹವಾಗದು,
ಸಂಗದಿಂದಲ್ಲದೆ ಸರ್ವಸುಖದೋರದು
ಚೆನ್ನಮಲ್ಲಿಕಾರ್ಜುನ ದೇವಯ್ಯ
ನಿಮ್ಮ ಶರಣರ ಅನುಭಾವ ಸಂಗದಿಂದಾನು
ಅನುಪಮ ಸುಖಿಯಾದೆನು[21]

ಈ ವಚನದಲ್ಲಿನ ಮೊದಲ ಸಾಲು ಬೆಂಕಿ ಹುಟ್ಟುತ್ತದೆ ಆದರೆ ಬೆಣಚು ಕಲ್ಲನ್ನು ಜೋರಾಗಿ ಕಟೆದಾಗ ಬೆಂಕಿ ಉಂಟಾಗುತ್ತದೆ. ಕವನದ ಸಾಂಕೇತಿಕ ಸಂದರ್ಭದಲ್ಲಿ ಬೆಂಕಿಯನ್ನು ಉಂಟುಮಾಡುವ ಈ ಬಗೆಯು ಯಜ್ಞದ ಹೋಮಕುಂಡವನ್ನು ಸೂಚಿಸುತ್ತದೆ. ಯಜ್ಞದ ಮುನ್ನ ಕಟ್ಟಿಗೆಯ ಎರಡು ತುಂಡುಗಳನ್ನು ಒಂದಕ್ಕೊಂದು ತಿಕ್ಕಿ ಬೆಂಕಿ ಮಾಡಲಾಗುತ್ತದೆ. ಇನ್ನು ನೇಗಿಲು ಹಾಗು ಮಣ್ಣಿನ ಪೂರ್ವಸಂಬಂಧ ಒಳನುಗ್ಗುವಿಕೆ, ನೆಡುವಿಕೆ, ಭಂಗ ಪಡಿಸುವಿಕೆ, ಗರ್ಭಧಾರಣೆ ಇತ್ಯಾದಿ ಕ್ರಿಯೆಗಳ ಮೂಲಕ ಈ ವಚನದಲ್ಲಿನ ಲೈಂಗಿಕಾರ್ಥದ ಸೂಚನೆಯ ಬಗೆಗೆ ವ್ಯಾಖ್ಯಾನ ಮಾಡಿದ್ದಾರೆ. ವಚನದಲ್ಲಿನ ಅಂಕಿತ 'ಚೆನ್ನಮಲ್ಲಿಕಾರ್ಜುನ' ಎಂಬುದು ಸೌಂದರ್ಯಾಭಿರುಚಿಯ ಪ್ರತಿಕ್ರಿಯೆಯನ್ನು ಸೂಚಿಸುತ್ತದೆ ಎನ್ನುವ ಅವರು ಇದು ಸೌಂದರ್ಯಾಭಿರುಚಿಯಷ್ಟೇ ಅಲ್ಲ, ಪ್ರಣಯಾಭಿರುಚಿಯನ್ನೂ ಧ್ವನಿಸುತ್ತದೆ ಎನ್ನುತ್ತಾರೆ. ಈ ಕವನದಲ್ಲಿ ಲೈಂಗಿಕ ಮತ್ತು ಅಲೈಂಗಿಕ ಅರ್ಥಗಳು ಕ್ರಿಯಾಶೀಲವಾಗಿವೆ. ವಾಚ್ಯ-ಸೂಚ್ಯ ಎಂದು ನಿಲ್ಲುವುದಿಲ್ಲ. ಈ ವಚನದಲ್ಲಿ ಗಮನಿಸಬಹುದಾದ ಸ್ವಾರಸ್ಯಕರ ಅಂಶವೊಂದಿದೆ. ಅದು ಅಗ್ನಿ, ಮೊಳಕೆ, ದೇಹಸುಖಗಳ ಪರಸ್ಪರ ಸಂಬಂಧ. ಇವು ಸೃಜನ ಕ್ರಿಯೆಯ ಫಲಗಳು. ಈ ಸೃಜನ ಕ್ರಿಯೆಗೆ 'ಸಂಗ' ಅಗತ್ಯ. ಇಲ್ಲಿ ಅಕ್ಕಮಹಾದೇವಿ ತನ್ನ ಸೃಜನಕ್ರಿಯೆಗೆ ಬೇಕಾದ ಸಂಗ ಮತ್ತು ಅದರ ಫಲಗಳ ಬಗ್ಗೆ ಮಾತನಾಡುತ್ತಾಳೆ ಎಂದಿದ್ದಾರೆ.

ಬೆಂಕಿ ಸಂಗದ ಶೀಘ್ರ ಪರಿಣಾಮವಾದರೆ ಬೀಜ ಮೊಳಕೆಯೊಡೆಯುವುದು ಸಂಗದ ನಿಧಾನವಾದ ಪರಿಣಾಮ. ಆದರೆ ಇವುಗಳ ನಡುವಣ ವ್ಯತ್ಯಾಸ ಅವುಗಳ ಚೈತನ್ಯ ಸ್ವರೂಪಗಳಲ್ಲದೆ ದೇಹಕ್ಕೆ ಜೀವವಿದೆ. ಬೀಜದ ಮೊಳಕೆಗೆ ಜೀವವಿದ್ದರೂ ಆ ಬಗೆಯದಲ್ಲ. ಬೆಂಕಿಗೆ ಕ್ರಿಯಾಶೀಲ ಚೈತನ್ಯವಿದ್ದರೂ ಅದು ಜೈವಿಕವಲ್ಲ. ಸರ್ವಸುಖ ಪರಮಸುಖಗಳಲ್ಲಿಯೂ ಅಂತರವಿದೆ. ಒಂದು ಲೌಕಿಕ ಮತ್ತೊಂದು ಅಲೌಕಿಕ. ಹಾಗಾಗಿ, ಅಕ್ಕನ 'ಸಂಗ' ಕೂಡ ಅಲೌಕಿಕವಾದದ್ದು ಎಂದಿದ್ದಾರೆ.

ದೇವರ ದಾಸಿಮಯ್ಯನ ಒಂದು ವಚನವನ್ನು ಕಡೆಯದಾಗಿ ವಿಶ್ಲೇಷಣೆ ಮಾಡಿದ್ದಾರೆ:

ಗಂಡ ಭಕ್ತನಾಗಿ ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ
ಸತ್ತ ನಾಯ ತಂದಟ್ಟದ ಮೇಲೆ ಇಳುಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ
ಕಾಣಾ ರಾಮನಾಥಾ

ಇದನ್ನು ಕುರಿತ ವಿಶ್ಲೇಷಣೆ ಹೀಗಿದೆ

"ಪಾರಮಾರ್ಥಿಕ ಒಲವುಳ್ಳವನು ಐಹಿಕ ಒಲವುಳ್ಳವನಿಗಿಂತ ಉತ್ತಮನು ಎಂಬ ಸಾಮಾನ್ಯ ತರತಮ ಪ್ರಜ್ಞೆಯನ್ನು ವಚನ (ಕವನ) ಬಳಸಿಕೊಂಡಿದೆ. ಇಲ್ಲಿನ ಮೊದಲ ಎರಡು ಸಾಲುಗಳ ಹೇಳಿಕೆಗಳು ಒಂದೇ ವೇಳೆಗೆ ಐಕ್ಯತೆ (ಗಂಡ-ಹೆಂಡತಿ) ಹಾಗು ಭಿನ್ನತೆ (ಭಕ್ತ-ಭವಿ) ಗಳನ್ನು ಸೂಚಿಸುತ್ತದೆ ಸದ್ಗುಣಿಯಾದ ಪತ್ನಿಯು ಪತಿಯ ದಾರಿಯನ್ನೇ ತುಳಿಯಬೇಕು ಎಂಬ ಸಂಪ್ರದಾಯದ ಸಂದೇಶವನ್ನು ಈ ಕವನ ಬಿಂಬಿಸುತ್ತದೆ"
ಎನ್ನುವುದು ಅವರ ಅಭಿಪ್ರಾಯ.

ಅವರ ಇನ್ನೊಂದು ವಚನದ ವಿಶ್ಲೇಷಣೆಯೂ 'ಸಂಕ್ರಮಣ'ದಲ್ಲಿ ಪ್ರಕಟವಾಗಿದೆ. ಬಸವಣ್ಣನ ಈ ವಚನವನ್ನು

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ
(ಯಾವಾಗಲೂ ಜಂಗಮ ಸ್ಥಿತಿಯಲ್ಲಿರುವ) ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳಸದಂತೆ ಇರಿಸು ಕೂಡಲಸಂಗಮದೇವ

ಅವರ ಸಾಮಾನ್ಯ ಗ್ರಹಿಕೆ ಹೀಗಿದೆ

ತಂದೆ ಎಂಬ ಶಬ್ದ ಸಾಮಾನ್ಯ ಅರ್ಥ ಹಾಗು ಧ್ವನಿಗಳನ್ನು ಅತಿಕ್ರಮಿಸಿದೆ. 'ನಿಮ್ಮ ಶರಣರ ಪಾದವಲ್ಲದೆ' ಎಂಬ ಸಾಲಿನ ಹಿಂದಕ್ಕೆ 'ಯಾವಾಗಲೂ ಜಂಗಮ ಸ್ಥಿತಿಯಲ್ಲಿರುವ' ಎಂಬ ಮಾತನ್ನು ಅವರು ಸೇರಿಸಿದ್ದಾರೆ. ಇಲ್ಲಿ ಜಂಗಮ ಎಂದರೆ ಚಲಿಸುವ ಎಂಬ ಅರ್ಥವಿದೆ. ಬಸವಣ್ಣನವರ ಅಂಕಿತ 'ಕೂಡಲಸಂಗಮದೇವ' ಕುರಿತಂತೆ ವಿಶ್ಲೇಷಿಸುವ ಅವರು ಇಲ್ಲಿನ ಕನ್ನಡದ 'ಕೂಡು', ಸಂಸ್ಕೃತದ 'ಸಂಗಮ'ಗಳಿಂದಾಗಿ 'ಕೂಡುವಿಕೆ' ಹಾಗು 'ಚಲಿಸುವಿಕೆ' ಕೂಡಿಯೇ ನಡೆದಂತಾಗಿದೆ. ಹಾಗೆಯೇ ಶರಣರ ಪಾದವೂ ಚಲನೆಯನ್ನು ಸೂಚಿಸುತ್ತದೆ ಎಂದಿದ್ದಾರೆ. ಮುಂದುವರಿದು, 'ಇದು ಕವನವು ಒಳಗೊಂಡಿರುವ ದೈವತ್ವದ ಕಲ್ಪನೆಯ ಮೇಲೆ ಬೆಳಕು ಚೆಲ್ಲುತ್ತದೆ. ದೈವತ್ವವು ಇಲ್ಲಿ ಚಲನೆ, ಜಂಗಮತ್ವ ಎಂಬ ಅರ್ಥ ಪಡೆದಿದೆ. ಶಿವನೊಂದಿಗೆ ಒಂದಾಗುವ ಭಕ್ತನು ಚಲನೆಯೊಂದಿಗೆ ಒಂದಾಗುತ್ತಾನೆ.,.. ಕವಿಯ ಕೋರಿಕೆಯನ್ನು ಕೇವಲ ಶಬ್ದಶಃ ನೋಡಿದಾಗ ಅವು ಚಲನೆಯನ್ನು ಹಾಗು ಇಂದ್ರಿಯ ಪ್ರವೃತ್ತಿಗಳನ್ನು (ನೋಡುವುದನ್ನು, ಕೇಳುವುದನ್ನು, ಇತ್ಯಾದಿ) ಪ್ರತಿಬಂಧಿಸುವ ಕೋರಿಕೆಗಳಾಗಿ ಕಾಣುತ್ತದೆ. ಆದರೆ ಯಾವಾಗಲೂ ಜಂಗಮ ಸ್ಥಿತಿಯಲ್ಲಿರುವ 'ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು' ಎಂಬ ಕೋರಿಕೆಯಲ್ಲಿ ನಿಜವಾಗಿಯೂ ಒಂದು ಚಲನೆಗಾಗಿ ಕೋರಿಕೆಯಿದೆ. ಪರಿಣಾಮವೆಂದರೆ ಮೊದಲ ಸಾಲಿನಲ್ಲಿ 'ಹೋಗು' ಶಬ್ದದ ಅರ್ಥವ್ಯಾಪ್ತಿಯು ಕವನದಲ್ಲಿಯೇ ಸಂಭವಿಸಿ ಕವನದ ಅರ್ಥವು ಹೊರಹೊಮ್ಮುತ್ತದೆ ಎಂದು ವಿವರಿಸಿದ್ದಾರೆ.

ರುಜುವಾತು, ಸಾಕ್ಷಿ, ಸಂಕ್ರಮಣಗಳಲ್ಲದೆ ಇತರ ಪತ್ರಿಕೆಗಳಲ್ಲಿಯೂ ಸಹ ವಚನದ ಕುರಿತಂತೆ ಪ್ರಾಯೋಗಿಕ ವಿಮರ್ಶಾ ಲೇಖನಗಳು ಪ್ರಕಟವಾಗಿವೆ. ಉದಾಹರಣೆಗೆ, ರಹಮತ್ ತರೀಕೆರೆಯವರ 'ವಚನವೊಂದರ ಪ್ರಾಯೋಗಿಕ ವಿಮರ್ಶೆ'[33] ಎಂಬ ಲೇಖನದಲ್ಲಿ

ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದೆ ಲಲನೆಯಂತೆ ಆಥಿದ್ದೆನಯ್ಯ,

ವಿಭೂತಿಯನೆ ಹೂಸಿ, ರುದ್ರಾಕ್ಷಿಯನೆ ಕಟ್ಟಿ ಶಿವಾ
ನಿಮ್ಮ ಒಲವಿಲ್ಲದಂತೆ ಆಗಿದ್ದೆನಯ್ಯಾ,
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ,
ನೀನೊಲಿದಂತೆ ಸಲಹಯ್ಯಾ ಕೂಡಲಸಂಗಮದೇವಾ

ವಚನದ ಎಲ್ಲ ಸೂಕ್ಷ್ಮಗಳನ್ನೂ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ; ಈ ವಚನ ಕವನದ ರಚನೆ ಹೀಗಿದೆ:

"ವಚನಕಾರನ ಸದ್ಯದ ಸ್ಥಿತಿ (೩ನೆಯ ಮತ್ತು ೪ನೆಯ ಸಾಲು) ನಂತರ ಕವನದ ಐದನೆಯ ಸಾಲು ಒಂದು ಹೇಳಿಕೆ, ಕೊನೆಯದು ಒಂದು ಪ್ರಾರ್ಥನೆ. 'ಕೂಡಲಸಂಗಮದೇವಾ' ಎಂಬ ಅಂಕಿತವನ್ನು ಪ್ರಸ್ತುತ ಕವನಕ್ಕೆ ಅರ್ಥಯಿಸಿ ಅನ್ವಯಿಸಿರುವುದು ಈ ಲೇಖನದಲ್ಲಿ ಕಂಡುಬರುತ್ತದೆ. ಬರಿಯ ಅಂಕಿತವಾಗಬಹುದಾದ 'ಕೂಡಲಸಂಗಮ' ಪದ ಪುರುಷನನ್ನು ಕೂಡಲು (ಕೂಡಿ ಸಂಗಮಿಸಲು) ಒಲವಿಗಾಗಿ ಕಾತರತೆಯಿಂದ ಕಾಯುತ್ತಿರುವ 'ಲಲನೆ' ಭಾವಗಳಿಗೆ; ಅಂತೆಯೇ ಲಿಂಗಪತಿಯ 'ಒಲವಿ'ಗಾಗಿ ಬೇಡುತ್ತಿರುವ, 'ಒಲಿದು', 'ಸಲಹು' ಎಂಡು ಕೇಳುತ್ತಿರುವ ಸತಿಭಕ್ತನ ಶರಣ್ಯಾಭಾವಗಳಿಗೆ ಒತ್ತು ಕೊಡುವ ಮೂಲಕ ಅರ್ಥಪೂರ್ಣವಾಗುತ್ತವೆ"

ವಚನಗಳನ್ನು ಕುರಿತು ಸಾಹಿತ್ಯಿಕ ಪತ್ರಿಕೆಗಳಲ್ಲಿ ಪ್ರಕಟವಾದ ವಿಮರ್ಶಾ ಲೇಖನಗಳಲ್ಲಿ ರಹಮತ್ ತರೀಕೆರೆಯವರ 'ಹಬ್ಬಕ್ಕೆ ತಂದ ಹರಕೆಯ ಕುರಿ: ಒಂದು ವಿಶ್ಲೇಷಣೆ',[೨೩] 'ವಚನ ಸಾಹಿತ್ಯವನ್ನು ಹೋಲುವ ಇತರ ಸಾಹಿತ್ಯ ಪ್ರಕಾರಗಳನ್ನು'[೨೪] (ಜಿ.ಎಸ್. ಸಿದ್ಧಲಿಂಗಯ್ಯ) ಹೆಸರಿಸಬಹುದಾಗಿದೆ. ಬಸವಣ್ಣನ ಮತ್ತೊಂದು ವಚನ:

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲಾ, ಕೂಡಲಸಂಗಮದೇವ.

ಇದನ್ನು ಕುರಿತು ಚಂಪಾ ತಮ್ಮ 'ಮನೆಯೊಳಗೆ ಮನೆಯೊಡೆಯ' ಎಂಬ ಲೇಖನದಲ್ಲಿ ವಿಶ್ಲೇಷಣೆ ಮಾಡಿದ್ದಾರೆ[೨೫]

"ಈ ವಚನದಲ್ಲಿ ಇಪ್ಪತ್ತೊಂದು ಪದಗಳಿವೆ. 'ಮನೆ' ಎಂಬ ಶಬ್ದ ಏಳುಸಲ, 'ತುಂಬಿ' ಮತ್ತು 'ಇಲ್ಲ' ಮೂರು ಸಲ ಬಂದಿದೆ. ಇವೇ ಹದಿಮೂರಾದರೆ ಉಳಿದದ್ದೆಲ್ಲಾ ಸೇರಿ ಎಂಟು ಪದಗಳು ಮಾತ್ರ. ಓದುವಾಗ ಕಣ್ಣಿಗೆ ಬೀಳುವ, ಕೇಳಿದಾಗ ಕಿವಿಗೆ ಬಡಿಯುವ ಈ ಮೂರು ಶಬ್ದಗಳೇ ವಚನದ ಇಡೀ ವಾತಾವರಣವನ್ನು ತುಂಬಿಕೊಂಡಿದೆ. ಇಲ್ಲಿ ಬಸವಣ್ಣ ಯಾವುದೇ ನೀತಿಯನ್ನು ಉಪದೇಶಿಸುತ್ತಿಲ್ಲ. ಅಭಿವ್ಯಕ್ತಿ ವಾಚ್ಯವಾಗಿಲ್ಲ. ಮೊದಲಲ್ಲಿಯೇ ಒಂದು ಚಿತ್ರವಿದೆ. ಅದರ ವಿವರ ಇರದೆ ಈ ಚಿತ್ರ ಕ್ಷಿಪ್ರವಾಗಿ ಒಂದು ಸಂಕೇತವಾಗುತ್ತದೆ. ಸಂಕೇತ ಬೆಳೆದು ಮೂಲ ಚಿತ್ರಕ್ಕೆ ಒಂದು 'ಧ್ವನಿ'ಯಾಗುತ್ತದೆ. ಈ ಧ್ವನಿಯೇ ಕವನದ ಸಂದೇಶವೂ ಆಗುತ್ತದೆ. ಎಲ್ಲವೂ ಟಕ್

ಟಕ್ ಅಂತ ಮುಗಿದು ಹೋದರೂ, ಕವನ ಅವಸರದ್ದಾದರೂ ಅಪೂರ್ಣ ಅನಿಸುವುದಿಲ್ಲ. 'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ' ಎಂಬ ಮಾತು ಈ ವಚನದಲ್ಲಿ ಎರಡು ಬಾರಿ ಬರುತ್ತದೆ. ವಚನದಲ್ಲಿನ ಮೊದಲ ಸಾಲಿನ ಕೊನೆಗೆ ಪ್ರಶ್ನಾರ್ಥಕ ಚಿಹ್ನೆ(?)ಯನ್ನೂ, ಎರಡನೆಯ ಬಾರಿಗೆ ಬರುವ ಅಂದರೆ ಮೂರನೆಯ ಸಾಲಿನಲ್ಲಿ ಬರುವ 'ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ' ಸಾಲಿನ ಕೊನೆಗೆ ಮೂರು ಚುಕ್ಕೆ (...) ಹಾಕಬೇಕೆಂದು ಸೂಚಿಸುತ್ತಾರೆ. ಏಕೆಂದರೆ ಮೊದಲ ಸಲ ಅದು ಮಾಮೂಲಿಯಂತೆ 'ಏನ್ರಿ ಮನ್ಯಾಗ ಯಜಮಾನ್ರು ಅದಾರೋ ಇಲ್ಲೋ?' ಎನ್ನುವ ಪ್ರಶ್ನೆ. ಎರಡನೆಯ ಸಲ ಅದು ಲೋಕಾಭಿರಾಮದ ಪ್ರಶ್ನೆಯಲ್ಲ, ಪ್ರತ್ಯಕ್ಷ ಪ್ರಮಾಣಾಧಾರಿತ ಸಂಶಯವಾಗುತ್ತದೆ"

ಹೀಗೆ ಸಾಹಿತ್ಯಿಕ ಪತ್ರಿಕೆಗಳು ವಚನಗಳನ್ನು ಹಿಂದೆಂದೂ ವಿಶ್ಲೇಷಿಸದಿದ್ದ ರೀತಿಯಲ್ಲಿ, ಹಲವು ಆಯಾಮಗಳಲ್ಲಿ, ಆಧುನಿಕ ಕಾವ್ಯವಿವೇಚನೆಯ ಎಲ್ಲ ಪರಿಕರಗಳೊಂದಿಗೆ ವಿಶ್ಲೇಷಿಸಿ ವಚನಗಳ ಗಹನವಾದ ಸ್ವರೂಪವನ್ನು ಪರಿಚಯಿಸಿದವು. ನವ್ಯರ ಕಾಲದ ವಿಮರ್ಶಕರಂತೂ ವಚನಗಳನ್ನು ವಚನಗಳೆಂದು ಕರೆಯದೆ 'ಕಾವ್ಯ'ವೆಂದೇ ಪರಿಗಣಿಸಿ ಪರಿಶೀಲಿಸಿದರು. ಏಕೆಂದರೆ ವಚನಗಳು ಎಲ್ಲ ಕಾಲದ ಕಾವ್ಯಮೀಮಾಂಸೆಯ ಪರಿಕರಗಳಿಗೆ ಒಳಪಟ್ಟೂ ಅದನ್ನು ಮೀರಿ ಮುಂದುವರೆಯುತ್ತ ಕಾವ್ಯಮೀಮಾಂಸೆಯ ಪರಿಭಾಷೆಗಳನ್ನು, ಪರಿಕಲ್ಪನೆಗಳನ್ನು ಹಿಗ್ಗಿಸುತ್ತ ಸಾಗುತ್ತವೆ. ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ವಚನಗಳ ಈ 'ಜಂಗಮತ್ವ'ವನ್ನು ನಮ್ಮ ಸಾಹಿತ್ಯಿಕ ಪತ್ರಿಕೆಗಳು ಸಮರ್ಥವಾಗಿ ದಾಖಲಿಸುತ್ತ ಬಂದಿವೆ.

ಅಡಿಟಿಪ್ಪಣಿಗಳು

೧. ಹಂಚಿಮನಿ ವೀರಭದ್ರಪ್ಪ, 'ಈವತ್ತಿನ ಸಾಹಿತ್ಯ ಪತ್ರಿಕೆಗಳು ಒಂದು ಸಮೀಕ್ಷೆ', ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೨. ಡಿ.ವಿ.ಎಸ್.ಪಂಪಭಾರತ- ಕರ್ಣನ ಪಾತ್ರ, ಜಯಕರ್ನಾಟಕ ಸಂಚಿಕೆ ೯, ಸಂಪುಟ ೧೩

೩. ಪದ್ಮನಾಭ, 'ಪಂಪಭಾರತದ ಕರ್ಣನ ಪಾತ್ರ – ಒಂದು ಕಳಂಕದ ಮಾರ್ಜನ', ಜಯಕರ್ನಾಟಕ, ಸಂಪುಟ ೧೩, ಸಂಚಿಕೆ ೧೧

೪. ಎ.ಆರ್. ಕೃಷ್ಣಶಾಸ್ತ್ರಿ 'ಭಾನುಮತಿಯೊಡನೆ ನೆತ್ತವನಾಡಿದವರಾರು?', ಜಯಕರ್ನಾಟಕ, ಸಂಪುಟ ೧೪, ಸಂಚಿಕೆ ೩

೫. ಅದೇ,

೬. ಮುಳಿಯ ತಿಮ್ಮಪ್ಪಯ್ಯ, ಜಯಕರ್ನಾಟಕ, ಸಂಪುಟ ೧೪, ಸಂಚಿಕೆ ೫, 'ನೆತ್ತವನಾಡಿದುದು ಯಾರೊಡನೆ?'

೭. ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ, ಪ್ರಬುದ್ಧ ಕರ್ನಾಟಕ, ಸಂಚಿಕೆ ೫೬, ಸಂಪುಟ ೧, ೧೯೭೪, ಸಂ: ಟಿ.ವಿ. ವೆಂಕಟಾಚಲ ಶಾಸ್ತ್ರಿ

೮. ತೆಕ್ಕುಂಜೆ ಗೋಪಾಲ ಕೃಷ್ಣಭಟ್ಟ, ಪ್ರಬುದ್ಧ ಕರ್ನಾಟಕ, ಸಂಚಿಕೆ ೫೬, ಸಂಪುಟ ೧, ೧೯೭೪, ಸಂ: ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪುಟ ೨೫

೯. ಮಾಧವ ಪೆರಾಜೆ: ಭಾನುಮತಿಯ ನೆತ್ತ: ಮತ್ತೆ ಪರಿಶೀಲನೆ, ಸಂಕ್ರಮಣ ೩೨೭-೩೨೮, ನವೆಂಬರ್, ಡಿಸೆಂಬರ್ ೧೯೯೯, ಪುಟ ೫೮-೭೮

೧೦. ಪ್ರೊ.ವೆಂಕಟಸುಬ್ಬಯ್ಯ ಜಿ., 'ವೈಯಾಕರಣಿ ಸೇಡಿಯಾಪು – ಕನ್ನಡವನ್ನು ಉಳಿಸಿ ಬೆಳೆಸಿದವರು' ಕರ್ನಾಟಕ ಸಂಘ, ಪುತ್ತೂರು, ಪುಟ ೧೪೫

೧೧. ಮಾಧವ ಪೆರಾಜೆ: ಭಾನುಮತಿಯ ನೆತ್ತ: ಮತ್ತೆ ಪರಿಶೀಲನೆ, ಸಂಕ್ರಮಣ ೩೨೭-೩೨೮, ನವೆಂಬರ್, ಡಿಸೆಂಬರ್ ೧೯೯೯, ಪುಟ ೫೮-೭

೧೨. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ: ಪಂಪನ ಒಂದು ಪದ್ಯ, ಸಾಕ್ಷಿ, ಪುಟ ೮೪-೮೬, ೧೯೮೧

೧೩. ಡಾ.ಬಿ.ಎಂ. ಪಾಟೀಲ, ಫ.ಗು. ಹಳಕಟ್ಟಿ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ, ಏಪ್ರಿಲ್ ೧, ೨೦೦೭

೧೪. ಹ.ಕಾ. ರಾಜೇಗೌಡ[ಸಂ], ಚಿತ್ರಗುಪ್ತ ಸ್ಮರಣೆ, ಪುಟ ೨೭೭

೧೫. ಡಾ.ಬಿ.ಎಂ. ಪಾಟೀಲ, ಫ.ಗು. ಹಳಕಟ್ಟಿ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ, ಏಪ್ರಿಲ್ ೧, ೨೦೦೭

೧೬. ಓ.ಎಲ್. ನಾಗಭೂಷಣ ಸ್ವಾಮಿ, ಅಕ್ಕನ ವಚನ: ಹೊಳೆದ ಅರ್ಥ, ಸಂಕ್ರಮಣ, ೧೯೯೩, ೨೫೧-೨೫೨, ಪುಟ ೨೦-೨೧

೧೭. ಓ.ಎಲ್. ನಾಗಭೂಷಣ ಸ್ವಾಮಿ, ಸಂಕ್ರಮಣ, ಸಂಪುಟ ೭, ಸಂಚಿಕೆ ೮, ಪುಟ ೭-೮, ೧೯೯೮

೧೮. ಓ.ಎಲ್. ನಾಗಭೂಷಣ ಸ್ವಾಮಿ, ಸಂಕ್ರಮಣ, ೩೦೮, ಪುಟ ೬೯-೭೧, ೧೯೯೬

೧೯. ಗಿರಡ್ಡಿ ಗೋವಿಂದರಾಜ, ಸಮಗ್ರವಿಮರ್ಶೆ ೨, ಸಪ್ನ ಬುಕ್ ಹೌಸ್, ೨೦೦೧, ಪುಟ ೧೫೪

೨೦. ಸಂಕ್ರಮಣ ೩೦೮, ಪುಟ ೬೯-೭೧, ೧೯೯೩

೨೧. ಎಂ.ಜಿ. ಕೃಷ್ಣಮೂರ್ತಿ, ಕೃತಿ ಸಂಸ್ಕೃತಿ, ರುಜುವಾತು ಪ್ರಕಾಶನ ೧೯೯೪

೨೨. ಸಾಧನೆ, ಸಂಪುಟ ೧೪, ಸಂಚಿಕೆ ೩, ಜುಲೈ ೧೯೮೫, ಬೆಂಗಳೂರು ವಿಶ್ವವಿದ್ಯಾಲಯ

೨೩. ಬಸವ ಪಥ, ಮಾರ್ಚ್ ೧೯೮೯

೨೪. ಜಿ.ಎಸ್. ಸಿದ್ಧಲಿಂಗಯ್ಯ, ಬಸವಪಥ, ಸಂಪುಟ ೬, ಸಂಚಿಕೆ ೧೧, ಫೆಬ್ರವರಿ ೧೯೮೫

೨೫. ಚಂದ್ರಶೇಖರ ಪಾಟೀಲ, ಸಂಕ್ರಮಣ, ಪುಟ ೩೪೦, ೨೦೦೧

ಭಾಗ ೩

ಸ್ವಾತಂತ್ರ್ಯೋತ್ತರ ಘಟ್ಟ

೧. ನವ್ಯಕಾಲಮಾನದ ಸಾಹಿತ್ಯ ಪತ್ರಿಕೆಗಳ ಚಾರಿತ್ರಿಕ ಅವಲೋಕನ

೨. ಕನ್ನಡ ಸಾಹಿತ್ಯಿಕ ಪತ್ರಿಕೆಗಳಲ್ಲಿ ಕಾಣಸಿಗುವಂತೆ ನವ್ಯ ವಿಮರ್ಶೆಯ ತಾತ್ವಿಕತೆಯ ಸ್ವರೂಪದ ವಿವೇಚನೆ

೩. ಪತ್ರಿಕೆಗಳು ಮತ್ತು ಕನ್ನಡ ನವ್ಯಕಾವ್ಯ – ಅನುಸಂಧಾನದ ವಿಭಿನ್ನ ಸ್ವರೂಪಗಳು

೪. ಸಾಹಿತ್ಯಿಕ ಪತ್ರಿಕೆಗಳು ಹಾಗು ಪ್ರಗತಿಶೀಲ ಚಳವಳಿ

೧. ನವ್ಯಯುಗದ ಸಾಹಿತ್ಯ ಪತ್ರಿಕೆಗಳು – [redacted] ಚಾರಿತ್ರಿಕ ಅವಲೋಕನ

'ನವ್ಯ' ಎಂಬ ಸಾಹಿತ್ಯಿಕ ಚಳವಳಿ ಪಶ್ಚಿಮದ ಎಲಿಯಟ್, ಆಡೆನ್, ಎಜ್ರಾ ಪೌಂಡ್ ಮೊದಲಾದ ಸಾಹಿತಿಗಳ ಕೃತಿಗಳಿಂದ, ವಿಚಾರಗಳಿಂದ ಪ್ರೇರಿತವಾದದ್ದಾದರೂ ಭಾರತೀಯ ಪ್ರೇರಣೆ, ಪ್ರಭಾವವೂ ಇದಕ್ಕೆ ಇಲ್ಲದಿರಲಿಲ್ಲ. ಮುಖ್ಯವಾಗಿ ಕನ್ನಡ ನವೋದಯದ ಅತಿರಮ್ಯ ಎನಿಸುವ ವಿಚಾರಗಳು, ಭಾರತೀಯ ನಂಬಿಕೆ, ಸಮಾಜ, ರಾಜಕಾರಣ, ವಿಚಾರಗಳನ್ನು ಕಿಂಚಿತ್ತೂ ಲೆಕ್ಕಿಸದೆ ರಷ್ಯನ್ ಚಿಂತನೆಗಳನ್ನು ತೀರಾ ಹಸಿಹಸಿಯಾಗಿಯೇ ಸ್ವೀಕರಿಸಿ ಕ್ರಾಂತಿ ಮಾಡಲು ಹೊರಟಿದ್ದ ಪ್ರಗತಿಶೀಲರ ಸುಧಾರಣಾ ವಿಚಾರಗಳು ಎಲ್ಲಕ್ಕಿಂತ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಲ್ಲೆಡೆ ಕಾಣುತ್ತಿದ್ದ ಭ್ರಷ್ಟತೆ, ಮೌಲ್ಯಗಳ ಅಧಃಪತನಗಳು – ಇವೆಲ್ಲದರ ಫಲವಾಗಿ ನಾಡಿನ ವೈಚಾರಿಕ, ಸಾಹಿತ್ಯಿಕ, ರಾಜಕೀಯ ಕ್ಷೇತ್ರಗಳಲ್ಲಿ ಒಂದು ಹೊಸತನ, ಹೊಸ ಸಂವೇದನೆ ಹುಟ್ಟಿಕೊಂಡವು. ಕನ್ನಡ ಸಾಹಿತ್ಯವೂ ಹೊಸ ಮಾದರಿಯನ್ನು, ಅಭಿವ್ಯಕ್ತಿ ಕ್ರಮವನ್ನು ಅಪೇಕ್ಷಿಸುತ್ತಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ನವ್ಯ ಚಳವಳಿ ಹುಟ್ಟಿಕೊಂಡಿತು. 'ಸಂಕ್ರಮಣ', 'ಲಹರಿ', 'ಸಾಕ್ಷಿ', 'ರುಜುವಾತು', 'ಲಂಕೇಶ್ ಪತ್ರಿಕೆ', ಇವೇ ಮೊದಲಾದ ಪತ್ರಿಕೆಗಳು ಈ ಹೊಸ ಸಂವೇದನೆಯನ್ನು ರೂಪಿಸಲು, ಪ್ರಸರಿಸಲು, ಅಭಿವೃದ್ಧಿ ಪಡಿಸಲು ಸನ್ನದ್ಧವಾದವು. ಕೆಲವು ಪತ್ರಿಕೆಗಳು ದೀರ್ಘಕಾಲ ಪ್ರಕಟವಾದವು, ಕೆಲವು ಇಂದಿಗೂ ಪ್ರಕಟವಾಗುತ್ತಲೇ ಇವೆ, ಇನ್ನು ಕಲವು ಅಲ್ಪಕಾಲವಷ್ಟೇ ಬಾಳಿದವು. ಆದರೆ ಎಷ್ಟೇ ಅಲ್ಪಾಯುಷಿಯಾಗಿದ್ದರೂ 'ಲಹರಿ', 'ಸಾಕ್ಷಿ'ಯಂತಹ ಪತ್ರಿಕೆಗಳು ಉಂಟು ಮಾಡಿದ ಪರಿಣಾಮಗಳಂತೂ ಕನ್ನಡ ಸಾಹಿತ್ಯದ ದಿಕ್ಕನ್ನೇ ಬದಲಿಸಿದವು, ನಿಯಂತ್ರಿಸಿದವು. ಕನ್ನಡ ಸಂಸ್ಕೃತಿಗೆ, ಅವುಗಳ ಅಲ್ಪಕಾಲದ ಕೊಡುಗೆಗಳಿಂದಲೂ ಅಪಾರವಾದ ಕಾಣಿಕೆ ಸಂದಂತಾಗಿದೆ.

ಸಾಕ್ಷಿ: ನವ್ಯ ಸಾಹಿತ್ಯ ಚಳುವಳಿಯಲ್ಲಿ ಅಡಿಗರು ಹೇಗೆ ಪ್ರಮುಖರೋ ಹಾಗೆಯೇ ಆ ಕಾಲಘಟ್ಟದ ಸಾಹಿತ್ಯಿಕ ಪತ್ರಿಕೆಗಳಲ್ಲಿ 'ಸಾಕ್ಷಿ'ಯ ಸ್ಥಾನ ಅತ್ಯಂತ ಪ್ರಮುಖವಾದುದು. ಏಕೆಂದರೆ ನವ್ಯಕಾವ್ಯದ ಹೊಸ ಹೊಸ ಸೃಷ್ಟಿಗಳಿಗೆ ವೇದಿಕೆಯಾದದ್ದು ಸಾಕ್ಷಿ. ಆ ಕಾಲದ ಚರ್ಚೆ, ವಾಗ್ವಾದ, ಚಿಂತನ, ಮಂಥನಗಳಿಗೆ 'ಸಾಕ್ಷಿ' ಪತ್ರಿಕೆ ಅಭಿವ್ಯಕ್ತಿ ಮಾಧ್ಯಮವಾಯಿತು.

'ಸಾಕ್ಷಿ' ಪತ್ರಿಕೆ ಆರಂಭವಾದದ್ದು ೧೯೬೬ರಲ್ಲಿ, ಅಡಿಗರ ಸಂಪಾದಕತ್ವದಲ್ಲಿ. ಒಂದು ತ್ರೈಮಾಸಿಕ ಪತ್ರಿಕೆಯಾಗಿದ್ದ 'ಸಾಕ್ಷಿ' ಪತ್ರಿಕೆಯ ಪ್ರಕಾಶಕರು ಹೆಗ್ಗೋಡಿನ 'ಅಕ್ಷರ ಪ್ರಕಾಶನ', ಪ್ರಕಾಶಕರು ಕೆ.ವಿ.

ಸುಬ್ಬಣ್ಣ. ಹೀಗೆ ಪ್ರಾರಂಭವಾದ 'ಸಾಕ್ಷಿ' ಪತ್ರಿಕೆ ಸುಮಾರು ಮೂವತ್ತು ವರ್ಷಗಳ ಕಾಲ ಮೈಸೂರು, ಸಾಗರ, ಸಿಮ್ಲಾ, ಬೆಂಗಳೂರು ಹೀಗೆ ಬೇರೆ ಬೇರೆ ಕಡೆಯಿಂದ ಅಡಿಗರು ಸಂಪಾದಿಸಿದ ಸುಮಾರು ಮೂವತ್ತಾರು ಸಂಚಿಕೆಗಳನ್ನು ಪ್ರಕಟಿಸಿತು. ಅಡಿಗರು ತಮ್ಮ ವಿಚಾರ ಪೂರಿತ ಸಂಪಾದಕೀಯಗಳ ಮೂಲಕ ನವ್ಯಕಾವ್ಯಕ್ಕೊಂದು ಸ್ಪಷ್ಟತೆ ಹಾಗು ಹಿರಿಮೆಯನ್ನು ತಂದುಕೊಟ್ಟರು. ನವ್ಯಕಾವ್ಯ ಬೆಳೆದಂತೆ 'ಸಾಕ್ಷಿ' ಪತ್ರಿಕೆಯೂ ಬೆಳೆಯಿತು.

'ಸಾಕ್ಷಿ' ಪತ್ರಿಕೆ ಹೊರಬಂದ ಬಗ್ಗೆ ಅಡಿಗರು,

> "ಹೊಸರೀತಿಯ ಬರವಣಿಗೆ ಹಾಗು ಸಾಹಿತ್ಯ ಧೋರಣೆಗಳ ಬಗೆಗೆ ಹೊಸ ರೀತಿಯ ಲೇಖನ, ಕವನ, ಕತೆಗಳ ಪ್ರಕಟಣೆಗೆ ಹೊಸ ಯೋಜನೆಗಳನ್ನು ರೂಪಿಸಬೇಕೆಂದು ವರ್ಷಗಳಿಂದ ನಮ್ಮೆಲ್ಲರಿಗೂ ಅನಿಸುತ್ತಿತ್ತು. ಅದು ಯಾವ ಆಕಾರದಲ್ಲಿ ಎಷ್ಟು ತಿಂಗಳಿಗೊಮ್ಮೆ ಪ್ರಕಟವಾಗಬೇಕು ಎಂಬುದು ನಿಗದಿಯಾಗಿರಲಿಲ್ಲ. ಬಹಳ ಕಾಲ ಮೀನ ಮೇಷ ಎಣಿಸಿ ಕೊನೆಗೆ ಅಪ್ಪದಳದ ಅನಿಯತ ಕಾಲಿಕ ಪ್ರಕಟಣೆಯಾಗಿರಲಿ ಎಂದು ನಿರ್ಧರಿಸಿ ಅದರ ವೆಚ್ಚವನ್ನು ಗೀತಾ ಬುಕ್ ಹೌಸ್ ಸ್ನೇಹಿತ ವಹಿಸಿಕೊಳ್ಳಲು ಅಸಾಮರ್ಥ್ಯ ತೋರಿಸಿದಾಗ ನಾವೇ ಹಣ ಕೂಡಿಸಿ ಪ್ರಕಟಿಸುವುದು ಎಂದು ನಿರ್ಧರಿಸಿದೆವು".೧

'ಸಾಕ್ಷಿ' ಪತ್ರಿಕೆಯ ಮೊದಲ ಸಂಚಿಕೆಯಲ್ಲಿ ಅಡಿಗರು ತಮ್ಮ ಪತ್ರಿಕೆಯ ಉದ್ದೇಶವನ್ನು ಹೀಗೆ ಹೇಳಿದ್ದಾರೆ

> "ಕೃತಿನಿಷ್ಠ ವಿಮರ್ಶೆಗೂ ವಸ್ತುನಿಷ್ಠ ವಿಚಾರಕ್ಕೂ ಒಂದು ವೇದಿಕೆಯಾಗುವ ಹಾಗೆ 'ಸಾಕ್ಷಿ' ಎಂಬ ಪತ್ರಿಕೆಯೊಂದನ್ನು ಪ್ರಕಟಿಸಬೇಕೆಂಬ ಹಂಬಲ ನಮ್ಮಲ್ಲಿ ಅನೇಕರನ್ನು ಹಲವಾರು ವರ್ಷಗಳಿಂದ ಕಾಡುತ್ತ ಬಂದಿದೆ. ಈ ಕೆಲಸಕ್ಕೂ ಮುಖ್ಯವಾದ ಆತಂಕಗಳು ಎರಡು. ಪತ್ರಿಕೆಯನ್ನು ಹೊರಡಿಸಿ ನಡೆಸಿಕೊಂಡು ಬರಲು ತಕ್ಕ ಅರ್ಥಾನುಕೂಲ ಮತ್ತು ಜನಪ್ರಿಯವಾಗಲಾರದ ಈ ಸಾಹಸದಿಂದ ಬರುವ ಅರ್ಥನಷ್ಟವನ್ನು ಭರಿಸುವ ಶಕ್ತಿಯ ಅಭಾವ. ಅದಕ್ಕಿಂತ ಹೆಚ್ಚಾಗಿ ಚೆನ್ನಾಗಿ ಯೋಚಿಸಿ ಹೊಣೆಗಾರಿಕೆಯೊಡನೆ ತಕ್ಕ ಕಾಲಕ್ಕೆ ಉತ್ತಮ ಲೇಖನಗಳನ್ನು ಬರೆದುಕೊಡಬಲ್ಲ ಲೇಖಕರ ಸಹಕಾರದ ಅಗತ್ಯ"

ಹೀಗೆ ಅಡಿಗರು ಪತ್ರಿಕೆ ತರುವಲ್ಲಿನ ತಮ್ಮ ಆತಂಕಗಳನ್ನು ಪ್ರಸ್ತಾಪಿಸಿದ್ದಾರೆ. ಹಾಗೆಯೇ ಪತ್ರಿಕೆಯ ಧ್ಯೇಯ ಧೋರಣೆಗಳನ್ನು ಅದೇ ಮುನ್ನುಡಿಯಲ್ಲಿ,

> "ಇದು ಯಾವುದೇ ಒಂದು ವ್ಯಕ್ತಿಯ, ಗುಂಪಿನ ಅಥವ ಪಂಥದ ಮುಖವಾಣಿಯಾಗಲು ಬಯಸುವುದಿಲ್ಲ. ಎಲ್ಲ ಬಗೆಯ ವಿಚಾರಗಳಿಗೂ, ಸಿದ್ಧಾಂತಗಳ ಮಂಡನೆಗೂ ಇಲ್ಲಿ ಯಾವಾಗಲೂ ಅವಕಾಶ ಉಂಟು"

ಎಂದಿದ್ದಾರೆ. ಹೀಗೆ ಬಹಳ ಗಂಭೀರವಾದ ಉದ್ದೇಶದಿಂದ ಆರಂಭವಾದ 'ಸಾಕ್ಷಿ' ಪತ್ರಿಕೆ ಕಾಲಕ್ರಮೇಣ ತನ್ನ ಉದ್ದೇಶವನ್ನು ಮರೆತು ನವ್ಯ ಮುಖವಾಣಿಯಾಗಿ ನವ್ಯ ಚಳವಳಿಯ ಜೊತೆ ಜೊತೆಗೆ ಬೆಳೆದಿರುವುದು ಕಂಡುಬರುತ್ತದೆ.

"ಲೌಕಿಕವಾದ ಯಾವ ಲಾಭಕ್ಕಾಗಿಯೂ ಸತ್ಯವನ್ನೂ ಋಜುತ್ವವನ್ನೂ ಬಲಿ ಕೊಡಬಾರದು ಎಂಬುದೇ ಸಾಕ್ಷಿಯ ಮೂಲೋದ್ದೇಶ. ಕೊನೆಗೆ ಉಳಿಯುವುದು ಸತ್ಯವೊಂದೇ ಎಂಬ ದೃಢ ವಿಶ್ವಾಸವೇ ಈ ಸಾಹಸದ ಮೂಲಶಕ್ತಿ"

ಎಂದು ಹೇಳಿದ್ದಾರೆ. ಇನ್ನು ಪತ್ರಿಕೆಯ ಗುಣಮಟ್ಟವನ್ನು ಕುರಿತಂತೆ ಹೇಳುವ ಅಡಿಗರು,

"ಉತ್ತಮ ಲೇಖನಗಳನ್ನು ಎಲ್ಲಿಯವರೆಗೆ ಸಂಪಾದಿಸಲು ಸಾಧ್ಯವಾಗುವುದೋ ಅಲ್ಲಿಯವರೆಗೆ ಮಾತ್ರವೇ 'ಸಾಕ್ಷಿ' ಪತ್ರಿಕೆ ಪ್ರಕಟವಾಗುವುದು. ಇಲ್ಲವಾದರೆ ಇಲ್ಲ".

ಇಂತಹ ಖಚಿತ ತಿಳಿವಿನೊಂದಿಗೆ ಆರಂಭವಾದ 'ಸಾಕ್ಷಿ' ಪತ್ರಿಕೆ ಎರಡು ದಶಕಗಳ ಯಾತ್ರೆಯಲ್ಲಿ ತನ್ನ ಚೈತನ್ಯವನ್ನು ಕಾಪಾಡಿಕೊಂಡು ಬಂದುದಲ್ಲದೆ ಕನ್ನಡದ ಹೊಸ ವಿಚಾರಶಾಲೆಯಾಯಿತು. ಪುಟವಿನ್ಯಾಸ, ಪರಿಚ್ಛೇದಗಳ ಆರಂಭದಲ್ಲಿ ಬಿಡಲಾದ ಜಾಗ, ಆಗಾಗ ಬದಲಾಗುತ್ತಿದ್ದ ಸರಳ ಸುಂದರ ಮುಖಪುಟ ವಿನ್ಯಾಸಗಳು, ಒಟ್ಟಾರೆ ಪುಟಗಳಲ್ಲಿದ್ದ ತಿಳಿಯುವ ದಾಹ, ಒಟ್ಟಿಗೇ ಬೆಳೆಯುವ ತಹತಹದ ಚೈತನ್ಯ, ಇವೆಲ್ಲವುಗಳಿಂದ ಸಾಕ್ಷಿ ತನ್ನ ಪ್ರಾಮಾಣಿಕತೆಯಿಂದಲೇ ಅತ್ಯುತ್ತಮವಾದುದನ್ನು ಕೊಡುವ ಯತ್ನದಲ್ಲೇ ಸಮೂಹವನ್ನೇ ಎತ್ತುವ ನೈತಿಕತೆಯ ಶಕ್ತಿಯನ್ನು ಹೊಂದಿತ್ತು.[೨]

'ಸಾಕ್ಷಿ' ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಇರಬೇಕಾದ ಅರ್ಹತೆಯನ್ನು ಹೀಗೆ ಹೇಳುತ್ತಾರೆ

"ಆಳವಾದ ಅಭ್ಯಾಸ, ನಿರಂತರ ಚಿಂತನೆ, ಮೌಲ್ಯ, ವಿವೇಕ, ಪರಮಪುರುಷಾರ್ಥ, ನಿಷ್ಠೆ, ಸಾರ್ಥಕತೆಯ ಅನುಸಂಧಾನ ಇವುಗಳಿಂದ ಮಾತ್ರ 'ಸಾಕ್ಷಿ' ಪತ್ರಿಕೆಗೆ ಬೇಕಾದ ಲೇಖನಗಳು ದೊರೆಯಬಲ್ಲವು. ಇದು ಕೇವಲ ಪಾಂಡಿತ್ಯದ ಪ್ರಶ್ನೆಯಲ್ಲ, ಪಾಂಡಿತ್ಯದ ಜೊತೆಗೆ ಜೀವನದ ಬಗ್ಗೆ ಇರುವ ನಿಜವಾದ ಕಾತರ, ಎಲ್ಲವನ್ನು ಹೀರಬಲ್ಲ ಸಂವೇದನೆ, ಎಲ್ಲವನ್ನೂ ಗಮನಿಸಬಲ್ಲ ಅವಧಾನ, ಇವು ಯಾರಲ್ಲಿ ಇಲ್ಲವೋ ಅವರಿಂದ ಬೆಳಕು ಹರಿಯುವುದಿಲ್ಲ, ಹರಡುವುದಿಲ್ಲ".[೩]

ಯಾವುದು ಸಾಹಿತ್ಯ, ಯಾವುದಲ್ಲ ಎಂಬ ಪ್ರಶ್ನೆಗೆ ಉತ್ತರವಾಗಿ 'ಪ್ರಜಾಪ್ರಭುತ್ವ' ವಾರಪತ್ರಿಕೆಯಲ್ಲಿ ಪ್ರಕಟವಾದ ಅಡಿಗರ ಲೇಖನದ ಕೆಲವು ಮಾತುಗಳು ಹೀಗಿವೆ,

ಸಾಹಿತ್ಯದಿಂದ ಜನಕ್ಕೆ ಅಗತ್ಯವಾದ ಸಂಸ್ಕಾರ ಆಗುವುದು ಸಾಧ್ಯ. ಸಾಹಿತ್ಯದಲ್ಲಿ ಆಸಕ್ತಿ ಉಳ್ಳವರು ಅದನ್ನು ಅಭ್ಯಾಸ ಮಾಡುತ್ತಾ ಅದು ತಮ್ಮ ಅಂತರಂಗದೊಡನೆ ಬೆಳೆಯುವಂತೆ ಮಾಡಿಕೊಳ್ಳಲು ಯತ್ನಿಸಬೇಕು. ತಾವು ಓದಿದ್ದನ್ನು ಅರಗಿಸಿಕೊಂಡು ಅದನ್ನು ಬೆಲೆಕಟ್ಟಲು ತಕ್ಕ ಸಂಸ್ಕಾರ ಪಡೆಯುತ್ತಾ ಹೋಗಬೇಕು,..ಸಾಹಿತ್ಯ ಅತ್ಯಂತ ಮಾನವೀಯ, ನಮ್ಮ ಹೃದಯಕ್ಕೆ ಅತ್ಯಂತ ಹತ್ತಿರವಾದದ್ದು ಎಂಬುದನ್ನು ಮರೆಯಬಾರದು,..ಅತ್ಯಂತ ತೀವ್ರವಾದ ಭಾವನೆಯ ಚಾಲನೆಗೆ ಸಿಕ್ಕಿದವನು ಅತ್ಯಂತ ಕಷ್ಟಕರವಾದ ಅನುಭವವನ್ನು ದಾಟಿ ಬಂದವನು, ಅತ್ಯಂತ ಅಪೂರ್ವ ಶಾಂತಿಪೂರ್ಣ ಸಂತೋಷವನ್ನು ಸವಿದು ನಿಂತವನು ತನ್ನ ಅನೇಕ ವಿಚಿತ್ರ ವಿಕಟ ಎನ್ನುವಂಥ ಅನುಭವದ ತುಣುಕುಗಳಲ್ಲಿ ಹಠಾತ್ತನೆ ಸಮಗ್ರತೆಯ ದರ್ಶನ ಪಡೆದವನು ಮಾತನಾಡತೊಡಗಿದರೆ ಆಗ ಅವರಲ್ಲಿ ಅವನ ಅಂತರಂಗದ ಬೇರೆ ಬೇರೆ ಶಕ್ತಿಗಳಾದ ಭಾವ, ಬುದ್ಧಿ, ಸ್ಮೃತಿ, ನೈತಿಕಪ್ರಜ್ಞೆ, ಕನಸುಗಾರಿಕೆ ಈ ಎಲ್ಲವೂ ಒಂದಾಗುತ್ತದೆ. ಆಗ ಭಾಷೆ ಕೇವಲ ಗದ್ಯ ಅಥವ ವಾಚ್ಯವಾಗಿ ಉಳಿಯುವುದಿಲ್ಲ. ಒಂದು ಮಾತು ಹತ್ತು ಮಾತುಗಳನ್ನು ಧ್ವನಿಸುತ್ತದೆ. ಮಾತಿನಲ್ಲಿ ಬಿಗಿಯೂ, ಬಿಗಿಯ ಜೊತೆಗೆ ನಾಟ್ಯ ಗತಿಯೂ ಸಿದ್ಧಿಸಿ ಆ ಮಾತನ್ನು ಹೇಳಿದಾಗ

ಹೃದಯ ಪುಳಕಗೊಳ್ಳುತ್ತದೆ. ಪ್ರತಿಯೊಂದು ಮಾತಿನಲ್ಲಿಯೂ ಅರ್ಥ ತುಳುಕುತ್ತದೆ. ಹಾಗೆ ಸಾರ್ಥಕವಾಗಿ ಭಾಷೆಯನ್ನು ಬಳಸುವ ಶಕ್ತಿ ಎಲ್ಲಿ ವ್ಯಕ್ತವಾಗುವುದೋ ಅಲ್ಲಿ ಸಾಹಿತ್ಯವಿದೆ. ಸಾಹಿತ್ಯ ಪ್ರತಿಯೊಬ್ಬನನ್ನು ಮುಟ್ಟಬೇಕಾದುದು ಹಾಗೆ. ಸಂತೋಷದ ಮೂಲಕ ಪರಿಪೂರ್ಣ ಎನ್ನುವಂತಹ ಅಭಿವ್ಯಕ್ತಿಯ ಮೂಲಕ ತನ್ನ ಭಾಷೆಯ ನಾಟ್ಯಗತಿಯ ಏರಿಳಿತಗಳೊಡನೆ ಸ್ಪಂದಿಸುವ ಸೃಷ್ಟಿಪರ ಹೃದಯದ ಸ್ಪರ್ಶದ ಮೂಲಕ.

ಸಾಕ್ಷಿ ಪತ್ರಿಕೆಯಲ್ಲಿನ ವಿಭಿನ್ನ ಲೇಖನಗಳು: ಸಾಹಿತ್ಯಕ್ರಿಯೆ ಎಂದರೇನು? ಅದು ಏಕೆ ಉಂಟಾಗುತ್ತದೆ ಎನ್ನುವ ಪ್ರಶ್ನೆಗಳನ್ನು –ಮುಖ್ಯವಾಗಿ ಕಾದಂಬರಿಯ ಸಂದರ್ಭದಲ್ಲಿ – ಮನೋವೈಜ್ಞಾನಿಕ ನೆಲೆಯಲ್ಲಿ ವಿವೇಚಿಸುವ ಪ್ರಯತ್ನವನ್ನು 'ಮನೋವಿಜ್ಞಾನ ಮತ್ತು ಸಾಹಿತ್ಯ' ಎಂಬ ಲೇಖನದಲ್ಲಿ ಗಿರಿ ಅವರು ಮಾಡಿದ್ದಾರೆ. ಇದರಲ್ಲಿ ಫ್ರಾಯ್ಡ್ ಯೂಂಗ್ ಮೊದಲಾದವರ ಸಾಹಿತ್ಯದ ಕುರಿತ ವಿಚಾರಗಳನ್ನು ವಿಶ್ಲೇಷಿಸಲಾಗಿದೆ.[೪]

ಸಂಸ್ಕೃತ ರಂಗಭೂಮಿ, ನಾಟಕ ವಿಮರ್ಶೆಗಳು ಕೂಡ ಸಾಕ್ಷಿಯಲ್ಲಿ ಪ್ರಕಟವಾಗಿವೆ. ಉದಾಹರಣೆಗೆ, ಸಾಕ್ಷಿ ೨೭ ಸಂಚಿಕೆಯಲ್ಲಿ ಜಿ. ರಾಜಶೇಖರ ಅವರು ಜಿ.ಬಿ. ಜೋಷಿಯವರ 'ಸತ್ತವರ ನೆರಳು' ನಾಟಕವನ್ನು ಚರ್ಚಿಸುತ್ತಾ ನಾಟಕದಲ್ಲಿ ನಿರೂಪಿತವಾಗುವ ಧರ್ಮದ ಅಧಃಪಟನದ ಬಗೆಗಿನ ಹತಾಶ ಸಿದ್ಧಾಂತವನ್ನು ಕುರಿತು ಹೀಗೆಂದಿದ್ದಾರೆ,

"ಶ್ರದ್ಧೆ ಸಂಪ್ರದಾಯಗಳಿಗಿರುವ ಸಾಮಾಜಿಕ ಸ್ವರೂಪವನ್ನು ಗಣನೆಗೆ ತೆಗೆದುಕೊಳ್ಳದೆ ಅದು ಕೇವಲ ದುರ್ಬಲ ವ್ಯಕ್ತಿಗಳು ಮತ್ತು ಮಠಗಳ ನಡುವಣ ಸಂಘರ್ಷವಾದ್ದರಿಂದ ನಾಟಕದ ಧೋರಣೆಗಳು ತತ್ವಗಳು ಪ್ರಶ್ನಾರ್ಹವಾಗಿರುತ್ತವೆ. ಶ್ರೀರಂಗರ ನಾಟಕಗಳು ತರ್ಕಜನ್ಯವಾದದ್ದಾದರೆ ಜಿ.ಬಿ. ಜೋಷಿಯವರದು ಅಮೂರ್ತ ಕಲ್ಪನೆಗಳೊಡನೆ ಅಮೂರ್ತ ವಸ್ತುಗಳನ್ನು ಒಳಗೊಂಡದ್ದಾದವು".[೫]

ಹೀಗೆ ನವ್ಯಸಾಹಿತ್ಯ ಕೃಷಿಗೆ ವೇದಿಕೆಯಾಗಿ, ಹಲವು ಹೊಸ ಹೊಸ ನವ್ಯ ಪ್ರತಿಭೆಗಳನ್ನು ಪರಿಚಯಿಸಿದ ಸಾಕ್ಷಿ ಜನಸಾಮಾನ್ಯರಲ್ಲಿ ಈ ಬಗ್ಗೆ ಒಲವು ಮೂಡಿಸುವಲ್ಲಿ ವಿಫಲವಾಯಿತು ಎನ್ನಬಹುದು. ಪತ್ರಿಕೆ ಆರಂಭಿಸುವಾಗ ಅಡಿಗರಿಗಿದ್ದ ಆತಂಕಗಳು ನಿಜವಾದವು. ಆರ್ಥಿಕ ನಷ್ಟ ಹಾಗು ಸಮರ್ಥ ಲೇಖನಗಳ ಕೊರತೆಯಿಂದ ಪತ್ರಿಕೆ ನಿಲ್ಲಬೇಕಾಯಿತು. ನವೋದಯ ಸಂದರ್ಭದ ಸಾಹಿತ್ಯಿಕ ಪತ್ರಿಕೆಗಳು ತನ್ನ ಜನಪ್ರಿಯತೆಯಿಂದಾಗಿ ಚಂದಾದಾರರ ಬೆಂಬಲ ಸ್ವಲ್ಪವಾದರೂ ಪಡೆದಿತ್ತು. ಆದರೆ ಮೊದಲಿನಿಂದಲೂ ಜನದೂರವಾಗಿಯೇ ಉಳಿದಿದ್ದ ಸಾಕ್ಷಿ ಪತ್ರಿಕೆಗೆ ಕೊಂಡು ಓದುವ ಚಂದಾದಾರರ ಬೆಂಬಲ ಇರಲಿಲ್ಲ. ಅದನ್ನೇ ಅಡಿಗರು ಪತ್ರಿಕೆಯ ಮೂವತ್ತಾರನೆಯ ಸಂಚಿಕೆಯಲ್ಲಿ ಹೇಳಿದ್ದಾರೆ,

> "ಕೂತು ಕಷ್ಟಪಟ್ಟು ಬರೆಯುವವರ ಲೇಖನವನ್ನೇ ವೃತ್ತಿಮಾಡಿಕೊಳ್ಳಲು ಸಾಧ್ಯವಾಗದಿರುವ ಧೀಮಂತರ ಸಂಖ್ಯೆ ಕಡಿಮೆಯಾಗಿರುವುದರಿಂದ ನಮ್ಮ ಉದ್ದೇಶಕ್ಕೆ ತಕ್ಕಂತೆ ಸಂಚಿಕೆಯನ್ನು ತರಲಾಗಿಲ್ಲ,..ಸಂಭಾವನೆಯನ್ನು ಕೊಡುವುದು ಸಾಧ್ಯವಿಲ್ಲವಾಗಿ ಬಂದ ಲೇಖನಗಳನ್ನೇ ಮರು ಪ್ರಕಟಿಸದೇ ಬೇರೆ ದಾರಿಯಿಲ್ಲ. ಕತೆ, ಕವನ ಬಿಟ್ಟರೆ ಬೇರೆ ಪ್ರಕಾರದ ಬರಹಗಳು ಕಡಿಮೆಯೇ,.."

ಇತ್ಯಾದಿಯಾಗಿ ಹೇಳುತ್ತ ಸಂಚಿಕೆಯನ್ನು ನಿಲ್ಲಿಸದೆ ಬೇರೆ ದಾರಿಯಿಲ್ಲ ಎಂದಿದ್ದಾರೆ.

ಅಡಿಗರು ತಮ್ಮ ಕುರಿತಾದ ಟೀಕೆಗಳನ್ನು ಸಹ ಸಾಕ್ಷಿಯಲ್ಲಿ ಪ್ರಕಟಿಸುವ ಮೂಲಕ ತಮ್ಮ ನೈತಿಕತೆಯನ್ನು ಪ್ರಕಟಪಡಿಸಿದ್ದಾರೆ. ಉದಾಹರಣೆಗೆ, ಕುರ್ತಕೋಟಿಯವರು ಎ.ಕೆ.ರಾಮಾನುಜನ್‌ರ 'ಹೊಕ್ಕುಳಲ್ಲಿ ಹೂವಿಲ್ಲ' ಎಂಬ ಕವನ ಸಂಕಲನದ ಲೇಖನ ಕುರಿತಂತೆ ರಾಮಾನುಜನ್ ಅವರನ್ನು

ಅಡಿಗರೊಂದಿಗೆ ಹೋಲಿಸಿದ್ದೇ ಪ್ರಮಾದವಾಯಿತೋ ಎಂಬಂತೆ ದಾ.ಲ. ಸುಬ್ರಹ್ಮಣ್ಯ, ಮಾಧವ ಕುಲಕರ್ಣಿ 'ಇದು ಕಾವ್ಯವೇ ಅಲ್ಲ' ಎಂಬ ವರಸೆಯಲ್ಲಿ ತೀವ್ರವಾಗಿ ಪ್ರತಿಕ್ರಿಯಿಸಿದರು. ಇದಕ್ಕೆ ನಂತರ ಮತ್ತೆ ಬಿ.ಟಿ. ದೇಸಾಯಿ ಅಡಿಗರನ್ನು "ಬುದ್ಧ ಗಾಂಧಿ ರಾಮಕೃಷ್ಣರ ಜತೆ ಒದರಾಡುವ ಕವಿ" ಎಂದು ಕರೆದದ್ದೂ ಆಗಲೇ. ಅದರೆ ಅಡಿಗರು ತಮ್ಮ ಕುರಿತಾದ ಇಂತಹ ಟೀಕೆಗಳನ್ನು ಪ್ರಕಟಿಸುವ ನೈತಿಕತೆ ತೋರಿದರು.[8] ಇನ್ನೊಂದೆಡೆ ಡಾ. ಸುಮತೀಂದ್ರ ನಾಡಿಗರು "ಸ್ವಲ್ಪಕಾಲ ಅಡಿಗರ ಜೊತೆಯಲ್ಲಿದ್ದಾಗ ಅವರ ಆತ್ಮವ್ಯಂಗ್ಯ, ಬೌದ್ಧಿಕ–ಅನ್ಯಕಾವ್ಯ ಸಂದರ್ಭ, ನಿರ್ದೇಶನಾತ್ಮಕ ನಾಟಕ ಮಾರ್ಗ ನನಗೆ ಸರಿಯಲ್ಲವೆಂದು ಕಂಡಿತು. ಈ ವಿಷಯದ ಬಗ್ಗೆ 'ವ್ಯಂಗ್ಯ ಮಾರ್ಗದ ಬಗ್ಗೆ ಕೆಲವು ಅನಿಸಿಕೆಗಳು' ಎನ್ನುವ ಲೇಖನವನ್ನು ಬರೆದೆ. ಅದನ್ನು ಅಡಿಗರು 'ಸಾಕ್ಷಿ'ಯಲ್ಲಿ ಪ್ರಕಟಿಸಿದ್ದು ಅವರ ದೊಡ್ಡತನ" ಎನ್ನುತ್ತಾರೆ[10]

ಹೀಗೆ ತ್ರೈಮಾಸಿಕವಾಗಿ ಆರಂಭಗೊಂಡು ಸ್ವಲ್ಪಕಾಲಾನಂತರ ಅನಿಯತಕಾಲಿಕವಾಗಿ, ಸುಮಾರು ಮೂವತ್ತಾರು ಸಂಚಿಕೆಗಳ ಅನಂತರ ಸಾಕ್ಷಿ ನಿಂತೇ ಹೋದದ್ದು ಇತಿಹಾಸ. ಹಲವು ವರ್ಷಗಳ ನಂತರ ಸಾಗರದಿಂದ ಮತ್ತೆ ಮರುಹುಟ್ಟು ಪಡೆದು ಕೆಲಕಾಲ ಪ್ರಕಟವಾಯಿತು. ಅಡಿಗರ ಸ್ನೇಹಿತರಾಗಿದ್ದ ಅರೇಕಲ್ಲು ಪ್ರಭಾಕರ್ ತಮ್ಮ ಸಾಗರ ಮುದ್ರಣದಲ್ಲಿ ಸಾಕ್ಷಿಯನ್ನು ಮುದ್ರಿಸಿದರು. ಅದರೆ ಅದು ಮುಂದುವರೆಯಲಿಲ್ಲ. ಒಂದು ಸಮುದಾಯಕ್ಕೆ ಸೀಮಿತವಾದ ದೃಷ್ಟಿಕೋನವನ್ನು ಹೊಂದಿದ್ದುದೇ ಅದರ ಅವಸಾನಕ್ಕೆ ಕಾರಣವಾಯಿತು ಎನ್ನಬಹುದು. ಸಾಕ್ಷಿಯಂತಹ ಗಂಭೀರವಾದ ಪತ್ರಿಕೆ ನಿಂತುಹೋದದ್ದು ಸಾಹಿತ್ಯ ಕ್ಷೇತ್ರಕ್ಕೆ ಆದ ದೊಡ್ಡ ನಷ್ಟವೇ ಸರಿ. ಸಾಕ್ಷಿ ಪತ್ರಿಕೆಯ ಏಳುಬೀಳುಗಳು ಅದರ ಅವಸಾನದ ಕಥೆ ಇವತ್ತಿನ ಸಾಹಿತ್ಯಿಕ ಪತ್ರಿಕೆಗಳಿಗೆ ಒಂದು ಪಾಠವೆನ್ನಬಹುದು. ಒಂದು ದೃಷ್ಟಿಯಿಂದ, ಒಂದು ನಿಶ್ಚಿತ ಪಂಥವನ್ನೇ ದೃಢವಾಗಿ ಪ್ರತಿಪಾದಿಸಲು ತೊಡಗುವ ಪತ್ರಿಕೆ ಹೇಗೆ ಎಲ್ಲ ಕಾಲಕ್ಕೂ ಮುಂದುವರೆಯಲಾರದು ಎಂಬುದಕ್ಕೆ 'ಸಾಕ್ಷಿ'ಯೇ ಸಾಕ್ಷಿಯಾಗಿದೆ. ಆದರೆ ಇನ್ನೊಂದು ದೃಷ್ಟಿಯಿಂದ ಮುಂಬರುವ ಸಾಹಿತ್ಯಿಕ ಪತ್ರಿಕೆಗಳು ಹೇಗೆ ತನ್ನ ಚಾರಿತ್ರ್ಯವನ್ನು ಉಳಿಸಿಕೊಂಡು ಮುನ್ನಡೆಯಬೇಕು ಎನ್ನುವುದಕ್ಕೂ ಸಾಕ್ಷಿ ಒಂದು ಮಾದರಿಯಾಗಿದೆ. 'ಲೌಕಿಕವಾದ ಯಾವ ಲಾಭಕ್ಕಾಗಿಯೂ ಸತ್ಯವನ್ನು, ಋಜುತ್ವವನ್ನು ಬಲಿ ಕೊಡಬಾರದು ಎಂಬುದೇ ಸಾಕ್ಷಿ'ಯ ಮೂಲ ಉದ್ದೇಶ. ಇದಕ್ಕೆ ವಿರುದ್ಧವಾದ ಲೌಕಿಕ ಲಾಭಕ್ಕಾಗಿಯೇ ಸತ್ಯವನ್ನು ಋಜುತ್ವವನ್ನು ಬಲಿ ಕೊಡಲು ಹಿಂಜರಿಯದ ಇಂದಿನ ಪತ್ರಿಕೆಗಳಿಗೆ ಸಾಕ್ಷಿಯ ಮರು ಓದು, ಸಂಪಾದಕರಾಗಿ ಅಡಿಗರು ನಡೆಸಿದ ಸಾಂಸ್ಕೃತಿಕ, ಸಾಹಿತ್ಯಿಕ ಪ್ರಯತ್ನಗಳ ನೆನಪು ಅತ್ಯಂತ ಅವಶ್ಯಕವಾಗಿದೆ.

ಸಮಾಜ ಮತ್ತು ಕಾವ್ಯ ಒಂದಕ್ಕೊಂದು ಪೂರಕವಾಗಿ ಮುಂದುವರಿದು ಬರುತ್ತಿರುವುದನ್ನು ನಾವು ಕಾಣಬಹುದು. ಸಮಾಜದಲ್ಲಿನ ಬದಲಾವಣೆ ಸಾಹಿತ್ಯಸೃಷ್ಟಿಯಲ್ಲೂ ಬದಲಾವಣೆ ತರುತ್ತದೆ. ಇದು ಸಹಜ, ಸಾಹಿತ್ಯದ ಬೆಳವಣಿಗೆಯನ್ನು ಗಮನಿಸಿದರೆ ಕಾಲಕಾಲಕ್ಕೆ ಹೊಸ ಹೊಸ ಮಾರ್ಗಗಳು ಹುಟ್ಟಿಕೊಂಡಿರುವುದು ಕಂಡುಬರುತ್ತದೆ. ಇದನ್ನೇ ಅಡಿಗರೂ ಹೇಳಿದ್ದಾರೆ

> "ಕಾಲ ಬದಲಿಸಿದಂತೆ ಕಾವ್ಯರೂಪವೂ ಬದಲಾಗುತ್ತದೆ. ಇದನ್ನು ನಮ್ಮ ಕಾವ್ಯ ಪರಂಪರೆಯೂ ಸಾರುತ್ತಿದೆ. ಕವ್ಯದ ಮೂಲವಸ್ತುವಿನಲ್ಲಿ ಅಷ್ಟು ಪರಿವರ್ತನೆಯಾಗದಿದ್ದರೂ ಕವಿಯ ದೃಷ್ಟಿಯಲ್ಲಿ ಕಾವ್ಯದ ರೀತಿಯಲ್ಲಿ ಕ್ರಾಂತಿ ಆಗುತ್ತಾ ಬಂದಿದೆ. ಹೊಸ ಜನಾಂಗ ಬಂದು ಹೊಸ ಸಮಸ್ಯೆಗಳು – ಅವು ಸಾಮಾಜಿಕವಿರಲಿ, ವೈಯಕ್ತಿಕವಿರಲಿ – ತಲೆದೋರಿದಾಗ ಅದೇ ಜೀವನ, ಅದೇ ವಿದ್ಯಮಾನಗಳು ಕವಿಯ

ಹೃದಯದಲ್ಲಿ ಹೊಸ ಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸುತ್ತದೆ. ತಲೆಮಾರಿನಿಂದ ತಲೆಮಾರಿಗೆ ಈ ರೀತಿಯ ಜೀವನ ಮತ್ತು ಪದ್ಯ ಕಾವ್ಯಗಳಲ್ಲಿ ಮಾರ್ಪಾಟು ತಲೆದೋರುತ್ತಾ ಬಂದಿದೆ"[೬]

ಹೊರಜಗತ್ತಿನಲ್ಲಿ ಪ್ರಕೃತಿಯಲ್ಲಿ ತೋರಿಕೆಗೆ ಯಾವ ಬದಲಾವಣೆಯೂ ಕಾಣದಿದ್ದರೂ ಮನುಷ್ಯನ ದೃಷ್ಟಿಯಲ್ಲಿ, ಸಮಾಜದ ರೀತಿ ನೀತಿಗಳಲ್ಲಿ ವ್ಯಕ್ತಿ ವ್ಯಕ್ತಿಯ ಸಂಬಂಧದಲ್ಲಿ, ರಾಜಕೀಯ, ಲೌಕಿಕ, ಧಾರ್ಮಿಕ ವ್ಯವಹಾರಗಳಲ್ಲಿ ಮನುಷ್ಯರ ವಿಚಾರಗಳಲ್ಲಿ ಮಾತ್ರ ಬದಲಾವಣೆ ಆಗುತ್ತಿರುತ್ತದೆ.

"ನಮ್ಮ ಹಿರಿಯರು ನಿಂತಿದ್ದ ನೆಲದ ಮೇಲೆ ನಾವು ನಿಂತಿದ್ದರೂ ನಾವು ಅದನ್ನು ಕಾಣುವ ದೃಷ್ಟಿಯಲ್ಲಿ ಮಾತ್ರ ಈಗ ಮಹತ್ತರ ಬದಲಾವಣೆಯಾಗಿದೆ. ಈ ಬದಲಾವಣೆ ಸಾಹಿತ್ಯದಲ್ಲಿನ ಹೊಸ ರೀತಿಗೆ ಕಾರಣವಾಗಿದೆ".[೭]

ನವ್ಯಸಂವೇದನೆ ಕಾಲ ಸರಿದಂತೆ ಅಂಚಿಗೆ ಸರಿಯಬಹುದೆಂಬ ಅರಿವು ಅಡಿಗರಿಗೆ ಇರಲಿಲ್ಲವೆಂದಲ್ಲ

"ಕಾಲ ಬದಲಾದಂತೆ ಕಾವ್ಯರೂಪವೂ ಬದಲಾಗುತ್ತದೆ ಎಂಬ ಮಾತನ್ನು ಪ್ರತಿಯೊಂದು ಕಾವ್ಯ ಪರಂಪರೆಯೂ ಸಾರುತ್ತಿದೆ. ಕಾವ್ಯದ ಮೂಲ ವಸ್ತುವಿನಲ್ಲಿ ಅಷ್ಟು ಪರಿವರ್ತನೆಯಾಗದಿದ್ದರೂ ಕವಿಯ ದೃಷ್ಟಿಯಲ್ಲಿ ಕಾವ್ಯದ ರೀತಿಯಲ್ಲಿ ಕ್ರಾಂತಿಯಾಗುತ್ತಾ ಬಂದಿದೆ".[೮]

೧೯೬೮ರಲ್ಲಿ ಗೋಪಾಲಕೃಷ್ಣ ಅಡಿಗರ ೫೦ನೆಯ ವರ್ಷ ದಾಟಿದ ಸಂದರ್ಭದಲ್ಲಿ ಉಡುಪಿಯಲ್ಲಿ ನಡೆದ ವಿಚಾರ ಸಂಕಿರಣದ ಭಾಷಣವೊಂದರಲ್ಲಿ ಶಾಂತಿನಾಥ ದೇಸಾಯಿ ಅವರು "ಪದ್ಯಕ್ಕೆ ನಮ್ಮ ನವ್ಯತೆಯಲ್ಲಿ ಕೆಲವೇ ಸಾಹಿತಿಗಳಿಗೆ ಸೀಮಿತವಾಗಿ ನೂರಕ್ಕೆ ತೊಂಬತ್ತರಷ್ಟು ಸಾಹಿತಿಗಳು ನವ್ಯಕ್ಕೆ ಸಂಬಂಧವಿಲ್ಲದ, ಅದರ ಅರಿವು ಕೂಡ ತೋರಿಸದೆ ಹಳೆಯ ಸವೆದ ಅರ್ಥಶೂನ್ಯ ರೀತಿಯಲ್ಲಿ ಬರೆಯುತ್ತಾರೆ ಎಂಬುದನ್ನು ನಾವು ನೆನಪಿಡಬೇಕಾದದ್ದು ಅಗತ್ಯ" ಎಂದರು. ಅಂದರೆ ೧೯೭೦ರ ವೇಳೆಗೆ ನವ್ಯ ತನ್ನ ಉಚ್ಛ್ರಾಯ ಸ್ಥಿತಿಯಿಂದ ಕೆಳಗೆ ಇಳಿಯುತ್ತಿದ್ದುದು ಕಂಡು ಬರುತ್ತದೆ. ಆಗ ನವ್ಯದ ಮಿತಿಗಳು ಸ್ಪಷ್ಟವಾಗಿ ಗೋಚರಿಸುತ್ತಿತ್ತು. ನವ್ಯವಲ್ಲದೆ ಹೊಸ ಮಾರ್ಗಕ್ಕೆ ಸಾಹಿತ್ಯ ಪೂರ್ವ ಸಿದ್ಧತೆ ಮಾಡಿಕೊಳ್ಳಲಾರಂಭಿಸಿತು. ಇದು ೧೯೭೩ರಲ್ಲಿ ಪ್ರಕಟವಾದ ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಕಲನದ ಮುನ್ನುಡಿಯಲ್ಲಿ ಪ್ರಕಟವಾಗಿರುವುದನ್ನು ಕಾಣಬಹುದು:

"ಕನ್ನಡದ ನವ್ಯ ಸಂಪ್ರದಾಯವನ್ನು ಸಂಪೂರ್ಣವಾಗಿ ತೊಡೆದು ಹೊಸದಿಕ್ಕಿನಲ್ಲಿ ನಾವೀಗ ಅನ್ವೇಷಿಸಬೇಕಾಗಿದೆ. ಕಳೆದ ಹದಿನೈದಿಪ್ಪತ್ತು ವರ್ಷಗಳಲ್ಲಿ ನವ್ಯ ಸಾಹಿತಿಗಳು ಪ್ರಾಮಾಣಿಕತೆಯ ಹೆಸರನ್ನು ಅಭ್ಯಸಿಸಿದ ಅಪ್ರಾಮಾಣಿಕತೆ, ವಿಮರ್ಶೆಯ ಹೆಸರಿನಲ್ಲಿ ನಡೆಸಿದ ರಾಜಕೀಯ, ಅನುಭವ ಕ್ಷೇತ್ರವನ್ನು, ಅಭಿವ್ಯಕ್ತಿ ಸಾಮರ್ಥ್ಯವನ್ನು ವಿಸ್ತರಿಸುವ ಹೆಸರಿನಲ್ಲಿ ಕುಗ್ಗಿಸಿದುದು ಇತ್ಯಾದಿಗಳೆಲ್ಲ ಆ ಮಾರ್ಗದ ಬರಹಗಾರರಿಗೆ ಹಿಡಿದ ಶನಿಗಳಾಗಿವೆ".

ನಾಡಿನ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ಬದುಕಿಗೆ ನವ್ಯ ಸಾಹಿತ್ಯ ಸ್ಪಂದಿಸಲಾರದು ಎನ್ನುವುದು ೧೯೬೨ರ ಚೀನಾ ದಾಳಿ, ಜೆ.ಪಿ. ಚಳುವಳಿ ಹಾಗು ತುರ್ತು ಪರಿಸ್ಥಿತಿಗಳ ಸಂದರ್ಭದಲ್ಲಿ ಸ್ಪಷ್ಟವಾಯಿತು. ಇವೆಲ್ಲ ಚಿಂತನಶೀಲ ವಿದ್ಯಾವಂತರಲ್ಲಿ ಆತಂಕ ಹಾಗೂ ಸಾಮಾಜಿಕ ಹೊಣೆಗಾರಿಕೆಯನ್ನು ಮೂಡಿಸಿತು. ಕ್ರಮೇಣ ನವ್ಯಸಾಹಿತ್ಯದ ಪ್ರಭಾವ ಮಸುಕಾಯಿತು. ಆಗ ಬೆಳಕಿಗೆ ಬಂದದ್ದು ಬಂಡಾಯ.

ರುಜುವಾತು: ೧೯೮೨ರಲ್ಲಿ ಪ್ರಾರಂಭವಾದ ಈ ಪತ್ರಿಕೆಯ ಸಂಪಾದಕರು ಕನ್ನಡದ ಹೆಸರಂತ ಸಾಹಿತಿ ಚಿಂತಕ ಡಾ.ಯು.ಆರ್.ಅನಂತಮೂರ್ತಿ.

> "ಇದೊಂದು ತ್ರೈಮಾಸಿಕ ಪತ್ರಿಕೆಯಾಗಿದ್ದು ಕನ್ನಡ ಸಾಹಿತ್ಯ ಪತ್ರಿಕೆಗಳ ಗುಂಪಿನಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದಿದೆ. ಸೃಜನಶೀಲತೆಯನ್ನು ವಿನಯದಿಂದಲೂ, ಗಾಂಭೀರ್ಯದಿಂದಲೂ ವಿಮರ್ಶಾತ್ಮಕ ನಿಲುವಿನಿಂದಲೂ ಪೋಷಿಸುವ ಕೆಲಸವನ್ನು ಕನ್ನಡದ ಅನೇಕ ಕಿರುಪತ್ರಿಕೆಗಳು ಮಾಡುತ್ತಿವೆ. ಅದರ ಜೊತೆ ನಾವೂ ಸೇರುತ್ತಿದ್ದೇವೆ".[೧೧]

ಎನ್ನುವ ಮೂಲಕ ರುಜುವಾತು ಪ್ರಾರಂಭಿಸಿದ ಅನಂತಮೂರ್ತಿಯವರು ಪತ್ರಿಕೆ ಆರಂಭವಾಗಲು ಕಾರ್ಣವಾದ ಸಂದರ್ಭವನ್ನು ವಿವರಿಸಿದ್ದಾರೆ

"ನನ್ನನ್ನು ನೋಡಲೆಂದು ಇಬ್ಬರು ಗೆಳೆಯರು ಹೇಳದೆ ಕೇಳದೆ ಬೆಂಗಳೂರಿನಿಂದ ಮೈಸೂರಿಗೆ ಬಂದರು. ಅವರಲ್ಲಿ ಒಬ್ಬರು ಬಹಳ ವರ್ಷಗಳಿಂದ ನನಗೆ ಪ್ರಿಯರಾದ, ತಮ್ಮ ಕಾವ್ಯದ ಹುಚ್ಚಿನಿಂದ ನನ್ನ ಬದುಕಿನ್ ಹಲವು ಗಳಿಗೆಗಳನ್ನು ಬೆಳಗಿದ ಕಿ.ರಂ.ನಾಗರಾಜರು. ಇನ್ನೊಬ್ಬರು ಆಗತಾನೇ ನನಗೆ ಪರಿಚಿತರಾದ್ ತಮ್ಮ ವಿಚಾರಶಕ್ತಿಯ ಹರಿತ ಮತ್ತು ಪ್ರಾಮಾಣಿಕತೆಗಳಿಂದ ನನ್ನನ್ನು ವಿಶೇಷವಾಗಿ ಸೆಳೆಯಲು ಪ್ರಾರಂಭಿಸಿದ್ದ ಸತ್ಯನಾರಾಯಣ. ಬಂದವರು ಬೇರೇನೂ ಮಾತನಾಡದೆ 'ನೀವೊಂದು ಪತ್ರಿಕೆ ಶುರು ಮಾಡಬೇಕು. ನಾವು ನಿಮ್ಮ ಜೊತೆ ನಿಂತು ಕೆಲಸ ಮಾಡುತ್ತೇವೆ' ಎಂದರು. ಆಗಬಹುದು ಎಂದುಬಿಟ್ಟೆ. ಇದೊಂದು ನನ್ನ ಪಾಲಿಗೆ ಮಹತ್ವದ ಘಟನೆ, 'ರುಜುವಾತು' ಶುರುವಾಯ್ತು".[೧೨]

ಯಾವ ಒಂದು ಮತಕ್ಕಾಗಲಿ, ಸಾಹಿತ್ಯದ ಗುಂಪಿಗಾಗಲಿ ಬದ್ಧವಾಗಿ 'ರುಜುವಾತು' ಹೊರಡುತ್ತಿಲ್ಲ. ತೆರೆದ ಮನಸ್ಸಿನ ಹುಡುಕಾಟವೇ ಇದರ ಗುರಿ. ಈ ಗುರಿ ಸಾಧನೆಗಾಗಿ ನಾವು ಸಾಹಿತ್ಯದಿಂದ ಮಾತ್ರವಲ್ಲದೆ ಉಳಿದ ಮಾನವಿಕ ಶಾಸ್ತ್ರಗಳಿಂದಲೂ ಲೇಖನಗಳನ್ನು ಪಡೆಯಲು ಶ್ರಮಿಸುತ್ತೇವೆ. ವಿಮರ್ಶೆ, ಚಿಂತನೆಗಳು ಕೂಡಿ ಮಾಡುವ ಕೆಲಸ ಎಂಬ ಧೋರಣೆ ಈ ಪತ್ರಿಕೆಯ ಲೇಖಕರನ್ನು ಒಟ್ಟಿಗೆ ತಂದಿದೆ. ನಾವು ನಿಷ್ಠುರವಾಗಿ, ಅಗತ್ಯ ಬಿದ್ದರೆ ಅಪ್ರಿಯವಾಗಿ ಬರೆಯಬಹುದು. ಆದರೆ ಈ ಪತ್ರಿಕೆಯಲ್ಲಿ ವ್ಯಕ್ತಿನಿಂದೆಗಾಗಲಿ, ಅಪಹಾಸ್ಯ, ಕುಹಕಗಳಿಗಾಗಲಿ ಎಡೆಯಿಲ್ಲ. ನಮ್ಮ ನಮ್ಮ ವ್ಯಕ್ತಿತ್ವಗಳ ಪ್ರದರ್ಶನಕ್ಕಿಂತ ನಾಡಿನ ಸಂಸ್ಕೃತಿ ಮುಖ್ಯ ಎಂಬುದರಲ್ಲಿ ಅಚಲ ನಂಬಿಕೆ 'ರುಜುವಾತಿ'ಗಿದೆ ಎನ್ನುವ ಮೂಲಕ ಪತ್ರಿಕೆಯ ಉದ್ದೇಶ ಹಾಗು ಧೋರಣೆಗಳನ್ನು ಸ್ಪಷ್ಟಪಡಿಸಿದ್ದಾರೆ. ಈ ಪತ್ರಿಕೆಯ ಸಹ ಸಂಪಾದಕರಾಗಿ ಸರ್ವಮಂಗಳ ಹಾಗು ಎಚ್. ಪಟ್ಟಾಭಿರಾಮ ಸೋಮಯಾಜಿ, ವ್ಯವಸ್ಥಾಪಕ ಸಂಪಾದಕರಾಗಿ ಎನ್. ವಿದ್ಯಾಶಂಕರ್ ಹಾಗು ಮೀನಾ ಮೈಸೂರು ಕೆಲಸ ನಿರ್ವಹಿಸಿರುವುದು ಕಂಡು ಬರುತ್ತದೆ. 'ಸೃಜನಶೀಲ ಪ್ರಯೋಗಗಳಿಗಾಗಿ, ಹೊಸದಿಕ್ಕಿನ ಹುಡುಕಾಟಕ್ಕಾಗಿ, ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದ ಶೋಧಕ್ಕಾಗಿ' ಎಂಬ ಅನಿವಾರ್ಯ ಹಾಗು ಅವಶ್ಯ ಕಾರಣಗಳಿಗಾಗಿ ಆರಂಭವಾದ ಈ ಪತ್ರಿಕೆ ಅನಿಯಮಿತವಾಗಿ ಬಂದರೂ ಬಂದ ಪ್ರತಿ ಸಂಚಿಕೆಯೂ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅನೇಕ ಚರ್ಚೆಗಳಿಗೆ ಕಾರಣವಾದದ್ದು ಅದರ ಮಹತ್ವವನ್ನು ತಿಳಿಸುತ್ತದೆ. ಈ ಪತ್ರಿಕೆಯಲ್ಲಿ ಸಾಹಿತ್ಯಿಕ ಲೇಖನಗಳ ಜೊತೆಗೆ ರಾಜಕೀಯ, ಸಾಮಾಜಿಕ ಹಾಗು ಆರ್ಥಿಕ ಚಿಂತನೆಗಳನ್ನು ಒಳಗೊಂಡ ಹಲವಾರು ಲೇಖನಗಳು ಪ್ರಕಟಗೊಂಡಿವೆ. ಸಂಪಾದಕ ಅನಂತಮೂರ್ತಿಯವರ 'ಸಂಪಾದಕನ ಟಿಪ್ಪಣಿಗಳು' ಅಂಕಣ ಸಮಕಾಲೀನ ಸಮಸ್ಯೆಗಳನ್ನು ಭಿನ್ನ ದೃಷ್ಟಿಯಿಂದ ದಾಖಲಿಸುವ

ಲೇಖನಗಳಾಗಿದ್ದು ಗಂಭೀರ ಸ್ವರೂಪದ ಚರ್ಚೆಗೆ ಕಾರಣವಾಗುತ್ತಿತ್ತು. ರುಜುವಾತು ಸಂಚಿಕೆಯ ಪ್ರಾಮುಖ್ಯತೆ ಇರುವುದು ಅದು ಪ್ರಕಟಿಸಿದ ಕೆಲವು ಎಂ.ಎನ್.ರಾಯ್ ಕುರಿತು ತಂದಂಥ ವಿಶೇಷ ಸಂಚಿಕೆಗಳಿಂದ ಹಾಗು ಪಾಶ್ಚಿಮಾತ್ಯ ಲೇಖಕರ ಅನುವಾದಿತ ಲೇಖನಗಳಿಂದ ಎಂಬ ಹಂಚಿಮನಿ ವೀರಭದ್ರಪ್ಪನವರ ಮಾತು ಒಪ್ಪುವಂತಹುದು.[೧] ನವ್ಯ ಹಾಗು ನಂತರದ ದಿನಗಳಲ್ಲಿ ಹೊಸ ಬರಹಗಾರರಿಗೆ ವೇದಿಕೆಯಾಗಿ ನಿಂತಿದ್ದು ಇದೇ 'ರುಜುವಾತು'.

ಇಪ್ಪತ್ತೈದು ಸಂಚಿಕೆಗಳನ್ನು ನಿಯಮಿತವಾಗಿ ತಂದ ಅನಂತಮೂರ್ತಿಯವರು ಮೈಸೂರು ವಿಶ್ವವಿದ್ಯಾನಿಲಯದಿಂದ ಕೋಟಯಂನ ಮಹಾತ್ಮಾ ಗಾಂಧಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಹೋದ ನಂತರ 'ರುಜುವಾತು' ಸ್ವಲ್ಪಕಾಲ ನಿಂತು ನಂತರ ಪ್ರಕಟಗೊಳ್ಳತೊಡಗಿತು. ಈ ನಡುವೆ ಸಾಗರದ ಕವಿ-ಕಾವ್ಯದ ವತಿಯಿಂದ ರುಜುವಾತಿಗೆ ಮತ್ತೆ ಜೀವ ಕೊಡುವ ಪ್ರಯತ್ನವನ್ನು ನಾಟಕಕಾರ ಪ್ರಸನ್ನ ಮಾಡಿದರು. ಅವರ ಪ್ರಯತ್ನದ ಫಲವಾಗಿ ೧೯೯೫ರಲ್ಲಿ ರುಜುವಾತು ಮತ್ತೆ ಜನ್ಮ ಪಡೆಯಿತು. ಆದರೆ ೧೯೯೬ರ ನಂತರ ಅನೇಕ ಕಾರಣಗಳಿಂದಾಗಿ 'ರುಜುವಾತು' ಪ್ರಕಟಗೊಂಡಿರುವುದಿಲ್ಲ.

ಲಂಕೇಶ್ ಪತ್ರಿಕೆ: ಲಂಕೇಶ್ ಪತ್ರಿಕೆ ಕನ್ನಡ ಪತ್ರಿಕಾ ವ್ಯವಸಾಯಕ್ಕೊಂದು ಹೊಸ ಆಯಾಮ, ಹೊಸ ಅಭಿರುಚಿಗಳನ್ನು ತಂದುಕೊಟ್ಟಿತು. ಪತ್ರಿಕಾ ಧರ್ಮದ ಕೆಲವು ಲಿಖಿತ ಕಟ್ಟುಪಾಡುಗಳನ್ನು ಗಾಳಿಗೆ ತೂರಿ, ಭಿನ್ನ ದಾರಿಯಲ್ಲಿ ತನ್ನತನವನ್ನು ಮೆರೆದದ್ದು ಲಂಕೇಶ್ ಪತ್ರಿಕೆಯ ಹಿರಿಮೆ. ಲಂಕೇಶ್ ಪತ್ರಿಕೆ ಹೊಸ ಪತ್ರಕರ್ತರಿಗೆ ಇಂತಹ ಮಾದರಿಯಾಯಿತೆಂದರೆ ಮುಂದೆ ಅದೇ ಮಾದರಿಯ ಹಲವು ಪತ್ರಿಕೆಗಳು ಪ್ರಾರಂಭಗೊಂಡದ್ದು ಈಗ ಇತಿಹಾಸ. ಬರೆಯುವ ಪ್ರಾಮಾಣಿಕತೆ ಮುಖ್ಯವೇ ಹೊರತು ಪ್ರಕಾರಗಳಲ್ಲಿ ಪರಿಶುದ್ಧತೆಯಲ್ಲ ಎಂಬ ತತ್ವದಲ್ಲ ನಂಬಿಕೆ ಇರಿಸಿಕೊಂಡಿದ್ದ, ಅದನ್ನು ತನ್ನ ಜೀವಿತದುದ್ದಕ್ಕೂ ಪಾಲಿಸಿಕೊಂಡು ಬಂದ ಲಂಕೇಶ್ ಹುಟ್ಟಿದ್ದು ಶಿವಮೊಗ್ಗ ಸಮೀಪದ ಕೊನಗವಳ್ಳಿ ಎಂಬ ಗ್ರಾಮದಲ್ಲಿ. ಇಂಗ್ಲಿಷ್ ಸ್ನಾತಕೋತ್ತರ ಪದವಿ ಪಡೆದಿದ್ದ ಲಂಕೇಶ್ ತಾವು ಕಂಡ ಅನುಭವಿಸಿದ ಅವಮಾನ, ಒಂಟಿತನ, ಹತಶೆ ಹಾಗು ತಲ್ಲಣಗಳನ್ನು ಅಕ್ಷರವಾಗಿಸಿದರು. ೧೯೮೦ರಲ್ಲಿ ತಮ್ಮದೇ ಹೆಸರಿನ ಪತ್ರಿಕೆ ಆರಂಭಿಸಿದ ಲಂಕೇಶ ಸತತ ಇಪ್ಪತ್ತು ವರ್ಷಗಳ ಕಾಲ ತಮ್ಮ ತೀವ್ರ ಅನಾರೋಗ್ಯದ ಪರಿಸ್ಥಿತಿಯಲ್ಲೂ ಕೈಬಿಡದೆ ನಡೆಸಿದ್ದು ಅವರ ಕಾರ್ಯಕ್ಷಮತೆಗೆ ಸಾಕ್ಷಿ. ಜಡ್ಡುಗಟ್ಟಿದ್ದ ನಿಯತಕಾಲಿಕ ಪತ್ರಿಕೋದ್ಯಮಕ್ಕೆ ಹೊಸ ಆಯಾಮ ನೀಡುವ ಮೂಲಕ ಪತ್ರಿಕೋದ್ಯಮದ ಸಾಧ್ಯತೆಗಳನ್ನು ಹಿಗ್ಗಿಸಿದವರು ಲಂಕೇಶ್.

ಲಂಕೇಶರ ಬರಹಗಳಲ್ಲಿದ್ದ ಮೊನಚು, ವ್ಯಂಗ್ಯ, ದಿಟ್ಟತನ ಹಾಗು ಕಂಡದ್ದನ್ನು ಕಂಡ ಹಾಗೆ ಹೇಳುವ ಅವರ ಟೀಕೆ ಟಿಪ್ಪಣಿಗಳು ಸಮಕಾಲೀನ ಆಗುಹೋಗುಗಳಿಗೆ ಹಿಡಿದ ಕೈಗನ್ನಡಿಗಳಾಗಿವೆ. ಅನೇಕ ಹೊಸ ಬರಹಗಾರರಿಗೆ ಅವಕಾಶ ನೀಡಿ ಪ್ರೋತ್ಸಾಹಿಸಿದ ಕೀರ್ತಿ ಪತ್ರಿಕೆಯದ್ದು. ಹಿಂದುಳಿದವರು, ಅಲ್ಪಸಂಖ್ಯಾತರು, ಬಡವರು, ರೈತರು ಹಾಗು ಮಹಿಳೆಯರ ಪರವಾಗಿದ್ದ ಲಂಕೇಶ್ ಪತ್ರಿಕೆ ಭ್ರಷ್ಟಾಚಾರವನ್ನು ತೀಕ್ಷ್ಣ ಮಾತುಗಳಿಂದ ಖಂಡಿಸುತ್ತಿದ್ದರು. ಮಹಿಳಾ ಲೇಖಕಿಯರನ್ನು ಅದರಲ್ಲೂ ಮುಸ್ಲಿಂ ಬರಹಗಾರರನ್ನು ಬೆಳಕಿಗೆ ತಂದಿದ್ದು ಈ ಪತ್ರಿಕೆ. ಪತ್ರಿಕೆಯಲ್ಲಿ ಬರುತ್ತಿದ್ದ ನೀಲು ಹಾಗು ನಿಮ್ಮಿ ಕಾಲಂಗಳು ಎಷ್ಟೋ ಹೆಣ್ಣು ಮಕ್ಕಳಲ್ಲಿ ಧೈರ್ಯ, ಸ್ವತಂತ್ರವಾಗಿ ಬದುಕುವ ಸ್ವಾವಲಂಬನವನ್ನು ಕಲಿಸಿದೆ. ಪತ್ರಿಕೆಯಲ್ಲಿ ಬರುತ್ತಿದ್ದ ಬರಹಗಾರರ ಸಂದರ್ಶನ 'ಬರೆವ ಬದುಕು' ಅಂಕಣ ಒಂದು ಅಪೂರ್ವ ದಾಖಲೆಯೇ ಸರಿ. ಭಾಷೆಯಲ್ಲಿ ಲವಲವಿಕೆ, ತಾಜಾತನ, ವ್ಯಂಗ್ಯ, ಜೊತೆಗೆ ತುಂಟತನ ಇವೆಲ್ಲ ಬೆರೆತು ಇಂದು 'ಲಂಕೇಶ್ ಪತ್ರಿಕೆಯ ಭಾಷೆ' ಎನ್ನುವಷ್ಟರ ಮಟ್ಟಿಗೆ ಪತ್ರಿಕೆಯನ್ನು ಲಂಕೇಶ್ ಬೆಳೆಸಿದರು. ನೀಲು

ಕವನಗಳು ಹೃದಯಕ್ಕೆ ಕಚಗುಳಿ ಇಟ್ಟರೆ 'ಛೇ ಛೇ!' ಅಂಕಣ ಖುಷಿಕೊಡುವಂತಿರುತ್ತಿದ್ದವು. ಫ್ರೆಂಚ್ ಕವಿ ಬೋದಿಲೇರನ ಕವನಗಳ ಅನುವಾದ 'ಪಾಪದ ಹೂಗಳು' ಲಂಕೇಶ್ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.

'ಬರೆಯುವವನ ಸ್ಫೂರ್ತಿಯ ಕಠೋರಲೋಕ' (೧೯೯೪) ಎನ್ನುವ ಟೀಕೆ ಟಿಪ್ಪಣಿಯಲ್ಲಿ 'ಒಬ್ಬ ಸಾಹಿತಿಯನ್ನು ಕುರಿತು ಆತ ಕಗ್ಗಾಡಿನಲ್ಲಿ ಹುಟ್ಟಿದ, ಬಡತನದಲ್ಲಿ ಕಷ್ಟಪಟ್ಟು ಮುಂದೆ ಬಂದ, ಅನೇಕ ಬಗೆಯ ವಿರೋಧ ಎದುರಿಸಿದ, ಇವೆಲ್ಲ ಚರಿತ್ರೆಯ ವಿಷಯಗಳು ಗೌಣ. ಆತ ಹೇಗೆ ತಾನು ಕಂಡದ್ದನ್ನು ಮನುಕುಲದ ಸಂವೇದನೆಯನ್ನಾಗಿ ಪರಿವರ್ತಿಸಿದ, ಹಾಗೆ ಪರಿವರ್ತಿಸುತ್ತಿದ್ದೇನೆ ಎಂದು ಗೊತ್ತಿಲ್ಲದೇ ಎಲ್ಲವನ್ನೂ ಮಾಡಿದ – ಇದು ಆ ಸಾಹಿತಿಯ ನಿಜವಾದ ವೈಶಿಷ್ಟ್ಯ' ಎಂದು ಬರೆದ ಲಂಕೇಶರ ಮಾತುಗಳು ಅವರ ಒಬ್ಬಂಟಿತನ ಹಾಗು ತಮ್ಮಿಷ್ಟಕ್ಕೆ ತಾವೇ ಬದುಕಿದ ಅವರ ಛಲವನ್ನು ತೋರುತ್ತವೆ.

ಸದಾ ವಿವಾದಗಳನ್ನು ಸೃಷ್ಟಿಸುತ್ತಾ ಸಮಾಜ ಹಾಗು ಸಾಹಿತ್ಯ ಕ್ಷೇತ್ರಗಳನ್ನು ಆರೋಗ್ಯವಂತಗೊಳಿಸಿ ಜಾಗೃತಗೊಳಿಸುತ್ತಿದ್ದುದು ಈ ಪತ್ರಿಕೆ ವೈಶಿಷ್ಟ್ಯ. ಉದಾಹರಣೆಗೆ, ಅಡಿಗರನ್ನು 'ಒಂದುಜನಾಂಗದ ಕಣ್ಣು ತೆರೆಸಿದ ಕವಿ' ಎಂದು ಒಪ್ಪಿಕೊಂಡು ನವ್ಯ ಮಾರ್ಗದಲ್ಲೇ ಕಥೆ, ಕವನ, ಕಾದಂಬರಿಗಳನ್ನು ರಚಿಸಿ 'ಅಕ್ಷರ ಹೊಸ ಕಾವ್ಯ'ವನ್ನು ಸಂಪಾದಿಸಿದ ಲಂಕೇಶರೇ ಮುಂದೆ ಅಡಿಗರನ್ನು ಟೀಕಿಸಿದುದುಂಟು. ತಮ್ಮ ಟೀಕೆ ಟಿಪ್ಪಣೀಯೊಂದರಲ್ಲಿ ಲಂಕೇಶ್ ಹೀಗೆ ಬರೆಯುತ್ತಾರೆ 'ನಮ್ಮೆಲ್ಲರಲ್ಲೂ ರಾಕ್ಷಸರೂ ಇರುತ್ತಾರೆ, ಮಾನವರೂ ಇರುತ್ತಾರೆ. ಒಬ್ಬೊಬ್ಬರಲ್ಲೂ ಪ್ರಮಾಣದ ವ್ಯತ್ಯಾಸ ಇರುತ್ತದೆ. ನಮ್ಮಲ್ಲಿ ಕೆಲವರು ನಮ್ಮೊಳಗಿರುವ ರಾಕ್ಷಸನನ್ನು ಹೆಚ್ಚು ಅದುಮಿಟ್ಟುಕೊಂಡಿರುತ್ತೇವೆ. ಅಡಿಗರು ಅಂಥವರು'. ತಮ್ಮ ಕಟ್ಟ ಕಡೆಯ ಟಿಪ್ಪಣಿಯಲ್ಲಿ ಲಂಕೇಶ್ ಹೀಗೆ ಹೇಳುತ್ತಾರೆ, 'ಕಾವ್ಯದ ಪುರಾಣ ಒಂದು ರೀತಿಯದಾದರೆ ಗದ್ಯದ ಗ್ರಹಿಕೆ ಇನ್ನೊಂದು ರೀತಿಯದು. ಹಣ, ವಿಫಲತೆ, ಚರ್ಚೆ ಎಲ್ಲವನ್ನೂ ಗದ್ಯ ಒಳಗೊಳ್ಳುತ್ತದೆ. ಸ್ಪಷ್ಟವಾಗಿ ಭಾವನೆಯನ್ನು ಪ್ರತಿಬಿಂಬಿಸಿ ಬರೆಯುವುದು ಒಳ್ಳೆಯ ಗದ್ಯಕಾರನ ವೈಶಿಷ್ಟ್ಯ'. ಸ್ವತಃ ಇಂತಹ ಗದ್ಯಕಾರರಾಗಿದ್ದವರು ಲಂಕೇಶ್.

ಲಂಕೇಶ್ ಬಹಳಷ್ಟು ಸಲ ಸಣ್ಣ ಪುಟ್ಟ ವಾಕ್ಯಗಳಲ್ಲಿ ಬರೆಯುತ್ತಿದ್ದರು. ಆ ವಾಕ್ಯಗಳಲ್ಲಿ ಸಂಭಾಷಣೆ ಇರುತ್ತಿತ್ತು. ನಾಟಕದ ಶಿಲ್ಪ ಮೂಡುತ್ತಿತ್ತು. ಅದು ಲಂಕೇಶರ ಗದ್ಯದ ಯಕ್ಷಿಣಿಯಾಗಿತ್ತು. ಲಂಕೇಶರು ಗ್ರೀಕ ಮಹಾಕವಿ ಸಾಫೋಕ್ಲಿಸನ 'ದೊರೆ ಈಡಿಪಸ್' ಹಾಗು 'ಅಂತಿಗೊನೆ' ನಾಟಕಗಳನ್ನು ಅನುವಾದಿಸಿದ್ದಾರೆ. ಹಾಗೆಯೇ ಫ್ರೆಂಚ್ ಕವಿ ಬೊದಿಲೇರನ 'ಲೇ ಫ್ಲೋರ್‌ದುಮಾಲ್' ಕವನ ಸಂಕಲನವನ್ನು 'ಪಾಪದ ಹೂಗಳು' ಎಂದು ಅನುವಾದಿಸಿದ್ದಾರೆ. ಅಮೆರಿಕಾದ ಆರ್ನೆಸ್ಟ್ ಹೆಮಿಂಗ್ವೇ ಅವರ ಅತ್ಯಂತ ಪ್ರೀತಿಯ ಲೇಖಕನಾಗಿದ್ದ. ಈ ಎಲ್ಲಾ ಆಯ್ಕೆಗಳು ಅವರ ಪ್ರಜ್ಞೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸಹಕಾರಿಯಾಗಿವೆ.

ಅಪವಾದಗಳ ನಡುವೆಯೂ ತನ್ನ ನೇರ ನಿಷ್ಠುರ ಸಂಪಾದಕೀಯ ಅಂಕಣ ಬರಹಗಳು ಹಾಗು ವಿನೂತನ ಶೈಲಿಯ ತನಿಖಾ ಪತ್ರಿಕೋದ್ಯಮದಿಂದಾಗಿ ಲಂಕೇಶ್ ಪತ್ರಿಕೆ ಸಮಕಾಲೀನ ರಾಜಕೀಯ ಮತ್ತು ಸಾಹಿತ್ಯ ರಂಗದಲ್ಲಿ ಹೊಸ ಅಲೆಗಳನ್ನು ಎಬ್ಬಿಸಿರುವುದು ಅಕ್ಷರಶಃ ಸತ್ಯ. ಲಂಕೇಶರಲ್ಲಿನ ಆರೋಪ ಪ್ರತ್ಯಾರೋಪಗಳನ್ನು ನೆನೆಯುವ ಅನಂತಮೂರ್ತಿಯವರು ಹೀಗೆ ಹೇಳುತ್ತಾರೆ:

"ಲಂಕೇಶ್ ವರ್ತಮಾನಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿ ಚೀಪ್ ಆಗುತ್ತಿದ್ದಾರೆ ಎಂದು ನನಗೆ ಅನ್ನಿಸುತ್ತಿತ್ತು. ನಾನು ಎಲ್ಲವನ್ನೂ ಗಂಭೀರವಾಗಿ ಪರಿಗಣಿಸಿ ಪಾಂಪಸ್ ಆಗುತ್ತಿರುವೆ ಎನ್ನುವುದು ಲಂಕೇಶರ ಆರೋಪವಾಗಿತ್ತು. ಈ ಆರೋಪ ಪ್ರತ್ಯಾರೋಪಗಳು ನಮ್ಮಿಬ್ಬರ ಆರೋಗ್ಯಕ್ಕೆ ಅಗತ್ಯವೂ

ಆಗಿತ್ತು. ನಾ ಹೇಳಿದ್ದು ಅವರಿಗೆ, ಅವರು ಹೇಳಿದ್ದು ನನಗೆ ಒಳಗೆಲ್ಲೋ ಕೇಳಿಸಿಕೊಂಡಂತಿತ್ತು. ಅದಲ್ಲೊಂದು ಸಂಭ್ರಮವೂ ಇತ್ತು. ಲಂಕೇಶರ ಅತ್ಯುತ್ತಮ ಕತೆಗಳಲ್ಲಿ ಸಂಚಾರಿಯನ್ನು ಮೀರಿದ ಸ್ಥಾಯಿ ಬರುತ್ತದೆ ಎಂಬುದು ನನ್ನ ಅನಿಸಿಕೆ. ಎಷ್ಟೇ ಜಗಳವಾಡಿಕೊಂಡರೂ ಇದನ್ನು ನಾನು ಲಂಕೇಶರಿಗೆ ಹೇಳಬಲ್ಲವನಾಗಿದ್ದೆ. ಅದಕ್ಕವರು ಹೇ ಬಿಡ್ರಿ, ನಿಮ್ಮದೊಂದು ಕತೆ ಕೂಡ ಕಾದಂಬರಿ ಇದ್ದ ಹಾಗೆ ಇರುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು".[೧೪]

ಲಂಕೇಶರಿಗೆ ಒಲಿದಿದ್ದ ಅದ್ಭುತವಾದ ಕನ್ನಡ ಭಾಷೆಯ ಸೌಭಾಗ್ಯ, ಚಿಕ್ಕ ವಯಸ್ಸಿನಿಂದಲೇ ಅವರಿಗೆ ಒದಗಿದ್ದ ಭಾಷೆಯನ್ನು ಹೊಸ ಹೊಸ ರೀತಿಯಲ್ಲಿ ಬಳಸುವ ಕಲೆ, ಅನಂತ ಮೂರ್ತಿಯವರ ಕೆಳ ಕಂಡ ಮಾತುಗಳಲ್ಲಿ ಕಾಣಬಹುದಾಗಿದೆ. ಸೆಂಟ್ರಲ್ ಕಾಲೇಜಿನಿಂದ ಪ್ರಕಟವಾಗಿದ್ದ 'ಹೊಸ ಬರಹ'ದಲ್ಲಿದ್ದ ಲಂಕೇಶರ ಪದ್ಯ 'ಜೋಗದ ಜಲಪಾತ'ವನ್ನು ಕುರಿತು "ಇಡೀ ಪದ್ಯ ನೆನಪಿಲ್ಲ, ನೆನಪಿದ್ದದ್ದನ್ನು ಹೇಳಬಲ್ಲೆ 'ತಿಳಿ ನೀಲಿಯ ಶೇರ್ವಾನಿಯ ಮುದುಕ ಬಡಿದ ಮದ್ದಳೆ, ಅವಳು ಕುಣಿಯುತ್ತಿದ್ದಾಳೆ' ನನಗೆ ಇದು ಬಹಳ ಇಷ್ಟವಾದದ್ದು. ಏಕೆಂದರೆ ಅಲ್ಲ ಮುದುಕ ಬಡಿದ ಮದ್ದಳೆ ಎಂಬಲ್ಲಿ 'ಬಡಿದ' ಎಂಬುದನ್ನು ಕ್ರಿಯಾಪದವಾಗಿಯೂ ಉಪಯೋಗಿಸಬಹುದು. ಒಬ್ಬ ಮುದುಕ ಇದ್ದಾನೆ, ಅವನು ಮದ್ದಳೆ ಬಡಿಯುತ್ತಿದ್ದಾನೆ. ಆತ ತಿಳಿ ನೀಲಿಯ ಶೇರ್ವಾನಿ ತೊಟ್ಟಿದ್ದಾನೆ. ಇದು ಆಕಾಶವನ್ನು ನೆನಪು ಮಾಡುತ್ತದೆ. ಇವಳು ಕುಣಿಯುತ್ತಿದ್ದಾಳೆ ಅಥವ ಇದನ್ನು ಇನ್ನೊಂದು ರೀತಿಯಾಗಿಯೂ ಓದಬಹುದು. ತಿಳಿ ನೀಲಿಯ ಶೇರ್ವಾನಿ ಮುದುಕ ಬಡಿದ ಮದ್ದಳೆ, ಇಲ್ಲಿ 'ಬಡಿದ' ಪದವನ್ನು ವಿಶೇಷಣವನ್ನಾಗಿಯೂ ಉಪಯೋಗಿಸಬಹುದು. ಹಾಗಾದಲ್ಲಿ ಇಡೀ ಶಬ್ದ ಮುದುಕ ಬಡಿದ ಮದ್ದಳೆಯಾಗಿ ಕಾಣಿಸುತ್ತದೆ. ಅವಳೂ ಕುಣಿಯುತ್ತಿರುವಂತೆ ಕಾಣುತ್ತದೆ"[೧೫]

ಇದು ಲಂಕೇಶರ ಭಾಷಾ ಬಳಕೆಗೆ ಉತ್ತಮ ಉದಾಹರಣೆ.

ಸಂಕ್ರಮಣ: ಚಂಪಾ ಗಿರಡ್ಡಿ ಗೋವಿಂದರಾಜ, ಸಿದ್ದಲಿಂಗ ಪಟ್ಟಣಶೆಟ್ಟಿ ಈ ಮೂವರ ಸಂಪಾದಕತ್ವದಲ್ಲಿ ಈ ಪತ್ರಿಕೆ ೧೯೬೪ರಲ್ಲಿ ಧಾರವಾಡದಿಂದ ಪ್ರಾರಂಭವಾಯಿತು. ಅದು ನವ್ಯದ ಉಚ್ಛ್ರಾಯ ಸ್ಥಿತಿಯ ಕಾಲ. ತೇಜಸ್ವಿ ಮತ್ತು ಬಿ.ಎಲ್. ಶ್ರೀರಾಮ್ ಮೈಸೂರಿನಿಂದ ಪ್ರಕಟಿಸುತ್ತಿದ್ದ 'ಲಹರಿ' ಎಂಬ ವಿಮರ್ಶೆಗೇ ಮೀಸಲಾದ ಪತ್ರಿಕೆಯೇ 'ಸಂಕ್ರಮಣ'ದ ಮೂಲಪ್ರೇರಣೆ.[೧] ನವ್ಯ ಕತೆ, ನಾಟಕ, ವಿಮರ್ಶೆ, ಕಾವ್ಯಗಳ ಪ್ರಕಟಣೆ ಪ್ರಾರಂಭಿಸಿದ ಈ ಪತ್ರಿಕೆ ಉತ್ತರ ಕರ್ನಾಟಕದ ಬಹುತೇಕ ನವ್ಯ ಪ್ರತಿಭೆಗಳಿಗೆ ವೇದಿಕೆಯನ್ನು ಒದಗಿಸಿತು. ಪತ್ರಿಕೆಯ ಬೆಳವಣಿಗೆಯನ್ನು ಗಮನಿಸಿದಾಗ ೧೯೬೪ರಿಂದ ೧೯೭೫ರವರೆಗಿನ ಅಂದರೆ ತುರ್ತು ಪರಿಸ್ಥಿತಿಯ ವರೆಗೆ ಒಂದು ಹಂತ. ಅನಂತರದ್ದು ಮತ್ತೊಂದು ಹಂತವೆಂದು ಗುರುತಿಸಬಹುದಾಗಿದೆ. ಇದಕ್ಕೆ ಎರಡು ಕಾರಣಗಳನ್ನು ಗುರುತಿಸಬಹುದು:

೧. ಗಿರಡ್ಡಿ ಮತ್ತು ಸಿದ್ದಲಿಂಗ ಪಟ್ಟಣಶೆಟ್ಟಿ ಸಂಪಾದಕತ್ವ ಮಂಡಲಿಯಿಂದ ದೂರಾದದ್ದು.
೨. ನವ್ಯದ ಧ್ಯೇಯೋದ್ದೇಶಗಳನ್ನು ಬಿಟ್ಟು ಬಂಡಾಯದ ಬೆಳವಣಿಗೆಗೆ ಹಿನ್ನೆಲೆಯಾಗಿ ಪತ್ರಿಕೆ ನಿಂತದ್ದು.[೧]

ಇಂದಿಗೂ ಸಹ ಪತ್ರಿಕೆ ಚಂಪಾರವರ ಸಂಪಾದಕತ್ವದಲ್ಲಿ ಹೊರಬರುತ್ತಿದೆ. ಸುಮಾರು ನಲವತ್ತೈದು ವರ್ಷಗಳಷ್ಟು ಸುದೀರ್ಘ ಇತಿಹಾಸವಿರುವ ಈ ಸಾಹಿತ್ಯ ಪತ್ರಿಕೆ ಇಂದಿಗೂ ಸಾಹಿತ್ಯ

ವಿಚಾರಗಳಷ್ಟೇ ಅಲ್ಲದೆ ಸಾಂಸ್ಕೃತಿಕ ಸಾಮಾಜಿಕ ಮತ್ತು ರಾಜಕೀಯ ವಿಚಾರಗಳನ್ನು ಪ್ರಕಟಿಸುತ್ತ ಬಂದಿದೆ.

ಜಿ.ಎಸ್. ಶಿವರುದ್ರಪ್ಪನವರ ಈ ಮಾತುಗಳು ಸಂಕ್ರಮಣದ ಸಾರ್ಥಕತೆಯನ್ನು ಸೂಚಿಸುತ್ತದೆ.

> “ಸಂಕ್ರಮಣ ಎಂದರೆ ಗೆರೆ ದಾಟುವುದು, ಒಂದು ನೆಲೆಯಿಂದ ಇನ್ನೊಂದು ನೆಲೆಗೆ ಪ್ರವೇಶಿಸುವುದು, ಮುಂದುವರೆಯುವುದು ಇತ್ಯಾದಿ ಅರ್ಥಗಳಿವೆ. ನಿಂತ ನೆಲೆಗಳನ್ನು ದಾಟುತ್ತ ಹೊಸ ವಲಯಗಳನ್ನು ಒಳಗೊಳ್ಳುತ್ತ ಬಂದ ಈ ಪತ್ರಿಕೆ ನಮ್ಮ ಸಾಹಿತ್ಯ ಹಾಗು ಸಾಂಸ್ಕೃತಿಕ ಪರಿಸರದ ಎಲ್ಲ ಸ್ಪಂದನಗಳನ್ನೂ ಸಮರ್ಥವಾಗಿ ದಾಖಲಿಸಿದೆ. ಮಹತ್ವದ ಸಾಂಸ್ಕೃತಿಕ ಆಂದೋಳನಗಳಲ್ಲಿ ಇದು ಮೌಲಿಕವಾದ ಪಾತ್ರವನ್ನು ವಹಿಸಿದೆ. ಸದಾ ಚಲನಶೀಲವಾಗುತ್ತಾ ಪ್ರತಿಷ್ಠಿತ ಪತ್ರಿಕೆಗಳ ಧೋರಣೆಗೆ ಸವಾಲಾಗಿ ನಿಲ್ಲುತ್ತಾ, ಜನಪರ ನಿಲುವಿನಲ್ಲಿ ಬೇರೂರಿ ಅರಳುತ್ತಾ ಬಂದ ಈ ಪತ್ರಿಕೆ ನೂರಾರು ಹೊಸ ಬರಹಗಾರರಿಗೆ ವೇದಿಕೆಯಾಗಿದೆ. ವಿಚಾರ ಸಂಘರ್ಷಗಳಿಗೆ ಹಿಡಿದ ಕನ್ನಡಿಯಾಗಿದೆ. ಪ್ರಗತಿಪರವಾದ ಹೊಸ ಧೋರಣೆಗಳಿಗೆ ಮುನ್ನುಡಿಯಾಗಿದೆ. ಇದು ಹುಟ್ಟಿಸಿರುವ ವೈಚಾರಿಕ ಎಚ್ಚರ ಕಾಯ್ದುಕೊಂಡು ಬಂದಿರುವ ಸಾಂಸ್ಕೃತಿಕ ಪ್ರಜ್ಞೆಯು ಮುಂದೆ ಶೂದ್ರ, ಅಂಕಣ, ದಲಿತ, ಆಂದೋಲನ ಮೊದಲಾದ ಪತ್ರಿಕೆಗಳ ಉಗಮಕ್ಕೆ ಕಾರಣವಾಯಿತು. ಇವು ಪರಂಪರೆಗೆ ‘ಸಂಕ್ರಮಣ’ ನೀಡಿರುವ ಮರೆಯಲಾರದ ಕೊಡುಗೆಗಳಾಗಿವೆ”.[೨]

ನವ್ಯವಿಮರ್ಶೆಯನ್ನು ಬೆಳೆಸುವುದೇ ಮುಖ್ಯ ಗುರಿಯಾಗಿಸಿಕೊಂಡು ಜನ್ಮ ತಳೆದ ಸಂಕ್ರಮಣ ಚಂಪಾ ಹೇಳುವಂತೆ

> “೧೯೬೦ರ ದಶಕದ ಪ್ರಾರಂಭದಲ್ಲಿ ಡಾ.ವಿ.ಕೃ.ಗೋಕಾಕರ ‘ಕಮಲ ಮಂಡಲ’ದ ಮೂಲಕ ನಮ್ಮ ಸಾಹಿತ್ಯಿಕ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತ ಮುಂದೆ ಮೂವರೂ ೧೯೬೪ರಲ್ಲಿ ತಲಾ ಹತ್ತು ರೂಪಾಯಿ ಬಂಡವಾಳ ಹಾಕಿ ಕೇವಲ ಮೂವತ್ತು ರೂಪಾಯಿಗಳಲ್ಲಿ ‘ಸಂಕ್ರಮಣ’ ಸುರು ಮಾಡಿದ್ದು.. ನವ್ಯ ಸಾಹಿತ್ಯದ ಮಟ ಮಟ ಮಧ್ಯಾಹ್ನದ ಆ ಅವಧಿಯಲ್ಲಿ ನವ್ಯ ಚಳವಳಿಗೆ ಒಂದು ಸಾಧನವಾದದ್ದು ಸಂಕ್ರಮಣ”[೩]

ಸಂಕ್ರಮಣದ ಆರಂಭ ಕಾಲದಲ್ಲಿ ನವ್ಯಕವಿತೆಗಳು ಪ್ರಕಟವಾಗುತ್ತಿದ್ದವು. ಉದಾಹರಣೆಗೆ ‘ಮತವು ನಾನು’ – ಇಂದೂಧರ ಹೊನ್ನಾಪುರ (ಸಂಕ್ರಮಣ, ೬೮), ‘ಹದಿನಾರು ಜನ’ – ಲಂಕೇಶ್, ‘ಸಾವು’ – ಲಕ್ಷ್ಮೀನಾರಾಯಣ ಭಟ್ಟ (ಸಂಕ್ರಮಣ ೧೨), ‘ಬಾಗಿಲು ಪೂಜಾರಿ’ – ಕೃಷ್ಣ ಆಲನಹಳ್ಳಿ (ಸಂಕ್ರಮಣ ೭೪) ಇತ್ಯಾದಿ. ನವ್ಯ ಸಂದರ್ಭದ ಅಸಂಗತ ನಾಟಕಗಳು ಸಂಕ್ರಮಣದಲ್ಲಿ ಬೆಳಕು ಕಂಡಿದೆ. ಉದಾಹರಣೆಗೆ, ‘ಕತ್ತಲರಾತ್ರಿ’ – ಚಂಪಾ, (ಸಂಚಿಕೆ ೫೨), ‘ಬೊಕ್ಕತಲೆಯ ನರ್ತಕಿ’ – ಸುಮತೀಂದ್ರ ನಾಡಿಗ್ (ಸಂಚಿಕೆ ೪೦). ನವ್ಯದ ಕಾದಂಬರಿ, ಕವಿತೆ, ನಾಟಕಗಳ ಕುರಿತಾದ ವಿಮರ್ಶೆಯನ್ನು ಬೆಳೆಸುವಲ್ಲಿ ಸಂಕ್ರಮಣದ ಪಾತ್ರ ಗಮನಾರ್ಹವಾದುದು.

> “ಇಂದು ಕನ್ನಡ ಸಾಹಿತ್ಯವು ವಿವಿಧ ಅನುಭವಗಳ ಜೀವಂತಿಕೆಯಿಂದ ಹೊರಹೊಮ್ಮುತ್ತಿದೆ. ನವೀನ ಜೀವನ ಪ್ರಜ್ಞೆಯೊಂದು ಈಗ ಅರಳುತ್ತಿದೆ. ಇಂತಹ

ಪ್ರಜ್ಞೆಯುಳ್ಳ ಚೇತನಗಳ ಅಭಿವ್ಯಕ್ತಿಗೆ ಸರಿಯಾದ ವೇದಿಕೆಯನ್ನು ಒದಗಿಸಿಕೊಡುವ ಒಂದು ಪ್ರಯತ್ನ ಈ ಸಂಕ್ರಮಣ,.. ವಿಮರ್ಶೆಯಲ್ಲಿ ಯಾರೊಬ್ಬರ ಮಾತೂ ಕೊನೆಯದೆಂದು ಹೇಳಲಿಕ್ಕೆ ಆಗುವುದಿಲ್ಲ. ಆದ್ದರಿಂದ ಇಲ್ಲಿ ವ್ಯಕ್ತವಾಗುವ ವಿಚಾರಗಳ ಬಗ್ಗೆ ಸಹೃದಯರ ಪ್ರತಿಕ್ರಿಯೆಗೆ ಯಾವಾಗಲೂ ಸ್ವಾಗತವಾಗಿದೆ”

ಎಂಬ ಪರಿಕಲ್ಪನೆಯೊಂದಿಗೆ ಆಗಸ್ಟ್ ೧೫ರ ೧೯೬೪ರಂದು ‘ಸಂಕ್ರಮಣ’ ಹೊರಬಂದಿತು.

ಹಂಚಿಮನಿ ವೀರಭದ್ರಪ್ಪನವರು ಅಭಿಪ್ರಾಯ ಪಡುವಂತೆ ‘ಸಂಕ್ರಮಣ’ದ ಇತಿಹಾಸ ಒಂದು ರೀತಿಯಲ್ಲಿ ಕುತೂಹಲಕಾರಿಯಾದದ್ದು. ಒಂದು ರೀತಿಯಲ್ಲಿ ‘ಸಂಕ್ರಮಣ’ಪತ್ರಿಕೆಯ ಇತಿಹಾಸ ನಮ್ಮೆಲ್ಲ ಸಾಹಿತ್ಯಿಕ ಪತ್ರಿಕೆಗಳ ಇತಿಹಾಸವೇ ಆಗುತ್ತದೆ,.. ಸಾಕ್ಷಿ ಪತ್ರಿಕೆಯು ನವ್ಯಕ್ಕೆ ಸಹವರ್ತಿಯಾಗಿ ನಿಂತು ಚಳವಳಿಯನ್ನು ಬೆಳೆಸಿದಂತೆ ‘ಸಂಕ್ರಮಣ’ಪತ್ರಿಕೆಯು ಬಂಡಾಯದ ಹಿನ್ನೆಲೆಯಾಗಿ ನಿಂತು ಪ್ರಚಾರ ಮಾಡುತ್ತ ಚಳವಳಿಯನ್ನು ಗಟ್ಟಿಗೊಳಿಸುತ್ತಾ ಒಂದು ಸಮೂಹವನ್ನೇ ನಿರ್ಮಿಸಿತು. ಆದರೆ ಸಾಕ್ಷಿಯಂತೆ ಅವಸಾನವಾಗದೆ ಈಗಲೂ ಬಂಡಾಯ ಚಳವಳ ತನ್ನ ಜನಪ್ರಿಯತೆಯನ್ನು ಕಳೆದುಕೊಂಡ ಸಂದರ್ಭದಲ್ಲಿಯೂ ‘ಸಂಕ್ರಮಣ’ಪತ್ರಿಕೆಯು ಸಾಹಿತ್ಯಿಕ ಪತ್ರಿಕೆಗಳ ಗುಂಪಿನಲ್ಲೇ ಜನಪ್ರಿಯ ಪತ್ರಿಕೆಯಾಗಿ ಉಳಿದುಕೊಂಡಿದೆ”[೪]

ಸಂಕ್ರಮಣದ ಆರಂಭದಲ್ಲಿ ನವ್ಯ ಸಾಹಿತ್ಯ ಕುರಿತ ಚರ್ಚೆ ನಡೆದಿರುವುದು ಕಂಡುಬರುತ್ತದೆ. ಶಾಂತಿನಾಥ ದೇಸಾಯಿ ತಮ್ಮ ‘ಕನ್ನಡ ನವ್ಯ ಕತೆಯಲ್ಲಿನ ಮನೋಧರ್ಮ’ ಎಂಬ ತಮ್ಮ ಲೇಖನದಲ್ಲಿ “ಕನ್ನಡ ಕಾವ್ಯದಲ್ಲಿ ನವ್ಯತೆ ಬಂದದ್ದು ಹೊಸ ಮನೋಧರ್ಮದ ಫಲವಾಗಿ, ಹೊಸ ಪ್ರಜ್ಞೆಯ ಫಲವಾಗಿ” ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ. “ನವ್ಯ ಕವಿತೆಯಲ್ಲಿ ಭ್ರಮನಿರಸನೆಯ ರೊಚ್ಚು, ಹಳೆಯ ಆದರ್ಶವಾದಿತ್ವದ ವಿರುದ್ಧ ಬಂಡಾಯ, ಸತ್ಯವನ್ನು ಅಲ್ಲ, ಸತ್ಯದ ನಗ್ನತೆಯನ್ನು ನೇರವಾಗಿ ನೆಟ್ಟ ದೃಷ್ಟಿಯಿಂದ ನೋಡುವ ಹಟವಿದೆ. ಮೇಲು ಮೇಲಿನ ರಮ್ಯ ಈಸಾಟ ಬೇಡ, ನೇರವಾಗಿ ತಳಕ್ಕೇ ಜಿಗಿದು ಅಲ್ಲೇನಿದೆ ಎಂದು ನೋಡಬೇಕೆಂಬ ಸಾಹಸವಿದೆ” ಎಂದು ಅದರಲ್ಲಿ ಹೇಳುತ್ತಾರೆ.[೫]

ಇಂಗ್ಲಿಷ್ ಸಾಹಿತ್ಯದಲ್ಲಿನ ನವ್ಯತೆ, ಕನ್ನಡದ ನವ್ಯಕ್ಕೆ ಪ್ರೇರಣೆ ಎಂಬ ಮಾತನ್ನು ಪೂರ್ಣವಾಗಿ ಒಪ್ಪದ ದೇಸಾಯಿಯವರು

> “ಇಂಗ್ಲಿಷ್ ಸಾಹಿತ್ಯದಲ್ಲಿ ನವ್ಯತೆ ೧೯೧೭ರ ಸುಮಾರಿಗೆ ಆರಂಭವಾಗಿತ್ತು. ಹೀಗಿರುವಾಗ ನಮ್ಮಲ್ಲಿ ಅದು ೧೯೨೦ ರಿಂದ ೧೯೩೦ರ ಅವಧಿಯಲ್ಲಿ ಅಥವ ಗೋಕಾಕರು ಇಂಗ್ಲೆಂಡಿನಿಂದ ಬಂದ ನಂತರ ೧೯೪೦ರಲ್ಲಿ ಕಾಣಿಸಿಕೊಳ್ಳಬಹುದಾಗಿತ್ತು. ೩೦ ವರ್ಷ ಏಕೆ ವಿಳಂಬವಾಯಿತು ಎನ್ನುವ ಅವರು ಅದಕ್ಕೆ ಸಮರ್ಥನೆಯಾಗಿ ಇಂಗ್ಲಿಷ್ ನವ್ಯ ಕಾವ್ಯದ ಆರಂಭದಲ್ಲಿ ತಲೆದೋರಿದ್ದ ಮನೋಧರ್ಮ ನಮ್ಮಲ್ಲಿ ಸ್ವಾತಂತ್ರ್ಯಾನಂತರ ತಲೆದೋರಿತು. ಆ ಕಾಲದ ಹೊಸ ಪ್ರಜ್ಞೆ, ಸಂವೇದನೆಗಳು ಹೊಸ ಅಭಿವ್ಯಕ್ತಿ ಪಡೆಯಲು ಯತ್ನಿಸಿದ ಫಲ ಕನ್ನಡದ ನವ್ಯ ಕಾವ್ಯ”[೬]

ಎಂದಿದ್ದಾರೆ.

ಕನ್ನಡ ನವ್ಯವು ಹೊಸ ಮನೋಧರ್ಮ, ಹೊಸ ಪ್ರಜ್ಞೆಯ ಫಲ ಎನ್ನುವ ಶಾಂತಿನಾಥರು ಅದಕ್ಕೆ ಉದಾಹರಣೆಯಾಗಿ ವಿ.ಜಿ. ಭಟ್ಟರ ‘ಶೋಧನೆ’ಯನ್ನು ನೀಡುತ್ತಾರೆ. ಈ ಕವಿತೆಯಲ್ಲಿ ಯಾವುದೇ

ಪರದೇಶದ ಪ್ರಭಾವ ಸಂಬಂಧವಿರುವುದಿಲ್ಲ, ಬದಲಿಗೆ ಇದೊಂದು ಸ್ವತಂತ್ರ ಕವಿತೆಯಾಗಿದ್ದು ಹೊಸದೊಂದು ಮನೋಧರ್ಮ ಕಂಡುಬರುತ್ತದೆ ಎಂದಿದ್ದಾರೆ.

ಅಡಿಗ ಮತ್ತು ಭಟ್ಟರನ್ನು ಈ ಲೇಖನದಲ್ಲಿ ತುಲನೆ ಮಾಡುತ್ತ ಅಡಿಗರ ಕಾವ್ಯದಲ್ಲಿ ಭಟ್ಟರಂತೆ ವ್ಯಂಗ್ಯವಿದೆ, ವಿಡಂಬನೆಯಿದೆ, ರೊಚ್ಚಿದೆ, ಸಿಟ್ಟಿದೆ, ಆದರೆ ಇವುಗಳ ಜೊತೆಗೆ ಭಟ್ಟರಲ್ಲಿ ಇಲ್ಲದ ಅನುಭವ ಸಂಕೀರ್ಣತೆಯಿದೆ, ವ್ಯಾಪಕತೆಯಿದೆ. ಭಟ್ಟರಲ್ಲಿ ಅನುಭವ ಬರೀ ಎಲುಬುಗಳಾಗಿದ್ದರೆ ಅದು ಅಡಿಗರಲ್ಲಿ ಮಾಂಸ ರಕ್ತಗಳಿಂದ ತುಂಬಿಕೊಂಡು ಹೆಚ್ಚು ಪ್ರಭಾವಿಯಾಗಿದೆ ಎಂದು ವಿವರಿಸಿದ್ದಾರೆ. ಅಂದರೆ 'ನವ್ಯದಲ್ಲಿ ಅನುಭವದ ಸಂಕೀರ್ಣತೆ ಇರಬೇಕು' ಎಂಬುದು ದೇಸಾಯಿಯವರ ಅಭಿಪ್ರಾಯವಾಗಿದೆ.

ನವ್ಯದ ವೈಶಿಷ್ಟ್ಯವೇನು ಎಂಬುದನ್ನು ಶಾಂತಿನಾಥರು ಹೀಗೆ ಪಟ್ಟಿ ಮಾಡುತ್ತಾರೆ:

೧. ವಾಸ್ತವವನ್ನು ನೇರ ದೃಷ್ಟಿಯಿಂದ ನೋಡುವ ಸಂಕಲ್ಪ

೨. ಅನುಭವವನ್ನು ಕೆದಕಿ, ಕೆದಕಿ ನೋಡುವ ವಿಪರೀತ ಕುತೂಹಲ

೩. ವೈಯಕ್ತಿಕ ಮೌಲ್ಯಗಳ ಅವಿರತ ಶೋಧನೆ

೪. ಭಾವನೆಗಳ ಜೊತೆಗೆ ಬುದ್ಧಿಗೂ ನೀಡಲಾದ ಪ್ರಾಧಾನ್ಯ ಅಂದರೆ ಕಾವ್ಯದಲ್ಲಿ ಇಡಿಯ ವ್ಯಕ್ತಿತ್ವವನ್ನು ಕೆಲಸಕ್ಕೆ ತರುವ ಪ್ರಯತ್ನ

೫. ಹೊಸ ಸಂಪ್ರದಾಯದಿಂದಾಗಿ, ಹೊಸ ಮನೋಧರ್ಮದಿಂದಾಗಿ ಭಾಷೆಯ ಬಗ್ಗೆ ವೈಶಿಷ್ಟ್ಯಪೂರ್ಣ ಪ್ರಜ್ಞೆ ಹಾಗು ಶೈಲಿಯ ಪ್ರಾಯೋಗಿಕತೆ

೬. ಕಾವ್ಯದಲ್ಲಿ ವ್ಯಾಪಕತೆ, ಸಂಕೀರ್ಣತೆ ಹಾಗು ವೈವಿಧ್ಯಗಳನ್ನು ತರುವ ಪ್ರಯತ್ನ

೭. ವೈಯಕ್ತಿಕ ಪ್ರಯೋಗಕ್ಕೆ, ದೃಷ್ಟಿಗೆ ಮಹತ್ವ ದೊರೆತಿದೆ.

೮. ಹಳೆಯ ರಸ ಸಂಪ್ರದಾಯಿಕ ಕಾವ್ಯಗಳಿಗಿಂತ ಭಿನ್ನವಾದುದು ಜೀವಂತವಾದುದು ಹಾಗು ಶ್ರೇಷ್ಠವಾದುದು[೬]

ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಶಾಂತಿನಾಥರ ಈ ಲೇಖನ ಒಂದು ವಾಗ್ವಾದವನ್ನೇ ಹುಟ್ಟು ಹಾಕಿತು. ಇದು ಪ್ರಕಟವಾದ ಅನಂತರದ ಸಂಚಿಕೆಯಲ್ಲೇ ಈ ಸಾಹಿತ್ಯಿಕ ವಾಗ್ವಾದವನ್ನು ಕಾಣಬಹುದಾಗಿದೆ. ನವ್ಯತೆಯ ವೈಶಿಷ್ಟ್ಯಗಳನ್ನು ಕುರಿತು ಗಿರೀಶ್ ಕಾರ್ನಾಡರು ಕೆಲವು ಪ್ರಶ್ನೆಗಳನ್ನು ಎತ್ತಿದ್ದಾರೆ:

೧. ನವ್ಯತೆ ಎಂದರೇನು?

೨. ವಾಸ್ತವಿಕತೆಯನ್ನು ನೇರವಾಗಿ ನೋಡುವುದು ಎಂದರೆ ಹೇಗೆ ನೋಡುವುದು?

೩. ಈ ಮಾತು ತಂತ್ರಕ್ಕೆ ಸಂಬಂಧಿಸಿದ್ದೇ, ವಿಷಯಕ್ಕೆ ಸಂಬಂಧಿಸಿದ್ದೇ ಅಥವ ಜೀವನಕ್ಕೆ ಸಂಬಂಧಿಸಿದ್ದೇ? ಮೂರಕ್ಕೂ ಕೂಡಿಯೇ ಆಗಿದ್ದರೆ 'ರಸಸಂಪ್ರದಾಯ'ದ ರೀತಿಯನ್ನು ಉಪಯೋಗಿಸುವುದರಿಂದ ವಾಸ್ತವಿಕತೆಯನ್ನು ನೋಡುವ ದೃಷ್ಟಿ 'ವಕ್ರ'ವಾಗುತ್ತದೆ ಎಂಬುದಕ್ಕೆ ಪುರಾವೆಯೇನು?

೪. ಎಲ್ಲ ವೈಶಿಷ್ಟ್ಯಗಳಿಗೆ ಅನ್ವಯಿಸುವ ಮತ್ತೊಂದು ಪ್ರಶ್ನೆ: 'ಹೊಸ ಸಂವೇದನೆಯ ವೈಶಿಷ್ಟ್ಯ' ಎನ್ನುವ ಮಾತು 'ಹಳೆಯ' ಸಂವೇದನೆಯಲ್ಲಿ ಕಂಡು ಬರುವುದಿಲ್ಲವೇ?[೭]

ವಿ.ಜಿ ಭಟ್ಟರ ಕವಿತೆಯನ್ನು ಉಲ್ಲೇಖಿಸುವ ಕಾರ್ನಾಡರು 'ಆತ್ಮಶೋಧನೆ' ಎಂಬ ಪದದ ಕುರಿತು "ಇಲ್ಲಿ ಕವಿ 'ಆತ್ಮ' ಪದ ಪ್ರಯೋಗದಿಂದ ಉಂಟಾದ ಭ್ರಮೆಯ ವಿರುದ್ಧ ಬಂಡಾಯ ಎಬ್ಬಿಸುವ

ಮೊದಲು 'ಆತ್ಮ' ಶಬ್ದದ ಅರ್ಥವನ್ನಾದರೂ ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದಾನೆಯೇ? ಈ ಆತ್ಮಕ್ಕಾಗಿ ಅವನು ಗುಡಿ, ಪೀಠ, ಮಗುವಿನ ಕಣ್ಣು, ಮಸಣದ ಕಣ್ಣು, ಚೆಲುವಿನ ಕೆನ್ನೆ ಇವನ್ನೆಲ್ಲ ಅರಸುವುದಾದರೆ ಆತ್ಮವೊಂದು ಇಂದ್ರಿಯಗಳ ಮುಖಾಂತರ ತಿಳಿದುಕೊಳ್ಳಬಹುದಾದ ವಸ್ತು ಎಂದೇ ತಿಳಿದಂತಿದೆ. ಇದರಿಂದ 'ಆತ್ಮ'ದ ಬಗ್ಗೆ ಬರೆದ ತತ್ವಜ್ಞಾನಿಗಳ ಮೇಲೆ ಅನ್ಯಾಯವಾಗಿದೆ. ಇಷ್ಟೇ ಅಲ್ಲ, 'ಆತ್ಮ'ಶೋಧನೆ ಮಾಡುವವನಿಗೆ ಆತ್ಮ ಶಬ್ದದ ಅರ್ಥವೇ ತಿಳಿದಿರಲಿಲ್ಲ ಎಂದು ಒಪ್ಪಿಕೊಳ್ಳುವ ಪ್ರಸಂಗ ಬರುತ್ತದೆ. ಕವಿತೆಯ ಕೊನೆಯಲ್ಲಿ ಜಡ ಸೃಷ್ಟಿಯಲ್ಲಿ ಆತ್ಮ ಸಿಗಲಿಲ್ಲ ಎಂದೊಡನೆ ಅದೊಂದು ನಿಘಂಟುವಿನಲ್ಲಿ ಮೂಡಿರುವ ಶಬ್ದ ಮಾತ್ರ ಎಂದು ಕವಿ ಧಿಕ್ಕರಿಸುತ್ತಾನೆ. ಇಡರಲ್ಲಿ ಕವಿಯ ಬುದ್ಧಿವಾದ ವಿರೋಧ (ಆ್ಯಂಟಿ ಇನ್‌ಟೆಲೆಕ್ಚುವಲ್) ಮಾತ್ರ ಕಾಣುತ್ತದೆಯೇ ಹೊರತು ಶಾಂತಿನಾಥರು ನವ್ಯ ಸಂವೇದನೆಯ ಗುಣ ಎಂದು ಎತ್ತಿತೋರಿಸಿದ 'ಭಾವನೆಯ ಜೊತೆಗೆ ಬುದ್ಧಿಗೆ ಪ್ರಾಧಾನ್ಯ' ಎಂಬ ಅಂಶದ ಸುಳಿವೂ ಕಾಣಿಸುವುದಿಲ್ಲ".

ರಸಸಂಪ್ರದಾಯದ ರೂಪ ವಿನ್ಯಾಸಗಳ ಚರ್ಚೆಯಾಗಬೇಕು ಎನ್ನುವ ಶಾಂತಿನಾಥರ ಮಾತನ್ನು ಉಲ್ಲೇಖಿಸುತ್ತ ಕಾರ್ನಾಡರು

"'ನವ್ಯತೆ,..ಹಿಂದಿನ ರಸ ಸಂಪ್ರದಾಯವನ್ನು ಬದಿಗೊತ್ತಿ ತನ್ನ ಜಯಭೇರಿ ಹೊಡೆದು ನಿಂತಿದೆ' ಬದಿಗೊತ್ತಿ? ಜಯಭೇರಿ ಈ ಯುದ್ಧವಿದ್ಯೆಯ ಪದಗಳೇಕೆ ಸಾಹಿತ್ಯ ವಿಮರ್ಶೆಯಲ್ಲಿ? ಕುಮಾರವ್ಯಾಸನು ಪಂಪನನ್ನು ಬದಿಗೊತ್ತಲಿಲ್ಲ, ಬರ್ನಾಡ್ ಶಾ ಶೇಕ್ಸ್‌ಪಿಯರನನ್ನು ಬದಿಗೊತ್ತಲಿಲ್ಲ. ಬದಿಗೊತ್ತುವುದು ಸಾಹಿತ್ಯಸೃಷ್ಟಿಯ ಉದ್ದೇಶವೂ ಅಲ್ಲ"

ಎಂದಿದ್ದಾರೆ.[೮]

ಕಾರ್ನಾಡರ ನವ್ಯತೆ ಎಂದರೇನು? ಪ್ರಶ್ನೆಗೆ ಉತ್ತರವಾಗಿ ಶಾಂತಿನಾಥ ದೇಸಾಯಿ "ಕಾರ್ನಾಡರ ವಾದದ ಅರ್ಥ ತಮಗೂ ಸರಿಯಾಗಿ ತಿಳಿದಿಲ್ಲ; ತಮ್ಮ ಟಿಪ್ಪಣಿಯಲ್ಲಿ ಸಮಗ್ರ ಪರೀಕ್ಷೆ ಅಲ್ಲದಿದ್ದರೂ ನವ್ಯ ಕವಿತೆಗಳ ವಿಶ್ಲೇಷಣೆಯಿಂದಲೇ ಎತ್ತಿ ತೋರಿಸಿದ್ದಾಗಿದೆ" ಎಂದಿದ್ದಾರೆ. 'ವಾಸ್ತವಿಕತೆಯನ್ನು ನೇರವಾಗಿ ನೋಡುವುದು ಎಂದರೆ ಹೇಗೆ ನೋಡುವುದು?' ಎಂಬ ಪ್ರಶ್ನೆಗೆ ಉತ್ತರವಾಗಿ "ರಸ ಸಂಪ್ರದಾಯದ ಒಂದು ಮುಖ ಲಕ್ಷಣ ಕಲ್ಪನಾ ವಿಲಾಸವೆಂದೊಡನೆ ಉಳಿದ ಸಂಪ್ರದಾಯಗಳ ಕಾವ್ಯದಲ್ಲಿ ಕಲ್ಪನಾ ವಿಲಾಸ ಇರುವುದಿಲ್ಲ ಎಂದಲ್ಲ, ರಸ ಸಂಪ್ರದಾಯದಲ್ಲಿ ಕಲ್ಪನಾ ವಿಲಾಸಕ್ಕೆ ಹೆಚ್ಚು ಪ್ರಾಧಾನ್ಯ ಎಂದರ್ಥ. ಅದೇ ರೀತಿ ನವ್ಯ ಕಾವ್ಯದಲ್ಲಿ ವಿಚಾರಶೀಲತೆ ಇದೆ ಎಂದೊಡನೆ ಹಳೆಯ ಕಾವ್ಯದಲ್ಲಿ ವಿಚಾರ ಶೂನ್ಯತೆ ಇದೆ ಎಂದಲ್ಲ. ನವ್ಯಕಾವ್ಯದಲ್ಲಿ ವಿಚಾರಶೀಲತೆಗೆ ಹೆಚ್ಚು ಪ್ರಾಧಾನ್ಯ ಎಂದರ್ಥ" ಎಂದಿದ್ದಾರೆ. 'ಅತ್ಮಶೋಧನೆ' ಕುರಿತ ಕಾರ್ನಾಡರ ವಿಮರ್ಶೆಗೆ ಪ್ರತಿಕ್ರಿಯಿಸುತ್ತ "ವಾದದ ವ್ಯಾಮೋಹಕ್ಕೆ ಬಲಿಬಿದ್ದು ಕಾರ್ನಾಡರು 'ಆತ್ಮಶೋಧನೆ' ಕವಿತೆಯಲ್ಲಿ ತಪ್ಪು ಅರ್ಥ ಹುಡುಕಿದ್ದಾರೆ.,.. ಬುದ್ಧಿಯನ್ನು ಪ್ರಮಾಣವೆಂದು ಒಪ್ಪಿ ಆತ್ಮವನ್ನು ಶೋಧಿಸಿದಾಗ ಅದು ಬರೀ ಶಬ್ದ, ಅದಕ್ಕೆ ಬೇರೆ ಅಸ್ತಿತ್ವವಿಲ್ಲ ಎಂಬುದನ್ನು ಭಟ್ಟರು ಈ ಕವಿತೆಯಲ್ಲಿ ತೋರಿಸಿದ್ದಾರೆ. ಯುಗಧರ್ಮ, ಮನೋಧರ್ಮ ಮೊದಲಾದ ಪರಿಕಲ್ಪನೆಗಳು ಸರಳ ರೇಖೆಗಳಲ್ಲ, ಬೇರೆ ಬೇರೆ ವೈಯಕ್ತಿಕ ಸಂವೇದನೆ, ಪ್ರತಿಕ್ರಿಯೆ ಮುಂತಾದವುಗಳಲ್ಲಿ ಕಂಡುಬರುವ ಸುಸಂಬದ್ಧವಾದ pattern ಎಂಬುದನ್ನು ಲಕ್ಷ್ಯದಲ್ಲಿಡಬೇಕು" ಎಂದು ಕಾರ್ನಾಡರ ಅಭಿಪ್ರಾಯವನ್ನು ಟೀಕಿಸಿದ್ದಾರೆ. ''ನವ್ಯತೆ,..ಹಿಂದಿನ ರಸ ಸಂಪ್ರದಾಯವನ್ನು ಬದಿಗೊತ್ತಿ ತನ್ನ ಜಯಭೇರಿ ಹೊಡೆದು

ನಿಂತಿದೆ' ಬದಿಗೊತ್ತಿ? ಜಯಭೇರಿ ಈ ಯುದ್ಧವಿದ್ಯೆಯ ಪದಗಳೇಕೆ ಸಾಹಿತ್ಯ ವಿಮರ್ಶೆಯಲ್ಲಿ? ಕುಮಾರವ್ಯಾಸನು ಪಂಪನನ್ನು ಬದಿಗೊತ್ತಲಿಲ್ಲ, ಬರ್ನಾಡ್ ಶಾ ಶೇಕ್ಸ್‌ಪಿಯರನನ್ನು ಬದಿಗೊತ್ತಲಿಲ್ಲ. ಬದಿಗೊತ್ತುವುದು ಸಾಹಿತ್ಯಸೃಷ್ಟಿಯ ಉದ್ದೆಶವೂ ಅಲ್ಲ' ಎಂಬ ಅಂಶವನ್ನು ಪ್ರಸ್ತಾಪಿಸುತ್ತ ".. ಸದ್ಯ ಆಳತೊಡಗಿದ ಸಂಪ್ರದಾಯ ನವ್ಯತೆಯ ಸಂಪ್ರದಾಯ ಎಂಬ ಮಾತು ಖಚಿತ. ಗೋಕಾಕ, ಕಣವಿ, ಶಿವರುದ್ರಪ್ಪ, ಕೆ.ಎಸ್.ನ, ಚಿತ್ತಾಲ ಮೊದಲಾದವರು ರಸ ಸಂಪ್ರದಾಯದಲ್ಲಿ ಸಿದ್ಧಿ ಪಡೆದ ಕವಿಗಳೂ ಸಹ ಇಂದು ಹೊಸ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿ ಕಾವ್ಯ ನಿರ್ಮಿಸುತ್ತಿರುವದು ಹೊಸ ಸಂಪ್ರದಾಯದ ವಿಜಯವಲ್ಲದೆ ಮತ್ತೇನು? ಹಳೆಯ ಸಂಪ್ರದಾಯ ಹಳೆಯದಾಯಿತು, ಬದಿಗೆ ಸರಿಸಲ್ಪಟ್ಟಿತು ಎಂದೊಡನೆ ಆ ಸಂಪ್ರದಾಯ ಹಿಂದೆ ನಿರ್ಮಿಸಿದ ಶಕ್ತಿಯುತ ಕಾವ್ಯ ತನ್ನ ಶ್ರೇಷ್ಠತೆಯನ್ನು ಕಳೆದುಕೊಂಡುಬಿಟ್ಟಿತು ಎಂದಲ್ಲ. ಆ ಸಂಪ್ರದಾಯದಲ್ಲಿ ಹೊಸ ಮನೋಧರ್ಮ ಅಭಿವ್ಯಕ್ತಗೊಳ್ಳಲಾರದು ಎಂದರ್ಥ"[೯] ಎಂಬ ಸುದೀರ್ಘ ವಿವರಣೆ ನೀಡಿದ್ದಾರೆ.

'ಸಂಕ್ರಮಣ' ಪತ್ರಿಕೆಯಲ್ಲಿ ಪ್ರಕಟವಾದ ಶಂಕರ ಮೊಕಾಶಿ ಪುಣೇಕರರ 'ಕನ್ನಡ ಕಾವ್ಯದಲ್ಲಿ ನವ್ಯತೆ' ಲೇಖನದಲ್ಲಿ ನವ್ಯದ ಸಂದರ್ಭದಲ್ಲಿ ನವೋದಯವನ್ನು ವಿಶ್ಲೇಷಣೆ ಮಾಡಿದ್ದಾರೆ. ೧೯೨೦ ರಿಂದ ೧೯೫೦ರವರೆಗೆ ಕನ್ನಡದ ಕವಿಗಳು ಬರೆದ ಕಾವ್ಯವನ್ನು ಮಾನವ ಕೇಂದ್ರಿತ ಭಾವಗೀತೆಗಳು ಎನ್ನುವ ಪುಣೇಕರ್ ಈ ಕಾವ್ಯಗಳ ಮುಖ್ಯ ಹಾಗು ನೂತನ ಅಂಶವೆಂದರೆ 'ಅನಿರ್ಬಂಧಿತ ವ್ಯಕ್ತಿತ್ವ'ದ ಅಭಿವ್ಯಕ್ತಿ. ಈ ಪ್ರಕಾರದ ಭಾವಗೀತೆಯಲ್ಲಿ 'ವ್ಯಕ್ತಿ ಪ್ರಾಧಾನ್ಯ'ಕ್ಕೆ ಮಹತ್ವವಿದ್ದುದರಿಂದ ಇದಕ್ಕೆ 'ರೊಮ್ಯಾಂಟಿಕ್' ಎಂಬ ಹೆಸರಿಟ್ಟುದು ನಿಂದಾ ವ್ಯಂಜಕವಾಗಿಯೇ. ಭಾವಗೀತೆಯ ಸಂಪ್ರದಾಯ ತೀರ ಎಷ್ಟು ವ್ಯಕ್ತಿನಿಷ್ಠವಾಯಿತೆಂದರೆ ಬಂಗಾಲ ಬರಗಾಲಕ್ಕೆ ತುತ್ತಾದರೂ ತನ್ನ ಹೂದೋಟದ ಬಗ್ಗೆಯೇ ಇದು ಹರಟುತ್ತಿದೆಯಲ್ಲ ಎಂಬ ನಿಟ್ಟಿನಲ್ಲಿ ಪ್ರಗತಿಶೀಲರು ಇದಕ್ಕೆ ರೊಮ್ಯಾಂಟಿಕ್ ಎಂದು ಕರೆದಿರಬಹುದು ಎಂದು ಮೊಕಾಶಿ ಹೇಳುತ್ತಾರೆ. ಅಂದರೆ ನವೋದಯ ಕಾವ್ಯ ಪ್ರಾರಂಭವಾಗುವಾಗ ಯಾವುದೆ ಹೆಸರನ್ನು ಇಟ್ಟುಕೊಂಡಿರಲಿಲ್ಲ ಎಂಬುದು ಅವರ ಅಭಿಪ್ರಾಯ.[೧೦] ಈ ಲೇಖನದಲ್ಲಿ ಮೊಕಾಶಿಯವರು ನವ್ಯರ ಸಾಧನೆಯನ್ನು ಗಮನಿಸುತ್ತಲೇ, ನವೋದಯದ ಬಗ್ಗೆ ನವ್ಯರು ತಳೆದ ನೇತ್ಯಾತ್ಮಕ ದೃಷ್ಟಿಯಿಂದಾಗಿ ಪರಂಪರೆಯಿಂದ ದೊರಕಬಹುದಾಗಿದ್ದ ಶಕ್ತಿ ಸಾಮರ್ಥ್ಯಗಳಿಂದ ವಂಚಿತರಾದರು ಎಂದು ಭಾವಿಸುತ್ತಾರೆ. ನವ್ಯ ಸಾಹಿತ್ಯ ಸಂದರ್ಭದಲ್ಲಿ ಮೌಲ್ಯಗಳಿಗೆ, ತಾಂತ್ರಿಕ ಅಂಶಗಳಿಗೆ ಭಾಷೆಗೆ ವಿಶೇಷ ಗಮನ ದೊರಕಿತು ಎನ್ನುವ ಮೊಕಾಶಿ ಈ ಮಾತುಗಳಿಗೆ ಪುಷ್ಟಿಯಾಗಿ ಲಂಕೇಶ್, ಗಿರಡ್ಡಿ, ಆರ್ಯ, ಮೊದಲಾದವರ ಲೇಖನಗಳನ್ನು ಉಲ್ಲೇಖಿಸುತ್ತಾರೆ.[೧೧]

'ಸಂಕ್ರಮಣ' ಪತ್ರಿಕೆಯನ್ನು ಗಮನಿಸಿದಾಗ ನವ್ಯವನ್ನು ಕುರಿತಾದ ಲೇಖನಗಳು ನವ್ಯದ ಸಂದರ್ಭಕ್ಕಿಂತ ಬಂಡಾಯದ ಸಂದರ್ಭದಲ್ಲಿ ಅಧಿಕವಾಗಿ ಕಾಣಿಸಿಕೊಂಡಿವೆ. ಇಲ್ಲಿನ ಬಹುತೇಕ ಲೇಖಕರು ನವ್ಯದಿಂದ ಬರವಣಿಗೆ ಆರಂಭಿಸಿ ಬಂಡಾಯದಲ್ಲಿ ಗುರುತಿಸಿಕೊಂಡಿರುವುದು ಕಾರಣವಿರಬೇಕು. ಯಾವುದೇ ಹೊಸ ಸಾಹಿತ್ಯ ಮಾರ್ಗ ಆರಂಭಗೊಂಡಿರುವುದು ಹಿಂದಿನ ಮಾರ್ಗದಲ್ಲಿನ ಲೋಪದೋಷಗಳನ್ನು ವಿರೋಧಿಸಿಯೇ. ಆದರೂ ಇಲ್ಲಿನ ಲೇಖನಗಳು ನವ್ಯವನ್ನು ಸಂಪೂರ್ಣವಾಗಿ ತಿರಸ್ಕರಿಸಿದವುಗಳಾಗಿಲ್ಲ. ನವ್ಯ ಸಾಹಿತ್ಯದ ಕುರಿತಾದ ಗಂಭೀರ ಆರೋಪವೆಂದರೆ ಅದು 'ಜನಪರವಾಗಿ' ಬೆಳೆಯಲಿಲ್ಲ ಎನ್ನುವುದು. ಅಡಿಗರು 'ಆಧುನಿಕವಾಗುವುದು ಎಂದರೆ ಹೊಸ ವೈಜ್ಞಾನಿಕ ಸಮಾಜದ ಸಂಬಂಧದಲ್ಲಿ ಸಂಪೂರ್ಣವಾಗಿ ಹಾಗು ಪ್ರಯೋಜಕ ರೀತಿಯಲ್ಲಿ ಬದುಕಿರಲು ಸಾಧ್ಯವಾಗಿರುವುದು'

ಎಂದಿದ್ದರೂ ಆಧುನೀಕರಣದ ಪ್ರತಿಕ್ರಿಯೆಯನ್ನು ಅದರ ಸಾಮಾಜಿಕ ಸ್ತರಗಳಲ್ಲಿ ನವ್ಯರು ಸ್ವೀಕರಿಸಲಿಲ್ಲ ಎಂಬುದು ಬಂಡಾಯದವರ ಆರೋಪವಾಗಿದೆ.

ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ 'ಸಂಕ್ರಮಣ' ಪತ್ರಿಕೆಯಲ್ಲಿ ಪ್ರಕಟವಾದ ನವ್ಯಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಲೇಖನಗಳನ್ನು ಹೀಗೆ ಉದಾಹರಿಸಬಹುದು:

೧. ನವ್ಯ ಚಳವಳಿ: ಕೆಲವು ಚೆಲ್ಲಾಪಿಲ್ಲಿ ಚಿಂತನೆಗಳು (ಡಿ.ಆರ್. ನಾಗರಾಜ್)
೨. ನವ್ಯರು ಮತ್ತು ಸಂಸ್ಕೃತಿಯ ಗತಿರೋಧಕ ಪ್ರಕ್ರಿಯೆಗಳು (ಬಿ.ಟಿ. ದೇಸಾಯಿ)
೩. ನವ್ಯ ವಿಮರ್ಶೆ (ಜಿ.ಎಸ್. ಅವಧಾನಿ)
೪. ನವ್ಯಕಾವ್ಯದಲ್ಲಿ ಜನಪರ ನಿಲುವುಗಳು (ಪುರುಷೋತ್ತಮ ಬಿಳಿಮಲೆ)
೫. ವಿನಾಯಕರ ಕಾವ್ಯ: ರೂಪ ಮತ್ತು ಅಭಿವ್ಯಕ್ತಿ (ಶಿವರಾಮ ಕಾಡನಕುಪ್ಪೆ)
೬. ನವ್ಯವಿಮರ್ಶೆ–ಪ್ರತಿಕ್ರಿಯೆ (ಶಂಕರ ಮೊಕಾಶಿ ಪುಣೇಕರ)
೭. ಅಡಿಗರ 'ಭೂತ' ಕವನದಲ್ಲಿ ಪ್ರತಿಮಾವಿಧಾನ (ಸಂಕ್ರಮಣ ೧೯೬೬)
೮. ಅಡಿಗರ 'ಮೋಹನ ಮುರಲಿ' ಒಂದು ವಸ್ತು ವಿಶ್ಲೇಷಣೆ (ರಾಜಪ್ಪ ದಳವಾಯಿ)

ಸಂಕ್ರಮಣದಲ್ಲಿ ನವ್ಯ ಸಾಹಿತ್ಯದ ಕುರಿತ ಲೇಖನಗಳೇ ಅಲ್ಲದೆ ನವೋದಯ ಹಾಗು ಪ್ರಗತಿಶೀಲ ಸಾಹಿತ್ಯದ ಕುರಿತಂತೆ ಹೊಸ ದೃಷ್ಟಿಕೋನದ ವಿಶ್ಲೇಷಣೆಗಳೂ ಕಂಡುಬರುತ್ತವೆ:

೧. ಕುವೆಂಪು ಅವರ ವೈಚಾರಿಕತೆ (ಶಿವರಾಮಯ್ಯ)
೨. ಕುವೆಂಪು ಮತ್ತು ಕಾದಂಬರಿ (ರಾಜೇಂದ್ರ ಚೆನ್ನಿ)
೩. ಮಾಸ್ತಿಯವರ ಐತಿಹಾಸಿಕ ಕಾದಂಬರಿ (ಮನಜ)
೪. ಬೇಂದ್ರೆಯವರ 'ಹುಬ್ಬಳ್ಳಿಯಾಂವ' (ಬಿ.ಎಸ್. ಸುಬ್ಬಣ್ಣನವರ್)
೫. ನಿರಂಜನರ 'ಚಿರಸ್ಮರಣೆ'(ಎಲ್.ಹನುಮಂತಯ್ಯ)
೬. ಕಣವಿ ಕಾವ್ಯದ ಸಿದ್ಧಿ ಸಾಧನೆಗಳು (ಪುರುಷೋತ್ತಮ ಬಿಳಿಮಲೆ)

ಇವಲ್ಲದೆ ಪ್ರಾಚೀನ–ಮಧ್ಯಕಾಲೀನ ಸಾಹಿತ್ಯದ ಕುರಿತ ಲೇಖನಗಳೂ ಉಂಟು,

೧. ಬಸವಣ್ಣನ ವಚನ: ಹೊಳೆದ ಅರ್ಥ (ಓ.ಎಲ್. ನಾಗಭೂಷಣ ಸ್ವಾಮಿ)
೨. ಅಕ್ಕನ ವಚನ: ಹೊಳೆದ ಅರ್ಥ (ಓ.ಎಲ್. ನಾಗಭೂಷಣ ಸ್ವಾಮಿ)
೩. ಬಸವಣ್ಣನ ವಚನಗಳ ಮರುಪರಿಶೀಲನೆ (ಶ್ರೀನಿವಾಸಮೂರ್ತಿ)
೪. ಪಂಪನ ಕೆಲವು ಪದ್ಯಗಳು–ಪ್ರಾಯೋಗಿಕ ವಿಮರ್ಶೆ (ಎಚ್.ಹನುಮಂತರಾಯಪ್ಪ)
೫. ಭಾನುಮತಿಯ ನೆತ್ತ, ಮತ್ತೆ ಪರಿಶೀಲನೆ (ಮಾಧವ ಪೆರಾಜೆ)

ಇಲ್ಲಿ ಕೆಲವು ಅತ್ಯಂತ ಪ್ರಧಾನವಾದ ಲೇಖನಗಳ ಆಯ್ದ ಪಟ್ಟಿಯನ್ನಷ್ಟೇ ಒದಗಿಸಲಾಗಿದೆ. ಇವಲ್ಲದೆ ಇನ್ನೂ ಹಲವು ಲೇಖನಗಳೂ, ಕಿರುಬರಹಗಳು, ಪ್ರತಿಕ್ರಿಯೆಗಳು, ಲೆಕ್ಕವಿಲ್ಲದಷ್ಟು ಅನಿಸಿಕೆಗಳು ನಮ್ಮ ಸಾಂಸ್ಕೃತಿಕ ಚಿಂತನೆಗೆ ಮಹತ್ವದ ತಿರುವುಗಳನ್ನು, ಪೂರಕ ಅಂಶಗಳನ್ನು ನೀಡಿವೆ.

ಬಿ.ಟಿ.ದೇಸಾಯಿಯವರು ತಮ್ಮ 'ನವ್ಯರು ಮತ್ತು ಸಂಸ್ಕೃತಿಯ ಗತಿಶೋಧಕ ಪ್ರಕ್ರಿಯೆಗಳು' ಲೇಖನದಲ್ಲಿ (ಬಿ.ಟಿ.ದೇಸಾಯಿ: ಸಂಕ್ರಮಣ, ಸಂಪುಟ ೯, ಸಂಚಿಕೆ ೪) ಶಾಂತಿನಾಥರಿಗಿಂತ ವಿಭಿನ್ನ ರೀತಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಅವರು ಹೇಳುವಂತೆ

> "ಕನ್ನಡದ ನವ್ಯರು ಅದರಲ್ಲೂ ನವ್ಯ ಕವಿಗಳು ಇಂಗ್ಲಿಷ್ ಕಾವ್ಯದಿಂದ ಪ್ರೇರಿತರಾದವರು ಕ್ರಮೇಣ ಇಂಗ್ಲಿಷ್ ಮನೋಭೂಮಿಕೆ ಸಂಕುಚಿತ ಎನಿಸಿ, ಫ್ಯಾಷನ್ನಿಗಾಗಿ ಇಲ್ಲವೆ ಹೊಸತಿರಲಿ ಎಂಬ ಭ್ರಮೆಯಿಂದ, ಯುರೋಪ್ ಮತ್ತು ಅಮೆರಿಕಾಗಳ ಕಾದಂಬರಿ ಹಾಗು ನಾಟಕಗಳತ್ತ ತಿರುಗಿದರು. ಇದರರ್ಥ ನಮ್ಮ ಲೇಖಕರೆಲ್ಲ ತೀವ್ರವಾದ ನವ್ಯ ಪರಿಸರದಿಂದ ಬಳಲುತ್ತಿರುವುದು ಸ್ಪಷ್ಟ. ಗೋಕಾಕ ಅಡಿಗರ ಅಂದರೆ ೧೯೫೦–೫೨ರ ನವ್ಯತೆಗೂ ಲಂಕೇಶ್, ತೇಜಸ್ವಿ, ಅನಂತಮೂರ್ತಿಯವರ ನವ್ಯತೆಗೂ ವ್ಯತ್ಯಾಸವಿದೆ. ೧೯೫೦ರಲ್ಲಿ ಶುರುವಾದ ನವ್ಯ ಒಂದು ಅಪರಿಪೂರ್ಣ ಪ್ರಜ್ಞೆಯ ಚಿತ್ರಣವಾಗಿದೆ. 'ಚಂಡೆಮದ್ದಳೆ'ಯ ಅಡಿಗರನ್ನು ನವ್ಯಕವಿ ಎಂದು ಧೈರ್ಯವಾಗಿ ಕರೆಯಬಹುದು. ಆದರೆ 'ಶ್ರೀರಾಮನವಮಿಯ ದಿವಸ', 'ಕೂಪಮಂಡೂಕ'ದ ಕವಿಯನ್ನು ನವ್ಯಕವಿ ಎಂದು ಕರೆಯಲಾಗುವುದಿಲ್ಲ. ಕನ್ನಡ ನವ್ಯ ಚಳುವಳಿಯಲ್ಲಿ ಎರಡು ಬಗೆಯ ನವ್ಯ ಕವಿಗಳನ್ನು ಗುರುತಿಸಬಹುದು. ಒಂದು, ನವ್ಯತೆಯನ್ನು ಮನೋಧರ್ಮವನ್ನಾಗಿ ಸ್ವೀಕರಿಸಿದ ವರ್ಗ (ಅನುಭವವನ್ನು ಸಂಯೋಜಿಸುವುದರಲ್ಲಿನ ಅನನ್ಯತೆಗಾಗಿ), ಎರಡು, ನವ್ಯತೆಯನ್ನು ಬೌದ್ಧಿಕ ನೆಲೆಯಲ್ಲಿ ಉಪಯೋಗಿಸಿಕೊಂಡ ವರ್ಗ (ತಾಂತ್ರಿಕವಾಗಿ ಅನುಭವವನ್ನು ಬಳಸಿದ್ದಕ್ಕಾಗಿ). ಮೊದಲ ವರ್ಗಕ್ಕೆ ಅಡಿಗ, ರಾಮಚಂದ್ರಶರ್ಮರನ್ನು, ಎರಡನೆಯ ವರ್ಗಕ್ಕೆ ಕೆ.ಎಸ್.ನ., ಗೋಕಾಕ್‌ರನ್ನು ಸೇರಿಸಬಹುದು"[೧೨]

ನವ್ಯ ಸಾಹಿತಿಗಳನ್ನು ಕುರಿತು ಚರ್ಚಿಸಿರುವ ಡಾ.ಡಿ.ಆರ್. ನಾಗರಾಜ್

> "ಕನ್ನಡ ನವ್ಯದ ಅತ್ಯುತ್ತಮ ಸಾಹಿತಿಗಳು ಇಡೀ ಭಾರತೀಯ ಸಾಹಿತ್ಯದಲ್ಲಿ ಅತ್ಯುತ್ತಮರ ಸಾಲಿಗೆ ಸೇರಿದವರು ಎನ್ನುವುದು ನನ್ನ ನಂಬಿಕೆ. ನೇತ್ಯಾತ್ಮಕ ನೀತಿಯ ವಿಮರ್ಶೆ ಅನಿವಾರ್ಯವಾಗಿ ಅಪೂರ್ಣವಾದರೂ ಸಾಹಿತ್ಯ ಚಳವಳಿಯೊಂದರ ಮೂಲ ಸ್ವರೂಪವನ್ನು ಅದು ವಿವರಿಸಲು ಸಹಾಯಕವಾಗುತ್ತದೆ ಎನ್ನುವ ಕಾರಣಕ್ಕಾಗಿ ಈ ವಿಧಾನವನ್ನು ಆರಿಸಿಕೊಂಡಿದ್ದೇನೆ"[೧೩]

ಡಿ.ಆರ್. ನಾಗರಾಜ್ ನವ್ಯದಲ್ಲಿ ಎರಡು ಹಂತಗಳನ್ನು ಗುರುತಿಸುತ್ತಾರೆ: ಮೂಲನವ್ಯ ಹಾಗು ಪರಿವತನಾಶೀಲ ನವ್ಯ. ಮೂಲನವ್ಯದ ಲೇಖಕರಾಗಿ ಅಡಿಗ, ಶರ್ಮ, ಕಂಬಾರ, ದೇಸಾಯಿ, ರಾಮಾನುಜನ್‌ರನ್ನು ಗುರುತಿಸುವ ಡಿ.ಆರ್., ಪರಿವರ್ತನಾಶೀಲ ನವ್ಯದಲ್ಲಿ ಲಂಕೇಶ್, ತೇಜಸ್ವಿ, ಅನಂತಮೂರ್ತಿ, ಚಿತ್ತಾಲರನ್ನು ಗುರುತಿಸಿದ್ದಾರೆ. ನವ್ಯೋತ್ತರವನ್ನು ತನ್ನೊಳಗೆ ಸೇರಿಸಿಕೊಳ್ಳುವ ಪ್ರಯತ್ನದ ಫಲವೇ ಪರಿವರ್ತನಾಶೀಲ ನವ್ಯ. ಇದರಲ್ಲಿ ರಾಜಕೀಯ, ಸಾಮಾಜಿಕ ಆಶಯಗಳು ಪ್ರಧಾನವಾಗಿದೆ. ಇದು ನವ್ಯೋತ್ತರ ಸಾಹಿತ್ಯದ ಪ್ರಾಣ ಎನ್ನುವ ಡಿ.ಆರ್., ಇದನ್ನು ದ್ವಿಜತ್ವ ಎಂದು ಕರೆದಿದ್ದಾರೆ. ಮೂಲನವ್ಯದಲ್ಲಿ ಇದು ಕಾಣುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

ನವ್ಯಸಾಹಿತ್ಯ ಕೃತಿಗಳು ಸಾಮಾಜಿಕ ವಿಮರ್ಶೆಯ ಪರಿಧಿಯಲ್ಲೇ ಸುತ್ತುತ್ತವೆ. ನವ್ಯದ ಆಕೃತಿಯ ಸಮಸ್ಯೆ ಎಂದರೆ ಸಾಮಾಜಿಕ ವಾಸ್ತವ ಕಡಿಮೆ ಇರುವುದಿಲ್ಲ. ಈ ವಾಸ್ತವಕ್ಕೆ ಅತಿಯಾಗಿ ಅಂಟಿಕೊಂಡು ಅದು ಬಿದ್ದಿದೆ. ಕಾವ್ಯ ಕಥನ, ಸಾಹಿತ್ಯ, ನಾಟಕ, ಹೀಗೆ ಎಲ್ಲ ಪ್ರಕಾರಗಳಿಗೂ ಅನ್ವಯಿಸುವಂತಹ ಮಾತು ಅದು ಎಂದು ಡಿ.ಆರ್. ವಿವರಿಸುತ್ತಾರೆ. ದೇಸಾಯಿ ತಮ್ಮ ಲೇಖನದಲ್ಲೇ (ನವ್ಯರು ಮತ್ತು ಸಂಸ್ಕೃತಿಯ ಪ್ರತಿರೋಧಕ ಪ್ರಕ್ರಿಯೆಗಳು) ಅಡಿಗ ಮತ್ತು ಗೋಕಾಕರ ನಡುವಣ ಅಂತರವನ್ನು ಗುರುತಿಸಿದ್ದಾರೆ: "ಗೋಕಾಕ ಮತ್ತು ಅಡಿಗರು ಮಾತ್ರ ನಮ್ಮ ಸಂಸ್ಕೃತಿಯ ಪುರಾಣಗಳ ಅರಿವು ಮತ್ತು ಅದಕ್ಕೆ ತಕ್ಕ ಪಾಂಡಿತ್ಯವುಳ್ಳ ಪುರಾಣ ಪ್ರತಿಮೆಗಳನ್ನು ಉಪಯೋಗಿಸಿಕೊಳ್ಳುವಾಗ ಆ ಪೌರಾಣಿಕ ಮೂಲವಸ್ತುವನ್ನು ಕೆಡಿಸದೆ, ಪಲ್ಲಟಿಸದೆ ತಮ್ಮ ಅನುಭವದ ವಿಶ್ವರೂಪವನ್ನು ಅಭಿವ್ಯಕ್ತಿಸಬಲ್ಲರು. ಅಡಿಗರಿಗೆ ಪುರಾಣಗಳೆಂದರೆ ನಮ್ಮ ಸಂಸ್ಕೃತಿಯ ಮೂಲಭೂತ ಮೌಲ್ಯಗಳ ಸಾಂದ್ರೀಕೃತ ನೆಲೆಗಳು. ಅದೇ ಗೋಕಾಕರಿಗೆ ಅವು ಅವರ ಬೌದ್ಧಿಕ counters ಆಗುತ್ತವೆ" ಎಂದಿದ್ದಾರೆ.

ಅಡಿಟಿಪ್ಪಣಿಗಳು

೧. ಅಡಿಗ: ನೆನಪಿನ ಗಣಿಯಿಂದ, [ಕನ್ನಡಪ್ರಭ ಪತ್ರಿಕೆಯ ಅಂಕಣ ಬರಹ], ಪುಟ ೧೪೮
೨. ಜಯಂತ ಕಾಯ್ಕಿಣಿ: ಸಂಸ್ಕೃತಿ–ಅಡಿಗ ಅನುಸಂಧಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪುಟ ೧೨೫, ೨೦೦೫
೩. ಅಡಿಗ: ಸಾಕ್ಷಿ, ಜುಲೈ ಸಂಚಿಕೆ ೪ ೧೯೬೮
೪. ಗಿರಿ: 'ಮನೋವಿಜ್ಞಾನ ಮತ್ತು ಸಾಹಿತ್ಯ', ಸಾಕ್ಷಿ, ಸಂಚಿಕೆ ೨, ಜನವರಿ ೧೯೬೮
೫. ಜಿ. ರಾಜಶೇಖರ, ಜಿ.ಬಿ.ಜೋಷಿಯವರ 'ಸತ್ತವರ ನೆರಳು', ಸಾಕ್ಷಿ, ಸಂಚಿಕೆ ೨೭
೬. ಜಯಂತ ಕಾಯ್ಕಿಣಿ: ಗೋಪಾಲಕೃಷ್ಣ ಅಡಿಗ ಸಂಸ್ಕೃತಿ ಅನುಸಂಧಾನ – ಸಾಕ್ಷಿ ಸಮಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೨೦೦೪, ಪುಟ ೧೨೨
೭. ಸುಮತೀಂದ್ರ ನಾಡಿಗ್: ಅಡಿಗ ಸಂಸ್ಕೃತಿ ಅನುಸಂಧಾನ, ಪಾಶ್ಚಾತ್ಯ ನವ್ಯ ಕಲ್ಪನ ಮತ್ತು ನವ್ಯ ಕಾವ್ಯದ ಕಲ್ಪನೆ, ಕ.ಸಾ.ಪ., ಬೆಂಗಳೂರು, ೨೦೦೪, ಪುಟ ೧೦೩
೮. ಗೋಪಾಲಕೃಷ್ಣ ಅಡಿಗ: ಹೊಸದಿನದ ಆಹ್ವಾನ, ಜಯಕರ್ನಾಟಕ, ೧೧–೧೨–೧೯೫೨, ಪುಟ ೨
೯. ಗೋಪಾಲಕೃಷ್ಣ ಅಡಿಗ: ಇಂದಿನ ಕಾವ್ಯದ ಹಿನ್ನೆಲೆ, ಕರ್ಮವೀರ, ೧೦–೧೧–೧೯೫೨, ಪುಟ ೧೧
೧೦. ಗೋಪಾಲಕೃಷ್ಣ ಅಡಿಗ, ಇಂದಿನ ಕಾವ್ಯದ ಹಿನ್ನೆಲೆ, ಕರ್ಮವೀರ, ೧೯೫೨, ಪುಟ ೩
೧೧. ಅನಂತಮೂರ್ತಿ: ಪೂರ್ವಾಪರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೬, ಪುಟ ೩೬
೧೨. ಅದೇ
೧೩. ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ, ವರ್ತಮಾನ, ಕನ್ನಡ ಸಾಹಿತ್ಯ ಪರಿಷತ್, ಪುಟ ೭೫, ೧೯೯೩
೧೪. ಅನಂತಮೂರ್ತಿ: ಅಭಿಮಾನದಿಂದ ಬೆಳೆದ ಸ್ನೇಹ, ಪ್ರಜಾವಾಣಿ, ಡಿಸೆಂಬರ್ ೨೧, ೨೦೦೮

ಸಂಕ್ರಮಣ

೧. ಡಾ. ಎಸ್.ಶಿವಣ್ಣ, ಚಂದ್ರಶೇಖರ ಪಾಟೀಲರ ಸಾಹಿತ್ಯದ ಸಮಗ್ರ ಅಧ್ಯಯನ, ಕ.ಸಾ.ಪ., ೨೦೦೮, ಪುಟ ೧೬೬
೨. ಜಿ.ಎಸ್.ಎಸ್., ಸಂಕ್ರಮಣ, ಆಗಸ್ಟ್ ಸೆಪ್ಟೆಂಬರ್ ೧೯೮೪, ಪತ್ರಿಕೆಯ ೨೦ನೆಯ ಹುಟ್ಟುಹಬ್ಬದ ವರದಿ, ಪುಟ ೧೫೧–೧೫೨
೩. ಚಂಪಾ: ಸಂಕ್ರಮಣ, ಚಂಪಾ ಕಾಲಂ, ಜನವರಿ ೧೯೯೨, ಪುಟ ೨೩೩ – ಸಂಕ್ರಮಣ ಬೆಳ್ಳಿ ಹಬ್ಬ
೪. ಹಂಚಿಮನಿ ವೀರಭದ್ರಪ್ಪ: ಇವತ್ತಿನ ಸಾಹಿತ್ಯಿಕ ಪತ್ರಿಕೆಗಳು, ಒಂದು ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ ೨೩
೫. 'ಸಂಕ್ರಮಣ' ಶಾಂತಿನಾಥ ದೇಸಾಯಿ: ಕನ್ನಡ ನವ್ಯ ಕವಿತೆಯಲ್ಲಿನ ಮನೋಧರ್ಮ, 'ಸಂಕ್ರಮಣ' ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೯೫
೬. ಶಾಂತಿನಾಥ ದೇಸಾಯಿ: ಕನ್ನಡ ನವ್ಯಕವಿತೆಯಲ್ಲಿನ ಮನೋಧ್‌ರ್ಮ, ಸಂಕ್ರಮಣ ೭, ಸಂಪುಟ ೨, ಸಂಚಿಕೆ ೧, ಆಗಸ್ಟ್ ೧೯೬೫
೭. ಗಿರೀಶ್ ಕಾರ್ನಾಡ್: ಒಂದು ಪತ್ರ, ಸಂಕ್ರಮಣ, ಸಂಪುಟ ೨, ಸಂಚಿಕೆ ೨, ಅಕ್ಟೋಬರ್ ೧೯೬೫
೮. ಅದೇ
೯. ಶಾಂತಿನಾಥ ದೇಸಾಯಿ: ಸಂಕ್ರಮಣ ೭, ಸಂಪುಟ ೨, ಸಂಚಿಕೆ ೩, ೧೯೬೫
೧೦. ಶಂಕರ ಮೊಕಾಶಿ ಪುಣೇಕರ: ಕನ್ನಡ ಕಾವ್ಯದಲ್ಲಿ ನವ್ಯತೆ, ಸಂಕ್ರಮಣ ೫೫, ಸಂಪುಟ ೧೦, ಸಂಚಿಕೆ ೧, ಆಗಸ್ಟ್ ೧೯೭೩
೧೧. ಅದೇ
೧೨. ಬಿ.ಟಿ. ದೇಸಾಯಿ, ಸಂಕ್ರಮಣ, ಸಂ ೯, ಸಂ ೪,
೧೩. ಡಿ.ಆರ್. ನಾಗರಾಜ್, ನವ್ಯ ಚಳವಳಿ–ಕೆಲವು ಚೆಲ್ಲಾಪಿಲ್ಲಿ ಚಿಂತನೆಗಳು, ಸಂಕ್ರಮಣ, ಸಂಪುಟ ೨೪, ಸಂಚಿಕೆ ೧, ೧೯೮೯

೨. ಕನ್ನಡ ಸಾಹಿತ್ಯಿಕ ಪತ್ರಿಕೆಗಳಲ್ಲಿ ಕಾಣಸಿಗುವಂತೆ ನವ್ಯ ವಿಮರ್ಶೆಯ ತಾತ್ವಿಕತೆಯ ಸ್ವರೂಪದ ವಿವೇಚನೆ

"ಕನ್ನಡದಲ್ಲಿ ವಿಮರ್ಶೆ ಎಂಬ ಸಾಹಿತ್ಯ ಪ್ರಕಾರ ಶುರುವಾದದ್ದೇ ನವ್ಯ ಸಾಹಿತ್ಯದ ಚಳವಳಿಯ ಸಂದರ್ಭದಲ್ಲಿ, ಅಂದರೆ ೧೯೬೦ರ ದಶಕದಲ್ಲಿ. ಅದಕ್ಕೆ ಮೊದಲಿನ ವಿಮರ್ಶೆಯೆಲ್ಲವೂ ಪ್ರಿ ಕ್ರಿಟಿಕಲ್ (ವಿಮರ್ಶಾಪೂರ್ವ) ಹಂತಕ್ಕೆ ಸೇರಿದ ಬರಹಗಳೆಂದು ಗುರುತಿಸಬಹುದು"[೧]

ಐವತ್ತರ ಕೊನೆಯ ಭಾಗದಿಂದ ಕನ್ನಡ ಸಾಹಿತ್ಯ ವಿಮರ್ಶೆಯ ಸ್ವರೂಪ ಬದಲಾಗಿರುವುದನ್ನು ಕಾಣಬಹುದು. ಸಾಹಿತ್ಯ ವಿಮರ್ಶೆಯ ತಾಂತ್ರಿಕ ಪದಗಳು ಬದಲಾದುದು ಈ ಕಾಲಘಟ್ಟದಲ್ಲಿ. ಕುರ್ತಕೋಟಿಯವರ ಪ್ರಕಾರ ಪ್ರತಿಯೊಂದು ಕೃತಿಯ ವಿಮರ್ಶೆಯ ಪ್ರಮಾಣಗಳು ಆ ಕೃತಿಯಲ್ಲಿಯೇ ಅಡಗಿಕೊಂಡಿರುತ್ತವೆ. ಅಲ್ಲದೆ, ಸದೋಷ ಕೃತಿ ತನ್ನ ವಿಮರ್ಶೆಯ ಸಮಸ್ಯೆಗಳನ್ನು ತಾನೇ ಹೇಳಿಬಿಡುತ್ತದೆ. ಸಾಹಿತ್ಯ ವಿಮರ್ಶೆಯು ವ್ಯಕ್ತಿಯಿಂದ ವ್ಯಕ್ತಿಗೆ ಸಂವಹನಗೊಳ್ಳುವ ಒಂದು ಮಾಧ್ಯಮ. ವ್ಯಕ್ತಿಯೊಬ್ಬನ ಅಭಿಪ್ರಾಯ ಎನ್ನುವುದು ಇಲ್ಲಿ ಮುಖ್ಯ. ನವೋದಯದ ಸಂದರ್ಭದಲ್ಲಿನ ಕವಿಗಳಿಗೆ ತಮ್ಮ ಸೃಜನಶೀಲ ಬರವಣಿಗೆಯ ಜೊತೆಗೆ ವಿಮರ್ಶೆಯನ್ನು ಸಹ ಮಾಡಬೇಕಿತ್ತು. ಆದರೆ ಅವರಲ್ಲಿ ಸಾಹಿತ್ಯ ವಿಮರ್ಶೆಯನ್ನು ತಮ್ಮ ಕ್ಷೇತ್ರವನ್ನಾಗಿ ಆರಿಸಿಕೊಂಡವರು ಕಡಿಮೆ. ಯಾವುದೇ ಪೂರ್ವತಯಾರಿ ಇಲ್ಲದೆ ವಿಮರ್ಶಾ ಕ್ಷೇತ್ರ ಹೊಚ್ಚ ಹೊಸದಾಗಿತ್ತು. ಅದಕ್ಕಾಗಿ ನವೋದಯದ ವಿಮರ್ಶಕರು ಪಾಶ್ಚಾತ್ಯ ವಿಮರ್ಶೆಯಿಂದ ಕೆಲವು ಪರಿಕಲ್ಪನೆಗಳನ್ನು ಪಡೆದರು. ಪಾಶ್ಚಾತ್ಯ, ದೇಶೀ ಚಿಂತನೆಗಳೆರಡು ಮೇಳೈಸಿ ಹಲವು ಪ್ರಕಾರಗಳಲ್ಲಿ ವಿಮರ್ಶೆ ಬಿಚ್ಚಿಕೊಂಡಿತು. ಅದಕ್ಕೆ ಅದರದೇ ಆದ ಮಿತಿಗಳೂ ಇದ್ದವು. ಹಾಗಾಗಿ ನವೋದಯ ಕಾಲದ ವಿಮರ್ಶೆ ವಿಮರ್ಶಾಪೂರ್ವ ಹಂತದ ವಿಮರ್ಶೆ ಎನ್ನಬಹುದು.

> "ಸಾಹಿತ್ಯ ವಿಮರ್ಶೆ ಎಂದು ಗುರುತಿಸುವ ಪಥ್ಯ ರೀತಿ ನವ್ಯ ಸಾಹಿತ್ಯ ಕಾಲದಲ್ಲಿ ಆಧುನಿಕ ಪ್ರಜ್ಞೆಯ ಅಂಗವಾಗಿ ಹುಟ್ಟಿಕೊಂಡಿತಾದರೂ ಅದಕ್ಕೆ ಕೆಲವು ವರ್ಷಗಳ ಮುನ್ನವೇ ಅನಕೃ, ನಿರಂಜನ, ತರಾಸು, ಬಸವರಾಜ ಕಟ್ಟೀಮನಿ ಮುಂತಾದವರು ಭಾಗವಹಿಸಿದ್ದ ಪ್ರಗತಿಶೀಲ ಚಳವಳಿ ಕೂಡ ಸಾಹಿತ್ಯವನ್ನು ನಾವು ನೋಡುವ ರೀತಿಯನ್ನು ಬದಲಿಸಿತು ಎನ್ನುವುದು ಇಲ್ಲಿ ನೆನೆಯತಕ್ಕ ಸಂಗತಿಯಾಗಿದೆ. ಪ್ರಗತಿಶೀಲತೆ ಸಹ ಸಾಹಿತ್ಯ ಚರ್ಚೆಯನ್ನು ಟ್ಯಾಕ್ಸಾನಮಿಗಿಂತ ಮುಂದಕ್ಕೆ ತೆಗೆದುಕೊಂಡು ಹೋಯಿತು. ಸಾಹಿತ್ಯದ ಓದನ್ನು ಸಮಾಜದ ವಿಶ್ಲೇಷಣೆಯಾಗಿ ಮಾರ್ಪಡಿಸಿದವರೇ ಪ್ರಗತಿಶೀಲರು"[೧]

ನವೋದಯದ ವಿಮರ್ಶೆಯ ಗುರಿ ಕೃತಿಯೊಂದು ಒಟ್ಟಾರೆಯಾಗಿ ಕೊಡುವ ಅನುಭವವನ್ನು ಸಹೃದಯರಿಗೆ ಮತ್ತು ಸಾಮಾನ್ಯ ಮನುಷ್ಯರಿಗೆ ತಿಳಿಯ ಹೇಳುವುದಾಗಿತ್ತು. ಕೃತಿಯನ್ನು ಕುರಿತ ನಿಷ್ಠುರ ಮೌಲ್ಯಮಾಪನವಾಗಲಿ, ಕೃತಿಯ ಹಿನ್ನೆಲೆಯಾಗಲಿ, ನವೋದಯ ವಿಮರ್ಶೆಗೆ ಮುಖ್ಯವಾಗಿರಲಿಲ್ಲ. ಅದರ ಧಾಟಿ ವಿನಯ ರೂಪದ್ದು. ಸಾಮಾನ್ಯ ಓದುಗರಲ್ಲಿ ನೈತಿಕವಾದ ಮಾನವೀಯತೆ ಹುಟ್ಟಿಕೊಳ್ಳುವಂತೆ ನೋಡಿಕೊಳ್ಳುವುದು ಅದರ ಗುಣವಾಗಿತ್ತು. ಜೊತೆಗೆ ವಸ್ತುನಿಷ್ಠತೆ ನವೋದಯ ವಿಮರ್ಶೆಗೆ ಮುಖ್ಯವಾಗಿರಲಿಲ್ಲ. ಕನ್ನಡ ಸಾಹಿತ್ಯ ವಿಮರ್ಶೆ ತನ್ನೆಲ್ಲ ಸಾಧ್ಯತೆಗಳನ್ನು ಕಂಡುಕೊಳ್ಳುವ ಗಂಭೀರ ಪ್ರಯತ್ನ ಮಾಡಿರುವುದು ನವ್ಯ ಸಾಹಿತ್ಯ ಸಂದರ್ಭದಲ್ಲಿ. ನವ್ಯ ವಿಮರ್ಶೆ ಪ್ರಮುಖ ಸಾಹಿತ್ಯ ಪ್ರಕಾರ ಎನಿಸಿ, ನವ್ಯದ ಧೋರಣೆಗಳನ್ನು ಸ್ಪಷ್ಟಪಡಿಸುವ ಅದಕ್ಕೆ ಖಚಿತ ರೂಪ ನೀಡುವ ಕೆಲಸ ಮಾಡಿತು. ಜೊತೆಗೆ ತಾನೂ ಸಮೃದ್ಧವಾಗಿ ಬೆಳೆಯಿತು. ಕನ್ನಡ ವಿಮರ್ಶಾ ಚರಿತ್ರೆಯಲ್ಲಿ ನವ್ಯ ವಿಮರ್ಶೆಯದು ಸಂಕ್ರಮಣ ಕಾಲ. ಅಲ್ಲಿಯವರೆಗೆ ಸರಳವಾಗಿದ್ದ ವಿಮರ್ಶೆ ಮುಂದೆ ಸಂಕೀರ್ಣಗೊಳ್ಳುತ್ತ ಹೋಗಿರುವುದನ್ನು ವಿಮರ್ಶೆಯ ಇತಿಹಾಸವನ್ನು ಗಮನಿಸಿದರೆ ತಿಳಿಯುತ್ತದೆ.

> "ರಚನೆ ರೂಪ, ಪ್ರಕಾರ, ಕಾವ್ಯತಂತ್ರ ಮುಂತಾದ ಪರಿಭಾಷೆಗಳು ಚಾಲ್ತಿಗೆ ಬಂದಿರುವುದು ನವ್ಯ ಕಾಲಘಟ್ಟದಲ್ಲಿ. ಇವುಗಳು ಮೂಲತಃ ಬಂಡವಾಳಶಾಹಿ ವ್ಯವಸ್ಥೆಯೊಂದಿಗೆ ರೂಪು ತಳೆದ ಪರಿಭಾಷೆಗಳೂ ಹೌದು. 'ಕಾವ್ಯ ತಂತ್ರ' ಎನ್ನುವುದಕ್ಕೂ 'ತಾಂತ್ರಿಕತೆ' ಎನ್ನುವುದಕ್ಕೂ ಇರುವ ಸಂಬಂಧಗಳು ಸ್ಪಷ್ಟ. ಇದರಿಂದಾಗಿ ನವ್ಯ ವಿಮರ್ಶೆ ಮೂಲತಃ ಕೆಲಸ ಮಾಡಿರುವುದು ಶೈಕ್ಷಣಿಕ ವಲಯದ ಆಸಕ್ತಿಗಳಿಂದಾಗಿ. ಇದರಿಂದಾಗಿ ಸಾಮಾನ್ಯ ಓದುಗರ ನಿರೀಕ್ಷೆಗಳು ಓದುಗರಿಗೆ ಮತ್ತು ಸಾಹಿತ್ಯಕೃತಿಗಳಿಗೆ ಇರುವ ಸಂಬಂಧಗಳ ನಡುವೆ ಅಂತರ ಏರ್ಪಟ್ಟಿತು. ಸಾಹಿತ್ಯ ವಿಮರ್ಶೆಯಲ್ಲಿ ಮಾನವನ ಪ್ರಸ್ತುತತೆಯ ಪ್ರಶ್ನೆಯು ಬೇರೆಯಾಯಿತು. ಕೃತಿಯನ್ನು ವಿಮರ್ಶಿಸುವುದು ಎಂದರೆ ಕೃತಿಯನ್ನು ಆದರ್ಶ ರೂಪದಲ್ಲಿ ಗ್ರಹಿಸಿ ಮೌಲ್ಯ ನಿರ್ಣಯ ಮಾಡುವುದು ಎಂಬಂಥ ಸಾಂಸ್ಥಿಕ ಅಗತ್ಯಗಳಿಗೆ ತಕ್ಕಂತಹ ಮಾತುಗಳು ಸಿದ್ಧವಾದವು. ಕೃತಿಯನ್ನು ಕೇಂದ್ರವಾಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ 'ಮಾನವೀಕರಣ' ಮುಖ್ಯವಲ್ಲ. ಕೃತಿಯ ವಿಮರ್ಶೆಯೇ ಪ್ರಮುಖ ಲಕ್ಷಣ ಎಂದು ಹೇಳಿದಂತಾಯಿತು. ಇಷ್ಟರ ಮಟ್ಟಿಗೆ ನವ್ಯ ವಿಮರ್ಶೆಯು ಒಂದು ಶೈಕ್ಷಣಿಕ ಅಗತ್ಯವಾಗಿ ರೂಪುಗೊಂಡಿತು"[೨]

ಪಾಂಡಿತ್ಯವಷ್ಟೇ ವಿಮರ್ಶಕನಿಗೆ ಇದ್ದರೆ ಸಾಲದು ಎನ್ನುವ ಅಡಿಗರು ಅದರ ಜೊತೆಗೆ ಸಾಹಿತ್ಯ ಕೃತಿಗಳಿಂದ ಪ್ರಭಾವಿತನಾಗಲು, ಅವುಗಳ ಪ್ರಬಂಧ ಧ್ವನಿಯನ್ನು ಅಂಗಾಂಗ ಸಾಂಗತ್ಯವನ್ನು ಗ್ರಹಿಸಲು ಸಮರ್ಥವಾದ ಸಹೃದಯ ಪ್ರತಿಭೆಯೂ, ಸೂಕ್ಷ್ಮ ಸಂವೇದನ ಸಾಮರ್ಥ್ಯವೂ ಸೇರಿದಾಗ ಈ ಅಪೂರ್ವ ಯೋಗವೇ ನಿಜವಾದ ವಿಮರ್ಶಕನ ಉದಯಕ್ಕೆ ಕಾರಣವಾಗಬಹುದು ಎನ್ನುತ್ತಾರೆ.[೩] ಅಡಿಗರು ಎಲಿಯೆಟ್, ಯೇಟ್ಸ್ ಮಾದರಿಯ ನವ್ಯತೆಯನ್ನು ಆಯ್ದುಕೊಂಡವರಾದರೂ ಅವರ ಕಾವ್ಯ ಸಂಪೂರ್ಣವಾಗಿ ಅದರ ನೆರಳಿನಲ್ಲಿಯೇ ಬೆಳೆಯಿತು ಎಂದು ಹೇಳಲಾಗುವುದಿಲ್ಲ. ಅಡಿಗರು ಪಶ್ಚಿಮದ ಇಂತಹ ನವ್ಯತೆಯನ್ನು ಒಂದು ರೀತಿಯಾಗಿ ಅಮೂರ್ತ ತರಂಗದಂತೆ ಸ್ವೀಕರಿಸಿ ನಮ್ಮ ದೇಶ-ಕಾಲದ ಸಾಂಸ್ಕೃತಿಕ ಅಧೋಮುಖತೆಯ ನೆಲೆಯಲ್ಲಿ ಪರಿಭಾವಿಸಿದರು. ಮನುಷ್ಯನ ಅಂತರಂಗ ಮತ್ತು ಬಹಿರಂಗಗಳೆರಡರಲ್ಲಿಯೂ ಐಕ್ಯತೆಯನ್ನು ಕಳೆದುಕೊಂಡ ತಳಮಳದ ಸ್ಥಿತಿ ಅಡಿಗರ ಕಾವ್ಯದ ಪ್ರಧಾನ

ಆಸಕ್ತಿಯಾಯಿತು. ಹಾಗೆ ನೋಡಿದರೆ ಕನ್ನಡ ಕಾವ್ಯ ಪರಂಪರೆಗೆ ಪ್ರಖರ ರಾಜಕೀಯ ಕಾವ್ಯವನ್ನು ನೀಡಿದವರಲ್ಲಿ ಅಡಿಗರು ಅಗ್ರಗಣ್ಯರಾಗಿದ್ದಾರೆ.[೪]

ನವ್ಯ ಕುರಿತಂತೆ ಅಂದಿನ ನವೋದಯದ ಪ್ರಮುಖ ಕವಿಗಳಾದ ಕುವೆಂಪು ಅವರ ಅಭಿಪ್ರಾಯವನ್ನು ತೇಜಸ್ವಿಯವರ ಸಂದರ್ಶನದಲ್ಲಿ (೧೯೬೪) ಕಾಣಬಹುದು. 'ನವ್ಯ ಕಾವ್ಯದ ಬಗ್ಗೆ ತಮ್ಮ ಅಭಿಪ್ರಾಯವೇನು?' ಎಂಬ ಪ್ರಶ್ನೆಗೆ ಉತ್ತರವಾಗಿ ಕುವೆಂಪು

> "ಈಗ ಹೊಸ ಕವಿತೆಯ ಹೆಸರಿನಲ್ಲಿ ಅಸಹ್ಯ, ಭೀಭತ್ಸ, ವಿಕಾರಗಳ ಆರಾಧನೆ, ನಿಷ್ಕಾರಣ ಹಾಗು ಅನವಶ್ಯಕವಾದ ಅತಿ ವೈಯಕ್ತಿಕ ಸಂಕೇತ ವಿಧಾನಗಳು ಶುರುವಾಗಿವೆ. ಈ ಒಗಟುಗಳಂಥ ಕವಿತೆಗಳ ಅರ್ಥ ಪತ್ತೆ ಹಚ್ಚಿ ಅವುಗಳ ರಸಾಸ್ವಾದನೆ ಮಾಡುವಷ್ಟು ಯಾರು ತೊಂದರೆ ತಗೊಳ್ಳುತ್ತಾರೆ, ಎಲ್ಲೋ ಕೆಲವು ಕವಿತೆಗಳಲ್ಲಿ ಮಾತ್ರ ಅಂತಃಸತ್ವದ ಹೊಳಪು ಕಾಣುತ್ತದೆ"

ಎಂದು ಎಲ್ಲ ನವ್ಯ ಕವಿತೆಗಳನ್ನು ಓದಿದ್ದರ ಒಟ್ಟು ಪರಿಣಾಮವನ್ನು ಹೇಳಿದ್ದರು. ಆದರೆ ಸ್ವಲ್ಪ ತಡೆದು

> "ವೈಯಕ್ತಿಕವಾಗಿ ಹೇಳುವುದಾದರೆ ಶ್ರೀ ಗೋಕಾಕ್, ಅಡಿಗ ಮೊದಲಾದವರ ಕವಿತೆಗಳ ಬಗ್ಗೆ ನನಗೆ ಇಂಥದೇ ಎನ್ನುವ ಅಭಿಪ್ರಾಯ ಇಲ್ಲ. ನನಗೆ ಯಾವ ಬರವಣಿಗೆಯ ಬಗ್ಗೆಯೂ ಹೇಳಬೇಕೆನ್ನುವಷ್ಟು ಏನಾದರೂ ಅನಿಸುವುದು ಬಹಳ ನಿಧಾನ"[೫]

ಟಿ.ಎಸ್. ಎಲಿಯೆಟ್‌ರ ಕಾವ್ಯದ ಬಗ್ಗೆ ಕುವೆಂಪು ಯಾವತ್ತೂ ಶ್ರೇಷ್ಠ ಎನ್ನುವ ಅಭಿಪ್ರಾಯ ಇಟ್ಟುಕೊಂಡಿಲ್ಲ. ಅದನ್ನು ಕಾವ್ಯವೇ ಅಲ್ಲ ಎಂದು ತಿರಸ್ಕರಿಸದಿದ್ದರೂ ಅದು ಮಹತ್ತಾದುದು ಎಂದು ಅಣ್ಣ ಪರಿಗಣಿಸಿರಲಿಲ್ಲ. ಆದರೆ ಎಲಿಯೆಟ್ ನಮ್ಮ ಕಾಲದ ಶ್ರೇಷ್ಠ ವಿಮರ್ಶಕನೆಂದೂ, ಅತಿ ಪ್ರಮುಖ ಚಿಂತಕನೆಂದೂ ಮುಕ್ತ ಮನಸ್ಸಿನಿಂದ ಹೊಗಳುತ್ತಿದ್ದರು" ಎಂದು 'ಅಣ್ಣನ ನೆನಪು' ಪುಸ್ತಕದಲ್ಲಿ ತೇಜಸ್ವಿ ದಾಖಲಿಸುತ್ತಾರೆ. ಸಾಹಿತ್ಯ ವಿಮರ್ಶೆ ವಿಪುಲವಾಗಿ ಬೆಳೆದದ್ದು ನವ್ಯ ಸಂದರ್ಭದಲ್ಲೇ. ಎಂ.ಜಿ. ಕೃಷ್ಣಮೂರ್ತಿ, ಯು.ಆರ್. ಅನಂತಮೂರ್ತಿ, ಶಾಂತಿನಾಥ ದೇಸಾಯಿ, ಜಿ.ಎಚ್. ನಾಯಕ, ಸುಮತೀಂದ್ರ ನಾಡಿಗ, ಪಿ.ಲಂಕೇಶ್, ಬಿ.ದಾಮೋದರ ರಾವ್, ಗಿರಡ್ಡಿ ಗೋವಿಂದರಾಜ ಮೊದಲಾದವರ ಹೆಸರನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ನವ್ಯದ ಸಂದರ್ಭದಲ್ಲಿ ಹೊಸತೊಂದು ಕೃತಿ ಬಂದಿತೆಂದರೆ ಅದನ್ನು ವಿಮರ್ಶಿಸಲು ವಿಮರ್ಶಕರ ತಂಡವೇ ಸಿದ್ಧವಿರುತ್ತಿತ್ತು.

> "ಇಂತಹ ವಿಮರ್ಶೆಗಳು ಮುಖ್ಯವಾಗಿ ವಿಚಾರ ಸಂಕಿರಣಗಳಲ್ಲಿ, ಓದುವ ಪ್ರಬಂಧಗಳ ಹಾಗು ತದನಂತರದ ಚರ್ಚೆಯ ರೂಪದಲ್ಲಿ ಇದ್ದು ಕೆಲವೊಮ್ಮೆ ಅಡಿಗರ 'ಸಾಕ್ಷಿ'ಯಲ್ಲಿ ಅಥವ ಪ್ರತ್ಯೇಕವಾಗಿ ಪುಸ್ತಕದ ರೂಪದಲ್ಲಿ ಪ್ರಕಟಗೊಳ್ಳುತ್ತಿದ್ದವು. ಗಮನಿಸಬೇಕಾದ ಅಂಶವೆಂದರೆ ಇಂತಹ ಹಲವರು ತಮ್ಮನ್ನು ವಿಮರ್ಶಕ ಎಂದು ಗುರುತಿಸಿಕೊಳ್ಳದಿದ್ದರೂ ಈ ಸಾಹಿತ್ಯ ಕಾಯಕದಲ್ಲಿ ತೊಡಗಿರುತ್ತಿದ್ದುದು. ಇದರಲ್ಲಿ ಅನಂತಮೂರ್ತಿಯವರದ್ದು ಒಂದು ಮಾದರಿ ನಿದರ್ಶನ. ಅನಂತಮೂರ್ತಿ ಕವಿ, ಕತೆಗಾರ, ಕಾದಂಬರಿಕಾರ ಎಂದೇ ಪ್ರಸಿದ್ಧರಾಗಿದ್ದರೂ ನವ್ಯ ಸಾಹಿತ್ಯವನ್ನು ಅದರಲ್ಲೂ ಗೋಪಾಲಕೃಷ್ಣ ಅಡಿಗರ ಕವಿತೆಗಳನ್ನು ಹೊಸ ಜನಾಂಗದ ಓದಿಗೆ ಒಗ್ಗಿಸುವ ಆಗಿನ

ಕಾಲದ ಅತ್ಯಗತ್ಯ ಕೆಲಸ ಮಾಡಿದರು. ಇದೊಂದು ರೀತಿಯಲ್ಲಿ ಇಂಗ್ಲಿಷಿನಲ್ಲಿ ಟಿ.ಎಸ್.ಎಲಿಯೆಟ್ ಮಾಡಿದ ಕೆಲಸಕ್ಕೆ ಸಮನಾದುದು"[೬]

ಸೃಜನಶೀಲ ಲೇಖಕರಾಗಿದ್ದು ವಿಮರ್ಶೆಯ ಆಕರ್ಷಣೆಗೆ ಒಳಗಾಗಿ ಅದರಲ್ಲಿಯೇ ಮುಂದುವರೆದವರೂ ಇದ್ದಾರೆ. ಉದಾಹರಣೆಗೆ, ಕತೆಗಾರರಾಗಿ ಸಾಹಿತ್ಯಜೀವನ ಆರಂಭಿಸಿದ ನಂತರ ವಿಮರ್ಶೆಯಲ್ಲೇ ಪ್ರಧಾನ ಕೊಡುಗೆ ನೀಡಿದ ಗಿರಡ್ಡಿ ಗೋವಿಂದರಾಜ್.

'ವಿಮರ್ಶೆ ಏಕೆ ಬೇಕು' ಎಂಬುದಕ್ಕೆ ನವ್ಯದ ಪ್ರವರ್ತಕರೆನಿಸಿಕೊಂಡಿರುವ ಗೋಕಾಕರು

> "ಸಾಹಿತ್ಯದ ಅಜರಾಮರವಾದ ತತ್ವಗಳನ್ನು ರಕ್ಷಿಸಿ ಬೆಳೆಸುವುದೇ ವಿಮರ್ಶೆಯ ಆದ್ಯ ಕರ್ತವ್ಯವಾಗಿದೆ. ಒಂದು ರಾಷ್ಟ್ರದ ಜೀವನವನ್ನೂ, ಸಾಹಿತ್ಯವನ್ನೂ ಉಜ್ವಲತವನ್ನಾಗಿ ಮಾಡಲು ವಿಮರ್ಶೆ ಅಗತ್ಯ"

ಎಂದಿದ್ದಾರೆ.[೭]

೧೯೫೮ರ ಮುಂಬಯಿ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಟಿಯ ಅಧ್ಯಕ್ಷ ಭಾಷಣದಲ್ಲಿ ಗೋಕಾಕರು ಕನ್ನಡ ಕಾವ್ಯದಲ್ಲಿ ಆಧುನಿಕ ಯುಗವು ಮುಗಿಯುವ ಸಂದರ್ಭ ಬಂದಿದೆ. ನವ್ಯಯುಗ ಪ್ರಾರಂಭವಾಗಲಿದೆ. ೨೦ನೆಯ ಶತಮಾನದ ಪೂರ್ವಾರ್ಧವನ್ನು ಇನ್ನೊಂದು ವಾರದಲ್ಲಿನಾವು ದಾಟುತ್ತೇವೆ. ಉತ್ತರಾರ್ಧದ ಪ್ರಾರಂಭಕ್ಕೆ ಸರಿಯಾಗಿಯೇ ಎನ್ನುವಂತೆ ಜಗತ್ತಿನ ಪರಿಸ್ಥಿತಿ ಮಾರ್ಪಡುತ್ತಿದೆ. ಈ ನವೀನ ಪರಿಸ್ಥಿತಿಯೂ ಕನ್ನಡ ಕಾವ್ಯದಲ್ಲಿಯ ಒಂದು ಪರಂಪರೆಯ ಸಾಧನೆಯ ಕೃತಕೃತ್ಯತೆಯೂ ನವ್ಯ ಕಾವ್ಯದ ಅಗತ್ಯವನ್ನು ಸೂಚಿಸುತ್ತದೆ ಎಂದಿದ್ದರು. ಕನ್ನಡ ಕಾವ್ಯ ನವ್ಯತೆಯ ಪಥದಲ್ಲಿ ಸಾಗಬೇಕೆಂದು ಕರೆಕೊಟ್ಟರು. ಅದಕ್ಕೆ ಕಾರಣವನ್ನೂ ಅವರೇ ಸೂಚಿಸುತ್ತಾರೆ.

> "ಅಪೂರ್ಣ ವ್ಯಕ್ತಿತ್ವದಿಂದ ಉದ್ವಿಗ್ನರಾಗಿ ಒಬ್ಬರ ಮೇಲೊಬ್ಬರು ನಾವು ಹರಿಹಾಯುತ್ತಿದ್ದೇವೆ. ಪ್ರಳಯದೆಡೆಗೆ ಜಗತ್ತನ್ನು ಎಳೆದೊಯ್ಯುತ್ತಿದ್ದೇವೆ. ಆದಕಾರಣ ಸಾಹಿತ್ಯ ಬರಿ ಸತ್ಯ ಇಲ್ಲವೇ ಸೌಂದರ್ಯಕ್ಕೆ ಅಂಟಿಕೊಂಡು ನಿಲ್ಲದೆ ಮೇಲೆ ಹೇಳಿದ ಸಮ್ಯಕ್ತ್ವವನ್ನು ಚಿತ್ರಿಸಬೇಕಾಗಿದೆ. ಇದು ಅಮೃತತತ್ವಗಳ ಸಮೀಕರಣವಾಗಬೇಕಾಗಿದೆ. ಈ ಸಮೀಕರಣವೆ ನವ್ಯ ಸಾಹಿತ್ಯದ ಸೂತ್ರವಾಗಬೇಕಾಗಿದೆ. ಇದಕ್ಕೆ ನಿದರ್ಶನವಾಗಿ ಹಾಪ್‌ಕಿನ್ಸ್ ಕವಿಯ ಒಂದು ಕವನವನ್ನೂ ತಮ್ಮ ಕೆಲವು ಕವನಗಳನ್ನೂ ವಿವರಿಸಿದರು. ಅವರು ಉದಾಹರಿಸಿದ ಸಾಲುಗಳಲ್ಲಿ ನವ್ಯದ ಲಕ್ಷಣಗಳನ್ನು ಕಾಣಬಹುದಾಗಿದೆ:
>
> ಶಿಲೆಯೊಂದು ಬೀಳುತಿದೆ ಸಾಗರದಿ
> ಅದರ ಮೇಲೆ ಒಂದು ಹಣೆಗಣ್ಣು
> ಸಸಿಯೊಂದು ಇಳಿಯುತಿದೆ
> ಅದರ ಕುಸಿರೆಲೆಯ ತುಂಬ ಕುಣಿವ ಹೆಣ್ಣು
> ಜಾರಿ ರೆಂಬೆಯ ನಂಬಿ ಕುಳಿತಿರುವ ಮನದ
> ಮಂಗ ನೋಡುತಂಗ್ಯೆಯ್ಯ ಹುಣ್ಣು" [೮]

ಆಧುನಿಕ ಕನ್ನಡ ಸಾಹಿತ್ಯದ ರೂಪಗಳಾದ ನವೋದಯ ಹಾಗು ಪ್ರಗತಿಶೀಲ ಪಂಥಗಳು ೨೦ನೆಯ ಶತಮಾನದ ಮಧ್ಯಭಾಗದ ವೇಳೆಗೆ ತಮ್ಮ ಉಚ್ಛ್ರಾಯ ಸ್ಥಿತಿಯನ್ನು ತಲುಪಿ ಇಳಿಕೆಯ ಹಂತವನ್ನು ತಲುಪಿದ್ದವು. ಹಾಗೆಂದ ಮಾತ್ರಕ್ಕೆ ನವೋದಯ ಹಾಗು ಪ್ರಗತಿಶೀಲ ಕವಿಗಳು ತಮ್ಮ ಸೃಜನಶೀಲತೆಯನ್ನೇನೂ ಕಳೆದುಕೊಂಡಿರಲಿಲ್ಲ. ಬದಲಾಗಿ ಆ ಕಾಲಮಾನದ ಶ್ರೇಷ್ಠ ಕೃತಿಗಳು ಆಗಲೇ

ಹೊರಬಂದಿದ್ದವು.[೯] ಏಕೆಂದರೆ ಈ ಶತಮಾನದ ಮೊದಲರ್ಧ ಮುಗಿವ ಹೊತ್ತಿಗೆ ದೇಶದೆಲ್ಲೆಡೆ ಸ್ವಾತಂತ್ರ್ಯ ದೊರಕಿದ್ದ ಕಾರಣ, ಜನರಲ್ಲಿ ಒಂದು ರೀತಿಯ ಹೊಸತನ, ಸ್ವಾತಂತ್ರ್ಯ ಜೀವನ ದೊರೆತಿತ್ತು. ೧೯೫೬ರಲ್ಲಿ ಕರ್ನಾಟಕದ ಏಕೀಕರಣವೂ ಆಥಿದ್ದರಿಂದ ಕನ್ನಡಿಗರಿಗೆ ಇಮ್ಮಡಿ ಹುಮ್ಮಸ್ಸು ಹೊಸ ರಾಜ್ಯ/ಹೊಸ ದೇಶಕ್ಕೆ ಪೂರಕವಾಗಿ ಸಾಹಿತ್ಯದಲ್ಲೂ ಹೊಸಗಾಳಿ, ಬೀಸಲು ಆರಂಭಿಸಿತು. ಇಂತಹ ಸಂದರ್ಭದಲ್ಲಿ ಜನ್ಮತಾಳಿದ್ದು ನವ್ಯ. “ನವ್ಯಕಾವ್ಯ ಎಂಬ ಮಾತು ಆಧುನಿಕ ಕನ್ನಡ ಕಾವ್ಯದ ಒಂದು ಕಾಲಘಟ್ಟ ಎಂಬರ್ಥದಲ್ಲಿ ರೂಢಿಬದ್ಧವಾಗಿದೆ. ನವ್ಯಕಾವ್ಯ ಎಂಬ ಗ್ರಹಿಕೆ ಕನ್ನಡ ಕಾವ್ಯ ಪರಂಪರೆಗೆ ಒಂದು ಸಾವಿರದ ನೂರು ವರ್ಷಗಳಷ್ಟು ಹಳೆಯದು. ಪಂಪನು ತನ್ನ ಕಾವ್ಯವನ್ನು ‘ನವ್ಯಪ್ರಬಂಧಮಂ’ ಎಂದಿದ್ದಾನೆ. ಇಂದಿನ ಬಿತ್ತನೆಯು ಹೇಗೆ ನವ್ಯವೋ ಪಂಪನ ಕಾಲದ ಬಿತ್ತನೆಯೂ ನವ್ಯವೇ ಎಂಬುದನ್ನಿಲ್ಲಿ ಮರೆಯಬಾರದು”[೧೦] ನವ್ಯದ ಸಂದರ್ಭದಲ್ಲಿ ವಿಶೇಷವಾಗಿ ಸಾಹಿತ್ಯ ಪತ್ರಿಕೆಗಳ ಪ್ರಸಾರ ಕಡಿಮೆ ಇತ್ತಾದರೂ ಅವುಗಳ ಪರಿಣಾಮ ಹೆಚ್ಚಾಗಿದ್ದುದು ಕಂಡು ಬರುತ್ತದೆ. ಸಾಹಿತ್ಯಿಕ ಚರ್ಚೆಗಳು ಜಗಳಗಳು ಹೊಸ ತರ್ಕಗಳು ಹುಟ್ಟಿಕೊಳ್ಳುವುದರಲ್ಲಿ ಸಾಹಿತ್ಯಕ ಪತ್ರಿಕೆಗಳು ಮಹತ್ತರ ಪಾತ್ರ ವಹಿಸುತ್ತಿದ್ದವು. ನವ್ಯದ ಕಾಲ ಎನ್ನಬಹುದಾದ ಅಂದರೆ ೧೯೫೬ ರಿಂದ ೧೯೬೬ ರವರೆಗಿನ ಕಾಲಘಟ್ಟದಲ್ಲಿ ನಲವತ್ತಕ್ಕೂ ಹೆಚ್ಚು ಸಾಹಿತ್ಯ ಪತ್ರಿಕೆಗಳು ಪ್ರಕಟವಾಗಿದ್ದರೂ ಹೆಚ್ಚು ಕಾಲ ಉಳಿದ ನಿದರ್ಶನಗಳು ಕಡಿಮೆ. ಒಂದು ಅಥವ ಎರಡು ಸಂಚಿಕೆಗಳನ್ನು ತಂದ ಪತ್ರಿಕೆಗಳೇ ಹೆಚ್ಚು. ಅವುಗಳಲ್ಲಿ ಪದ್ಮನಾಭ ನಾಯಕ ಎಸ್.ರ ‘ಪರಾಗ (೧೯೫೮), ಪ್ರಭಾಕರ ಅನಗೋಳರ ಮಾಸಪತ್ರಿಕೆ ‘ಶಾರದ’(೧೯೫೯, ಬೆಳಗಾಂ), ಕೊ.ಶಿ. ಅಯ್ಯಂಗಾರ್ ಅವರ ಸಂಪಾದಕತ್ವದ ‘ಹೊಂಬೆಳಕು’(೧೯೬೧, ಬೆಳಗಾಂ), ಗೋಪಾಲಕೃಷ್ಣ ಅಡಿಗರ ‘ಸಾಕ್ಷಿ’, ಅನಂತಮೂರ್ತಿಯವರ ‘ರುಜುವಾತು’, ರಾಘವೇಂದ್ರ ಪಾಟೀಲರ ‘ಸಾಹಿತ್ಯ ಸಂವಾದ, ಚಂಪಾರ ‘ಸಂಕ್ರಮಣ’, ಆರ್.ಜಿ. ಹಳ್ಳೀ ನಾಗರಾಜರ ‘ಅನ್ವೇಷಣೆ’, ಶೂದ್ರ ಶ್ರೀನಿವಾಸರ ‘ಶೂದ್ರ’, ಜಿ.ಟಿ.ಜೋಷಿಯವರ ‘ಮನ್ವಂತರ’ ಮುಂತಾದ ಪತ್ರಿಕೆಗಳು ಈ ಚಳವಳಿ ಮುಂಚೂಣಿಯಲ್ಲಿದ್ದ ಹಾಗು ನವ್ಯ ಸಂದರ್ಭದಲ್ಲಿ ಪ್ರಭಾವ ಬೀರಿದ ಪತ್ರಿಕೆಗಳಾಗಿವೆ.

ನವ್ಯಕಾವ್ಯದ ಕುರಿತು ಸಮನ್ವಯ ಕವಿ ಜಿ.ಎಸ್. ಶಿವರುದ್ರಪ್ಪನವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಬಹುದು,

> “ಕನ್ನಡಕಾವ್ಯ ವಾಸ್ತವವನ್ನು ಅದು ಇದ್ದಂತೆಯೇ ಒಪ್ಪಿಕೊಂಡು ಅದರ ಸಮಸ್ತಾನುಭವದಲ್ಲಿ ಪಾಲ್ಗೊಳ್ಳುವುದರಲ್ಲಿಯೇ ಜೀವಂತಿಕೆ ಇದೆ ಎನ್ನುವ ಕಳಕಳಿಯನ್ನು ಪ್ರಕಟಿಸಿದ್ದು ಇದೇ ಮೊದಲು ಎನ್ನುವ ಮಾತು ಸತ್ಯ. ಅಧ್ಯಾತ್ಮವೋ ಆದರ್ಶವೋ ಬೇರೆ ಯಾವ ಪರಂಪರಾಗತವಾದ ಅಥವ ವ್ಯಕ್ತಿನಿರ್ಮಿತ ಪ್ರಭುತ್ವಕ್ಕೆ ತಾನು ಬದ್ಧನಾಗದೆ ತಾನು ತನ್ನೊಳಗನ್ನು ತನ್ನ ಹೊರಗನ್ನು ಮುಖಾಮುಖಿ ನೋಡುತ್ತೇನೆಂಬ ಧೈರ್ಯ ಹಾಗು ಪ್ರಾಮಾಣಿಕತೆಯನ್ನು ಕಾವ್ಯ ಮುಖೇನ ಪ್ರಕಟಿಸಿದ್ದು ಇದೇ ಮೊದಲು. ಇದರಿಂದಾಗಿ ಒಂದು ಬಗೆಯ ಅಸ್ತಿತ್ವವಾದೀ ಮನೋಧರ್ಮವೂ ಜೊತೆಗೆ ನಮ್ಮ ಬದುಕಿಗೆ ಅಗತ್ಯವಾದ ವಿಮರ್ಶನ ಪ್ರಜ್ಞೆಯೂ ಬೆಳೆದದ್ದು ತುಂಬ ಸ್ವಾಗತಾರ್ಹವಾಗಿದೆ”[೧೧]

ಆಂಗ್ಲ ಕವಿಗಳಾದ ಎಲಿಯೆಟ್, ಆಡೆನ್, ಡಿಲಾನ್ ಥಾಮಸ್ ಮೊದಲಾದವರಿಂದ ಅಂದರೆ ಪಾಶ್ಚಿಮಾತ್ಯ ನವ್ಯಕಾವ್ಯದ ಪ್ರಭಾವದಿಂದ ಪ್ರೇರಿತವಾದದ್ದು ಕನ್ನಡ ನವ್ಯ ಕಾವ್ಯ. ಈ ಮಾತನ್ನು ಅಡಿಗರ 'ನಡೆದು ಬಂದ ದಾರಿ'ಯ ಮುನ್ನುಡಿಯಲ್ಲಿ ಕಾಣಬಹುದು.[೧೨]

೧೯ನೆಯ ಶತಮಾನದ ಆಂಗ್ಲಕವಿಗಳಾದ ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್ ಮೊದಲಾದ ರೊಮ್ಯಾಂಟಿಕ್ ಕವಿಗಳಿಂದ ಪ್ರೇರಿತವಾದ ನಮ್ಮ ಆಧುನಿಕ ಕನ್ನಡ ಕಾವ್ಯ ಆ ಸಂಪ್ರದಾಯದಲ್ಲಿ ತಾನು ಮಾಡಬೇಕಾದ ಕೆಲಸವನ್ನು ಮಾಡಿ ಮುಗಿಸಿದೆ. ಆ ಸಂಪ್ರದಾಯದ ಸತ್ಯ ಈಗ ತೀರಿದೆ ಇಂತಹ ಕಾಲದಲ್ಲಿ ನವ್ಯಕ್ಕೆ ಮತ್ತೆ ವಾಸ್ತವದ ರಕ್ತದಾನ ನಡೆಯಬೇಕು, ಕಾವ್ಯದಲ್ಲಿ ಮತ್ತೆ ಮಣ್ಣಿನ ವಾಸನೆ ಹೊಡೆಯಬೇಕು. ಈ ದೃಷ್ಟಿಯಿಂದ ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಎಲಿಯೆಟ್, ಆಡೆನ್ ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿ ಪಡೆಯಬೇಕಾದದ್ದು ಅತ್ಯಗತ್ಯ. ಇದನ್ನು 'ನಡೆದು ಬಂದ ದಾರಿ'ಯ ಮೊದಲ ಚರಣದಲ್ಲೇ ಕಾಣಬಹುದು:

ನಡೆದು ಬಂದ ದಾರಿ ಕಡೆಗೆ
ತಿರುಗಿಸಬೇಡ
ಕಣ್ಣು –
ಹೊರಳಿಸಬೇಡ

ಎಂಬ ಮಾತುಗಳು ಸ್ವಂತ ವ್ಯಕ್ತಿತ್ವವುಳ್ಳ ಒಬ್ಬ ಕವಿ ಬಹುಮಟ್ಟಿಗೆ ಸಾಧಿಸಬಹುದಾದ ನಿಶ್ಚಯ ಎನ್ನಬಹುದಲ್ಲದೆ ಅದನ್ನು ಸಾಧಿಸಿ ತೋರಿಸಿದವರು ಅಡಿಗರು. ಕನ್ನಡ ನವ್ಯಕಾವ್ಯಕ್ಕೆ ಪಾಶ್ಚಾತ್ಯ ಕಾವ್ಯವನ್ನು ಅನುಸರಿಸಿದರೂ ಕಾವ್ಯಕ್ಕೆ ಈ ನೆಲದಲ್ಲಿ ಬೇರೂರಿದ ಚಿಂತನೆ ಇರಬೇಕು ಎಂಬ ಆಶಯ ಅಡಿಗರದ್ದು. ಇದು ಅವರ ಈ ಮಾತುಗಳನ್ನು ಗಮನಿಸಿದರೆ ತಿಳಿಯುತ್ತದೆ,

> "'ನನಗೂ ಆಂಗ್ಲ ಕವಿಗಳಿಗೂ ಸಮಾನವಾದದ್ದು ಏನಾದರೂ ಇದ್ದರೆ ಅದು ಬಹುಶಃ ಇರುವ ವ್ಯವಸ್ಥೆ ಒಡೆಯುತ್ತಿರುವುದರ ಪ್ರಜ್ಞೆ, ವ್ಯಕ್ತಿವಿಶೇಷದ ಮೂಲ ಸ್ವಾತಂತ್ರ್ಯಗಳ ಬಗ್ಗೆ ಆಳವಾದ ಕಾಳಜಿ, ಬದುಕಿನ ನಿರಂತರತೆಯ ಅರಿವು. ಕಾವ್ಯ ವಾಚಾಳಿತನವಾಗಬಾರದು, ಕೃತಿಯಾಗಬೇಕು ಎಂಬ ಹಂಬಲ, ಪ್ರಯತ್ನ ಇಷ್ಟೇ'.
>
> ಅಡಿಗರು ಪಶ್ಚಿಮದ ಇಂತಹ ನವ್ಯತೆಯನ್ನು ಒಂದು ರೀತಿಯಾಗಿ ಅಮೂರ್ತ ರಂಗದಂತೆ ಸ್ವೀಕರಿಸಿ ತಮ್ಮ ದೇಶ–ಕಾಲದ ಸಾಂಸ್ಕೃತಿಕ ಅಧೋಮುಖತೆಯ ನೆಲೆಯನ್ನು ಪರಿಭಾವಿಸಿದರು. ಮನುಷ್ಯನ ಅಂತರಂಗ ಮತ್ತು ಬಹಿರಂಗ ಎರಡರಲ್ಲಿಯೂ ಐಕ್ಯತೆಯನ್ನು ಕಳೆದುಕೊಂಡ ತಳಮಳದ ಸ್ಥಿತಿ, ಅಡಿಗರ ಕಾವ್ಯದ ಪ್ರಧಾನ ಆಸಕ್ತಿಯಾಗಿತ್ತು. ಎಲಿಯೆಟ್‌ನಲ್ಲಿ ಧಾರ್ಮಿಕ ಆಶಯ ಪ್ರಧಾನವಾಗಿ ಕಾಣಿಸಿಕೊಂಡಿದೆ. ಅಡಿಗರಲ್ಲಿ ವೈಯಕ್ತಿಕ ಪ್ರಾಮಾಣಿಕತೆ ಮತ್ತು ಸಾಮಾಜಿಕ ಜೀವನದಲ್ಲಿ (ರಾಜಕಾರಣದಲ್ಲಿ) ಕಾಣಿಸಿಕೊಳ್ಳಬೇಕಾದ ಮೌಲ್ಯಗಳ ಬಗೆಗಿನ ಆಶಯ ಪ್ರಧಾನವಾಗಿ ಬರುತ್ತದೆ''[೧೩]

ಐತಿಹಾಸಿಕವಾಗಿ ಗೋಕಾಕರನ್ನು ನವ್ಯಕಾವ್ಯದ ಗುರು ಎಂದು ಗುರುತಿಸಿದರೂ ಪ್ರಗತಿಶೀಲರ ಆಲೋಚನೆಗಳು, ಸಂವೇದನೆಗಳಲ್ಲಿಯೇ ಒಂದು ರೀತಿಯ ಪ್ರತಿಭಟನೆ, ಆಧುನಿಕತೆ ಇರುವುದನ್ನು ಗುರುತಿಸಬಹುದಾಗಿದೆ ಎಂದು ಅಮೂರರಂತಹ ವಿಮರ್ಶಕರು ಈಗಾಗಲೇ ಗುರುತಿಸಿದ್ದಾರೆ.[೧೪] ಜಿ.ಎಸ್.ಎಸ್.ಅವರು ಗುರುತಿಸುವಂತೆ ಪ್ರಗತಿಶೀಲ ಕಾವ್ಯ ಎಂದು ಕರೆಯಬಹುದಾದ ಸ್ವತಂತ್ರ ಘಟ್ಟದ

ನಿರ್ಮಾಣವಾಗಲಿಲ್ಲ ಎನ್ನುವುದು ನಿಜ. ಏಕೆಂದರೆ ಪ್ರಗತಿಶೀಲರು ಮುಖ್ಯವಾಗಿ ಕಾದಂಬರಿ ಕ್ಷೇತ್ರದಲ್ಲಿಯೇ ಹೆಚ್ಚು ಕೆಲಸ ಮಾಡಿದವರು. ಪ್ರಮುಖ ನವ್ಯ ಕವಿಗಳಾದ ಅಡಿಗ, ಎಕ್ಕುಂಡಿ, ಶರ್ಮ ಮುಂತಾದವರು ಈ ಚಳುವಳಿಯ ಹಾದಿಯಲ್ಲಿ ಸಾಗಿ ಬಂದವರಾದರೂ ಆ ಕಾವಿನಲ್ಲೇ ಉಳಿಯದೆ ಅದರಿಂದ ಮುಂದೆ ಸಾಗಿ ಬಂದರು. ಪ್ರಗತಿಶೀಲರು ತಮ್ಮ ಚಿಂತನೆಗಳಿಗೆ ರಷ್ಯನ್ ಸಾಹಿತ್ಯದತ್ತ ಮುಖ ಮಾಡಿಕೊಂಡರೆ ಕನ್ನಡದ ನವ್ಯ ಕವಿಗಳು ಮತ್ತೆ ಇಂಗ್ಲಿಷ್ ಸಾಹಿತ್ಯದತ್ತ ಮುಖ ಮಾಡಿಕೊಂಡರು. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು 'ನವ್ಯತೆ' ಕನ್ನಡವನ್ನು ಎರಡು ಮಾರ್ಗಗಳಲ್ಲಿ ಪ್ರವೇಶಿಸಿತು. ಒಂದು, ಗೋಕಾಕ ಮಾರ್ಗ, ಮತ್ತೊಂದು ಅಡಿಗರ ಮಾರ್ಗ. ತಮ್ಮ ಮಾರ್ಗವನ್ನು 'ನವ್ಯ' ಎಂದು ಕರೆದುಕೊಂಡ ಗೋಕಾಕರು ಅಡಿಗರ ಮಾರ್ಗವನ್ನು 'ಅತಿನವ್ಯ' ಎಂದು ಕರೆದರು".[೧೫] "೧೯೬೦ರ ಪ್ರಜಾವಾಣಿಯ ಸಂದರ್ಶನದಲ್ಲಿ ಅಡಿಗರು 'ಗೋಕಾಕರ ಕಾವ್ಯ ನವ್ಯವಾದರೆ ನನ್ನದು ನವ್ಯವಲ್ಲ', 'ಗೋಕಾಕರದು ಕವಿತೆಯೇ ಅಲ್ಲ' ಎಂದಿದ್ದು ಕಂಡುಬರುತ್ತದೆ. ಗೋಕಾಕರಿಗೆ ನವ್ಯತೆ ಕೇವಲ ತಂತ್ರದ ನವ್ಯತೆಯಾಗಿತ್ತು. ಆದರೆ ಅಡಿಗರಿಗೆ ಬದುಕನ್ನು ನೋಡುವ ರೀತಿಯಲ್ಲಿಯೇ ಆಗುವ ಬದಲಾವಣೆ ನವ್ಯವಾಗಿತ್ತು[೧೬]

೧೯೨೦ರಿಂದ ಸ್ವಾತಂತ್ರ್ಯ ಬರುವ ತನಕದ ಕಾಲ ಆದರ್ಶನಿಷ್ಠೆಯ ಸರಳ ಕಾಲ. ಆಸೆಯ, ಆವೇಶದ, ಹೋರಾಟದ ಬಿಗಿದ ಮನಸ್ಸಿನ ತುಟಿ ಕಚ್ಚಿದ ಸಂಘಟನೆಯ ಕಾಲ ಅದು. ಒಟ್ಟಿನಲ್ಲಿ ಕಳೆದ ತಲೆಮಾರಿನ ಕವಿತೆ ಮುಖ್ಯವಾಗಿ ಏಕಮುಖವಾಗಿತ್ತು. ಸ್ವಾತಂತ್ರ್ಯದ ವಾಂಛೆಯೋ, ಪ್ರಗತಿಯ ಸ್ವಪ್ನವೋ, ಪುರಾತನ ಸಂಸ್ಕೃತಿಯ ಪುನರುತ್ಥಾನದ ಕನಸೋ ಅಂತೂ ಇಂತಹ ಒಂದು ಆದರ್ಶ ಜನದ ಮನಸ್ಸಿನಲ್ಲಿ ಏಕಸೂತ್ರತೆಯನ್ನು ತಂದಂತೆ ಕಾವ್ಯದಲ್ಲಿ ಕೂಡ ಒಂದು ಸರಳ ಸಮರಸ ಕಂಡುಬಂದಿತು[೧೭]

ನಮ್ಮ ಹಿರಿಯರು ನಿಂತಿದ್ದ ನೆಲದ ಮೇಲೆ ನಾವುನಿಂತಿದ್ದರೂ ಅದನ್ನು ನಾವು ಕಾಣುವ ದೃಷ್ಟಿಯಲ್ಲಿ ಮಾತ್ರ ಈಗ ಮಹತ್ತರ ಬದಲಾವಣೆಯಾಗಿದೆ. ಹೀಗೆ ಸಾಹಿತ್ಯದಲ್ಲೂ ಬದಲಾವಣೆಯ ಗಾಳಿ ಬೀಸುತ್ತಿದೆ..ಈ ಹೊಸ ಕಾವ್ಯದಲ್ಲಿ ನಾನಾ ಪ್ರಯೋಗಗಳು ನಡೆದವು, ಅವು ಕೃತಾರ್ಥವಾದವು. ಈ ರೀತಿಯಲ್ಲಿ ಕಾವ್ಯ ರಚನೆ ಕಳೆದ ಮಹಾಯುದ್ಧದವರೆಗೂ ನಡೆಯಿತು. ಆದರೆ ಈ ಕವಿತ್ ಕಳೆಗುಂದುತ್ತಿದೆ. ಈ ಕಾಲದಲ್ಲಿ ಆದರ್ಶದ ಬಿಸಿ ತಪ್ಪಿ ಬಾಳು ಸಡಿಲವಾಗಿದೆ. ಮತ್ತೆ ವಿಚಾರಗಳ ಸಂಕರ, ತುಮುಲ, ಹೆಚ್ಚಿದೆ, ಸುಪ್ತವಾಗಿದ್ದ ದುರ್ಗುಣಗಳೆಲ್ಲ ಮತ್ತೆ ಹೆಡೆಯೆತ್ತಿವೆ..ಜಡ ಸ್ವಾರ್ಥ ಕಪಟ ಲಾಭಬಡಕುತನ ಅಶಾಂತಿ ಬಡತನ ಅಸತ್ಯ ವಿರಸಗಳು ತಾಂಡವವಾಡತೊಡಗಿವೆ..ಯುದ್ಧದ ದುಷ್ಪರಿಣಾಮದಿಂದ ಇಂಗ್ಲೆಂಡಿನಲ್ಲಿ ನಿರಾಶೆ ಕವಿದಿದ್ದರೆ ಸ್ವಾತಂತ್ರ್ಯ ಇನ್ನೂ ಸಫಲವಾಗದುದನ್ನು ಕಂಡು ನಮ್ಮಲ್ಲಿ ವೈರಾಗ್ಯ ಮೂಡುತ್ತಿದೆ.[೧೮]

ಇದೇ ರೀತಿ ಬಿ.ಸಿ.ರಾಮಚಂದ್ರಶರ್ಮರು ನವ್ಯದ ಆಗಮನದ ಕುರಿತು,

> "ಕನ್ನಡದ ರೊಮ್ಯಾಂಟಿಕ್ ಸಂಪ್ರದಾಯದ ಸ್ಥಾಪನೆಯಾಯಿತು, ಭಾವಗಳ ಏರಿಳಿತಕ್ಕೆ ತಕ್ಕುದಾದ ನುಡಿಗಟ್ಟನ್ನು ರೂಪಿಸಿಕೊಂಡ ಕವಿ ತನ್ನನ್ನು ತನ್ನ ಹೃದಯದ ರಾಗ ಭಾವಗಳನ್ನು ಕಾವ್ಯವಿಷಯವನ್ನಾಗಿ ಮಾಡಿಕೊಳ್ಳುವ ಕೆಚ್ಚುತೋರಿದ. ತನ್ನ ನೋವು ನಲಿವು, ಆಸೆ, ನಿರಾಸೆಗಳನ್ನು ನುಡಿಯತೊಡಗಿದ,.. ಆದರೆ ಇಂದು ಸಂವೇದನೆಗಳು ಬದಲಾಗಿವೆ, ನವ್ಯಕಾವ್ಯ ಇಂಗ್ಲಿಷ್ ಕಾವ್ಯದ ಅನುಕರಣೆಯಲ್ಲ, ಅಭಿವ್ಯಕ್ತಿ ಸಾಧನವಾಗುವುದಾದರೆ ಇಂಗ್ಲಿಷ್ ಕಾವ್ಯದ ಹೆಜ್ಜೆಯ ಹಿಂದೆ ಹೆಜ್ಜೆ ಇಡುವುದರಲ್ಲಿ ಏನೂ ಅನುಮಾನವಿಲ್ಲ ಎಂದೇ ನನ್ನ ನಂಬುಗೆ"

ಎಂದಿದ್ದಾರೆ[೧೯]

ಪ್ರಗತಿಶೀಲ ಚಳವಳಿ ತಮ್ಮ ಮೇಲೆ ಬೀರಿದ್ದ ಪ್ರಭಾವವನ್ನು ಕುರಿತು ಅಡಿಗರು "ನಮ್ಮ ರೊಮ್ಯಾಂಟಿಕ್ ಸಾಹಿತ್ಯ ಮುಖ್ಯವಾಗಿ ಗಾಂಧೀಜಿಯ ಪ್ರಭಾವಕ್ಕೆ ಒಳಪಟ್ಟು ದೇಶಭಕ್ತಿಯ ಕವನಗಳಾಗಿಯೋ ಕವಿಯ ಸ್ವಂತ ಭಾವನೆಗಳ ಆವಿಷ್ಕಾರವಾಗಿಯೋ ಪ್ರಕೃತಿ ಸೌಂದರ್ಯದ ಪರವಾಗಿಯೋ ರಚಿತವಾಗುತ್ತಿತ್ತು. ನಾನು ಆ ರೀತಿಯಲ್ಲೇ ನನ್ನ ಮೊದಲ ಕವನಗಳನ್ನು ಬರೆದೆ. ಅನಂತರ ನಮ್ಮ ಸಾಹಿತ್ಯದಲ್ಲಿ ಒಂದು ಬದಲಾವಣೆ ಕಂಡುಬರತೊಡಗಿತು. ಇದನ್ನು ಪ್ರಗತಿಶೀಲ ಎಂದು ಕರೆಯಲಾಯಿತು. ಇದು ಮುಖ್ಯವಾಗಿ ಸಾಮ್ಯವಾದ ಸಮಾಜವಾದಗಳ ಪ್ರಭಾವದಿಂದ ರೂಪುಗೊಳ್ಳತೊಡಗಿತ್ತು. ನಮ್ಮ ಲೇಖಕರಲ್ಲಿ ಹೊಸತನ್ನು ಬಯಸುವ ಕವಿಗಳೂ ಗದ್ಯಲೇಖಕರೂ ಈ ಹೊಸ ಮಾರ್ಗವನ್ನು ತುಳಿಯುವುದೇ ಸಾರ್ಥಕ ಸಾಹಿತ್ಯ ರಚನೆ ಅದು ನಿಜವಾಗಿ ಕೃತಾರ್ಥವಾಗುತ್ತದೆ ಎಂದು ಭಾವಿಸಿದರು. ೧೯೪೦ರ ದಶಕದ ಆದಿಭಾಗದಲ್ಲಿ ನಾನೂ ಪ್ರಗತಿಶೀಲ ಎನ್ನಬಹುದಾದ ಹಲವು ಕವನಗಳನ್ನು ಬರೆದೆ. ಬಹುಶಃ 'ನಾವೆಲ್ಲರೂ ಒಂದೆ ಜಾತಿ', 'ನೆನೆ ನೆನೆ ಆ ದಿನವ', 'ಕಟ್ಟುವೆವು ನಾವು', 'ಹುತಾತ್ಮರನ್ನು ನೆನೆದು', ಮುಂತಾದ ಕವನಗಳು ಈ ಕಾಲದಲ್ಲೇ ಬರೆದಿರಬೇಕು. ಇವುಗಳಲ್ಲಿ ಕೆಲವು ಕಟ್ಟೀಮನಿ ಸಂಪಾದಿಸುತ್ತಿದ್ದ 'ಉಷಾ' ಮತ್ತು 'ಸ್ವತಂತ್ರ' ಎಂಬ ಮಾಸಪತ್ರಿಕೆಯಲ್ಲಿ ಪ್ರಕಟವಾದವು" ಎಂದಿದ್ದಾರೆ.[೨೦]

ವಿ.ಕೃ.ಗೋಕಾಕ್ ಹಾಗು ಅಡಿಗರು ಈ ಸಾಹಿತ್ಯಮಾರ್ಗಕ್ಕೆ ಅಡಿಪಾಯ ಹಾಕಿದವರಾದರೂ ಕಾಲಾಂತರದಲ್ಲಿ ಅಡಿಗರೇ ಈ ಕಾಲಘಟ್ಟದ ಮುಖ್ಯ ಧ್ವನಿಯಾದರು. ಲಂಕೇಶರೆ ಹೇಳುವಂತೆ "ಅಡಿಗರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ". ಕನ್ನಡ ಕಾವ್ಯಪರಂಪರೆಯ ಜೀವಸತ್ವವನ್ನು ಹೀರಿಕೊಂಡೇ ಬೆಳೆದ ಅವರ ಕಾವ್ಯ ಅವರ ಅನೇಕ ಮಿತಿಗಳ ನಡುವೆಯೂ ಹೊಸ ಕಾಂತಿಯನ್ನು ತಂದುಕೊಟ್ಟಿತು. ಹೀಗಾಗಿ ನವ್ಯಕಾವ್ಯದ ಶ್ರೇಷ್ಠ ಪ್ರತಿನಿಧಿ ಎಂದು ಅಡಿಗರನ್ನು ಗುರುತಿಸಬಹುದಾಗಿದೆ.

ನವ್ಯ ಸಾಹಿತಿಗಳ ಪಟ್ಟಿ ಕನ್ನಡದಲ್ಲಿ ದೀರ್ಘವಾದುದಾದರೂ ಅದರಲ್ಲಿ ಬಿ.ಸಿ.ರಾಮಚಂದ್ರ ಶರ್ಮ, ಕ.ವೆಂ. ರಾಜಗೋಪಾಲ, ಲಂಕೇಶ್, ತೇಜಸ್ವಿ, ಅನಂತಮೂರ್ತಿ ಮುಂತಾದ ಪ್ರಮುಖರನ್ನು ಹೆಸರಿಸಬಹುದಾಗಿದೆ. ಬಂಡಾಯ, ದಲಿತ, ಸ್ತ್ರೀಸಂವೇದನೆ ಇಂತಹ ಹೊಸ ಪ್ರಕಾರಗಳು ಪ್ರಾರಂಭವಾದ ನಂತರ ನವ್ಯ ಕಾಣುತ್ತಿಲ್ಲವಾದರೂ ಹೊಸ ಪೀಳಿಗೆಯ ಕೆಲವು ಪ್ರಮುಖರಲ್ಲಿ ನವ್ಯದ ಪ್ರಭಾವವನ್ನು ಕಾಣಬಹುದಾಗಿದೆ. ಉದಾಹರಣೆಗೆ, ಅಬ್ದುಲ್ ರಶೀದ್, ಮೊಗಳ್ಳಿ ಗಣೇಶ್, ಅಶೋಕ ಹೆಗಡೆ ಇತ್ಯಾದಿ. ನವ್ಯದ ಸಂದರ್ಭದಲ್ಲಿ ಗುರುತಿಸಬಹುದಾದ ಪ್ರಮುಖ ಅಂಶವೆಂದರೆ ಕಾವ್ಯ, ಕತೆ, ಕಾದಂಬರಿ, ವಿಮರ್ಶೆ ಹೀಗೆ ಎಲ್ಲ ಸಾಹಿತ್ಯ ಪ್ರಕಾರಗಳು ಸಮರ್ಥವಾಗಿ ಪ್ರತಿನಿಧಿಸಲ್ಪಟ್ಟಿರುವುದು.

ಅಡಿಟಿಪ್ಪಣಿಗಳು

೧. ಕೆ.ವಿ. ತಿರುಮಲೇಶ್: ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ?, ವಿಜಯಕರ್ನಾಟಕ, ೨೬ನೆ ಜುಲೈ, ೨೦೦೮)

೨. ಡಾ. ಕೆ. ಕೇಶವಶರ್ಮ: ಸಾಹಿತ್ಯ ವಿಮರ್ಶೆಯ ಕಾರ್ಯ, ಹೊಸತು, ನವೆಂಬರ್ ೨೦೦೬)

೩. ಜಿ.ಎಚ್. ನಾಯಕ: ಮತ್ತೆ ಮತ್ತೆ ಪಂಪ, ಸಾಪ್ತಾಹಿಕ ವಿಜಯ ವಿಜಯ ಕರ್ನಾಟಕ, ಭಾನುವಾರ, ೧೮ನೇ ಜನವರಿ, ೨೦೦೯).

೪. ರಾಘವೇಂದ್ರ ಪಾಟೀಲ: ಪಶ್ಚಿಮದ ನವ್ಯ ಪರಿಕಲ್ಪನೆ ಮತ್ತು ಅಡಿಗರ ನವ್ಯತೆ, ಅಡಿಗ: ಸಂಸ್ಕೃತಿ ಅನುಸಂಧಾನ, ಪುಟ ೯೮)

೫. ಸುಮತೀಂದ್ರ ನಾಡಿಗ್: ಗೋಪಾಲಕೃಷ್ಣ ಅಡಿಗ, ಸಂಸ್ಕೃತಿ ಅನುಸಂಧಾನ, ಕನ್ನಡ ಸಾಹಿತ್ಯ ಪರಿಷತ್ತು, ಪುಟ ೧೦೧-೧೦೨).

೬. ಕೆ.ವಿ. ತಿರುಮಲೇಶ್: ಕನ್ನಡದಲ್ಲಿ ವಿಮರ್ಶಕರ ಸಂಖ್ಯೆ ಕಡಿಮೆಯಾಗುತ್ತಿದೆಯೇ?, ವಿಜಯಕರ್ನಾಟಕ, ೨೬ನೆ ಜುಲೈ, ೨೦೦೮).

೭. ಗೋಕಾಕ್, ಸಾಹಿತ್ಯದಲ್ಲಿ ಪ್ರಗತಿ, ಪುಟ ೭)

೮. ಎಲ್.ಎಸ್.ಶೇಷಗಿರಿ ರಾವ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ಪುಟ ೭೬-೭೭)

೯. ನಿರಂಜನ ವಾನಳ್ಳಿ: ಕನ್ನಡದಲ್ಲಿ ಕಲೆ-ಸಾಹಿತ್ಯ ಪತ್ರಿಕೆಗಳು, ೨೦೦೧, ಪುಟ ೧೧೧)

೧೦. ಚಂದ್ರಶೇಖರ ನಂಗಲಿ: ಅಡಿಗ, ಸಂಸ್ಕೃತಿ ಅನುಸಂಧಾನ, ನವ್ಯ ಕಾವ್ಯದ ತಾತ್ವಿಕ ನೆಲೆಗಳು, ಪುಟ ೫೫).

೧೧. ಜಿ.ಎಸ್. ಶಿವರುದ್ರಪ್ಪ, ಹೊಸಗನ್ನಡ ಕಾವ್ಯ, ಚಿನ್ನದ ಬೆಳೆಸು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು)

೧೨. ಧಾರವಾಡದ ಆಕಾಶವಾಣಿಯಲ್ಲಿ ಅಡಿಗರು ಮಾಡಿದ ಭಾಷಣ ೧೯೫೨)

೧೩. ರಾಘವೇಂದ್ರ ಪಾಟೀಲ: ಪಶ್ಚಿಮದ ನವ್ಯ ಪರಿಕಲ್ಪನೆ ಮತ್ತು ಅಡಿಗರ ನವ್ಯತೆ, ಅಡಿಗ: ಸಂಸ್ಕೃತಿ ಅನುಸಂಧಾನ, ಪುಟ ೯೮)

೧೪. ಡಾ.ಮಂಗಳಾ ಪ್ರಿಯದರ್ಶಿನಿ: ಆಧುನಿಕ ಕನ್ನಡ ಕಾವ್ಯದ ಸ್ವರೂಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಪುಟ ೫೧).

೧೫. ನವ್ಯತೆ, ನರಹಳ್ಳಿ ಬಾಲಸುಬ್ರಹ್ಮಣ್ಯ, ಪುಟ ೨೭)

೧೬. ಡಾ.ಸುಮತೀಂದ್ರ ನಾಡಿಗ, ಅಡಿಗ ಸಂಸ್ಕೃತಿ ಅನುಸಂಧಾನ, ೨೦೦೫, ಪುಟ ೧೦೧)

೧೭. ಅಡಿಗ: ಹೊಸದಿನದ ಆಹ್ವಾನ, ಜಯಕರ್ನಾಟಕ, ೧೯೯೫, ಪುಟ ೨)

೧೮. ಗೋಪಾಲಕೃಷ್ಣ ಅಡಿಗ: ಇಂದಿನ ಕಾವ್ಯದ ಹಿನ್ನೆಲೆ, ಕರ್ಮವೀರ, ೧೦-೧೧-೧೯೫೨)

೧೯. ಬಿ.ಸಿ. ರಾಮಚಂದ್ರಶರ್ಮ: ನವ್ಯಕಾವ್ಯ, ಜನಪ್ರಗತಿ, ೧೮-೧೦-೧೯೫೩)

೨೦. ಅಡಿಗ: ನೆನಪಿನ ಗಣಿಯಿಂದ, ಅನುಭವ ಕಥನ, ಪ್ರಿಸಂ ಬುಕ್ಸ್ ಪ್ರೈ.ಲಿ., ಬೆಂಗಳೂರು, ಪುಟ ೧೧೬)

೩.ಪತ್ರಿಕೆಗಳು ಮತ್ತು ಕನ್ನಡ ನವ್ಯಕಾವ್ಯ – ಅನುಸಂಧಾನದ ವಿಭಿನ್ನ ಸ್ವರೂಪಗಳು

ನವ್ಯ ಕವಿಗಳ ಅಭಿಪ್ರಾಯದಲ್ಲೇ ಹೇಳುವುದಾದಲ್ಲಿ ಸ್ವಾತಂತ್ರ್ಯಪೂರ್ವ ಭಾರತದ ಸ್ಥಿತಿಗತಿಗೂ ಸ್ವಾತಂತ್ರ್ಯಾನಂತರದ ಸ್ಥಿತಿಗತಿಗೂ ಬಹಳಷ್ಟು ವ್ಯತ್ಯಾಸವಿದೆ.

> “೧೯೨೦ರಿಂದ ಸ್ವಾತಂತ್ರ್ಯ ಬರುವ ತನಕದ ಕಾಲ ಆದರ್ಶ ನಿಷ್ಠೆಯ ಸರಳ ಕಾಲ. ಆಸೆಯ ಆವೇಶದ ಹೋರಾಟದ ಬಿಗಿದ ಮನಸ್ಸಿನ ತುಟಿಕಚ್ಚಿದ ಸಂಘಟನೆಯ ಕಾಲ ಅದು. ಒಟ್ಟಿನಲ್ಲಿ ಕಳೆದ ತಲೆಮಾರಿನ ಕವಿತೆ ಮುಖ್ಯವಾಗಿ ಏಕಮುಖವಾಗಿತ್ತು. ಸ್ವಾತಂತ್ರ್ಯದ ವಾಂಛೆಯೋ, ಪ್ರಗತಿಯ ಸ್ವಪ್ನವೋ, ಪುರಾತನ ಸಂಸ್ಕೃತಿಯ ಪುನರುತ್ಥಾನದ ಕನಸೋ ಅಂತೂ ಇಂತಹ ಒಂದು ಆದರ್ಶ ಜನರ ಮನಸ್ಸಿನಲ್ಲಿ ಏಕಸೂತ್ರತೆಯನ್ನು ತಂದಂತೆ ಕಾವ್ಯದಲ್ಲಿ ಕೂಡ ಒಂದು ಸರಳ ಸಮರಸ ಕಂಡುಬಂದಿತು”[೧]

ನವೋದಯ ಕಾಲ ಅಂತ್ಯವಾಗಿದ್ದು ನವ್ಯ ಕಾಲಿಡಬೇಕಾಗಿದೆ ಎನ್ನುವ ಅಭಿಪ್ರಾಯವನ್ನು ನವ್ಯ ಕವಿಗಳು ವ್ಯಕ್ತಪಡಿಸಿದ್ದಾರೆ. ಹಾಗೆಂದ ಮಾತ್ರಕ್ಕೆ ನವೋದಯವನ್ನು ಸಂಪೂರ್ಣವಾಗಿ ಕಡೆಗಣಿಸದಿದ್ದರೂ ನವ್ಯದ ಅನಿವಾರ್ಯತೆಯನ್ನು ಎತ್ತಿ ಹಿಡಿದಿದ್ದಾರೆ. “ಕನ್ನಡದ ರೊಮ್ಯಾಂಟಿಕ್ ಸಂಪ್ರದಾಯದ ಸ್ಥಾಪನೆಯಾಯಿತು. ಭಾವಗಳ ಏರಿಳಿತಕ್ಕೆ ತಕ್ಕುದಾದ ನುಡಿಗಟ್ಟನ್ನು ರೂಪಿಸಿಕೊಂಡ ಕವಿ ತನ್ನನ್ನು ತನ್ನ ಹೃದಯದ ರಾಗಭಾವಗಳನ್ನು ಕಾವ್ಯ ವಿಷಯವಾಗಿ ಮಾಡಿಕೊಳ್ಳುವ ಕೆಚ್ಚು ತೋರಿದ. ತನ್ನ ನೋವು ಆಸೆ, ನಿರಾಸೆಗಳನ್ನು ನುಡಿಯತೊಡಗಿದ”[೨] ಹೊಸವಸ್ತುವಿನ ಜೊತೆಗೂ ಕವಿ ಅದಕ್ಕೆ ಸರಿಯಾಗಿ ಛಂದಸ್ಸನ್ನು ಹೊಸದಾಗಿ ನಿರ್ಮಿಸಿಕೊಂಡ. ಕಾವ್ಯದ ಭಾಷೆಯನ್ನು ಆಡುವ ಮಾತಿನ ಹತ್ತಿರಕ್ಕೆ ತಂದ ಕೀರ್ತಿ ನವೋದಯದ ಕವಿಗಳಿಗೆ ಸಲ್ಲುತ್ತದೆ.

ನವ್ಯ ವಿಮರ್ಶೆ ಪ್ರಮುಖವಾಗಿ ಚರ್ಚಿಸಿರುವುದು ಸಾಹಿತ್ಯದ ಶ್ರೇಷ್ಠತೆಯನ್ನು. ಅದು ಕೃತಿಯಲ್ಲಿ ಏಕತೆಯನ್ನು ನಿರೀಕ್ಷಿಸುತ್ತದೆ. ಇದಕ್ಕೆ ಆ ಸಂದರ್ಭದ ‘ಪ್ರಾಯೋಗಿಕ ವಿಮರ್ಶನ ವಿಧಾನ’ ಅತ್ಯುತ್ತಮ ಸಾಕ್ಷಿಯಾಗಿದೆ. ಪ್ರಾಯೋಗಿಕ ವಿಮರ್ಶೆ ಎಂಬುದು ಇಂಗ್ಲಿಷಿನ ‘ಪ್ರಾಕ್ಟಿಕಲ್ ಕ್ರಿಟಿಸಿಸಮ್’ಗೆ ಸಂವಾದಿಯಾದ ಪದ. ಪ್ರಾಯೋಗಿಕ ವಿಮರ್ಶೆ ಕುರಿತಂತೆ ಹಲವು ಅಭಿಪ್ರಾಯಗಳಿದ್ದು ಯು.ಆರ್. ಅನಂತಮೂರ್ತಿ ಅದರ ವಿವರಗಳನ್ನು ಹೀಗೆ ಹೇಳುತ್ತಾರೆ.

"ಉತ್ತಮ ಕಾವ್ಯದಲ್ಲಿ ಕವಿ ತನಗೆ ತಾನೇ ಮಾತನಾಡಿಕೊಳ್ಳುತ್ತಿದ್ದಾನೆ ಎನಿಸುತ್ತದೆ. ಅಥವ ತನ್ನಂತಹವರ ಜೊತೆಗೆ ಮಾತನಾಡುತ್ತಿದ್ದಾನೆ ಎಂದೆನಿಸುತ್ತದೆ. ಇನ್ನೂ ಉತ್ತಮ ಕಾವ್ಯದಲ್ಲಿ ಈ ಕವನದಲ್ಲಿಯೇ ಕವಿಯು ತಾನು ಭಾವಿಸುವ ಕ್ರಮವನ್ನು ಅಭಿನಯಿಸಿ ತೋರಿಸುತ್ತಿದ್ದಾನೆ ಎನಿಸುತ್ತದೆ. ಕವಿ ತನ್ನ ಅಂತರಂಗವನ್ನು ಜೀವದ ಅಂತರಾಳವನ್ನು ಅದರೊಳಗೆ ಹುದುಗಿರುವ ಸತ್ಯವನ್ನು ಅನ್ವೇಷಿಸುವ ಬಗೆಯುವ ರೀತಿಯದು. ಭಾಷೆಯಲ್ಲಿ ಭಾವಾಭಿನಯವಾಗಬೇಕು. ಭಾಷೆಯಲ್ಲಿ ಕಾವ್ಯ ಸಂಭವಿಸಬೇಕು ಎನ್ನುವ ಮಾತಿಗೆ ಅರ್ಥವಿದೆ. ನಾನಿಲ್ಲಿ ಆರಿಸಿಕೊಳ್ಳುವುದು ಎರಡು ವಿಷಯ. ಭಾಷೆಯಲ್ಲಿ ಭಾವಾಭಿನಯವನ್ನು ಕವಿ ಹೇಗೆ ಸಾಧಿಸುತ್ತಾರೆ ಎಂಬುದು ಮೊದಲನೆಯದು. ಕವನಗಳ ಒಟ್ಟು ರಚನೆಯಲ್ಲಿ ಸಾವಯವ ಶಿಲ್ಪದ ಸಮಗ್ರೀಕರಣ ಹೇಗೆ ತರಲು ಪ್ರಯತ್ನಿಸುತ್ತಾರೆ ಎಂಬುದು ಎರಡನೆಯದು. ಮೊದಲನೆಯದನ್ನು ಪರಿಶೀಲಿಸುವಾಗ ಕವನದ ಕೆಲವೊಂದು ಸಾರ್ಥಕ ಅಂಗಗಳ ಸೌಂದರ್ಯವನ್ನು ತೋರಿಸಬಹುದು. ಹಾಗೆಯೇ ಎರಡನೆಯ ಗುಣದ ವಿಮರ್ಶೆ ಕವಿಯ ಒಟ್ಟು ಅನುಭವದ ಮಟ್ಟವನ್ನು ಅರಿಯಲು ಅದಕ್ಕೆ ಬೆಲೆ ಕಟ್ಟಲು ಸಹಾಯ ಮಾಡುತ್ತದೆ. ಆದರೆ ವಿಮರ್ಶೆಯಲ್ಲಿ ತಾರತಮ್ಯ ವಿವೇಚನೆ ಸಾಧ್ಯವಾಗುವುದು ಎರಡು ಗುಣಗಳನ್ನು ಒಟ್ಟಿಗೆ ಅಭ್ಯಾಸ ಮಾಡಿದಾಗ".[೩]

ಪ್ರೊ. ಕಿ.ರಂ. ನಾಗರಾಜ "ಪ್ರಾಯೋಗಿಕ ವಿಮರ್ಶೆ ಎನ್ನುವುದು ಕವನವನ್ನು ಬಿಡಿಸಿ ಅದರ ಅರ್ಥದ ಗತಿಯನ್ನು ಗಮನಿಸುತ್ತ ಹೋಗುವುದು" ಎನ್ನುತ್ತಾರೆ. ಸಿ.ಎನ್. ರಾಮಚಂದ್ರನ್ "ನವ್ಯ ವಿಮರ್ಶಕರು ಕೃತಿಯಲ್ಲಿರುವ ಸಾವಯವ ಸಂಬಂಧವನ್ನು ವಿವಿಧ ಸ್ತರಗಳಲ್ಲಿ ವಿಶ್ಲೇಷಿಸುತ್ತ ಕೃತಿಯ ವಿವರಗಳಿಗೆ ಪ್ರತಿಮಾ ಪುಂಜಕ್ಕೆ, ಭಾಷಾ ಪ್ರಯೋಗದ ಸೂಕ್ಷ್ಮಾತಿಸೂಕ್ಷ್ಮ ಧ್ವನಿ ವಿಶೇಷಗಳಿಗೆ ಸ್ಪಂದಿಸುತ್ತಾರೆ" ಎಂದು ಪ್ರಾಯೋಗಿಕ ವಿಮರ್ಶೆಯನ್ನು ಕುರಿತು ಸಂಕ್ಷಿಪ್ತವಾಗಿ ಹೇಳಿದ್ದಾರೆ.[೪]

"ಪ್ರಾಯೋಗಿಕ ವಿಮರ್ಶೆಯು ಒಂದು ಕೃತಿಯು ಸಮಗ್ರ ಅನುಭವದ ಶೋಧನೆಗೆ ತೊಡಗುತ್ತದೆ. ಹಾಗೆ ಮಾಡುವಾಗ ಆ ಅನುಭವ ಕಲಾತ್ಮಕವಾಗಿ ಅಭಿವ್ಯಕ್ತಗೊಂಡಿದೆಯೇ ಎಂದು ನೋಡುತ್ತದೆ. ಪ್ರಾಯೋಗಿಕ ವಿಮರ್ಶೆ ಎಂಬುದು ಭಾಷಿಕ ಪ್ರಮಾಣಗಳನ್ನು ಅನುಸರಿಸಿ ಸಾಹಿತ್ಯ ಕೃತಿಯನ್ನು ಅನುಭವಿಸುವ ಅರ್ಥೈಸುವ ಮಾತಿನ ಸಾಹಿತ್ಯಿಕತೆಯ ಸಿದ್ಧಿಯನ್ನು ಅರಿಯುವ ಅಳೆಯುವ ಕ್ರಮ"[೫]

ಪ್ರಾಯೋಗಿಕ ವಿಮರ್ಶೆಯ ಬೆಳವಣಿಗೆಯಲ್ಲಿ ಸಾಹಿತ್ಯ ಪತ್ರಿಕೆಗಳು ತಮ್ಮದೇ ಆದ ಕೊಡುಗೆಯನ್ನು ನೀಡಿದೆ. ಉದಾಹರಣೆಗೆ ಸಾಕ್ಷಿ, ಲಹರಿ, ಸಂಕ್ರಮಣ, ರುಜುವಾತು ಮೊದಲಾದವು. ಸಾಕ್ಷಿ ಪತ್ರಿಕೆಯಲ್ಲಿ ಅಡಿಗ, ರಾಮಾನುಜಂ, ಕಂಬಾರರ ಕವಿತೆಗಳನ್ನು ಕುರಿತು ಬಿ.ಟಿ. ದೇಸಾಯಿ, ಪಿ.ಲಂಕೇಶ್, ಸುಬ್ರಹ್ಮಣ್ಯ, ಮಾಧವ ಕುಲಕರ್ಣಿ, ಕೀರ್ತಿನಾಥ ಕುರ್ತಕೋಟಿ, ಇವರುಗಳ ನಡುವೆ ವಾಗ್ವಾದ ನಡೆದಿದ್ದು ಈ ಸಂವಾದಗಳಿಗೆ ಪ್ರಾಯೋಗಿಕ ವಿಮರ್ಶೆಗಳೇ ಮೂಲಕಾರಣಗಳಾಗಿವೆ.

ಸಂಕ್ರಮಣದ ೧೯೬೪-೬೫ರ ಸಂಚಿಕೆಗಳಲ್ಲಿ ಅಡಿಗರ ಭೂಮಿಗೀತ ಕವನ ಸಂಕಲನ ಕುರಿತಂತೆ ಟಿ.ಜಿ. ರಾಘವ, ಸುಮತೀಂದ್ರ ನಾಡಿಗ್, ದೇಶ ಕುಲಕರ್ಣಿ, ಶಂಕರ ಮೊಕಾಶಿ ಪುಣೇಕರ, ಮುಂತಾದವರ ವಿಶ್ಲೇಷಣೆ ಸಂವಾದಗಳು ಪ್ರಕಟವಾಗಿವೆ. ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆ ಮೊದಲಾದದ್ದು

ಯು.ಆರ್. ಅನಂತಮೂರ್ತಿಯವರಿಂದ. ಹಾಗೆಂದೊಡನೆ ಹಿಂದೆ ನವೋದಯ ಸಂದರ್ಭದಲ್ಲಿ ಇದು ನಡೆದಿರಲೇ ಇಲ್ಲ ಎಂದಲ್ಲ, ಎ.ಆರ್.ಕೃಷ್ಣಶಾಸ್ತ್ರಿಗಳ 'ಟೊಳ್ಳುಗಟ್ಟಿ' (ಟಿ.ಪಿ.ಕೈಲಾಸಂ) ಕುರಿತ ವಿಮರ್ಶಾ ಲೇಖನ, ವೆಂಕಣ್ಣಯ್ಯನವರ ಪಂಪನ ಕುರಿತ ಬರಹಗಳು ಮೊದಲಾದವುಗಳನ್ನು ಇಲ್ಲಿ ನೆನೆಯಬಹುದು. ಆದರೆ ಅಡಿಗರ 'ಭೂಮಿಗೀತ' (೧೯೫೯) ಕವನ ಸಂಕಲನಕ್ಕೆ ಅನಂತಮೂರ್ತಿಯವರು ಬರೆದ ಮುನ್ನುಡಿಯಲ್ಲಿ ಮಾಡಿರುವ 'ಭೂತ' ಕವನದ ವಿಶ್ಲೇಷಣೆ ಕನ್ನಡದ ಪ್ರಾಯೋಗಿಕ ವಿಮರ್ಶೆಯ ಪ್ರಥಮ ಪ್ರಯತ್ನ ಎನ್ನಬಹುದು. ೮೦ರ ದಶಕದಲ್ಲಿ ಇದನ್ನು ವ್ಯಾಪಕವಾಗಿ ಚಲಾವಣೆಗೆ ತರುವ ಉದ್ದೇಶದಿಂದ ತಮ್ಮ ಪತ್ರಿಕೆಯಲ್ಲಿ (ರುಜುವಾತು) 'ಪದ್ಯ ಬಗೆವ ಬಗೆ' ಎಂಬ ಅಂಕಣವನ್ನು ಆರಂಭಿಸಿದರು. ಆರಂಭದಲ್ಲಿ ಅಡಿಗರ 'ಶ್ರೀರಾಮನವಮಿಯ ದಿವಸ' ಕವನದ ಕುರಿತಂತೆ ಪ್ರಾಯೋಗಿಕ ವಿಮರ್ಶೆಯನ್ನು ಬರೆದು ಲೇಖನದ ಕೊನೆಗೆ ಅವರು ಕಂಸದಲ್ಲಿ "ತರಗತಿಯಲ್ಲಿ ಒಂದು ಪದ್ಯವನ್ನು ಹೇಗೆ ಕಲಿಸಬಹುದು ಎಂಬುದಕ್ಕೆ ಒಂದು ಪ್ರಯೋಗವಾಗಿ ಈ ಲೇಖನವನ್ನು ಓದಿಕೊಳ್ಳಬಹುದು" ಎಂದು ಸೂಚನೆ ನೀಡಿದ್ದಾರೆ. ಈ ಅಂಕಣದಲ್ಲಿ ಅನಂತಮೂರ್ತಿಯವರು ಸೇರಿದಂತೆ ಎಚ್.ಎಸ್. ವೆಂಕಟೇಶಮೂರ್ತಿ, ಜಿ.ಎಚ್.ನಾಯಕ, ಶಂಕರ ಮೊಕಾಶಿ ಪುಣೇಕರ, ಪೋಲಂಕಿ ರಾಮಮೂರ್ತಿ ಮುಂತಾದ ವಿಮರ್ಶಕರು ರನ್ನ, ಅಡಿಗ, ಬೇಂದ್ರೆ ಮೊದಲಾದ ಕವಿಗಳ ಕಾವ್ಯದ ಕುರಿತು ವಿಮರ್ಶೆ ಬರೆದಿದ್ದಾರೆ.[೬]

ಅಡಿಗ ೧೯೫೩-೫೮ರ ಅವಧಿಯಲ್ಲಿ ರಚಿಸಿದ ಕವನಗಳನ್ನು 'ಭೂಮಿಗೀತ' ಸಂಕಲನದಲ್ಲಿ ಪ್ರಕಟಿಸಲಾಯಿತು. ಈ ಕೃತಿ ಹಲವು ವಿಮರ್ಶೆ, ಅವಹೇಳನ, ಪ್ರಶಂಸೆಗಳಿಗೆ ಗುರಿಯಾಯಿತು. ೧೯೫೮ರಲ್ಲಿ 'ಪ್ರಾರ್ಥನೆ' ಎಂಬ ಕವನವನ್ನು ಅಡಿಗರು ಆಕಾಶವಾಣಿ ಕವಿಗೋಷ್ಠಿಯಲ್ಲಿ ಓದಿದ ನಂತರ ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನು ಅಶ್ಲೀಲ ಕವನವೆಂದು ಧಾರವಾಡದಲ್ಲಿನ ಒಂದು ಗುಂಪು ಅಡಿಗರಿಗೆ ತಕ್ಕ ಶಿಕ್ಷೆ ನೀಡಬೇಕು ಎಂದು ಅಂದಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ ಸರ್ಕಾರಕ್ಕೆ ದೂರು ಸಲ್ಲಿಸಿತು. ಇದಕ್ಕೆ ಸಂಬಂಧಿಸಿದಂತೆ ಅಂದಿನ ಕಾನೂನು ಸಚಿವರಿಂದ ಸ್ಪಷ್ಟನೆ ಕೋರಿ ಅಡಿಗರಿಗೆ ಪತ್ರ ಬಂದಿತ್ತಂತೆ. ಅದಕ್ಕೆ ಅಡಿಗರು ಅದು ನಿಜಕ್ಕೂ ಪ್ರಾರ್ಥನೆಯೇ ಆಗಿತ್ತು. ಹಾಗೆಯೇ ಸೃಷ್ಟಿ ಕ್ರಿಯೆಯಲ್ಲಿ ತೊಡಗಿರುವವರು ಹೇಗಿರಬೇಕೆಂದು ಸೂಚಿಸುವ ಧೋರಣೆಯ ಕವನವೂ ಆಗಿತ್ತು. ಒಬ್ಬ ಉತ್ತಮ ಪುರುಷನು ತನ್ನ ಸೃಷ್ಟಿಶಕ್ತಿಯ ವೀರ್ಯವನ್ನು ಹೇಗೆ ನಾನಾ ರೀತಿಯ ವಿಕೃತ ಕಾಮಗಳಲ್ಲಿ ವ್ಯರ್ಥ ಮಾಡಬಾರದೋ ಹಾಗೆಯೇ ಒಬ್ಬ ಕಲಾವಿದ, ಕವಿ ತನ್ನ ಸೃಷ್ಟಿಶಕ್ತಿಯನ್ನು ವ್ಯರ್ಥ ಮಾಡತಕ್ಕದ್ದಲ್ಲ ಎಂಬುದನ್ನೂ, ಈ ಕೆಲಸದಲ್ಲಿ ಹೇಗೆ ಮನುಷ್ಯ ಶಕ್ತಿಗೆ ದೈವಶಕ್ತಿಯ ಸಹಾಯವೂ ಅಗತ್ಯ – ನಮಗೆ ಬೇಕಾದದ್ದು ಅನೂರುವಾದ ಅರುಣನಲ್ಲ, ಸದೃಢನೂ, ಬಲಾಢ್ಯನೂ ಆದ ಗರುಡ – ಎಂಬುದನ್ನೂ ಸೂಚ್ಯವಾಗಿ ಉದ್ದಕ್ಕೂ ಹೇಳಿದೆ ಎನ್ನುತ್ತಾರೆ..ಮುಂದುವರೆದು, ಇದು ನಿಜವಾಗಿ ಒಂದು ರಿಲಿಜಿಯಸ್ ಕವನ ಎಂದು ವಿವರಿಸುತ್ತ 'ಅಶ್ಲೀಲ ಬರೆಯುವ ಕವಿ ನಾನಲ್ಲ. ಒಂದು ಶಬ್ದ ಅಶ್ಲೀಲ ಎನಿಸಿದರೆ ಅದು ಕವನದ ಅರ್ಥವಿಕಾಸಕ್ಕೆ ಅತ್ಯಗತ್ಯವಾದ್ದರಿಂದ ಬಳಸಲಾಗಿದೆಯಲ್ಲದೆ ಅದು ವಿಕೃತಕಾಮವಲ್ಲ. ಆತ್ಮಾಭಿಮಾನವನ್ನು ಹೇಗೋ ಹಾಗೆಯೇ ವಿನಯವನ್ನೂ ದಯಪಾಲಿಸು ('ಕಲಿಸು ಬಾಗದೇ ಸೆಟೆವುದನ್ನು, ಬಾಗುವುದನ್ನು') ಎಂದೂ ಪ್ರಾರ್ಥಿಸಲಾಗಿದೆ' ಎಂದು ಬರೆದಿದ್ದಾರೆ[೭]

ಕಾವ್ಯದ ಭಾಷೆ ಹೇಗಿರಬೇಕು ಎನ್ನುವುದನ್ನು ಕುರಿತು ಅನಂತಮೂರ್ತಿಯವರು ಅಡಿಗರ ಕವಿತೆಗಳನ್ನು ವಿಮರ್ಶಿಸುತ್ತ ಹೀಗೆನ್ನುತ್ತಾರೆ:

"ಆಡುವ ಮಾತಿನ ಪರಿಪಾಕದ ಮಿತಿಯಲ್ಲಿ ತಮ್ಮ ಅನುಭವದ ಪರಿಪೂರ್ಣ ಅವತಾರಕ್ಕೆ ಈ ಕವಿ ನಡೆಸುವ ಪ್ರಯತ್ನ ಸದ್ಯದ ಕನ್ನಡ ಸಾಹಿತ್ಯದಲ್ಲಿ ಅನನ್ಯ ರೀತಿಯದು. ಇದರ ಒಟ್ಟಾರೆ ಅರ್ಥ ಭಾಷೆಯಲ್ಲಿ ಸಂಭವಿಸದುದು ಕಾವ್ಯವಲ್ಲ ಎಂಬುದು".[೮]

ಅಂದರೆ ನವ್ಯ ಕಾವ್ಯದ ಪ್ರಕಾರ ಕಾವ್ಯದ ಭಾಷೆ ಎಂದರೆ ಆಡುಮಾತಿಗೆ ಅತಿ ಸಮೀಪವಾದದ್ದು. ಅಥವ ಮಾತಾಡಿಕೊಂಡ ಹಾಗಿರುವ ಭಾಷೆಯೇ. ಭಾಷೆಯ ಬದಲಾವಣೆ ಹೇಗಿರಬೇಕು ಎನ್ನುವುದಕ್ಕೆ ಅಡಿಗರು "ಈ ರೀತಿಯ ಭಾಷೆಯ ಬದಲಾವಣೆ ಭಾಷೆಯಲ್ಲಿ ತನ್ನೆಲ್ಲ ಪಾರಂಪರಿಕ ಹಾಗು ಅಜ್ಞಾತದ ಆಳ ಸ್ತರಗಳನ್ನೆಲ್ಲ ಒಳಗೊಂಡು ಸಂಭವಿಸಬೇಕು. ಇಂತಹ ಎಚ್ಚರವೇ ನವ್ಯಕಾವ್ಯದ ಜೀವಾಳವಾಗಿದೆ. ಅಲ್ಲದೆ ಕವಿಗೆ ಬೇರೆ ಬೇರೆ ಸ್ಥಳ, ಕಾಲಗಳಲ್ಲಿ ಬೇರೆ ಬೇರೆಯವರು ಪಡೆದ ಅನುಭವಗಳ ಸಂದರ್ಭಗಳಲ್ಲಿ ತನ್ನದೇ ಅನುಭವದ ಒಂದು ಸುಸಂಬದ್ಧ ರಚನೆಯನ್ನು ಕಾಣುವ ವೈಯಕ್ತಿಕ ತೀವ್ರತೆ ಇರುವುದರಿಂದ ಕವಿ ಭಾಷೆಯಲ್ಲಿ ಬಳಸುವ ಸಂಕೇತ, ಪ್ರತೀಕ, ಪ್ರತಿಮೆಗಳ ಸಂಯೋಜನೆಯಿಂದ ಒಂದು ರೀತಿಯ ಸಂಕೀರ್ಣತೆ ಕಂಡುಬರುತ್ತದೆ".[೯]

ಯಾವ ಕಾವ್ಯ ಶ್ರೇಷ್ಠ ಎಂಬುದಕ್ಕೆ ಅನಂತಮೂರ್ತಿಯವರು

"ಪೂರ್ಣತೆಯ ಪ್ರಗತಿಯ ಭ್ರಮೆಯನ್ನು ಹುಟ್ಟಿಸಿ ಬದುಕನ್ನು ಸರಳ ಮಾಡಿಸುವ ಕಾವ್ಯಕ್ಕಿಂತ ಅಪೂರ್ಣತೆಯ ಪ್ರಜ್ಞೆಯನ್ನು ಉಳಿಸಿ, ನೋಯಿಸಿ, ಕುದಿಸಿ, ಬೆಳಕನ್ನು ಕಾಣಲು ಕತ್ತಲಲ್ಲೇ ತಡಕುತ್ತ ನಡೆಯಬೇಕಾದ ಅನಿವಾರ್ಯತೆಯನ್ನು ಜೀವಕ್ಕೆ ಕಲಿಸುವ ಕಾವ್ಯ ಶ್ರೇಷ್ಠವಾದುದು"

ಎನ್ನುತ್ತಾರೆ[೧೦]

ನವ್ಯಪ್ರಜ್ಞೆ ಎಂದರೇನು ಎಂಬುದಕ್ಕೆ ಗೋಕಾಕರು

"ಬಳಕೆ ಮಾತು, ಛಂದಸ್ಸಿನ ನಾವೀನ್ಯ, ಪ್ರತಿಮಾ ಪ್ರಧಾನತೆ, ವಾಸ್ತವಿಕ ಚಿತ್ರಸೃಷ್ಟಿ, ಪಾರಿಭಾಷಿಕ ಶೈಲಿ, ಈ ಎಲ್ಲ ಮಾತಿನಲ್ಲಿಯೂ ಆಧುನಿಕ ಕಾವ್ಯವು ಕ್ರಮೇಣ ಆಸ್ಥೆ ವಹಿಸಿದ್ದನ್ನು ನಾವು ಕಾಣಬಹುದಾಗಿದೆ. ಇವೆಲ್ಲವುಗಳ ಸಮಯೋಚಿತ ಪ್ರಜ್ಞೆಯನ್ನೇ ನಾವು 'ನವ್ಯಪ್ರಜ್ಞೆ' ಎಂದು ಕರೆಯಬಹುದು"

ಎಂದಿದ್ದಾರೆ.[೧೧]

ಅಡಿಗರ 'ಅಜ್ಜ ನೆಟ್ಟಾಲ' ಕವನವನ್ನು ಡಿ.ಕೆ. ಸೀತಾರಾಮಶಾಸ್ತ್ರಿಯವರು 'ಸಾಕ್ಷಿ'ಯಲ್ಲಿ ವಿಶ್ಲೇಷಿಸುತ್ತಾ "ಆಲ ಮತ್ತು ಆನೆ ಇಲ್ಲಿನ ಮುಖ್ಯ ಪ್ರತಿಮೆಗಳಾಗಿವೆ. 'ಮಿಣು ಬಿಳಿಲು ಸೊಂಡಿಲುಗಳು' ಎಂಬ ಸಂಯುಕ್ತ ವಿಶೇಷಣ ಇವೆರಡೂ ಒಂದಕ್ಕೊಂದು ಹೆಣೆದುಕೊಂಡು ಬಳಸಲ್ಪಟ್ಟಿರುವುದರ ಮುನ್ಸೂಚನೆಯಾಗಿದೆ. ಆಲವನ್ನು ಬಾಲಕರಿಗೆ ಪ್ರಿಯವಾಗುವ ಟೇರು ಮತ್ತು ಆನೆಗಳಿಗೆ ಹೋಲಿಸಿದೆ ಎಂದಿದ್ದಾರೆ"[೧೨]

'ದಿಗ್ಗಜದ ದಿಗಂತ ಭ್ರಮಣ' ಎನ್ನುವಲ್ಲಿ ಇದು ಭ್ರಮೆ ಎನ್ನುವ ದನಿ ಇದೆ. 'ನಿದ್ರೆ ಮುದ್ರಿಸಿದ ಥೈಲಿಯೊಳಗೆ ಟಿಸಿಲೊಡೆದು ಬಿಚ್ಚುತ್ತಿರುವ ಶಾಖೋಪಶಾಖೆ' ಎನ್ನುವಾಗ ಇದು ಅಪ್ರಜ್ಞಾವಸ್ಥೆಯ

ಜಡತ್ವದ ಸೃಷ್ಟಿ ಎನ್ನುವ ಆಶಯವಿದೆ. ಮುಂದಿನ ಭಾಗದಲ್ಲಿ 'ಹೆಜ್ಜೆಗೆ ನುಜ್ಜು ಹಳೆಯ ಕಸತರಗು ಕಡ್ಡಿ' ಎನ್ನುವಾಗ ಪರಂಪರೆಯ ಸತ್ವಹೀನತೆಯನ್ನು ಹೇಳುತ್ತಿದೆ.

'ದೂರ ನಡುಗಡ್ಡೆ ಬಂಡೆ, ಹೊಗೆಯನುಗುಳುವ ಕಂಭ, ಗುಂಪು ಬಿಟ್ಟು ಸೆಟಗೊಂಡ ಸಲಗ' ಇವು ಗುಂಪಿನ ವಿಧಿ ನಿಷೇಧಗಳನ್ನು, ಕಟ್ಟುಪಾಡುಗಳನ್ನು ಧಿಕ್ಕರಿಸುವ, ತನಗೆ ತಾನೇ ದ್ವೀಪವಾಗುವ ಏಕಾಂಗಿಯಾಗಿ ಹೋರಾಡುವ, ದಂಗೆಯೇಳುವ ಯೌವನಾವಸ್ಥೆಯ ಸಹಜ ಧರ್ಮವನ್ನು ಹೇಳುತ್ತದೆ. 'ಬುಡ ಕಡಿದು' ಎಂಬುದು ಮಗನಿಗೆ ಅನ್ವಯವಾದರೆ ಅವನ ಅನಾಥ ಸ್ಥಿತಿಯನ್ನು ಸೂಚಿಸುತ್ತದೆ ಎಂದು ಅರ್ಥೈಸಿದ್ದಾರೆ. ಈ ಕವನದಲ್ಲಿ ಅಪ್ಪ, ಕವಿ, ಮಗ ಹೀಗೆ ಮೂರು ತಲೆಮಾರುಗಳಿವೆ. ಇವರಲ್ಲಿ ಏಕವಾಗಿ ಹರಿಯಬೇಕಿದ್ದ ಪರಂಪರೆಯನ್ನು ಕವಿ ತುಂಡರಿಸಿದ್ದರಿಂದ ತನ್ನ ಮಗನ ಮೇಲಾದ ದುಷ್ಪರಿಣಾಮಕ್ಕೆ ಅಪ್ಪ ಕೊರಗುತ್ತಾನೆ. ವರ್ಧಮಾನದಲ್ಲಿ ('ವರ್ಧಿಸುತ್ತಿರುವ ವರ್ತಮಾನದ ಏಳುಬೀಳುಗಳಿಂದ ಇಡಿಕಿರಿದ ನಡೆ') ಮುಂದಿನ ಪೀಳಿಗೆಯ ಬಗ್ಗೆ ಇದ್ದ ಭರವಸೆ ಇಲ್ಲಿ ನಿರಾಶೆಯಾಗಿ ಮಾರ್ಪಟ್ಟಿದೆ ಎಂದಿದ್ದಾರೆ ಶಾಸ್ತ್ರಿಗಳು.

ಅಡಿಗರ 'ಇದನ್ನು ಬಯಸಿರಲಿಲ್ಲ' ಕವನಸಂಕಲನದ 'ನೀ ಬಳಿಯೊಳಿರುವಾಗ್ಗೆ' ಕವಿತೆ ಕುರಿತಂತೆ ಮಾಧವ ಕುಲಕರ್ಣಿ ಹೀಗೆ ವಿಶ್ಲೇಷಣೆ ಮಾಡಿದ್ದಾರೆ

ಅಪ್ರಜ್ಞೆ ಮತ್ತು ಜಾಗ್ರತಾವಸ್ಥೆಗಳ ಉತ್ಕಟಾವಸ್ಥೆ ಮೊದಲ ಭಾಗದಲ್ಲಿದ್ದರೆ ಆ ಘಳಿಗೆ ಕಳೆದ ಮೇಲೆ ಇರುವ ಸ್ಥಿತಿಯನ್ನು ಎರಡನೆಯ ಭಾಗ ಚಿತ್ರಿಸುತ್ತದೆ. ಈ ಪ್ರಜ್ಞೆ ಕೊನೆಯ ಭಾಗದಲ್ಲಿ 'ನಿತ್ಯದಲ್ಲಿ ಕುದಿಮಡಿಕೆ'ಯ ರೂಪವನ್ನು ತಾಳುತ್ತದೆ. ಕಾಫಿ, ತಿಂಡಿ, ಊಟ ಹಾಗು 'ಸರೋವರದ ಮೇಲೆ ಯಥಾಪ್ರಕಾರ ಉರುಳುವ ಸಣ್ಣಲೆಗಳು ಇವೆಲ್ಲ 'ನಿತ್ಯದ ನಿರಾತಂಕದ ಗಟ್ಟಿಯೋಡಿನಲ್ಲಿಯೇ ಒಳಗೊಂಡಿವೆ. ಮೂರ್ತದ ಈ ಕ್ರಿಯಾ ವಿಧಾನಗಳೆಲ್ಲ ಕೊನೆಯ ಭಾಗದಲ್ಲಿ ಮುಟ್ಟಲು ಮೂಸಲು ಬಾರದ ಪುಂಗಿಯ ಶ್ರುತಿಯ ರೂಪವನ್ನು ತಾಳುತ್ತವೆ ಎಂದಿದ್ದಾರೆ. ಹಾಗೆಯೇ 'ಬಳಿ' ಎಂಬ ಪದಕ್ಕೆ ತೊಡೆ ಎಂಬ ಅರ್ಥ ಇರುವುದರಿಂದ ಇದು ಗಂಡು ಹೆಣ್ಣಿನ ಸಂಬಂಧದ ಬಗೆಗಿನ ಕವನ ಎಂಬುದು ಸ್ಪಷ್ಟವಾಗುತ್ತದೆ ಎನ್ನುತ್ತಾರೆ ಕುಲಕರ್ಣಿ. 'ಆಳುದ್ದ ತೆರೆಯೆದ್ದು ಅಲ್ಲೋಲ ಕಲ್ಲೋಲ' ಎನ್ನುವ ಸಾಲಿನಲ್ಲಿ ಮುಂದಿನ ಭಾಗದಲ್ಲಿ ಕಂಡುಬರುವ 'ಸರೋವರದ ಪ್ರತಿಮೆ'ಯ ಬೇರುಗಳಿವೆ ಎನ್ನುವ ಅವರು ಇಲ್ಲಿಯ ಸಣ್ಣೆಲೆಗಳುರುಳುವುದು ಮೊದಲ ಭಾಗದ ಕಾಫಿ ತಿಂಡಿ ಊಟದಷ್ಟೇ ಯಾಂತ್ರಿಕೆ ಎಂಬುದನ್ನು ಗ್ರಹಿಸಿದ್ದಾರೆ.[೧೩]

ಅಡಿಗರ 'ಕೂಪಮಂಡೂಕ' ಕವಿತೆಯನ್ನು ವಿಶ್ಲೇಷಿಸುತ್ತ ಮಾಧವ ಕುಲಕರ್ಣಿಯವರು ಗೆಳೆಯನೊಬ್ಬನ ಚಿತ್ರವನ್ನು ತಮ್ಮ ಕಾವ್ಯಕ್ರಿಯೆಯ ಸ್ಫೂರ್ತಿಗೆ ಸಂಕೇತವಾಗಿಟ್ಟುಕೊಂಡು ಆ ಸ್ಫೂರ್ತಿಯ ಅಸ್ಪಷ್ಟ ಅಮೂರ್ತ ಹಾಗು ವೈಯಕ್ತಿಕವಾದ ರೂಪಕ್ಕೆ ಆಕಾರವನ್ನು ಕೊಟ್ಟು ಮೂರ್ತರೂಪದಲ್ಲಿ ನೋಡುವ ಪ್ರಯತ್ನವೇ ಕೂಪಮಂಡೂಕ ಎನ್ನುತ್ತಾರೆ ಇನ್ನೊಂದು ಸ್ತರದಲ್ಲಿ ವ್ಯಕ್ತಿಯ ನಡುವಿನ ಸಂಬಂಧದ ಚಿಂತನೆಯೂ ಈ ಕವನದಲ್ಲಿದೆ. ಜೊತೆಗೆ ಈ ಸಂಬಂಧದ ವಿಚಾರಕ್ಕೆ ಮೂಲ ಕಾರಣನಾದ ಸಖ ಕವಿಯ ಕಾವ್ಯ ಸ್ಫೂರ್ತಿಗೆ ಸಂಕೇತವಾಗುತ್ತಾನೆ ಎಂದು ಗುರುತಿಸಿದ್ದಾರೆ.[೧೪]

ಅಡಿಗರ 'ಮೋಹನ ಮುರಲಿ' ಕವನವನ್ನು ವಿಶ್ಲೇಷಿಸುವ ರಾಜಪ್ಪ ದಳವಾಯಿ ಅವರು[೧೫]
'ಯಾವ ಮೋಹನ ಮುರಲಿ ಕರೆಯಿತೊ ದೂರ ತೀರಕೆ ನಿನ್ನನು'

ಇಲ್ಲಿ ನಿನ್ನನು ಎಂಬ ಪದಕ್ಕೆ ಇಡೀ ಮನುಷ್ಯಕುಲವೇ ಪ್ರತಿನಿಧಿಯಾಗುತ್ತದೆ. ಇಂತಹ ಪ್ರತಿನಿಧಿಯಾದ ಚೇತನವನ್ನು ಕುರಿತ ಚಿಂತನೆಯೇ ಈ ಕವನದ ಜೀವಾಳ ಎಂದಿದ್ದಾರೆ.

'ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?'

ಈ ಸಾಲುಗಳು ಈ ಕವನದ ದರ್ಶನವಾಗಿದ್ದು ಇದನ್ನು ಎರಡು ಬಗೆಯಲ್ಲಿ ಓದಬಹುದಾಗಿದೆ.

೧. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ಜೀವನವು ತುಡಿಯುವುದೆ?

೨. ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿಯುವುದು ಜೀವನವೇ?

ಇಲ್ಲಿ ದಳವಾಯಿಯವರು ಎರಡನೆಯ ರೀತಿಯಲ್ಲಿ ಗ್ರಹಿಸಿದ್ದಾರೆ. ಹಾಗೆಯೆ 'ಇರದುದರೆಡೆಗೆ' ಎಂಬುದನ್ನು 'ಎಲ್ಲಿಯೂ ಇರದುದರೆಡೆಗೆ' ಎಂಬ ರೀತಿಯಲ್ಲಿ ಅರ್ಥೈಸಿದ್ದಾರೆ.

ಭೂತ ಎಂದರೆ ಭೂತಕಾಲ, ಭೂತ-ಪ್ರೇತ ಮತ್ತು ಪ್ರಜ್ಞಾವಂತ ಪಾತಾಳ. ಈ ಮೂರರ ಬಗ್ಗೆಯೂ ಕವನದಲ್ಲಿ ಬೇರೆಬೇರೆಯಾಗಿ ಹೇಳದೆ ಒಟ್ಟಿಗೆ ಏಕಕಾಲದಲ್ಲಿ ಮೂರೂ ಒಂದೇ ಎನ್ನುವಂತೆ ಚಿತ್ರಿಸಲಾಗಿದೆ ಎಂಬುದು ಡಾ. ಯು.ಆರ್. ಅನಂತಮೂರ್ತಿಯವರ ವಿಶ್ಲೇಷಣೆ.[೧೬] ಆದರೆ ತಮ್ಮ ಲೇಖನದಲ್ಲಿ ಸಿ.ವಿಶ್ವೇಶ್ವರ ಅವರು 'ಭೂತ'ವು ಪರಂಪರಾಗತ ಪ್ರಜ್ಞೆಯಾಗಿದೆ ಎಂದಿದ್ದಾರೆ.[೧೭] ಈ ಕವನದ ಪ್ರತಿಮಾ ವಿಧಾನವನ್ನು ವಿಶ್ಲೇಷಿಸುವ ವಿಶ್ವೇಶ್ವರ ಅವರು ವ್ಯಕ್ತಿಯ ಉನ್ನತಿಗೆ ಪರಂಪರೆ ಇಲ್ಲದೆ ಸಾಧ್ಯವಿಲ್ಲ ಎಂಬ ಮಾತು, ಈ ಪರಂಪರೆಯ ಅಂಗವಾಗಿಯೇ ಇರುವ ಸುಪ್ತ ಚಿತ್ತದ ಚಿತ್ತವೃತ್ತಿಗಳ ಶೋಧ ಅಗತ್ಯ ಎಂಬ ಮಾತು, ಜಗತ್ತು ಕರ್ಮಭೂಮಿಯಾದ್ದರಿಂದ ಕರ್ಮ ಸವೆದರೆ ಮಾತ್ರ ಮುಕ್ತಿ ಎಂಬ ಭಾವವನ್ನು, ಇವೆಲ್ಲ ಒಟ್ಟಾಗಿ ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ ಎಂದು ಹೇಳಿದ್ದಾರೆ. ಇನ್ನು ಪ್ರತಿಮೆಯ ಕುರಿತಂತೆ ಅನಂತಮೂರ್ತಿಯವರ ಮಾತನ್ನು ಇಲ್ಲಿ ಉಲ್ಲೇಖಿಸಬಹುದು "ಭೂತಕಾಲದ ಸಂಪ್ರದಾಯಗಳ ಸಾರದಿಂದ ಬೇರೆಯಾದ ವರ್ತಮಾನ ಕಾಲದ ಗೊತ್ತು ಗುರಿ ಇಲ್ಲದಿರುವಿಕೆಯನ್ನು ಪ್ರತಿಮೆ ಧ್ವನಿಸುತ್ತದೆ".

ನಿಸಾರ್ ಅಹಮದ್ ಅವರ 'ಕುರಿಗಳು ಸಾರ್ ಕುರಿಗಳು' ಕವನವನ್ನು ಕುರಿತ ವಿಮರ್ಶೆ ಹಾಗು ಅದಕ್ಕೆ ಪ್ರತಿಕ್ರಿಯೆಗಳನ್ನು 'ರುಜುವಾತು' ಪತ್ರಿಕೆಯ ಸಂಚಿಕೆಯಲ್ಲಿ ಕಾಣಬಹುದು.[೧೮] ಪಟ್ಟಾಭಿರಾಮ ಸೋಮಯಾಜಿಯವರು ತಮ್ಮ 'ತಾಟಸ್ಥ್ಯದಿ ದಿಕ್ಕೆಟ್ಟು' ಎಂಬ ಲೇಖನದಲ್ಲಿ ಓದುಗರ ಬಗ್ಗೆ ಕವಿಗಿರುವ ಮನೋಭಾವವನ್ನು ಪ್ರಶ್ನಿಸಿದ್ದಾರೆ. ಅವರ ಆಕ್ಷೇಪಣೆಗಳು ಹೀಗಿವೆ: ಈ ಪದ್ಯದ ಪ್ರಕಾರ ಸ್ಥೂಲವಾಗಿ ಎರಡು ವರ್ಗದ ಜನರಿದ್ದಾರೆ. ಒಂದು, ಕುರಿಗಳಷ್ಟು ಅಪ್ರತಿಮ ಸಾತ್ವಿಕ ವರ್ಗ. ಇನ್ನೊಂದು, ಕಟುಕರ ವರ್ಗ. ಇಡೀ ಪ್ರಪಂಚದ ಜನರನ್ನು ಇಷ್ಟು ಸರಳವಾಗಿ ಇಬ್ಭಾಗವಾಗಿಸುವವನು ಮನುಷ್ಯ ವ್ಯಕ್ತಿತ್ವದ ಪರಿಚಯ ಇಲ್ಲದವನು ಮಾತ್ರ. ಪದ್ಯ ಆತ್ಮಾವಲೋಕನದ್ದು ಎನ್ನಿಸಿದರೂ ನಿಜದಲ್ಲಿ ನಡೆಯುತ್ತಿರುವುದು ಆತ್ಮಸ್ತುತಿ ಮಾತ್ರ. ಇದು ಅಸಮಗ್ರದೃಷ್ಟಿ, ಕೊಳೆತ ಮನಸ್ಸಿನ ಫಲ, ಇಂತಹ ವಿಡಂಬನೆ ಕೇವಲ ಬೇಜವಾಬ್ದಾರಿ ಮನುಷ್ಯ ಮಾತ್ರ ಮಾಡಬಹುದಾದ ಲೇವಡಿ. ಕವಿತೆಯು ನಮ್ಮನ್ನು ಕ್ರಿಯೆಗೆ, ಚಲನೆಗೆ, ರೋಷಕ್ಕೆ ಹಚ್ಚುವ ಬದಲು ಆತ್ಮರತಿಗೆ, ಕೂತು ಆಡಿಕೊಳ್ಳುವ ಬಾಯಿ ತೀಟೆಗೆ ಆನಂದಕ್ಕೆ ತಂದು ಕೂರಿಸುತ್ತದೆ. ವ್ಯವಸ್ಥೆಯ ಕೊಳಕುಗಳ ಬಗ್ಗೆ ನಿಜವಾದ ಕಾಳಜಿ ಇರುವ ಯಾವ ಜವಾಬ್ದಾರಿವಂತ ಕವಿಯೂ ಹೀಗೆ ಇಲ್ಲಿರುವ ಕೊಳಕುಗಳನ್ನು ಚಪ್ಪರಿಸುತ್ತ ಬರೆಯಲಾರ. ಹೀಗೆ ಈ ಕೊಳಕನ್ನು ನೋಡಿ ಸುಖಿಸಲಾರ. ಈ ಪದ್ಯದಲ್ಲಿ ಈ ಗಲೀಜನ್ನು ಕಂಡು ವಿಷಾದ ಪಡುವ, ದುಃಖಿಸುವ ಒಂದು ಸಾಲೂ ಇಲ್ಲ.. ಹೀಗೆ ಸಾಗುತ್ತದೆ ಸೋಮಯಾಜಿಯವರ ವಿಶ್ಲೇಷಣೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಕೆ.ವಿ. ತಿರುಮಲೇಶ್ ಅವರು 'ತಾಟಸ್ಥ್ಯದಿ ದಿಕ್ಕೆಟ್ಟು: ಇನ್ನೊಂದು ದೃಷ್ಟಿ' ಎಂಬ ಲೇಖನದಲ್ಲಿ ಸೋಮಯಾಜಿಯವರ ಆಕ್ಷೇಪಗಳು ನಿರಾಧಾರವಾದುವು ಎಂದು ನಿರೂಪಿಸಿದ್ದಾರೆ.[೧೯] ಗಲೀಜನ್ನು ಕಂಡು ವಿಷಾದ ಪಡುವ, ದುಃಖ ಪಡುವ ಒಂದು ಸಾಲಾದರೂ ಇಲ್ಲ ಎಂಬುದಕ್ಕೆ ಉತ್ತರವಾಗಿ ಈ ಪದ್ಯಭಾಗವನ್ನು ಕೊಟ್ಟಿದ್ದಾರೆ:

ಆ ಹೊಳಪಿಗೆ ದಂಗಾಗಿ, ಕಣ್ಣಿಗದೇ ರಂಗಾಗಿ
ಒಳಗೊಳಗೆ ಜಂಗಾಗಿ
ಕಣ್ಣು ಕುಕ್ಕಿ, ಸೊಕ್ಕಿರುವ ಹೋಗಿ ಹೋಗಿ ನೆಕ್ಕಿರುವ
ಕತ್ತನದಕೆ ತಿಕ್ಕಿರುವ
ನಾವು ನೀವು ಅವರು ಇವರು
ಕುರಿಗಳು ಸಾರ್, ಕುರಿಗಳು

ಮೂರನೇ ಸ್ಟಾಂಜಾದಲ್ಲಿ ನಮ್ಮಲ್ಲೇ ಕೆಲವರು ಕುರುಬರಾಗಿ ಮಾರ್ಪಾಟಾದ ಸಂಗತಿ ಇದೆ. ಈ ಪದ್ಯದಲ್ಲಿ ಕಾಣುವ ವರ್ಗೀಕರಣ ಸ್ವಭಾವಗಳ ವರ್ಗೀಕರಣವೇ ಹೊರತು ಮನುಷ್ಯರ ವರ್ಗೀಕರಣವಲ್ಲ. ಹಾಗಾಗಿ ಜನರು ಕುರಿಗಳೂ ಕುರುಬರೂ ಆಗಿ ಮಾರ್ಪಡುವುದು ಒಂದು ಸ್ಥಿತ್ಯಂತರದ ವಿಷಯವೇ ವಿನಃ ಅದುವೆ ಅವಸ್ಥೆಯಲ್ಲ. ಎಂದು ಅಭಿಪ್ರಾಯ ಪಟ್ಟಿದ್ದಾರೆ. ಸೋಮಯಾಜಿಯವರ ಆಕ್ಷೇಪಗಳಿಗೆ ಪ್ರತಿಕ್ರಿಸುತ್ತ ಬಿ.ಆರ್. ಲಕ್ಷ್ಮಣರಾವ್ ಅವರೂ ಸಹ ಕವನದಲ್ಲಿ ಮೊದಲಿನಿಂದ ಕೊನೆಯ ವರೆಗೂ ವಿಡಂಬನೆಗೆ ಒಳಗಾಗುವುದು ಕುರಿಗಳೇ ಹೊರತು ಕುರುಬನಲ್ಲ. ಇದು ಕವನದ ಮುಖ್ಯ ಧ್ವನಿ ಎಂದು ಪ್ರತಿಪಾದಿಸಿದ್ದಾರೆ.[೨೦]

ನವ್ಯ ಸಂದರ್ಭದ 'ಸಂಕ್ರಮಣ' ಪತ್ರಿಕೆಯಲ್ಲಿ ಪ್ರಕಟವಾದ ಮತ್ತೊಂದು ವಿಮರ್ಶಾ ಲೇಖನ ರಾಮಚಂದ್ರಶರ್ಮರ 'ಹೇಸರಗತ್ತೆ: ಒಂದು ಸಮೀಕ್ಷೆ' ಎಂಬುದು. ಈ ಕವನ ಸಂಕಲನ ಏಕೆ ಮಹತ್ವದ್ದು, ಶರ್ಮರ ಹಿಂದಿನ ಕವಿತೆಗಳಿಗಿಂತ ಇದು ಹೇಗೆ ಭಿನ್ನ ಎಂದು ವಿಶ್ಲೇಷಿಸಿರುವ ಬುದ್ದಣ್ಣ ಹಿಂಗಮಿರೆ, ಇದೊಂದು ಪ್ರಬುದ್ಧ ಕವಿತೆಗಳ ಸಂಕಲನವಾಗಿ ಗಮನ ಸೆಳೆಯುತ್ತದೆ ಎನ್ನುತ್ತಾರೆ. ಬದುಕಿನ ಅರ್ಥ ಹಾಗು ಅನ್ವೇಷಣೆಯ ಹೊಸ ಉಪಕ್ರಮವೊಂದನ್ನು ಶರ್ಮರ ಕವಿತೆಗಳಲ್ಲಿ ಕಾಣಬಹುದು. ರಾಮಾನುಜನ್ನರ ಹಾಗೆ ಶರ್ಮರೂ ಹೊಸ ಲಯಗಾರಿಕೆಯನ್ನು ಇಲ್ಲಿ ಅನುಸರಿಸಿದ್ದಾರೆ. 'ಮಣ್ಣ ವಾಸನೆ ಹೊತ್ತ ತಂಗಾಳಿ'ಯ ಗುಣ ಇಲ್ಲಿಯ ಕವಿತೆಗಳಲ್ಲಿ ಪ್ರಮುಖ ಅಂಶವಾಗಿ ಅನುಭವ ಗಮ್ಯವಾಗುತ್ತದೆ ಎಂಬ ಅವರ ಮಾತುಗಳು ನವ್ಯದ ಸ್ವರೂಪವನ್ನು ಗುರುತಿಸುವ ಕ್ರಮವಾಗಿದೆ.[೨೧]

ನವ್ಯಯುಗದಲ್ಲಿ ಕವಿತೆಗಳಷ್ಟೇ ಅಲ್ಲದೆ ಹಲವು ಮುಖ್ಯ ಕಾದಂಬರಿಗಳೂ ಬೆಳಕಿಗೆ ಬಂದವು. ಅವುಗಳ ವಿಮರ್ಶೆಯನ್ನೂ ಅಂದಿನ ಸಾಹಿತ್ಯಿಕ ಪತ್ರಿಕೆಗಳಲ್ಲಿ ಕಾಣಬಹುದು:

ಬದುಕಿನ ಸಂತೋಷ ಹಾಗು ಸಾಹಿತ್ಯದ ಆಂತರಿಕ ಸೌಂದರ್ಯವಷ್ಟೇ ಮುಖ್ಯವಲ್ಲ. ಸಾಹಿತ್ಯ ನಮ್ಮ ವಾಸ್ತವವನ್ನು ಅನುಭವವನ್ನು ವಸ್ತುನಿಷ್ಠವಾಗಿ ಮತ್ತು ಎಲ್ಲ ಸಂಕೀರ್ಣತೆಯೊಂದಿಗೆ ಮಂಡಿಸಬೇಕು ಎನ್ನುವುದು ಎಲ್ಲರ ವಾದ. ಆದ್ದರಿಂದಲೇ ನವೋದಯ/ಪ್ರಗತಿಶೀಲರ ರೀತಿಯ ಬರವಣಿಗೆಗಳು ಸರಳವಾಗಿ, ತೆಳು ಅನುಭವದ ಪ್ರತೀಕಗಳಾಗಿ ರೂಪಾರಾಧಕವಾಗಿ ನವ್ಯರಿಗೆ ಕಾಣಿಸಿದವು. ಕಾವ್ಯದಲ್ಲಿ ಹೆಚ್ಚು ಮಾತು ಬಳಸುವುದು, ಹೆಚ್ಚು ಶಬ್ದ ಮಾಡುವ ಸಂಸ್ಕೃತ ಶಬ್ದಗಳ ಬಳಕೆ ಮಾಡುವುದನ್ನು ಅಡಿಗರು ಒಪ್ಪುತ್ತಿರಲಿಲ್ಲ. ಅದೇ ಕಾರಣಕ್ಕಾಗಿ ಪ್ರಜಾವಾಣಿ ಸಂದರ್ಶನವೊಂದರಲ್ಲಿ ಅಡಿಗರು ಕುವೆಂಪು ಅವರನ್ನು ಕುರಿತು 'ಕುವೆಂಪು ಕವಿಗಳಲ್ಲ, ವಾಗ್ಮಿಗಳು' ಎಂದಿದ್ದರು.[೨೨]

ಈ ಬಗ್ಗೆ ಸುಮತೀಂದ್ರ ನಾಡಿಗರು ಅಡಿಗರನ್ನು ಪ್ರಶ್ನಿಸಿದಾಗ "ವಾಗ್ಮಿತ್ವ ಇಲ್ಲದಿದ್ದರೆ ಯಾರೂ ಕವಿಯಾಗೋಲ್ಲ, ಅಂದರೆ ವಾಕ್ ಸಂಪತ್ತು ಇಲ್ಲದಿದ್ದರೆ ಕವಿಯಾಗೋದಿಲ್ಲ ಎನ್ನುವುದು ನಿಜವಾದರೂ ಹೆಚ್ಚು ಮಾತುಗಳನ್ನು ಬಳಸುವುದು ದೋಷವಾಗುತ್ತೆ. ಪರಿಣಾಮಕಾರಿಯಾಗುವುದಕ್ಕಾಗಿ ಹೆಚ್ಚು ಶಬ್ದ ಮಾಡುವ ಸಂಸ್ಕೃತ ಶಬ್ದಗಳನ್ನುಬ್ ಅಳಸುವುದು ಒಂದು ರೀತಿಯಲ್ಲಿ ಆಕರ್ಷಕವಾಗಿ ಕಂಡರೂ ಅದು ಒಂದು ರೀತಿಯ ದೋಷವಾಗುತ್ತೆ. ಈ ದೋಷಗಳು ಅಥವ ಅತಿಯಾದ ಅಂಶ ಕಡಿಮೆಯಾಗಿರುವ ಕಾವ್ಯ ನನಗೆ ಹೆಚ್ಚು ಹಿಡಿಸುತ್ತದೆ ಎನ್ನುವುದು ನನ್ನ ಅರ್ಥವಾಗಿತ್ತು... ಒಂದು ರೀತಿಯ ಟೆಲಿಗ್ರಾಫ್ ಭಾಷೆಯಲ್ಲಿ ಕುವೆಂಪು ವಾಗ್ಮಿಗಳು ಕವಿಯಲ್ಲ ಎಂದಿದ್ದೆ" ಎಂದು ವಿವರಿಸಿದ್ದರು.[೨೩]

ಅಲ್ಲದೆ ೧೯೬೪ರಲ್ಲಿ 'ಲಹರಿ' ಪತ್ರಿಕೆಯಲ್ಲಿ ಜಿ.ಎಸ್.ಶಿವರುದ್ರಪ್ಪನವರ 'ಮೊಬ್ಬಿನಿಂದ ಮೊಬ್ಬಿಗೆ', ಪೂರ್ಣಚಂದ್ರ ತೇಜಸ್ವಿಯವರ 'ಪಂಪ ಒಂದು ಮೌಲ್ಯವಿವೇಚನೆ' ಮತ್ತು ಎಚ್.ಎಂ.ಚೆನ್ನಯ್ಯನವರ 'ಬಸವಣ್ಣನವರ ನಾಲ್ಕು ವಚನಕವನಗಳು' ಪ್ರಕಟವಾಗಿವೆ. ನವ್ಯದ ಸಂದರ್ಭದಲ್ಲಿ ಪ್ರಾಚೀನ ಕನ್ನಡ ಕಾವ್ಯ ಮತ್ತು ನವ್ಯೇತರ ಆಧುನಿಕ ಕಾವ್ಯಗಳನ್ನು ಪ್ರಾಯೋಗಿಕ ವಿಮರ್ಶಾ ವಿಧಾನದಲ್ಲಿ ವಿಮರ್ಶಿಸಿದ್ದಾರೆ. ಹಳಗನ್ನಡದ ಪಂಪ, ರನ್ನ, ಜನ್ನ, ನಾಗವರ್ಮ ಹಾಗು ನಡುಗನ್ನಡದ ಕುಮಾರವ್ಯಾಸನ ಕಾವ್ಯಗಳನ್ನು ಪ್ರಾಯೋಗಿಕವಾಗಿ ವಿಮರ್ಶಿಸಿರುವುದು ಕಂಡುಬರುತ್ತದೆ. ಇಂತಹ ವಿಶ್ಲೇಷಣೆಗಳು ರುಜುವಾತು, ಸಾಕ್ಷಿ, ಸಂಕ್ರಮಣದಂತಹ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂತಹ ಕೆಲವು ವಿಮರ್ಶೆಗಳನ್ನು ಇಲ್ಲಿ ಗಮನಿಸಬಹುದು.

ಅಡಿಗ, ಬೇಂದ್ರೆಯವರಂತೆ ಅತಿ ಹೆಚ್ಚು ಪ್ರಾಯೋಗಿಕ ವಿಮರ್ಶೆಗೆ ಗುರಿಯಾದದ್ದು ಎ.ಕೆ. ರಾಮನುಜನ್ ಅವರ ಪದ್ಯಗಳು. 'ನಲವತ್ತು ನೆರಳು' ಇವರ 'ಹೊಕ್ಕುಳಲ್ಲಿ ಹೂವಿಲ್ಲ' ಕವನ ಸಂಕಲನದಲ್ಲಿನ ಅತಿ ಸಂಕೀರ್ಣವಾದ ಕವನ. ಬಿ.ಟಿ.ದೇಸಾಯಿಯವರು ಈ ಕವನದ ಕೊನೆಯ ಮೂರು ಸಾಲುಗಳನ್ನು ಅಡಿಗರ ಪ್ರಾರ್ಥನೆ ಕವನದ ಆರಂಭದ ಮೂರು ಸಾಲುಗಳೊಂದಿಗೆ ಹೋಗಿ ವಿಶ್ಲೇಷಣೆ ಮಾಡಿರುವುದನ್ನು ವಿರೋಧಿಸಿ ಪಿ.ಎಲ್. ಸುಬ್ರಹ್ಮಣ್ಯ ಹಾಗು ಮಾಧವ ಕುಲಕರ್ಣಿಯವರು ತಮ್ಮ ನಿಲುವನ್ನು ಸಾಕ್ಷಿ ಪತ್ರಿಕೆಯಲ್ಲಿ ದಾಖಲಿಸಿದ್ದಾರೆ. ಪಿ.ಎಲ್. ಸುಬ್ರಹ್ಮಣ್ಯ ಅವರು ಕವನದ ಏಳುನುಡಿಗಳ ಪರಸ್ಪರ ಸಂಬಂಧವನ್ನು ಗುರುತಿಸುವತ್ತ ದೃಷ್ಟಿಯಿಟ್ಟು ಪ್ರತಿಮೆಗಳ ಅರ್ಥವನ್ನು ಊಹಿಸಿದ್ದಾರೆ. ಮೊದಲನೆಯ ನುಡಿಯಲ್ಲಿ ಒಂದು ಜಾತಿಯ ಕವಿಗೆ ನೆರಳು ಪ್ರಾಣವಾಗುವುದು ಈ ಕವಿಗೆ ಒಪ್ಪಿತವಾದುದಲ್ಲ ಎಂಬುದನ್ನು ಆಧರಿಸಿ ಮುಂದಿನ ನುಡಿಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ. ಎರಡನೆಯ ನುಡಿಯ ಮೊದಲ ಭಾಗದಲ್ಲಿ 'ಕತ್ತ ಕಿವಿ ನಿಮಿರಿಸಿ ತೋರಿಸಿದ ನೆರಳನ್ನು' ಮೋಟುಗೋಡೆ ಮಡಿಸಿಟ್ಟುಕೊಂಡಿದೆ ಎಂಬುದರಲ್ಲಿ ಬೆಳಕಿನ ಪ್ರಾಮುಖ್ಯವಿಲ್ಲ. ಎರಡನೆಯ ಭಾಗದಲ್ಲಿ ಬೆಳಕು ತೋರಿಸುವ 'ಕಂಪಾಸು ಕಾಲ ಶಿಲ್ಪ'ವನ್ನು ನೋಡುವುದು ನೆರಳಿನಂತಹುದೇ ಆದ ಗುಹ್ಯಕಾಮವಾದ್ದರಿಂದ ಅಲ್ಲಿಯೂ ಬೆಳಕಿನೆಡೆಗೆ ಪ್ರವೃತ್ತಿಯಿಲ್ಲ. ಮೂರನೆಯ ನುಡಿಯ ಮುಗಿಲ ಕೆಂಪು ನೇರ ಬೆಳಕಲ್ಲ. ನಾಲ್ಕನೆಯ ನುಡಿಯ ಸೋಫಿಯಾ ಚರ್ಚಿನ ನಲವತ್ತು ನೆರಳು ಮಾತ್ರ ಇತ್ಯಾತ್ಮಕವಾದುದು. ಅಲ್ಲಿಯೇ ಇರುವ ಹನುಮಂತನ ಗುಡಿ ಇದಕ್ಕೆ ವಿರುದ್ಧವಾದುದು ಎಂದು ಇವರು ವಿವರಿಸಿದ್ದಾರೆ. ಮುಂದುವರಿದು ಈ ನುಡಿಗಳಲ್ಲಿ ರತಿ ವಿಷಯದ ಚಿಂತನೆ ಇದೆ ಎಂದಿದ್ದಾರೆ. ಕೃಷ್ಣ–ರಾಧೆ ಆದರ್ಶ ಪ್ರೇಮದ ಸರಳೀಕರಣ, ನೆರಳನ್ನು ತೋರಿಸಿ ತೃಪ್ತಿಪಟ್ಟುಕೊಳ್ಳುವ ಕತೆ ಕಾಮದ ಒಂದು ಸ್ಥಿತಿಯ ಸಂಕೇತ. ಕೆಂಡಸಂಪಿಗೆ ನಿಜ ಪ್ರೇಮದ ಸಂಕೇತ. ಅದರ ಮುಂದೆಯೇ ಬರುವ ಪ್ರತಿಮೆಗಳಲ್ಲಿ ಮೂರ್ತ

ರೂಪದಲ್ಲಿ ಸಾರ್ಥಕ್ಯ ಪಡೆಯದೆ ಇರುವ ಕಾಮದ ವ್ಯರ್ಥ ಅಭಿವ್ಯಕ್ತಿಯ ಪ್ರಯತ್ನವಿದೆ. ಚರ್ಚು ಸಾರ್ಥಕ ರತಿಯ ಸಂಕೇತ ಇತ್ಯಾದಿ. ಐದನೆಯ ನುಡಿಯಲ್ಲಿ ವಿರೋಧಾಭಾಸ ನಿರರ್ಥಕತೆ, ಅನರ್ಥ, ಅನಾರೋಗ್ಯ ಸ್ಥಿತಿಯ ಸೂಚನೆ ಇದ್ದರೂ ಕಾಮದ ಸಂಕೇತ, ಒಂಟಿತನಗಳು ಇಲ್ಲ. ಆರನೆಯ ನುಡಿಯಲ್ಲಿ ಇಲ್ಲಿಯವರೆಗೆ ಆದ ಚಿಂತನೆಯ ತಾತ್ಪರ್ಯದಂತಿದೆ. ಕೊನೆಗೆ 'ಅನಂಗದ ಲಹರಿಯನ್ನು ತಡೆದರೆ ಮಾತ್ರ ಬೆಳಕಿನ ಆವಾಹನೆಯಾಗುವುದು' ಎಂಬುದಕ್ಕೆ ಕವನದಲ್ಲಿ ಆಧಾರವಿಲ್ಲ. ಕವನದ ಆರಂಭದಲ್ಲಿದ್ದಂತೆ ಅಂತ್ಯದಲ್ಲಿಯೂ ಸರಳ ಧೋರಣೆ, ವ್ಯಂಗ್ಯ ಇದೆ. ಈ ಕವನದ ಪ್ರತಿಮೆಗಳ ಸಾಂಕೇತಿಕತೆ ಎಲ್ಲ ಸ್ತರಗಳಲ್ಲಿಯೂ ಕಾವ್ಯವಸ್ತುವಿಗೆ ಪೂರ್ಣ ಅಭಿವ್ಯಕ್ತಿಯನ್ನು ಒದಗಿಸುವುದಿಲ್ಲ. ಇದು ಅಸಾರ್ಥಕ ಕವಿತೆ" ಎಂದಿದ್ದಾರೆ.[೨೪]

ಇದೇ ಕವನವನ್ನು ಪಿ.ಎಲ್. ಸುಬ್ರಹ್ಮಣ್ಯರಿಗಿಂತ ಭಿನ್ನವಾಗಿ ವಿಶ್ಲೇಷಿಸಿದ ಮಾಧವ ಕುಲಕರ್ಣಿಯವರಿಗೆ ಕವನದ ಆರಂಭವಾಕ್ಯದ 'ಒಂದು ಜಾತಿಯ ಕವಿ' ರೊಮ್ಯಾಂಟಿಕ್ ಭಾವಗೀತಾತ್ಮಕವಾಗಿರದೆ ಕವಿಮನಸ್ಸಿನ ಒಂದು ಭಾಗವಾಗಿದೆ. ಹಾಗೆಯೇ ಕವನದ ಮೊದಲ ಹಾಗು ಕೊನೆಯ ನುಡಿಯನ್ನು ಬಿಟ್ಟು ಉಳಿದ ಮಾತುಗಳು ಉದ್ಧರಣ ಚಿಹ್ನೆಯಲ್ಲಿರುವುದರಿಂದ ಅವುಗಳು ಬೇರೆ ಬೇರೆ ಇನ್ಸ್‌ಟಂಟ್ ಪದ್ಯಗಳಾಗಿರದೆ ಅವು ಕವಿಯ ಇನ್ನೊಂದು ಮನಸ್ಸು ಅಪೇಕ್ಷಿಸುವ/ಗ್ರಹಿಸುವ ಯಾರದೋ ಮಾತುಗಳು ಎನ್ನುತ್ತಾರೆ.[೨೫]

ಕಾಡು ಮರಗಳ ಮಧ್ಯ ಮನೆ
ಸಿಮೆಂಟಿನ ಬಿರುಕಿನಲ್ಲಿ ಹುಲ್ಲು
ನ್ಯೂಯಾರ್ಕಿನ ಸೂಪರ್ ಮಾರ್ಕೆಟ್ಟಿನಲ್ಲಿ
ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು

ಈ ಕಿರುಗವಿತೆಯ ಕುರಿತು 'ರಾಮಾನುಜನ್ನರ ಕವಿತೆಗಳಲ್ಲಿ ನಾವು ಕಾಣುವುದರ ಆಚೆಗಿರುವ ಸತ್ಯವನ್ನು ನೋಡಬೇಕಾಗುತ್ತದೆ. ಇಂತಹ ಅಣಕುಗಳಿಂದ ತುಂಬಿದ ಚಿಕ್ಕ ಚಿಕ್ಕ ಕವಿತೆಗಳಿಗೆ ಅದರ ಸ್ವರೂಪಕ್ಕೆ ರಾಮಾನುಜನ್ನರ ಸಂವೇದನೆ, ದ್ವೈಭಾಷಿಕ ಅಥವ ತ್ರೈಭಾಷಿಕ ಸಂವೇದನೆ ಕಾರಣ' ಎನ್ನುತ್ತಾರೆ ಕುರ್ತಕೋಟಿ. ಮುಂದುವರೆದು, ರಾಮಾನುಜನ್ನರ ಕಾವ್ಯ ವಿಮರ್ಶಕರಿಗೆ ಅಷ್ಟಾಗಿ ಹಿಡಿಸದುದಕ್ಕೆ ಕಾರಣವನ್ನು ಗುರುತಿಸುತ್ತಾ 'ನಮ್ಮ ದೇಶದ ತಳಮಳದ ಮಾತು, ಅವು ನೀಡಿದ ಸಂವೇದನೆಯ ಮಾತು ಇಂಥದ್ದರಿಂದ ಪಾರಾಗಿ ಹೋದ ರಾಮಾನುಜನ್ ಭಿನ್ನವಾದ ಸಂವೇದನೆಯ ನೆಲೆಯಲ್ಲಿ ಕವಿತೆ ಬರೆದದ್ದರಿಂದ ಬಹುಶಃ ನಮ್ಮ ವಿಮರ್ಶಕರಿಗೆ ಇವು ವಿಕ್ಷಿಪ್ತ ಎನಿಸಿರಬಹುದು ಎಂದಿದ್ದಾರೆ.[೨೬]

ಲಂಕೇಶ್ 'ಶ್ಲೋಕ ಷಟ್ಪದಿಗಳ ನಡುವೆ..'ಎಂಬ ತಮ್ಮ ಟೀಕೆಟಿಪ್ಪಣಿಯೊಂದರಲ್ಲಿ 'ಹೊಕ್ಕುಳಲ್ಲಿ ಹೂವಿಲ್ಲ' ಉಂಟು ಮಾಡಿದ ಸಣ್ಣ ಕ್ರಾಂತಿಯನ್ನು ಕುರಿತು ಹೇಳುತ್ತಾ ರಾಮಾನುಜನ್ನರ ಕವಿತೆಗಳನ್ನು ಅನನ್ಯವಾದ ರೀತಿಯಲ್ಲಿ ವಿಮರ್ಶಿಸಿದ್ದಾರೆ

"ಅಡಿಗರು ತಮ್ಮ ಕಾವ್ಯ ನೀಡಿದ ಮೇಲೆ ಕಾವ್ಯ ಬರೆಯುವುದು ಹೇಗೆಂದು ಎಲ್ಲರೂ ಪರಿತಪಿಸುತ್ತಿದ್ದರು. ಆ ಕಾಲದಲ್ಲಿ ರಾಮಾನುಜನ್ 'ಅಷ್ಟೆಲ್ಲ ತಳಮಳದ ಅಗತ್ಯವಿಲ್ಲ, ಹೀಗೆ ಬರೆದರೆ ಪದ್ಯವಾಗುತ್ತದೆ ನೋಡಿ' ಎಂದು ಅತ್ಯಂತ ಸರಳವಾಗಿ, ಕ್ಲೀಷೆಗಳನ್ನೆಲ್ಲ ತಿರಸ್ಕರಿಸಿ ಕಾವ್ಯದ ಗತ್ತುಗಳನ್ನೆಲ್ಲ ಒತ್ತಟ್ಟಿಗಿಟ್ಟು ಬರೆದರು. ಇದು ದೊಡ್ಡ

ಕಾವ್ಯವಲ್ಲ. ಹಾಗೆ ದೊಡ್ಡ ಕಾವ್ಯವಾಗುವ ಉದ್ದೇಶವೂ ಇಲ್ಲ. ಅದೇ ಇಲ್ಲಿಯ ಆಕರ್ಷಣೆ. 'ಕವನ ಬರೆಯುವುದು ಕಷ್ಟವೇ ಸ್ವಾಮಿ? ಇಲ್ಲ, ಬರೆಯದಿರುವುದೇ ಕಷ್ಟ' ಎಂದ ರಾಮಾನುಜನ್‌ಗೆ ಅಮೆರಿಕಾದ ನಗರಗಳ ನಡುವೆ ಹಚ್ಚಗೆ ಕೊಯ್ದ ಕೊತ್ತಂಬರಿ ಸೊಪ್ಪು ಕಾವ್ಯವಾಗಿ ಅವತರಿಸಬಲ್ಲದೆಂದು ಗೊತ್ತಿತ್ತು. ಹಾಗೆಯೇ 'ಬಚ್ಚಲು ಮನೆಯ ಗಂಗಾಳದಲ್ಲಿ ಅಪ್ಪ ಮರೆತ ಹೊಸ ಹಲ್ಲು ಹಲ್ಲು ಕಿರಿಯಿತು, ನಾನು ನೋಡಿದೆ' ಎನ್ನುವುದು ಎಲ್ಲರಲ್ಲಿ ಅಚ್ಚರಿ ಮೂಡಿಸಬಲ್ಲದೆಂಬುದು ಗೊತ್ತಿತ್ತು. ರಾಮಾನುಜನ್ ಕವನಗಳು ಎಂದು ಬರೆದದ್ದರ ಬಗ್ಗೆ ಅಸೂಯೆ ಪಟ್ಟವ್‌ರು, ಗೊಂದಲ ಗೊಂಡವರು ಯಾವುದೇ ಹಾಸ್ಯಪ್ರಜ್ಞೆ ಇಲ್ಲದ ಕವಿಗಳು ಮಾತ್ರ,... ನಿಜಕ್ಕೂ ಪ್ರಜ್ಞಾವಂತ ಲೇಖಕರಾದ ರಾಮಾನುಜನ್ ಜಾಗೃತ ರೀತಿಯ ಲೇಖಕ. ತಾವು ಏನು ಬರೆಯಬೇಕೆಂದಿದ್ದೇನೆ ಎಂದು ಅವರಿಗೆ ಚೆನ್ನಾಗಿ ಗೊತ್ತು. ಅದು ಅವರ ವೈಶಿಷ್ಟ್ಯ ಮತ್ತು ದೌರ್ಬಲ್ಯ".[೨೭]

'ಅಪ್ಪ ಮಗ' (ಹೊಕ್ಕುಳಲ್ಲಿ ಹೂವಿಲ್ಲ) ಕವನದ ಕುರಿತಂತೆ ವಿಶ್ಲೇಷಣೆ ಮಾಡುವ ಸುಬ್ರಾಯ ಚೊಕ್ಕಾಡಿ ಈ ಕವನದಲ್ಲಿ ಎರಡು ತಲೆಮಾರಿನ ನಡುವಣ ಸಂಘರ್ಷವಿದೆ ಎಂದಿದ್ದಾರೆ.[೨೮]

'ಆದರಲ್ಲಿ ಇದು' ಪದ್ಯದ ಮೂರನೆಯ ಪ್ರತಿಮೆ 'ನ್ಯೂಯಾರ್ಕಿನ ಸೂಪರ್ ಮಾರ್ಕೇಟಿನಲ್ಲಿ ಹಚ್ಚನೆ ಕೊಯ್ದ ಕೊತ್ತಂಬರಿ ಸೊಪ್ಪು' ಅದು 'ಹಚ್ಚಗೆ ಕೊಯ್ದದ್ದು', ಅದು ಅಲ್ಲಿ ಬೆಳೆದದ್ದು ಕೂಡ ಅಲ್ಲ. ಎಲ್ಲಿಯೋ ಬಹುಶಃ ಇಂಡಿಯಾದಿಂದ ಬಂದದ್ದಿರಬೇಕು. ಇದಕ್ಕೆ ಬೇರಿಲ್ಲ, 'ಹಚ್ಚಗೆ ಕೊಯ್ದ' ಎಂಬ ಶಬ್ದ ಸಮುಚ್ಚಯ 'ಸೊಪ್ಪು' ಶಬ್ದದ ನಿಸ್ಸಾರತೆ ಕವಿತೆಯ ಅರ್ಥವ್ಯಾಪ್ತಿಯನ್ನು ಹಿಗ್ಗಿಸುತ್ತದೆ. ಕಾಡುತನ ಮತ್ತು ಸಂಸ್ಕೃತಿ ಇವುಗ್ಳ ಸಂಬಂಧದ ಅನಿವಾರ್ಯತೆಯನ್ನು ಅವಶ್ಯಕತೆಯನ್ನು ಅಸಂಬದ್ಧತೆಯನ್ನು ಆಲೋಚಿಸುತ್ತದೆ, ನಿರೂಪಿಸುತ್ತದೆ, ಬೆಲೆಗಟ್ಟುತ್ತದೆ ಎಂಬ ಕುರ್ತಕೋಟಿಯವರ ವಿಶ್ಲೇಷಣೆಗೆ ತೀವ್ರ ಪ್ರತಿಕ್ರಿಯೆಯನ್ನು ಪಿ.ಎಲ್.ಸುಬ್ರಹ್ಮಣ್ಯರ ಲೇಖನದಲ್ಲಿ ಕಾಣಬಹುದು.[೨೯] ಕುರ್ತಕೋಟಿಯವರ ನೂರನೇ ಚಿತ್ರವನ್ನು ಅರ್ಥೈಸುವ ರೀತಿಯಿಂದಲೇ ಅವರಿಗೆ ಈ ಸಾಲುಗಳು ಅರ್ಥವಾಗಿಲ್ಲ ಎಂದು ತಿಳಿಯುತ್ತದೆ ಎಂದು ಹೇಳುವ ಸುಬ್ರಹ್ಮಣ್ಯ ಈ ಕವನದಲ್ಲಿ 'ಕಾಡು' ಯಾವುದೆ ರೀತಿಯಲ್ಲಿ ಕಾಡುತನವನ್ನು ಧ್ವನಿಸುವುದಿಲ್ಲ ಬದಲಿಗೆ ರಮ್ಯ ಕಲ್ಪನೆಯನ್ನೇ ಉದ್ದೀಪಿಸುತ್ತದೆ ಎನ್ನುತ್ತಾರೆ. ಜೊತೆಗೆ 'ಸಿಮೆಂಟಿನ ಬಿರುಕಿನಲ್ಲಿ ಹುಲ್ಲು' ಎಂಬ ಸಾಲು ಒಡೆದ ಮನಸ್ಸಿನ ಅರ್ಥಮರ್ಥ ಪ್ರಯತ್ನದ ಅಪೂರ್ಣ ಫಲ ಎಂದಿದ್ದಾರೆ.[೨೯]

ಮಾಧವ ಕುಲಕರ್ಣಿಯವರು ತಮ್ಮೊಂದು ಲೇಖನದಲ್ಲಿ ಕಂಬಾರರ 'ಗಂಗಾಮಾಯಿ' ಕವಿತೆಯನ್ನು ವಿಶ್ಲೇಷಣೆ ಮಾಡಿದ್ದಾರೆ. ಈ ವಿಶ್ಲೇಷಣೆಯಲ್ಲಿ "ರಾಮಾನುಜನ್ನರ 'ಪಂಚಭೂತಗಳಲ್ಲಿ ಒಂದು' ಮತ್ತು ಕಂಬಾರರ 'ಗಂಗಾಮಾಯಿ' ಇವೆರಡೂ ಕವಿತೆಗಳ ವಿಷಯ ಒಂದೇ ಆಗಿದೆ, ನಿರೂಪಣೆಯ ರೀತಿಯಂತೂ ಆಶ್ಚರ್ಯ ಎನಿಸುವಷ್ಟು ಅಭಿನ್ನವಾಗಿದೆ" ಎಂಬ ಕುರ್ತಕೋಟಿಯವರ ಅಭಿಪ್ರಾಯವನ್ನು ಪ್ರಸ್ತಾಪಿಸುತ್ತಾರೆ.

ಹರಿಯುವುದಕ್ಕೆ ದಿಕ್ಕಿಲ್ಲದ ನೀರು ವರ್ತುಲಾಕಾರದ (ಗೋಲ)
ಬಿಳಿಗುದ್ದಿನಲ್ಲಿ ಪಿಸು ನುಡಿಯುವುದು

ಭೂಮಿತಾಯಿಯ ಒಡಲಲ್ಲಿಯೇ ಪಾಪವಿದೆ. ಇದು ಕವಿಯ ನಿಲುವೂ ಹೌದು, ಕವನದ ಕೇಂದ್ರ ಬಿಂದುವೂ ಹೌದು ಎಂದಿದ್ದಾರೆ ಕುಲಕರ್ಣಿ. ಅವರಿಗೆ 'ಗಂಗಾಮಾಯಿ' ಕವನ ಬರೀ ಕವನವಷ್ಟೇ ಆಗಿರದೆ 'ಗಂಗಾಮಾಯಿ' ಎಂಬ ಕೆರೆಯ ಜಾನಪದ ಕತೆಯಾಗಿ, ಸ್ಥಲ ಪುರಾಣವಾಗಿ, ಒಂದು ಸಂಸ್ಕೃತಿಯ ಅವನತಿಯ ಸಂಕೇತವಾಗಿ,ಕವಿಯ ಸುಪ್ತ ಚೇತನದ ಕ್ರಿಯೆಗೆ ಸಂಕೇತವಾಗಿ ಕಂಡು ಬಂದಿದೆ. 'ಪಂಚಭೂತಗಳಲ್ಲಿ ಒಂದು' ಕವನ ಒಂದು ನಿಮಿಷದ ತೆಳು ಅನಿಸಿಕೆಯ ಮೇಲೆ ಆಧಾರವಾದರೆ 'ಗಂಗಾಮಾಯಿ' ಒಂದು ಜನಾಂಗದ ನಂಬಿಕೆಗಳು, ಆ ನಂಬಿಕೆಗಳಿಗಿಂತ ಭಿನ್ನವಾದ ವಾಸ್ತವದ ಅರಿವಾದ ನಡೆಯುವ ತಾಕಲಾಟ ಮುಂತಾದ ಗಂಭೀರ ಸಂಗತಿಗಳ ಪರಿಶೀಲನೆಯಿಂದ ಹುಟ್ಟಿದ ಕವನ.[೨೦] ಹಾಗಾಗಿ ಕುರ್ತಕೋಟಿಯವರ ಅಭಿಪ್ರಾಯ ಸರಿಯಲ್ಲ ಎಂದು ಹೇಳಿದ್ದಾರೆ.

...ಒಳಗಡೆಯಲ್ಲಿ ನಾಯಿ ನರಿ
ಹಂದಿ ಶುಕ ಪಿಕಾದಿಯ ಚೌರ್ಯಾಂಸಿ ಲಕ್ಷ ಕೀಚು ಕಿರಚು
ಅದಕದಕೆ ಅದರದರ ಪಾಲಿನ ಗಾಳಿ ಮಳೆ ಬೆಳಕು, ಮೇಳೆ
ಪೊದೆ ಹಸಿರು ಆಹಾರ ಭಯ ನಿದ್ರೆ ಮೈಥುನಾದಿಗಳು

ಮೇಲಿನ ಸಾಲುಗಳು ಹೇಳುವಂತೆ ಈ ಪ್ರಾಣಿಗಳಿಗೆ ಎರಡು ಬಹುಮುಖ್ಯ ಮನುಷ್ಯ ಗುಣಗಳೂ ಇವೆ; ಭಯ ಹಾಗು ಮೈಥುನ. ಇವು ಮನುಷ್ಯ ಗುಣಗಳೇ ಆಗಬೇಕಿಲ್ಲ. ಮನುಷ್ಯನೂ ಸೇರಿದಂತೆ ಪ್ರಾಣಿ ಗುಣಗಳು. ಈ ಪ್ರವೃತ್ತಿಗಳಿಗೆ ಸಂಬಂಧಿಸಿದಂತೆ ಮನುಷ್ಯ ಚೌರ್ಯಾಂಸಿ ಲಕ್ಷಗಳಲ್ಲಿ ಒಬ್ಬನೆಂಬುದು ಕವನದ ಮುಂದಿನ ವಿವರಗಳಿಂದ ತಿಳಿಯುತ್ತದೆ –

'ಮೂಡಣದ ಮುದಿಕುರುವೊಡೆದು ನೆತ್ತರು ಕೀವು ಸೋರಿತೋ'

ಕುರಿತಂತೆ ಈ ಸಾಲಿನಲ್ಲಿ ಕವಿಗೆ ಸೂರ್ಯ ಯಾಂತ್ರಿಕವಾಗಿ ಕಾಣುತ್ತಿದ್ದಾನೆ, ಬೆಳಕಿನ ನಿರರ್ಥಕತೆಯನ್ನು ಸೂಚಿಸುತ್ತಾನೆ ಎಂದಿದ್ದಾರೆ.

ಸಾಕ್ಷಿ ೮ರ ಬಿ.ಟಿ. ದೇಸಾಯಿ ಅವರ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಮಾಧವ ಕುಲಕರಣಿ ಸಾಕ್ಷಿ ೯ರ ಸಂಚಿಕೆಯಲ್ಲಿ ದೇಸಾಯಿಯವರನ್ನು ಟೀಕಿಸಿ ಲೇಖನವೊಂದನ್ನು ಬರೆದಿದ್ದಾರೆ,

> "ನಲವತ್ತು ನೆರಳು ಪದ್ಯದ ಕನ್ನಡ ಕಾವ್ಯಕ್ಕೆ ಬಹುದೊಡ್ಡ ಕಾಣಿಕೆ ಎಂದುನಂಬಿದ ಬಿ.ಟಿ.ದೇಸಾಯಿಯವರು ತಮ್ಮ ಲೇಖನದಲ್ಲಿ ವಿಶ್ಲೇಷಿಸಿದ ಕವನ 'ತಾತ ಕೂತಿದ್ದ' ಎಂಬುದು; ಆದರೆ ಆಡುಮಾತಿನ ಉದಾಹರಣೆ ಮಾತ್ರ 'ನಲವತ್ತುನೆರಳು' ಪದ್ಯದ ಕೊನೆಯ ಭಾಗವನ್ನು ಪದ್ಯದಿಂದ ಬೇರ್ಪಡಿಸಿ ತೋರಿಸಿದ್ದಾರೆ. ಲೇಖನದ ಕೊನೆಯ ಭಾಗದಲ್ಲಿ ರಾಮಕೃಷ್ಣ, ಬುದ್ಧ, ಗಾಂಧಿ, ನೆಹರೂ ಕೂಡ ಹೊಡೆದಾಡಿ ಒದರಾಡುವ ಕವಿಗಳೇ ಹೆಚ್ಚು. ಉದಾಹರಣೆಗೆ ಅಡಿಗರೇ ಇದ್ದಾರಲ್ಲ" ಎಂದಿದ್ದಾರೆ. ಅಡಿಗರ 'ನೆಹರು ನಿವೃತ್ತರಾಗುವುದಿಲ್ಲ ಎನ್ನುವ ಪದ್ಯ ಈ ವಿಮರ್ಶಕನಿಗೆ ಕೇವಲ ಒದರಾಟವಾಗಿ ಕಂಡಿದೆ. ಈ ಚರ್ಚೆಯನ್ನು ಮುಂದುವರೆಸಿರುವ ಕುರ್ತಕೋಟಿಯವರು ಸಾಕ್ಷಿ ೧೧ರಲ್ಲಿ 'ರಾಮಾನುಜನ್ನರ ಕಾವ್ಯ' ಎಂಬ ಲೇಖನವೊಂದನ್ನು ಬರೆದಿದ್ದಾರೆ. "ರಾಮಾನುಜನ್ನರ ಅಥವ ಇನ್ನುಳಿದ ಉದಯೋನ್ಮುಖ ಕವಿಗಳ ಕಾವ್ಯವನ್ನು ಅಡಿಗರ ಕಾವ್ಯಕ್ಕೆ ಹೋಲಿಸುವುದರಿಂದ ಆ ಕವಿಗಳಿಗೇ ಅಪಚಾರ ಎಸಗಿದಂತೆ. ಇಂತಹ

> ಹೋಲಿಕೆಗೆ ಕೈಹಾಕಬೇಕಾದರೆ ಉತ್ಸಾಹದ ಆತುರತೆಗಿಂತ ಹೆಚ್ಚಾಗಿ ವಿಮರ್ಶೆಯ ಎಚ್ಚರ ಬೇಕಾಗುತ್ತದೆ"

ಎನ್ನುತ್ತಾರೆ.

೧೯೭೦ರ ನಂತರದ ದಿನಗಳಲ್ಲಿ ಕನ್ನಡ ಸಾಹಿತ್ಯ ಹೊಸತೊಂದು ಮಾರ್ಗದ ಅನ್ವೇಷಣೆಯಲ್ಲಿ ಇದ್ದುದು ಕಂಡುಬರುತ್ತದೆ. ನವ್ಯ ಸಾಹಿತ್ಯದಲ್ಲಿನ ನ್ಯೂನತೆಗಳು, ಸೃಷ್ಟಿಯಾದ ಸಾಹಿತ್ಯದಲ್ಲಿ ಗಟ್ಟಿತನದ ಕೊರತೆ ಇತ್ಯಾದಿಗಳನ್ನು ಕುರಿತಂತೆ ಲೇಖನಗಳು ವಿಮರ್ಶೆಗಳು ಅಂದಿನ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅಂತಹ ಲೇಖನಗಳಲ್ಲಿ ಅನಂತಮೂರ್ತಿಯವರು ಸಾಕ್ಷಿ ಪತ್ರಿಕೆಗೆ ಬರೆದ 'ನವ್ಯಕಾವ್ಯ ಮತ್ತು ತಾತ್ವಿಕತೆ ಟಿಪ್ಪಣಿಗಳು' ಎಂಬ ಲೇಖನ. ಇಂಗ್ಲಿಷ್ ಸಾಹಿತ್ಯದ ಪ್ರಭಾವವಿದ್ದರೂ ನಾವು ನಮ್ಮ ಸಹಜ ಮನೋಧರ್ಮದಿಂದ ವಿಮುಖರಾಗಬಾರದು. ಇಂಗ್ಲಿಷ್ ಅಲ್ಲದೆ ಇತರ ಭಾಷೆಗಳಿಂದಲೂ ನಾವು ಕಲಿಯಬೇಕಾದದ್ದು ಬಹಳಷ್ಟಿದೆ ಎಂದಿದ್ದಾರೆ,

> "ನವ್ಯಕಾವ್ಯ ಬರೆಯುತ್ತಿರುವ ಬಹಳ ಮಂದಿ ತರುಣರು ಹೆಚ್ಚಾಗಿ ಇಂಗ್ಲಿಷ್ ಸಾಹಿತ್ಯದಿಂಡ ಪ್ರಭಾವಿತರಾದವರು. ಇಂಗ್ಲಿಷ್ ಸಾಹಿತ್ಯದಿಂದ ಮಾತ್ರ ಪ್ರಭಾವಿತರಾದ ನಾವು ಕೆಲವೊಮ್ಮೆ ಎಷ್ಟು ದಡ್ಡರಂತೆ ವರ್ತಿಸುತ್ತೇವೆ ಎಂದರೆ ಇಂಗ್ಲಿಷ್ ಜನಾಂಗಕ್ಕೆ ಅತ್ಯಂತ ಸಹಜವಾದ ಮನೋಧರ್ಮ ನಮಗೂ ಸಹಜವಾದದ್ದು ಎಂದು ಭಾವಿಸುವಷ್ಟು. ಅಮೂರ್ತವಾದ ತತ್ವಗಳಿಂದ ತೀರಾ ಉತ್ಸುಕರಾಗಿ ತಲೆಕೆಡಿಸಿಕೊಳ್ಳುವುದು ನಾಗರೀಕವಾದ ಮಾರ್ಗವಲ್ಲ ಎಂಬರ್ಥ ಬರುವ ಮಾತನ್ನು ವಾಲ್ಟರ್ ಫೇಟರ್ ಒಂದು ಕಡೆ ಆಡಿದ್ದಾನೆ. ಯಾವತ್ತೂ ಪ್ರಾಪಂಚಿಕ ವಾಸ್ತವತೆಯನ್ನು ಮರೆಯದಿರುವುದು, ಅತಿಗೆ ಹೋಗದಂತೆ ವಿವೇಕಶಾಲಿಗಳಾಗಿರುವುದು ಇಂಗ್ಲಿಷ್ ಮನೋಧರ್ಮಕ್ಕೆ ಅತ್ಯಂತ ಸಹಜವಾದ ಗುಣಗಳು. ಭಾರತೀಯ ಲೇಖಕರಾದ ನಾವು ಇಂಗ್ಲಿಷಿನಿಂದ ಮಾತ್ರವಲ್ಲದೆ ಬೇರೆ ಭಾಷೆ ಜನಾಂಗಗಳಿಂದಲೂ ಕಲಿಯಬಹುದಾದದ್ದು ಬಹಳ ಇದೆ ಎಂಬುದು. ತತ್ವಗಳನ್ನು ಸಲೀಸಾಗಿ ಪದ್ಯಕ್ಕೆ ಇಳಿಸಿಬಿಡುತ್ತಿದ್ದ ನಮ್ಮ ಹಿಂದಿನ ಲೇಖಕರನ್ನು ವಿರೋಧಿಸುವ ಭರದಲ್ಲಿ ನಾವು ಅಮೂರ್ತ ತತ್ವಗಳಿಂದ ತಲೆಕೆಡಿಸಿಕೊಳ್ಳದೆ ಅಪಾಯಕಾರೀ ಎನ್ನುವ ಇನ್ನೊಂದು ತಪ್ಪನ್ನು ಮಾಡುತ್ತಿರಬಹುದು ಎಂಬ ಸಂಶಯ ನನಗಿದೆ"[೩೧]

ಸಾಕ್ಷಿ ೧೨ರ 'ಹೊಸಕಾವ್ಯದ ಕಷ್ಟ' ಎಂಬ ಲೇಖನದಲ್ಲಿ ಕೆ.ವಿ. ತಿರುಮಲೇಶ್ ಶ್ರೀನಿವಾಸಕುಲಕರ್ಣಿಯವರ ಮೊದಲ ಕವನ ಸಂಕಲನ 'ಕೆಥಾರ್ಸಿಸ್' ಕುರಿತಂತೆ ವಿಮರ್ಶೆ ಮಾಡಿದ್ದಾರೆ. ಹಲವು 'ಅಡಿಗೋತ್ತರ'ರಲ್ಲಿ ಕಂಡು ಬರುತ್ತಿರುವ ಆತ್ಮವಿಶ್ವಾಸ ಅವರ ಬೆಳವಣಿಗೆಗೇ ಮಾರಕ. ಇಂತಹ ಸಂದರ್ಭಗಳಲ್ಲಿ ಬರೆಯುವ ಮುನ್ನುಡಿಗಳು, ಹಿನ್ನುಡಿಗಳು ಕವಿಯ ಅತಿರೇಕವನ್ನು ಸೂಚಿಸುತ್ತವೆ. ಹೊಸತೇನನ್ನೋ ಹೊಸತಾಗಿ ಹೇಳಬೇಕು ಎನ್ನುವ ಉತ್ಸಾಹ ಸ್ವಾಗತಾರ್ಹವಾದರೂ ಸ್ವಂತ ಜಾಡನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿರುವ ಕವಿಗೆ ತನ್ನ ನೆಲೆಯ ಪ್ರಜ್ಞೆ ಇರಬೇಕು. ಮುನ್ನುಡಿಯ ಗತ್ತಿನಿಂದಲೋ, ಬಳಗದವರ ಪ್ರಯತ್ನದಿಂದಲೋ ಈ ಕೃತಿಗಳು ಅಂತ್ಯದ ತನಕ ಹೋರಾಡುವುದೂ ಉಂಟು. ಆದರೂ ಸಾಹಿತ್ಯ ಗತಿಯ ನಿಷ್ಠುರದಲ್ಲ ಇವೊಂದೂ ಉಳಿಯದೆ ಹೋಗುತ್ತವೆ" ಎಂದಿದ್ದಾರೆ.[೩೨]

ಯಶವಂತ ಚಿತ್ತಾಲರ 'ಪುರುಷೋತ್ತಮ' ಮತ್ತು 'ಕೇಂದ್ರ ವೃತ್ತಾಂತ' ಕಾದಂಬರಿಗಳ ಕುರಿತು ವಿಮರ್ಶಾ ಲೇಖನಗಳು 'ಸಂಕ್ರಮಣ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಪುರುಷೋತ್ತಮ ಕಾದಂಬರಿಯನ್ನು ವಿಶ್ಲೇಷಿಸುವ ಜಯಂತ ಕಾಯ್ಕಿಣಿ,

> "ಪುರುಷೋತ್ತಮ ತಲೆಮಾರುಗಳ ಕತೆ, ತಲೆ ಮಾರಿಕೊಂಡವರ ಕತೆ ಅಥವ ತಲೆಗಾಗಿ ಹೃದಯ ಮಾರಿಕೊಂಡವರ ಕತೆ. ಕನಸು ಕಳೆದುಕೊಂಡ ಇಂದಿನ ಭಯಾನಕ ಲೋಕದ ಉಳಿವಿನ ಏಕೈಕ ದಾರಿ ಹೃದಯದ್ದು – ತಲೆಯ ಹಂಗಿಲ್ಲದ ಹೃದಯದ್ದು ಎಂಬುದನ್ನು ಮನಗಾಣಿಸುವ ಕತೆ. ಕಾದಂಬರಿಯ ಆಶಯ ವಾಸ್ತವ ಜಗತ್ತಿನ ಅಧಃಪತನದ ಸಂಕ್ರಮಣ ಸ್ಥಿತಿಯನ್ನು ಮನುಷ್ಯ ಕಾಳಜಿಯ ಶೋಧಯಾತ್ರೆಯ ಸ್ಥಿತಿಯನ್ನು ಬಿಂಬಿಸುವುದಾಗಿದೆ"[೩೨]

ಎಂದು ಈ ಲೇಖನದಲ್ಲಿ ಹೇಳಿದ್ದಾರೆ. ಕೇಂದ್ರ ವೃತ್ತಾಂತ ಕುರಿತಂತೆ ಕೆಲವು ಅನಿಸಿಕೆಗಳನ್ನು ದಾಖಲಿಸಿರುವ ಡಾ.ಗಣೇಶ ಉಪಾಧ್ಯರು,

> "'ಕೇಂದ್ರ ವೃತ್ತಾಂತ' ಚಿತ್ತಾಲರ ಇತರ ಕಾದಂಬರಿಗಳಿಗಿಂತ ನಿರೂಪಣೆಯಲ್ಲಿ, ತಂತ್ರದಲ್ಲಿ, ವಸ್ತುವಿನಲ್ಲಿ, ಸಾಕಷ್ಟು ಭಿನ್ನವೂ ವಿಶಿಷ್ಟವೂ ಆಗಿದೆ. ಇದೊಂದು ಮನುಷ್ಯಕೇಂದ್ರಿತ ಕಾದಂಬರಿ. ಇಲ್ಲಿ ಆತನ ನಡವಳಿಕೆಗಳು, ಅವನ ಊಹೆ ಮತ್ತು ಕಲ್ಪನೆಗಳು ಸೃಷ್ಟಿಸುವ ಪ್ರಪಂಚ ಅರಿವಿಗೇ ಬಾರದಂತೆಯೇ ಆತನನ್ನು ಸುತ್ತಿಕೊಳ್ಳುವ ಸಂಬಂಧಗಳು, ಆತ ಏನೆಲ್ಲ ಮಾಡಬಲ್ಲ, ಅವನ ಸಾಧ್ಯಾಸಾಧ್ಯತೆಗಳೇನು, ಈ ಮನುಷ್ಯ ಸ್ಥಿತಿಯ ಹಿಂದಿರುವ ಸೋಜಿಗ, ಹೀಗೆ ವಿವಿಧ ಮಗ್ಗುಲುಗಳಲ್ಲಿ ಬೆಳೆದು 'ಕೇಂದ್ರ ವೃತ್ತಾಂತ' ಕಾದಂಬರಿ ಮೈದಾಳಿದೆ. ಇದೊಂದು ಘಟನಾ ಕಾದಂಬರಿಯಾಗಿದ್ದು ಇಲ್ಲಿ ನಾಯಕ, ನಾಯಕಿ ಪ್ರತಿನಾಯಕ ಹೀಗೆ ಯಾರೂ ಮುಖ್ಯರಲ್ಲ, ಯಾರೂ ಅಮುಖ್ಯರಲ್ಲ. ಒಂದು ಸಂದರ್ಭದಲ್ಲಿ ಕೇಂದ್ರದ ಪಾತ್ರಗಳು ನಿಂತಂತೆ ತೋರಿದರೆ ಕೆಲವು ಕಡೆಗಳಲ್ಲಿ ಘಟನೆಗಳೇ ಮೇಲುಗೈ ಪಡೆದಂತೆ ಭಾಸವಾಗುತ್ತದೆ. ಹಾಗಾಗಿ ಇದು ಉಳಿದ ಕಾದಂಬರಿಗಳಿಗಿಂತ ಭಿನ್ನ. ಚಿತ್ತಾಲರೇ (ತಮ್ಮ ಆಯ್ದ ಕತೆಗಳ ಮುಮ್ಮಾತಿನಲ್ಲಿ) ಒಂದು ಕಡೆ ಹೇಳುವಂತೆ 'ನನ್ನ ಲಕ್ಷ್ಯ ಈಗ ನಿಶ್ಚಿತವಾಗಿ ಸಮಕಾಲೀನ ಸಮಾಜದಲ್ಲಿಯ ವಿದ್ಯಮಾನದ ಕಡೆಗೆ, ಈ ಸಮಾಜದ ಸ್ವರೂಪವನ್ನು ಅರಿಯುವುದರ ಕಡೆಗೆ ಮುಖ ಹೊರಳಿಸುವ ಲಕ್ಷಣಗಳು ನನಗೆ ಕಂಡಿವೆ'. ಇದಕ್ಕೆ ಉತ್ತಮ ನಿದರ್ಶನ 'ಕೇಂದ್ರ ವೃತ್ತಾಂತ' ಕಾದಂಬರಿ"

ಎಂದಿದ್ದಾರೆ[೩೩]

ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ'ವನ್ನು ಕುರಿತು ಅತ್ಯಂತ ವಿಭಿನ್ನವಾಗಿ ಆಲೋಚಿಸಿರುವ ಟಿ.ಪಿ. ಅಶೋಕರ ವಿಮರ್ಶಾ ಲೇಖನ ಸಂಕ್ರಮಣದಲ್ಲಿ ಪ್ರಕಟವಾಗಿದೆ. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಗ್ರಾಮೀಣ ಪರಿಸರದ, ಸಾಮಾಜಿಕ ವ್ಯವಸ್ಥೆಯನ್ನು ಕುರಿತ ಕಾದಂಬರಿಯಾಗಿದೆ. ಇಲ್ಲಿ ಬರುವ 'ಕಂಬಳ್ಳಿ' ಬದುಕಿನ ರಾಜಕೀಯ ಚಿತ್ರಣವನ್ನು ಕುರಿತು ಅಶೋಕರು ಹೀಗೆ ಬರೆಯುತ್ತಾರೆ.

"ಲಂಕೇಶರು ಕಂಬಳ್ಳಿಯ ಬದುಕನ್ನು ಯಾವುದೇ ರಾಜಕೀಯ ಸಿದ್ಧಾಂತದ ಚೌಕಟ್ಟಿನಲ್ಲಿ ವಿಶ್ಲೇಷಿಸದೆ ಬದುಕಿನ ಮೂಲಭೂತ ಅಂಶಗಳಾದ ಆರ್ಥಿಕ ಮತ್ತು ಲೈಂಗಿಕ ಸಂಬಂಧಗಳಲ್ಲಿ ಕಂಡುಕೊಳ್ಳಲು ಯತ್ನಿಸಿದ್ದಾರೆ. ಗ್ರಾಮೀಣ ಭಾರತದಲ್ಲಿ ಹೇಗೆ ರಾಜಕೀಯ ಸಿದ್ಧಾಂತ ನಮ್ಮ ರಾಜಕೀಯ ಚಟುವಟಿಕೆಗಳಿಗೆ ಕಾರ್‍ಣವಾಗದೆ ಅದರ ಜಾಗವನ್ನು ವೈಯಕ್ತಿಕ ಅಧಿಕಾರ, ಪ್ರಭಾವ, ಹಣ, ಕಾಮ, ಮೊದಲಾದವು ಆಕ್ರಮಿಸಿಕೊಳ್ಳುತ್ತವೆ ಎಂಬುದನ್ನು ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ'ದಲ್ಲಿ ಕಾಣಬಹುದಾಗಿದೆ"

ಎ.ಕೆ. ರಾಮಾನುಜನ್‌ರ 'ಹಳದಿಮೀನು' ಹಾಗು ಕಾರಂತರ 'ಸರಸಮ್ಮನ ಸಮಾಧಿ' ಕುರಿತಂತೆ ವಿಮರ್ಶಾ ಲೇಖನಗಳನ್ನು 'ಸಾಕ್ಷಿ' ಪತ್ರಿಕೆಯ ಜುಲೈ ೧೯೬೮, ಸಂಚಿಕೆ ೪ರಲ್ಲಿ ಕಾಣಬಹುದು. ಕಾರಂತರ 'ಸರಸಮ್ಮನ ಸಮಾಧಿ' ಕಾದಂಬರಿಯನ್ನು ವಿಮರ್ಶಿಸುತ್ತ ಬಿ.ದಾಮೋದರ ರಾವ್‌ಅವರು

"ಉತ್ತಮ ಕೃತಿಗಳಲ್ಲಿ ಪ್ರಬುದ್ಧ ಕಾರಂತರು ಭಾಷೆಯನ್ನು ದುರುಪಯೋಗ ಮಾಡುವುದಿಲ್ಲ. ಈ ಅಂಶ ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದಲೂ ಗಮನಾರ್ಹ. ಆದರೆ ಮಾಧ್ಯಮದ ದುರುಪಯೋಗ ಮಾಡದಿರುವುದಕ್ಕೂ, ಸೂಕ್ಷ್ಮ ಭಾವ, ಸಂವೇದನೆಗಳನ್ನು ಅಭಿವ್ಯಕ್ತಿಗೊಳಿಸುವುದಕ್ಕೂ, ನಿಷ್ಠೆಯಿಂದ ಪದವನ್ನು ಬಳಸುವುದಕ್ಕೂ ವ್ಯತ್ಯಾಸವಿದೆ. ಭಾಷೆಯ ನಿಷ್ಠೆ ಈ ಪ್ರಮಾಣದಲ್ಲಿ ಕಾರಂತರಲ್ಲಿ ಇದ್ದಿದ್ದರೆ ಅವರನ್ನು ನವ್ಯ ಪಂಥಕ್ಕೆ ಸಮೀಪವರ್ತಿಯನ್ನಾಗಿ ಮಾಡುತ್ತಿತ್ತು. ಸ್ವತಂತ್ರವಾದ ವ್ಯಕ್ತಿತ್ವವನ್ನು ಉಳಿಸಿಕೊಂಡು ಎಲ್ಲವನ್ನೂ ಪ್ರಶ್ನಿಸಿ ಸಾರ್ಥಕತೆಯನ್ನು ಹುಡುಕುವ ಮನೋವೃತ್ತಿ ಅವರ ನವ್ಯದೃಷ್ಟಿಯನ್ನು ಸೂಚಿಸುತ್ತದೆ. ಆದರೆ ಅನ್ವೇಷಣೆಯ ತೀವ್ರತೆ, ಅನುಭವದ ಸಂಕೀರ್ಣತೆ ಭಾಷೆಯ ಸಂಯಮ ಇವುಗಳ ಪ್ರಮಾಣದಲ್ಲಿ ನವ್ಯ ಸಾಹಿತಿಗಳಿಗೂ, ಕಾರಂತರಿಗೂ ನಿರ್ದಿಷ್ಟವಾದ ವ್ಯತ್ಯಾಸವಿದೆ. ಒಟ್ಟಿನಲ್ಲಿ ಅನುಭವದ ಮತ್ತು ಭಾಷೆಯ ಸರಳತೆ ಕಾರಂತರನ್ನು ಹೊಸ ಹಾದಿಯ ಲೇಖಕರಿಂದ ಪ್ರತ್ಯೇಕಿಸುತ್ತದೆ"[೩೫]

ಅನಂತಮೂರ್ತಿಯವರ 'ಸಂಸ್ಕಾರ'ವನ್ನು ವಿಮರ್ಶಿಸಿದ ಸುಬ್ರಹ್ಮಣ್ಯ ಅವರು ಸಂಸ್ಕಾರ ಒಂದು ಸಾರ್ಥಕ ಕೃತಿಯಾಗಿದ್ದು ಕಲ್ಪನೆಯ ವೈಶಾಲ್ಯ, ಧಾರ್ಮಿಕ ಹಾಗು ವೈಚಾರಿಕ ಚಿಂತನೆಯ ಗಾಂಭೀರ್ಯ, ಅನುಭವದ ಸಂಕೀರ್ಣತೆ, ಅನುಭವಕ್ಕೆ ನಿಲುಕುವುದರ ಪ್ರಾಮಾಣಿಕತೆ, ಅದರ ಅಭಿವ್ಯಕ್ತಿ ಇವುಗಳಿಂದಾಗಿ ಈ ಕೃತಿ ಕನ್ನಡ ಸಾಹಿತ್ಯಕ್ಕೆ ಒಂದು ಅರ್ಥಪೂರ್ಣ ಕೊಡುಗೆಯಾಗಿದೆ ಎಂದಿದ್ದಾರೆ.[೩೬]

ಒಟ್ಟಾರೆ ನವ್ಯ ವಿಮರ್ಶೆಯಲ್ಲಿ ಎರಡು ಪ್ರಧಾನ ಅಂಶಗಳಿವೆ. ಒಂದು, ಸಮಕಾಲೀನ ಪ್ರಜ್ಞೆ, ಇನ್ನೊಂದು, ಆಡುಮಾತಿನ ಬಳಕೆ. ಇವೆರಡೂ ಒಂದಕ್ಕೊಂದು ಪೂರಕ ಅಂಶಗಳಾಗಿವೆ. ಇಲ್ಲಿನ ಪ್ರಮುಖ ಬದಲಾವಣೆ ಭಾಷೆಯ ಬಳಕೆ. ಹಿಂದಿನ ಕಾವ್ಯತತ್ವಕ್ಕೆ ಬದಲಿಯೇ ಆದ ವಾಸ್ತವತೆ, ಸಂಕೀರ್ಣತೆ, ವಸ್ತುನಿಷ್ಠತೆ, ಪ್ರಾಮಾಣಿಕತೆ, ಗದ್ಯಾತ್ಮಕತೆ ಮತ್ತು ಬದುಕಿನ ಬಗೆಗಿನ ಎಚ್ಚರದಂತಹ ಮೂಲ ಸಾಮಗ್ರಿಗಳನ್ನು ನವ್ಯಕಾವ್ಯ ಹಾಗು ವಿಮರ್ಶೆ ಬಳಸಿಕೊಂಡಿರುವುದು ಕಂಡುಬರುತ್ತದೆ.

ನವ್ಯಕಾವ್ಯವನ್ನು ಹಳೆಯ ಕಾವ್ಯಗಳ ಕ್ರಮದಲ್ಲಿ ಓದುವುದಾಗಲಿ, ಅನುಭವವನ್ನು ಗ್ರಹಿಸುವುದಾಗಲಿ ಕಷ್ಟವಾಗಿತ್ತು. ಹಾಗಾಗಿ ಕಾವ್ಯವನ್ನು ಹೊಸ ರೀತಿಯಲ್ಲಿ ಓದುವ, ಮೌಲ್ಯಮಾಪನ ಮಾಡುವ ಕ್ರಮ ಅಗತ್ಯವಾಗಿತ್ತು. ಅದಕ್ಕೆ ಪೂರಕವಾಗಿ ಒದಗಿ ಬಂದದ್ದು ಈ ಪ್ರಾಯೋಗಿಕ ವಿಮರ್ಶೆ.

ಕವಿಯಷ್ಟೇ ಓದುಗನೂ ಸಹ ಪ್ರಜ್ಞಾಪೂರ್ವಕವಾಗಿ ಭಾಷೆಯ ಜೊತೆಯಲ್ಲಿ ಅನುಸಂಧಾನ ನಡೆಸಬೇಕೆಂಬ ಅಪೇಕ್ಷೆ ನವ್ಯರದ್ದಾಗಿತ್ತು. ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆಯ ಆರಂಭವನ್ನು ಅಡಿಗರ ಭೂಮಿಗೀತ (೧೯೫೯) ಕವನ ಸಂಕಲನಕ್ಕೆ ಅನಂತಮೂರ್ತಿಯವರು ಬರೆದ ಮುನ್ನುಡಿಯಲ್ಲಿ ಮಾಡಿರುವ 'ಭೂತ' ಕವನದ ವಿಶ್ಲೇಷಣೆಯೊಂದಿಗೆ ಕಾಣಬಹುದು. ನವ್ಯ ಕಾವ್ಯಕ್ಕಿಂತ ಮುಂಚೆಯೂ ಪ್ರಾಯೋಗಿಕ ವಿಮರ್ಶೆ ಎನ್ನಬಹುದದ ಬರಹಗಳನ್ನು ಕಾಣಬಹುದು. ಉದಾಹರಣೆಗೆ, 'ಸರೋವರದ ಸಿರಿಗನ್ನಡಿಯಲ್ಲಿ' (ಕುವೆಂಪು ೧೯೪೮), ಪಂಪಭಾರತ (ಮುಗಳಿ, ೧೯೫೧).

ಅಡಿಟಿಪ್ಪಣಿಗಳು

೧. ಗೋಪಾಲಕೃಷ್ಣ ಅಡಿಗ: ಹೊಸದಿನದ ಆಹ್ವಾನ, ಜಯಕರ್ನಾಟಕ, ೧೧-೧೨-೧೯೫೨, ಪುಟ ೨
೨. ಬಿ.ಸಿ ರಾಮಚಂದ್ರಶರ್ಮ, ನವ್ಯಕಾವ್ಯ, ಜನಪ್ರಗತಿ, ೧೮-೧೦-೧೯೫೩, ಪುಟ ೯
೩. ಅನಂತಮೂರ್ತಿ: ಸಂಸ್ಕೃತಿ ಮತ್ತು ಅಡಿಗ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ, ಉಡುಪಿ, ೧೯೯೬
೪. ಸಿ.ಎನ್. ರಾಮಚಂದ್ರನ್: ಸಾಹಿತ್ಯ ವಿಮರ್ಶೆ – ೧೯೯೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೧೩೮
೫. ಡಾ.ಎಂ. ಶಂಕರ್, ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೬. ಡಾ.ಎಂ.ಶಂಕರ: ಕನ್ನಡ ಪ್ರಾಯೋಗಿಕ ವಿಮರ್ಶೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೮, ಪುಟ ೫೬
೭. ಅಡಿಗ: ನೆನಪಿನ ಗಣಿಯಿಂದ, ಪ್ರಿಸಂ ಬುಕ್ಸ್ ಪ್ರೈ.ಲಿ., ಬೆಂಗಳೂರು, ಪುಟ ೧೪೧-೧೪೨).
೮. ಯು.ಆರ್.ಅನಂತಮೂರ್ತಿ: ಮುನ್ನುಡಿ, ಗೋಪಾಲಕೃಷ್ಣ ಅಡಿಗರ 'ಭೂಮಿಗೀತ'
೯. ಗೋಪಾಲಕೃಷ್ಣ ಅಡಿಗ: ನವ್ಯಕಾವ್ಯದಲ್ಲಿ ವಿಚಾರ ಪ್ರಣಾಲಿ, ಸಂಕ್ರಮಣ ೧೩, ಪುಟ ೩೪-೩೭, ೧೯೬೬
೧೦. ಯು.ಆರ್.ಅನಂತಮೂರ್ತಿ: ಮುನ್ನುಡಿ, ಗೋಪಾಲಕೃಷ್ಣ ಅಡಿಗರ 'ಭೂಮಿಗೀತ'
೧೧. ವಿ.ಕೃ ಗೋಕಾಕ್, ನವ್ಯತೆ ಮತ್ತು ಕಾವ್ಯಜೀವನ, ಪುಟ ೪೬
೧೨. ಡಿ.ಕೆ. ಸೀತಾರಾಮಶಾಸ್ತ್ರಿ: ಅಡಿಗರ 'ಅಜ್ಜ ನೆಟ್ಟಾಲ', ಸಾಕ್ಷಿ ೧೫, ೧೯೭೨, ಪುಟ ೩೧-೩೯
೧೩. ಮಾಧವ ಕುಲಕರ್ಣಿ: ಅಡಿಗರ 'ನೀ ಬಳಿಯೊಳಿರುವಾಗ್ಗೆ', 'ಸಾಕ್ಷಿ' ೧೮, ೧೯೭೩
೧೪. ಮಾಧವ ಕುಲಕರ್ಣಿ: ಹೊಸ ಠರಾವು ಮತ್ತು ಅದರ ನೆಲೆ, ಸಾಕ್ಷಿ ೧೪, ೧೯೭೨, ಪುಟ ೮೩
೧೫. ರಾಜಪ್ಪ ದಳವಾಯಿ, ಅಡಿಗರ ವೋಹನ ಮುರಳಿ ಒಂದು ವಸ್ತು ವಿಶ್ಲೇಷಣೆ, ಸಂಕ್ರಮಣ, ೧೮೮, ಪುಟ ೧೦, ೧೯೮೮
೧೬. ಅನಂತಮೂರ್ತಿ ಯು.ಆರ್.: ಸಂಸ್ಕೃತಿ ಮತ್ತು ಅಡಿಗ, ೧೯೯೬, ಪುಟ ೨೧
೧೭. ಸಿ.ವಿಶ್ವೇಶ್ವರ, 'ಭೂತ ಕವನದಲ್ಲಿ ಪ್ರತಿಮಾ ವಿಧಾನ, 'ಸಂಕ್ರಮಣ' ಪತ್ರಿಕೆ, ೧೯೯೬
೧೮. ಪಟ್ಟಾಭಿರಾಮ ಸೋಮಯಾಜಿ: ತಾಟಸ್ಥ್ಯದಿ ದಿಕ್ಕೆಟ್ಟು, ರುಜುವಾತು ೧೮, ೧೯೮೫, ಪುಟ ೩೫-೪೧
೧೯. ಕೆ.ವಿ. ತಿರುಮಲೇಶ್: 'ತಾಟಸ್ಥ್ಯದಿ ದಿಕ್ಕೆಟ್ಟು: ಇನ್ನೊಂದು ದೃಷ್ಟಿ', ರುಜುವಾತು ೨೦, ೧೯೮೫, ಪುಟ ೨೧೪-೨೨೪
೨೦. ಬಿ.ಆರ್. ಲಕ್ಷ್ಮಣರಾವ್, 'ಎಲ್ಲಿಗೆ ಬಂತು ಸಂಗಯ್ಯ?', ರುಜುವಾತು ೨೦, ೧೯೮೫, ಪುಟ ೨೧೧-೨೧೩
೨೧. ಬುದ್ದಣ್ಣ ಹಿಂಗಮಿರೆ, 'ರಾಮಚಂದ್ರಶರ್ಮರ ಹೇಸರಗತ್ತೆ', 'ಸಂಕ್ರಮಣ' ಪತ್ರಿಕೆ, ೪೭, ಏಪ್ರಿಲ್ ೧೯೭೨
೨೨. ಅಡಿಗರ ಸಂದರ್ಶನ: ಸಂದರ್ಶಿಸಿದವರು ರಾಮಚಂದ್ರ ಶರ್ಮ, ಪ್ರಜಾವಾಣಿ, ೧೭ನೇ ಅಕ್ಟೋಬರ್ ೧೯೬೦
೨೩. ಡಾ. ಸುಮತೀಂದ್ರ ನಾಡಿಗ್: ಅಡಿಗ ಸಂಸ್ಕೃತಿ ಅನುಸಂಧಾನ, ಪಾಶ್ಚಾತ್ಯ ನವ್ಯಕಲ್ಪನೆ ಮತ್ತು ನವ್ಯ ಕಾವ್ಯದ ಕಲ್ಪನೆ, ಪುಟ ೧೦
೨೪. ಪಿ.ಎಲ್. ಸುಬ್ರಹ್ಮಣ್ಯ: ಪ್ರತಿಕ್ರಿಯೆ, ಸಾಕ್ಷಿ ೯, ೧೯೭೦, ಪುಟ ೭೫-೯೮
೨೫. ಮಾಧವ ಕುಲಕರ್ಣಿ: ರಾಮಾನುಜನ್ನರ ನಲವತ್ತು ನೆರಳು, ಸಾಕ್ಷಿ ೯, ೧೯೭೦, ಪುಟ ೯೯-೧೦೭
೨೬. ಕೀರ್ತಿನಾಥ ಕುರ್ತಕೋಟಿ: ಹಣ್ಣಿನೊಳಗಣ ಮರವ ಬಲ್ಲವನೆ ಜಾಣ – ಎ.ಕೆ.ರಾಮಾನುಜನ್ ಕಾವ್ಯಾನುಸಂಧಾನ, ಪ್ರೊ. ಕೀರ್ತಿನಾಥ ಕುರ್ತಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪುಟ ೮೩
೨೭. ಲಂಕೇಶ್ ಪತ್ರಿಕೆ, ೨೮ ಜುಲೈ ೧೯೯೩
೨೮. ಸುಬ್ರಾಯ ಚೊಕ್ಕಾಡಿ: ಹೊಸಹಾದಿಯ ಆವಿಷ್ಕಾರ: ಹೊಕ್ಕುಳಲ್ಲಿ ಹೂವಿಲ್ಲ, ಸಾಕ್ಷಿ ೧೪, ಪುಟ ೪೫, ೧೯೭೨
೨೯. ಪಿ.ಎಲ್.ಸುಬ್ರಹ್ಮಣ್ಯ: ರಾಮಾನುಜನ್ ಕಾವ್ಯ ಕುರ್ತಕೋಟಿಯವರ ವಿಮರ್ಶೆ, ಸಾಕ್ಷಿ ೧೧, ೧೯೭೧, ಪುಟ ೧೦೭

೩೦. ಮಾಧವ ಕುಲಕರ್ಣಿ, ಕುರ್ತಕೋಟಿ ಅವರ ಲೇಖನಕ್ಕೆ ಸಂಬಂಧಿಸಿ, ಸಾಕ್ಷಿ ೧೧, ೧೯೭೧, ಪುಟ ೧೨೭–೧೩೬

೩೧. ಅನಂತಮೂರ್ತಿ: ನವ್ಯಕಾವ್ಯ ಮತ್ತು ತಾತ್ವಿಕತೆ ಟಿಪ್ಪಣಿಗಳು, ಸಾಕ್ಷಿ ೧೧, ವಸಂತ ಸಂಚಿಕೆ ೧೯೭೧

೩೨. ಕೆ.ವಿ. ತಿರುಮಲೇಶ್, ಕೆಥಾರ್ಸಿಸ್, ಸಾಕ್ಷಿ ೧೨, ೧೯೭೧

೩೩. ಜಯಂತ ಕಾಯ್ಕಿಣಿ: ಯಶವಂತ ಚಿತ್ತಾಲರ 'ಪುರುಷೋತ್ತಮ' ಕಾದಂಬರಿ, 'ಸಂಕ್ರಮಣ' ಪತ್ರಿಕೆ, ಆಗಸ್ಟ್ ೧೯೯೧, ಪುಟ ೨೧೬

೩೪. ಡಾ. ಗಣೇಶ ಉಪಾಧ್ಯ: 'ಸಂಕ್ರಮಣ' ಪತ್ರಿಕೆ, ಸಾಹಿತ್ಯ ವಿಮರ್ಶೆ, ಮಾರ್ಚ್ ೧೯೯೮, ಪುಟ ೧೨೯–೧೩೪

೩೫. ಬಿ.ದಾಮೋದ್‌ರ ರಾವ್, ಕಾರಂತರ 'ಸರಸಮ್ಮನ ಸಮಾಧಿ', 'ಸಾಕ್ಷಿ' ಪತ್ರಿಕೆ, ಜುಲೈ ೧೯೬೮, ಸಂಚಿಕೆ ೪

೩೬. ಸುಬ್ರಹ್ಮಣ್ಯ: ಅನಂತಮೂರ್ತಿಯವರ 'ಸಂಸ್ಕಾರ', 'ಸಾಕ್ಷಿ', ಸಂಚಿಕೆ ೨, ೧೯೬೮

೪.ಸಾಹಿತ್ಯಿಕ ಪತ್ರಿಕೆಗಳು ಹಾಗು ಪ್ರಗತಿಶೀಲ ಚಳವಳಿ

ನವೋದಯ ಕಾವ್ಯ ಚಲಾವಣೆಯಲ್ಲಿದ್ದಾಗಲೇ ಅಂದರೆ ೧೯೪೦ರ ಸುಮಾರಿಗೇ ಕನ್ನಡ ಸಾಹಿತ್ಯದಲ್ಲಿ ಕಂಡು ಬಂದ ಮತ್ತೊಂದು ಬೆಳವಣಿಗೆ ಪ್ರಗತಿಶೀಲರದು. ಪ್ರಗತಿಶೀಲ ಎಂಬುದು ಒಂದು ಸಾಹಿತ್ಯಿಕ ಪರಿಭಾಷೆಯಾಗಿದ್ದು ನವೋದಯಕ್ಕಿಂತ ಭಿನ್ನ ಮಾರ್ಗವಾಗಿದೆ. ಪ್ರಗತಿಶೀಲರು ರಷ್ಯನ್ ಕ್ರಾಂತಿಯಿಂದ ಪ್ರೇರಿತರಾದವರು. ನವೋದಯರು ಚಂದ್ರ ತಾರಕೆಗಳ ಮೇಲೆ ಕವನ ಬರೆದು ಜೀವನದ ಕಟು ವಾಸ್ತವಗಳ ಬಗ್ಗೆ ಗಮನ ಹರಿಸುವುದಿಲ್ಲ ಎಂದು ಸಿಡಿದೆದ್ದ ಪ್ರಗತಿಶೀಲರು ಕೂಲಿಕಾರರ ಬಗ್ಗೆ, ಶೋಷಿತರ ಬಗ್ಗೆ ಲೇಖನ ಬರೆಯತೊಡಗಿದರು. ಹೀಗಾಗಿ ಅವರಿಗೆ ಕಾವ್ಯ ರುಚಿಸಲಿಲ್ಲ. ಬದಲಿಗೆ ಕತೆ, ಕಾದಂಬರಿ ಅವರ ಮುಖ್ಯ ಅಭಿವ್ಯಕ್ತಿ ಪ್ರಕಾರಗಳಾದವು. ಸಾಮಾಜಿಕ ಸಮಸ್ಯೆಗಳು, ಇತಿಹಾಸ ಹಾಗು ಸ್ವಾತಂತ್ರ್ಯ ಹೋರಾಟ ಅವರ ಕಾದಂಬರಿಗಳ ವಸ್ತುಗಳಾಗಿದ್ದವು. ಸಮಾಜ ನಿಂತ ನೀರಲ್ಲ ಬದಲಿಗೆ ಚಲನಶೀಲವಾದುದು ಎಂಬುದು ಅವರ ಅಭಿಪ್ರಾಯ.

ಅನಕೃ ಪ್ರಗತಿಶೀಲ ಬೆಳವಣಿಗೆಯ ಮುಖಂಡತ್ವವನ್ನು ವಹಿಸಿ ೧೯೪೬ರ ಅಕ್ಟೋಬರ್ ೨೭ರಂದು ಧಾರವಾದ ಜಿಲ್ಲೆಯ ೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಮಾಡುವ ಭಾಷಣದಲ್ಲಿ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ಬಗೆಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಇಲ್ಲಿ ಗಮನಾರ್ಹವಾಗಿದೆ.

> "ಸಾಹಿತ್ಯವೆಂಬುದು ಮಡಿಕೋಟೆಯನ್ನು ಕಟ್ಟಿಕೊಂಡು ಸುತ್ತಮುತ್ತಲಿನ ಜಗತ್ತಿನ ಹಾಹಾಕಾರದ ಮೇಲೆ ಅವಕುಂಠನ ಹಾಕಿ ತನ್ನ ಭಾವ ಪ್ರಪಂಚದಲ್ಲಿ ಮೈಮರೆಯುವ ಸಾಹಿತಿ ತನ್ನ ಅಥವ ದೇಶದ ಹಿತವನ್ನು ಸಾಧಿಸಲಾರ. ದಿನ ದಿನದ ಜೀವನಕ್ಕೆ ಬೇಕಾಗುವುದಕ್ಕಿಂತ ಸ್ವಲ್ಪ ಹೆಚ್ಚು ಗಳಿಸುವವರನ್ನು ಮಧ್ಯಮವರ್ಗ ಎಂದು ಗಣಿಸುವುದಾದರೆ ಅವರ ಅಲ್ಪ ಆಸೆ, ತೃಪ್ತಿ ಕೋಪ ತಾಪಗಳನ್ನು ಮಾಸ್ತಿಯವರ ಸಾಹಿತ್ಯ ಚಿತ್ರಿಸಿತು. ನವೋದಯದ ಕಾಲದ ಕವಿಗಳು ನಿರ್ದಿಷ್ಟಕ್ಕಾಗಿ ಕುಳಿತಾಗ ಪ್ರಗತಿಶೀಲರು ಜನಕ್ಕೆ ಧೈರ್ಯ ಸ್ಥೈರ್ಯಗಳನ್ನು ನುಡಿದರು. ಕತೆ, ಕವಿತೆ, ಕಾದಂಬರಿ ಪ್ರಬಂಧ, ಭಾಷಣಗಳ ಮೂಲಕ ಜನತೆಗೆ ಅದರ ಅಮರತ್ವವನ್ನು ಕಣ್ಣು ಬಿಟ್ಟು ನೋಡುವ ನಿಷ್ಠೆಯೂ ಅದನ್ನು ಎದುರಿಸುವ ಕಿಚ್ಚೂ ಬಂಡವು. ಹಳೆಯ ತತ್ವಗಳು ಪುನರ್‌ವಿಮರ್ಶೆಗೆ ಒಳಗಾದವು. ಪರಂಪರಾಗತವಾಗಿ ಮೌಢ್ಯವನ್ನು ರೂಢಿಸಿಕೊಂಡು ಬಂದಿದ್ದ ಸಾಹಿತ್ಯವನ್ನು ಪ್ರಗತಿಶೀಲರು ಖಂಡಿಸುತ್ತಾ ಬಂದರು. ಶಾಂತಿ ದುರ್ಬಲತೆಯಿಂದ ಬರುವುದಿಲ್ಲ. ಕ್ರಾಂತಿಯ ಬಳಿಕವೇ ಶಾಂತಿ ಬರಲು ಸಾಧ್ಯ. ಎಂದೋ ಆಗಿ ಹೋಗಿದ್ದ ಹರಿಶ್ಚಂದ್ರ, ಶ್ರೀರಾಮರ ಸತ್ಯಪ್ರಿಯತೆಯನ್ನು

ನೆನೆಯುವುದರಲ್ಲಿ ಸುಖವೇನು? ಇಂದು ಪ್ರಜಾಸ್ವಾಮ್ಯ, ಬಂಡವಾಳ ಸ್ವಾಮ್ಯ ಎಂಬ ಎರಡು ಪಕ್ಷಗಳು ಜಗತ್ತಿನಲ್ಲಿ ಉದಯಿಸುತ್ತಿವೆ. ಇಂದು ಇವೇ ಎರಡು ಪ್ರಮುಖ ಜಾತಿಗಳು. ಇವುಗಳ ಮುಂದೆ ಉಳಿದವು ಗೌಣ. ಸಾಹಿತಿ ತಾನು ಯಾವ ಜಾತಿಯವನೆಂದು ಮೊದಲು ನಿರ್ಧರಿಸಿಕೊಳ್ಳಬೇಕು. ಸಾಹಿತ್ಯ ವಿಲಾಸದ ಸಾಧನವಲ್ಲ. ದೇಶೋದ್ಧಾರಕ್ಕೆ, ಆತ್ಮೋದ್ಧಾರಕ್ಕೆ ಸಾಧನವಾಗುವ ಗಾಯತ್ರಿಯದು. ಅದು ದುರ್ಬಲರ ಬಡವರ ರಕ್ಷಾಕವಚ ಆಗಬೇಕು. ಆಗಲೇ ಸಾಹಿತ್ಯದ ಸಾರ್ಥಕ್ಯ, ಸಾಹಿತಿಯ ಜನ್ಮ ಸಾಫಲ್ಯ".[೧]

೧೯೩೫ ರಿಂದ ೧೯೫೦ರ ವರೆಗೆ ಪ್ರಗತಿಶೀಲರು ಕನ್ನಡದಲ್ಲಿ ವಿಪುಲವಾಗಿ ಬರೆದಿದ್ದಾರೆ. ಅವರಲ್ಲಿ ಅನಕೃ, ತರಾಸು, ಕಟ್ಟೀಮನಿ, ನಿರಂಜನ, ಚದುರಂಗ, ಬೀಚಿ ಪ್ರಮುಖರು. ನವೋದಯರಿಗೆ ಸಾಂಸ್ಥಿಕ ಅಥವ ಗುಂಪಿನ ಬೆಂಬಲ ಇರುವ ಪತ್ರಿಕೆಗಳು ವೇದಿಕೆ ಒದಗಿಸಿದರೆ ಪ್ರಗತಿಶೀಲರು ಎಲ್ಲ ದೃಷ್ಟಿಯಿಂದಲೂ ಏಕಾಂಗಿ ಹೋರಾಟಗಾರರು. ಹಾಗಾಗಿ ಆ ಕಾಲದಲ್ಲಿ ಬರಹಗಾರರ ವೈಯಕ್ತಿಕ ಪ್ರಯತ್ನಗಳಿಂದಾಗಿ ಸಾಹಿತ್ಯಿಕ ಪತ್ರಿಕೆಗಳು ಹೊರಬಂದಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಹೆಚ್ಚಿನವು ಕಥೆಗಳಿಗಾಗಿಯೇ ಮೀಸಲಾಗಿದ್ದವು. ಉದಾಹರಣೆಗೆ, ಅನಕೃ ಅವರ 'ಕಥಾಂಜಲಿ'(೧೯೨೯–೩೦), ಜಿ.ಎಸ್. ಕೃಷ್ಣರಾಯರ 'ಕಥಾಚಂದ್ರಿಕೆ'(೧೯೪೨), ಗುಪ್ತಾ ಅವರ 'ಕಥಾವಳೀ'(೧೯೩೮), ಕಥಾ ಸಂಗ್ರಹ (೧೯೩೩), ಕಥಾಕುಂಜ (೧೯೩೪) ಮುಂತಾದವು. ಕಥಾಪ್ರಪಂಚಕ್ಕೆ ರಾಶಿ ರಾಶಿ ಕತೆಗಳನ್ನು ಹೊಸೆದು ಹಾಕಿದ ಪ್ರಗತಿಶೀಲರಿಗೆ ಈ ಕಥಾ ಪತ್ರಿಕೆಗಳೇ ವೇದಿಕೆಯಾದವು.

"ಕಾದಂಬರಿ ಪಿತಾಮಹ ಗಳಗನಾಥರಾದರೆ ಕನ್ನಡ ಕಾದಂಬರಿಗೆ ಪ್ರಬುದ್ಧತೆ, ವೈವಿಧ್ಯ, ವಿಸ್ತಾರಗಳನ್ನು ತಂದುಕೊಟ್ಟು ಆ ಪ್ರಕಾರಕ್ಕೆ ಅಪಾರ ಓದುಗರನ್ನು ನಿರ್ಮಾಣ ಮಾಡಿದ ಖ್ಯಾತಿ ಅನಕೃಗೆ ಸಲ್ಲುತ್ತದೆ. ಅದ್ಭುತ ಕಥನ ಶೈಲಿಯನ್ನು ಪರಿಚಯಿಸುತ್ತಾ ಆಕರ್ಷಕವಾಗಿ ಕತೆ ಹೇಳುವ ಮೂಲಕ ಕನ್ನಡ ಓದುಗ ವರ್ಗ ಕಾದಂಬರಿ ಬಗ್ಗೆ ವಿಶೇಷ ಆಸಕ್ತಿ ತಾಳುವಂತೆ ಮಾಡಿದರು. ಪ್ರಗತಿಶೀಲ ಚಳವಳಿಯ ನೇತಾರರಾಗಿದ್ದ ಅನಕೃ ತಮ್ಮ ಕಾದಂಬರಿಗಳ ಮೂಲಕ ಸಮಾಜದ ಕೊಳೆ, ಅನ್ಯಾಯ, ಶೋಷಣೆ, ಕ್ರೌರ್ಯಗಳನ್ನು ಬಯಲಿಗೆಳೆಯುವ ಸಾಹಸ ಮಾಡಿದರು".[೨]

ಅನಕೃ ತಮ್ಮ ಅರವತ್ತಮೂರು ವರ್ಷಗಳ ಜೀವಿತಾವಧಿಯಲ್ಲಿ ತೊಂಬತ್ತೆಂಟು ಸಾಮಾಜಿಕ ಕಾದಂಬರಿಗಳು, ಹದಿನಾಲ್ಕು ಐತಿಹಾಸಿಕ ಕಾದಂಬರಿಗಳು, ಇಪ್ಪತ್ತೆರಡು ನಾಟಕಗಳು, ಎಂಟು ಕಥಾಸಂಗ್ರಹ, ಎರಡು ಸ್ವಸಂದರ್ಶನ ಮತ್ತು ಆತ್ಮಕಥೆ, ನಾಲ್ಕು ಅನುವಾದ, ಹಾಗು ಹತ್ತು ಸಂಪಾದಿತ ಕೃತಿಗಳನ್ನು ಪ್ರಕಟಿಸಿದ್ದಾರೆ. ಒಬ್ಬರೇ ತಮ್ಮ ಜೀವಿತಾವಧಿಯಲ್ಲಿ ಇಷ್ಟು ಕೆಲಸ ಮಾಡಲು ಸಾಧ್ಯವೇ ಎನಿಸುವಷ್ಟು ಅಗಾಧ ಸಾಹಿತ್ಯ ಕೃಷಿ ಅವರದು.[೩]

ಆಧುನಿಕ ಕನ್ನಡ ಸಾಹಿತ್ಯಕ್ಕೊಂದು ಲವಲವಿಕೆಯ ಭಾಷೆ ರೂಪಿಸಿದ ಕೀರ್ತಿ ಅನಕೃ ಅವರದು. ಕನ್ನಡ ಬರಹಗಾರರ ಪಡೆ ಕಟ್ಟಿದ ಅವರು ಸಾಹಿತ್ಯ ಸುಲಭ ಬೆಲೆಯಲ್ಲಿ ಜನರಿಗೆ ತಲುಪುವಂತೆ ಪ್ರಕಾಶಕರ ಮನ ಒಲಿಸಿದರು ಹಾಗು ಜನರಲ್ಲಿ ವಾಚನಾಭಿರುಚಿ ಮೂಡಿಸಿದರು. ಕನ್ನಡದಲ್ಲಿ ಆತ್ಮಕಥೆಯೇ ಇಲ್ಲದ ಸಮಯದಲ್ಲಿ ಪ್ರಪ್ರಥಮವಾಗಿ 'ನನ್ನನ್ನು ನಾನೇ ಕಂಡೆ' ಎಂಬ ಕೃತಿ ರಚಿಸಿದರು. ಅದು ಧಾರಾವಾಹಿಯಾಗಿ ಪತ್ರಿಕೆಗಳಲ್ಲಿ ಬಂದು ಜನ ಮೆಚ್ಚುಗೆ ಪಡೆಯಿತು.

ಬೀಚಿ ಕನ್ನಡ ಸಾಹಿತ್ಯದಲ್ಲಿ ಅಭಿರುಚಿ ಬೆಳೆಸಿಕೊಂಡ ಪ್ರಸಂಗ ತುಂಬ ಸ್ವಾರಸ್ಯಕರವಾಗಿದೆ.

“ಒಮ್ಮೆ ಬೀಚಿಯವರ ಪತ್ನಿ ಬೀಚಿಗೆ ಕನ್ನಡ ಪುಸ್ತಕಗಳನ್ನು ಓದುವಂತೆ ದುಂಬಾಲು ಬಿದ್ದರಂತೆ. ರೈಲು ಪ್ರಯಾಣದ ವೇಳೆ, ಕನ್ನಡ ಪುಸ್ತಕವನ್ನು ಓದುವುದನ್ನು ಕಂಡು ಯಾರಾದರೂ ಬೀಡಿ ಕೇಳಿದರೆ ಏನು ಗತಿ? ಎಂದು ಕೊಂಡು ಬೀಚಿ ‘ಇಲ್ಲಸ್ಟ್ರೇಟೆಡ್ ವೀಕ್ಲಿ’ ಮ್ಯಾಗಜ಼ಿನ್‌ನೊಳಗಡೆ ಕನ್ನಡ ಪುಸ್ತಕವನ್ನು ಇಟ್ಟುಕೊಂಡು ಓದಲಾರಂಭಿಸಿದರು. ಆರಂಭ ಮಾಡಿದ್ದಷ್ಟೇ ಗೊತ್ತು, ಕಣ್ಣುಗಳು ಅದೆಷ್ಟು ಬಾರಿ ಜಿನುಗುತ್ತಿದ್ದವೋ ಗೊತ್ತಿಲ್ಲ. ಕನ್ನಡದಲ್ಲೂ ಒಳ್ಳೆಯ ಬರಹಗಾರರಿದ್ದಾರೆ ಎಂಬುದು ಅವರಿಗೆ ಅರಿವಾಯಿತು. ‘ಆ ಶುಭ ಮುಹೂರ್ತದಲ್ಲಿ ಕನ್ನಡ ದೀಕ್ಷೆ ಸ್ವೀಕರಿಸಿದೆ’ ಎನ್ನುತ್ತಾರೆ ಬೀಚಿ. ಅಂದು ಅವರು ರೈಲಿನಲ್ಲಿ ಓದಿದ್ದು ಅನಕೃ ಅವರ ‘ಸಂಧ್ಯಾರಾಗ’ ಆ ಕಾದಂಬರಿ ಬೀಚಿಯವರ ಮೇಲೆ ಅದೆಷ್ಟು ಪ್ರಭಾವ ಬೀರಿತೆಂದರೆ ಅನಕೃ ಅವರ ಪರಿಚಯ ಬಯಸಿ ಹೊರಟುಬಿಟ್ಟರು. ಕನ್ನಡ ಸಾರಸ್ವತ ಲೋಕ ಪ್ರವೇಶಿಸಿದರು. ಸಹಜವಾಗಿಯೇ ಪತ್ರಿಕೋದ್ಯಮ ಅವರನ್ನು ಆಕರ್ಷಿಸದೆ ಬಿಡಲಿಲ್ಲ. ಆಗ ಪಾಟೀಲ ಪುಟ್ಟಪ್ಪನವರ ‘ವಿಶಾಲ ಕರ್ನಾಟಕ’ ಉತ್ತರ ಕರ್ನಾಟಕದ ಒಂದು ಜನಪ್ರಿಯ ಪತ್ರಿಕೆಯಾಗಿತ್ತು. ಹೊಸ ಪ್ರತಿಭೆಗಳಿಗಾಗಿ ಹುಡುಕುತ್ತಿದ್ದ ಪಾಟೀಲ ಪುಟ್ಟಪ್ಪನವರಿಗೆ ಕಂಡದ್ದು ಬೀಚಿ. ಅವರ ಒತ್ತಾಯಕ್ಕೆ ಮಣಿದ ಬೀಚಿ ‘ಕೆನೆ ಮೊಸರು’ ಎಂಬ ಅಂಕಣದಲ್ಲಿ ಸಕಾಲಿಕ ವಿಷಯಗಳ ಕುರಿತು ಬರೆಯಲಾರಂಭಿಸಿದರು. ಪ್ರತಿ ಅಂಕಣದ ಕೊನೆಗೂ ಒಂದು ಜೋಕು ಇರುತ್ತಿತ್ತು. ಆ ಅಂಕಣ ಹಾಗು ಜೋಕುಗಳು ಎಷ್ಟು ಜನಪ್ರಿಯತೆ ಪಡೆಯಿತೆಂದರೆ ಒಮ್ಮೆ ಬೀಚಿ ಏಕಾಏಕಿ ಅಂಕಣ ಬರಹ ನಿಲ್ಲಿಸಿದಾಗ ಓದುಗರ ಪತ್ರಗಳು ಕಛೇರಿಗೆ ವಿಪರೀತವಾಗಿ ಬಂದಗ ಪಾಟೀಲ ಪುಟ್ಟಪ್ಪನವರು ಪತ್ರಿಕೆಯಲ್ಲಿ ಬೀಚಿಯವರ ಫೋಟೋ ಹಾಕಿ ‘ಹುಡುಕಿ ಕೊಡಿ’ ಎಂದು ಪ್ರಕಟಿಸಿದ್ದರು! ‘ತಿಂಮನ ತಲೆ’ ಎಂಬ ಶೀರ್ಷಿಕೆಯಲ್ಲಿ ಈ ಜೋಕುಗಳು ಪ್ರಕಟವಾದವು. ೧೯೫೧ರಲ್ಲಿ ಮೊದಲು ಪ್ರಕಟಗೊಂಡ ಈ ಪುಸ್ತಕ ಇಂದಿಗೆ ಮೂವತ್ತಕ್ಕೂ ಹೆಚ್ಚು ಮರುಮುದ್ರಣ ಕಂಡಿದೆ”.[೪]

ಅನಕೃ ಹಾಗು ಅವರ ಬಳಗದ ಲೇಖಕರ ಧೋರಣೆಯ ಬಗ್ಗೆ ಮಾಸ್ತಿಯವರು ಪ್ರಗತಿಶೀಲ ಸಾಹಿತ್ಯ ರಶಿಯಾದ ಸಾಮ್ಯವಾದದ ಅನುಕರಣೆಯ ಫಲ. ಇದು ಶೋಷಿತರ ದಲಿತರ ವಾಣಿಯಾಗಬೇಕು ಎನ್ನುವ ವಿಚಾರ ಸಮಾಜದಲ್ಲಿ ವರ್ಣಭೇದವನ್ನು ಒತ್ತಿ ಹೇಳಿ ಬುದ್ಧಿಭೇದವನ್ನು ಕಲ್ಪಿಸುತ್ತದೆ ಎನ್ನುತ್ತಾರೆ. ಸಾಹಿತ್ಯ ಬಡವ ಶ್ರೀಮಂತ ಎಂಬ ವರ್ಗವನ್ನು ನಿರ್ಮಾಣ ಮಾಡದೆ ಜನಜೀವನದ ಶಾಶ್ವತ ಮೌಲ್ಯಗಳನ್ನು ಪ್ರತಿನಿಧಿಸಬೇಕು ಎಂಬುದು ಮಾಸ್ತಿಯವರ ಆಶಯ.

“ಬಡತನ ಸಂಪತ್ತು ಮಾನವ ಜೀವನದ ಒಂದು ಭಾಗ ಮಾತ್ರ. ಜ್ಞಾನ ಅಜ್ಞಾನ, ಶೀಲ ಅಶ್ಲೀಲ, ಸೌಜನ್ಯ ದೌರ್ಜನ್ಯ, ಅಸ್ತಿತ್ವ ನಾಸ್ತಿತ್ವ, ವಿನಯ ಅವಿನಯ ಇವು ಈ ಜೀವನದಲ್ಲಿ ಮುಖ್ಯಾಂಶಗಳು. ಈ ಎಲ್ಲ ವಿಷಯದಲ್ಲೂ ಎಲ್ಲ ರೀತಿಯ ವಿಚಾರವು ಸಾಹಿತ್ಯದಲ್ಲಿ ನಡೆಯಬೇಕಿದೆ. ಒಂದು ಮುಖದ ಭಾವನೆಗೆ ಪ್ರಗತಿಶೀಲ

ಎಂದು ಹೆಸರಿಟ್ಟು ಅದರ ಹೊರತು ಯಾವುದೂ ನಮಗೆ ಬೇಡ ಎಂದರೆ ಪ್ರಗತಿಯ ಒಂದು ಮುಖವನ್ನೇ ಎಲ್ಲ ಪ್ರಗತಿ ಎಂದು ಹೇಳಿದಂತಾಗುತ್ತದೆ".[೫]

ಸಾಹಿತ್ಯವು ಬಡತನವನ್ನು ಮಾತ್ರ ಚಿತ್ರಿಸುವ ಉದ್ದೇಶವನ್ನು ಹೊಂದಿದ್ದರೆ ಜೀವನದ ಒಂದು ಮುಖವನ್ನು ಸಾಹಿತ್ಯ ಒಳಗೊಂಡಂತೆ ಆಗುತ್ತದೆ. ಆದ್ದರಿಂದ ಜೀವನದ ಸಮಗ್ರ ಮುಖಗಳನ್ನು ಚಿತ್ರಿಸುವುದೇ ನಿಜವಾದ ಸಾಹಿತ್ಯದ ಗುರಿ ಎಂದು ಮಾಸ್ತಿ ಹೇಳುತ್ತಾರೆ. ವಿಮರ್ಶಕರಾದವರು ಪ್ರಾಜ್ಞರಾಗಿರದೆ ಇದ್ದರೆ ಸಾಹಿತ್ಯ ಕ್ಷೇತ್ರದಲ್ಲಿ ಆಗುವ ಅಪಾಯ ಹೆಚ್ಚು. ಹಾಗಾಗಿ ವಿಮರ್ಶಕರು ಕನ್ನಡ ಜೀವನ ಸಂಸ್ಕೃತಿ ಪ್ರಜ್ಞೆಯಿಂದ ಸದಾ ಜಾಗೃತರಾಗಿರಬೇಕು ಎಂದು ಮಾಸ್ತಿ ಹೇಳುತ್ತಾರೆ.

> "ನಮ್ಮ ಜೀವನಕ್ಕೆ ಹೊಂದುತ್ತದೆಯೆ ಇಲ್ಲವೆ ಎಂಬುದನ್ನು ನೋಡದೆ ಪಾಶ್ಚಾತ್ಯ ಸಾಹಿತ್ಯದ ಸನ್ನಿವೇಶಗಳನ್ನು ಸಂಗ್ರಹಿಸಿ ಕನ್ನಡದ ಬಾಳು ಎಂಬಂತೆ ಚಿತ್ರಿಸುವ ಇಂತಹ ಸಾಹಿತ್ಯ ನಮಗೆ ಒಳ್ಳೆಯದನ್ನು ಮಾಡಲಾರದು. ನಮ್ಮ ಮಿತ್ರರು (ಪ್ರಗತಿಶೀಲರು) ಇಂತಹ ಕೃತಿಗಳನ್ನು ರಚಿಸದೆ ಇದ್ದರೆ ಚೆನ್ನವೆಂದು ನಾನು ಸೂಚಿಸುತ್ತೇನೆ. ಸಾಹಿತ್ಯ ಸತ್ಯದಿಂದ ಆರ್ಜವದಿಂದ ಮೂಡಬೇಕು. ಓದುವವರಲ್ಲಿ ಸತ್ಯವನ್ನು, ಆರ್ಜವವನ್ನು ಮೂಡಿಸಬೇಕು. ಇಂತಹ ಸಾಹಿತ್ಯ ನಮಗೆ ಬೇಕಾದ ಸಾಹಿತ್ಯ. ಇಂತಹದ್ದಲ್ಲದ ಇಂತಹ ಸೋಗಿನ ಸಾಹಿತ್ಯವು ಕನ್ನಡಕ್ಕೆ ಎಂದಿಗೂ ಬೇಡ".[೬]

ಕಥಾಂಜಲಿ: ಕನ್ನಡ ಕಾದಂಬರಿ ಸಾರ್ವಭೌಮ ಎಂದೇ ಹೆಸರಾಂತ ಅನಕೃ ಸಂಪಾದಕತ್ವದ ಈ ಮಾಸಪತ್ರಿಕೆ ೧೯೨೯ರಲ್ಲಿ ಪ್ರಾರಂಭವಾಯಿತು. 'ಕಥಾಂಜಲಿ' ಪ್ರಾರಂಭಿಸುವಾಗ ಅದರ ಧ್ಯೇಯೋದ್ದೇಶಗಳನ್ನು ಮೊದಲನೆಯ ಸಂಚಿಕೆಯ ಸಂಪಾದಕೀಯದಲ್ಲಿ ಅನಕೃ ಹೀಗೆ ಸ್ಪಷ್ಟಪಡಿಸಿದ್ದಾರೆ.

> "ನಮ್ಮ ಕನ್ನಡ ನಾಡಿನಲ್ಲಿ,.. ಕೇವಲ ಸಣ್ಣಕತೆಗಳಿಗಾಗಿಯೇ ಸಮರ್ಪಿಸಲ್ಪಟ್ಟು ಒಂದು ನಿಯುಕ್ತ ಆದರ್ಶ ಇಟ್ಟುಕೊಂಡು ಹೊರಟಿರುವ ಪತ್ರಿಕೆಯ ಕೊರತೆ ಬಹಳ ಕಾಲದಿಂದಲೂ ಇತ್ತು. ನಮ್ಮಲ್ಲಿ ಸರ್ವತೋಮುಖ ಬೆಳೆ ಬೆಳೆದು ಕುಯಿಲಿಗೆ ಸಿದ್ಧವಾಗಿದ್ದರೂ ಅದನ್ನು ಕುಯ್ದು ನಾಡಿಗರಿಗೆ ಹಂಚುವವರಿಲ್ಲವಲ್ಲ ಎಂದು ಅನಿಸುತ್ತಲೇ ಇದ್ದಿತು. ಈ ಅಂತಸ್ತಾಪವನ್ನು ದೂರ ಮಾಡಿ ಸನ್ಮಿತ್ರರ ಸಹಾಯ ಸ್ಫೂರ್ತಿಗಳಿಂದ ಹುರಿಗೊಂಡು ನಾವು ಈ ಕೆಲಸಕ್ಕೆ ಉದ್ಯುಕ್ತರಾಗಿರುವೆವು. ಸಣ್ಣ ಕತೆಗಳಲ್ಲಿ ನಾನಾ ಬಗೆಗಳುಂಟು, ಸಂಪ್ರದಾಯಗಳುಂಟು, ಶೈಲಿಗಳುಂಟು. ನಾನು ಯಾವ ಒಂದು ಶೈಲಿ ಸಂಪ್ರದಾಯಕ್ಕೂ ತಾಳಿ ಕಟ್ಟುವುದಿಲ್ಲ. ಎಲ್ಲವುಗಳ ಪರಿಚಯಾನುಭವ ಕನ್ನಡಿಗರಿಗೆ ಮಾಡಿಸಿಕೊಡಬೇಕು ಎಂಬುದೇ ನಮ್ಮಿಚ್ಛೆ. ಕಪೋಲ ಕಲ್ಪಿತವಾಡ ಕನ್ನಡಿಗರಾ ಕತೆಗಳಿಗೆ ಪ್ರಾಧಾನ್ಯ ಕೊಟ್ಟು ಅನಂತರ ಇತರ ಭಾಷೆಗಳಲ್ಲಿನ ಕತೆಗಳ ಪರಿಚಯವನ್ನು ಮಾಡಿಕೊಡುತ್ತೇವೆ".[೭]

ಇದು ಕತೆಗಳಿಗಾಗಿಯೇ ಮೀಸಲಾದ ಪತ್ರಿಕೆ ಎಂದು ಹೇಳಿಕೊಂಡಿದ್ದರೂ ಇದರಲ್ಲಿ ಕವಿತೆಗಳು, ವಿಮರ್ಶೆಗಳು ಪ್ರಕಟವಾಗಿವೆ. ಈ ಪತ್ರಿಕೆಯ ಲೇಖಕರ ಬಳಗದಲ್ಲಿ ಜಿ.ಪಿ.ರಾಜರತ್ನಂ, ರಾಶಿ, ಮ.ನ.ಮೂರ್ತಿ, ಟಿ.ಪಿ.ಕೈಲಾಸಂ, ಡಾ.ಗೋಪಾಲಕೃಷ್ಣರಾವ್ ಮೊದಲಾದವರು ಇದ್ದರು. ಈ ಪತ್ರಿಕೆಯಲ್ಲಿ ನಾಟಕಗಳ ವಿಮರ್ಶೆಯನ್ನು ಮಾಡಿರುವುದು ಕಂಡುಬರುತ್ತದೆ. ಎಡಪಂಥೀಯ ಚಿಂತನೆಗಳ ಹೊಳಹುಗಳನ್ನು ಈ ಪತ್ರಿಕೆಯಲ್ಲಿ ಕಾಣಬಹುದು. ಅನಕೃ ಅವರ ಮಿಂಚು, ಕಿಡಿ, ರಾಮನ ಸೋಲು, ಪಾಪಪುಣ್ಯ ಮೊದಲಾದ ಕತೆಗಳು ಇಡರಲ್ಲಿ ಪ್ರಕಟವಾದವು. ಅವರ ಸಣ್ಣ ಕತೆಗಳ ಕುರಿತು ಹಾಮಾನಾ

ಹೇಳುವ ಮಾತು ಅರ್ಥಪೂರ್ಣವಾದುದು "ವಸ್ತುವಿನ ದೃಷ್ಟಿಯಿಂದ ಅನಕೃ ಅವರ ಕಾದಂಬರಿ ಕ್ಷೇತ್ರ ಮತ್ತು ಸಣ್ಣ ಕಥೆಗಳ ಕ್ಷೇತ್ರದಲ್ಲಿ ವಿಶೇಷ ಅಂತರವಿಲ್ಲ. 'ಕಥಾಂಜಲಿ'ಗೆ ಮೊದಲ ಹದಿನಾಲ್ಕು ತಿಂಗಳು ಅನಕೃ ಸಂಪಾದಕರಾಗಿದ್ದರು. ನಂತರ ಬಿ.ಎನ್.ಗುಪ್ತಾ, ಇದರ ಪ್ರಕಾಶನದ ಜವಾಬ್ದಾರಿ ವಹಿಸಿಕೊಂಡರು. ನಂತರ ಮ.ನ. ಚೌಡಪ್ಪ, ಶ್ರೀನಾಥ, ಎನ್.ವೆಂಕಟಾಚಲಪತಿ ಮತ್ತು ನಾಡಿಗೇರ ಕೃಷ್ಣರಾಯ ಸಂಪಾದಕರಾಗಿ ಕಾರ್ಯ ನಿರ್ವಹಿಸಿರುವುದು ಕಂಡು ಬರುತ್ತದೆ. ೧೯೩೧ರ ಕೊನೆಯ ವರೆಗೆ ನಿಯಮಿತವಾಗಿ ಪ್ರಕಟಗೊಂಡ ಕಥಾಂಜಲಿ ಅನಂತರ ನಿಂತುಹೋಯಿತು. ಮತ್ತೆ ೧೯೬೩ರ ಮಧ್ಯಭಾಗದಿಂದ ೧೯೪೧ರ ಅಂತ್ಯದ ವರೆಗೆ ಪ್ರಕಟಣೆಯಾಯಿತು. ಅನಕೃ ಅವರ ಕತೆಗಳಲ್ಲದೆ ಆ ಕಾಲದ ಹೊಸ, ಹಳೆಯ ಕತೆಗಾರರನ್ನೆಲ್ಲ 'ಕಥಾಂಜಲಿ'ಗೆ ಬರೆದಿದ್ದಾರೆ. ಸಾಹಿತ್ಯಿಕ ಪತ್ರಿಕೆಗಳಿಗೆ ಹೊಸ ತಿರುವು ನೀಡಿದ ಸಾಧನೆ 'ಕಥಾಂಜಲಿ'ಯದು. ಇದನ್ನೇ ಮಾದರಿಯಾಗಿಟ್ಟುಕೊಂಡು ಮುಂದೆ ಕಥಾಕುಂಜ, ಕಥಾಚಂದ್ರಿಕೆ, ಕಥಾವಳಿ, ಕಥಾಸಂಗ್ರಹ ಮುಂತಾದ ಪತ್ರಿಕೆಗಳು ಹೊರಬಂದವು ಎಂದು ಅನಕೃ ಮುಂಬೈ ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ ಹೇಳಿದ್ದಾರೆ. ಕಥಾಂಜಲಿ ಹೊಸ ಲೇಖಕರ ವಿಕಾಸಕ್ಕೆ ನೆರವಾಯಿತು. ಸುಮಾರು ಐವತ್ತು ಜನ ಲೇಖಕರು ಕಥಾಂಜಲಿಯಿಂದ ಮುಂದೆ ಬಂದರು. ಸಣ್ಣ ಕತೆಗಳ ಸೃಷ್ಟಿಗೂ, ಕಥನ ಕಲೆಯ ನವವಿಜ್ಞಾನದ ಉದಯಕ್ಕೂ ಕಥಾಂಜಲಿ ಬಹಳ ಹೆಣಗಿತು.[೮]

ಅನಕೃ ತಮ್ಮ ಆತ್ಮ ಕಥನ 'ಬರಹಗಾರನ ಬದುಕು' ಪುಸ್ತಕದಲ್ಲಿ 'ಕಥಾಂಜಲಿ' ಪತ್ರಿಕೆಯ ಕುರಿತಂತೆ ಹೀಗೆ ಹೇಳಿದ್ದಾರೆ,

> "ದ.ಕೃ ಭಾರದ್ವಾಜ, ಜಿ.ಪಿ.ರಾಜರತ್ನಂ, ರಾಶಿ, ಕೆ.ಗೋಪಾಲಕೃಷ್ಣರಾವ್, ಆನಂದ, ಮ.ನ.ಮೂರ್ತಿ, ಮೊದಲಾದ ಮಿತ್ರರು ಯಾವ ಫಲಾಪೇಕ್ಷೆಯೂ ಇಲ್ಲದೆ ನನಗೆ ನೆರವಾದರು ಕಥಾಂಜಲಿ ಕೀರ್ತಿ ಗಳಿಸಿತು. ಓದುಗರನ್ನು ಗಳಿಸಿತು. ಆದರೆ ಚಂದಾದಾರರನ್ನು ಗಳಿಸಲಿಲ್ಲ. ನಾನು ಒಂದು ಸಾವಿರ ಪ್ರತಿ ಅಚ್ಚು ಹಾಕಿಸುತ್ತಿದ್ದೆ. ಅದಕ್ಕೆ ಚಂದಾದಾರರಾಗಿದ್ದವರು ನೂರೈವತ್ತು ಜನ ಸುಮಾರು ಮುನ್ನೂರು ಪ್ರತಿಗಳನ್ನು ಒಟ್ಟು ಹಂಚುತ್ತಿದ್ದೆ. ಪ್ರತಿ ತಿಂಗಳು ಐನೂರೈವತ್ತು ಪ್ರತಿಗಳು ನನ್ನ ಮನೆಯಲ್ಲಿ ಶೇಖರವಾಗುತ್ತಿದ್ದವು. ಮುದ್ರಣ, ಕಾಗದ, ಅಂಚೆ, ಗುಮಾಸ್ತರ ಸಂಬಳ ತೆತ್ತು, ತೆತ್ತು ನನ್ನ ತಂದೆಯವರು ದಣಿದಿದ್ದರು. ಪತ್ರಿಕೆ ನಿಲ್ಲಿಸಿಬಿಡಲು ನಾನು ಯೋಚಿಸುತ್ತಿದ್ದಾಗ ಬಿ.ಎನ್. ಗುಪ್ತಾರು ಬೆಂಗಳೂರಿಗೆ ಬಂದರು. ದ.ಕೃ.ಭಾರದ್ವಾಜರ ಮೂಲಕ ಅವರ ಪರಿಚಯ ಆಯಿತು. ಗುಪ್ತಾರಿಗೆ 'ಕಥಾಂಜಲಿ' ಒಪ್ಪಿಸಿ ನಾನು ಕೈತೊಳೆದುಕೊಂಡೆ. 'ಕಥಾಂಜಲಿ'ಯಿಂದ ನನಗೆ ನಷ್ಟವೇ ಆಯಿತು. ಆದರೆ ಈ ಪತ್ರಿಕೆ ಕನ್ನಡ ಸಾಹಿತ್ಯದ ಒಂದು ಮೈಲಿಗಲ್ಲಾಗಿ ಅನೇಕ ಹೊಸ ಲೇಖಕರನ್ನು ಬೆಳಕಿಗೆ ತಂದಿತು. ಆನಂದ, ರಾಶಿ, ಗೋಪಾಲಕೃಷ್ಣರಾಯರು, ಶ್ರೀನಾಥ, ದ.ಕೃ.ಭಾರದ್ವಾಜ, ಮ.ನ. ಮೂರ್ತಿ, ರಾಜರತ್ನಂ ಇವರ ಉತ್ತಮ ಕತೆಗಳು 'ಕಥಾಂಜಲಿ'ಯಲ್ಲಿ ಪ್ರಕಟವಾದವು. 'ಕಥಾಂಜಲಿ' ಸಾಹಿತ್ಯಯುಗದ ಹರಿಕಾರನಾಯಿತು.[೯]

ಕಥಾಕುಂಜ: ಇದನ್ನು ಪ್ಯಾಟಿ ಶ್ಯಾಮರಾಯರು 'ಸಣ್ಣಕತೆಗಳ ಮಾಸಪತ್ರಿಕೆ, ಬೆಳಗಾವಿ' ಎಂದು ಕರೆದರು. ಇದು ೧೯೩೫ನೇ ಜನವರಿಯಲ್ಲಿ ಹೊರಬಂದಿತು. ೧೯೩೬ನೇ ಫೆಬ್ರವರಿಯಲ್ಲಿ ಸಂಚಿಕೆಯನ್ನು ವಿಜಯನಗರ ಸಮ್ರಾಜ್ಯೋತ್ಸವ ಮತ್ತು ಕರ್ನಾಟಕ ಏಕೀಕರಣಗಳ ವಿಶೇಷಾಂಕವಾಗಿ

ಹೊರಡಿಸಲಾಯಿತು. ಕ್ನಾರ್ಟಕ ಏಕೀಕರಣಕ್ಕೆ ಮೊದಲೇ ವಿಶೇಷಾಂಕ ಹೊರಡಿಸಿರಿವುದು ಅವರ ಕನ್ನಡ ಪ್ರೀತಿಯನ್ನು ಎತ್ತಿ ತೋರಿಸುತ್ತದೆ. ಈ ಪತ್ರಿಕೆ ೧೯೩೯ರ ಆರಂಭದಲ್ಲಿ ನಿಂತು ಹೋಗಿದ್ದು ಮುಂದೆ ಕೆಲಕಾಲ 'ಕಥಾಕುಂಜ ಗ್ರಂಥಮಾಲೆ'ಯಾಗಿ ಬಿಡುಗಡೆ ಆಗಿರುವ ಬಗ್ಗೆ ಅಂತರಂಗ ಪತ್ರಿಕೆ (ಆಗಸ್ಟ್ ೧೩, ೧೯೩೯) ಯ ಜಾಹಿರಾತೊಂದು ತಿಳಿಸುತ್ತದೆ.

ಕಥಾವಳಿ: ಈ ಪತ್ರಿಕೆ ೧೯೩೦ರಿಂದ ೧೯೫೦ರವರೆಗೆ ಬೆಂಗಳೂರಿನಿಂದ ವಿ. ಗುಪ್ತಾ ಎನ್ನುವವರಿಂದ ಸಂಪಾದಿಸಲ್ಪಟ್ಟಿತು. ಕಥಾವಳಿಯನ್ನು 'up to date kannada monthly magazine. A treasur of short stories, fun, pictures, film news, art plates along with regular features, kathavali's number reaches 5000 homes' ಎಂಬುದಾಗಿ 'ಅಂತರಂಗ' ಪತ್ರಿಕೆಯಲ್ಲಿ ನೀಡಿದ ಜಾಹಿರಾತು ತಿಳಿಸುತ್ತದೆ.

ಅನಕೃ ಅವರು ಕತೆ ಕಾದಂಬರಿಗಳನ್ನು ಮಾತ್ರವಲ್ಲದೆ ಕನ್ನಡ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ವಿಪುಲ ಗ್ರಂಥಗಳನ್ನು, ಲೇಖನಗಳನ್ನು ಬರೆದಿದ್ದಾರೆ. ಅವರು ನಟಭಯಂಕರ ಗಂಗಾಧರರಾಯರು, ಹುಲಿಮನೆ ಸಿದ್ಧರಾಮಯ್ಯನವರು, ದಾನಶೂರ ಕರ್ಣ ಕೊಟ್ಟೂರಪ್ಪನವರು ಮತ್ತಿತರ ಅನೇಕ ರಂಗ ಕಲಾವಿದರನ್ನು ಕುರಿತ ಲೇಖನಗಳನ್ನು ಬರೆದಿದ್ದಾರೆ. ಅವರು ಒಂದು ಓದುಗವರ್ಗವನ್ನೇ ಸೃಷ್ಟಿ ಮಾಡಿದ ಲೇಖಕ ಎಂದರೆ ಅದು ಅತಿಶಯೋಕ್ತಿಯಾಗದು. ಇಷ್ಟಾದರೂ ಅವರ ಕೃತಿಗಳ ಬಗ್ಗೆ ಅವರ ಕೃತಿರಚನೆಯ ಪ್ರಮಾಣವನ್ನು ಪರಿಗಣಿಸಿದರೆ ಅಷ್ಟು ವಿಪುಲವಾಗಿ ವಿಮರ್ಶೆ ನಡೆದಿಲ್ಲ. ಈ ಬಗ್ಗೆ ಅನಕೃ ತಮ್ಮ ಅಭಿಪ್ರಾಯವನ್ನು ತರಾಸು ಅವರಿಗೆ ಹೇಳಿರುವ ಮಾತುಗಳಲ್ಲಿ ಕಾಣಬಹುದು:

> "ಬರೆಯಬೇಕು, ನಮ್ಮ ತೃಪ್ತಿಗಾಗಿ ಬರೆಯಬೇಕು. ಬರೆದ ಬರವಣಿಗೆ ನಮ್ಮ ಮನಸ್ಸಿಗೆ ತೃಪ್ತಿ ಕೊಟ್ಟರೆ ಸಾಕು. ಹತ್ತು ಜನರನ್ನು ಮೆಚ್ಚಿಸುವುದಕ್ಕಾಗಿ ಸಲ್ಲದ ಕಸರತ್ತು ಮಾಡುವುದು ಬರಹಗಾರನ ಲಕ್ಷಣವಲ್ಲ. ಅಷ್ಟೇ ಅಲ್ಲ, ನಾವು ಬರೆದದ್ದೆಲ್ಲ ಶಾಶ್ವತ ಸಾಹಿತ್ಯ ಎಂಬ ಭ್ರಮೆಯನ್ನು ನಾವು ಇಟ್ಟುಕೊಳ್ಳಬೇಕಾಗಿಲ್ಲ. ಬರೆಯಬೇಕು. ನಮಗೆ ಸರಿ ಎನಿಸಿದ್ದನ್ನು ಬರೆಯಬೇಕು. ಉಳಿಯುವುದು ಉಳಿಯುತ್ತದೆ, ಹೋಗುವುದು ಹೋಗುತ್ತದೆ. ಸಮಕಾಲೀನ ವಿಮರ್ಶೆಯ ಅಂಕುಶಕ್ಕೆ ಎಂದೂ ಹೆದರಬಾರದು. ಕೊನೆಯ ನಿರ್ಣಯ ಮಾಡುವವನು ಇವತ್ತಿನ ವಿಮರ್ಶಕನಲ್ಲ, ಕಾಲ. ಆದ್ದರಿಂದ ನಿರ್ಭಯವಾಗಿ ಬರಿ".

ಪ್ರಗತಿಶೀಲ ವಿಮರ್ಶೆ: 'ಪುಸ್ತಕ ಪ್ರಪಂಚ' ಮಾಸಪತ್ರಿಕೆ ೧೯೫೧ರ ಮಾರ್ಚಿ ಹಾಗು ಡಿಸೆಂಬರ್ ಸಂಚಿಕೆಗಳಲ್ಲಿ ಅನಕೃ ಅವರ ನಗ್ನಸತ್ಯ ಹಾಗು ನಟಸಾರ್ವಭೌಮ ಕಾದಂಬರಿಗಳನ್ನು ಡಿ.ವಿ.ಕೆ.ಮೂರ್ತಿಯವರು ವಿಮರ್ಶಿಸಿರುವರು,

೧೯೪೦ರ ವೇಳೆಗೆ ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ಘೋಷಣೆ ಕೇಳಿಬಂದಿತು. ಅನಕೃ ನೇತೃತ್ವದಲ್ಲಿ ಪ್ರಗತಿಶೀಲ ಲೇಖಕರ ಸಂಘ ಏರ್ಪಟ್ಟು ಕರ್ನಾಟಕದ ನಾನಾ ಕಡೆಗಳಲ್ಲಿ ಪ್ರಚಾರ ಕಾರ್ಯ ನಡೆಯಿತು. ಜೊತೆಗೆ ಪ್ರಗತಿಶೀಲ ಲಾಂಛನದಲ್ಲಿ ಸಾಹಿತ್ಯಕೃತಿಗಳು ಕಾಣಿಸಿಕೊಂಡವು. ಆದರೆ ಈ ಕೃತಿಗಳು ಮೂಲಭೂತ ವಾಸ್ತವತೆ ಹಾಗು ಮಾನವತಾ ಗತಿಶೀಲತೆಗಳಿಂದ ಪರಕೀಯಗೊಂಡು ಮಾನವ ದೌರ್ಬಲ್ಯ ದುರ್ವ್ಯಸನಗಳನ್ನು ಲೋಲುಪತೆಯಿಂದ ಮೆರೆಸುವ ಆಶಯದಿಂದ ಕೂಡಿದ್ದು ಪ್ರಗತಿಶೀಲ

ಸಾಹಿತ್ಯದ ವಿಕೃತಿಯಾಗಿ ಪರಿಣಮಿಸಿದವು. ಇದರಿಂದಾಗಿ ಕನ್ನಡದಲ್ಲಿ ದೊರಕಿದ್ದು, ಪ್ರಗತಿಶೀಲ ಸಾಹಿತ್ಯದ ಅಪವ್ಯಾಖ್ಯೆ ಆಯಿತು. ಇದನ್ನು ಪ್ರಾತಿನಿಧಿಕವಾಗಿ ಅನಕೃ ಅವರ ನಗ್ನಸತ್ಯ ಹಾಗು ನಟಸಾರ್ವಭೌಮ ಕಾದಂಬರಿಗಳನ್ನು ವಿಮರ್ಶೆ ಮಾಡುವ ಮೂಲಕ ವಿವೇಚಿಸಿದ್ದಾರೆ.[೧೦]

ನಗ್ನಸತ್ಯ ಕಾದಂಬರಿಯನ್ನು ವಿವೇಚಿಸುತ್ತ ಪೂರ್ವಾರ್ಧದಲ್ಲಿ ಅನಕೃ ಅವರ ನಗ್ನಸತ್ಯ ಮತ್ತು ಶನಿಸಂತಾನ ಕುರಿತು ಕಟುಟೀಕೆ ಮಾಡಿರುವ ನಿರಂಜನರು ನಗ್ನಸತ್ಯ ಶನಿಸಂತಾನ ಮುಂತಾದ ಕಾದಂಬರಿಗಳಲ್ಲಿ ಬರುವ ಶಾಬ್ದಿಕ ಕಾಮ ಅಸಹ್ಯ ಹುಟ್ಟಿಸುತ್ತದೆ. ಇದಕ್ಕೆ ಕಾರಣ ಅದು ಉದ್ರೇಕಗೊಳಿಸುತ್ತದೆ ಎಂಬುದಲ್ಲ. ಆದರೆ ಅದು ಅಗ್ಗದ ಬಳಕೆ ಎಂದಿದ್ದಾರೆ.[೧೧]

ಇರ್ವಿನ್ ಸ್ಟೋನ್‌ರ 'ಲಸ್ಟ್ ಫಾರ್ ಲೈಫ್' ಕೃತಿಯಲ್ಲಿ ಬರುವ ಡಚ್ ಚಿತ್ರಗಾರ ವಿನ್ಸೆಂಟ್ ವ್ಯಾನ್‌ಗಾಗ್ ಪಾತ್ರದೊಂದಿಗೆ 'ನಟಸಾರ್ವಭೌಮ' ಕಾದಂಬರಿಯನ್ನು ವಿಶ್ಲೇಷಿಸುವ ಡಿ.ವಿ.ಕೆ. ಮೂರ್ತಿಯವರು "ಕಲೆಯ ಸಮಾಧಿಯ ಮೇಲೆ ತಮ್ಮ ಆವಾಸ ಸ್ಥಾನ ಮಾಡಿಕೊಂಡಿರ್'ವ ಸೊಗಸುಗಾರರನ್ನೇ ನಿಜವಾದ ಕಲಾವಿದರು ಎಂದು ಸಾರುವ ಮೋಹವನ್ನು 'ನಟಸಾರ್ವಭೌಮ'ದಲ್ಲಿ ಕಾಣುತ್ತೇವೆ. ೮೧೦ ಪುಟಗಳ ದೀರ್ಘ ಅವಕಾಶದಲ್ಲಿ ನಿರರ್ಗಳವಾಗಿ ನಡೆದಿರುವ ಈ ಅಸಂಗತವಾದ ಸ್ವಚ್ಛಂದ ಮನೋಧರ್ಮದ ಕಲ್ಪನಾ ವೈಪರೀತ್ಯ ಪ್ರಗತಿಶೀಲ ಸಾಹಿತ್ಯಕ್ಕೊಂದು ದೊಡ್ಡ ಕೊಡಲಿಪೆಟ್ಟೇ ಸರಿ" ಎಂದಿದ್ದಾರೆ.[೧೨]

'ನಟಸಾರ್ವಭೌಮದ ಬಗ್ಗೆ ವೀಸೀಯವರು ಡಿವಿಕೆ ಮೂರ್ತಿಯವರ ಅಭಿಪ್ರಾಯವನ್ನೇ ಪುಷ್ಟಿಸುವಂತಹ ಲೇಖನವೊಂದನ್ನು ಹಿಂದೂ ಪತ್ರಿಕೆಯಲ್ಲಿ ಬರೆದಿದ್ದಾರೆ. ಅವರು ಕಾದಂಬರಿಯನ್ನು ಅವಲೋಕಿಸುತ್ತ "ಪುಸ್ತಕದ ಗಾತ್ರ ದೊಡ್ಡದು ಎನಿಸುತ್ತದೆ. ಅಲ್ಲಲ್ಲಿ ಕತ್ತರಿ ಪ್ರಯೋಗವಾಗಿದ್ದರೆ ನಷ್ಟವೇನೂ ಆಗುತ್ತಿರಲಿಲ್ಲ. ಲೈಂಗಿಕ ಸನ್ನಿವೇಶಗಳ ವರ್ಣನೆಯಲ್ಲಿ ಆರೋಗ್ಯಕರವಲ್ಲದ ಆಸಕ್ತಿ, ಸಲ್ಲಾಪಗಳಿವೆ. ಇದರ ಜೊತೆಗೆ ಬಾಹ್ಯಕ್ರಿಯೆಗಳಲ್ಲಿ ಓದುಗರಿಗೆ ಕಚಗುಳಿ ಇಡುವಂತಹ ಉಪಕ್ರಿಯೆ ಅವಶ್ಯಕವಿರಲಿಲ್ಲ. ಪಾನ ಲಂಪಟತೆ ಎನ್ನಬಹುದಾದ ಪ್ರಪಂಚ. ಕೆಲವು ವಿವರಾಂಶಗಳಲ್ಲಿ ಕಾಣುವ ವಿಕೃತಿ ಅಥವ ವಿಕಾರ ಇಟ್ಟುಕೊಂಡ ಹೆಂಗಸರ, ಸೂಳೆಗಾರಿಕೆ ನಡೆಸುವವರ ಪ್ರಪಂಚದಲ್ಲಿ ನಡೆಯುವವು" ಎಂದಿದ್ದಾರೆ.

ಕಾದಂಬರಿಯಲ್ಲಿನ ಮುನ್ನುಡಿ ಕುರಿತಂತೆ ವೀಸೀಯವರು ಮುನ್ನುಡಿಯಲ್ಲಿ ಗ್ರಂಥಕರ್ತರು ಯಾವ ಮಾತನ್ನೇ ಹೇಳಿರಲಿ, ಸ್ವಲ್ಪ ಅತಿಯೇ ಎನ್ನಬೇಕು. ತನಗಿಷ್ಟ ಬಂದ ವಿಷಯವನ್ನು ಆರಿಸಿಕೊಳ್ಳಲೂ ತನ್ನ ಅರಿವಿಗೆ ಬಂದಿರುವ ಯಾವುದೇ ಪ್ರಂಪಂಚವನ್ನಾಗಲಿ ವರ್ಣಿಸುವುದಕ್ಕೂ ಕೃತಿಕಾರನಿಗೆ ಅಧಿಕಾರ ಉಂಟು,..ಅಮಿತತೆ, ಅತಿವಿಸ್ತರಣಗಳು ಎಂತಹ ಕೃತಿಯ ಅಖಂಡತೆ, ಹಿತಸಾಧನೆಗಳನ್ನೂ ಕೆಡಿಸಬಲ್ಲವು. ಇದರಲ್ಲಿನ ವಿಷಯಸಕ್ತಿ ಹುಡುಗಾಟಿಕೆ ತುಂಬ ರಂಜಕವಾಗಿ ಮೋಹಕವಾಗಿ ಇರಬಲ್ಲದು. ಸತ್ಯಕ್ಕಿಂತ ನಗ್ನತೆಗೇ ಇಲ್ಲಿನ ವಾದ ಹೆಚ್ಚುಸಾಧಕವಾಗಿದೆ. ಬಹು ಗಮನಕ್ಕೆ ಅನುಕೂಲವಾದ ವಾದ ದೊರೆಯುತ್ತದೆ. ಸ್ವತಂತ್ರ ಯೋಚನೆ ಎಂಬ ಹೆಸರಿನಲ್ಲಿ ಬೆಳೆದ ಒಂದು ಪ್ರಜ್ಞಾವಾದ ಬುದ್ಧಿ ಬೆಳೆಯದವರ ಮನಸ್ಸನ್ನು ರಮಿಸಬಲ್ಲದು. ಆದುದರಿಂದ ಇಂತಹ ಪುಸ್ತಕಗಳು ತುಂಬ ಪ್ರಿಯವಾದ ಸಣ್ಣ ವಯಸ್ಸಿನವರಿಗೆ ಚಿತ್ತಾಕರ್ಷಣೆ ಉಂಟು ಮಾಡಿ ಅವರನ್ನು ಕೆಡಿಸಬಲ್ಲದು. ಆ ಮಟ್ಟಿಗೆ ಅದು ವಿಷಪ್ರಾಯ".[೧೩]

ಈಗ ಪ್ರಗತಿಶೀಲ ಚಳವಳಿಯ ಕೆಲವು ಮಹತ್ವದ ಸಾಹಿತ್ಯಕೃತಿಗಳನ್ನು ಸಾಹಿತ್ಯಿಕ ಪತ್ರಿಕೆಗಳ ವಿಮರ್ಶೆಯ ಹಿನ್ನೆಲೆಯಲ್ಲಿ ಪರಿಶೀಲಿಸಬಹುದು. ಅನಕೃ ಅವರ ಸಂಧ್ಯಾರಾಗ ಕಾದಂಬರಿ ಕುರಿತು ರಂ.ಶ್ರೀ ಮುಗಳಿಯವರು,

> "ಅನಕೃ ಅವರ ಕೃತಿಗಳಲ್ಲಿ ಇದು ಮೇಲಾದ, ಸಣ್ಣಗಾತ್ರದಲ್ಲಿ ಬಹುಶಃ ಪೂರ್ಣತೆವೆತ್ತ ಕಾದಂಬರಿಯಾಗಿದೆ. ಆದರೆ ಇದನ್ನು ಹಿರಿದಾದ ಕೃತಿ ಇಲ್ಲವೆ ಹೊಸಗನ್ನಡದ ಉತ್ತಮ ಕಾದಂಬರಿ ಎಂದು ವಿಶ್ವಸಾಹಿತ್ಯದಲ್ಲಿ ಇದಕ್ಕೆ ಮೇಲಾದ ಸ್ಥಾನ ಇದೆ ಎಂದು ಕರೆಯುವುದು ಅತಿಶಯೋಕ್ತಿ"

ಎನ್ನುವ ಮುಗಳಿ ಇದರ ನ್ಯೂನತೆಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ.

> "...ಇಷ್ಟೆಲ್ಲ ಗುಣಭೂಯಿಷ್ಠವಾದ ಈ ಕೃತಿಯಲ್ಲಿ ಕಲೆಯ ಮುಂದೋಟದ ಮೂಲಕ ಪಾತ್ರ ವಿಕಾಸದ ಸೂಕ್ಷ್ಮಾಂಶಗಳಿಗೆ ಎಲ್ಲೆಡೆ ಅವಕಾಶ ದೊರೆಯಲಿಲ್ಲ. ಹಾರಿಕೆಗಳ ಮೂಲಕ ಸಹಜ ಹೆಜ್ಜೆ ಇಲ್ಲದಂತೆ ಆಗಾಗ ತೋರುತ್ತದೆ. ಅಯ್ದು ಕತೆಯ ಮೊತ್ತಕ್ಕಿಂತ ಗಾತ್ರ ಕಡಿಮೆಯಾಗಿದೆ. ಮುಖ್ಯನಾಯಕ ಲಕ್ಷ್ಮಣನ ವ್ಯಕ್ತಿವಿಕಾಸದಲ್ಲಿ ಅವನ ಹೋರಾಟ, ತೂಗಾಟ, ಕಷ್ಟ ತ್ಯಾಗ ಇವುಗಳನ್ನು ಇದರಲ್ಲಿ ವಿಶೇಷವಾಗಿ ಉತ್ತರಾರ್ಧದಲ್ಲಿ ಬಿಡಿಸಿ ತೋರಿಸಿ ಕಾದ ಚಿನ್ನದಂತೆ ಅವನ ಸಿದ್ಧಿಯ ಕಾಂತಿಯನ್ನು ತೋರಬಹುದಾಗಿತ್ತು. ಆಕಸ್ಮಿಕ ಅನುಕೂಲಗಳು ಈಗಿನ ಕತೆಯಲ್ಲಿ ಹೆಚ್ಚಾಗಿ ಪರಿಸ್ಥಿತಿಯೊಡನೆ ಹೋರಾಟವನ್ನು ತೋರಿಲ್ಲ...ಇದರಲ್ಲಿಯ ವ್ಯಕ್ತಿಗಳ ಘನತೆ ಕಾದಂಬರಿಯ ಘನತೆಯ ಬಗ್ಗೆ ನಿಸ್ಸಂಶಯ ಪರಿಣಾಮವನ್ನು ಮಾಡುವಂತಾದರೂ ಕಲಾವಂತಿಕೆಗೆ ಬೇಕಾದ ಹರಹು ಹದ ಆಳ ಇದರಲ್ಲಿ ಸಾಕಷ್ಟಿಲ್ಲ. ಇದ್ದುದು ಹಿರಿಮೆಗೆ ಕೈಚಾಚಿದೆ".[೧೪]

ಚದುರಂಗರ 'ವೈಶಾಖ' ಕಾದಂಬರಿ ಕುರಿತಂತೆ ಹಲವು ವಿಮರ್ಶಾಲೇಖನಗಳು ಪ್ರಕಟವಾಗಿವೆ,

> "ಜಾತಿಯ ಅಮಾನುಷತೆಯನ್ನು ಕ್ರೌರ್ಯವನ್ನು ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಫುಲೆ, ಪೆರಿಯಾರ್, ನಾರಾಯಣಗುರು, ಲೋಹಿಯಾ ಮುಂತಾದ ಆಲೋಚಕರು ಹೇಳುತ್ತಲೇ ಬಂದಿದ್ದಾರೆ. ಅದನ್ನು ಒಂದು ಕಲಾಕೃತಿಯಲ್ಲಿ ಮೂಡಿಸುವಲ್ಲಿ ಚದುರಂಗರು ಸಫಲರಾಗಿದ್ದಾರೆ. ಜಾತಿ ವ್ಯವಸ್ಥೆಯ ಅಮಾನವೀಕರಣವನ್ನು ಇದು ಅದ್ಭುತವಾಗಿ ಚಿತ್ರಿಸುತ್ತದೆ. ಅದು ಜಾತಿ ಪದ್ಧತಿಯ ಮೇಲೆ ಬಿದ್ದ ಗದಾ ಪ್ರಹಾರ. ಈ ದೃಷ್ಟಿಯಿಂದ ಇದು ಶ್ರೇಷ್ಠ ಕಾದಂಬರಿ. ಹಿಂದೂ ಸಮಾಜದ ಕ್ರೌರ್ಯವನ್ನು ಕಾದಂಬರಿಕಾರರು ಸಾಕ್ಷೀಭೂತವಾಗಿ ಹಿಡಿದಿದ್ದಾರೆ,..ಗ್ರಾಮ್ಯ ಮತ್ತು ಗ್ರಾಂಥಿಕ ಶೈಲಿಗಳಲ್ಲಿ ರಚಿತವಾಗಿರುವುದರಿಂದ ಬದುಕು ಭಾವಗಳ ಸಮತೋಲನ ಸಾಧಿತವಾಗಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ಹೊರತುಪಡಿಸಿದರೆ ದಲಿತ ಜೀವನವನ್ನು ತುಂಬ ದಟ್ಟವಾಗಿ ಕೃತಿಗೊಳಿಸಿದೆ 'ವೈಶಾಖ'''.[೧೫]

ಇದೇ ಕಾದಂಬರಿಯನ್ನು ಸಿ.ಎನ್. ರಾಮಚಂದ್ರನ್ ಹೀಗೆ ಪರಿಶೀಲಿಸುತ್ತಾರೆ.

೧. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದ ಮಹತ್ವಪೂರ್ಣ ಕಾದಂಬರಿಗಳಲ್ಲಿ ಕಂಡು ಬರುವ ಸಮಾನ ಲಕ್ಷಣವಾದ 'ಸಾವು ಪುನರ್ಜನ್ಮ'ದ ಚಿರಂತನ ಪ್ರತೀಕವನ್ನು ಸಮರ್ಥವಾಗಿ ವ್ಯಾಪಕವಾಗಿ ಈ ಕಾದಂಬರಿ ದುಡಿಸಿಕೊಂಡಿದೆ.

೨. ಮಾನವ ತನ್ನ ಜೀವಿತದುದ್ದಕ್ಕೂ ಇಬ್ಬಗೆಯ ಬೋನಿನಲ್ಲಿ ಸಿಕ್ಕಿ ನರಳುತ್ತಾನೆ. ಒಂದು ತನ್ನಿಂದಲೇ ನಿರ್ಮಿಸಲ್ಪಟ್ಟ ಜಾತಿ ಮತ ವರ್ಗಗಳಿಂದ ಆದ ಕೃತ್ರಿಮ ಬೋನು. ಎರಡನೆಯದು, ಇದಕ್ಕಿಂತಲೂ ಹೆಚ್ಚು ಬಲವಾದ ಹಾಗು ನಿಷ್ಠುರವಾದ ಕಾಮ ಕ್ರೋಧಗಳಿಂದ ಉಂಟಾದ ನೈಸರ್ಗಿಕ ಬೋನು ಎನ್ನುವ ಚದುರಂಗರು ಸಮಾಜಮುಖೀ ಚಿಂತನೆಯನ್ನು 'ಬಂಧನ ಬಿಡುಗಡೆ' ಪ್ರತೀಕದ ಬಳಕೆಯ ಮೂಲಕ ಮಾಡಿದ್ದಾರೆ.

೩. ಮೇಲೆ ಹೇಳಿರುವ ಇಬ್ಬಗೆಯ ಬೋನಿನ ಬಗ್ಗೆ ಕಾದಂಬರಿ ಹೀಗೆ ಧ್ವನಿಸುತ್ತದೆ. "ಪ್ರಾಯಶಃ ಎಂದಾದರೂ ಒಂದು ದಿನ ಮಾನವ ಸಮಾಜ ಎಚ್ಚೆತ್ತು ತನ್ನ ಕೃತ್ರಿಮ ಬಂಧನಗಳನ್ನು ಕಿತ್ತೊಗೆದು ಮುಕ್ತವಾಗಬಹುದು. ಆದರೆ ನೈಸರ್ಗಿಕೆ ಬಂಧನದಿಂದ ಮಾತ್ರ ಎಂದೆಂದಿಗೂ ಹೊರಬರುವ ಸಾಧ್ಯತೆ ಇಲ್ಲ".

೪. ವೈಶಾಖದ ಶ್ರೇಷ್ಠತೆ ಇರುವುದು ಅದು ಆರ್ಥಿಕ ಸಾಮಾಜಿಕ ಧಾರ್ಮಿಕ ಬಂಧನಗಳನ್ನು ಮೀರಿ ಮೇಲೆ ನಿಂತು ಸಂಪೂರ್ಣ ಮಾನವ ಪೀಳಿಗೆಯನ್ನೇ ತನ್ನ ಹಿಡಿತದಲ್ಲಿ ಹೊಸಕುತ್ತಿರುವ ನೈಸರ್ಗಿಕ ಬಂಧನವನ್ನು ಆಮೂಲಾಗ್ರವಾಗಿ ಶೋಧಿಸಿರುವುದು. ಇಲ್ಲಿನ ನೈಸರ್ಗಿಕ ಬಂಧನದ ಕೂಪವೆಂದರೆ ಕಾಮ. ಇದು ಜನ್ನನ 'ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' ಎಂಬ ನುಡಿಯನ್ನು ನೆನಪಿಸುತ್ತದೆ[೧]

'ವೈಶಾಖ'ದುದ್ದಕ್ಕೂ ಕಂಡುಬರುವ ಹಾವು (ಆರು ಸಲ ಬರುತ್ತದೆ) ಒಂದು ಮುಖ್ಯ ಸಂಕೇತವಾಗಿದ್ದು ಅದು ಅಜಾಗೃತ ಮನಸ್ತರದ ದಲಿತ ಕಾಮಕ್ಕೆ ಸಂಕೇತವಾಗುತ್ತದೆ ಎನ್ನುವುದು ಗೌರೀಶ ಕಾಯ್ಕಿಣಿಯವರ ಖಚಿತ ಅಭಿಪ್ರಾಯ[೧೭]

ಆದರೆ ಇದು ರಾಮಚಂದ್ರನ್ ಅವರಿಗೆ ಶೋಷಕರ ಸಂಕೇತ, ಕಾಮದ ಸಂಕೇತವಲ್ಲ. ಒಂದು ಸಾಹಿತ್ಯಿಕ ಸಂಕೇತದ ಅರ್ಥ ಕೇವಲ ಅದು ಬರುವ ಸಾಹಿತ್ಯಿಕ ಸಂದರ್ಭವನ್ನು ಅವಲಂಬಿಸುತ್ತದೆಯೇ ಹೊರ‍ತು ಅದಕ್ಕೇನೂ ಸಾರ್ವಕಾಲಿಕ ಅರ್ಥವಿಲ್ಲ ಎಂಬುದು ರಾಮಚಂದ್ರನ್ನರ ವಾದ.

ಈ ಎಲ್ಲ ವಿಮರ್ಶೆಗಳ ಒಟ್ಟು ಸಾರಾಂಶವೇನೋ ಎನ್ನುವಂತೆ ಅನಂತಮೂರ್ತಿಯವರ ಮಾತುಗಳನ್ನು ಇಲ್ಲಿ ಸ್ಮರಿಸಬಹುದಾಗಿದೆ,

'ವೈಶಾಖ'ದಲ್ಲಿ ಒಂದು ಗಟ್ಟಿಯಾದ ನವ್ಯ ಸಾಂಕೇತಿಕ ಕಾದಂಬರಿಯೂ, ಒಂದು ಬಂಡಾಯ ಕಾದಂಬರಿಯೂ ಮತ್ತು ಹತ್ತಾದರೂ ಜನಪ್ರಿಯವಾಗಬಲ್ಲ ಕಾದಂಬರಿಗಳೂ ಜೊತೆ ಜೊತೆಯಾಗಿ ಹುಟ್ಟಿಕೊಂಡಿವೆ. ಈ ದೃಷ್ಟಿಯಿಂದ ವೈಶಾಖ ಕುತೂಹಲದ ಕೃತಿಯಾಗಿದೆ. ಇದನ್ನು ಸೃಷ್ಟಿಸಿದ ಶೈಲಿ

ಮುಖ್ಯವಾಗಿ ನಿರಹಂಕಾರದ್ದು. ಎಲ್ಲದಕ್ಕೂ ತೆರೆದುಕೊಂಡ ಎಲ್ಲವನ್ನೂ ಹೀರಬಲ್ಲ ನಿರ್ಮಮ ಭಾವದ್ದು. ಹಾಗೆಯೇ ಆಕಾರ ಕಳೆಯುವಷ್ಟು ಸ್ವೀಕಾರದ್ದು"[೧೮]

ಬಸವರಾಜ ಕಟ್ಟೀಮನಿಯವರ 'ಜರತಾರಿ ಜಗದ್ಗುರು' ಕುರಿತು ವಿಶ್ಲೇಷಿಸುವ ಭಗವಾನ್ ಉಳಿದ ಪ್ರಗತಿಶೀಲ ಸಾಹಿತಿಗಳಲ್ಲಿ ಕಂಡುಬರದ ಚಿಕಿತ್ಸಾದೃಷ್ಟಿ ಈ ಕಾದಂಬರಿಯಲ್ಲಿ ಕಂಡುಬರುವುದನ್ನು ಗುರುತಿಸಿದ್ದಾರೆ. 'ಕಾದಂಬರಿಯಲ್ಲಿ ತಮ್ಮ ಜನಾಂಗದ ಅವ್ಯವಸ್ಥೆಯನ್ನು ಭಯಂಕರವಾಗಿ ಬಿಡಿಸಿದ್ದಾರೆ. ವರ್ಗಪ್ರಜ್ಞೆಯನ್ನು ಮೀರುವ ಅಪೂರ್ವ ಲೇಖಕರು ಅವರು. ಮಠದ ಸ್ವಾಮಿಯ ಅತ್ಯಾಚಾರಗಳನ್ನೆಲ್ಲ ನಿರ್ವಿಕಾರ ಮನಸ್ಸಿನಿಂದ ಸಮಾಜೋದ್ಧಾರಕ ಧೋರಣೆಯಿಂದ ಧೀರವಾಗಿ ಚಿತ್ರಿಸಿದ್ದಾರೆ' ಎಂದಿದ್ದಾರೆ.[೧೯]

ನಿರಂಜನರ 'ಚಿರಸ್ಮರಣೆ' ಮತ್ತು ಬಸವರಾಜ ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ' ಕೃತಿಗಳನ್ನು ಒಟ್ಟಿಗೆ ವಿಶ್ಲೇಷಿಸುವ ಲೇಖನವೊಂದನ್ನು ಜಿ.ಎಸ್. ಸಿದ್ಧಲಿಂಗಯ್ಯನವರು ಬರೆದಿದ್ದಾರೆ. 'ಚಿರಸ್ಮರಣೆ ಬಂಡಾಯ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ ಎನ್ನುವ ಅವರು ಕಟ್ಟೀಮನಿಯವರ 'ಜ್ವಾಲಾಮುಖಿಯ ಮೇಲೆ'ಗಿಂತ ಅದು ಹೇಗೆ ವಿಶಿಷ್ಟ ಎಂಬುದನ್ನು ತೋರಿಸುತ್ತಾರೆ.

೧. 'ಜ್ವಾಲಾಮುಖಿಯ ಮೇಲೆ' ಕೃತಿಯಲ್ಲಿ ಕಟ್ಟೀಮನಿ ತಮ್ಮ ಪರಿಸರದ ಬದುಕನ್ನು ಗಾಢವಾಗಿ ಅನುಭವಿಸಿ ಚಿತ್ರಿಸಿದ್ದಾರೆ. ಅವ್ರ ಪಾತ್ರಗಳು ಉತ್ತಮ ಬದುಕಿಗಾಗಿ ಹಂಬಲಿಸುವುದನ್ನು ಕಾಣುತ್ತೇವೆ. ಶೋಷಕ ಶೋಷಿತ ಸಂಬಂಧಗಳು ಅಲ್ಲಿ ದಾಖಲಾಗುತ್ತವೆ. ಅದರೆ ನಿರಂಜನರ 'ಚಿರಸ್ಮರಣೆ' ಇನ್ನೂ ಮುಂದುವರಿದ ಹಂತದ ಚಿತ್ರಣವಾಗಿದೆ.

೨. ಕಟ್ಟೀಮನಿಯವರಲ್ಲಿ ಚಿತ್ರಿತವಾದ ವರ್ಗ ಸಂಬಂಧಗಳು ನಿರಂಜನರಲ್ಲಿ ಮುಖಾಮುಖಿಯಾಗುತ್ತವೆ. ಕಟ್ಟೀಮನಿಯವರ ಪಾತ್ರಗಳಿಗಿಲ್ಲದ ಸೈದ್ಧಾಂತಿಕ ಪ್ರಬುದ್ಧತೆ ನಿರಂಜನರ ಪಾತ್ರಗಳಲ್ಲಿ ತುಂಬಿ ತುಳುಕುತ್ತವೆ. ಜ್ವಾಲಾಮುಖಿಯಲ್ಲಿ ನೋವುಣ್ಣುವ ಪಾತ್ರಗಳು, ಚಿರಸ್ಮರಣೆಯಲ್ಲಿ ನೋವಿನ ಕಾರಣಗಳನ್ನು ವೈಜ್ಞಾನಿಕವಾಗಿ ಅರಿತುಕೊಂಡಿವೆ.

೩. ಈ ಲೇಖಕರಿಗಿಬ್ಬರಿಗೂ ದಕ್ಕಿದ ಜೀವನಾನುಭವದ ಹಿನ್ನೆಲೆಯಲ್ಲಿ ಎರಡೂ ಕೃತಿಗಳ ಸಾಚಾತನವನ್ನು ತರತಮ ದೃಷ್ಟಿಯಿಂದ ನೋಡುವುದು ಅಚಾರಿತ್ರಿಕವಾಗುತ್ತದೆ. ಆದರೆ ಕ್ರಾಂತಿಕಾರಿ ಹೋರಾಟವೊಂದರ ನಿಕಟ ಸಂಪರ್ಕ ಇಟ್ಟುಕೊಂಡು ಆ ಅನುಭವವನ್ನು ಪಡೆದುಕೊಂಡ ವಿಶಿಷ್ಟತೆ ಉಳ್ಳ ಕೆಲವೇ ಕನ್ನಡದ ಲೇಖಕರಲ್ಲಿ ನಿರಂಜನ ಅಗ್ರಮಾನ್ಯರು. ಆದ್ದರಿಂದಲೇ ಚಿರಸ್ಮರಣೆ ಬಂಡಾಯದ ಅತ್ಯುತ್ತಮ ಪ್ರತಿನಿಧಿ

ಹೀಗೆನ್ನುವ ಸಿದ್ಧಲಿಂಗಯ್ಯನವರು ಕೊನೆಯಲ್ಲಿ 'ನಿರಂಜನರಲ್ಲಿ ಮಡುಗಟ್ಟಿರುವ ಗಾಢವಾದ ಚಾರಿತ್ರಿಕ ಪ್ರಜ್ಞೆ ಇದೆ. ಹಾಗಾಗಿ ಚಿರಸ್ಮರಣೆ ಕೇವಲ ಆಕ್ರಂದನವಾಗಿರದೆ ಸಂಕಟದ ಹತಾಶ ಚಿತ್ರಣವಾಗಿರದೆ ಬದಲಾವಣೆಯನ್ನು ಮಿಡಿಯುವ ಮಾನವೀಯ ಕಲಾಕೃತಿ'.[೨೦]

ಅನಕೃ ನಿರಂಜನರ ನಡುವೆ ಹಲವು ಬಗೆಯ ತಾತ್ವಿಕ ಭಿನ್ನಾಭಿಪ್ರಾಯಗಳಿದ್ದವು. ಈ ಜಗಳ ವಿಮರ್ಶಾ ರೂಪದಲ್ಲಿ ಪತ್ರಿಕೆಗಳಿಗೆ ಆಹಾರವಾಗಿರುವುದು ಈ ಕೆಳಕಂಡ ಉದಾಹರಣೆಯಿಂದ ಕಂಡುಬರುತ್ತದೆ:

'ಕನ್ನಡಮ್ಮನ ಗುಡಿಯಲ್ಲಿ' ಅನಕೃರ ಈ ಕಾದಂಬರಿ ಪ್ರಕಟವಾದದ್ದು ೧೯೫೪ರಲ್ಲಿ. ಇದರ ಮುಖ್ಯ ಪಾತ್ರ ಮೂರ್ತಿ. ಖಳನಾಯಕ ಹನುಗುಂದ ಈಶ್ವರರಾಯ. ಮೂರ್ತಿಯದು ಉದಾತ್ತ ವ್ಯಕ್ತಿತ್ವ. ಈ ಕಾದಂಬರಿಯ ಬಗ್ಗೆ ಪ್ರಜಾವಾಣಿಯ ಸಾಪ್ತಾಹಿಕ ಪುರವಣಿಯಲ್ಲಿ ನಿರಂಜನರ ವಿಮರ್ಶೆ ಪ್ರಕಟಗೊಂಡಿತ್ತು. ಅದರಲ್ಲಿನ ಒಂದು ವಾಕ್ಯ ನಿರಂಜನ-ಅನಕೃ ನಡುವೆ ಇದ್ದ ಭಿನ್ನಮತವನ್ನು ತಿಳಿಸುತ್ತದೆ, "ಹನಗುಂದ ಈಶ್ವರರಾಯ ಅಷ್ಟೊಂದು ಕೆಟ್ಟವನೆನ್ನುವುದಕ್ಕೆ ಅವನೇನಾದರೂ ಮೂರ್ತಿಯ ಹೆಂಡತಿಯನ್ನು ಹೊತ್ತುಕೊಂಡು ಹೋಗಿದ್ದನೇ?[೨೧]

ಚದುರಂಗರ 'ಹೆಜ್ಜಾಲ' ಕಾದಂಬರಿ ಕುರಿತು ವಿಮರ್ಶಿಸುವ ಜಿ. ಪ್ರಶಾಂತ ನಾಯಕರು,

೧. ಹೆಜ್ಜಾಲ ಗ್ರಾಮೀಣ ಬದುಕಿನ ಕಲೆ. ಅಸ್ತಿತ್ವಕ್ಕೆ ಹೋರಾಡುತ್ತಲೇ ಒಂದು ನೆಲೆಯನ್ನು ಕಂಡುಕೊಳ್ಳಲಾಗದೆ ತನ್ನದೆನ್ನುವ ಎಲ್ಲವನ್ನೂ ಕಳೆದುಕೊಳ್ಳುವ 'ಕಾಲೂರ'ನ ಕತೆ. ಕಲೂರ ಇಲ್ಲಿ ಕೇಂದ್ರ. ಅವನಿಂದ ಅವನಿಗಾಗಿ ಅವನೇ ಕಾದಂಬರಿಯಾಗಿದ್ದಾನೆ.

೨. ಕಾದಂಬರಿಯಲ್ಲಿ ಘಟನೆಗಳು, ಪಾತ್ರ, ಸಾಮ್ಯಗಳು ಪುನರಾವರ್ತನೆ ಆಗುವುದರಿಂದ ಕಾದಂಬರಿಗೆ ಸಂಕೀರ್ಣತೆ ಒದಗಿದೆ ಎನ್ನಬಹುದು. ಒಬ್ಬ ಜೀತದಾಳಿನ ಶೋಷಣೆ, ಆತನ ಬದುಕಿನ ಮರೀಚಿಕೆ, ಆತ ಬಲ್ಲಿದನೊಂದಿಗೆ ಮುಖಾಮುಖಿಯಾಗಲಾರದ ಅಸಹಯಕತೆ, ಆ ನಡುವೆಯೂ ಬದುಕಲು ಬಯಸುವ ವೈಯಕ್ತಿಕ ತುಡಿತಗಳು ಕಾದಂಬರಿಯೊಳಗೆ ಪುಷ್ಟಿಯಾಗಿ ಚಿತ್ರಣಗೊಂಡಿವೆ. ಗ್ರಾಮೀಣ ಪರಿಸರದ ಅವನತಿಗೆ ಅಥವ ಅಧೋಗತಿಗೆ ಕಾರಣ ಗುರುತಿಸುವ ಸೂಕ್ಷ್ಮ ಪ್ರಯತ್ನವಿದು.

೩. ಚದುರಂಗರೇ ಹೇಳುವಂತೆ 'ನಾನು ಮರೆತೇಬಿಟ್ಟೆನೆಂದು ಭಾವಿಸಿದ್ದ ನನ್ನೊಳಗಿನ ಅನುಭವ ವಿಶೇಷಗಳು ಇದೀಗ ಹೊರಬಂದು ಈ ಕೃತಿಯನ್ನು ನಿರೂಪಿಸಿವೆ'. ಈ ಹಿನ್ನೆಲೆಯಲ್ಲಿ ಕಾದಂಬರಿಗೆ ಯಶಸ್ಸು ಸಿಕ್ಕಿದೆ ಎಂದಿದ್ದಾರೆ.[೨೨]

ಚದುರಂಗರ ಬಿಂಬ ನಾಟಕವನ್ನು ವಿಶ್ಲೇಷಿಸುವ ಲೇಖಕಿ ಎನ್. ಗೀತಾ ಲೇಖನದ ಉದ್ದೇಶವನ್ನು ವಿಶದಪಡಿಸುತ್ತ "ಆಧುನಿಕ ಕಾಲದ ಸ್ತ್ರೀ ಸಂವೇದನೆ ಹಾಗು ಮಾನವ ವರ್ತನೆಯ ವೈಲಕ್ಷಣ್ಯಗಳ ಚಿತ್ರಣ ಬಿಂಬ ನಾಟಕದ ವಿಶಿಷ್ಟ ಭಿತ್ತಿಯಾಗಿದೆ. ಆದ್ದರಿಂದ ಮನೋವಿಶ್ಲೇಷಣೆಯ ಹಿನ್ನೆಲೆಯೊಂದಿಗೆ ಬಿಂಬ ನಾಟಕ ಕುರಿತ ಚರ್ಚೆ ಈ ಲೇಖನದ ಉದ್ದೇಶ" ಎಂದು ಬರೆದಿದ್ದಾರೆ.

ಬಿಂಬ ನಾಟಕ ಪುರಾಣ ಮತ್ತು ವರ್ತಮಾನ ಎರಡೂನೆಲೆಗಳಲ್ಲಿ ನಡೆಯುತ್ತದೆ. ಭೂತಕಾಲದ ರಾಮ ಸೀತೆ, ರಾವಣರ ಪಾತ್ರಗಳ ಪ್ರತಿನಿಧಿಗಳಂತೆ ವರ್ತಮಾನದ ರಾಮಯ್ಯ, ಸೀತಮ್ಮ, ಲಂಕಪ್ಪ ಇವರ ಕತೆಯೂ ಸೇರಿಕೊಂಡು ನಾಟಕದಲ್ಲಿ ಒಂದು ನಾಟಕ ಬಿಚ್ಚಿಕೊಳ್ಳುತ್ತ ಓದುಗರ ಕುತೂಹಲ ಕೆರಳಿಸುತ್ತದೆ. ಸುಲಲಿತ ನಿರೂಪಣೆಗಾಗಿ ಜಾನಪದ ಪರಿಕರಗಳನ್ನು ಚದುರಂಗರು ಬಳಸಿಕೊಂಡಿದ್ದಾರೆ. ಹಾಗಾಗಿ ಪೌರಾಣಿಕತೆ, ಆಧುನಿಕತೆ ಹಾಗು ಜಾನಪದ – ಈ ಮೂರೂ ನೆಲೆಗಟ್ಟಿನಲ್ಲಿ ನಾಟಕ ಸಾಗುತ್ತದೆ ಎಂಬುದನ್ನು ಗ್ರಹಿಸಿದ್ದಾರೆ.

ಲೇಖನದ ಕೊನೆಯಲ್ಲಿ "ಹೀಗೆ ಚದುರಂಗರು ಕಾವ್ಯ ಬದುಕು ನಿಸರ್ಗ ಮನೋವಿಜ್ಞಾನದ ಹೊಳಹುಗಳನ್ನು ಒಳಗೊಂಡಂತೆ ಜಾನಪದ ಅಂತಃಸತ್ವವುಳ್ಳ ದೇಶೀ ರಾಮಾಯಣಗಳಲ್ಲಿ ಬಿಂಬಿತವಾಗಿರುವ ಚಿತ್ರಪಟವನ್ನು ಬಳಸಿಕೊಂಡು ಪುರಾಣದ ಜೊತೆಗೆ ಆಧುನಿಕತೆಯನ್ನು ಬೆಸೆದು ವಿನೂತನವಾಗಿ ಈ ನಾಟಕವನ್ನು ನಿರೂಪಿಸಿದ್ದಾರೆ" ಎಂದಿದ್ದಾರೆ.[೨೩]

ಕನ್ನಡದ ಪ್ರಗತಿಶೀಲ ಸಾಹಿತಿಗಳು ಕನ್ನಡ ಸಾಹಿತ್ಯದ ಓದಿನ ಪರಿಧಿಯನ್ನು ವಿಸ್ತರಿಸಿದವರು. ಕತೆ ಕಾದಂಬರಿಗಳಿಗೆ ಅಪಾರ ಸಂಖ್ಯೆಯ ಓದುಗರನ್ನು ಸಿದ್ಧಗೊಳಿಸಿದ ಹಿರಿಮೆ ಪ್ರಗತಿಶೀಲರದು. ವೈಯಕ್ತಿಕ ಸಾಧನೆ, ಪ್ರಯತ್ನಗಳಿಂದಲೇ ಸಾಹಿತ್ಯಕ ಪತ್ರಿಕೆಗಳನ್ನು ಬೆಳೆಸಿದರು. ಹಾಗು ಪ್ರಗತಿಶೀಲ ಸಾಹಿತ್ಯದ ಪ್ರಾಮುಖ್ಯತೆ ಪತ್ರಿಕೆಗಳಿಂದಲೇ ಹೆಚ್ಚುತ್ತ ಹೋಯಿತೂ ಎಂಬುದೂ ಸುಳ್ಳಲ್ಲ. ಪ್ರಗತಿಶೀಲ ಸಾಹಿತ್ಯ ತನ್ನ ಮೂಲೋದ್ದೇಶದಿಂದ ದೂರಾಗುತ್ತಿದೆ ಎನಿಸಿದಾಗ ಪತ್ರಿಕೆಗಳು ತಮ್ಮ ಕಾಲಂಗಳಲ್ಲಿ ಈ ಬಗ್ಗೆ ದೊಡ್ಡ ಚರ್ಚೆಗಳನ್ನು ನಡೆಸಿರುವುದನ್ನು ಈ ಹಿಂದೆಯೇ ನೋಡಲಾಗಿದೆ.

ಅಡಿಟಿಪ್ಪಣಿಗಳು

೧. ಡಾ.ಜಿ.ಎಂ. ಹೆಗಡೆ: ಮಾಸ್ತಿಯವರ ವಿಮರ್ಶೆ – ಒಂದು ಅಧ್ಯಯನ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೧, ಪುಟ ೨೦೨
೨. ಶ್ರೀಧರ ರಾಯಸಂ: ಬರೆದು ಬದುಕಿದ ಕಾದಂಬರಿ ಸಾರ್ವಭೌಮ, ವಿಜಯ ಕರ್ನಾಟಕ, ಸಾಪ್ತಾಹಿಕ ವಿಜಯ, ೯–೦೫–೨೦೦೪
೩. ಅನಕೃ: ಸಾಹಿತ್ಯಶ್ರೇಣಿ, ಮುನ್ನುಡಿ, ಸಂಪುಟ ೧, ನಾಟಕ ಸಾಹಿತ್ಯ, ಕನ್ನಡ ಸಂಸ್ಕೃತಿ ಇಲಾಖೆ, ಪುಟ ೭
೪. ಪ್ರತಾಪ್ ಸಿಂಹ, ಬೆತ್ತಲೆ ಜಗತ್ತು, ವಿಜಯ ಕರ್ನಾಟಕ ೨೦–೧೨–೨೦೦೮
೫. ಮಾಸ್ತಿ ವೆಂಕಟೇಶ ಅಯ್ಯಂಗಾರ್: ಸಾಹಿತ್ಯ ಮತ್ತು ಪ್ರಗತಿ, ಪ್ರಸಂಗ ೧, ಪುಟ ೩೪
೬. ಮಾಸ್ತಿ ವೆಂಕಟೇಶ ಅಯ್ಯಂಗಾರ್: ನಮಗೆ ಬೇಕಾದ ಸಾಹಿತ್ಯ, ಪ್ರಸಂಗ ೧ ಪುಟ ೭೧
೭. ಅನಕೃ: ಕಥಾಂಜಲಿ, ಸಂಪುಟ ೧, ಜುಲೈ ೧೯೨೯
೮. ಕನ್ನಡ ವಿಶ್ವಕೋಶ, ಸಂಪುಟ ೩, ಪುಟ ೬೫೪
೯. ಅನಕೃ: ಬರಹಗಾರನ ಬದುಕು, ವಿಶ್ವಭಾರತಿ, ಮಡಗಾಂವ್, ೧೯೭೨, ಪುಟ ೬೫
೧೦. ಡಿ.ವಿ.ಕೆ.ಮೂರ್ತಿ: ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ವಿಕೃತಿ, ಜೀವನ ಮೌಲ್ಯ ಮತ್ತು ಸಾಹಿತ್ಯ, ಮೈಸೂರು ೧೯೯೫, ಪುಟ ೧೯
೧೧. ನಿರಂಜನ: ಬುದ್ಧಿ ಭಾವ ಬದುಕು, ಸ್ಪಂದನ ಪ್ರಕಾಶನ, ಬೆಂಗಳೂರು ೧೯೮೪, ಪುಟ ೭೬
೧೨. ಡಿ.ವಿ.ಕೆ.ಮೂರ್ತಿ: ಕನ್ನಡದಲ್ಲಿ ಪ್ರಗತಿಶೀಲ ಸಾಹಿತ್ಯದ ವಿಕೃತಿ, ಜೀವನ ಮೌಲ್ಯ ಮತ್ತು ಸಾಹಿತ್ಯ, ಮೈಸೂರು ೧೯೯೫, ಪುಟ ೧೯
೧೩. ವೀಸೀ: ಸಾಹಿತ್ಯಾವಲೋಕನ, ವಿಮರ್ಶೆ ಸಂಪುಟ ೪, ವೀಸೀ ಸಂಪದ ೨೦೦೩, ಪುಟ ೨೩೬
೧೪. ರಂ.ಶ್ರೀ.ಮುಗಳಿ: ಕನ್ನಡ ಕಾದಂಬರಿಗಳು, ಬೆಳ್ಳಿ ಸಂಚಿಕೆ, ಪ್ರಬುದ್ಧ ಕರ್ನಾಟಕ,೧೯೪೫
೧೫. ಭಗವಾನ್: ಸಂಕ್ರಮಣ, ಸಾಹಿತ್ಯ ಮತ್ತು ತತ್ವಜ್ಞಾನ, ಫೆಬ್ರವರಿ ಮಾರ್ಚಿ ೧೯೮೫
೧೬. ಸಿ.ಎನ್. ರಾಮಚಂದ್ರನ್: ವೈಶಾಖದ ಕೆಲವು ಒಳದನಿಗಳು, ರುಜುವಾತು, ಜುಲೈ ಸೆಪ್ಟೆಂಬರ್ ೧೯೮೫
೧೭. ಗೌರೀಶ ಕಾಯ್ಕಿಣಿ: ವೈಶಾಖ, ರುಜುವಾತು ೧೦, ೧೯೮೩
೧೮. ಯು.ಆರ್. ಅನಂತಮೂರ್ತಿ: ಚದುರಂಗರ ಸನ್ಮಾನಗ್ರಂಥ, ಸಂ: ಡಿ.ಎ. ಶಂಕರ
೧೯. ಭಗವಾನ್: ಸಂಕ್ರಮಣ, ಫೆಬ್ರವರಿ ಮಾರ್ಚ್ ೧೯೮೫
೨೦. ಜಿ.ಎಸ್. ಸಿದ್ಧಲಿಂಗಯ್ಯ: ನಿರಂಜನರ 'ಚಿರಸ್ಮರಣೆ' ಬಂಡಾಯದ ಅತ್ಯುತ್ತಮ ಪ್ರತಿನಿಧಿ, ಅನ್ವೇಷಣೆ, ಜುಲೈ ಆಗಸ್ಟ್ ೧೯೮೫
೨೧. ಅನಕೃ–ನಿರಂಜನ ಜಟಾಪಟಿ, ಬಿ.ವಿ. ವೈಕುಂಠರಾಜು, ಪ್ರಜಾಸಾಹಿತ್ಯ, ೧೩ನೆಯ ಸಂಚಿಕೆ
೨೨. ಡಾ.ಜಿ. ಪ್ರಶಾಂತ ನಾಯಕ್: ಸಂಕ್ರಮಣ ಜೂನ್ ೧೯೯೮
೨೩. ಎನ್.ಗೀತಾ: 'ಬಿಂಬ' ಒಂದು ವಿಶ್ಲೇಷಣೆ, ಹೊಸತು, ನವೆಂಬರ್ ೨೦೦೪

ಭಾಗ ೪

ನವ್ಯೋತ್ತರ ಘಟ್ಟ

೧. ದಲಿತ ಬಂಡಾಯ ಚಳವಳಿ ಹಾಗು ಪತ್ರಿಕೆಗಳು

೨. ಮಹಿಳಾ ಸಾಹಿತ್ಯ ಹಾಗುಪತ್ರಿಕೆಗಳು

೩. ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ ಹಾಗು ಅಂಕಣ ಬರಹ

೪. ಪತ್ರಿಕೆಗಳಲ್ಲಿ ನವ್ಯೋತ್ತರ ವಿಮರ್ಶೆ ವ್ಯಕ್ತಗೊಂಡಂತೆ

೧.ದಲಿತ ಬಂಡಾಯ ಚಳವಳಿ ಹಾಗು ಪತ್ರಿಕೆಗಳು

ಹೊಸಗನ್ನಡ ಸಾಹಿತ್ಯದ ಬೆಳವಣಿಗೆಯ ಸಂದರ್ಭದಲ್ಲಿ ದಲಿತ-ಬಂಡಾಯ ಸಾಹಿತ್ಯ ಚಳವಳಿ ಅತ್ಯಂತ ಮಹತ್ವದ ಘಟ್ಟವಾಗಿದೆ. ಇದನ್ನು ನವ್ಯೋತ್ತರ ಸಾಹಿತ್ಯ ಚಳವಳಿ ಎಂದೂ ಕರೆಯಬಹುದು. ೧೯೭೦ರ ನಂತರದ ದಿನಗಳಲ್ಲಿ ಇದರ ಪ್ರಗತಿಯನ್ನು ಕಾಣಬಹುದು. ಇದು ಸಾಮಾಜಿಕ, ಸಾಂಸ್ಕೃತಿಕ ಆಯಾಮವನ್ನೂ ಹೊಂದಿರುವ ಕಾರಣ ಇತರ ಎಲ್ಲ ಸಾಹಿತ್ಯ ಚಳವಳಿಗಳಿಗಿಂತ ಭಿನ್ನವಾದ ಚಳವಳಿಯಾಗಿದೆ. ಸಾಹಿತ್ಯಿಕ ಸಂದರ್ಭದಲ್ಲಿ ಇದು ಹಿಂದಿದ್ದ ನವ್ಯ ಚಳವಳಿಯ ಬಗ್ಗೆ ಅಸಮಾಧಾನ, ಅತೃಪ್ತಿಗಳನ್ನು ವ್ಯಕ್ತಪಡಿಸಿದೆ.

೭೦ರ ದಶಕದ ಈ ಚಳವಳಿಗೆ ಮುಖ್ಯವಾಗಿ ಎಡಪಂಥೀಯ ಆಲೋಚನೆಗಳು ಹೆಚ್ಚು ಪ್ರಭಾವವನ್ನು ಬೀರಿದೆ. 'ದಲಿತ-ಬಂಡಾಯ' ಎಂಬ ಪರಿಭಾಷೆಯ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಬರಗೂರು ರಾಮಚಂದ್ರಪ್ಪನವರು ಇದು ಸಾಮೂಹಿಕ ಆಶಯವನ್ನು ಹೊಂದಿದ ಚಳವಳಿಯಾಗಿದೆಯೇ ವಿನಃ ಜಾತಿಯಾಧಾರಿತವಾದುದಲ್ಲ. ಆದ್ದರಿಂದ ಹುಟ್ಟಿನಿಂದ ದಲಿತನಾಗಿದ್ದು ಪ್ರತಿಗಾಮಿ ಆಶಯಗಳನ್ನು ಹೊಂದಿದ ಸಾಹಿತಿ ಈ ಚಳವಳಿಯ ಪರಿಧಿಗೆ ಸೇರುವುದಿಲ್ಲ. ಇದನ್ನು ಸ್ಪಷ್ಟಪಡಿಸುವುದಾದರೆ, ಪ್ರತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು. ಆದರೆ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಲ್ಲ.[೧]

ದಲಿತ ಸಾಹಿತ್ಯ ಬಂಡಾಯದ ಒಂದು ಭಾಗವಾಗಿ ಕಾಣಿಸಿಕೊಂಡಿದ್ದರೂ ತನ್ನ ಪ್ರತ್ಯೇಕ ಅಸ್ತಿತ್ವಕ್ಕಾಗಿ ಒಳಹೋರಾಟ ನಡೆಸುತ್ತಾ ಬಂದಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ. ಏಕೆಂದರೆ ಪ್ರಾರಂಭದಲ್ಲಿ ಬಂಡಾಯದೊಂದಿಗೆ ಗುರುತಿಸಿಕೊಂಡಿದ್ದ ಈ ಚಳವಳಿ ೧೧ನೇ ಡಿಸೆಂಬರ್, ೧೯೮೩ರಲ್ಲಿ ೨೧ನೇ ಡಿಸೆಂಬರ್, ೧೯೮೬ರಲ್ಲಿ ದಲಿತ ಲೇಖಕರ, ಕಲಾವಿದರ ಹೆಸರಡಿ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿ 'ಬಂಡಾಯ ಸಾಹಿತ್ಯ ಸತ್ತುಹೋಗಿದೆ' ಎಂಬ ಘೋಷಣೆ ಮಾಡಿತು.[೨] ಈ ಎಲ್ಲ ಅಂಶಗಳನ್ನು ಗಮನಿಸಿದರೆ ಬಂಡಾಯ ಹಾಗು ದಲಿತ ಸಾಹಿತ್ಯ ಚಳವಳಿಗಳಿಗೆ ಮೂಲಭೂತವಾಗಿ ಕೆಲವು ಸಾಮಾನ್ಯ ಆಶಯಗಳಿದ್ದರೂ ಮುಂದೆ ಅವು ಭಿನ್ನ ನೆಲೆಗಳತ್ತ ಸರಿದುದನ್ನು ಗಮನಿಸಬಹುದು.

ಡಾ.ಜಿ.ಎಸ್. ಶಿವರುದ್ರಪ್ಪನವರು

"ಬಂಡಾಯ ಎಂಬುದು ಒಂದು ಮನೋಧರ್ಮ, ಯಥಾಸ್ಥಿತಿಯನ್ನು ಕಂಡು ಕಸಿವಿಸಿಗೊಳ್ಳುವ ಸಾಮಾಜಿಕ ಅಸಮಾನತೆಗಳನ್ನು ಕಂಡು ಪ್ರಶ್ನಿಸುವ, ಆತ್ಮ ಪ್ರತ್ಯಯ

ಮೂಲವಾದ ವ್ಯಕ್ತಿತ್ವವಾಗಿ ದನಿಯೆತ್ತುವ ಒಂದು ಮನೋಧರ್ಮ. ಈ ಮನೋಧರ್ಮ ಇಲ್ಲದವನು ನಿಜವಾದ ಕವಿಯಾಗಲಾರ, ಕ್ರಾಂತಿಕಾರಿಯಾಗಲಾರ. ಆದರೆ ಈ ಮನೋಧರ್ಮ ಮಾನವ ಚರಿತ್ರೆಯಲ್ಲಿ ಕ್ರಮೇಣ ಮೈ ಪಡೆದುಕೊಳ್ಳುತ್ತ ಗಟ್ಟಿಗೊಳ್ಳುತ್ತ ಒಂದು ಮೌಲ್ಯವಾಗಿ ಪ್ರಕರ್ಷಾವಸ್ಥೆ ತಲುಪಿದ್ದು ಇತ್ತೀಚೆಗೆ. ಅಂದರೆ ಸಮಾಜದ ಅಲಕ್ಷಿತ ಅನಕ್ಷರಸ್ಥ ಸ್ತರಗಳು ಆತ್ಮ ಪ್ರತ್ಯಯವನ್ನೂ ಪ್ರತಿಭಟನೆಯ ದನಿಯನ್ನೂ ಪಡೆದುಕೊಂಡ ಕಾಲಕ್ಕೆ, ಈ ಅರ್ಥದಲ್ಲಿ ಬಂಡಾಯ ಸಾಹಿತ್ಯ ಎಂಬುದು ಒಂದು ಅನಿವಾರ್ಯ ಚಾರಿತ್ರಿಕ ಸಂಘಟನೆ"

ಎನ್ನುತ್ತಾರೆ.[೩]

ಬಂಡಾಯ ಸಾಹಿತ್ಯ 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎಂಬ ತಾತ್ವಿಕ ನಿಲುವನ್ನು ಪ್ರಕಟಿಸಿತು. ಜಾತಿಪದ್ಧತಿ, ಅಸ್ಪೃಶ್ಯತೆ, ಲೈಂಗಿಕ ತಾರತಮ್ಯಗಳ ವಿರುದ್ಧ ದೊಡ್ಡ ದನಿಯನ್ನೇ ಎತ್ತಿತು. ಕೇವಲ ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನಷ್ಟೇ ಅಲ್ಲದೆ ಭಾವನಾತ್ಮಕ ನೆಲೆಯಲ್ಲೂ ಈ ಚಳವಳಿ ವಿರೋಧಿಸಿರುವುದು ಕಂಡು ಬರುತ್ತದೆ. ನವ್ಯ, ನವೋದಯದವರ ಹಾಗೆ ಇದು 'ಕಲಾತ್ಮಕತೆ'ಗೆ ಹೆಚ್ಚು ಒತ್ತು ನೀಡಲಿಲ್ಲ. ಬದಲಾಗಿ ಕೃತಿಯ ವಸ್ತು, ಧೋರಣೆಗಳು ಅವರಿಗೆ ಮುಖ್ಯ ಎನಿಸಿದವು. ಬಾಯಿ ಇಲ್ಲದವರ ಬಾಯಿ ಬಂಡಾಯ ಸಾಹಿತ್ಯ. ಅಂದರೆ ಜನಪರ ಧೋರಣೆಯೇ ಬಂಡಾಯದ ಪ್ರಮುಖ ಆಶಯ. ಇಂತಹುದೇ ಜನಪರ ಧೋರಣೆಗಳು ಪ್ರಗತಿಶೀಲ ಸಾಹಿತ್ಯದ ಪ್ರಮುಖ ಕಾಳಜಿಗಳಾಗಿದ್ದವು.[೪]

ಸಾಮಾನ್ಯವಾಗಿ ಬಂಡಾಯ ಹಾಗು ದಲಿತ ಸಾಹಿತ್ಯವನ್ನು ಒಂದೇ ನೆಲೆಯಲ್ಲಿ ಅರ್ಥೈಸುವ ಪ್ರವೃತ್ತಿ ಇದೆ. ಆದರೆ ಬಂಡಾಯ ಚಳುವಳಿ ಕಾಣಿಸಿಕೊಂಡ ನಾಲ್ಕು ವರ್ಷಗಳನಂತರ ಬಂಡಾಯದಿಂದ ಸಿಡಿದು ಹೊರಗೆ ಬಂದ ದಲಿತ ಲೇಖಕರು, ಕಲಾವಿದರು ೧೦, ೧೧ನೆ ಡಿಸೆಂಬರ್, ೧೯೮೨ರಂದು ಧಾರವಾಡದಲ್ಲಿ ದಲಿತ ಲೇಖಕರ ಕಲಾವಿದರ ಬಳಗದ ಅಸ್ತಿತ್ವಕ್ಕೆ ಮೂಲಪ್ರೇರಣೆಯಾದರು. ದಲಿತರು ದಲಿತೇತರರು ದಲಿತ ಪ್ರಜ್ಞೆಯನ್ನು ಹೊಂದಿ ದಲಿತರನ್ನು ಕುರಿತು ರಚಿಸಿದ ಸಾಹಿತ್ಯವೆಲ್ಲ ದಲಿತ ಸಾಹಿತ್ಯವಾಗಿದೆ. ಇದು ದಲಿತೀಯ, ದಲಿತೇಯ ಹಾಗು ಆಂಶಿಕ ದಲಿತ ಸಾಹಿತ್ಯವನ್ನು ಒಳಗೊಂಡಿರುತ್ತದೆ ಎಂದು ಅರವಿಂದ ಮಾಲಗತ್ತಿಯವರು ಅಭಿಪ್ರಾಯ ಪಡುತ್ತಾರೆ. ಸಿ.ವೀರಣ್ಣನವರು ಎಲ್ಲ ಜಾತಿಗಳಲ್ಲಿಯೂ ತುಳಿತಕ್ಕೆ ಒಳಗಾಗಿರುವವರನ್ನು ದಲಿತರೆಂದು ಕರೆದು ದಲಿತ ಪದದ ವ್ಯಾಪ್ತಿಯನ್ನು ವಿಸ್ತರಿಸುವುದಕ್ಕಿಂತ ಈಗ ಅದು ಹುಟ್ಟಿ ಬೆಳೆದಿರುವ ಹಿನ್ನೆಲೆಯಲ್ಲಿ ಅದನ್ನು ಅಸ್ಪೃಶ್ಯ ಜನಾಂಗಕ್ಕೆ ಸೀಮಿತಗೊಳಿಸುವುದು ಚಾರಿತ್ರಿಕ ಅಧ್ಯಯನದ ದೃಷ್ಟಿಯಿಂದ ಸೂಕ್ತ ಎನಿಸುತ್ತದೆ ಎಂದಿದ್ದಾರೆ. ಇದನ್ನೇ ಈ ತನಕ ಕನ್ನಡದ ಚಿಂತಕರೂ, ವಿಮರ್ಶಕರೂ ಒಪ್ಪಿಕೊಂಡು ಬಂದಿದ್ದಾರೆ.

ಯಾವುದೇ ಸಾಹಿತ್ಯ ಚಳುವಳಿಯನ್ನು ಅನ್ಯ ನೆಲದಿಂದೆತ್ತಿ ನಮ್ಮ ಅಂಗಳದಲ್ಲಿ ಬಿತ್ತಿ ಬೆಳೆಸಲು ಕಷ್ಟವಾಗುತ್ತದೆ. ಬರೀ ಅನುಕರಣೆ, ಅನುಸರಿಸುವಿಕೆಗಳು ಯಾಂತ್ರಿಕವಾಗಿ ನಡೆಯದು, ಅದಕ್ಕೆ ನಮ್ಮ ನೆಲದ ಮಣ್ಣು ಆ ಸತ್ವವನ್ನು ಸ್ವೀಕರಿಸಲು ಸಿದ್ಧವಾಗಿರಬೇಕು. ಪುರುಷೋತ್ತಮ ಬಿಳಿಮಲೆಯವರು ' ಈ ಅರ್ಥದಲ್ಲಿ ಸಾಹಿತ್ಯದ ಆಂತರಿಕ ವಲಯಕ್ಕೂ, ಸಾಮಾಜಿಕ ಬಹಿರ್‌ಪ್ರಪಂಚಕ್ಕೂ ಒಂದು ವಿಧದ ಸಂಬಂಧ ಏರ್ಪಟ್ಟಿರುತ್ತದೆ' ಎಂದು ಗುರುತಿಸುತ್ತಾರೆ.[೫] ಇದನ್ನು ಸಾಹಿತ್ಯ, ಸಾಹಿತ್ಯೇತರ ಪ್ರೇರಣೆಗಳು ಎಂದು ಗುರುತಿಸುತ್ತಾರೆ.

ಸಾಹಿತ್ಯೇತರ ಪ್ರೇರಣೆಗಳು: ಬಂಡಾಯ-ದಲಿತ ಸಾಹಿತ್ಯದ ಆಲೋಚನೆಗಳಿಗೆ ಒಂದು ತಾತ್ವಿಕ ನೆಲೆಯನ್ನು ಒದಗಿಸಿ ಕೊಟ್ಟಿದ್ದೇ ವಾಮಪಂಥೀಯ ಚಿಂತನೆಗಳು, ಇದರ ಜೊತೆಗೆ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ ಹಾಗು ಲೋಹಿಯಾವಾದಗಳು ಮತ್ತು ಅನೇಕ ಚಳುವಳಿಗಳು ಸಾಕಷ್ಟು ಪ್ರೇರಣೆ ಒದಗಿಸಿವೆ. ಇತರ ಚಳುವಳಿಗಳ ಪಟ್ಟಿಯಲ್ಲಿ ಬಿ.ಬಸವಲಿಂಗಪ್ಪನವರ 'ಬೂಸಾ ಚಳುವಳಿ', ತುರ್ತುಪರಿಸ್ಥಿತಿಯ ಹೇರಿಕೆ, ಜಾತಿವಿನಾಶ ಸಮ್ಮೇಳನ, 'ಶೂದ್ರ' ಪತ್ರಿಕೆ ಏರ್ಪಡಿಸಿದ 'ವಿಚಾರ ವೇದಿಕೆ'ಯ ಹೋರಾಟಗಳು, ದಲಿತ ಸಂಘರ್ಷ ಸಮಿತಿ (ದಸಂಸ) ಚಳುವಳಿ, ೧೯೭೫ರ ಅಂತರರಾಷ್ಟ್ರೀಯ ಮಹಿಳಾ ವರ್ಷದ ಕಾರ್ಯಕ್ರಮಗಳ ಫಲವಾಗಿ ಮಹಿಳಾ ಲೇಖಕಿಯರಲ್ಲಿ ಮೂಡಿದ ಹೊಸ ಎಚ್ಚರ, ಬಂಡಾಯ ಚಳುವಳಿ - ಇವೆಲ್ಲ ಕನ್ನಡ ಕಾವ್ಯಕ್ಕೆ ಹೊಸ ತಿರುವನ್ನು ಕೊಡಲು ಯಶಸ್ವಿಯಾದವು. ದಲಿತ-ಬಂಡಾಯ ಚಳುವಳಿ ಕಾವ್ಯ ಕ್ಷೇತ್ರಕ್ಕಷ್ಟೇ ಮೀಸಲಾಗದೆ ಕತೆ, ಕಾದಂಬರಿ, ನಾಟಕ, ಮಹಾಕಾವ್ಯ, ವಿಮರ್ಶೆ ಹೀಗೆ ಅನೇಕ ಪ್ರಕಾರಗಳಲ್ಲಿ ಹರಿದಿರುವುದು ಕಂಡುಬರುತ್ತದೆ.

ಯಾವುದೇ ಸಾಹಿತ್ಯ ಚಳುವಳಿಯಲ್ಲಿ ಪ್ರಸಾರ ಮಾಧ್ಯಮಗಳ ಪಾತ್ರ ಅತ್ಯಂತ ಹಿರಿದು. ಬಂಡಾಯ-ದಲಿತ ಚಳುವಳಿಗಳ ಸಂದರ್ಭದಲ್ಲಿ ಎಡಪಂಥೀಯ ಕಿರುಪತ್ರಿಕೆಗಳು, ಅದರಲ್ಲೂ ಮುಖ್ಯವಾಗಿ ಸಾಹಿತ್ಯಿಕ ಪತ್ರಿಕೆಗಳು ಹೊಸ ಎಚ್ಚರ ಹುಟ್ಟಿಸುವತ್ತ ಶ್ರಮಿಸಿದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ

ಚಂಪಾರ 'ಸಂಕ್ರಮಣ'
ಶೂದ್ರ ಶ್ರೀನಿವಾಸರ 'ಶೂದ್ರ'
ಆರ್‌ಜಿ ಹಳ್ಳಿ ನಾಗರಾಜರ 'ಅನ್ವೇಷಣೆ'
ರಘುರಾಮ ಶೆಟ್ಟಿಯವರ 'ಮುಂಗಾರು'
ಎ.ಎಸ್.ಮೂರ್ತಿಯವರ 'ಬೀದಿ'

ಇವುಗಳ ಜೊತೆಗೆ ಲಂಕೇಶ್ ಪತ್ರಿಕೆ, ಪಂಚಮ, ಹೊಸದಿಕ್ಕು, ಮೊದಲಾದ ಪತ್ರಿಕೆಗಳು ಈ ಚಳುವಳಿಯ ಸತ್ವವನ್ನು ಜೀವಂತವಾಗಿ ಇಡುವಲ್ಲಿ ಶ್ರಮವಹಿಸಿವೆ. ಒಟ್ಟಾರೆ ಈ ಚಳುವಳಿ ನಮ್ಮ ಕಾವ್ಯದ ಮೇಲೆ ವೈಚಾರಿಕ ಎಚ್ಚರ ಹಾಗು ಜಾಗೃತಿ ಮೂಡಿಸಿತು. ಮುಖ್ಯವಾಗಿ ದಲಿತರಲ್ಲಿ ಒಂದು ಸಂಘಟನಾ ಮನೋಭಾವ ಬೆಳೆಸುವಲ್ಲಿ ಸಹಕಾರಿಯಾಯಿತು. ದಲಿತ ಕಾವ್ಯ ತನ್ನ ಆವೇಶ ಆಕ್ರೋಶಗಳ ಪರಿಧಿಯನ್ನು ದಾಟಿ ಕಲಾತ್ಮಕತೆಯತ್ತ ಸೂಕ್ಷ್ಮವಂತಿಕೆಯ ಕಡೆಗೆ ಸಾಗುತ್ತಿರುವ ಸ್ಪಷ್ಟ ಕುರುಹುಗಳನ್ನು ಕಾಣಬಹುದು. ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಸಂಕಲನದಲ್ಲಿ ದಲಿತರ ನೋವು, ಸಿಟ್ಟು, ಆಕ್ರೋಶಗಳನ್ನು ಈ ಕೆಳಕಂಡ ಮಾತುಗಳಲ್ಲಿ ಹೇಳುವ ಮೂಲಕ ಸಮಾಜದಲ್ಲಿನ ಅಸಮಾನತೆ ದ್ವಂದ್ವನೀತಿಗಳನ್ನು ಗುರುತಿಸಿ ಅದನ್ನು ಪ್ರತಿಭಟಿಸುವ ಸಾಂಸ್ಕೃತಿಕ ಎಚ್ಚರ ಪ್ರಕಟವಾಯಿತು,

'ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮಎಬ್ರಲಾ
ದೇವ್ರ್ ಒಬ್ನೇ ಅಂತಾರೆ
ಒಣಗೊಂದೊಂದ್ ತರಾ ಗುಡಿ ಕಟ್ಟವ್ರೆ

ಈ ಮಾದರಿಯಲ್ಲಿ ಪ್ರಾರಂಭವಾಗುವ ಅವರ ಕಾವ್ಯ ಕ್ರಮೇಣ ಶಾಂತ, ಆವೇಶರಹಿತ ಸ್ಥಿತಿಗೆ ಬಂದಿರುವುದನ್ನು ಅವರ 'ಸಾವಿರಾರು ನದಿಗಳು' ಸಂಕಲನದಲ್ಲಿ ಕಾಣಬಹುದು

ಗುಡಿಸಿಲಿನಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ"[೬]

ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಎಲ್.ಹನುಮಂತಯ್ಯ, ಎಂ.ಚೆನ್ನಣ್ಣ ವಾಲಿಕಾರ, ರಂಜಾನ್ ದರ್ಗಾ, ಅರವಿಂದ ಮಾಲಗತ್ತಿ, ಮೊಗಳ್ಳಿ ಗಣೇಶ್ ಇವೇ ಮೊದಲಾದವು ದಲಿತ ಚಳವಳಿಯ ಪ್ರಮುಖ ಹೆಸರುಗಳು.[೭] ಬಂಡಾಯ ಚಳುವಳಿಯಲ್ಲಿ ಪ್ರಮುಖ ದನಿಗಳೆಂದರೆ ಬರಗೂರು ರಾಮಚಂದ್ರಪ್ಪ, ಚಂಪಾ, ಕಾಳೇಗೌಡ ನಾಗವಾರ, ಎಚ್.ಎಸ್.ಶಿವಪ್ರಕಾಶ್, ಸಿಜಿಕೆ, ವಿಷ್ಣು ನಾಯಕ, ಆರ್ಕೆ ಮಣಿಪಾಲ, ಟಿ.ಎನ್.ಸೀತಾರಾಮ್. ಇವರು ಕಾವ್ಯ ಕ್ಷೇತ್ರಕ್ಕಷ್ಟೇ ಅಲ್ಲದೆ ನಾಟಕ ಹಾಗು ವಿಮರ್ಶಾ ಕ್ಷೇತ್ರಗಳಲ್ಲೂ ದುಡಿದವರು. ಇದಲ್ಲದೆ ನವ್ಯೋತ್ತರದಲ್ಲಿ ಬೇರೆ ಸಾಹಿತ್ಯ ಪ್ರಕಾರಗಳಲ್ಲ ಸಾಹಿತ್ಯ ರಚನೆ ಮಾಡಿದ ತೇಜಸ್ವಿ, ಬೆಸಗರಹಳ್ಳಿ ರಾಮಣ್ಣ, ಮೊಗಳ್ಳಿ ಗಣೇಶ್, ಅಮರೇಶ್ ನುಗಡೋಣಿ, ಬೊಳುವಾರು ಮಹಮ್ಮದ್ ಕುಂಞ್, ಕುಂವೀ ಇವರ ಕೊಡುಗೆಗಳನ್ನು ಮರೆಯುವಂತಿಲ್ಲ. ಇವರು ದಲಿತ–ಬಂಡಾಯ ಸಂವೇದನೆಯ ಪ್ರತಿನಿಧಿಗಳಾಗಿದ್ದಾರೆ. ಬಂಡಾಯ ಚಳವಳಿಯ ಒಂದು ಎಚ್ಚೆತ್ತ ಭಾಗವಾಗಿ ಮಹಿಳಾ ಲೇಖಕಿಯರು ಹಾಗು ಮುಸ್ಲಿಂ ಲೇಖಕರು ಕಾಣಿಸಿಕೊಂಡಿರುವುದನ್ನು ಇತ್ತೀಚಿನ ವರ್ಷಗಳಲ್ಲಿ ಕಾಣಬಹುದಾಗಿದೆ. ಸ್ತ್ರೀ ಸಂವೇದನೆ ಹಾಗು ಮುಸ್ಲಿಂ ಸಂವೇದನೆಗಳು ದಲಿತ–ಬಂಡಾಯದ ಮುಖ್ಯ ಕವಲುಗಳಾಗಿವೆ. ಅದನ್ನು ಕುರಿತು ಮುಂದಿನ ಭಾಗಗಳಲ್ಲಿ ಚರ್ಚಿಸಲಾಗುವುದು.

ಬಂಡಾಯ ಸಾಹಿತ್ಯ ಸಂಘಟನೆ ದಲಿತರಲ್ಲಿ ಉಂಟು ಮಾಡಿರುವ ಚಲನೆಯನ್ನು ಕುರಿತು ದೇವನೂರ ಮಹಾದೇವ ಅವರು ಹೀಗೆನ್ನುತ್ತಾರೆ:

> "ನಾನು ಕತ್ತಲ ರಾಜ್ಯದಿಂದ ಬಂದಂಥವನು. ಕಲಾ ಮಾಧ್ಯಮದಲ್ಲಿ ನಾನು ಕಂಡುಕೊಳ್ಳುತ್ತಿರುವುದು ಒಂದು ಆಕಸ್ಮಿಕವೇ. ನಾನು ಇದುವರೆಗೆ ಬರೆದಿರುವುದು ನಮ್ಮ ರಾಜ್ಯದ ಮನುಷ್ಯನ ಆರೇಳು ಬೆರಳುಗಳು ಹೆಚ್ಚೆಂದರೆ ಒಂದು ಹಸ್ತ ಇದ್ದೀತು. ಅದಕ್ಕೇ ಕನ್ನಡ ಸಾಹಿತ್ಯದ ಗತಿಯನ್ನು ಅಲ್ಲಾಡಿಸುವಲ್ಲಿ ತನ್ನ ಪ್ರಮಾಣಕ್ಕಿಂತ ಹೆಚ್ಚಾಗಿ ಅಲ್ಲಾಡಿಸಿದೆ. ಒಂದೆರಡೆ ಬೆರಳು, ಹಸ್ತಕ್ಕೆ ಇಷ್ಟಾಗುವುದಾದರೆ ಕತ್ತಲ ರಾಜ್ಯದ ಇಡೀ ಮನುಷ್ಯ ನನ್ನ ಕಲ್ಪನೆಗೆ ಎಟುಕದಷ್ಟಾಗಬಹುದು. ಆ ಬದಲಾವಣೆಗಾಗಿ, ಈ ಮನುಷ್ಯನ ನಡೆಗೆ ನುಡಿ ಕೊಡಲು ನೂರಾರು ಜನರು ಹುಟ್ಟಬೇಕಾದೀತು. ಒಂದು ಆಂದೋಲನ ಇದನ್ನು ಕಾಣಿಸಬಹುದೇನೋ"[೨]

ಬಂಡಾಯವೆಂದರೇನು? ಕ್ವಾರಲಿಂಗ್, ರಿವೋಲ್ಟ್ ಎಂಬುದು ಕೋಶಾರ್ಥ. ಇದು ಸಂಸ್ಕೃತದ 'ಭಣ್ಣ' ಮೂಲದಿಂದ ಬಂದಿದೆ. ಮೂಲಾರ್ಥ ಯುದ್ಧ ಎಂದು. ಬಂಡಾಯವೆಂದರೆ ಕನ್ನಡದಲ್ಲಿ ಪ್ರಧಾನಾರ್ಥ 'ರಿವೋಲ್ಟ್' ಎಂಬುದೇ ಆಗಿದೆ. ಇಬ್ಬರು ಸ್ವತಂತ್ರ ರಾಜರು ಯುದ್ಧ ಮಾಡುವುದನ್ನು ಬಂಡಾಯ ಎಂದು ಕರೆದಿಲ್ಲ, ಒಂದು ರಾಜ್ಯದಲ್ಲಿ, ರಾಜನ ಕೆಳಗಿನವರಲ್ಲಿ ಯಾರಾದರೂ ರಾಜನ ವಿರುದ್ಧ ಹೋರಾಡಲು ಹವಣಿಸಿದರೆ ಅದನ್ನು ಬಂಡಾಯ ಎನ್ನುವುದು ಸಹಜವಾಗಿದೆ. ಅಂದರೆ ಯಾವುದೇ ಒಂದು ವ್ಯವಸ್ಥೆಗೆ ಸೇರಿದ ವ್ಯಕ್ತಿ ಅಥವ ಗುಂಪು ಆ ವ್ಯವಸ್ಥೆಯ ವಿರುದ್ಧವೇ ಯಾವುದೇ ಕಾರಣಕ್ಕೆ, ಯಾವುದೇ ರೀತಿಯಲ್ಲಿ ಯುದ್ಧ ಸಾರುವುದನ್ನು 'ಬಂಡಾಯ' ಎನ್ನಬಹುದು. ನಮ್ಮ ಇವತ್ತಿನ ಅರ್ಥವೂ ಅದೇ.[೮]

ಬಂಡಾಯ 'ಬಂಡು' ಪದದಿಂದ ಬಂದಿದೆ. ಬಂಡು ಎಂದರೆ ಹೀನ, ಅಶ್ಲೀಲ, ನಾಚಿಕೆ ಇಲ್ಲದ್ದು ಎಂದರ್ಥ ಆದ್ದರಿಂದಲೇ ಬಂಡ, ಬಂಡತನ, ಬಂಡುಬೀಳು ಇತ್ಯಾದಿ ಪದಗಳು ಬಳಕೆಯಲ್ಲಿವೆ. ಇನ್ನು ಬಂಡಾಯ ಎನ್ನುವ ಪದವನ್ನು ವ್ಯವಸ್ಥೆಯ ವಿರುದ್ಧ ಸಿಟ್ಟಿಗೆದ್ದು ಸಿಡಿದು ನಿಂತ ಪ್ರತಿಭಟನೆ, ಹೋರಾಟ,

ಕ್ರಾಂತಿ ಎನ್ನುವ ಅರ್ಥದಲ್ಲಿ ಉಪಯೋಗಿಸುತ್ತಿದ್ದೇವೆ. ಆದ್ದರಿಂದ ಬಂಡಾಯ ನಮಗೆ ಹೊಸ ಪದ. ಹೊಸ ಅರ್ಥವನ್ನು ನಾವು ಈಗೀಗ ಕಲ್ಪಿಸಿಕೊಂಡ ಹೊಸ ನಾಟ್ಯ ಎಂದಿದ್ದಾರೆ ಪೋಲಂಕಿ ರಾಮಮೂರ್ತಿ.

೧೯೭೯ರ ಮೊದಲ ಬಂಡಾಯ ಸಾಹಿತ್ಯ ಸಮ್ಮೇಳನದ ಸಂಚಾಲಕರು ಬಿಡುಗಡೆ ಮಾಡಿದ ಕರಪತ್ರದಲ್ಲಿ ಬಂಡಾಯದ ನಿಲುವನ್ನು ಹೀಗೆ ಹೇಳಲಾಗಿದೆ

> "ಶೋಷಣೆಯ ವಿಕೃತ ಅಡಿಪಾಯಡ ಮೇಲೆ ನಿಂತಿರುವ ವ್ಯವಸ್ಥೆಯ ವಿರುದ್ಧದ ಹೋರಾಟ ಈ ಬಂಡಾಯ ಸಾಹಿತಿಗಳ ಮುಖ್ಯ ಗುರಿ. ಈಗ ಅಸ್ತಿತ್ವದಲ್ಲಿ ಇರುವ ಯಜಮಾನ ಸಂಸ್ಕೃತಿ (ಮಾಸ್ಟರ್ ಕಲ್ಚರ್) ಶೋಷಣೆ ಮತ್ತು ದಬ್ಬಾಳಿಕೆಯ ಇನ್ನೊಂದು ರೂಪವಾಗಿದೆ. ಈ ಯಜಮಾನ ಸಂಸ್ಕೃತಿಯ ವಿರುದ್ಧ ಬಂಡಾಯ ಗಟ್ಟಿ ದನಿ"

ಈ ನೆಲೆಯಲ್ಲಿ ಬರೆಯುವುದು ಎಷ್ಟು ಮುಖ್ಯವೋ ಬದುಕಿ ತೋರಿಸುವುದು ಅಷ್ಟೇ ಮುಖ್ಯವಾದ ಸಂಗತಿ. ಇದನ್ನು ಬಂಡಾಯದ ಪ್ರಣಾಲಿಕೆಯಲ್ಲಿ ಸ್ಪಷ್ಟ ಪಡಿಸಲಾಗಿದೆ.

ನಮ್ಮ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕಂಡು ಬರುತ್ತಿರುವ ಪ್ರಗತಿಪರ ಧೋರಣೆಗಳು ತೆಗೆದುಕೊಂಡ ತಿರುವುಗಳು ಎದುರಿಸಿದ ಸಮಸ್ಯೆಗಳು ಮತ್ತು ತಲುಪಿದ ಕ್ಷೀಣ ನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ. ಒಕ್ಕೂಟ, ಪ್ರಗತಿ ಪಂಥಗಳ ಸಾಫಲ್ಯ, ವೈಫಲ್ಯಗಳ ದಾಖಲೆ ನಮಗೊಂದು ಎಚ್ಚರದ ಸಂಗತಿಯೂ ಆಗಿದೆ. ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳು ತನ್ನ ಪ್ರಣಾಳಿಕೆಯ ಆಶಯದಂತೆ ಮುಂದುವರಿದ ಬಂಡಾಯ ಸಾಹಿತ್ಯ ಬರಗೂರು ರಾಮಚಂದ್ರಪ್ಪನವರು ಗುರುತಿಸುವಂತೆ ಅದು ಸ್ಥಳೀಯವಾಗಿ ರಾಷ್ಟ್ರೀಯವಾಗಿ ಮತ್ತು ಅಂತರ ರಾಷ್ಟ್ರೀಯವಾಗಿ ಸ್ಪಂದಿಸುತ್ತ ಬಂದಿದೆ. ಇದು ಕನ್ನಡ ಸಾಹಿತ್ಯದ ಒಟ್ಟಾರೆ ನಡಿಗೆಯೂ ಹೌದು. ಅದರೆ ಕನ್ನಡದ ಯಾವ ಸಾಹಿತ್ಯ ಚಳವಳಿ ಪಂಥಗಳಿಗೂ ಇರದ ಹೋರಾಟ ಬದುಕು ಬರಹಗಳ ಅನನ್ಯತೆ ಬಂಡಾಯಕ್ಕಿದೆ. ಬಂಡಾಯಗಾರರಿಗೆ ಬರವಣಿಗೆ ಒಂದು ಸಾಮಾಜಿಕ ಹೊಣೆಗಾರಿಕೆಯಾಗಿದೆ. ಹಾಗಾಗಿ ದಲಿತರ, ಮಹಿಳೆಯರ, ಕಾರ್ಮಿಕರ ಮೇಲಿನ ಹಲ್ಲೆ, ದೌರ್ಜನ್ಯಗಳ ವಿರುದ್ಧ ಪಟ್ಟಭದ್ರರು ಪ್ರಗತಿಪರರ ಮೇಲೆ ಹಲ್ಲೆ ನಡೆಸಿದಾಗ ಬಂಡಾಯ ಸಂಘಟನೆ ಮುಂದೆ ನಿಂತು ಸಾಂಸ್ಕೃತಿಕ ಚಳುವಳಿಯಾಗಿ ರೂಪುಗೊಂಡಿರುವುದನ್ನು ಹಲವು ಉದಾಹರಣೆಗಳಿಂದ ಕಾಣಬಹುದು.

ಬೆಂಡಿಗೇರಿ ಮಲ ಪ್ರಕರಣ, ಚಂದ್ರಗುತ್ತಿಯ ಬೆತ್ತಲೆ ಸೇವೆ ಪ್ರಕರಣ, ಕುದುರೆ ಮೋತಿ ಬೆತ್ತಲೆ ಪ್ರಕರಣ, ಸೀತಾಯಣದ ಪೋಲಂಕಿಯವರ ಮೇಲೆ ಸಫ್ದರ್ ಹಷ್ಮಿ ಕೊಲೆ ಪ್ರಕರಣ ಹೀಗೆ ಬಂಡಾಯದ್ದು ಹೋರಾಟ ಬದುಕು ಬರಪಗಳ ಅನನ್ಯತೆಯ ಬದ್ಧತೆಯಿಂದ ಕೂಡಿದ್ದಾಗಿದೆ.[7]

ಬಂಡಾಯ ಸಂಪ್ರದಾಯದ ವಿರುದ್ಧವೇ ಹೊರತು ಪರಂಪರೆಯ ವಿರುದ್ಧವಲ್ಲ. ಏಕೆಂದರೆ ಪರಂಪರೆ ಪ್ರಗತಿಯ ಚಲಶೀಲತೆಯ ಸಂಕೇತವಾದರೆ ಸಂಪ್ರದಾಯ ನಿಂತ ನೀರು. ಇದನ್ನು ಬರಗೂರು ವಿಸ್ತೃತವಾಗಿ ವಿಶ್ಲೇಷಿಸಿದ್ದಾರೆ.

> "ವಾಸ್ತವವಾಗಿ ಪರಂಪರೆಯನ್ನು ಇಡಿಯಾಗಿ ಯಾರೂ ವಿರೋಧಿಸಬೇಕಿಲ್ಲ. ಪರಂಪರೆ ಚಲಶೀಲವಾದದ್ದು, ಚಾರಿತ್ರಿಕತೆಯ ದೃಷ್ಟಿಯಿಂದ ಅದರ ಚಲನೆಯನ್ನು ಎಲ್ಲ ಮಿತಿಗಳೊಂದಿಗೆ ನಾವು ಗಂಭೀರವಾಗಿ ಪರಿಗಣಿಸುತ್ತೇವೆ. ಆದರೆ ಯಾವುದೆ ಮೌಲ್ಯಗಳೂ ನಂಬಿಕೆ ವಿಚಾರಗಳು ಸಮಕಾಲೀನ ಸಂದರ್ಭದಲ್ಲಿ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ

ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಜನವಿರೋಧಿ ನಿಲುವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಯ ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೆ ನಮ್ಮ ಉತ್ತರ ವಾಮಪಂಥೀಯರ ಸಂಘಟನೆ ಮತ್ತೂ ಸ್ಪಷ್ಟಪಡಿಸುವುದಾದರೆ ಸಮಕಾಲೀನ ಚರಿತ್ರೆಯ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲ ವಾಮಪಂಥೀಯರ ಸಾಂಸ್ಕೃತಿಕ ಒಗ್ಗಟ್ಟು ಈಗ ಅತ್ಯಂತ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಬಂಡಾಯ ಸಾಹಿತ್ಯ ಚಳವಳಿಯ ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ ಕಾರ್ಯಕ್ರಮ ಹಾಕಿಕೊಳ್ಳಬೇಕು. ಶೋಷಿತ ಜನತೆಯ ಪರವಾದ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವುದು ನಮ್ಮ ಮುಖ್ಯ ಗುರಿಗಳಲ್ಲಿ ಒಂದಾಗಬೇಕು. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು. ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳು ಪರಸ್ಪರ ಸಂಬಂಧ ಉಳ್ಳವು ಎಂಬ ನಿಲುವಿನಿಂದ ಹೊರಟಿದ್ದು. ಸಾಹಿತಿಗೆ ಸಾಮಾಜಿಕ ರಾಜಕೀಯ ಪ್ರಜ್ಞೆ ಇರಬೇಕು ಎಂಬ ಆಶಯ ಇಲ್ಲಿ ಮುಖ್ಯವಾದುದು. ಅಸ್ಪೃಶ್ಯತೆ, ಜಾತಿಪದ್ಧತಿ, ಲಿಂಗಭೇದ ಮತ್ತು ವರ್ಗಭೇದ ನೀತಿಯ ವಿರುದ್ಧ ಹೋರಾಟ ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದು. ಎಲ್ಲ ಜನಪರ ನಿಲುವುಗಳಿಗೆ ನಮ್ಮ ಬೆಂಬಲ. ಜನಪರವಾದ ಸಾಂಸ್ಕೃತಿಕ ಹೋರಾಟಕ್ಕೆ ನಮ್ಮ ಮುಖ್ಯ ನೆಲೆ. ಇಂತಹ ಒಲವಿನ ಸಾಹಿತ್ಯಸೃಷ್ಟಿ ನಮ್ಮ ಹೋರಾಟದ ಮುಖ್ಯ ದಾಖಲೆ".[೧೦]

"ಅರ್ಥ ಕಳೆದುಕೊಂಡಾಗ ಸಂಸ್ಕೃತಿ ಸ್ಥಗಿತಗೊಳ್ಳುತ್ತದೆ. ಹೀಗೆ ಸ್ಥಗಿತಗೊಂಡು ಸಂಪ್ರದಾಯ ಎನಿಸಿಕೊಳ್ಳುತ್ತದೆ. ಬಂಡಾಯ ಸಾಹಿತಿಗಳು ಇಂಥ ಸ್ಥಗಿತ ಸಂಪ್ರದಾಯದ ವಿರೋಧಿಗಳೇ ಹೊರತು ಇಡಿಯಾಗಿ ಪರಂಪರೆಯ ವಿರೋಧಿಗಳಲ್ಲ. ಪರಂಪರೆಯು ತನ್ನಲ್ಲಿದ್ದ ಸಂಪ್ರದಾಯದ ಪೊರೆ ಕಳಚಿ ಹೊಸ ರೂಪದಲ್ಲಿ ಮತ್ತೆ ಮುಂದುವರೆಯುವ ಗುಣ ಹೊಂದಿದೆ ಎಂಬುದು ನಮ್ಮ ಭಾವನೆ. ಆದ್ದರಿಂದ ಬೆಟೋಲ್ಡ್ ಬ್ರೆಕ್ಟ್ ಹೇಳಿದಂತೆ ಪರಂಪರೆಯ ಜೊತೆಗೆ ಸಂಬಂಧ ಮತ್ತು ಮುಂದುವರಿಕೆ ನಮ್ಮ ನಿಲುವಾಗಿದೆ".[೧೧]

ಬಂಡಾಯ ಇದ್ದಕ್ಕಿದ್ದಂತೆ ಹುಟ್ಟಿದ್ದಲ್ಲ. ಈಗಿರುವ ಬಂಡಾಯಕ್ಕೆ ಒಂದು ಹಿರಿದಾದ ಪರಂಪರೆಯೇ ಇದೆ. ಕನ್ನಡದ ಆದಿಕವಿ ಪಂಪನಿಂದಲೇ ನಮಗೆ ಬಂಡಾಯದ ಎಳೆ ಸಿಗುತ್ತದೆ. ವೈದಿಕ ಧರ್ಮದಲ್ಲಿ ಹುಟ್ಟಿ ಜೈನ ಧರ್ಮಾವಲಂಬಿಯಾಗಿದ್ದರೂ ಮತೀಯ ನೆಲೆಗಳನ್ನು ಮೀರಿ 'ಮನುಷ್ಯಜಾತಿ ತಾನೊಂದೆ ವಲಂ' ಎಂದಿದ್ದಾನೆ. ಕುಲದ ಹೆಚ್ಚುಗಾರಿಕೆಯ ಕುರಿತು ಕರ್ಣನ ಮೂಲಕ 'ಕುಲಂ ಕುಲಮಲ್ತು ಗುಣಂ ಕುಲಂ, ಚಲಂ ಕುಲಂ, ಅಭಿಮಾನವೊಂದೆ ಕುಲಂ' ಎಂದು ಪ್ರತಿಪಾದಿಸಿದ್ದಾನೆ. ಇದು ಆ ಸಂದರ್ಭದಲ್ಲಿ ಬಹುದೊಡ್ಡ ಪ್ರಗತಿಪರ ನಿಲುವಾಗಿದೆ. ಚಂಪೂ ಕಾವ್ಯದ ರೂಪ ಮತ್ತು ವಸ್ತುಗಳನ್ನು ತಿರಸ್ಕರಿಸಿದ ವಚನಕಾರರು, ಸಂಸ್ಕೃತವನ್ನು ತಿರಸ್ಕರಿಸಿದ ಆಂಡಯ್ಯ, ಕೀರ್ತನೆಗಳನ್ನು ಕಾವ್ಯಕ್ಕೆ ತಂದ ದಾಸರು, ಇವರೆಲ್ಲರೂ ಸಾಂಪ್ರದಾಯಿಕ ಸಾಹಿತ್ಯ ರೂಪವನ್ನು ಪ್ರತಿಭಟಿಸಿ ಹೊಸದೊಂದನ್ನು ಹುಟ್ಟುಹಾಕಿದವರು. ಸರ್ವಜ್ಞ, ವಚನಕಾರರು, ಕನಕದಾಸ ಹೀಗೆ ಹೆಜ್ಜೆಹೆಜ್ಜೆಗೆ ಅವರ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶವನ್ನು ಗುರುತಿಸಬಹುದು.[೧೨]

ಬಂಡಾಯ ಎಂಬ ಪದದ ಮೂಲಕ ನಿರ್ದೇಶಿಸದಿದ್ದರೂ ಹಿಂದಿನಿಂದಲೂ ಅನೇಕ ಕನ್ನಡ ಕವಿಗಳು ಬಂಡಾಯ ಮನೋಧರ್ಮವನ್ನು ಪ್ರಕಟಿಸಿರುವುದನ್ನು ಕಾಣಬಹುದು. ಬಂಡಾಯ ಮನೋಧರ್ಮದ ಸ್ವರೂಪ ಅಂದಂದಿನ ಚಾರಿತ್ರಿಕ ಸಂದರ್ಭಗಳ ಒತ್ತಡಗಳನ್ನು ಅವಲಂಬಿಸಿರುವುದರಿಂದ ಹಿಂದಿನ ಕವಿಗಳ ಬಂಡಾಯ ಮನೋಧರ್ಮವನ್ನು ಎಲ್ಲ ಮಿತಿಗಳೊಂದಿಗೆ ಗುರುತಿಸಿಕೊಳ್ಳಬೇಕು, ಗೌರವಿಸಬೇಕು ಎನ್ನುತ್ತಾರೆ ಬರಗೂರರು.[೧೩]

ನವೋದಯದ ಪ್ರಯತ್ನಗಳು ನಾಡಿನ ಕೊರತೆಯನ್ನು ನೀಗಲಿಲ್ಲ. ನಮ್ಮ ನಾಡು ಬಡವರ ನಾಡು, ಶ್ರಮಜೀವಿಗಳು ಇಲ್ಲಿ ಬಹುಸಂಖ್ಯಾತರು. ಬಾಳಿನ ಬವಣೆಗಳಲ್ಲಿ ಮಿಕ್ಕೆಲ್ಲ ವಿಷಯಗಳನ್ನು ಬದಿಗೊತ್ತುವ ಮನೋಭಾವ ಅವರದು. ಸಾಹಿತ್ಯ ಇವರಿಗಾಗಿ ಸೃಷ್ಟಿಯಾಗಬೇಕು. ಜನತೆಯ ಕಷ್ಟ ಸುಖಗಳನ್ನೂ ಜನತೆಯ ಕಣ್ಣಿನಿಂದ ನೋಡಿ, ಮನಸ್ಸಿನಿಂದ ಅನುಭವಿಸಿ ಚಿತ್ರಿಸಬೇಕು. ಮಾರ್ಕ್ಸ್ ಪ್ರತಿಪಾದಿಸಿದ ಸಮಾನ ಶಿಕ್ಷಣ, ಸಮಾನ ವಸತಿ, ಸಮಾನ ಆಹಾರ ವಿಹಾರ ತತ್ವದಲ್ಲಿ ಸಾಹಿತಿಗೆ ನಂಬಿಕೆ ಇರಬೇಕು. ಇವೆಲ್ಲದರ ಕಳಶವಾಗಿ ಗಾಂಧೀಯವರ ಸಮದರ್ಶನ ಹಾಗು ಅಂತಃಕರಣಮೂಲವಾದ ಸಾಹಿತ್ಯ ಉಸಿರಾಗಬೇಕು. ಸಾಹಿತಿಯ ಉದ್ದೇಶ ನೀತಿಬೋಧೆಯಲ್ಲ, ಅನುಭವದ ಅನಾವರಣ, ಸಾಹಿತಿ ಸಿದ್ಧಾಂತಿಯಲ್ಲ, ಜಿಜ್ಞಾಸು. ಸಾಹಿತಿ ಮತಸ್ಥಾಪಕನಲ್ಲ, ಧರ್ಮದೂತ ಎನ್ನುವ ಅನಕೃ ಅವರ ನಿಲವೂ ಬಂಡಾಯವೇ.[೧೪]

ದಾಸಸಾಹಿತ್ಯದಲ್ಲೂ ಕೂಡ ಸಾಮಾಜಿಕ ವಿಡಂಬನೆ, ಕುಲ ಜಾತಿ ವಿರೋಧಿ ನೆಲೆಗಳು ಸಾಕಷ್ಟು ಇರುವುದನ್ನು ಕಾಣಬಹುದಾಗಿದೆ. 'ಕುಲಕುಲವೆಂದು ಹೊಡೆದಾಡದಿರಿ, ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?' ಎಂಬ ಕೀರ್ತನೆಯಲ್ಲದೆ 'ರಾಮಧಾನ್ಯ ಚರಿತೆ' ಮೂಲಕ ದುಡಿವವರ್ಗದ ಪರವಾಗಿ ರಾಜಪ್ರಭುತ್ವವನ್ನು ಧಿಕ್ಕರಿಸಿರುವುದು ಬಂಡಾಯದ ಅದ್ಭುತ ಉದಾಹರಣೆಯೇ. ಹೊಸಗನ್ನಡ ಸಾಹಿತ್ಯ ಸಂದರ್ಭಕ್ಕೆ ಬಂದಾಗ ನವೋದಯ, ಪ್ರಗತಿಶೀಲದಂತಹ ಚಳವಳಿಗಳಲ್ಲಿ ಜನಪರವಾದ ಸಾಕಷ್ಟು ಬಂದಿವೆ. ಅದರಲ್ಲೂ ಪ್ರಗತಿಶೀಲ ತನ್ನ ಚಳವಳಿ ರೂಪದಲ್ಲಿ ಮೂಡಿಸಿದ್ದು ಬಂಡಾಯ ಸಾಹಿತ್ಯ ಚಳವಳಿ. ಈ ಎಲ್ಲ ಹಿನ್ನೆಲೆಗಳ ಪ್ರಭಾವದಿಂದ ಸೃಷ್ಟಿಗೊಂಡ ಬಂಡಾಯ ಸಾಹಿತ್ಯ ಚಳುವಳಿಗೆ ಪರಂಪರೆಯ ಬೆನ್ನೆಲುಬಿದೆ. ಅದನ್ನು ಸಮಕಾಲೀನ ಸಂದರ್ಭದಲ್ಲಿ ಪರೀಕ್ಷೆಗೊಡ್ಡಿ ಹೊಸ ಸೇರ್ಪಡೆಗೆ ಹೋರಾಡುವ ಹೊಣೆ ಹೆಗಲ ಮೇಲಿದೆ.[೧೫]

ಬಂಡಾಯದ ಅವಶ್ಯಕತೆ ಮತ್ತು ಮಿತಿ ಕುರಿತಂತೆ ಲಂಕೇಶರು,

> "ಬಂಡಾಯದಲ್ಲಿ ತೊಡಗುವ ಪ್ರತಿಯೊಬ್ಬನಿಗೂ ಬಂಡಾಯ ಮತ್ತು ಬದಲಾವಣೆ ಸಾವು ಬದುಕಿನ ಪ್ರಶ್ನೆಯಾಗಿದ್ದಾಗ ಮಾತ್ರ ಅರ್ಥ ಬರುತ್ತದೆ. ಹಾಗೆಯೇ ಬಂಡಾಯಗಾರನಿಗೆ ತಾನು ಒಡೆದು(ಹೊಡೆದು) ಬೀಳಿಸುತ್ತಿರುವ ವ್ಯವಸ್ಥೆ ಯಾವ ರೀತಿಯಲ್ಲಿ ಕೆಲಕಾಲವಾದರೂ ಜೀವನವನ್ನು ಪೊರೆದಿತ್ತು ಎಂಬ ಅರಿವಿರಬೇಕು. ಜೀವನ್ಮರಣದ ಪ್ರಶ್ನೆಯಾದಾಗಲೇ ಬಂಡಾಯ ಮನುಷ್ಯನಾಳದ ಮೌನ ಕೂಡ ಆಗುತ್ತದೆ. ಹಾಗಾದಾಗಲೇ ಅದು ಬಂಡಾಯಗಾರನ ಬೊಬ್ಬೆ, ಘೋಷಣೆಗಳಿಗೆ ಕೂಡ ಶಕ್ತಿ ಒದಗಿಸುತ್ತದೆ,.. ಪ್ರತಿಭಟನೆ ಒಬ್ಬರನ್ನು ಪೆದ್ದನನ್ನಾಗಿಸಬಲ್ಲದು. ಪ್ರತಿಭಟಿಸುತ್ತಲೇ ಇರುವವ ಮಗುವಿಗೆ ಮುತ್ತು ಕೊಡುವ ಪ್ರೀತಿ ಕೂಡ ಇಲ್ಲದವನಾಗಬಹುದು. ಅದ್ದರಿಂದ ಪ್ರತಿಭಟನೆ ಮತ್ತು ಎಚ್ಚರ ಎಂಬ ಸ್ಥಿತಿಗಳ ವ್ಯತ್ಯಾಸವನ್ನು ಅವನು ಅರಿಯಬೇಕು. ಒಬ್ಬ ಎಚ್ಚರವಾಗಿದ್ದೂ ಸುಪ್ತಲೋಕವನ್ನು ಪ್ರವೇಶಿಸಬಲ್ಲ ತನ್ನ ಸುತ್ತಣ

ಜಡತ್ವವನ್ನು ಅರಿತು ಜೀವಂತಿಕೆಗೆ ಪ್ರಯತ್ನಿಸಬಲ್ಲ. ಆದರೆ ಪ್ರತಿಭಟನೆಯವನು ಒಂದೇ ಸ್ತರದಲ್ಲಿ ಉಳಿದುಬಿಡುವ ಅಪಾಯವಿದೆ”.[೧೬]

ಸಮಾಜದ ಬದಲಾವಣೆಯ ಪ್ರಕ್ರಿಯೆಯಲ್ಲಿ ನಂಬಿಕೆ ಉಳ್ಳವರು ಎದುರಿಸಬೇಕಾದ ಪ್ರಧಾನ ಶತ್ರು ಸ್ಥಿರೀಕೃತ ಚಿಂತನೆಗಳು. ಹಾಗಾಗಿ ಎಲ್ಲ ಕ್ಷೇತ್ರಗಳಲ್ಲಿ ವ್ಯವಸ್ಥಿತವಾಗಿ ಬೇರು ಬಿಟ್ಟಿರುವ ಸ್ಥಿರೀಕೃತ ಚಿಂತನೆಗಳ ಮೂಲೋತ್ಪಾಟನೆಯೇ ಬಂಡಾಯ ಸಾಹಿತ್ಯದ ದಲಿತ ಸಂವೇದನೆಯ ಮತ್ತು ಸಮಾಜದ ಬದಲಾವಣೆಯ ಮುಖ್ಯ ಗುರಿಯಾಗಬೇಕು”.[೧೭]

ಬಂಡಾಯ ಸಾಹಿತ್ಯವು ಸಾಂಸ್ಥಿಕ ನಿಯಂತ್ರಣದಿಂದ ಹೊರ ಬಂದಾಗಲೇ ಸ್ಥಿರೀಕೃತ ಚಿಂತನೆಗಳಿಂದ ಪಾರಾಗಲು ಸಾಧ್ಯವಾಗುತ್ತದೆ. ಬಂಡಾಯ ಸಾಹಿತ್ಯಕ್ಕೊಂದು ಪ್ರಣಾಲಿಕೆ, ಚೌಕಟ್ಟುಗಳನ್ನು ನಿರ್ಮಿಸಿದಾಗ ಸಾಂಸ್ಥಿಕ ನಿಯಂತ್ರಣ ರೂಪುಗೊಳ್ಳುತ್ತದೆ. ಇದೊಂದು ರೀತಿಯಲ್ಲಿ ಸಾಂಸ್ಕೃತಿಕ ಯಜಮಾನಿಕೆಯೆಂದೇ ಗುರುತಿಸಲ್ಪಡುತ್ತದೆ. ಈ ಪ್ರವೃತ್ತಿಯಿಂದಾಗೇ ಬಂಡಾಯ ಸಾಹಿತ್ಯದಿಂದ ಒಂದೇ ಒಂದು ಶ್ರೇಷ್ಠ ಕೃತಿ ಹುಟ್ಟಿಲ್ಲ. ಶ್ರೇಷ್ಠ ಕೃತಿಗಳು ಏನಿದ್ದರೂ ಬಂಡಾಯ ಸಾಹಿತ್ಯದ ಚೌಕಟ್ಟಿನಿಂದ ಆಚೆಗೆ ಹುಟ್ಟಿವೆ.,.. ಇವೆಲ್ಲ ಸ್ಥಿರೀಕೃತ ಚಿಂತನೆಗಳ ಪರಿಣಾಮ. ಹಾಗಾಗಿ ಸಾಹಿತ್ಯ ಪರಂಪರೆಗೆ ಸಂಬಂಧಿಸಿದ ಎಲ್ಲ ವಸ್ತು ವಿಷಯಗಳನ್ನು ನಾವು ಇಂದು ಚಲನೆ ವೈರುದ್ಧ್ಯ ಪರಿವರ್ತನೆಗಳ ನೆಲೆಯಲ್ಲಿ ಪುನರ್ವ್ಯಾಖ್ಯಾನ ಮಾಡಿಕೊಳ್ಳಬೇಕಾಗಿದೆ. ಯಾವುದು ಸಾಹಿತ್ಯ, ಯಾವುದು ಅಸಾಹಿತ್ಯ ಎಂಬುದರ ನಿರ್ಧಾರ ಈ ಬಗೆಯ ಪುನರ್ವ್ಯಾಖ್ಯಾನ ಮತ್ತು ಪುನರ್ಮೌಲ್ಯಮಾಪನದಿಂದ ಸಾಧ್ಯ. ಎಂಬುದು ನಂಗಲಿಯವರ ಅಭಿಪ್ರಾಯ. ೧೯೭೪ರ ಸಂಘಟನೆ ಮತ್ತು ಪ್ರಣಾಳಿಕೆ ಬಂಡಾಯ ಸಾಹಿತ್ಯಕ್ಕೆ ಸ್ವರೂಪವೊಂದನ್ನು ನೀಡಿತ್ತು ಎನ್ನಬಹುದಾದರೂ ಅದನ್ನು ಮುಕ್ತ ಗ್ರಹಿಕೆಯ ನೆಲೆಯಲ್ಲಿ ನೋಡುವುದು ಉತ್ತಮ. ಸಾಹಿತ್ಯ ಎಷ್ಟೇ ಸ್ವಾಂತ ಸುಖಾಯ ಎಂದು ಹೇಳಿಕೊಂಡರೂ ಒಂದು ಸಾಮಾಜಿಕ ಜವಾಬ್ದಾರಿಯೂ ಅದಕ್ಕಿದೆ ಎಂದು ಕುರ್ತಕೋಟಿಯವರು ಹೇಳುತ್ತಾರೆ. ಬಂಡಾಯ ಸಾಹಿತ್ಯ ಇಂತಹ ಹೊಣೆಗಾರಿಕೆಯನ್ನು ಅರಿತಂತಹ ಸಾಹಿತ್ಯವಾಗಿದೆ. ಶೋಷಿತರ ಪರ ನಿಲುವುಗಳನ್ನು ಸಾಂಸ್ಕೃತಿಕ ಕ್ಷೇತ್ರದಲ್ಲಿ ಭದ್ರವಾಗಿ ನೆಲೆಗೊಳಿಸುವ ನಿಟ್ಟಿನಲ್ಲಿ ಬಂಡಾಯ ಸಾಹಿತ್ಯ ಕೆಲಸ ಮಾಡಿದ್ದರೂ ಅದು ಇಂದಿಗೂ ಹಲವು ಸವಾಲುಗಳನ್ನು ಎದುರಿಸುತ್ತಿದೆ.

ಬೇರೆಲ್ಲ ಸಾಹಿತ್ಯ ಚಳವಳಿಗಳಲ್ಲಿ ಕಂಡು ಬರದ ಅನುಕೂಲ ಬಂಡಾಯಕ್ಕಿತ್ತು. ಅದೆಂದರೆ ಕತ್ತಲ ಲೋಕದಿಂದ ಬಂದವರೆಲ್ಲ ಮಾತನಾಡತೊಡಗಿದ್ದು. ಶೂದ್ರರು, ಅಸ್ಪೃಶ್ಯರು, ಕೂಲಿಕಾರರು ತಮ್ಮ ತಮ್ಮ ಕ್ಷೇತ್ರಗಳಲ್ಲಿನ ಅನ್ಯಾಯ ಅಸಮಾನತೆಗಳ ಬಗ್ಗೆ ಬರೆಯತೊಡಗಿದಾಗ ಮೇಲ್ಮಧ್ಯಮ ವರ್ಗದ ವಿಮರ್ಶಕರೆಲ್ಲ ಒಂದೋ ಬರೀ ಘೋಷಣೆಗಳು ಎಂದು ಇಲ್ಲವೆ ಏಕತಾನತೆಯಿಂದ ನರಳುತ್ತಿವೆ ಎಂದು ಛೇಡಿಸತೊಡಗಿದರು.

> “ನವ್ಯ ಸಾಹಿತ್ಯದಲ್ಲಿ ವೈವಿಧ್ಯವಿಲ್ಲದೆ ಬರೀ ಅಧ್ಯಾಪಕರುಗಳಿಂದ ಮಾತ್ರವೇ ರಚಿತಗೊಂಡ ಅನಾಥ ಪ್ರಜ್ಞೆಯ ಕವನಗಳಲ್ಲಿ ಇಂತಹ ಏಕತಾನತೆ ಇರಲು ಸಾಧ್ಯವಿತ್ತೇ ಹೊರತು ಭಿನ್ನ ಭಿನ್ನ ಜಾತಿಗಳಿಂದ ಭಿನ್ನ ಭಿನ್ನ ಸಾಂಸ್ಕೃತಿಕ ವಲಯಗಳಿಂದ ಬಂದು ಬರೆಯುತ್ತಿರುವ ಬಂಡಾಯ ಕವಿಗಳಲ್ಲಿ ಖಂಡಿತಾ ಇರಲು ಸಾಧ್ಯವಿಲ್ಲ. ಏಕೆಂದರೆ ಈ ಅಧೋಲೋಕದ ಕವಿಗಳು ಮೊದಲಿಗೆ ಅಕ್ಷರ ಕಲಿತಿದ್ದೇ ಒಂದು ಮಹತ್ವದ ಸಂಗತಿ. ಅನಂತರ ತಮ್ಮ ಅದುಮಿಡಲ್ಪಟ್ಟಿದ್ದ ನೋವು, ನಿರಾಶೆ ಸಂಕಟ ಅವಮಾನಗಳನ್ನೆಲ್ಲ ಸ್ಫೋಟಿಸ ತೊಡಗಿದ್ದು ಇನ್ನೊಂದು ಮಹತ್ತರ ಬದಲಾವಣೆ. ನಮ್ಮ ಬಹುಪಾಲು

ವಿಮರ್ಶಕರಿಗೆ ನಮ್ಮ ದೇಶದಲ್ಲಿ ಎಷ್ಟೆಷ್ಟು ಜಾತಿ ಉಪಜಾತಿ, ಒಳಪಂಗಡಗಳಿವೆ ಎಂಬುದಾಗಲಿ, ಅವರು ಯಾವ್ಯಾವ ತರಹದ ಕೆಲಸ ಮಾಡುತ್ತರೆ ಎಂಬುದಾಗಲ ಸರಿಯಾಗಿ ತಿಳಿಯದಿರುವುದರಿಂದ ಅವರ ದುಡಿಮೆಯ ಹಿನ್ನೆಲೆಯಲ್ಲಿ ರಚಿತವಾಗುವ ಕಾವ್ಯದ ಅನುಭವ ಮನದಟ್ಟಾಗುವುದು ಗತದ ಮೌಲ್ಯಮಾಪನ ಹಾಗು ಭವಿಷ್ಯದ ಮುಂಗಾಣ್ಕೆಗಳಿಂದ. ವರ್ತಮಾನದಲ್ಲಾದರೂ ಕ್ರಿಯಾಶೀಲತೆ ಮಾತ್ರ ಸಾಧ್ಯ. ಬಂಡಾಯದ ಸ್ವರೂಪ ಮತ್ತು ವರ್ತಮಾನದಿಂದ ಗತಕ್ಕೂ, ಗತದಿಂದ ವರ್ತಮಾನಕ್ಕೂ, ಗತ ವರ್ತಮಾನಗಳೆರಡರಿಂದ ಭವಿಷ್ಯಕ್ಕೂ ಚಲಿಸುತ್ತಿರಬೇಕು"

ಎನ್ನುತ್ತಾರೆ ನಂಗಲಿ.[೮]

ದಲಿತ ಸಂವೇದನೆ: ಕನ್ನಡ ಸಾಹಿತ್ಯದಲ್ಲಿ ಹಿಂದಿನಿಂದಲೂ ಪ್ರತಿಪಾದಿತವಾಗಿರುವ ಮನೋಭೌತಿಕ ಅಸ್ಪೃಶ್ಯತೆ ಮತ್ತು ಅಪವರ್ಗೀಕರಣಗಳನ್ನು ಹಾಗು ಪ್ರಗತಿಯ ಹೆಸರಿನಲ್ಲಿ ವಿನಾಶದತ್ತ ಸಾಗುತ್ತಿರುವ ಅಪಮಾನಿತ ಜೀವಮೂಲಗಳನ್ನು ನಾವಿಂದು ದಲಿತ ಸಂವೇದನೆಯನ್ನಾಗಿ ಗುರುತಿಸಬೇಕಾಗಿದೆ. ಏಕೆಂದರೆ ದಲಿತ ಸಂವೇದನೆಯನ್ನು ಚಲನಶೀಲ ಗೊಳಿಸದೆ ಏಕಮುಖವಾಗಿ ನೋಡುವುದರಿಂದ ಜಾತಿನಿಷ್ಠ ನೆಲೆಯಲ್ಲೇ ಕೊಳೆಯುವ ಅಪಾಯವಿದೆ.[೯]

ಈ ಅಭಿಪ್ರಾಯ ಎಚ್.ಎಸ್. ರಾಘವೇಂದ್ರರಾವ್ ಅವರ ಬಂಡಾಯ ಕಾವ್ಯ ಕುರಿತ ವಿಮರ್ಶೆಗೆ ಉತ್ತರವೇನೋ ಎಂಬಂತಿದೆ. ರಾಘವೇಂದ್ರರಾವ್ ಅವರ ವಿಮರ್ಶೆ,

"ಕಾವ್ಯವು ಭಾಷೆಯ ಕಲಾತ್ಮಕ ಉಪಯೋಗದ ಮೂಲಕವಾಗಿ ಸಂಭವಿಸಬೇಕಾದ ಸಂಗತಿ ಎಂಬ ಪ್ರಾಥಮಿಕ ಸತ್ಯದ ಬಗೆಯನ್ನು ಸಂಪೂರ್ಣ ಅನಾದರ ಮಾಡಿದ್ದು ಬಂಡಾಯ ಕಾವ್ಯದ ಮುಖ್ಯ ಕೊರತೆ. ಆರು ಜನ ನವ್ಯಕವಿಗಳ ಕವನಗಳನ್ನು ಓದಿದಾಗ ಯಾವುದನ್ನು ಯಾರು ಬರೆದರೆಂದು ಖಚಿತವಾಗೇ ಹೇಳಬಹುದು. ಆದರೆ ಅದೇ ಆರು ಬಂಡಾಯ ಕವನಗಳು ಸಮುದಾಯದ ಅನುಭವವನ್ನು ಕುರಿತು ಸಾಮಾನ್ಯೀಕೃತ ಹೇಳಿಕೆಗಳೋ, ಘೋಷಣೆಗಳೋ ಆಗಿ ಮುಖಹೀನತೆಯ ದೋಷದಿಂದ ನರಳುತ್ತವೆ"

ಎಂದು ಹೇಳುತ್ತಾರೆ.

ಬಂಡಾಯ ಸಾಹಿತಿಗಳು ಎದುರಿಸುವ ಪ್ರಮುಖ ಸವಾಲುಗಳು ಹೀಗಿವೆ,

೧. ಬಹುಸಂಖ್ಯಾತ ಅನಕ್ಷರಸ್ಥ ಸಮೂಹಕ್ಕೆ ಸಾಹಿತ್ಯವನ್ನು ತಲುಪಿಸುವುದು. ಇದು ಬಂಡಾಯ ಸಂಘಟನೆಯ ಉದ್ದೇಶವೂ ಹೌದು.

೨. ಸಮಾಜಕ್ಕೆ ಬದ್ಧನಾದ ಕವಿ, ಸಮಾಜದಲ್ಲಿನ ಎಲ್ಲ ಆಗು ಹೋಗುಗಳನ್ನು ತೆರೆದ ಕಣ್ಣಿನಿಂದ ನೋಡುತ್ತ ಅದನ್ನು ತನ್ನ ಅನುಭವದ ತೆಕ್ಕೆಗೆ ತೆಗೆದುಕೊಳ್ಳಬೇಕಾಗುತ್ತದೆ.

೩. ಬಂಡಾಯ ಕವಿಗಳು ಬಹುಪಾಲು ಹಳ್ಳಿಯ ಮೂಲದವರಾದ್ದರಿಂದ ಹಳ್ಳಿಯ ಸಾಮಾಜಿಕ ಪರಿಸರಕ್ಕೂ, ಪಟ್ಟಣದ ನಾಗರೀಕ ಪರಿಸರಕ್ಕೂ ಇರುವ ಸಾಮ್ಯ ವೈಷಮ್ಯ ದೃಷ್ಟಿ ಧೋರಣೆಗಳ ವೈರುದ್ಧ್ಯ ಇವುಗಳ ಅನುಭವಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಬೇಕಾಗುತ್ತದೆ.

೪. ಬಂಡವಾಳಶಾಹೀ ಮತ್ತು ಊಳಿಗ ಮಾನ್ಯ ವ್ಯವಸ್ಥೆಯ ಮೌಲ್ಯಗಳನ್ನು ಬದಲಾಯಿಸುವ ಜವಾಬ್ದರಿಯೂ ಇರುವುದರಿಂದ ಆತ ಹೊಸ ಹೊಸ ಮಾದರಿಗಳನ್ನು ಕಂಡುಕೊಳ್ಳಬೇಕಾಗಿದೆ. ಈ ದೆಸೆಯಲ್ಲಿ ಆತ ತನ್ನ ಗ್ರಹಿಕೆಯ ಹೊಸ ನೋಟದಿಂದ ಪುರಾಣ, ಚರಿತ್ರೆ ಮತ್ತು ಸಮಕಾಲೀನ ಸಂಗತಿಗಳನ್ನು ಪರಿಶೀಲಿಸಬೇಕಾಗುತ್ತದೆ.

೫. ಕಂಡ ವಾಸ್ತವವನ್ನು ಜನಮಾನಸಕ್ಕೆ ತಲುಪಿಸಬೇಕಾಗಿರುವುದರಿಂದ ಭಾಷೆಯಲ್ಲಿ ತಾಂತ್ರಿಕೆ ಕಸರತ್ತನ್ನು ಕಡಿಮೆಯಾಗಿಸಿ ನೆರವಾಗಿ ಜನತೆಗೆ ಹೇಳಬೇಕಾಗುತ್ತದೆ. ಆದೇ ಸಂದರ್ಭದಲ್ಲಿ ಮಧ್ಯಮವರ್ಗದ ವಿಮರ್ಶಕರನ್ನೂ ಗಮನದಲ್ಲಿ ಇಟ್ಟುಕೊಂಡು ಒಪ್ಪಿಗೆಯಾಗುವ ಸುವರ್ಣ ಮಾಧ್ಯಮವನ್ನು ಕಂಡುಕೊಳ್ಳುವುದು ಅವಶ್ಯಕವಾಗಿದೆ.[೨೦]

ಈ ಎಲ್ಲಾ ಸವಾಲುಗಳನ್ನು ಸ್ವೀಕರಿಸಿ ವಸ್ತುವಿಗೆ ಹೊಂದತಕ್ಕ 'ಫಾರಮ್'ಗಳನ್ನು ಸೃಷ್ಟಿ ಮಾಡಿಕೊಂಡು ಸಮೂಹದ ಜೊತೆ ಬೆರೆಯುತ್ತಲೇ ವೈಯಕ್ತಿಕ ಛಾಪನ್ನು ಉಳಿಸಿಕೊಂಡು ಕಾವ್ಯ ರಚಿಸುತ್ತಿರುವ ಅನೇಕ ಉದಾಹರಣೆಗಳನ್ನು ಕೊಡಬಹುದು. ಉದಾಹರಣೆಗೆ, ಡಾ. ಪುರುಷೋತ್ತಮ ಬಿಳಿಮಲೆಯವರ 'ಇಟ್ಟಿಗೆ ರಾಮಾಯಣ' ಹಾಗು ಜಗದೀಶ ಮಂಗಳೂರುಮಠ ಅವರ 'ಬೆಳಗಾಯಿತು' ಕವನ ನವೋದಯದ ಬೇಂದ್ರೆಯವರ ನವ್ಯದ ಕೃಷ್ಣ ಆಲನಹಳ್ಳಿಯವರ ಕವನಗಳನ್ನು ನೆನಪಿಗೆ ತಂದು ಅವೆರಡಕ್ಕಿಂತ ತಾನು ಹೇಗೆ ಭಿನ್ನ ಎನ್ನುವುದನ್ನು ತೋರಿಸಿಕೊಡುತ್ತದೆ.

ಕೋಟಿ ಕೋಟಿ ಜನರ ನಿಟ್ಟುಸಿರ ತಿದಿಯೂದಿ
ಕತ್ತಲಿದ್ದಿಲು ಹೊತ್ತಿ ಮೂಡಣದ ಬಾನಲ್ಲಿ ಕೆಂಪಡರಿತು
ಮತ್ತೊಂದು ದಿನಕ್ಕೆ ಮೊದಲಾಯಿತು,
ಮತ್ತೊಂದು ರಾತ್ರಿಗೆ ನಾಂದಿಯಾಯಿತು
ಭರತ ಖಂಡದ ಹಳ್ಳಿ ಹಳ್ಳಿಗೂ ಬೆಳಗಾಯಿತು
ಬೆಳಗಾಯಿತೆಂಬ ಅರಿವು ಕತ್ತಲೆಗೂ ಮೂಡಿತು
ಹಕ್ಕಿಗಳ ಕೊರಳದನ್ನೆ ದಿಕ್ಕು ದಿಕ್ಕಿಗೆ ಉಲಿಯಿತು

ದಲಿತ ಸಾಹಿತ್ಯ ಬಂಡಾಯದ ಒಂದು ಭಾಗವೋ ಅಥವ ದಲಿತ ಸಾಹಿತ್ಯ ಒಂದು ಪ್ರತ್ಯೇಕ ಮಾರ್ಗವೋ ಎಂಬುದು ಬಂಡಾಯ ಸಾಹಿತ್ಯ ಸಂದರ್ಭದ ಒಂದು ಪ್ರಮುಖ ಚರ್ಚೆಯಯಿತು. ಶಂಕರ ಮೊಕಾಶಿ ಪುಣೇಕರರು ತಮ್ಮ ಭಾಷಣವೊಂದರಲ್ಲಿ ಬಂಡಾಯ ಸಾಹಿತ್ಯ ಶೂದ್ರರದು, ದಲಿತ ಸಾಹಿತ್ಯ ಪಂಚಮರದು ಎಂದಿದ್ದಾರೆ.[೨೧] ಎಲ್ಲ ದಲಿತ ಸಾಹಿತ್ಯವೂ ಬಂಡಾಯವೇ, ಆದರೆ ಬಂಡಾಯ ಸಾಹಿತ್ಯವೆಲ್ಲ ದಲಿತವಲ್ಲ ಎಂಬುದು ಒಂದು ಅಭಿಪ್ರಾಯ. ದಲಿತ ಸಾಹಿತಿಗಳು ದಲಿತ ಸಾಹಿತ್ಯದ ರೂಪುರೇಷೆಗಳನ್ನು ಪ್ರತ್ಯೇಕವಾಗಿಯೇ ಬಿಂಬಿಸಿದ್ದಾರೆ. ಇಂತಹ ಪ್ರತ್ಯೇಕತೆ ಬಂಡಾಯ ಸಂಘಟನೆಯನ್ನು ಅಸ್ಥಿರಗೊಳಿಸುತ್ತದೆ ಎಂಬುದು ಚಂಪಾರ ನಿಲುವು. ಇದನ್ನು ಅವರು ಹೀಗೆನ್ನುತ್ತಾರೆ

"ವಿಮರ್ಶಾ ವಲಯದಲ್ಲಿ ಕೇವಲ ಬಂಡಾಯ ಸಾಹಿತ್ಯ ಎಂಬ ಪದಪುಂಜ ಬಳಸದೆಯೆ ನಾವೆಲ್ಲ 'ದಲಿತ–ಬಂಡಾಯ ಸಾಹಿತ್ಯ' ಎಂಬ ಗೊಂದಲಕಾರೀ ಪದಪುಂಜ ಬಳಸತೊಡಗಿದಾಗ ಹೋದಲ್ಲಿ ಬಂದಲ್ಲಿ ನನ್ನಂತಹವರು 'ಬಂಡಾಯ' ಎಂಬುದು ಮನೋವೈಜ್ಞಾನಿಕ, 'ದಲಿತ' ಎನ್ನುವುದು ಸಾಮಾಜಿಕ ಪರಿಕಲ್ಪನೆ ಎಂದೂ, ದಲಿತ

ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು. ಆದರೆ ಬಂಡಾಯ ಸಾಹಿತಿಗಳೆಲ್ಲ ದಲಿತ ಸಾಹಿತಿಗಳಲ್ಲ ಎಂಬ ಬೆಡಗಿನ ವಚನದ ಮಾದರಿಯ ವಿವರಣೆ ಕೊಡಬೇಕಾದೀತು. ಮುಂದುವರೆದು 'ದಲಿತ-ಬಂಡಾಯ ಸಾಹಿತ್ಯ' ಎಂಬುದು 'ಯಕ್ಷಗಾನ-ಜಾನಪದ' ಅಕಾಡೆಮಿ ಇದ್ದ ಹಾಗೆ. ಯಕ್ಷಗಾನವೂ ಜಾನಪದವೇ ಆದರೆ ಉಳಿದ ಆರ್ಡಿನರಿ ಜಾನಪದಗಳಿಗಿಂತ ಸ್ವಲ್ಪ ಹೆಚ್ಚಿನ ಜಾನಪದ,..ಎಂಬ ಮಾತಿನಲ್ಲಿರುವ ವ್ಯಂಗ್ಯವನ್ನು ಕಾಣಬಹುದಾಗಿದೆ".

ಇಂತಹ ಪ್ರತ್ಯೇಕತೆಯ ಅಪಾಯದ ಬಗ್ಗೆ ಚಂಪಾ "ಪ್ರತ್ಯೇಕತೆ, ಪ್ರತ್ಯೇಕತೆಯಿಂದ ಅನನ್ಯತೆ, ಅನನ್ಯತೆಯಿಂದ ಶ್ರೇಷ್ಠತೆ ಇದೇ ಅಲ್ಲವೆ ನಾವು ಯಾವುದನ್ನು ಜಾತಿ ಶ್ರೇಣೀಕರಣವೆಂದು ಗುರುತಿಸಿ ಅದನ್ನು ನಿರ್ಮೂಲನ ಮಾಡಲು ಪ್ರತಿಜ್ಞೆ ಮಾಡಿ 'ಬರುತಲಿಹೆವು' ಎಂಬ ಘೋಷಣೆ ಹಾಕಿ 'ದಾರಿ ಬಿಡಿ' ಎಂದು ಜಬರಿಸುತ್ತಿದ್ದುದು? ಈಗ ನಮ್ಮ ಪಯಣ ಯಾವ ಕಡೆಗೆ? ಇತಿಹಾಸ ಚಲನೆ ಎಂಬುದು ಹಿಂದೆಯೋ ಮುಂದೆಯೋ? ಸಾಗರದ ಸಂಗಮಕ್ಕೆ ಧಾವಿಸುತ್ತಿದ್ದ ಸಾವಿರಾರು ನದಿಗಳು ಏಕ್ದಂ ಟರ್ನ್ ಅಬೌಟ್ ಮಾಡಿ ತಮ್ಮ ಉಗಮದ ಕಡೆಗೆ ತೆವಳಲು ಹಾತೊರೆಯುತ್ತಿವೆಯೇ? ಎಂದು ವಿಷಾದ ವ್ಯಕ್ತಪಡಿಸುತ್ತಾರೆ.

ಇದನ್ನು ಪುಷ್ಟೀಕರಿಸುವಂತೆ ಬಸವರಾಜ ಸಬರದ

"ಇಂದಿನ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ದಲಿತ ಪರ ಕಾಳಜಿಗಳೇ ಪ್ರಧಾನವಾಗಿರುವುದರಿಂದ ಅದನ್ನು ಬಂಡಾಯ ಎಂಬ ಹೆಸರಿನಲ್ಲಿಯೇ ಕರೆಯುವುದು ಸೂಕ್ತ. ಆ ಬಂಡಾಯದಲ್ಲಿಯೇ ದಲಿತ ಎಂಬ ಪದವೂ ಸೇರಿರುತ್ತದೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ದಲಿತ-ಬಂಡಾಯ ಎಂದು ಕರೆಯುವುದು ದ್ವಿರುಕ್ತಿ ದೋಷದಂತಾಗುತ್ತದೆ" [೨೨]

ಎಂದು ವಾದ ಮಾಡಿದ್ದಾರೆ.

ದಲಿತ ಜನಾಂಗದಲ್ಲಿ ಹುಟ್ಟಿ ಸಾಹಿತ್ಯ ರಚಿಸಿದಾಕ್ಷಣ ಆತ ದಲಿತ ಸಾಹಿತಿಯಾಗಲಾರ. ಆತ ದಲಿತ ಸಾಹಿತಿಯಾಗಬೇಕಾದರೆ ಮೊದಲು ಬಂಡಾಯ ಮನೋಧರ್ಮದವನಾಗಿರಬೇಕು. ಶತಮಾನಗಳಿಂದ ಶೋಷಣೆಗೆ ಒಳಗಾದ ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಬೆಳೆದು ಆ ನೋವು ಯಾತನೆಗೆ ಕಾರಣವಾದ ವ್ಯವಸ್ಥೆಯನ್ನು ವಿರೋಧಿಸುತ್ತ ಮೌಢ್ಯತೆ ಅಂಧ ಸಂಪ್ರದಾಯವನ್ನು ತಿರಸ್ಕರಿಸುತ್ತ ಮತ ಧರ್ಮಗಳ ಕೊಳಕುತನವನ್ನು ಬಯಲು ಮಾಡುತ್ತ ಸೈದ್ಧಾಂತಿಕವಾಗಿ ಆಲೋಚಿಸಿ ಸಂಘಟನಾತ್ಮಕವಾಗಿ ಹೋರಾಡಿ ಸಮಾನತೆಗಾಗಿ ಹಾತೊರೆಯುವ ಸಾಹಿತಿ ದಲಿತ ಸಾಹಿತಿಯಾಗುತ್ತಾನೆ. ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟದಿದ್ದರೂ ಬಡವರು-ದಲಿತರ ಶತಮಾನಗಳ ಶೋಷಣೆಯನ್ನು ಕಂಡು ಬಂಡೆದ್ದು ತುಳಿತಕ್ಕೆ ಒಳಗಾದವರೊಂದಿಗೆ ಸಂಘಟಿತನಾಗಿ ತಾನು ಬೆಳೆದು ಬಂದ ಸಮಾಜ ಸಂಸ್ಕೃತಿಗಳ ಮಿತಿಗಳನ್ನು ಗುರುತಿಸುತ್ತ ತನ್ನ ಸುತ್ತಲಿರುವ ಸಾಂಪ್ರದಾಯಿಕ ಗೆರೆಗಳನ್ನು ದಾಟುತ್ತ ಬದುಕು ಬರಹಗಳಲ್ಲಿ ಬಂಡೇಳುವ ಪ್ರವೃತ್ತಿಯುಳ್ಳ ಸಾಹಿತಿ ಬಂಡಾಯ ಸಾಹಿತಿ ಎನಿಸಿಕೊಳ್ಳುತ್ತಾನೆ. ಆದ್ದರಿಂದ ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಎರಡು ವಿಭಿನ್ನ ಸಂಸ್ಕೃತಿಗಳಿಂದ ಬಂದ ಸಾಹಿತಿಗಳ ಏಕಮುಖ ಹೋರಾಟ ಒಂದೇ ಕಾಲಕ್ಕೆ ನಡೆದಿರುತ್ತದೆ. ಹೀಗಾಗಿ 'ದಲಿತ' ಪದದಿಂದ 'ಬಂಡಾಯ' ಪದವನ್ನಾಗಲಿ, ಬಂಡಾಯ ಪದದಿಂದ ದಲಿತ ಪದವನ್ನಾಗಲಿ ಬೇರ್ಪಡಿಸುವುದಕ್ಕಾಗುವುದಿಲ್ಲ"[೨೩] ಎಂದು ಸಬರದ ವಿವರಿಸಿದ್ದಾರೆ.

ಹೊಸ ಹೊಸ ಸಾಹಿತ್ಯ ಮಾರ್ಗಗಳು ಹುಟ್ಟುವಾಗ ಈ ರೀತಿಯ ಚರ್ಚೆ ವಾಗ್ವಾದಗಳು ಸಾಮಾನ್ಯ. ಅಂತಹ ಸಂದರ್ಭದಲ್ಲಿ ಸಾಹಿತ್ಯ ಪತ್ರಿಕೆಗಳು ಜನಪ್ರಿಯ ವೇದಿಕೆಯಾಗಿ ಕಾರ್ಯನಿರ್ವಹಿಸುವ ಮೂಲಕ ಚಳುವಳಿ ಸೂಕ್ತ ರೂಪದಲ್ಲಿ ಮುಂದುವರೆಯಲು ನೆರವಾಗುತ್ತದೆ. ದಲಿತ ಸಾಹಿತ್ಯವನ್ನು ಏಕೆ ಪ್ರತ್ಯೇಕವಾಗಿ ಪರಿಗಣಿಸಬೇಕು ಎಂಬುದಕ್ಕೆ ಚೆ. ರಾಮಸ್ವಾಮಿ ಹೀಗೆ ಬರೆದಿದ್ದಾರೆ,[೨೩]

೧. ದಲಿತ ಸಮಸ್ಯೆಗಳ ಬಗೆಗೆ ದಲಿತರು ರಚಿಸಿದ ಸಾಹಿತ್ಯ

೨. ದಲಿತರು ರಚಿಸಿದ ಎಲ್ಲ ಸಾಹಿತ್ಯ

೩. ದಲಿತ ಸಮಸ್ಯೆಯನ್ನು ಹೊಂದಿರುವ ಎಲ್ಲ ಸಾಹಿತ್ಯ

ಈ ಮೂರು ಬಗೆಗಳಲ್ಲಿ ದಲಿತ ಸಮಸ್ಯೆಗಳ ಬಗೆಗೆ ದಲಿತರು ರಚಿಸಿದ ಸಾಹಿತ್ಯ ಮಾತ್ರ ದಲಿತ ಸಾಹಿತ್ಯವಾಗುತ್ತದೆ. ಒಂದು ವೇಳೆ ಕರ್ತೃ ದಲಿತನೇ ಆಗಿದ್ದು ಸಾರ್ವತ್ರಿಕ ಸಮಸ್ಯೆ ಹಾಗು ವಿಷಯಗಳ ಬಗ್ಗೆ ಬರೆದಿದ್ದಕ್ಕೆಲ್ಲ 'ದಲಿತ' ಎನ್ನುವ ಲೇಬಲ್ ಸಮಂಜಸ ಎನಿಸುವುದಿಲ್ಲ. ಹಾಗೆಯೇ ದಲಿತ ಸಮಸ್ಯೆಗಳ ಬಗ್ಗೆ ಇತರರು ರಚಿಸಿದ ಸಾಹಿತ್ಯದಲ್ಲಿ ಪ್ರಾಮಾಣಿಕತೆಯ ಪ್ರಶ್ನೆ ಏಳುತ್ತದೆ ಎಂದಿದ್ದಾರೆ.[೨೪]

> "ಯಾವುದೇ ಸಾಹಿತ್ಯ ಚಳವಳಿಯಾಗಲಿ ಅದಕ್ಕೊಂದು ಸೈದ್ಧಾಂತಿಕ ನೆಲೆಗಟ್ಟು ಅತ್ಯಂತ ಅವಶ್ಯಕ. ಹಾಗಾಗಿ ದಲಿತ ಸಾಹಿತ್ಯದ ಹಿಂದಿನ ಸಿದ್ಧಾಂತ ಅದಕ್ಕೆ ಪ್ರೇರಣೆ ದಲಿತ ಸಂವೇದನೆಯನ್ನು ಚಲನೆ ವೈರುದ್ಧ್ಯ ಮತ್ತು ಪರಿವರ್ತನೆಗಳ ನೆಲೆಯಲ್ಲಿ ಗ್ರಹಿಸದ ಸ್ಥಿರೀಕೃತ ಚಿಂತಕರಿಂದಾಗಿ ದಲಿತರು ಬರೆದದ್ದೇ ದಲಿತ ಸಾಹಿತ್ಯ, ದಲಿತರ ಸಾಹಿತ್ಯದಲ್ಲಿ ಮಾತ್ರ ದಲಿತ ಸಂವೇದನೆ ಎಂಬ ವಾದ ಹೆಚ್ಚು ಪ್ರಚಾರದಲ್ಲಿದೆ. ಸ್ಥಾವರವಾದ ಜಾತಿ ನಿಷ್ಠುರಿಗರ ಬಡಿದು ಬುಡಾ ಮರಗಟ್ಟು ಹೋಗಿರುವುದರಿಂದ ದಲಿತ ಸಂವೇದನೆಯನ್ನು ಸ್ಥಿರೀಕೃತವೂ, ವಿಭಜಿತವೂ, ಏಕರೂಪಾತ್ಮಕವೂ ಆದ ನೆಲೆಯಲ್ಲಿ ಪ್ರತಿಪಾದಿಸಲಾಗುತ್ತಿದೆ. ಇದೊಂದು ರೀತಿಯಲ್ಲಿ ಜಾತಿಯ ಯಜಮಾನಿಕೆ ಮತ್ತು ಖಾಸಗಿ ಆಸ್ತಿಯ ಹಕ್ಕುದಾರಿಕೆಯನ್ನು ಪೂರ್ಣವಾಗಿ ಹೋಲುತ್ತದೆ".[೨೫]

ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ ಸಮಾಜದ ಹಿಂದುಳಿದ ವರ್ಗದವರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ದಲಿತರೂ ಶಿಕ್ಷಣ ಪಡೆದರು, ಮೇಲ್ವರ್ಗದವರು ರಚಿಸಿದ ಸಾಹಿತ್ಯವನ್ನು ಕಂಡು ತಾವೂ ತಮ್ಮ ಬದುಕಿನ ಬಗ್ಗೆ ಸಾಹಿತ್ಯ ರಚಿಸಬೇಕು ಎಂಬ ಪ್ರೇರಣೆ ಅವರಲ್ಲಿ ಮೂಡಿತು. ಹಾಗೆಯೇ, ದೇವರಾಜ ಅರಸು ಸಂಪುಟದ ಮಂತ್ರಿ ಬಸವಲಿಂಗಪ್ಪನವರ 'ಬೂಸಾ ಚಳುವಳಿ' ದಲಿತ ಸಂಘಟನೆಗಳು ಜನ್ಮ ತಳೆಯಲು ಕಾರಣವಾಯಿತು. ಈ ಸಂಘಟನಾತ್ಮಕ ಹೋರಾಟದಲ್ಲೇ ದಲಿತ ಸಾಹಿತ್ಯ ಕನ್ನಡದಲ್ಲಿ ಒಂದು ಚಳವಳಿಯಾಗಿ ಪ್ರತಿಭಟನೆಯ ಅಲೆಯಾಗಿ ಮೂಡಿ ಬಂತು. ದಲಿತ ಚಿಂತನೆಯ ಸಾಹಿತಿಗಳ ಅಭಿವ್ಯಕ್ತಿ ಕ್ರಮವೇ ಬದಲಾಗಿಬಿಟ್ಟಿತು.

ದಲಿತ ಸಾಹಿತ್ಯದಲ್ಲಿ ೧೯೭೫ರಲ್ಲಿ ಪ್ರಕಟವಾದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು'ಗೆ ವಿಶಿಷ್ಟ ಸ್ಥಾನವಿದೆ. ದಲಿತರ ಹೋರಾಟದ ಹಾಡಾಗಿ ಇದು ಜನಪ್ರಿಯವಾಯಿತು. ಇದು ದಲಿತ ರೋಷವನ್ನು ಸಮರ್ಥವಾಗಿ ಚಿತ್ರಿಸುತ್ತದೆ.[೨೬]

೭೦ರ ದಶಕದ ನಂತರ ಸಾಹಿತ್ಯ ವಿಮರ್ಶೆಯಲ್ಲಿ ಅರಾಜಕತೆಯ ನಿಲುವನ್ನು ಪ್ರತಿಪಾದಿಸುವ ವಿಮರ್ಶಾ ತತ್ವಗಳು ಹುಟ್ಟಲಾರಂಭಿಸಿದವು. ನವೋದಯ ಸಾಹಿತ್ಯದ ವಿಮರ್ಶೆಗೆ ಪ್ರಬುದ್ಧ ಕರ್ನಾಟಕ, ಜಯಕರ್ನಾಟಕದಂತಹ ಪತ್ರಿಕೆಗಳೂ, ನವ್ಯದ ಸಂದರ್ಭದಲ್ಲಿ, ಸಾಕ್ಷಿ, ರುಜುವಾತು ಮೊದಲಾದ ಪತ್ರಿಕೆಗಳು ಹೇಗೆ ಕೆಲಸ ಮಾಡಿದವೋ ಹಾಗೆ ಪ್ರಗತಿಶೀಲ ಸಾಹಿತ್ಯ ವಿಮರ್ಶೆಯನ್ನು ಮುನ್ನಡೆಸುವಂತಹ

ವಿಮರ್ಶಾ ಪ್ರಸ್ಥಾನವಾಗಲಿ, ಸಾಹಿತ್ಯಿಕ ಪತ್ರಿಕೆಯಾಗಲಿ ಸಿದ್ಧವಿರಲಿಲ್ಲ. ಈ ಕೊರತೆ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ದೂರವಾಯಿತು. ಬಂಡಾಯದಲ್ಲೂ ಪ್ರಗತಿಶೀಲ ಅಂಶಗಳೇ ಇದ್ದರೂ ಅದರ ಮೂಲ ಸಂವೇದನೆ ಬೇರೆಯೇ ಆಗಿದೆ.

ದಲಿತ–ಬಂಡಾಯ ಸಾಹಿತ್ಯ ಇಂದು ಯಾವ ದಿಕ್ಕಿನಲ್ಲಿ ಸಾಗುತ್ತಿದೆ ಎಂಬ ಕುರಿತು ೧೯೯೯ರಲ್ಲಿ ಹೊಸದುರ್ಗದಲ್ಲಿ ಒಂದು ಸಂವಾದ ಕಾರ್ಯಕ್ರಮ ನಡೆಯಿತು. 'ಸಾಹಿತ್ಯ ಸಂವಾದ' ಪತ್ರಿಕೆಯಲ್ಲಿ ಈ ಕುರಿತ ಕೆಲವು ಮುಖ್ಯವಾದ ಲೇಖನಗಳನ್ನು ಪ್ರಕಟಿಸಿದೆ.[೨೭]

ದಲಿತ ಬಂಡಾಯ ಸಾಹಿತ್ಯಕ್ಕೆ ತನ್ನ ಇಪ್ಪತ್ತೈದು ವರ್ಷಗಳ ಸುದೀರ್ಘ ಅವಧಿಯಲ್ಲಿ ಒಂದು ಶ್ರೇಷ್ಠ ಕೃತಿಯನ್ನು ಕೊಡಲು ಸಾಧ್ಯವಾಗಿದೆಯೆ? ದಲಿತ ಬಂಡಾಯ ಸಾಹಿತ್ಯ ಸೃಷ್ಟಿ ಸ್ಥಗಿತತೆಯ ಕಡೆಗೆ ಸಾಗಿದೆಯೇ ಎಂಬ ಅಂಶಗಳನ್ನು ಕುರಿತು ನಡೆದ ಸಂವಾದದಲ್ಲಿ ಬಂಡಾಯ ದಲಿತ ಸಾಹಿತ್ಯದ ಪ್ರಮುಖರ ಅನಿಸಿಕೆಗಳು 'ಸಾಹಿತ್ಯ ಸಂವಾದ' ಪತ್ರಿಕೆಯಲ್ಲಿ ಪ್ರಕಟವಾಗಿವೆ. ಅದರ ಕೆಲವು ಮುಖ್ಯ ಅಂಶಗಳು

ದಲಿತ ಸಾಹಿತ್ಯವಿನ್ನೂ ಸ್ಥಗಿತತೆಗೆ ಈಡಾಗಿಲ್ಲ. ಬಂಡಾಯ ಸ್ಥಗಿತತೆಯ ಕಡೆಗೆ ಸಾಗಿದೆ ಎಂಬುದು ರಾಘವೇಂದ್ರ ಪಾಟೀಲರ ಅನಿಸಿಕೆ. ಅದಕ್ಕೆ ಅವರು ನೀಡುವ ಕಾರಣವೆಂದರೆ, ದಲಿತರು ಹುಟ್ಟು ಕಲೆಗಾರರು. ತಮ್ಮ ನೋವನ್ನು ಹಾಡಿನ ಸುಖದಿಂದ ಮರೆಮಾಡಿಕೊಳ್ಳಬಲ್ಲವರು. ಹೀಗಾಗಿ ಅವರು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿಕೊಳ್ಳುವುದೂ ಕಲಾತ್ಮಕತೆಯ ತೀವ್ರತೆಯಲ್ಲಿ, ಬಂಡಾಯದ ರಚನೆಕಾರರಾದರೋ ದಲಿತರಲ್ಲದ ಮೇಲು ಮಧ್ಯಮವರ್ಗದ ಜನರು. ಇವರಲ್ಲಿ ಸಾಹಿತ್ಯಸೃಷ್ಟಿ ಎನ್ನುವುದು ಲರ್ನ್‌ಡ್ ಬಿಹೇವಿಯರ್ (ಕಲಿತ ವರ್ತನೆ). ಇವರಲ್ಲಿ ದಲಿತರಲ್ಲಿ ಸಾಧ್ಯವಾಗುವ ಕಲಾತ್ಮಕ ತೀವ್ರತೆ ಸಾಧ್ಯವಾಗುವುದಿಲ್ಲ. ಅದು ಮಹದೇವರ 'ಕುಸುಮಬಾಲೆ'ಯಂತಹ ಕಥನದಲ್ಲಿ, ಹನುಮಂತಯ್ಯನವರ ಕಾವ್ಯದಲ್ಲಿ ಮತ್ತೆ ಮತ್ತೆ ಚಿಗುರೊಡೆಯುತ್ತಾ ಇರುತ್ತದೆ.

೧. ಬಂಡಾಯ ಸಾಧ್ಯವಾಗುವುದು ತೀವ್ರ ನೈತಿಕ ಬಿಕ್ಕಟ್ಟಿನಲ್ಲಿ, ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕ ನೈತಿಕತೆಯ ನೆಲೆಗಟ್ಟು ಕುಸಿದು ಹೋಗಿದೆ. ಭ್ರಷ್ಟತೆ ಮತ್ತು ಅಧಿಕಾರ ರಾಜಕಾರಣವು ವೈರಸ್ಸಿನಂತೆ ಎಲ್ಲರ ಆತ್ಮಗಳನ್ನು ಪ್ರವೇಶಿಸಿರುವುದರಿಂದ ನಿಜವಾದ ಬಂಡಾಯ ಸಾಧ್ಯವಾಗುತ್ತಿಲ್ಲ.

೨. ಸಂಘಟನೆ ಯುವ ಬರಹಗಾರರಿಗೆ ಹೇಳಿಕೊಟ್ಟದ್ದು ಅಸೂಕ್ಷ್ಮತೆಯನ್ನು. ಸಾಹಿತ್ಯವು ಒಳಗೊಳ್ಳಬೇಕಾದ ಸೂಕ್ಷ್ಮತೆಯನ್ನು ವೈದಿಕ ಮೌಲ್ಯ ಎಂದು ಬಿಂಬಿಸುತ್ತಾ ಒರಟಾಗಿರುವುದನ್ನು ವೈಭವೀಕರಿಸುತ್ತಾ, ಕ್ರೂಡಿಟಿಯನ್ನೇ ಒಂದು ಮೌಲ್ಯವಾಗಿಸಿತು.

೩. ಬಂಡಾಯ ಸಂಘಟನೆ ಕಾಲದ ನೈರಂತರ್ಯವನ್ನು ಧಿಕ್ಕರಿಸುತ್ತ ವರ್ತಮಾನದ ಒಂದು ತುಂಡನ್ನು ನಂಬಿ ಘೋಷಣೆಗಳ ಬೆನ್ನು ಹತ್ತಿತು. ಸೃಜನಶೀಲತೆಗೆ ಸಂಘಟನೆಯ ಬಲ ಬೇಕಿಲ್ಲ ಎನ್ನುವುದು ಸಂಘಟನೆ ಯೋಚಿಸಿರಲಿಲ್ಲ.

೪. ಬಂಡಾಯ ವಿಮರ್ಶೆಯಲ್ಲಿ ಕೃತಿಯ ಜೀವಂತಿಕೆಯ ಚರ್ಚೆ ನಡೆಯಲೇ ಇಲ್ಲ.

೫. ಜೀವ ಮತ್ತು ಪರಿಸರಗಳ ಕನ್ಸರ್ವೇಟಿವ್ ಮತ್ತು ಲಿಬರಲ್ ಬಲಗಳ ಸಂಘರ್ಷದ ಡಯಲೆಕ್ಟ್‌ನ ಅರಿವಿಲ್ಲದೆ ಬಂಡಾಯದ ಹಾಡು ಕಟ್ಟುತ್ತೇವೆ ಎಂದು ಹೊರಡುವ ಕವಿ ಹಾಡಿನ ಗೋರಿ ಕಟ್ಟಿರುತ್ತಾನೆ ಎನ್ನುತ್ತಾರೆ ಚಂಪಾ ಅವರು.

ಪ್ರಾರಂಭದಲ್ಲಿ ಬಂಡಾಯ ಸಾಹಿತ್ಯ ಕಲಾತ್ಮಕತೆಯನ್ನು ಅಲಕ್ಷ್ಯ ಮಾಡಿತ್ತು ಎನ್ನುವುದನ್ನು ಒಪ್ಪಿಕೊಳ್ಳುವ ಕೆ.ಶರೀಫಾರು ಬಂಡಾಯ ಸ್ಥಗಿತ ಹೊಂದುತ್ತಿರುವುದನ್ನು ಒಪ್ಪುವುದಿಲ್ಲ. ಬಂಡಾಯದ ಅಬ್ಬರ ಹೆಚ್ಚಾಗಿ ಕಾಣಿಸುತ್ತಿಲ್ಲವಾದರೂ ಅದರ ಧೋರಣೆ, ವಿಚಾರ ಅಂತರ್ಗಾಮಿಯಾಗಿ ಹರಿಯುತ್ತಿವೆ ಎನ್ನುತ್ತಾರೆ. ಸೃಜನಶೀಲತೆಯನ್ನು ಕಳೆದುಕೊಳ್ಳುತ್ತಾ ಇದೆ ಎಂಬುದಕ್ಕೆ ಘೋಷಣೆಗಳ ಮೂಲಕ ಅದು ಸೃಜನಶೀಲತೆಯನ್ನು ಕಳೆದುಕೊಂಡಿಲ್ಲ ಬದಲಾಗಿ ಎಲ್ಲ ವರ್ಗಗಳನ್ನು ಎಲ್ಲ ವರ್ಗದ ಜನತೆಯನ್ನು ತಲುಪುವಂತಹ ಸ್ಥಾನ ಪಡೆದಿದೆ ಎನ್ನುತ್ತಾರೆ.

ಬಂಜಗೆರೆ ಜಯಪ್ರಕಾಶರು 'ದಲಿತ ಸಾಹಿತ್ಯ ಬೇರೆಯೂ ಹೌದು, ಬಂಡಾಯ ಸಾಹಿತ್ಯದ ಭಾಗವೂ ಹೌದು. ಕಲಾತ್ಮಕತೆ ಕುರಿತಂತೆ, ದಲಿತರು ಮಾತ್ರ ಕಲಾತ್ಮಕವಾಗಿ ಇರ್ತಾರೆ ಅಂತ ಹೇಳಿದರೆ ಬಂಡಾಯದಲ್ಲಿ ಬೆರೆಯತೊಡಗಿದ ಇತರ ಹಿಂದುಳಿದ ಜಾತಿಗಳು, ದಲಿತರಿಗೆ ಬಹಳ ಹತ್ತಿರ ಇರಬಹುದಾದಂತಹ ಜಾತಿಗಳೂ, ಅವರು ಕಲಾತ್ಮಕವಾಗಿ ಇಲ್ಲ ಅಂತ ನಾವು ಹೇಳಿದ ಹಾಗಾಗುತ್ತದೆ' ಎನ್ನುತ್ತಾರೆ.

ಸಂಕ್ರಮಣ ಮತ್ತು ದಲಿತ ಬಂಡಾಯ ಸಾಹಿತ್ಯ: ಘದಲಿತ ಬಂಡಾಯ ಸಾಹಿತ್ಯಕ್ಕೆ ಸಂಕ್ರಮಣ ಪತ್ರಿಕೆ ನೀಡುತ್ತಿರುವ ಕೊಡುಗೆ ಅನನ್ಯವಾದುದು. ಪ್ರಾರಂಭದಲ್ಲಿ ನವ್ಯದ ಬೆಳವಣಿಗೆಗೆ ಕಾರಣವಾಗಿದ್ದ ಈ ಪತ್ರಿಕೆ ಬಂಡಾಯ ದಲಿತ ಸಾಹಿತ್ಯವಲ್ಲದೆ ಹೊಸ ಹೊಸ ಚಿಂತನೆಗಳನ್ನು ಹುಟ್ಟು ಹಾಕುವ ಕೆಲಸಗಳನ್ನು ಮಾಡುತ್ತ ಬರುತ್ತಿದೆ. ಬಂಡಾಯ ಸಾಹಿತ್ಯದ ಹಲವು ಸಣ್ಣಕತೆಗಳು, ಉದಾಹರಣೆಗೆ, ಸಾರಾ ಅಬೂಬಕರ್ ಅವರ 'ಧರ್ಮ ಬಲೆ ಬೀಸಿದಾಗ', ಚಿಕ್ಕಮರಳಿ ಬೋರೇಗೌಡರ 'ತಲೆಮಾರು', ಮೊದಲಾದವು ಬಂಡಾಯ ಸಾಹಿತ್ಯ, ಸಂಘಟನೆಗಳಿಗೆ ಸಂಬಂಧಿಸಿದ ಲೇಖನಗಳು ಹಾಗು ಬಂಡಾಯಕ್ಕೆ ಪೂರಕವಾದಂತಹ ರಾಜಕೀಯ, ಸಾಮಾಜಿಕ, ವೈಚಾರಿಕ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡ ಲೇಖನಗಳು, ಉದಾಹರಣೆಗೆ, 'ದಲಿತ ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವುಗಳು - ಬಸವರಾಜ ಸಬರದ, ಬಂಡಾಯ ಸಾಹಿತ್ಯದ ಅಸಲಿ ನಕಲಿ – ಪೋಲಂಕಿ ರಾಮಮೂರ್ತಿ, ಕನ್ನಡ ಕಾವ್ಯ ಮತ್ತು ಪ್ರತಿಭಟನೆ – ರಹಮತ್ ತರೀಕೆರೆ, ಪ್ರಗತಿಶೀಲ ನವ್ಯ ದಲಿತ ಬಂಡಾಯಗಳ ಅಂತರ್‌ಸಂಬಂಧಗಳು - ಡಾ. ಆರ್ಕೆ ಮಣಿಪಾಲ್, ಬಂಡಾಯ ದಲಿತ ಸಾಹಿತ್ಯ ಕುರಿತ ವಿಮರ್ಶಾ ಲೇಖನಗಳು - ಅರವಿಂದ ಮಾಲಗತ್ತಿ, ದೇವನೂರರ ಕುಸುಮಬಾಲೆ - ಎಸ್.ಎಸ್. ರಘುನಾಥ್, ಕಾತ ಚಿಕ್ಕಣ್ಣ ಅವರ ಮುಂಜಾವು - ಡಾ.ಹಿ.ಶಿ. ರಾಮಚಂದ್ರಗೌಡ, ಆರ್ಕೆಯವರ ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ – ಕೆ.ಎಸ್. ಭಗವಾನ್ – ಹೀಗೆ ಇನ್ನೂ ಅನೇಕ ಲೇಖನಗಳು ಸಂಕ್ರಮಣದಲ್ಲಿ ಪ್ರಕಟವಾಗಿವೆ. ದಲಿತ ಬಂಡಾಯ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳಷ್ಟೇ ಅಲ್ಲದೆ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗಳೊಳಗೊಂಡ ಹಲವು ಲೇಖನಗಳನ್ನು ಪ್ರಕಟಿಸುತ್ತ ಬಂದಿರುವ ಈ ಪತ್ರಿಕೆ ಹೊಸ ಹೊಸ ಪ್ರತಿಭೆಗಳಿಗೆ ಹೊಸ ಸಂವೇದನೆಗಳಿಗೆ ವೇದಿಕೆಯಾಗಿ ಮುಂದುವರೆಯುತ್ತ ಬರುತ್ತಿದೆ.

ಸಂಕ್ರಮಣ ಹಲವು ವಿಶೇಷಾಂಕಗಳನ್ನು ಬೆಳಕಿಗೆ ತಂದಿದೆ 'ಸಂಕ್ರಮಣ ಕಾವ್ಯ' (೧೯೭೭), 'ಬಂಡಾಯ್ ಸಾಹಿತ್ಯ ವಿಶೇಷಾಂಕ' (೧೯೭೯), 'ಲೋಹಿಯಾ ವಿಶೇಷಾಂಕ' (೧೯೮೦), 'ಅಂಬೇಡ್ಕರ್ ವಿಶೇಷಾಂಕ' (೧೯೮೧), 'ವಿಚಾರವಾದ ವಿಶೇಷಾಂಕ' (೧೯೮೨), 'ಕುವೆಂಪು ವಿಶೇಷಾಂಕ' (೧೯೯೪) ಇತ್ಯಾದಿ. ಮೇಲೆ ಉಲ್ಲೇಖಿಸಿದ ಲೇಖನಗಳಲ್ಲಿ ಕೆಲವನ್ನು ಮಾತ್ರ ಈ ಪ್ರಬಂಧದಲ್ಲಿ ವಿಚಾರ ಮಾಡಲಾಗಿದೆ.

ದಲಿತ ಬಂಡಾಯ ಸಾಹಿತ್ಯವನ್ನು 'ನವ್ಯೋತ್ತರ ಸಾಹಿತ್ಯ' ಎಂದು ಕರೆಯಬಹುದೇ ಎಂಬುದಕ್ಕೆ ಉತ್ತರವಾಗಿ ಬಸವರಾಜ್ ಸಬರದ ತಮ್ಮ ಲೇಖನವೊಂದರಲ್ಲಿ ದಲಿತ ಬಂಡಾಯದ ಸ್ವಂತ ನೆಲೆಗಳನ್ನು ಕುರಿತು ಚರ್ಚಿಸುತ್ತಾರೆ. ೧೯೭೪ರ ನಂತರದ ಸಾಹಿತ್ಯವನ್ನು ನವ್ಯೋತ್ತರ ಎಂದು ಕರೆಯದೆ ದಲಿತ ಬಂಡಾಯ ಸಾಹಿತ್ಯ ಎಂದು ಗುರುತಿಸುವುದೇ ಹೆಚ್ಚು ಸೂಕ್ತ ಎಂದಿದ್ದಾರೆ. ಅದಕ್ಕೆ ಕಾರಣ ಹೇಳುವ ಅವರು, ಎಲ್ಲ ಸಾಹಿತ್ಯ ಪ್ರಕಾರಗಳಂತೆ ದಲಿತ ಬಂಡಾಯ ಸಾಹಿತ್ಯ ಪ್ರಕಾರವು ಬೆಳೆದು ಬಂದು ತನ್ನ ಮನೋಧರ್ಮಕ್ಕೆ ಅನುಗುಣವಾಗಿ ಕೃತಿಗಳನ್ನು ಕೊಟ್ಟಿರುವುದನ್ನು ಕಾಣಬಹುದು. ಹೀಗಾಗಿ ನವ್ಯದ ನಂತರ ಬಂದ ಸಾಹಿತ್ಯ ಎಂಬ ಕಾರಣಕ್ಕಾಗಿ ನವ್ಯೋತ್ತರ ಎಂದು ಕರೆಯದೆ 'ದಲಿತ ಬಂಡಾಯ ಸಾಹಿತ್ಯ' ಎಂದು ಕರೆಯುವುದರಿಂದ ಎಲ್ಲ ಸಾಹಿತ್ಯ ಪ್ರಕಾರಗಳಂತೆ ಇದು ಒಂದು ಸಾಹಿತ್ಯ ಪ್ರಕಾರ ಎಂದು ಕರೆಸಿಕೊಳ್ಳಲು ಸಾಧ್ಯವಾಗುತ್ತದೆ. ಇಂದು ಕಾವ್ಯವನ್ನು ವಿಶ್ಲೇಷಿಸುವ ದೃಷ್ಟಿಕೋನವೂ ಬದಲಾಗಬೇಕಿದೆ. ನವೋದಯ ನವ್ಯ ಕಾವ್ಯದ ವಿಮರ್ಶೆಯ ಮಾನದಂಡಗಳನ್ನೇ ಇವತ್ತಿನ ದಲಿತ ಬಂಡಾಯ ಕಾವ್ಯಕ್ಕೂ ಅಳವಡಿಸಿ ನೋಡುವುದು ತಪ್ಪಾಗುತ್ತದೆ. ಈ ನೆಲದ ಅನಿವಾರ್ಯತೆಯಿಂದ ಹುಟ್ಟಿಕೊಂಡ ಈ ಚಳವಳಿಗಳ ಹಿನ್ನೆಲೆಯಲ್ಲಿ ಅದನ್ನು ಸೃಷ್ಟಿಸಿರುವ ಹಿಂದಿನ ಮನಸ್ಸುಗಳ ಹಿನ್ನೆಲೆಯಲ್ಲಿ ಈ ಕಾವ್ಯವನ್ನು ಮೌಲ್ಯಮಾಪನ ಮಾಡಬೇಕಾಗಿದೆ. ಇಂದಿನ ಕವಿಗಳಲ್ಲಿ ಕಾಣದ ಅಗಾಧ ಜನಪರ ಕಾಳಜಿಗಳು ಹೊಸ ಕಾವ್ಯದ ವೈಶಿಷ್ಟ್ಯಗಳಾಗಿವೆ' ಎಂದಿದ್ದಾರೆ.[೨೮]

ಅಡಿಟಿಪ್ಪಣಿಗಳು

೧. ಬರಗೂರು ರಾಮಚಂದ್ರಪ್ಪ: 'ಸಾಹಿತ್ಯ ಮತ್ತು ರಾಜಕಾರಣ', ಸಮತಾ ಪ್ರಕಾಶನ, ಬೆಂಗಳೂರು ಪುಟ ೨೨

೨. ಡಾ. ಡಿ. ಮಂಗಳಾ ಪ್ರಿಯದರ್ಶಿನಿ: ಆಧುನಿಕ ಕನ್ನಡ ಕಾವ್ಯದ ಸ್ವರೂಪ, ಪ್ರಸಾರಾಂಗ, ಬೆಂಗಳೂರು ೨೦೦೪, ಪುಟ ೬೭

೩. ಡಾ.ಜಿ.ಎಸ್. ಶಿವರುದ್ರಪ್ಪ: ಬಂಡಾಯ ಹತ್ತು ವರ್ಷ, ಸಂ: ಆರ್.ಜಿ. ಹಳ್ಳಿ ನಾಗರಾಜ್, ಅನ್ವೇಷಣ ಪ್ರಕಾಶನ, ಬೆಂಗಳೂರು, ಪುಟ ೪೬

೪. ಬರಗೂರು ರಾಮಚಂದ್ರಪ್ಪ: 'ಸಾಹಿತ್ಯ ಮತ್ತು ರಾಜಕಾರಣ', ಸಮತಾ ಪ್ರಕಾಶನ, ಬೆಂಗಳೂರು ಪುಟ ೮

೫. ಪುರುಷೋತ್ತಮ ಬಿಳಿಮಲೆ: ಬಂಡಾಯ-ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪುಟ ೨೪

೬. ಡಾ. ಡಿ. ಮಂಗಳಾ ಪ್ರಿಯದರ್ಶಿನಿ: ಆಧುನಿಕ ಕನ್ನಡ ಕಾವ್ಯದ ಸ್ವರೂಪ, ಪ್ರಸಾರಾಂಗ, ಬೆಂಗಳೂರು ೨೦೦೪, ಪುಟ ೮೭

೭. ದೇವನೂರು ಮಹಾದೇವ, ಸಂಕ್ರಮಣ ೮೭ ೮೮

೮. ಚೆ. ರಾಮಸ್ವಾಮಿ: ಬಂಡಾಯ ದಲಿತ ನವ್ಯೋತ್ತರ ಇತ್ಯಾದಿ, ಸಂಕ್ರಮಣ, ಸಂಪುಟ ೧೮, ಸಂಚಿಕೆ ೧೧, ಏಪ್ರಿಲ್ ೧೯೮೩

೯. ಸರಜೂ ಕಾಟ್ಕರ್, ಬಂಡಾಯ ಸಾಹಿತ್ಯ ಪ್ರಸ್ತಾವನೆ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ಪುಟ ೮೫

೧೦. ಚಂಪಾ ಸಂಪಾದಕೀಯ, ಸಂಕ್ರಮಣ ೮೭-೮೮)

೧೧. ಬರಗೂರು ರಾಮಚಂದ್ರಪ್ಪ: ಬಂಡಾಯ ಸಾಹಿತ್ಯದ ನೆಲೆ, ಸಂಕ್ರಮಣ ಸಾಹಿತ್ಯ ಸಂಪುಟ ೨, ಪುಟ ೬೩, ೧೯೯೩

೧೨. ಸರಜೂ ಕಾಟ್ಕರ್: ದಲಿತ ಬಂಡಾಯ ಚಳವಳಿ: ಕನ್ನಡ ಮರಾಠಿ ಸಾಹಿತ್ಯದಲ್ಲಿ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು, ಪುಟ ೧೧೧

೧೩. ಬರಗೂರು ರಾಮಚಂದ್ರಪ್ಪ: ಬಂಡಾಯ ಸಾಹಿತ್ಯದ ನೆಲೆ, ಸಂಕ್ರಮಣ ಸಾಹಿತ್ಯ ಸಂಪುಟ ೨, ಪುಟ ೬೩, ೧೯೯೩

೧೪. ಎಲ್.ಎಸ್. ಶೇಷಗಿರಿರಾವ್, ಸಂ, ಕನ್ನಡದ ಅಳಿವು ಉಳಿವು, ಪುಟ ೩೬೪

೧೫. ಬರಗೂರು ರಾಮಚಂದ್ರಪ್ಪ: ಬಂಡಾಯ ಸಾಹಿತ್ಯದ ನೆಲೆ, ಸಂಕ್ರಮಣ ೯೩ ಸಂಪುಟ ೨, ಪುಟ ೫, ೧೯೭೯

೧೬. ಲಂಕೇಶ್ ಪತ್ರಿಕೆ, ಜನವರಿ ೨೯, ೧೯೯೭

೧೭. ಚಂದ್ರಶೇಖರ ನಂಗಲಿ: ಸಂಕ್ರಮಣ, ಜೂನ್ ೧೯೯೮

೧೮. ಅದೇ

೧೯. ರಂಗಾರೆಡ್ಡಿ ಕೋಡಿರಾಂಪುರ: ಬಂಡಾಯ ಕಾವ್ಯ ಮತ್ತು ಸಮಕಾಲೀನ ಸವಾಲುಗಳು, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪುಟ ೧೨೮

೨೦. ರಂಗಾರೆಡ್ಡಿ ಕೋಡಿರಾಂಪುರ: ಬಂಡಾಯ ಕಾವ್ಯ ಮತ್ತು ಸಮಕಾಲೀನ ಸವಾಲುಗಳು, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩, ಪುಟ ೧೨೮

೨೧. ಚಂಪಾ ಸಂ. ಸಂಕ್ರಮಣ ೨೯೪

೨೨. ಬಸವರಾಜ ಸಬರದ್: ದಲಿತ-ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವು, ಸಂಕ್ರಮಣ, ಏಪ್ರಿಲ್-ಮೇ ೧೯೮೭, ಸಂಪುಟ ೨೪, ಸಂಚಿಕೆ ೪-೫

೨೩. ಅದೇ

೨೪. ಚೆ. ರಾಮಸ್ವಾಮಿ: ದಲಿತ ಬಂಡಾಯ ನವ್ಯೋತ್ತರ ಇತ್ಯಾದಿ, ಸಂಕ್ರಮಣ, ಏಪ್ರಿಲ್-ಮೇ ೧೯೮೩, ಪುಟ ೧೩೫-೧೩೬

೨೫. ಚಂದ್ರಶೇಖರ ನಂಗಲಿ: ಬಂಡಾಯ ಸಾಹಿತ್ಯ, ದಲಿತ ಸಂವೇದನೆ, ಸಮಾಜ ಬದಲಾವಣೆ, ಸಂಕ್ರಮಣ, ಜೂನ್ ೧೯೯೮

೨೬. ಪೋಲಂಕಿ ರಾಮಮೂರ್ತಿ: ದಲಿತ ಸಾಹಿತ್ಯ- ಸಿಟ್ಟಿಗೆ ಹಕ್ಕಿದೆ, ಸಂಕ್ರಮಣ ೧೮೭, ಸಂಪುಟ ೨೩, ಸಂಚಿಕೆ ೨, ೧೯೮೮

೨೭. ದಲಿತ ಬಂಡಾಯ ಸ್ಥಗಿತತೆ – ಒಂದು ಸಂವಾದ, ಸಂ: ರಾಘವೇಂದ್ರ ಪಾಟೀಲ, ಸಾಹಿತ್ಯ ಸಂವಾದ ೪೯, ಜನವರಿ–ಮಾರ್ಚ್ ೧೯೯೯, ಪುಟ ೬೭–೯೪

೨೮. ಬಸವರಾಜ ಸಬರದ: ದಲಿತ ಬಂಡಾಯ ಕಾವ್ಯಗಳಲ್ಲಿ ಜನಪರ ನಿಲುವುಗಳು, ಸಂಕ್ರಮಣ ಏಪ್ರಿಲ್ ಮೆ ೧೯೮೭

೨. ಮಹಿಳಾ ಸಾಹಿತ್ಯ ಹಾಗು ಪತ್ರಿಕೆಗಳು

ಬೇರೆ ಭಾಷೆಗಳಂತೆಯೇ ಕನ್ನಡದಲ್ಲೂ ಲೇಖಕಿಯರ ಸಂಖ್ಯೆ ಕಡಿಮೆಯೇ. ಇದಕ್ಕೆ ಕಾರಣ ನಮಗೆ ತಿಳಿದಿರುವಂತೆ ಶಿಕ್ಷಣವಿಲ್ಲದಿರುವಿಕೆ, ಸಂಪ್ರದಾಯದ ಒತ್ತಡ, ಪ್ರೋತ್ಸಾಹದ ಕೊರತೆ ಮೊದಲಾದವು. ಇಡೀ ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ 'ಬಸವಯುಗ'ವನ್ನು ಬಿಟ್ಟರೆ ಮಿಕ್ಕೆಲ್ಲ ಕಾಲದಲ್ಲಿ ಕವಯಿತ್ರಿಯರು ಕಂಡು ಬರುವರಾದರೂ ಬೆರಳೆಣಿಕೆಯಷ್ಟು ಮಾತ್ರ. ಹಾಗೆಂದೊಡನೆ ಈ ಸುದೀರ್ಘ ಅವಧಿಯಲ್ಲಿ ಮಹಿಳೆಯರು ಸಾಹಿತ್ಯವನ್ನು ರಚಿಸಲೇ ಇಲ್ಲವೆಂದಲ್ಲ. ಆದರೆ ಈ ಕುರಿತ ಸರಿಯಾದ ಮಾಹಿತಿಯ ಕೊರತೆ ಇದೆ.

೧೯೧೫ರಷ್ಟು ಹಿಂದೆಯೇ ರಾಚಮ್ಮ ಎಂಬಾಕೆ 'ಅಕ್ಕಮಹಾದೇವಿ ಕದಳಿ ಪೊಕ್ಕ ಹಾಡು' ಎಂಬ ಮುನ್ನೂರು ನುಡಿಗಳ ಹಾಡುಗಬ್ಬ ರಚಿಸಿದ್ದಾಳೆ. ಇದು 'ಶಿವಾನುಭವ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ೨೦ನೆಯ ಶತಮಾನದ ಮೊದಲ ದಶಕಗಳಲ್ಲಿ ಕಾವ್ಯ ಭಕ್ತಿಗೀತೆಗಳು ಮಾತ್ರವಲ್ಲಡೆ ಕಥೆ ಕಾದಂಬರಿ ವಿಮರ್ಶೆ ನಾಟಕ ಪ್ರಬಂಧಗಳನ್ನು ಬರೆಯುತ್ತಿದ್ದ ಅನೇಕ ಮಹಿಳೆಯರನ್ನು ಕಾಣಬಹುದು. ಇವರೆಲ್ಲ ಮುಂದೆ ಬರವಣಿಗೆ ನಿಲ್ಲಿಸಿದ್ದೇಕೆ? ಪತ್ರಿಕೆಗಳಲ್ಲಿ ಪ್ರಕಟವಾದ ಲೇಖನಗಳಲ್ಲದೆ ಮತ್ತೇನನ್ನಾದರೂ ಬರೆದಿದ್ದಾರೆಯೇ ಎಂಬ ಪ್ರಶ್ನೆಗಳಿಗೆ ಸೂಕ್ತ ಮಾಹಿತಿ ಲಭ್ಯವಿರುವುದಿಲ್ಲ. ಉದಾಹರಣೆಗೆ, ೩೦ರ ದಶಕದ ನಂದಿನಿ ಪತ್ರಿಕೆಯಲ್ಲಿ ಅನೇಕ ಕವಯತ್ರಿಯರ ಕಾವ್ಯಗಳು ಪ್ರಕಟವಾಗಿವೆ. 'ಮಲ್ಲಿಗೆ' ಕಾವ್ಯನಾಮದ ತುಳಸೀ ಬಾಯಿ ಸುಬ್ಬರಾವ್, ಮಗ್ಗಮ್ಮ ಎಂಬ ಕವಯಿತ್ರಿಯರು ಪ್ರಮುಖರು. ಮಗ್ಗಮ್ಮನವರ ಕಾವ್ಯದ ಹೆಸರು 'ಶ್ರಿರಂಗ ಮಹಾತ್ಮೆ'. ತುಳಸೀಬಾಯಿಯವರ ಹಾಡುಗಬ್ಬವೊಂದು ೧೯೧೯ರಲ್ಲಿ 'ನಂದಿನಿ' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. 'ಸಂಸಾರದಲ್ಲಿ ಸ್ತ್ರೀಯರ ಪಾತ್ರ' ಇದು ಗೋವಿನ ಹಾಡಿನ ಮಟ್ಟಿನಲ್ಲಿ ರಚಿತವಾಗಿದೆ.[೧]

'ಕನ್ನಡ ನುಡಿ' ಪತ್ರಿಕೆಯಲ್ಲಿ ಅನೇಕ ಲೇಖಕಿಯರ ಬರಹಗಳನ್ನು ಕಾಣಬಹುದಾಗಿದೆ. 'ಕನ್ನಡ ನುಡಿ', ೧೯೪೫ರ ಸಂಚಿಕೆಯೊಂದರಲ್ಲಿ ಕೃಷ್ಣವೇಣಿ ಬಾಯಿ ಎನ್ನುವ ಲೇಖಕಿಯ ಮರಣದ ಸುದ್ದಿ ಪ್ರಕಟವಾಗಿದೆ "ಶ್ರಿಮತಿ ಕೃಷ್ಣವೇಣಿಯಮ್ಮ ಇದೇ ಅಕ್ಟೋಬರ್ ೩ನೆಯ ತಾರೀಖಿನಂದು ತಮ್ಮ ೨೯ನೆ ವಯಸ್ಸಿನಲ್ಲಿ ವಿಧಿವಶರಾದರೆಂದು ತಿಳಿಸಲು ವ್ಯಸನವಾಗುತ್ತದೆ. ಶ್ರಿಮತಿಯವರು 'ಕೃಷ್ಣ', 'ಕೆ', 'ವಿ' ಮುಂತಾದ ಗುಪ್ತನಾಮಗಳಿಂದ ಹಲವು ಉತ್ತಮ ಕನ್ನಡ ಗೀತೆಗಳನ್ನು ಬರೆದು 'ಅಂತರಗಂಗ', 'ಜೀವನ'

ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. ೩೪ನೆಯ ಸಂಚಿಕೆಯಲ್ಲಿ ಶ್ರೀಮತಿ ಕೃಷ್ಣವೇಣಿ ಎನ್ನುವವರು 'ಸ್ತ್ರೀಯರು- ಸೌಂದರ್ಯ ಪೋಷಣೆ' ಎನ್ನುವ ಲೇಖನ ಬರೆದಿದ್ದಾರೆ. ಈ ಇಬ್ಬರೂ ಬೇರೆ ಬೇರೆಯವರೋ ಅಥವ ಕೃಷ್ಣವೇಣಿಬಾಯಿಯವರೇ ಹಳೆಯ ಲೇಖನವನ್ನೇ ಮತ್ತೆ ಪ್ರಕಟಿಸಿರುವರೋ ತಿಳಿಯುತ್ತಿಲ್ಲ. ಹೀಗೆಯೇ ಉಷಾಮೂರ್ತಿ, ಎಂ.ಕೆ. ಉಷಾರ ಕವನಗಳೂ 'ನುಡಿ'ಯಲ್ಲಿ ಪ್ರಕಟವಾಗಿವೆ.

ಶ್ರೀಮತಿ ಸುಶೀಲಮ್ಮನವರು ಮಹಿಳಾ ಸಾಹಿತ್ಯದ ಕುರಿತು ಹಲವು ಲೇಖನಗಳನ್ನು 'ಕನ್ನಡ ನುಡಿ'ಯಲ್ಲಿ ಪ್ರಕಟಿಸಿದ್ದಾರೆ,

೧. ಕೃಷ್ಣದೇವರಾಯನ ಕಾಲದ ಕವಯಿತ್ರಿಯರು (ಸಂಪುಟ ೧, ಸಂಚಿಕೆ ೧೪, ಆಗಸ್ಟ್ ೧೯೩೯

೨. ಸೊಲ್ಲಾಪುರದ ಕನ್ನಡ ಕುಲಪಾಲಿಕೆಯರು (ಸಂಚಿಕೆ ೯, ಸಂಪುಟ ೭, ೧೯೪೬)

೩. ಕನ್ನಡ ಮಹಿಳೆಯರ ಪ್ರಗತಿ (ವಿಶೇಷ ಸಂಚಿಕೆ ಡಿಸೆಂಬರ್ ೧೯೪೭)

ಮಹಿಳಾ ಸಾಹಿತ್ಯ ಕುರಿತಂತೆ 'ಕನ್ನಡ ನುಡಿ'ಯಲ್ಲಿ ಬರೆದ ಇತರ ಲೇಖಕಿಯರು ಹಾಗು ಅವರ ಲೇಖನಗಳ ಪಟ್ಟಿ ಹೀಗಿದೆ:

೧. ಸ್ತ್ರೀಯರೂ ಸ್ವಾತಂತ್ರ್ಯವೂ – ಎಚ್.ವಿ. ಸಾವಿತ್ರಮ್ಮ (೧೦–೨೫ ಏಪ್ರಿಲ್ ೧೯೪೮)
೨. ಲೇಖಕಿಯರ ಪ್ರಬಂಧ ಮತ್ತು ವಿಮರ್ಶಾಗ್ರಂಥ – ಎಚ್.ವಿ. ಸಾವಿತ್ರಮ್ಮ (೨೪ ಜೂನ್ ೧೯೭೧)
೩. ಇಂದಿನ ಕನ್ನಡ ಕಾವ್ಯಗಳ ರೂಪುರೇಷೆಗಳು – ಪದ್ಮಾ ಶೆಣೈ (೧೦ ಜುಲೈ ೧೯೫೪)
೪. ಸ್ವರ್ಗದ ಬಾಗಿಲು – ಪದ್ಮಾ ಶೆಣೈ (೧೫ ಏಪ್ರಿಲ್ ೧೯೫೨)
೫. ಇಂದಿನ ಲೇಖಕಿಯರ ಸಮಸ್ಯೆಗಳು – ಪದ್ಮಾ ಶೆಣೈ (ಜನವರಿ ೧, ೧೯೭೬)
೬. ಸಮಾಜ ಸೇವೆಯಲ್ಲಿ ಭಾರತೀಯ ಮಹಿಳೆಯ ಪಾತ್ರ – ಟಿ. ಸುನಂದಮ್ಮ (೫ ಮೇ ೧೯೫೧)
೭. ಸ್ತ್ರೀಜೀವನ – ವಿಜಯಾದೇವೀ ಹಿರೇಮಠ (೭ ಜುಲೈ ೧೯೫೧)
೮. ವಚನಕಾರರ ಧರ್ಮ ನೀತಿ ಹಾಗು ರಾಮಾಶ್ವಮೇಧದ ರಸಿಕ ದಂಪತಿಗಳು – ಅಂಬುಜಾ ಜಿ ಕೃಷ್ಣ. (ಅಕ್ಟೋಬರ್ ೧೯೫೫)
೯. ಆಶೆಯ ಕನಸು – ಶಾರದ ಕೆ. (ಜುಲೈ ೧೯೪೯)
೧೦.ಒಂದು ಭವಿತವ್ಯದ ಕಥೆ – ಆರ್. ಕಾಮಾಕ್ಷಮ್ಮ (ಜುಲೈ ೧೯೪೯)

ಕನ್ನಡ ಭಾಷೆ ಸಂಸ್ಕೃತಿ ಲಿಪಿ ಹಾಗು ಸಾಹಿತ್ಯದ ಇತಿಹಾಸ ಕುರಿತಂತೆ ಮಹಿಳಾ ಲೇಖಕಿಯರು ಬರೆದಿರುವ ಲೇಖನಗಳನ್ನು 'ಕನ್ನಡ ನುಡಿ'ಯಲ್ಲಿ ಕಾಣಬಹುದು. ಉದಾಹರಣೆಗೆ,

೧. ಭಾಷೆ ಎಂದರೇನು? – ಉಷಾ ಮೂರ್ತಿ (ಏಪ್ರಿಲ್ ೧೯೭೩)
೨. ಬರಹದ ಪ್ರಾಚೀನತೆ – ಉಷಾಮೂರ್ತಿ (ಏಪ್ರಿಲ್ ೧೯೭೩)
೩. ಕನ್ನಡ ಸಾಹಿತ್ಯದ ಪಕ್ಷಿನೋಟ – ಸಿಂಗಮ್ಮ ಎಂ.ವಿ. (ಮೇ ೧೯೬೭)
೪. ಕನ್ನಡನಾಡಿನ ಭವ್ಯ ಸಂಸ್ಕೃತಿ – ಎನ್.ಮೀರಾ (ಆಗಸ್ಟ್ ೧೯೬೩)

ಅಲ್ಲದೆ ಶ್ರೀಮತಿ ಸರಸ್ವತಿ ಅನಂತರಾಮಯ್ಯನವರು 'ಪರ್ವತವಾಣಿಯವರ ಕೃತಿಗಳು' ಹೆಸರಿನಲ್ಲಿ ವಿಮರ್ಶಾ ಲೇಖನವೊಂದನ್ನು ಬರೆದಿದ್ದಾರೆ.[5] ಇದರಲ್ಲಿ ನಾಡಿನ ಖ್ಯಾತ ನಾಟಕಕಾರರಾದ ಪರ್ವತವಾಣಿಯವರ ಮೀನಾ ಮದುವೆ ಉಂಡಾಡಿ ಗುಂಡ, ರಣಹದ್ದು ನಾಟಕಗಳ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

ಸ್ತ್ರೀವಾದ ಲಿಂಗ ಸಮಾನತೆಯ ಮೂಲ ಉದ್ದೇಶದಿಂದ ಆಧುನಿಕ ಯುಗದಲ್ಲಿ ರೂಪುತಳೆಯಿತು. ದಲಿತ ತನ್ನನ್ನು ಶೋಷಿಸುವ ಒಡೆಯನಿಗೆ ವಿರೋಧ ವ್ಯಕ್ತಪಡಿಸಿ ಬಂಡೆದ್ದರೆ ಹೆಣ್ಣು ತನ್ನನ್ನು, ತನ್ನತನವನ್ನು ಶೋಷಿಸುವ ಪುರುಷ ಆಕ್ರಮಣಗಳ ವಿರುದ್ಧ ಬಂಡೇಳುತ್ತಾಳೆ. ಲಿಂಗ ಸಮಾನತೆಯ ಉದ್ದೇಶ ಹೆಣ್ಣನ್ನು ಒಬ್ಬ ಸಂಗಾತಿ ಎಂದು ಭಾವಿಸಬೇಕೆನ್ನುವ ಹಕ್ಕೊತ್ತಾಯ ಎನ್ನಬಹುದು. ಮಾರ್ಕ್ಸ್‌ವಾದದಿಂದಾಗಿ ದುಡಿಯುವ ಜನರಲ್ಲಿ ಹೇಗೆ ಎಚ್ಚರ ಮೂಡಿತೋ ವಿದ್ಯಾಭ್ಯಾಸದ ಪ್ರಭಾವದಿಂದಾಗಿ ಮಹಿಳೆಯರಲ್ಲಿ ಹೊಸ ಎಚ್ಚರ ಮೂಡತೊಡಗಿತು. ಗಂಡಿನ ದಬ್ಬಾಳಿಕೆಯ ವಿರುದ್ಧ ಮೊತ್ತ ಮೊದಲ ಬಾರಿಗೆ ಪ್ರತಿಭಟಿಸಿದ ಅಕ್ಕಮಹಾದೇವಿಯ ವಚನಗಳೇ ಕನ್ನಡ ಸಾಹಿತ್ಯ ಪರಂಪರೆಯ ಮೊದಲ ಸ್ತ್ರೀವಾದದ ಕೃತಿಯಾಗಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೊದಲಿನಿಂದಲೂ ಮಹಿಳೆಯರು ಸಾಹಿತ್ಯಸೃಷ್ಟಿಯಲ್ಲಿ ತೊಡಗಿದ್ದರೂ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ನವೋದಯ ಸಂದರ್ಭದಲ್ಲಿ ನಂಜನಗೂಡು ತಿರುಮಲಾಂಬ, ಆರ್. ಕಲ್ಯಾಣಮ್ಮ, ಗಿರಿಬಾಲೆ, ಬೆಳಗೆರೆ ಜಾನಕಮ್ಮ ಮುಂತಾದವರನ್ನು ಕಾಣಬಹುದಾಗಿದೆ. ಕೊಡಗಿನ ಗೌರಮ್ಮ, ಎಂ.ಕೆ. ಇಂದಿರಾ, ತ್ರಿವೇಣಿ, ಅನುಪಮಾ ನಿರಂಜನರಂಥ ಬರಹಗಾರ್ತಿಯರು ನಿರಂತರವಾಗಿ ಬರೆಯುತ್ತ ಬಂದಿರುವುದನ್ನು ಕಾಣಬಹುದು. ಅದೇ ನವ್ಯ ಸಂದರ್ಭದಲ್ಲಿ ಸ್ತ್ರೀಯರ ದನಿ ಸಾಹಿತ್ಯದಲ್ಲಿ ಸಂಪೂರ್ಣ ಶೂನ್ಯ ಎನ್ನಬಹುದು.[6]

ಆದರೆ ಬಂಡಾಯ ಸಾಹಿತ್ಯ ಚಳವಳಿಯಲ್ಲಿ ಮಹಿಳೆಯರ ಬರವಣಿಗೆಯನ್ನು ಕಾಣಬಹುದು. ಅಲ್ಲದೆ ಸ್ತ್ರೀವಾದಕ್ಕೆ ಒಂದು ಸೈದ್ಧಾಂತಿಕ ನೆಲೆಗಟ್ಟು ರೂಪಿತವಾದ್ದರಿಂದ ಬರಹಕ್ಕಿದ್ದ ಬಿಕ್ಕಟ್ಟುಗಳು ಸಡಿಲವಾಗಿ ತನಗನಿಸಿದ ಅನುಭವವನ್ನು ಅಭಿವ್ಯಕ್ತಿಸಲು ಹೆಣ್ಣು ಸಮರ್ಥಳಾದಳು. ಜೊತೆಗೆ ತನಗಾಗುತ್ತಿರುವ ಅನ್ಯಾಯವನ್ನು ಖಂಡಿಸುವ ದಿಟ್ಟತನ ತೋರಿದಳು. ಇದರ ಪರಿಣಾಮ ಅನುಭವಕ್ಕೆ ತಕ್ಕ ಭಾಷೆ, ಭಾವಕ್ಕೆ ಬೇಕಾದ ಅಭಿವ್ಯಕ್ತಿ ಸಾಧ್ಯವಾದದ್ದರಿಂದ ಸಾಹಿತ್ಯಕ್ಕೆ ನಾವೀನ್ಯತೆಯ ಮುಖ ಒದಗಿತು. ಈ ನಿಲುವನ್ನೇ ಮುಖ್ಯವಾಗಿ ಇಟ್ಟುಕೊಂಡು ಬರೆದವರಲ್ಲಿ ಡಾ.ವಿಜಯಾದಬ್ಬೆ, ಅನುಪಮಾ ನಿರಂಜನ, ವೀಣಾ ಶಾಂತೇಶ್ವರ, ಪ್ರತಿಭಾ ನಂದಕುಮಾರ್, ಉಷಾ, ಮುಕ್ತಾಯಕ್ಕ, ಶಶಿಕಲಾ ವೀರಯ್ಯಸ್ವಾಮಿ, ಬಿ.ಟಿ. ಲಲಿತಾ ನಾಯಕ್, ಮಾಲತಿ ಪಟ್ಟಣಶೆಟ್ಟಿ, ವೈದೇಹಿ, ಬಿ.ಟಿ. ಜಾಹ್ನವಿ, ಎಂ.ಎಸ್. ವೇದಾ ಮುಂತಾದವರು ಮುಖ್ಯರಾದವರು.

> **'ಸನ್ಮಾರ್ಗದರ್ಶಿನಿ'**ಯ ಪ್ರಥಮ ಸಂಪಾದಕೀಯದಲ್ಲಿ ತಿರುಮಲಾಂಬಾ ಅವರು "ಸನ್ಮಾರ್ಗದರ್ಶಿನಿಯು ವಿದ್ಯಾರ್ಥಿಗಳಾಗಿರುವ ಬಾಲಿಕಾ ಬಾಲಕರಿಗೆ ಅವಲೋಕನೀಯವಾಗಬಹುದು ಎಂದು ಭಾವಿಸಿ ಪ್ರಕಟವಾಗುತ್ತಿದೆ. ಅಡಿಗಡಿಗೆ ಕಸ ಕಡ್ಡಿಗಳನ್ನು ತೆಗೆಯದೆ ಸರಿಯಾದ ನೀರು ಗೊಬ್ಬರ ಹಾಕದೆ ಬಿಟ್ಟರೆ ಪೈರು ಸರಿಯಾಗಿ ಬೆಳೆಯುವುದು ಹೇಗೆ ಕಷ್ಟವೋ ಬಾಲಕರ ಸ್ಥಿತಿಯೂ ಹಾಗೆಯೇ. ಸದುಪದೇಶ, ಸುಶಿಕ್ಷಣ, ಸತ್ಸಹವಾಸಗಳಿಂದ ಕಾಪಾಡದಿದ್ದರೆ ವಕ್ರಪಥಕ್ಕೆ ಬಿದ್ದು ಕೈ ಮೀರಿ ಹೋಗಬಹುದು ಎಂಬುದಕ್ಕೆ ಅಲ್ಲಿಗಲ್ಲಿಗೆ ಅನೇಕ ದೃಷ್ಟಾಂತಗಳು ದೊರೆಯುತ್ತವೆ.

ಆದುದರಿಂದ ಸದ್ಯಕ್ಕೆ ಸನ್ಮಾರ್ಗದರ್ಶಿಯಲ್ಲಿ ಸ್ವದೇಶಾಭಿಮಾನ, ದೇಶಭಕ್ತರ ಅನುಕರಣ ಕ್ರಮ, ಭಾಷಾಸೇವೆ, ಸದ್ದರ್ಶನ ಇತ್ಯಾದಿ ವಿಷಯಗಳನ್ನು ಪ್ರತಿಪಾದಿಸುತ್ತಾ ಬರುವೆವಲ್ಲದೆ ಸರಿಯಾದ ಶಬ್ದಗಳ ಅರ್ಥವನ್ನು ಗ್ರಹಿಸಲಾರದ ಬಾಲಕರಿಗೆ ರಾಜಕೀಯ ವಿಚಾರ ಬೋಧೆಯನ್ನು ಕೊಡುವುದು ನಮ್ಮ ಈಗಿನ ಕರ್ತವ್ಯ"

ಎಂದು ಹೇಳಿ ಪತ್ರಿಕೆಯ ಉದ್ದೆಶವನ್ನು ಸ್ಪಷ್ಟ ಪಡಿಸಿದ್ದಾರೆ.[೪]

ಈಗ ಕೆಲವು ಮಹಿಳಾ ಪತ್ರಿಕೆಗಳ ಸಾಧನೆ, ಸಾಂಸ್ಕೃತಿಕ ಕೊಡುಗೆಗಳನ್ನು ಪರಿಶೀಲಿಸಬಹುದು.

ಸರಸ್ವತಿ: ಸ್ತ್ರೀ ಸುಧಾರಣೆಯ ಕಡೆಗೆ ಕಣ್ಣುರಿಸಿಕೊಂಡು ಹೊರಟ ಮತ್ತೊಂದು ಮಾಸಪತ್ರಿಕೆ ಇದಾಗಿದೆ. ೧೯೨೧ರಲ್ಲಿ ಆರ್. ಕಲ್ಯಾಣಮ್ಮನವರ ಸಂಪಾದಕತ್ವದ ಈ ಪತ್ರಿಕೆ ಮಹಿಳೆಯರ ಮೇಲೆ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯಗಳ ವಿರೋಧ ಧ್ವನಿಯೆತ್ತಿತು.[೫]

ಈ ಪತ್ರಿಕೆ ಶಿಕ್ಷಣದ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಪ್ರಧಾನವಾಗಿ ಕೈಗೆತ್ತಿಕೊಂಡಿತು. 'ನಮ್ಮ ಮಾತು' ಸಂಪಾದಕೀಯದ ಮೂಲಕ ಸ್ತ್ರೀ ಸಂಘಟನೆ, ಮಹಿಳಾ ಕಲ್ಯಾಣಗಳ ಕಡೆ ಹೆಚ್ಚು ಗಮನ ನೀಡಿದರು. ಇದರ ಪ್ರಸಾರ ಸಂಖ್ಯೆ ಮುನ್ನೂರರಷ್ಟಿದ್ದು ಪ್ರತಿ ಆವೃತ್ತಿಗೆ ಮೂವತ್ತು ರೂಪಾಯಿಗಳಷ್ಟುಖರ್ಚಾಗುತ್ತಿತ್ತು ಎಂದು ತಿಳಿದು ಬರುತ್ತದೆ. ಆ ಕಾಲಕ್ಕೆ ಇಷ್ಟು ಹಣ ಕೂಡಿಸುವುದೂ ದುಸ್ತರದ ಕೆಲಸವಾಗಿತ್ತು ಎಂದು ಪತ್ರಿಕೆಗೆ ಸಹಕಾರ ನೀಡುತ್ತಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ತಮ್ಮ ನೆನಪಿನ ಬರಹದಲ್ಲಿ ಹೇಳಿದ್ದಾರೆ. 'ಭಾರತೀಯ ಮಹಿಳೆಯರ ಇಹಪರ ವಿಜಯಾಭ್ಯುದಯಗಳನ್ನು ಬೋಧಿಸತಕ್ಕ ಲೇಖನಗಳಿಂದ ಒಡಗೂಡಿದ ಸಚಿತ್ರ ಪತ್ರಿಕೆ'ಯಾಗಿ ೧೯೧೭ರ ಅಕ್ಟೋಬರಿನಲ್ಲಿಯೇ ಬಂದ ಈ ಪತ್ರಿಕೆ ಹಣದ ಅಡಚಣೆಯಿಂದ ನಿಂತು ಬಳಿಕ ೧೯೨೧ರಲ್ಲಿ ಮತ್ತೆ ಆರಂಭವಾಯಿತು. ಮುಂದೆ ಸತತವಾಗಿ ನಲವತ್ತಮೂರು ವರ್ಷಗಳ ಕಾಲ, ಅಂದರೆ ೧೯೬೪ರ ವರೆಗೆ ಇದು ಮುಂದುವರೆಯಿತು. ಈ ಪತ್ರಿಕೆಯಲ್ಲಿ 'ಮಕ್ಕಳ ಬಾವುಟ ಎಂಬ ಹೆಸರಿನ ಪ್ರತ್ಯೇಕ ಅಂಕಣ ೧೯೩೯ರಲ್ಲಿ ಪ್ರಾರಂಭವಾಯಿತು. ಮುಂದೆ ಇದಕ್ಕೆ ಚಿ.ಉದಯಶಂಕರ್ ಸಂಪಾದಕರಾದರು. ಅಲ್ಲದೆ 'ಉತ್ತರ ಹೇಳು ಕಂದಮ್ಮ' ವಿಭಾಗ ಕೂಡ ಇದರಲ್ಲಿ ಪ್ರಕಟವಾಗುತ್ತಿತ್ತು.

ಇಲ್ಲಿ ಪ್ರಕಟವಾಗುತ್ತಿದ್ದ ಮಕ್ಕಳ ಸಾಹಿತ್ಯಕ್ಕೆ ಒಂದು ಮಾದರಿ:

ನಮ್ಮ ತಾತ (ಕವನ)

ಕೈಯಲ್ಲೊಂದು ಕಟ್ಟಿಗೆ ಹಿಡಿದು
ಬರುತಿಹ ನೋಡು ನಮ್ಮ ತಾತ
ಕಾಲಿನ ಸಂದಿ ತೂರಿತು ಈಗ
ಅನೋಡು ಓತಿ ಕೇತ
ಹೆದರುತ ಎಗರಿ ಮುಂದಕೆ ನಡೆದು
ಬರುತಿಹ ನೋಡು ನಮ್ ತಾತ
ತಿವಿಯಲು ಬಂದ ಎಮ್ಮೆ ಕೋಣಕೆ
ಲಾತವ ಕೊಡುತಿಹ ನಮ್ ತಾತ
ದಟ್ಟಿಯನುಟ್ಟು ಶಾಲನು ಹೊದೆದು
ಬರುತಿಹ ನೋಡು ನಮ್ ತಾತ

– ಚಿ. ಉದಯ ಶಂಕರ್

'ಸರಸ್ವತಿ' ಪತ್ರಿಕೆ ಬರೆಯುತ್ತಿದ್ದವರಲ್ಲಿ ಜೆ.ಪಿ.ರಾಜರತ್ನಂ, ಬಿ.ಶ್ರೀ.ಪಾಂಡುರಂಗರಾಯರು, ಪರಿಮಳ, ಟಿ.ಎಂ.ಆರ್. ಸ್ವಾಮಿ, ಹೊಯ್ಸಳ ಪ್ರಮುಖರು.[೬]

ಅನೇಕ ವಿಶೇಷ ಸಂಚಿಕೆಗಳನ್ನು ಈ ಪತ್ರಿಕೆ ಪ್ರಕಟಿಸಿದ್ದು ಅನೇಕ ಹೊಸ ಲೇಖಕಿಯರು ಮತ್ತು ಪತ್ರಕರ್ತೆಯರನ್ನು ರೂಪಿಸಿದೆ. ತಿರುಮಲಾಂಬ ಹಾಗು ಕಲ್ಯಾಣಮ್ಮನವರ ಹಿನ್ನೆಲೆ ಒಂದೇ ಇದ್ದರೂ ಸಹ ಅವರುಗಳು ಬೆಳೆದ ಪರಿಸರದ ವಿಭಿನ್ನತೆಯಿಂದ ಹಾಗು ಅವರಿಬ್ಬರ ಕಾಲಮಾನಗಳಲ್ಲಿದ್ದ ವ್ಯತ್ಯಾಸಗಳಿಂದಾಗಿ ಕಲ್ಯಾಣಮ್ಮನವರ ಧೋರಣೆ ಹೆಚ್ಚು ಉದಾರ ಶೀಲವಾದುದು. ತಿರುಮಲಾಂಬ ಅವರ ಕಾಲದಲ್ಲಿ ವಿಧವೆಯರಿಗೆ ಕೇಶಮುಂಡನ ಮಾಡಿಸಿ, ವಿರೂಪಗೊಳಿಸಿ ಮನೆಯ ಕೆಲಸಗಳಿಗೆ ಸೀಮಿತಗೊಳಿಸುವ ಕಠೋರ ಪರಿಸ್ಥಿತಿ ಇದ್ದುದರಿಂದ ಇವುಗಳನ್ನು ತಪ್ಪಿಸುವುದು ಹಾಗು ಅದಕ್ಕೋಸ್ಕರ ಮಹಿಳೆಯರಿಗೆ ವಿದ್ಯಾಭ್ಯಾಸ ಇರಬೇಕು, ಮಹಿಳೆ ಸ್ವಾವಲಂಬಿಯಾಗಬೇಕು ಎಂಬುದು ಅವರ ಚಿಂತನೆಯಾಗಿತ್ತು. ಅವರು ಈ ವಿಷಯಗಳನ್ನೇ ತಮ್ಮ ಪತ್ರಿಕೆಯಲ್ಲಿ ಹಾಗು ಬರವಣಿಗೆಗಳಲ್ಲಿ ಪ್ರತಿಪಾದಿಸಿರುವುದನ್ನು ಕಾಣಬಹುದಾಗಿದೆ. ಆದರೆ ಕಲ್ಯಾಣಮ್ಮ ತಮ್ಮ ಬರವಣಿಗೆಗಳಲ್ಲಿ ಈ ವಿಷಯಗಳ ಜೊತೆಗೆ ವಿಧವಾ ವಿವಾಹದಂತಹ ಅಂದಿನ ಕಾಲಕ್ಕೆ ತೀವ್ರ ಕ್ರಾಂತಿಕಾರಿ ಎನ್ನಬಹುದಾದ ವಿಚಾರಗಳನ್ನು ಚರ್ಚಿಸಿದ್ದಾರೆ. ಅವರು ಇದಕ್ಕೆ ಪುಷ್ಟಿ ಕೊಡುವಂತೆ ಸಾಕಷ್ಟು ಶಾಸ್ತ್ರಾಧಾರಗಳನ್ನೂ ತಮ್ಮ ಲೇಖನಗಳಲ್ಲಿ ನೀಡುತ್ತಿದ್ದರು.

ವೀರಮಾತೆ: ಈ ಪತ್ರಿಕೆ ಧಾರವಾಡದ 'ವನಿತಾ ಸೇವಾ ಸಮಾಜ'ದಿಂದ ೧೯೫೭ರಲ್ಲಿ ಪ್ರಾರಂಭವಾಯಿತು. ಇದೊಂದು ಮಹಿಳಾ ಮಾಸಪತ್ರಿಕೆಯಾಗಿದ್ದು 'ಹೆಣ್ಣುಮಕ್ಕಳ ವಿಕಾಸಕ್ಕಾಗಿ ಮೀಸಲಿಟ್ಟ ಪತ್ರಿಕೆ' ಎಂಬ ಉಪಶೀರ್ಷಿಕೆ ಹೊಂದಿತ್ತು. ಆರಂಭದ ದಿನಗಳಲ್ಲಿ ಹಿರಿಯ ಮಹಿಳಾ ರಾಜಕಾರಿಣಿ, ಮಾಜಿ ಕೇಂದ್ರ ಸಚಿವೆ ಶ್ರೀಮತಿ ಸರೋಜಿನಿ ಮಹಿಷಿ ಸಂಪಾದಕಿಯಾಗಿದ್ದರು. ಮಹಿಳೆಯರಿಗೆ ಸಂಬಂಧ ಪಟ್ಟ ಕಾನೂನು ಲೇಖನಗಳು, ಕತೆ, ಆರೋಗ್ಯ, ನಗೆಹನಿ, ಸಮಾಜದ ಸುದ್ದಿಗಳನ್ನು ಒಳಗೊಂಡಿದ್ದ ಈ ಪತ್ರಿಕೆಗೆ ವೆಂಕಮ್ಮ ಕೊಯಮತ್ತೂರ್ ಸಹ ಸಂಪಾದಕಿ ಆಗಿದ್ದರು. ಸುಶಿಕ್ಷಿತ ಯುವಕ, ಯುವತಿಯರು ಹಾಗು ಸಂಘಟನೆ, ಸ್ತ್ರೀ ಹಿಂಸೆ, ಸ್ತ್ರೀಜಾತಕ, ಮಹಿಳಾ ದಿನಾಚರಣೆಯ ವರದಿ ಮುಂತಾದ ಲೇಖನಗಳು ಈ ಪತ್ರಿಕೆಯ ಆಶಯ ತಿಳಿಸುತ್ತವೆ. ಈ ಪತ್ರಿಕೆ ಸರಿಸುಮಾರು ಹದಿನೆಂಟು ವರ್ಷಗಳ ಕಾಲ ನಡೆದಿರುವುದು ಕಂಡು ಬರುತ್ತದೆ.

ಸೋದರಿ: ವಿಧಾನ ಪರಿಷತ್ತಿನ ಉಪಸಭಾಪತಿಯಾಗಿದ್ದ ಎಂ.ಆರ್.ಲಕ್ಷ್ಮಮ್ಮನವರು ಈ ಪತ್ರಿಕೆಯನ್ನು ೧೯೫೦ರಲ್ಲಿ ಪ್ರಾರಂಭಿಸಿದರು. ಇದೊಂದು ವಾರಪತ್ರಿಕೆಯಾಗಿತ್ತು. ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳ ಆಗುಹೋಗುಗಳ ಬಗ್ಗೆ ಮಹಿಳೆಯರಿಗೆ ತಿಳಿಹೇಳಬೇಕು ಎಂಬುದೇ ಈ ಪತ್ರಿಕೆಯ ಉದ್ದೇಶವಾಗಿತ್ತು. ಸಣ್ಣಕತೆ, ಹರಟೆ, ಲೇಖನಗಳು, ಸಮಾಜದ ಕುಂದು ಕೊರತೆಗಳನ್ನು ತೋರಿಸುವ ಪತ್ರಗಳು, ಸಮಾಜ ಕಲ್ಯಾಣ ಮಂಡಲಿ ಹಾಗು ಇತರ ಮಹಿಳ ಸಂಘ ಸಂಸ್ಥೆಗಳ ಚಟುವಟಿಕೆಗಳು ಹೀಗೆ ಹಲವು ವಿಷಯಗಳು ಈ ಪತ್ರಿಕೆಯ ಸಾಮಗ್ರಿಗಳಾಗಿದ್ದವು. ೧೯೫೫ರಲ್ಲಿ ಈ ಪತ್ರಿಕೆಯನ್ನು ಮಾಸಪತ್ರಿಕೆಯನ್ನಾಗಿ ಮಾರ್ಪಡಿಸಲಾಯಿತು. ಇದರ ಪ್ರಸಾರ ಸಂಖ್ಯೆ ಸುಮಾರು ಎರಡು ಸಾವಿರದಷ್ಟಿತ್ತು. ೧೯೬೧ರಲ್ಲಿ ಈ ಪತ್ರಿಕೆ ನಾನಾ ಕಾರಣಗಳಿಂದ ನಿಂತು ಹೋಯಿತು.

ಸುಪ್ರಭಾತ: 'ಗಿರಿಬಾಲೆ' ಎಂಬ ಅಂಕಿತ ನಾಮದಿಂದ ಕತೆ, ಕವನ, ನಾಟಕಗಳನ್ನು ಬರೆಯುತ್ತಿದ್ದ ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆಯವರು ಈ ಪತ್ರಿಕೆಯನ್ನು ೧೯೫೭ರಲ್ಲಿ ಪ್ರಾರಂಭಿಸಿದರು. 'ಮಹಿಳಾ ಸಾಹಿತ್ಯದ ಪ್ರಗತಿಗಾಗಿ ಪ್ರಕಟವಾಗುವ ಮಾಸಪತ್ರಿಕೆ' ಎಂದೇ ಘೋಷಿಸಿಕೊಂಡ ಪತ್ರಿಕೆ

ಇದಾಗಿತ್ತು. ಬರಹಗಾರರೆಲ್ಲ ಮಹಿಳೆಯರೇ ಆಗಿದ್ದುದು ಈ ಪತ್ರಿಕೆಯ ವಿಶೇಷ. ಮಹಿಳಾ ಶಿಕ್ಷಣದ ಬಗ್ಗೆ ಮಾತನಡುವಾಗ ಸ್ತ್ರೀಯರಿಗೆ ವೈಜ್ಞಾನಿಕ ಶಿಕ್ಷಣ ಅನಗತ್ಯ ಅಷ್ಟೇ ಅಲ್ಲ, ವ್ಯರ್ಥ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಗೃಹದ ಭಾಗ್ಯಜ್ಯೋತಿಯನ್ನು ಬೆಳೆಸಲು ಯೋಗ್ಯತೆ ನೀಡುವ ಶಿಕ್ಷಣ ಸಾಕಲ್ಲವೇ? ಎಂಬುದು ಅವರ ನಿಲುವಾಗಿತ್ತು. ಉಡುಪಿಯಂತಹ ಧಾರ್ಮಿಕ ಪ್ರಾಮುಖ್ಯತೆ ಹೊಂದಿದ ಪ್ರದೇಶದವರಾದ್ದರಿಂದ ಅವರ ಅಭಿಪ್ರಾಯಗಳಲ್ಲಿ ಹಲವು ಮಿತಿಗಳು ಕಾಣಿಸುವುದು ಸಹಜ. ಇಂತಹ ವಿರೋಧಾಭಾಸಗಳಿದ್ದರೂ ಸಹ ಈ ಪತ್ರಿಕೆ ಹಲವು ಮಹಿಳಾ ಲೇಖಕಿಯರನ್ನು ಉತ್ತೇಜಿಸಿ ಒಳ್ಳೆಯ ಲೇಖಕಿಯರಾಗಿ ಬೆಳೆಯಲು ಪ್ರೋತ್ಸಾಹಿಸಿತು. ತುಂಬ ಅಚ್ಚುಕಟ್ಟಾದ ಮುದ್ರಣದಿಂದ ಹೊರಬರುತ್ತಿದ್ದ ಈ ಪತ್ರಿಕೆ ತನ್ನದೇ ಆದ ಹಲವು ವೈಶಿಷ್ಟ್ಯಗಳನ್ನು ಹೊಂದಿತ್ತು. ಇದರಲ್ಲಿನ ಬಾಲಕಿಯರ ಬೊಕ್ಕಸ ಎಂಬ ಅಂಕಣ ಎಳೆಯ ವಯಸ್ಸಿನ ಬಾಲಕಿಯರನ್ನು ಗಮನದಲ್ಲಿ ಇಟ್ಟುಕೊಂಡಿದ್ದ ಹಾಗು ಅವರನ್ನು ತಿದ್ದುವ ಉದ್ದೇಶ ಹೊಂದಿದ ಅಂಕಣವಾಗಿತ್ತು. ಇಪ್ಪತ್ತ ನಾಲ್ಕು ಪುಟಗಳ ಈ ಪತ್ರಿಕೆಯ ಸಂಪುಟವನ್ನು 'ಕಮಲ' ಎಂದೂ, ಸಂಚಿಕೆಯನ್ನು 'ದಳ' ಎಂದೂ ಕರೆದಿರುವುದು ಕಂಡು ಬರುತ್ತದೆ. ಸದಭಿರುಚಿಯ ಅಚ್ಚುಕಟ್ಟುತನದ ಈ ಪತ್ರಿಕೆ ಒಂದು ವರ್ಷದಲ್ಲೇ ಅವಸಾನ ಗೊಂಡಿದ್ದು ದುರದೃಷ್ಟಕರ. ಈ ಪತ್ರಿಕೆಗೆ ಆನಂದಿ ಸದಾಶಿವ ರಾವ್, ಉಷಾ ಹಾಸನ, ಗಿರಿಬಾಲೆ, ರೋಹಿಣಿ, ಪಾರಿ, ಕುಮಾರಿ ಎಂಬ ಕಾವ್ಯನಾಮಗಳ ಲೇಖಕಿಯರು ಬರೆದಿದ್ದಾರೆ. ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ಮಹಿಳೆಯರನ್ನು ಹಾಗು ಅವರ ಬರಹಗಳನ್ನು ಪ್ರತಿನಿಧಿಸಲು ಈ ಮಹಿಳಾ ಪತ್ರಿಕೆಗಳು ಮಾಡಿದ ಪ್ರಯತ್ನಗಳು ಇವತ್ತಿನ ಸ್ತ್ರೀ ಸಂವೇದನೆ, ಮಹಿಳಾ ಪತ್ರಿಕೋದ್ಯಮ ಹಾಗು ಸಾಹಿತ್ಯಕ್ಕೆ ಹಿನ್ನೆಲೆ ಒದಗಿಸಿಕೊಟ್ಟವು ಎಂದು ಹೇಳಬಹುದು.

ಇವತ್ತಿನ ಸಾಹಿತ್ಯ ಸಂದರ್ಭವನ್ನು ಗಮನಿಸಿದಾಗ ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡುತ್ತಿರುವ ಮಹಿಳೆಯರ ಸಂಖ್ಯೆಯ ಜೊತೆಗೆ ಗಮನಾರ್ಹ ಕೃತಿಗಳ ಸಂಖ್ಯೆಯೂ ಸಹ ಬೆಳೆದಿದೆ. ಮಹಿಳೆಯರ ಸಾಹಿತ್ಯದ ಮನೋಧರ್ಮವೇ ಬದಲಾಗಿದೆ. ಮಹಿಳಾ ದೃಷ್ಟಿಕೋನ, ಮೌಲ್ಯಗಳು ಪುರುಷ ಸಾಹಿತ್ಯದ ದೃಷ್ಟಿಕೋನ, ಮೌಲ್ಯಗಳ ಅನುಸರಣೆಯಾಗಿ ಉಳಿದಿಲ್ಲ. ಬದಲಿಗೆ ಮಹಿಳೆ ತನ್ನ ವ್ಯಕ್ತಿತ್ವವನ್ನು ಸ್ಥಾಪಿಸಲು, ಬೆಳೆಸಲು ಬದ್ಧಳಾಗಿದ್ದಾಳೆ. ಇತ್ತೀಚಿನವರೆಗೂ ಮಹಿಳಾ ಸಾಹಿತ್ಯಕೃಷಿ ಕತೆ, ಕಾದಂಬರಿಗಳಿಗೇ ಸೀಮಿತವಾಗಿತ್ತು. ಇಂದು ಮಹಿಳೆ ಕಾವ್ಯ, ನಾಟಕ ಕ್ಷೇತ್ರಗಳಿಗೂ ಮುಂದುವರೆದಿದ್ದಾಳೆ.[೭]

ಕಾದಂಬರಿ ಕ್ಷೇತ್ರವನ್ನು ಪರಿಶೀಲಿಸಿದರೆ ಕಳೆದ ಮೂವತ್ತು ವರ್ಷಗಳಲ್ಲಿ ಮಹಿಳಾ ಲೇಖಕಿಯರ ಗುರಿ, ವಸ್ತು, ಅವರ ನಿಲವು ಮತ್ತು ಮೌಲ್ಯಗಳಲ್ಲಿ ಸ್ಪಷ್ಟ ಬದಲಾವಣೆಗಳಾಗಿರುವುದನ್ನು ಗುರುತಿಸಬಹುದು. 'ಆಕಾಶಗಂಗೆ'ಯಿಂದ ಪ್ರಾರಂಭವಾಗಿ ಅನುಪಮಾ ನಿರಂಜನರ ಕಾದಂಬರಿಗಳಲ್ಲಿ ಕಾಣುವ ಬದಲಾವಣೆಯನ್ನು ಗಮನಿಸಿದರೆ ಈ ಸಂಗತಿಯನ್ನು ಕಾಣಬಹುದು. ಅನುಪಮಾ ಅವರು ತಮ್ಮ ಆಳ, ನೇಕಾರರು, ನಿವಾಸಿಗಳು ಮೊದಲಾದ ಕತೆಗಳಲ್ಲಿ ಭೂಗರ್ಭಶೋಧನೆ, ನೇಕಾರರ ಬದುಕು, ಕೊಳಚೆ ಪ್ರದೇಶದ ಜೀವನ ಮೊದಲಾದವುಗಳನ್ನು ಗಮನಿಸಿದರೆ ಸ್ತ್ರೀ ಸಾಹಿತ್ಯದ ವ್ಯಾಪ್ತಿ ಹಿಗ್ಗಿರುವುದನ್ನು ಕಾಣಬಹುದು. ಇವತ್ತಿನ ಮಹಿಳಾ ಲೇಖಕಿಯರು ಯಾವುದೇ ವಿಮರ್ಶೆಗೆ ನಿಲ್ಲಬಲ್ಲಂತಹ ಕಾದಂಬರಿಗಳನ್ನು ಬರೆಯುತ್ತಿದ್ದಾರೆ (ಉದಾಹರಣೆಗೆ, ಎಚ್.ವಿ.ಸಾವಿತ್ರಮ್ಮನವರ 'ಸೀತೆ ರಾಮ ರಾವಣ', ಸಾರಾ ಅಬೂಬಕರರ 'ಚಂದ್ರಗಿರಿಯ ತೀರದಲ್ಲಿ', ವೀಣಾ ಅವರ 'ಗಂಡಸರು'). ಇದನ್ನೆಲ್ಲ ಗಮನಿಸಿದರೆ ಕಾದಂಬರಿ ಕ್ಷೇತ್ರದಲ್ಲಿ ಮಹಿಳೆಯರು ತಮ್ಮ ಸ್ವತಂತ್ರ ವ್ಯಕ್ತಿತ್ವವನ್ನು ಕಂಡುಕೊಳ್ಳುತ್ತಿರುವುದು ಸ್ಪಷ್ಟವಾಗುತ್ತದೆ.

ಕೊರವಂಜಿಯಲ್ಲಿ ಶ್ರೀಮತಿ ಟಿ. ಸುನಂದಮ್ಮ ಅವರ ಲೇಖನಗಳನ್ನು ಕಾಣಬಹುದು. 'ಚಿತ್ರಗುಪ್ತ' ವಾರಪತ್ರಿಕೆಯಲ್ಲಿ ಶ್ರೀಮತಿ ಎಚ್.ಎಸ್.ಪಾರ್ವತಿ ಅವರು ಪ್ರತಿವಾರವೂ ವಿಶೇಷ ಅಂಕಣಗಳನ್ನು ಬರೆದಿದ್ದಾರೆ. ಅಂದಿನ ಕಾಲಕ್ಕೆ ಕನ್ನಡ ಪತ್ರಿಕೆಗಳಲ್ಲಿ ಪ್ರಹಸನ ಹಾಗು ಹಾಸ್ಯ ಲೇಖನಗಳನ್ನು ಬರೆದವರಲ್ಲಿ ಸುನಂದಮ್ಮ ಒಬ್ಬರೇ ಎನಿಸುತ್ತದೆ. ಕರ್ನಾಟಕದ ವಿವಿಧ ಪತ್ರಿಕೆಗಳಲ್ಲಿ ಕತೆ ಕಾದಂಬರಿಗಳ ಹೊರತಾಗಿ ಡಾ.ಅನುಪಮಾ ನಿರಂಜನ ಅವರು ಆರೋಗ್ಯ, ಮಹಿಳೆಯರು ಮತ್ತು ಯುವತಿಯರ ಸಮಸ್ಯೆಗಳನ್ನು ಕುರಿತು ಲೇಖನಗಳನ್ನು ಬರೆದಿದ್ದಾರೆ. ವಿಶ್ವ ಕರ್ನಾಟಕದ ಸಂಪಾದಕರಾದ ಶ್ರೀ ಟಿ.ಟಿ. ಶರ್ಮ ಅವರ ಪತ್ನಿ ತಿರುಮಲೆ ರಾಜಮ್ಮನವರು ವಿಶ್ವಕರ್ನಾಟಕಕ್ಕೆ ಸಹಾಯಕರಾಗಿದ್ದಲ್ಲದೆ 'ಭಾರತಿ' ಕಾವ್ಯನಾಮದಲ್ಲಿ 'ಜೀವನ' ಪತ್ರಿಕೆಗೆ ಬರೆದಿಡ್ಡಾರೆ. ಶ್ರೀಮತಿ ಮರಾಠ ರಾಜೇಶ್ವರಿ ನರಸಿಂಹ ಮೂರ್ತಿ, ಎಚ್.ವಿ.ಸಾವಿತ್ರಮ್ಮ, ಜಯಲಕ್ಷ್ಮೀ ಶ್ರೀನಿವಾಸನ್, ಆನಂದಿ ಸದಾಶಿವರಾವ್ ಅವರುಗಳು ಪತ್ರಿಕೆಗಳಿಗೆ ಬರೆಯುತ್ತಿದ್ದ ಕತೆಗಳು ತುಂಬ ಜನಪ್ರಿಯವಾಗಿದ್ದವು. ಗೀತಾ ದೇಸಾಯಿ, ಸರಸ್ವತಿ ಗೌಡರ್, ಶಾಂತದೇವಿ ಮಾಳವಾಡ, ಚಂಪಾವತಿ ಮಹಿಷಿ ಅವರ ಅತ್ಯುತ್ತಮ ಲೇಖನಗಳನ್ನು ವಿವಿಧ ಪತ್ರಿಕೆಗಳು ಪ್ರಕಟಿಸಿವೆ. ತಾಯಿನಾಡು ಪತ್ರಿಕೆಯ ಆಶ್ರಯದಲ್ಲಿ ೧೯೬೩ರಲ್ಲಿ ಆರಂಭವಾದ 'ಗೋಕುಲ', ಪ್ರಜಾವಾಣಿ ಬಳಗ ಪ್ರಾರಂಭಿಸಿದ 'ಸುಧಾ' ವಾರಪತ್ರಿಕೆಗಳು ಹಲವು ಲೇಖಕಿಯರನ್ನು ಬೆಳಕಿಗೆ ತಂದವು. ಮಹಿಳೆಯರ ವೈಚಾರಿಕತೆಯನ್ನು ಪ್ರಚೋದಿಸಿದ ಈ ಪತ್ರಿಕೆಗಳಲ್ಲಿ ಮಹಿಳೆಯರು ಮುಕ್ತವಾಗಿ ಬರೆಯಲು ಅವಕಾಶ ಒದಗಿತು.

೧೯೭೦ರಿಂದೀಚೆಗೆ ಸ್ತ್ರೀವಾದಿ ವಿಮರ್ಶೆ ಸಾಕಷ್ಟು ಬೆಳವಣಿಗೆ ಹೊಂದಿರುವುದನ್ನು ಕಾಣಬಹುದು. ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ಸಂಪಾದಕರು (ತೇಜಸ್ವಿನೀ ನಿರಂಜನ, ಸೀಮಂತಿನೀ ನಿರಂಜನ) "ಸ್ತ್ರೀವಾದಿ ವಿಮರ್ಶೆಯು ಸಾಮಾಜಿಕ ಬೌದ್ಧಿಕ ಪರಂಪರೆಗಳನ್ನು ಪರೀಕ್ಷಿಸುವ ಒಂದು ದೃಷ್ಟಿಕೋನ, ಅಧಿಕಾರ ಸಂಬಂಧಾಗ್ಯ ಮೇಲ ಮತ್ತು ಲಿಂಗಭೇದ ಸಂಬಂಧಗಳ ಸಾಮಜಿಕ ಅರ್ಥಕಲ್ಪನೆ ಹೇಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದೀ ವಿಮರ್ಶೆಯ ವೈಶಿಷ್ಟ್ಯವಾಗಿದೆ. ಈ ದೃಷ್ಟಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸೃಜನಶೀಲ ಸಾಹಿತ್ಯ ಸೃಷ್ಟಿಯಾಗಿದೆ".[೮]

ಮುಸ್ಲಿಂ ಸಂವೇದನೆ: ಕನ್ನಡ ಸಾಹಿತ್ಯ ಪಡೆದ ವಿಭಿನ್ನ ಸ್ವರೂಪಗಳಲ್ಲಿ ಮುಸ್ಲಿಂ ಸಾಹಿತ್ಯವೂ ಒಂದು ಘಟ್ಟ. ಬಡಾಯ ಸಾಹಿತ್ಯದ ಸಂದರ್ಭದಲ್ಲಿ ಮೊಳಕೆಯೊಡೆದ ಇದು ಕಾವ್ಯ ಹಾಗು ಕಥಾ ಸಾಹಿತ್ಯದಲ್ಲಿ ತನ್ನದೇ ಆದ ವಿಶಿಷ್ಟ ಸಂವೇದನೆಗಳನ್ನು ಅಭಿವ್ಯಕ್ತಿಸಿದೆ. ಮೊಟ್ಟಮೊದಲಿಗೆ ಶಿಶುನಾಳ ಶರೀಫ ಎರಡು ಬೇರೆ ಬೇರೆ ಲೋಕಗಳನ್ನು ಬೆಸೆಯುವ ಕೆಲಸ ಮಾಡಿದರೆ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನವೋದಯ, ನವ್ಯ ಸಾಹಿತ್ಯದಲ್ಲಿ ಮುಸ್ಲಿಂ ಲೇಖಕರು ಆಯಾ ಸಂದರ್ಭದ ಧೋರಣೆಗಳಿಗೆ ಅನುಗುಣವಾಗಿ ಕೃತಿಗಳನ್ನು ರಚಿಸಿದ್ದಾರೆ. ಆದರೆ ಬಂಡಾಯದ ಸಂದರ್ಭದ ಮುಸ್ಲಿಂ ಸಂವೇದನೆ ವಿಶಿಷ್ಟವಾದುದು. ಅದು ಮುಸ್ಲಿಂ ಜಗತ್ತಿನ ಜಡತ್ವವನ್ನೂ ಪ್ರಶ್ನಿಸುವಷ್ಟು ಪ್ರಖರ ವೈಚಾರಿಕತೆ ಉಳ್ಳದ್ದಾಗಿದೆ. ಯುದ್ಧವಿರೋಧೀ ಹಾಗು ಜಾತ್ಯತೀತ ಮನೋಭಾವದ ಈ ಸಾಹಿತ್ಯವು ಆಧುನಿಕ ಕನ್ನಡ ಸಹಿತ್ಯಕ್ಕೆ ಹೊಸ ಸತ್ವ ನೀಡಿದೆ.[೯]

ಇಲ್ಲಿ ಪರಂಪರೆಯನ್ನು ಪ್ರಶ್ನಿಸುವ ಮತ್ತು ಪುನರ್ವ್ಯಾಖ್ಯಾನ ಕೊಡುವ ಕೆಲಸ ನಡೆದಿದೆ. ಕನ್ನಡ ಸಾಹಿತ್ಯಕ್ಕೆ ಅಪರಿಚಿತವಾಗಿದ್ದ ಲೋಕವೊಂದನ್ನು (ಮುಸ್ಲಿಂ ಸಮಾಜ) ತಮ್ಮ ಕಾದಂಬರಿ, ಕತೆಗಳಲ್ಲಿ ನಮಗೆ ಸಮೀಪ ಮಾಡಿದ ಕೀರ್ತಿ ಈ ಪರಂಪರೆಯ ಲೇಖಕರಿಗೆ ಸಲ್ಲುತ್ತದೆ. ಮೂಲಭೂತವಾದ ಹಾಗು ಮೂಢನಂಬಿಕೆಗಳು ಹೇಗೆ ಜೀವವಿರೋಧೀ, ಅವು ಬಡತನ ಹಾಗು ಅಸಹಾಯಕತೆಗಳನ್ನು ಹೇಗೆ

ಪೋಷಿಸುತ್ತವೆ, ಅವು ಹೆಣ್ಣುಜಾತಿಯನ್ನು ಹೇಗೆ ನಡೆಸಿಕೊಳ್ಳುತ್ತವೆ ಎಂಬೀ ವಿಚಾರಗಳನ್ನು ಮುಸ್ಲಿಂ ಸಾಹಿತ್ಯದಲ್ಲಿ ಪ್ರಧಾನವಾಗಿ ಕಾಣಬಹುದಾಗಿದೆ. ಕೆ.ಎಸ್. ನಿಸಾರ್ ಅಹಮದ್, ಬೊಳುವಾರು ಮಹಮ್ಮದ್ ಕುಂಞ, ಸಾರಾ ಅಬೂಬ್‌ಕರ್, ಬಾನುಮುಷ್ತಾಕ್, ಅಬ್ದುಲ್ ರಶೀದ್, ಹನೀಫ್, ಅಕಬರ ಅಲಿ ಮುಂತಾದವರ ಲೇಖನಗಳಲ್ಲಿ ಮೇಲಿನ ಸ್ವರೂಪದ ಜನಜೀವನವನ್ನು ಪರಿಚಯಿಸಿಕೊಳ್ಳಬಹುದಾಗಿದೆ. ಇವನ್ನೆಲ್ಲ ಗಮನಿಸಿದಾಗ ಆಧುನಿಕ ಕನ್ನಡ ಸಾಹಿತ್ಯ ತುಂಬ ಮಹತ್ವದ್ದಾಗಿ ಕಂಡು ಬರುತ್ತದೆ. ಏಕೆಂದರೆ ಅದು ಹಳಗನ್ನಡಕ್ಕಿಂತ ಬೇರೆಯಾದ ವಾಸ್ತವವಾದೀ ನೆಲೆಯಲ್ಲಿ ತನ್ನ ಸ್ವರೂಪವನ್ನು ಪಡೆದುದರಿಂದ ಹೊಸ ಜನಜೀವನವನ್ನು ಎಲ್ಲ ವೈಶಿಷ್ಟ್ಯಗಳನ್ನು ಚಿತ್ರಿಸುವ ಸಾಮರ್ಥ್ಯ ಹೊಂದಿದೆ. ಅಂದರೆ ಆಧುನಿಕತೆ ನಮ್ಮ ಬದುಕನ್ನಷ್ಟೇ ಅಲ್ಲ ನಮ್ಮ ಸಾಹಿತ್ಯವನ್ನೂ ಬದಲಾಯಿಸಿತು. ಹೀಗೆ ಸೃಷ್ಟಿಗೊಂಡ ಸಾಹಿತ್ಯ ಆಯಾಕಾಲದ ಸೈದ್ಧಾಂತಿಕ ಒತ್ತಡಗಳಿಗೆ ಅನುಗುಣವಾಗಿ ಪರಿವರ್ತನೆ ಹೊಂದುತ್ತ ಆಯಾ ಕಾಲದ ವಿವೇಕವನ್ನು ಮೈಗೂಡಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಸಾಂಸ್ಕೃತಿಕ ಮಹತ್ವವನ್ನು ಮೈಗೂಡಿಸಿಕೊಂಡು ಮುನ್ನಡೆಯುತ್ತಿರುವ ಆಧುನಿಕ ಕನ್ನಡ ಸಾಹಿತ್ಯ ಇಂದು ಸಂಸ್ಕೃತಿಯ ಜೊತೆಗಿನ ಗಂಭೀರ ಅನುಸಂಧಾನದಲ್ಲಿ ತೊಡಗಿರುವುದು ಮಹತ್ವದ ಹೆಜ್ಜೆಯಾಗಿದೆ.[೧೦]

ಸ್ತ್ರೀವಾದೀ ವಿಮರ್ಶೆಯಲ್ಲಿ ವಿಜಯಾದಬ್ಬೆ, ನೇಮಿಚಂದ್ರ, ವಿಜಯ, ಎನ್.ಗಾಯತ್ರಿ, ತೇಜಸ್ವಿನೀ ನಿರಂಜನ, ಸುಮಿತ್ರಾಬಾಯಿ, ಎಚ್.ಎಸ್.ಶ್ರೀಮತಿ, ಟಿ.ಎಂ.ರೋಹಿಣಿ ಮುಂತಾದವರು ವಿಶೇಷವಾಗಿ ಕೆಲಸ ಮಾಡಿದ್ದಾರೆ. ಬಿ.ಎನ್.ಸುಮಿತ್ರಾಬಾಯಿ ಅವರ 'ಸ್ತ್ರೀವಾದೀ ಪ್ರವೇಶಿಕೆ'(೧೯೯೫), ಬರಗೂರು ರಾಮಚಂದ್ರಪ್ಪನವರ ಸಂಪಾದಕತ್ವದ 'ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದೀ ಚಿಂತನೆ' (೧೯೯೩), ಕೇಶವ ಶರ್ಮರ 'ಕ್ರಿಯೆ–ಪ್ರತಿಕ್ರಿಯೆ'(೧೯೭೨), ಡಿ.ಆರ್. ನಾಗರಾಜರ 'ಸಾಹಿತ್ಯಕಥನ' (೧೯೯೬), ರಹಮತ್ ತರೀಕೆರೆಯವರ 'ಮರದೊಳಗಣ ಕಿಚ್ಚು'(೧೯೯೬), ವಿಜಯಾ ದಬ್ಬೆ ಅವರ 'ಮಹಿಳೆ ಸಾಹಿತ್ಯ ಸಮಾಜ'(೧೯೮೯), ಗಾಯತ್ರಿ ನಾವಡ ಅವರ 'ಕರಾವಳಿ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದೀ ನೆಲೆಗಳು'(೧೯೯೯) – ಮುಂತಾದ ಕೃತಿಗಳು ಇತ್ತೀಚಿನ ಸ್ತ್ರೀವಾದೀ ಚಿಂತನೆಯ ದೃಷ್ಟಿಯಿಂದ ಗಮನಾರ್ಹವಾದವುಗಳು.

ಅಡಿಟಿಪ್ಪಣಿಗಳು

೧. ಎಚ್.ಎಸ್. ಪಾರ್ವತಿ, ಡಾ. ನಿರುಪಮಾ: ೨೦ನೆಯ ಶತಮಾನದಲ್ಲಿ ಕರ್ನಾಟಕದ ಮಹಿಳೆಯರ ಸಾಧನೆ, ಆರತಿ ಪಬ್ಲಿಕೇಷನ್, ಬೆಂಗಳೂರು

೨. 'ಪರ್ವತವಾಣಿಯವರ ಕೃತಿಗಳು' :ಕನ್ನಡ ನುಡಿ: ಸರಸ್ವತಿ ಅನಂತರಾಮಯ್ಯ, ಜೂನ್ ೧೯೫೫

೩. ರಾಜಪ್ಪ ದಳವಾಯಿ: ಆಧುನಿಕ ಕನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨, ಪುಟ ೨೪೨

೪. ಎಸ್.ವಿ.ಶ್ರೀನಿವಾಸ ರಾವ್: ಕನ್ನಡದಲ್ಲಿ ಮಕ್ಕಳ ಪತ್ರಿಕೆಗಳು, ಚಿತ್ರಗುಪ್ತ ಸ್ಮರಣೆ, ೧೯೯೫, ಪುಟ ೨೩೪

೫. ಡಾ. ಮಂಗಳಾ ಪ್ರಿಯದರ್ಶಿನಿ: ಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸ, ವರ್ತಮಾನ, ಕರಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪುಟ್ ೧೪

೬. ಹ.ಕ. ರಾಜೇಗೌಡ (ಸಂ): ಚಿತ್ರಗುಪ್ತ ಸ್ಮರಣೆ, ಕನ್ನಡದಲ್ಲಿ ಮಕ್ಕಳ ಪತ್ರಿಕೆಗಳು, ಎಸ್.ವಿ.ಶ್ರೀನಿವಾಸ ರಾವ್, ಪುಟ ೨೫೫

೭. ಪ್ರೊ.ಎಲ್.ಎಸ್.ಶೇಷಗಿರಿ ರಾವ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೯, ಪುಟ ೨೬೧

೮. ತೇಜಸ್ವಿನೀ ನಿರಂಜನ, ಸೀಮಂತಿನೀ ನಿರಂಜನ, ಸ್ತ್ರೀವಾದೀ ಸಾಹಿತ್ಯ ವಿಮರ್ಶೆ, ೧೯೯೪

೯. ರಾಜಪ್ಪ ದಳವಾಯಿ: ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨, ಬೆಂಗಳೂರು, ಪುಟ ೨೪೨

೧೦. ಅದೇ, ಪುಟ ೨೫೪

೩. ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ ಹಾಗು ಅಂಕಣ ಬರಹ

ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ: ಇದನ್ನು ಇಂಗ್ಲಿಷ್‌ನಲ್ಲಿ ರಿವ್ಯೂ ಎನ್ನುತ್ತಾರೆ. ರಿವ್ಯೂ ಪದಕ್ಕೆ ಹಲವು ವಿವರಣೆಗಳಿವೆ

> "a general account or criticism of a literary work, a musical or dramatic performance etc. (especially new or recent) either published separately as an article in periodical or newspaper" (Encyclopaedia Britannica)
>
> "A short notice or discussion or critical article in a news paper, journal or periodical"[೧]

ಪತ್ರಿಕೆಗಳಲ್ಲಿ ಸಾಂದರ್ಭಿಕವಾಗಿ ಪ್ರಕಟಿಸುವ ವಿಮರ್ಶಾ ಲೇಖನ ಎಂಬುದು ವಿವರಣೆ. 'ವಿಮರ್ಶಾತ್ಮಕ ನಿಯತಕಾಲಿಕೆ' ಎಂಬ ಅರ್ಥವೂ ಇದೆ.

> "೧೭೩೨ ರಿಂದ ೧೭೮೫ರವರೆಗೆ ಪ್ರಕಟವಾಗಿ ಸ್ಥಗಿತಗೊಂಡು ಕಳೆದ ಶತಮಾನ ಪುನಃ ಪ್ರಾರಂಭವದ London Magazine Edinburgh Review (1802-1929), 1809 ರಿಂದ ಪ್ರಾರಂಭವಾಗಿ ಈಗಲೂ ಪ್ರಕಟವಾಗುತ್ತಿರುವ 'Quarterly Review', 'Horizon', 'Scrutiny', 'Encounter', ೨೦ನೆಯ ಶತಮಾನದಲ್ಲಿ ಪ್ರಾರಂಭವಾದ 'The Times Literary Supplement', 'Saturday Westminister Gazette', 'Weekend Review', 'New Statesman' ಮುಂತಾದವುಗಳ ಪುಸ್ತಕಾವಲೋಕನ ಪ್ರಭಾವಶಾಲಿಯಾದವು"[೨]

ಹಿಂದಿನ ಶ್ರೀಕೃಷ್ಣಸೂಕ್ತಿ, ಸುವಾಸಿನಿ, ಜಯಕರ್ನಾಟಕ, ಜೀವನ, ಸಾಕ್ಷಿ, ರುಜುವಾತು, ಶಿವಾನುಭವ, ಸಾಹಿತ್ಯಪ್ರಗತಿ, ಅಂಕಣದಂತಹ ನಿಯತಕಾಲಿಕಗಳಲ್ಲಿ ಪುಸ್ತಕಾವಲೋಕನಗಳನ್ನು ಕಾಣಬಹುದು. ಇಂದಿಗೂ ಮುಂದುವರೆಯುತ್ತಿರುವ ಪ್ರಬುದ್ಧ ಕರ್ನಾಟಕ, ಸಾಹಿತ್ಯ ಪರಿಷತ್ಪತ್ರಿಕೆ, ಶೂದ್ರ, ಸಂಕ್ರಮಣ, ವಿಜಯ ಕರ್ನಾಟಕ, ಪ್ರಜಾವಾಣಿ, ಕನ್ನಡ ಪ್ರಭ ಮುಂತಾದ ದಿನಪತ್ರಿಕೆಗಳು ಅವಲೋಕನವನ್ನು ಪ್ರಕಟಿಸುತ್ತಿವೆ.

> "ವಿಮರ್ಶಾ ಲೇಖನವೇ ಬೇರೆ, ಪುಸ್ತಕಾವಲೋಕನ ಬೇರೆ. ಈ ವ್ಯತ್ಯಾಸವನ್ನು ಸ್ಪಷ್ಟಪಡಿಸಲು ಆಲೋಕ, ಆಲೋಕನ, ಅವಲೋಕನ ಮುಂತಾದ ಶಬ್ದಗಳು ಬಳಕೆಗೆ

ಬಂದಂತೆ ತೋರುತ್ತದೆ. ಆಲೋಕನ, ಅವಲೋಕನ ಎಂದರೆ ನೋಡುವುದು, ಪರಿಭಾವಿಸುವುದು ಎಂದರ್ಥ. 'ರಿವ್ಯೂ' ಎಂದರೆ ಪರಿಗಣಿಸು, ಪರಿಶೀಲಿಸು ಎಂದು. ಈ ಕಲ್ಪನೆ ಈಚಿನದಾದರೂ ಈ ಶಬ್ದಗಳು ಪ್ರಾಚೀನವಾದವು. ಆನಂದವರ್ಧನನ 'ಧ್ವನ್ಯಾಲೋಕ', ಇಮ್ಮಡಿ ನಾಗವರ್ಮನ 'ಕಾವ್ಯಾವಲೋಕನ' ಮೊದಲಾದ ಗ್ರಂಥಗಳು ಕಾವ್ಯತತ್ವ, ಕಾವ್ಯ ಮೀಮಾಂಸೆಗೆ ಸಂಬಂಧಿಸಿದವು[೩]

ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಬಂದ ಹೊಸಗನ್ನಡ ಸಾಹಿತ್ಯದ ಹಲವು ರೂಪಗಳಂತೆ ವಿಮರ್ಶೆ, ಅವಲೋಕನಗಳೂ ಸಹ ಅನ್ಯದೇಶೀಯ ಪ್ರಭಾವದಿಂದ ಬಂದಂತಹವು. ನಮ್ಮ ಅಲಂಕಾರ ಶಾಸ್ತ್ರ, ಕಾವ್ಯಮೀಮಾಂಸೆಯ ಗ್ರಂಥಗಳಲ್ಲಿ ಅಲ್ಲಲ್ಲಿ ಕಾವ್ಯ ನಾಟಕ ಭಾಗಗಳ ವಿಶ್ಲೇಷಣೆ, ಪ್ರಾಯೋಗಿಕ ವಿಮರ್ಶೆಗೆ ಸಮೀಪ ಎನ್ನಬಹುದಾದ ವಿವರಣೆ ವ್ಯಾಖ್ಯಾನಗಳು ಸಿಗುತ್ತವೆ. ಆದರೆ ಪ್ರತ್ಯೇಕವಾಗಿ ವಿಮರ್ಶೆ, ಅವಲೋಕನಗಳು ನಮ್ಮ ಪರಂಪರೆಯಲ್ಲಿ ಬಂದಿರುವುದಿಲ್ಲ. ವಿಮರ್ಶೆ ಮತ್ತು ಅವಲೋಕನ ಇವುಗಳ ಉದ್ದೇಶ ಸ್ವರೂಪ ಸಾಧ್ಯತೆಗಳು ಬೇರೆ ಬೇರೆ ಎನಿಸುತ್ತಿದ್ದರೂ ಅವುಗಳ ನಡುವೆ ಇಷ್ಟೇ ಎಂದು ಖಚಿತವಾದ ಸೀಮಾರೇಖೆಯನ್ನು ಎಳೆಯಲು ಸಾಧ್ಯವಿಲ್ಲ.

ಒಂದು ಕೃತಿಯ ಪರಿಭಾವನೆ, ಕೃತಿಯ ವಿಶ್ಲೇಷಣೆ, ಅರ್ಥೈಸುವಿಕೆ, ವಿವರಣೆ, ವ್ಯಾಖ್ಯಾನ, ವಸ್ತು ರೂಪ ಸಂಬಂಧಗಳು ಮೌಲ್ಯನಿರ್ಣಯ ಮುಂತಾದವು ಸಾಹಿತ್ಯ ವಿಮರ್ಶೆ ಹಾಗು ಪುಸ್ತಕಾವಲೋಕನಗಳಿಗೆ ಸಮನಾದ ಅಂಶಗಳಾದರೂ ಅವಲೋಕನಕ್ಕೆ ತನ್ನದೇ ಆದ ಅರ್ಥ ಹಾಗು ನಿರ್ಬಂಧಗಳಿವೆ. ಓದುಗರ ವರ್ಗ ಹಾಗು ಪತ್ರಿಕೆಯಲ್ಲಿನ ಸ್ಥಳಾವಕಾಶ ಅವಲೋಕನದ ಬರವಣಿಗೆಯನ್ನು ನಿಯಂತ್ರಿಸುತ್ತದೆ.

> "ನಿಯತ ಕಾಲಿಕಗಳ ಮೊದಲ ರೂಪವು ೧೭ನೆಯ ಶತಮಾನದಲ್ಲೇ ತೋರಿ ಬಂದಿತ್ತು. ಆದರೆ ಅವುಗಳ ಆರಂಭವು ೧೭೦೪ರಲ್ಲಿ ಆಯಿತು ಎನ್ನಬಹುದು. ಇಂಗ್ಲಿಷ್ ಪತ್ರಿಕೋದ್ಯಮದ ಪಿತಾಮಹ ಎಂದು ಕರೆಯಲಾಗುವ 'ಡೇನಿಯಲ್ ಡೆಫೋ' ೧೭೦೪ರ ಫೆಬ್ರುವರಿ ತಿಂಗಳಿನಲ್ಲಿ A Weekly review of the affairs of France inferred from the errors and partiality of news – writers and petty statesmen of all sides ಎಂಬ ಎಂಟು ಪುಟದ ಸಾಪ್ತಾಹಿಕವನ್ನು ಪ್ರಕಟಿಸಿದ. ಅದರಲ್ಲಿ ರಾಜಕೀಯ ಸಾಮಾಜಿಕ ವಾಣಿಜ್ಯ ಮುಂತಾದ ಹಲವು ವಿಷಯಗಳ ಲೇಖನಗಳು ಪ್ರಕಟವಾಗುತ್ತಿದ್ದವು. ಅದರೊಡನೆ ಆಗಾಗ ಅನುಬಂಧಗಳೂ ಪ್ರಕಟವಾಗುತ್ತಿದ್ದವು. ಅವನ ಬರಹಗಳಲ್ಲಿ ವಿಡಂಬನೆ ಮತ್ತು ವ್ಯಂಗ್ಯಗಳು ಎದ್ದು ಕಾಣುತ್ತಿದ್ದವು"[೪]

ಅವಲೋಕನಕ್ಕೆ ಸಂಬಂಧಿಸಿದಂತೆ ಸ್ಥಳಾವಕಾಶದ ನಿರ್ಬಂಧದ ಜೊತೆಗೆ ಅವಲೋಕನಕಾರರಿಗೆ ಪುಸ್ತಕಗಳ ಆಯ್ಕೆಯ ಅವಕಾಶ ಬಹುತೇಕ ಇರುವುದಿಲ್ಲ. ಸಂಪಾದಕರು ಕಳುಹಿಸುವ ಪುಸ್ತಕಗಳನ್ನು ಅವಲೋಕಿಸಬೇಕು. ಕೆಲವೊಮ್ಮೆ ಈ ಆಯ್ಕೆಯ ಸ್ವಾತಂತ್ರ್ಯ ಅವಲೋಕನಕಾರರಿಗೆ ಇರುವುದೂ ಉಂಟು. ಪುಸ್ತಕವಿಮರ್ಶೆಗಳು ಅವಲೋಕನಕಾರನ ವಿಮರ್ಶನಾ ಕ್ಷಮತೆ, ಅವನ ವಿದ್ವತ್ತುಗಳ ಪರೀಕ್ಷೆಗೆ ಒಂದು ಒರೆಗಲ್ಲೂ ಹೌದು. ಅವಲೋಕನ ಅಥವ ರಿವ್ಯೂ ಎಂಬುದು ಕೆಲವು ಸಲ ದೃಶ್ಯಕಲೆ, ಪ್ರದರ್ಶನ ಕಲೆಗಳಿಗೂ ಅನ್ವಯಿಸುವ ಶಬ್ದವಾಗಿದೆ. ಸ್ಥಳಾವಕಾಶದ ಕೊರತೆಗೆ ಸಾಹಿತ್ಯೇತರ ಕಲೆಗಳು ಅವಲೋಕನದ ವಿಭಾಗದಲ್ಲಿ ಸೇರುವುದೂ ಇನ್ನೊಂದು ಕಾರಣವಾಗಿದೆ. ಹಾಗೆಂದೊಡನೆ ಎಲ್ಲ ಅವಲೋಕನಗಳೂ

ದೀರ್ಘವಾಗಿರದೆ ಪ್ಯಾರಾಗಳಲ್ಲೇ ಮುಕ್ತಾಯವಾಗಿ ಬಿಡುತ್ತವೆ ಎಂದಲ್ಲ. ಅವಲೋಕನದ ದೀರ್ಘತೆಯು ಪುಸ್ತಕದ ಸತ್ವ, ವಿವೇಚಿಸಬಹುದಾದ ವಿಚಾರಗಳನ್ನು ಅವಲಂಬಿಸಿದೆ.

ಹಿಂದಿನ ಬಹುತೇಕ ನಿಯತಕಾಲಿಕಗಳು ಅವಲೋಕನವನ್ನು ಪ್ರಕಟಿಸಿರುವುದಾದರೂ ಪುಸ್ತಕ ವಿಮರ್ಶೆಗೆ ಪ್ರತ್ಯೇಕ ಅಂಕಣವನ್ನೇ ಮೀಸಲಾಗಿರಿಸಿದ ಪತ್ರಿಕೆ ಎಂದರೆ ಪ್ರಬುದ್ಧ ಕರ್ನಾಟಕ. ಪ್ರಬುದ್ಧ ಕರ್ನಾಟಕದಲ್ಲಿ ಕಾವ್ಯಾವಲೋಕನ ಎಂಬ ಅಂಕಣದ ಅಡಿಯಲ್ಲಿ ಪುಸ್ತಕ ವಿಮರ್ಶೆ ಮಾಡಲಾಗುತ್ತಿತ್ತು. ಇಲ್ಲಿ ಕಾವ್ಯ ಎಂದರೆ ಎಲ್ಲವನ್ನೂ ಒಳಗೊಂಡ ಸಾಹಿತ್ಯ ಎಂದರ್ಥ. ಪ್ರಬುದ್ಧ ಕರ್ನಾಟಕದಂತಹ ಸಾಹಿತ್ಯ ಪತ್ರಿಕೆಗಳಲ್ಲದೆ ಚಿತ್ರಗುಪ್ತ, ಪ್ರಜಾಮತ, ಸುಧಾ, ಜನಪ್ರಗತಿ ಮೊದಲಾದ ವಾರಪತ್ರಕೆಗಳಲ್ಲೂ ಪುಸ್ತಕವಿಮರ್ಶೆ ಇರುತ್ತಿತ್ತು. ಕಥೆಗಾರ, ಕಥಾವಳಿಯಂತಹ ಕತೆಗಳಿಗಾಗಿಯೇ ಮೀಸಲಾಗಿದ್ದ ಪತ್ರಿಕೆಗಳಲ್ಲಿಯೂ ಸಹ ವಿಮರ್ಶೆ ಇರುತ್ತಿತ್ತು. ಇಂದಿಗೂ ಸುಧಾ, ತರಂಗ ಮುಂತಾದ ವಾರ ಪತ್ರಿಕೆಗಳಲ್ಲಿ, ಕಸ್ತೂರಿ, ಮಯೂರದಂತಹ ಮಾಸಿಕ ಹಾಗು ದಿನಪತ್ರಿಕೆಗಳ ವಾರದ ಪುರವಣಿಗಳಲ್ಲಿ ಪುಸ್ತಕಾವಲೋಕನವನ್ನು ಕಾಣಬಹುದು. ಕನ್ನಡ ಪುಸ್ತಕಗಳ ವಿಮರ್ಶೆ ಬರೀ ಕನ್ನಡ ಪತ್ರಿಕೆಗಳಲ್ಲಿ ಮಾತ್ರವಲ್ಲದೆ ದಿ ಹಿಂದೂ, ಡೆಕ್ಕನ್ ಹೆರಾಲ್ಡ್ ಮುಂತಾದ ಇಂಗ್ಲಿಷ್ ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತವೆ. ಅದರಲ್ಲೂ ಹಿಂದೂ ಪತ್ರಿಕೆ ೨೦ನೆ ಶತಮಾನದ ಪ್ರಾರಂಭದ ದಶಕಗಳಿಂದಲೂ ಅವಲೋಕನವನ್ನು ಪ್ರಕಟಿಸುತ್ತಿವೆ. ಹಿಂದೂ ಪತ್ರಿಕೆಯಲ್ಲಿ ಹಲವಾರು ಇಂಗ್ಲಿಷ್, ಸಂಸ್ಕೃತ, ಕನ್ನಡ ಗ್ರಂಥಗಳ ವಿಮರ್ಶಾ ಲೇಖನಗಳನ್ನು ವೀಸೀಯವರು ಬರೆದಿರುವುದನ್ನು ಕಾಣಬಹುದು. ಹೀಗಿದ್ದರೂ ಸಹ ವಾರಪತ್ರಿಕೆ, ದಿನಪತ್ರಿಕೆಗಳ ಪುರವಣಿಯಲ್ಲಿ ಸ್ಥಳಾವಕಾಶ ಒತ್ತಡ ಇರುವುದನ್ನು ಕಾಣಬಹುದು.

ಪುಸ್ತಕಾವಲೋಕನ ಯಾರನ್ನು ಉದ್ದೇಶಿಸಿದ್ದು, ಓದುವ ವರ್ಗ ಯಾವುದು ಎಂಬುದು ಮುಖ್ಯ. ಏಕೆಂದರೆ ಪ್ರಬುದ್ಧ ಕರ್ನಾಟಕ, ಸಾಹಿತ್ಯ ಪರಿಷತ್ಪತ್ರಿಕೆಗಳ ಓದುಗ ವಲಯ ಬೇರೆ. ಸಂಕ್ರಮಣ, ಶೂದ್ರದಂತಹ ಪತ್ರಿಕೆಗಳ ಓದುಗ ವಲಯವೇ ಬೇರೆ. ಇವೆರಡಕ್ಕಿಂತ ಭಿನ್ನವಾದ ಓದುಗ ವರ್ಗ ದಿನಪತ್ರಿಕೆ ಹಾಗು ವಾರಪತ್ರಿಕೆಗಳದ್ದು. ಅಂತಹ ಓದುಗ ವರ್ಗವನ್ನು ಗಮನದಲ್ಲಿಟ್ಟುಕೊಂಡೇ ಪುಸ್ತಕಾವಲೋಕನವನ್ನು ಪ್ರಕಟಿಸಬೇಕಾಗುತ್ತದೆ. ಏಕೆಂದರೆ ದಿನ/ವಾರ ಪತ್ರಿಕೆಗಳನ್ನು ಓದುವವರೆಲ್ಲ ಬರೀ ಸಾಹಿತ್ಯ ಪರಿಣತರಾಗಲಿ, ಸಾಹಿತ್ಯ ವಿದ್ಯಾರ್ಥಿಗಳಾಗಲಿ ಆಗಿರುವುದಿಲ್ಲ. ಹಾಗಾಗಿ ಸಾಹಿತ್ಯ ಪತ್ರಿಕೆಗಳಿಗೆ ಬರೆಯುವ ವಿಮರ್ಶಾ ಲೇಖನ ಜನಪ್ರಿಯ ಪತ್ರಿಕೆಗಳಿಗಿಂತ ಭಿನ್ನ ಸ್ವರೂಪದ್ದಾಗಿರುತ್ತದೆ.

ಡಾ.ಎಚ್.ಎಸ್. ರಾಘವೇಂದ್ರರಾವ್ ಅವರು ರಿವ್ಯೂಗಳು ಓದುಗರೊಂದಿಗೆ ನೇರವಾಗಿ ಸಂವಹಿಸುವ, ಆದರೆ ಅಲ್ಪಾಯುಷಿಯಾದ ಬರಹವಾಗಿದೆ ಎಂದಿದ್ದಾರೆ. 'ಓದುಗರೊಂದಿಗೆ ನೇರ ಸಂವಹನ' ಎಂಬುದು ಆಲೋಕನದ ಉಪಯುಕ್ತತೆಯನ್ನು ತಿಳಿಸುತ್ತದೆ. ಅವಲೋಕನ ಪ್ರಕಟವಾದ ನಂತರದ ದಿನಗಳಲ್ಲಿ ಬರುವ ಓದುಗರ ಪ್ರತಿಕ್ರಿಯೆಗಳು, ಕೃತಿಯ ಬಗೆಗಿನ ಆಸಕ್ತಿ ಹಾಗು ಚರ್ಚೆಯ ಜೀವಂತಿಕೆಯನ್ನು ವ್ಯಕ್ತಪಡಿಸುತ್ತವೆ. ಅವಲೋಕನ ಹಾಗು ಸಾಹಿತ್ಯಿಕ ಚಳುವಳಿಗಳನ್ನು ಬೆಳೆಸಿದ ಹಲವಾರು ಸಾಹಿತ್ಯ ಪತ್ರಿಕೆಗಳನ್ನು ನಾವು ಕಾಣಬಹುದು. 'ರಿವ್ಯೂ'ಗಳು ಅಲ್ಪಾಯುಷಿಗಳು ಎಂಬ ಮಾತನ್ನು ಒಪ್ಪಲು ಸಾಧ್ಯವಿಲ್ಲವಾದರೂ ನಮ್ಮಲ್ಲಿ ಪುಸ್ತಕಗಳನ್ನು ವಿಮರ್ಶಿಸುವಾಗ ಹಿಂದಿನದನ್ನು ಗಮನಿಸಿ ಚಿಂತನೆಯ ಬೆಳವಣಿಗೆಯನ್ನು ಗುರುತಿಸುವ ಪರಿಪಾಟ ಬರಲಿಲ್ಲ.

> "ಇಂದು ಶ್ರೇಷ್ಠ ಲೇಖಕರು ಎನಿಸಿಕೊಂಡವರೆಲ್ಲ ಪ್ರಾರಂಭದಲ್ಲಿ ಪುಸ್ತಕಾವಲೋಕನ ಬರೆದವರು. ವೀಸೀ, ಕೆ. ನರಸಿಂಹಮೂರ್ತಿ, ದಶಕಗಳ ಕಾಲ ಹಾಗೆ ಬರೆದರು. ಮುಂದೆ ಲಂಕೇಶ್, ಕೆ.ವಿ.ನಾರಾಯಣ, ಎಚ್.ಎಸ್.ಆರ್, ಸಿ.ಎನ್.ಆರ್.,

ಮೊದಲಾದವರು ಅವಲೋಕನದ ಹೆಸರಿನಲ್ಲಿ ದೀರ್ಘ ಲೇಖನಗಳು, ಗ್ರಂಥಗಳನ್ನು ರಚಿಸಿದ್ದಾರೆ. ಏನಿಲ್ಲವೆಂದರೂ ಅವಲೋಕನದ ಅಂಕಣ ಬರಹಗಳು ಸಂಕ್ಷಿಪ್ತತೆ, ಬಿಗಿ ಗುಣಗಳನ್ನು ರೂಢಿಸಿಕೊಳ್ಳಲು ನೆರವಾಗುತ್ತವೆ. ಜಾಳು ಬರಹಕ್ಕೆ ನಿಯಂತ್ರಣ ಹಾಕುತ್ತವೆ."

"ನವೋದಯದ ವಿವೇಚನೆ, ವಿಶ್ಲೇಷಣೆಯ ವಿಧಾನವನ್ನು ವರ್ಣನಾತ್ಮಕ ವಿಮರ್ಶೆ ಎನ್ನುವುದುಂಟು. ಪ್ರಾರಂಭದ ವಿಮರ್ಶಾ ಲೇಖನಗಳಲ್ಲಿ ಹಾಗೆಯೇ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟವಾದ ಕಾವ್ಯ, ಕಾದಂಬರಿ ಮೊದಲಾದ ಸೃಜನಶೀಲ ಕೃತಿಗಳ ವಿಮರ್ಶೆ ಹೀಗಿದ್ದುದುಂಟು. ಚರ್ಚೆಗೆ ಅವಕಾಶ ಇರುವ ಅಂಶಗಳ ವಿವೇಚನೆ ಇರುತ್ತಿತ್ತು. ಪೀಠಿಕೆ, ವಸ್ತುವಿನ ಕಥಾಸಾರ, ಪಾತ್ರ-ಸನ್ನಿವೇಶಗಳ ವಿವೇಚನೆ, ಜೀವನದರ್ಶನ ಅಂತಿಮವಾಗಿ ಮೌಲ್ಯನಿರ್ಣಯದ ಮಾತುಗಳಿಂದ ಮುಕ್ತಾಯ""

ಐವತ್ತರ ದಶಕದ ನಂತರ ಅವಲೋಕನಗಳಲ್ಲಿ ಈ ಮಾದರಿ ಕಂಡು ಬರುವುದಿಲ್ಲ (ಕೆಲವನ್ನು ಹೊರತು ಪಡಿಸಿ). ಹಿಂದೆ ರಸ, ಅಲಂಕಾರ, ಧ್ವನಿಗಳ ದೃಷ್ಟಿ ಅವಲೋಕನದಲ್ಲಿ ಮುಖ್ಯವಾಗಿದ್ದರೆ ನಂತರದಲ್ಲಿ ರೂಪಕ ಪ್ರತಿಮೆಗಳ ವಿಶ್ಲೇಷಣೆಗೆ ಒತ್ತು ನೀಡಲಾಗುತ್ತಿತ್ತು. ವಿಸ್ತಾರಕ್ಕಿಂತ ಸಂಗ್ರಹ, ಸಂಕ್ಷಿಪ್ತತೆಗೆ ಒತ್ತು ಇರುತ್ತಿತ್ತು. ಅವಲೋಕನ ಹೇಗಿರಬೇಕು, ಅದರ ಮುಖ್ಯಕಾರ್ಯವೇನು ಎಂಬುದಕ್ಕೆ ವೀಸೀಯವರ ಈ ಮಾತುಗಳು ಉತ್ತರರೂಪವಾಗಿದೆ:

"If a review does not let one to think about a whole subject, why should it exist and why should one write at all? He should call out such a meaning from the words and sentences, and then comment in such a manner as to bring out an additional meaning out of it..It must be a conscious attitude of a reviewer and a critic that he should not indulge in bantering, carping, canvilling or in petty fogging"

ಎನ್ನುತ್ತಾರೆ. ಪುಸ್ತಕ ವಿಮರ್ಶೆ ಪ್ರಬುದ್ಧ ಕರ್ನಾಟಕಕ್ಕಿಂತ ಮುಂಚಿನ ಸುವಾಸಿನಿ, ಶ್ರೀಕೃಷ್ಣಸೂಕ್ತಿ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದರೂ ಅದು ನಿಯತವಾದದ್ದು ಪ್ರಬುದ್ಧ ಕರ್ನಾಟಕದಲ್ಲಿ. ಹಾಗೆ ದಾಖಲಾಗಿರುವ ಬಹುಶಃ ಮೊದಲ ಪುಸ್ತಕಾವಲೋಕನ ಪ್ರಕಟವಾದದ್ದು ೧೯೦೨ರ ಸುವಾಸಿನಿಯ ಡಿಸೆಂಬರ್ ಸಂಚಿಕೆಯಲ್ಲಿ. ಅದು ರಾಮಾಶ್ವಮೇಧವನ್ನು ಕುರಿತಾದದ್ದು. ಲೇಖಕರು ಬಿಎಂಶ್ರೀ ಹಾಗು ಎಂ.ಎಸ್.ಎಸ್. ಎಂಬುವರು. 'ಇಂಗ್ಲಿಷ್ ಗೀತಗಳು' ಪ್ರಕಟವಾಗುವ ಮುನ್ನವೇ ಬಿಎಂಶ್ರೀ ವಿಮರ್ಶೆಯ ಕ್ಷೇತ್ರಕ್ಕೆ ಪ್ರವೇಶಿಸಿದ್ದರು ಎಂಬುದು ಇದರಿಂದ ತಿಳಿಯುತ್ತದೆ. ಈ ಅವಲೋಕನದಲ್ಲಿ ಭಾಷಾದೃಷ್ಟಿಯಿಂದ ನಾಗವರ್ಮನ ಕಾವ್ಯದ ಗದ್ಯಭಾಗ ಹಾಗು ರಾಮಾಶ್ವಮೇಧದ ಭಾಗಗಳನ್ನು ಹೋಲಿಸಿದ್ದಾರೆ. ಮುದ್ದಣ ಬಳಸಿರುವ ಶಬ್ದಾಲಂಕಾರಗಳು ಭೂಷಣವೆಂದು ನಮಗೆ ತೋರುವುದಿಲ್ಲ ಎಂದಿದ್ದಾರೆ. ಹಾಗೆಯೆ 'ಕಥಾಭಾಗಕ್ಕಿಂತ ನಡುವೆ ಸೇರಿಸಿರುವ ಗಂಡ-ಹೆಂಡಿರ ಮಾತುಗಳು ಮನಸ್ಸನ್ನು ಹೆಚ್ಚು ಸೆಳೆಯುತ್ತವೆ ಎಂದು ಓದುಗರೆಲ್ಲರೂ ಒಪ್ಪಿಯೇ ತೀರಬೇಕು'ಎಂದಿದ್ದಾರೆ. ಮುಂದೆ ಇದನ್ನೇ ಕುರಿತು 'ಸಾಮಾನ್ಯ

ಚಿತ್ರಕ್ಕೆ ಸುವರ್ಣದ ಚೌಕಟ್ಟು' ಎಂಬ ಶೀರ್ಷಿಕೆಯಲ್ಲಿ ಎಸ್.ವಿ.ರಂಗಣ್ಣನವರು ಪ್ರಬುದ್ಧ ಕರ್ನಾಟಕದಲ್ಲಿ ವಿಮರ್ಶಿಸಿರುವುದನ್ನು ಕಾಣಬಹುದು.

ಪ್ರಬುದ್ಧ ಕರ್ನಾಟಕದ 'ಕಾವ್ಯಾವಲೋಕನ': ಪ್ರಬುದ್ಧ ಕರ್ನಾಟಕದ ಪ್ರಥಮ ಸಂಚಿಕೆಯಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ಅಗ್ರಲೇಖನದ ಜೊತೆಗೆ ಎನ್. ನೀಲಕಂಠಪ್ಪನವರ 'ರವಿ ಕಾಣದುದನ್ನು ಕವಿ ಕಂಡ', ಎಸ್.ವಿ. ರಂಗಣ್ಣನವರ 'ಕನ್ನಡ ಸಾಹಿತ್ಯದ ಗುಣ ದೋಷಗಳು' ಎಂಬ ವಿಮರ್ಶಾ ಲೇಖನಗಳು ಕಾವ್ಯಾವಲೋಕನ ಅಂಕಣದಡಿಯಲ್ಲಿ ತಿರುಮಲಮ್ಮನವರ 'ಪೂರ್ಣಕಲಾ' ಕಾದಂಬರಿಯ ಕುರಿತ ಎ.ಆರ್.ಕೃ ಅವರ ಪುಸ್ತಕಾವಲೋಕನ ಪ್ರಕಟವಾಗಿದೆ.[8] ಸಾಹಿತ್ಯ ಪತ್ರಿಕೆಯಾಗಿ ಪುಸ್ತಕ ವಿಮರ್ಶೆಗೇ ಒಂದು ಕಾಲಂ ನೀಡುವ ಮೂಲಕ ಪುಸ್ತಕ ವಿಮರ್ಶೆಯ ಬರವಣಿಗೆಗೆ ಒಂದು ಗೌರವ ಗಾಂಭೀರ್ಯವನ್ನು, ಸಾಹಿತ್ಯ ವಿಮರ್ಶೆಯ ಕ್ಷೇತ್ರದಲ್ಲಿ ಅದಕ್ಕೆ ಒಂದು ಸ್ಥಾನವನ್ನು ನೀಡಿದ ಕೀರ್ತಿ ಪ್ರಬುದ್ಧ ಕರ್ನಾಟಕಕ್ಕೆ ಸಲ್ಲುತ್ತದೆ.

ಈ ಅಂಕಣದಲ್ಲಿನ ಎ.ಆರ್.ಕೃ ಅವರ ಬರವಣಿಗೆಗಳು ಅವಲೋಕನಕ್ಕೆ ಒಂದು ನಿಶ್ಚಿತ ವ್ಯಾಖ್ಯಾನವನ್ನೇ ನೀಡಿದೆ. ಪುಸ್ತಕಾವಲೋಕನದಲ್ಲಿ ವಿಮರ್ಶೆಯ ಮಟ್ಟ ಹೇಗಿರಬೇಕು ಎಷ್ಟಿರಬೇಕು ಎಂಬುದನ್ನು ವಿಶದಪಡಿಸುತ್ತದೆ. ಅಂಥದೊಂದು ಬರವಣಿಗೆಯನ್ನು ಇಲ್ಲಿ ಉದಾಹರಣೆಗಾಗಿ ಉಲ್ಲೇಖಿಸಲಾಗಿದೆ:

> "ಇದೊಂದು ಕಾದಂಬರಿ. ಕಾದಂಬರಿಗಳಲ್ಲಿ ಎಷ್ಟೋ ವಿಧಗಳುಂಟು. ಆದ್ದರಿಂದ ಇದನ್ನು ಎಂಥ ಕಾದಂಬರಿ ಎಂದು ಕರೆಯೋಣ? ಇದರಲ್ಲಿ ನೀತಿಬೋಧೆಯು ಎದ್ದು ಕಾಣುವುದರಿಂದ ಇದನ್ನು 'ನೈತಿಕ ಕಾದಂಬರಿ' ಎಂದು ಕರೆಯಬಹುದು ಎಂದು ತೋರುತ್ತದೆ. ಆದರೆ 'ನೈತಿಕ ಕಾದಂಬರಿ' ಎನ್ನುವುದು 'ಗಂಡಸು-ಹೆಂಗಸು' ಎನ್ನುವುದೂ ಎರಡೂ ಒಂದೇ. ಅದು ಹೇಗೆ ಎಂಬುದನ್ನು ಮುಂದೆ ವಿಚಾರ ಮಾಡುವೆವು. ಕಾದಂಬರಿಗೆ ವಸ್ತು, ಪಾತ್ರ, ರಸ, ಕಾಲ, ದೇಶ, ವರ್ತಮಾನ, ರೀತಿ, ನೀತಿ ಎಂದು ಮುಖ್ಯವಾಗಿ ಎಂಟು ಅಂಗಗಳು. ವಸ್ತು ವಿಚಾರವಾಗಿ ಈ ಗ್ರಂಥದಲ್ಲಿ ಸ್ವಾರಸ್ಯಕರವಾದ ಕಥೆಯಾಗಲಿ, ಹೇಳಿಕೊಳ್ಳುವ ಸಂವಿಧಾನ ಕೌಶಲವಾಗಲಿ ಇರುವುದಿಲ್ಲ ಎಂದು ಹೇಳಿಬಿಟ್ಟರೆ ಸಾಕಾಗಿದೆ. ಪಾತ್ರಗಳ ವಿಚಾರವಾಗಿ ಗ್ರಂಥಕಾರ್ತಿ 'ಈ ಗ್ರಂಥದಲ್ಲಿ ಬಂದಿರುವ ಪಾತ್ರಗಳಿಗೆ ಕೊಟ್ಟಿರುವ ಹೆಸರುಗಳೂ ಕೂಡ ಆಯಾ ಪಾತ್ರಗಳ ಗುಣ ಸ್ವಭಾವ ವರ್ತನೆಗಳಿಗೆ ಅನ್ವಯಿಸುವಂಥದ್ದು ಆಗಿರುವುದಲ್ಲದೆ ಅನ್ಯದೇಶೀಯರ ಹೆಸರನ್ನು ರೂಢಿಗೆ ತಂದು ಅನ್ಯದೇಶೀಯರ ಆಚಾರ, ವಿಚಾರಗಳನ್ನು ಅನುಕರಣಕ್ಕೆ ತಂದು ಅವರಂತಾಗಲು ಕುಣಿಯಬೇಕೆಂಬ ಅಭಿಲಾಷೆಯೂ ಇಲ್ಲ' ಎಂದು ಹೇಳಿದ್ದಾರೆ. 'ಅನ್ಯದೇಶೀಯರ ಹೆಸರನ್ನು..ಅಭಿಲಾಷೆಯೇನೂ ಇಲ್ಲ' ಎಂಬುದು ಯಾರ ಮೇಲೆ ಪ್ರಯೋಗಿಸಿದ ಬಾಣ? ವೆಂಕಟಾಚಾರ್ಯರ ಕಾದಂಬರಿಗಳ ಮೇಲೆಯೇ? ಹಾಗಿದ್ದರೂ 'ಸಲ್ಲದುಂಬಿದನಿಸಲ್ಗಡ!' ಏಕೆಂದರೆ ಅವರು ಭಾಷಾಂತರ ಮಾಡಿದ ಗ್ರಂಥಗಳಲ್ಲಿ ಪರದೇಶದ ಹೆಸರುಗಳೂ ಆಚಾರಗಳೂ ಬರದೆ ನಿಲ್ಲುವುದು ಹೇಗೆ? 'ಕುಣಿಯುವುದು' ಎಂಬ ಶಬ್ದವು ಗೌರವ ಸೂಚಕವಲ್ಲ. ಇದರಲ್ಲಿ ಒಂದು ಖಂಡುಗದಷ್ಟು ಪರಾವಹೇಳನವೂ, ಆತ್ಮಶ್ಲಾಘನೆಯೂ ತುಂಬಿವೆ. ಇದರಲ್ಲಿ ಬರುವ ಪಾತ್ರಗಳೆಲ್ಲವೂ

ನಾಟಕ ರಂಗದಲ್ಲಿ ಸ್ವಸ್ವರೂಪವನ್ನು ಮರೆಸಿಕೊಂಡು ಬಂದು ಅಭಿನಯಿಸಿ ಹೋಗುವವರ ಹಾಗಿವೆ. ಒಬ್ಬರನ್ನೊಬ್ಬರು ಮಾತನಾಡಿಸುವ ರೀತಿ, ಕರೆಯುವ ರೀತಿ, ಇವುಗಳನ್ನು ನೋಡಿದರೆ, ಇವುಗಳು ಸಹಜವಾದ ನಡೆ ನುಡಿಗಳಲ್ಲವೆಂದೂ ಗಟ್ಟಿಮಾಡಿಕೊಂಡು ಬಂದು ಹೇಳಿದ ಮಾತುಗಳಂತೆಯೂ ತೋರುವುದು.." [೬]

ಕಾದಂಬರಿಯ ರೂಪ, ಸಂವಿಧಾನ ಕೌಶಲ, ಪಾತ್ರಗಳ ನಿರೂಪಣೆ, ಕಾದಂಬರಿಯ ವಾಸ್ತವತೆ, ನೀತಿ ಇತ್ಯಾದಿ ವಿಚಾರಗಳ ಸೂಚನೆ ಇದೆ. ಜೊತೆಗೆ ಈ ಕಾದಂಬರಿಯಲ್ಲಿ 'ನೀತಿ ಬೋಧನೆಯೇ ಬಹಳವಾಗಿರುವುದರಿಂದ ನೀತಿಯು ಕಾವ್ಯ ಸೌಂದರ್ಯಕ್ಕೂ ರಸಸ್ಫೂರ್ತಿಗೂ ಹಾನಿ ಮಾಡಿದೆ' ಎಂದಿದ್ದಾರೆ. ಹಿಂದಿನ ವಿಮರ್ಶೆಗಳಲ್ಲಿ ಕಥೆ, ಕಾದಂಬರಿಯ ವಸ್ತು, ಪಾತ್ರನಿರೂಪಣೆ ಮುಂತಾದ ಅಂಶಗಳನ್ನು ಗಮನಿಸಲಾಗುತ್ತಿತ್ತು. ಉದಾಹರಣೆಗೆ ಬಂಕಿಮ ಚಂದ್ರರ ಕಾದಂಬರಿ 'ವಿಷವೃಕ್ಷ' (ಅನು: ಬಿ.ವೆಂಕಟಾಚಾರ್ಯ) ಇದನ್ನು ಕುರಿತು ಎ.ಆರ್.ಕೃಷ್ಣಶಾಸ್ತ್ರಿಗಳು ಬರೆದ ವಿಮರ್ಶೆ ಸುಮಾರು ಹದಿನೈದು ಪುಟಗಳಷ್ಟಿದೆ.[೭] ಅದರಲ್ಲಿನ ಒಂದು ವಿಮರ್ಶೆಯ ಮಾತು ಹೀಗಿದೆ:

> "ಒಂದೊಂದು ಸಣ್ಣ ಅಂಶವೂ ಕವಿಯ ಅನಾದೃಶವಾದ ಸಾಮರ್ಥ್ಯವನ್ನು ಗ್ರಂಥ ಶ್ಲಾಘ್ಯತೆಯನ್ನು ವ್ಯಕ್ತಪಡಿಸುತ್ತದೆ..ಈ ಕಥೆಯು ನೈಸರ್ಗಿಕವಾಗಿದ್ದು ನಿಜತ್ವದ ಭ್ರಾಂತಿಯನ್ನು ಉಂಟುಮಾಡುತ್ತದೆ. ಆ ಪಾತ್ರಗಳು ಎಷ್ಟರ ಜೀವಿತ ಮನುಷ್ಯರಂತೆ ನಡೆ ನುಡಿ ಸ್ವಭಾವಗಳನ್ನು ತೋರ್ಪಡಿಸುತ್ತವೆ ಎಂದರೆ ಅವುಗಳ ಕಷ್ಟದಲ್ಲಿ ನಾವು ಮರುಗುವಂತೆಯೂ ಸುಖದಲ್ಲಿ ಹಿಗ್ಗುವಂತೆಯೂ ಮಾಡುತ್ತವೆ".

ಮಾಸ್ತಿಯವರ 'ಕೆಲವು ಸಣ್ಣಕತೆಗಳು', ಡಿವಿಜಿಯವರ 'ವಸಂತ ಕುಸುಮಾಂಜಲಿ' (ಎರಡು ಪುಟಗಳ ವಿಮರ್ಶೆ) ಇಲ್ಲಿ ವಿಮರ್ಶೆಗೆ ಒಳಗಾಗಿದೆ. ಇಲ್ಲಿ ವಿಮರ್ಶಾ ಲೇಖನ, ಅವಲೋಕನಗಳ ನಡುವೆ ವ್ಯತ್ಯಾಸವೇ ಕಂಡು ಬರುವುದಿಲ್ಲ. ಪ್ರಬುದ್ಧ ಕರ್ನಾಟಕ ಸಾಹಿತ್ಯದ ಪತ್ರಿಕೆಯೇ ಆಗಿರುವುದರಿಂದ ವಿವರವಾದ ವಿಮರ್ಶೆ ಇಲ್ಲಿ ಸಾಧ್ಯವಾಗಿದೆ.

ಟಿ.ಪಿ. ಕೈಲಾಸಂ ಅವರ ಮೊದಲ ನಾಟಕ 'ಟೊಳ್ಳುಗಟ್ಟಿ' ಬಗ್ಗೆ ಎ.ಆರ್. ಕೃಷ್ಣಶಾಸ್ತ್ರಿಗಳು ಪ್ರಬುದ್ಧ ಕರ್ನಾಟಕದಲ್ಲಿ ದೀರ್ಘವಾದ ವಿಮರ್ಶೆ ಬರೆದಿದ್ದಾರೆ. ಇಂಗ್ಲೆಂಡಿನ ನಾಟಕಗಳ ಹಿನ್ನೆಲೆಯಲ್ಲ ಇಂತಹ ಹೊಸ ಬಗೆಯ ಸಾಮಾಜಿಕ ನಾಟಕವನ್ನು ವಿವೇಚಿಸಿದ್ದಾರೆ. ಇಲ್ಲಿ ನಾಟಕದ ಭಾಷೆಯ ಬಗ್ಗೆಯೂ ಚರ್ಚೆಯಾಗಿದೆ. ಅಂದಿನ ಅವಲೋಕನಗಳಲ್ಲ ಮೊದಲು ನಾಟಕ, ಕಾದಂಬರಿ ಅಥವ ಕತೆಯ ಸಂಗ್ರಹರೂಪವನ್ನು ಕೊಟ್ಟು ಅನಂತರ ವಿವರವಾದ ವಿಶ್ಲೇಷಣೆ ಮಾಡಲಾಗುತ್ತಿತ್ತು. ಇಂದಿನ ಅವಲೋಕನಗಳಲ್ಲಿ ಆ ಪರಿಪಾಟ ಇಲ್ಲವೇ ಇಲ್ಲ ಎನ್ನಬಹುದು. ಕೈಲಾಸಂ ಬಳಸುವ ಭಾಷೆಯ ಬಗ್ಗೆ ಬರೆಯುತ್ತ

> "ಈ ಗ್ರಂಥವನ್ನು ಬರೆದಿರುವ ಭಾಷೆಯಲ್ಲಿಯೂ ಒಂದು ವಿಧವಾದ ಕೊರತೆ ಇದೆ. ಇಲ್ಲಿಯೂ ನೈಸರ್ಗಿಕವಾಗಿರಬೇಕು ಎಂಬ ಉದ್ದೇಶದಿಂದ ಹೊಸೆದ ಹಗ್ಗದಂತಿರುವ ಅದೊಂದು ಬಗೆಯ ಶೈಲಿಯನ್ನು ಉಪಯೋಗಿಸುತ್ತಾರೆ. ಯಾವ ದೇಶದ ಯಾವ ಕಾಲದ ಸಾಹಿತ್ಯವನ್ನು ನೋಡಿದರೂ ಆಡುವ ಭಾಷೆಗೂ ಬರೆಯುವ ಭಾಷೆಗೂ – ಅದನ್ನು ಎಷ್ಟು ಸುಲಭವಾಗಿ, ಸಹಜವಾಗಿ ಬರೆಯಬೇಕೆಂದು ಪ್ರಯತ್ನ ಪಟ್ಟರೂ – ವ್ಯತ್ಯಾಸ ಇದ್ದೇ ಇರುವುದು ಗೊತ್ತಾಗುತ್ತದೆ: ಅಲ್ಲದೆ ಆಡುವಂತೆಯೇ

ಸ್ವಲ್ಪವೂ ಭೇದವಿಲ್ಲದೆ ಬರೆಯುವುದು ಸಾಧ್ಯವೇ? ಪ್ರಾಚೀನ ಮಾರ್ಗ ಪಕ್ಷಪಾತಿಗಳು ಬರೆಯುವ ಎರಕ ಹುಯ್ದ, ಉಕ್ಕಿನ ಗಟ್ಟಿಗಳಂತೆ ಮೂಲೆಮೂಲೆಯಾಗಿ ಪೆಡಸಾಗಿರುವ ಭಾಷೆ ಎಷ್ಟು ಕೃತಕವೋ ಇದೂ ಅಷ್ಟೇ ಕೃತಕವಾಗುತ್ತದೆ. ಈ ಗ್ರಂಥದ ಕೊನೆಯಲ್ಲಿ ಬರುವ 'ಸಾಕೋದ್ಧರಿತಾತ ಸಾವಿರಜನಕ್ತಾತ' ಎಂಬ ವಾಕ್ಯವನ್ನು ಅರ್ಥ ಮಾಡಿಕೊಳ್ಳುವುದಕ್ಕಂತೂ ತೈತ್ತರೀಯ ಉಪನಿಷತ್ತಿನಲ್ಲಿ ಬರುವ ಭೃಗು ವಾರುಣಿಯಂತೆ ತಪಸ್ಸು ಮಾಡಬೇಕಾಯಿತು"[೬]

ಎಂದಿದ್ದಾರೆ. ಜೊತೆಗೆ ಈ ಕ್ಲಿಷ್ಟವಾಕ್ಯ ಪ್ರಯೋಗವನ್ನು ನಾಲ್ಕು ಬಗೆಯಲ್ಲಿ ಅರ್ಥೈಸಿದ್ದಾರೆ – ಸಾಕುವುದು ನಂತಾತ, ಸಾಕುವುದು ನರಿ ತಾತ!, ಸಾಕುವುದನ್ನು ಅರಿ ತಾತ!, ಸಾಕುವುದನ್ನು ಅರಿತಾತ.

ಈ ವಿಮರ್ಶೆಗೆ ಉತ್ತರವಾಗಿ 'ಜಯಕರ್ನಾಟಕ'ದ ಕಾರಹುಣ್ಣಿಮೆ ಸಂಚಿಕೆಯಲ್ಲಿ 'ಟೊಳ್ಳುಗಟ್ಟಿಯ ಗುಟ್ಟನ್ನರಿತ ಪುಟ್ಟುವಿನಂತಹ ಕಿಟ್ಟು' ಎನ್ನುವ ಹೆಸರಿನಲ್ಲಿ ಮಾಡಿರುವ ವಿಮರ್ಶೆ ಕುತೂಹಲಕರವಾಗಿದೆ

"ಸಾಹಿತ್ಯದಲ್ಲಿ ಯಾವ ಸ್ಥಾನವಿಲ್ಲದಿದ್ದರೂ, ಪ್ರಾಶಸ್ತ್ಯವಿಲ್ಲದಿದ್ದರೂ ಸಂಘದಲ್ಲಿ, ಜನಜೀವನದಲ್ಲಿ ನಟಲೋಕದಲ್ಲಿ ಅಗ್ರಸ್ಥಾನದಲ್ಲಿ ಇಲ್ಲದಿದ್ದರೂ ಮಾನವೀಯ ಸ್ಥಾನವನ್ನು ಟೊಳ್ಳುಗಟ್ಟಿ ಪಡೆದಿದೆ ಎನ್ನುವುದು ತಿಳಿಗಣ್ಣಿನವರಿಗೆ ತಿಳಿದ ವಿಷಯ. ಇದು ಜನಜೀವನದ ಸುಧಾರಣೆಗಾಗಿ ಬರೆಯಲ್ಪಟ್ಟಿದೆ.. ನೂರು ಜನರಲ್ಲಿ ತೊಂಬತ್ತು ಮಂದಿ ಪುಟ್ಟುಗಳಿದ್ದಾರೆ. ಹುಳುಕುಗಳನ್ನು ವಿಸ್ತಾರ ಮಾಡಿ ತೋರಿಸದಿದ್ದರೆ ನಿಜ ಸ್ವರೂಪ ತಿಳಿಯುವುದಿಲ್ಲ"

ಎಂದಿದ್ದಾರೆ. ಈ ನಾಟಕದಲ್ಲಿನ ಅತಿಪ್ರಾಸದ ಬಳಕೆಯನ್ನು ಎ.ಆರ್.ಕೃಷ್ಣಶಾಸ್ತ್ರಿ ಟೀಕಿಸಿದ್ದಾರೆ. ಕೃಷ್ಣಶಾಸ್ತ್ರಿಗಳ ಅಭಿಪ್ರಾಯವನ್ನು ಒಪ್ಪದ ವಿಮರ್ಶಕರು ಅತಿಪ್ರಾಸದಿಂದ ಅನುಕೂಲ ಇಲ್ಲದಿಲ್ಲ ಎಂದು ವಾದಿಸಿದ್ದರೆ, ಕೃಷ್ಣಶಾಸ್ತ್ರಿಗಳು 'ಆದರೆ ವಿಲಕ್ಷಣ ಸಂಹಿತೆ ಒಂದು ಲೋಪವಾಗುತ್ತದೆ. ಅದರ ಕಾಲದ ನಂತರ ಅದು ಸಾಯಬೇಕು' ಎಂದು ಪ್ರತಿಕ್ರಿಯಿಸುತ್ತಾರೆ. ಆ ಕಾಲದ ಪ್ರಬುದ್ಧ ಕರ್ನಾಟಕದಲ್ಲ ಸಾಕಷ್ಟು ವಿಮರ್ಶೆಗಳು, ಪ್ರತಿಕ್ರಿಯೆಗಳು, ವಾಗ್ವಾದಗಳು ನಡೆದಿವೆ. ಅವುಗಳನ್ನು ಎ.ಆರ್.ಕೃಷ್ಣಶಾಸ್ತ್ರಿಯವರ 'ಭಾಷಣಗಳು ಮತ್ತು ಲೇಖನಗಳು' ಎಂಬ ಶೀರ್ಷಿಕೆಯಲ್ಲಿ ಶಾರದಾ ಮಂದಿರ ಪ್ರಕಾಶಕರು ಪ್ರಕಟಿಸಿದ್ದಾರೆ. ಉದಾಹರಣೆಗೆ 'ಪ್ರಣಯಾವರ್ತ ಅಥವ ಚಂಚಲ ಕುಮಾರಿ' ಕುರಿತು ಎ.ಆರ್.ಕೃಷ್ಣಶಾಸ್ತ್ರಿಯವರು ಪ್ರಬುದ್ಧ ಕರ್ನಾಟಕದಲ್ಲಿ ಬರೆದ ವಿಮರ್ಶೆಯನ್ನು ಖಂಡಿಸಿ ಸಿ.ಎಸ್. ವೆಂಕಟಾಚಾರ್ಯ ಎಂಬುವರು ಜಯಕರ್ನಾಟಕದಲ್ಲಿ ಬರೆದರು. ಅದಕ್ಕೆ ಪ್ರತಿಕ್ರಿಯೆಯಾಗಿ ಪ್ರಬುದ್ಧ ಕರ್ನಾಟಕದಲ್ಲೇ ಎ.ಆರ್.ಕೃಷ್ಣಶಾಸ್ತ್ರಿಗಳು ಅವರ ಒಂದೊಂದೇ ಪ್ರಶ್ನೆಯನ್ನು ಉದ್ಧರಿಸಿ ಚರ್ಚಿಸಿ ದೀರ್ಘ ಉತ್ತರ ನೀಡಿರುವುದನ್ನು ಕಾಣಬಹುದು. ಕಾವ್ಯಾವಲೋಕನದ ಪ್ರಾರಂಭದಲ್ಲಿ ವಸ್ತುನಿಷ್ಠ ವಿವೇಚನೆಯನ್ನು ಗಮನಿಸಬಹುದಾಗಿದೆ. ಅನಂತರದ ದಶಕಗಳಲ್ಲಿ 'ರಸವಿಮರ್ಶೆ'ಯ ಮಾದರಿಯ ಲೇಖನಗಳು ಕಂಡು ಬರುವುದಿಲ್ಲ.

ಕೊನೆಯದಾಗಿ, ಡಾ. ಎಚ್.ಎಸ್. ರಾಘವೇಂದ್ರರಾವ್ ತಮ್ಮ 'ಶತಮಾನದ ವಿಮರ್ಶೆ ೨೦೦೧'ರ ಪ್ರಸ್ತಾವನೆಯಲ್ಲಿ ಪುಸ್ತಕ ವಿಮರ್ಶೆ

ಕುರಿತಂತೆ ತಮ್ಮ ಅಭಿಪ್ರಾಯ ಹಾಗು ಸೂಚನೆಗಳನ್ನು ಹೀಗೆ ಹೇಳಿದ್ದಾರೆ. "ಕನ್ನಡ ದಿನಪತ್ರಿಕೆಗಳು, ಇತರ ನಿಯತ ಕಾಲಿಕಗಳು, ಅವುಗಳದೇ ದೀಪಾವಳಿ ಸಂಚಿಕೆಗಳು..ಹಾಗೆಯೆ ಶ್ರೀಕೃಷ್ಣಸೂಕ್ತಿ, ಸುವಾಸಿನಿಗಳಿಂದ ಮೊದಲಾಗುವ ಸಾಹಿತ್ಯಿಕ, ಸಾಂಸ್ಕೃತಿಕ ಪತ್ರಿಕೆಗಳ ಪುಸ್ತಕ ವಿಮರ್ಶೆಯ ವಿಭಾಗಗಳೂ ಹಾಗು ಸಾಹಿತ್ಯಿಕ ಅಂಕಣಗಳೂ ಓದುಗರೊಂದಿಗೆ ನೇರ ಸಂವಹನದ ಅವಕಾಶ ಹೊಂದಿರುತ್ತವೆ. ಕೆಲವು ಪತ್ರಿಕೆಗಳಂತೂ ತಮ್ಮ ಆಯಸ್ಸಿನ ನಿರ್ದಿಷ್ಟ ಹಂತದಲ್ಲಿ ಸಾಹಿತ್ಯಿಕ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿವೆ. ಅವುಗಳ ಪ್ರಚಾರವನ್ನೇ ಸಂಕಲ್ಪಿಸಿವೆ. ಆದರೂ ಈ ಸಂಕಲನದಲ್ಲಿ ಪತ್ರಿಕೆಗಳಲ್ಲಿನ ಪುಸ್ತಕವಿಮರ್ಶೆ, ಪುಸ್ತಕಾವಲೋಕನಗಳಿಗೆ ಸ್ಥಾನ ಕೊಡಲು ಸಾಧ್ಯವಾಗಿಲ್ಲ. ಅವುಗಳು ಬಹುಮಟ್ಟಿಗೆ ಕೈಗೆ ಸಿಗದ ಅಲ್ಪಾಯುಷಿಗಳು. ಅವುಗಳನ್ನು ಆರ್ಚೀವ್‌ಗಳಿಂದ ಹುಡುಕಿ ತೆಗೆದು ಮುಖ್ಯವಾದ ಬುಕ್ ರಿವ್ಯೂಗಳದೇ ಸಂಕಲನವನ್ನು ಹೊರತರಲು ಅವಕಾಶವಿದೆ. ಅವುಗಳ 'ಯಾರಿಗೆ, ಯಾಕೆ, ಹೇಗೆ, ಎಷ್ಟು-ಗಳ ಬಗ್ಗೆ ಗಂಭೀರವಾದ ಚರ್ಚೆಯಾಗಬೇಕು".

ಅಂಕಣ ಸಾಹಿತ್ಯ ಮತ್ತು ಪತ್ರಿಕೆಗಳು: ಪತ್ರಿಕಾ ಸಾಹಿತ್ಯದಲ್ಲಿ ಅಂಕಣಗಳು ಬಹು ಮಹತ್ತರ ಪಾತ್ರವನ್ನು ವಹಿಸಿವೆ. ಪತ್ರಿಕೋದ್ಯಮದ ಜೊತೆಜೊತೆಯಲ್ಲಿಯೇ ಬೆಳೆದ ಇದು ಒಂದು ಸಾಹಿತ್ಯ ಪ್ರಕಾರವೆಂದೇ ಪರಿಗಣಿಸಬಹುದು. ಪ್ರಚಲಿತ ರಾಜಕೀಯ ಸಾರ್ವಜನಿಕ ವಿಷಯಗಳ ಬಗೆಗೆ ಬರೆಯುವ ಅಂಕಣ ಬರಹಗಾರರ ಸಂಪಾದಕೀಯ ಲೇಖನಗಳಿಗೆ ಬಹು ಹತ್ತಿರವಾದ ಅಭಿಪ್ರಾಯಗಳನ್ನು ಕೊಡಬಹುದು. ವಾಲ್ಟರ್ ಲಿಪ್‌ಮನ್ ಪ್ರಪಂಚದ ಪ್ರಸಿದ್ಧ ಅಂಕಣಕಾರ. ಈತ ಸಂಪಾದಕೀಯಕ್ಕೂ ಅಂಕಣಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲ ಎನ್ನುತ್ತಾನೆ.

ಅಂಕಣ ಬರಹ ಅವಸರದ ಸಾಹಿತ್ಯ ಎನ್ನುವ ಅಭಿಪ್ರಾಯ ಇದ್ದರೂ ಸಹ ಅದು ಸಾಮಾಜಿಕ ಸಾಹಿತ್ಯ, ಅನುಭವಿಯ ಮಾಗಿದ ಮನಸ್ಸಿನ ಸೃಜನಕ್ರಿಯೆ. ಒಂದು ದೇಶದ ನಿರ್ದಿಷ್ಟ ಕಾಲಖಂಡದಲ್ಲಿ ನಡೆಯುವ ವಿವಿಧ ಚಟುವಟಿಕೆ, ಘಟನೆಗಳ ಬಗ್ಗೆ ಈ ಬರಹಗಳು ಸಾರ್ವಕಾಲಿಕ ದಾಖಲೆಗಳಾಗಿ ಉಳಿಯುತ್ತವೆ.

ಖ್ಯಾತ ಪತ್ರಿಕೋದ್ಯಮಿ ಸಿದ್ಧವನಹಳ್ಳಿ ಕೃಷ್ಣಶರ್ಮರು ಪ್ರಾರಂಭಿಸಿದ 'ಮಾತಿನ ಮಂಟಪ' ಕನ್ನಡದಲ್ಲಿ ಅಂಕಣ ಬರಹದ ಉಗಮ ಎನ್ನಬಹುದು. ರಾಜಕೀಯ ಹಾಗು ಸಾಹಿತ್ಯ ಈ ಎರಡರಲ್ಲೂ ಪಳಗಿದ್ದ ಶರ್ಮರ ಮಾತಿನ ಮಂಟಪ ಬಹಳವಾಗಿ ಜನಪ್ರಿಯತೆ ಪಡೆದುದರ ಕಾರಣ – ಅವರ ಮಾತುಗಳಲ್ಲಿದ್ದ ತೀಕ್ಷ್ಣತೆ, ಖಚಿತತೆ ಹಾಗು ಅಭಿಪ್ರಾಯ ಸರಣಿ. ಖ್ಯಾತ ಕಾದಂಬರಿಕಾರರಾದ ತರಾಸು ತಮ್ಮ ಆರಂಭದ ದಿನಗಳಲ್ಲಿ 'ವಾಹಿನಿ' ವಾರ ಪತ್ರಿಕೆಯಲ್ಲಿ 'ತೋಚಿದ್ದು ಗೀಚಿದ್ದು' ಎಂಬ ಅಂಕಣವನ್ನು ಪ್ರಾರಂಭಿಸಿದ್ದರು. ನಾಡಿಗೇರ ಕೃಷ್ಣರಾಯರ 'ಅಯ್ಯಪ್ಪನ ಚಾವಡಿ' ಜನಪ್ರಗತಿಯಲ್ಲಿ ಪ್ರಕಟವಾಗುತ್ತಿದ್ದುದು ಆ ಕಾಲಕ್ಕೆ ಬಹು ಜನಪ್ರಿಯವಾಗಿತ್ತು.

ಕನ್ನಡ ಅಂಕಣ ಬರಹಗಾರರಲ್ಲಿ ನಿರಂಜನರು ಪ್ರಮುಖವಾಗಿ ಎದ್ದು ಕಾಣುವ ಸಾಹಿತಿ. ೧೯೪೯ರಲ್ಲಿ '...ಕೇಳಿದೆಯ?' ಎಂಬ ಶೀರ್ಷಿಕೆಯೊಂದಿಗೆ 'ಪ್ರಜಾಮತ' ಸಾಪ್ತಾಹಿಕದಲ್ಲಿ ಅವರ ಅಂಕಣ ಬರಹ ಪ್ರಾರಂಭವಾಯಿತು. ಅನಂತರದ ವರ್ಷಗಳಲ್ಲಿ ಅವರ ಸಹಸ್ರಾರು ಅಂಕಣ ಬರಹಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ವಿವಿಧ ಶೀರ್ಷಿಕೆಗಳ ಅಡಿಯಲ್ಲಿ ಪ್ರಕಟವಾದವು. 'ಸರೋಜ ಸಂಚಯ' (ಉಷಾ), 'ಸಂಗಾತಿಯ ಸಂಚಯ'(ಜನಶಕ್ತಿ), 'ಸಾಧನ ಸಂಚಯ' (ಉಷಾ, ಜನಪ್ರಗತಿ) 'ಓದುಗರೊಡನೆ ಐದು

ನಿಮಿಷ', 'ಬಿಸಿಲು ಬೆಳದಿಂಗಳು'(ನವಶಕ್ತಿ) ಮೊದಲಾದ ಇವರ ಅಂಕಣಗಳು ಸಾಹಿತ್ಯ ವಿಷಯಕ್ಕಷ್ಟೇ ಸೀಮಿತವಾಗಿರದೆ ವಿವಿಧ ವಿಷಯಗಳನ್ನು ಒಳಗೊಂಡಿದೆ. ಇಲ್ಲಿನ ಬಹುತೇಕ ಬರಹಗಳನ್ನು ಪುಸ್ತಕ ರೂಪದಲ್ಲೂ ಸಂಕಲಿಸಲಾಗಿದೆ.

"ನಿರಂಜನರ ಅಂಕಣಗಳಲ್ಲಿ ಕೇಳಿಸುವ ಪ್ರಧಾನ ಸ್ವರ ಬದುಕಿಗೆ ಬದ್ಧತೆ – ಪಂಥ, ಬಳಗ, ಪಕ್ಷಕ್ಕಿಂತ ಅಂತಃಸಾಕ್ಷಿಯ ಧೋರಣೆಗೆ ಮೊದಲ ಮಣೆ, ನಾಡು ನುಡಿ, ಕವಿ, ಕಲಾವಿದರ ಬಗೆಗೆ ಅಪಾರ ಅನುರಕ್ತ ಭಾವಗೀತಾತ್ಮಕತೆ, ಕನಸುತನ ಮೊದಮೊದಲ ಬರಹದ ಗುಣ. ಮುಂದೆ ನಾಟಕೀಯತೆ, ವ್ಯಂಗ್ಯ, ವಿಷಾದ, ಆ ಜಾಗವನ್ನು ಆಕ್ರಮಿಸಿಕೊಂಡವು. ನವಿರಾಗಿ ಸಾಗುವ ಮಾತು ಕೆಲವೊಮ್ಮೆ ಕಠೋರವೂ ಆಗುತ್ತದೆ". ಎಂಬುದಾಗಿ ವಿ.ವಿ. ನಾವಡ ಅವರು 'ಅಂಕಣಕಾರ ನಿರಂಜನ' ಲೇಖನದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ನಿರಂಜನರ ಅಂಕಣ ಲೇಖನಗಳು ಅವರ ವ್ಯಕ್ತಿತ್ವ ಮನೋಧರ್ಮಗಳಲ್ಲಾದ ವಿಕಾಸದ ಹಲವು ಹಂತಗಳ ದಿಕ್ಸೂಚಿ ಮಾತ್ರವಲ್ಲ, ಆಧುನಿಕ ಸಾಹಿತ್ಯ ಚರಿತ್ರ ಕಾರರಿಗೆ ಸಮೃದ್ಧ ಆಕರ ಎಂಬುದಾಗಿ ಎಂ.ಶ್ರೀನಿವಾಸ ಉಡುಪ ಅವರು 'ಕನ್ನಡದಲ್ಲಿ ಅಂಕಣ ಸಾಹಿತ್ಯ' ಲೇಖನದಲ್ಲಿ ಹೇಳುತ್ತಾರೆ.

ಪ್ರತಿಯೊಬ್ಬ ಪ್ರಮುಖ ಸಾಹಿತಿಯೂ ಒಂದಲ್ಲ ಒಂದು ಪತ್ರಿಕೆಗೆ ಕೆಲವು ಕಾಲವಾದರೂ ಅಂಕಣ ಬರಹಗಳನ್ನು ಬರೆದಿರುವುದನ್ನು ಗಮನಿಸಬಹುದಾಗಿದೆ. ಸಾಹಿತ್ಯ ವಿಷಯಗಳನ್ನೆ ಕುರಿತಂತೆ ಸಾಹಿತಿಗಳು ಬರೆದ ಅಂಕಣಗಳು ಹಲವಾರು. ಜಿ.ಪಿ.ರಾಜರತ್ನಂ ಅವರ 'ವಿಚಾರ ಸರಣಿ' (ಪ್ರಜಾವಾಣಿ), 'ವಿಚಾರರಶ್ಮಿ' (ಸುಧಾ), ವಿ.ಎಂ.ಇನಾಂದರ್ ಅವರ 'ಸಾಹಿತ್ಯ ವಿಹಾರ' (ಜಯಂತಿ, ಸುಧಾ), ಕು.ಶಿ. ಹರಿದಾಸ ಭಟ್ಟರ 'ಲೋಕಾಭಿರಾಮ' (ಉದಯವಾಣಿ), ನಾ.ಡಿಸೋಜಾ ಅವರ 'ಸಾಹಿತ್ಯ ಪ್ರಪಂಚ' (ಪ್ರಪಂಚ ಪತ್ರಿಕೆ), ಸುಶೀಲಾ ಕೊಪ್ಪರ್ ಸಂಯುಕ್ತ ಕರ್ನಾಟಕ, ಕನ್ನಡಪ್ರಭ ಪತ್ರಿಕೆಗಳಿಗೆ ಬರೆದ ಅಂಕಣಗಳನ್ನು ನಾವಿಲ್ಲಿ ಸ್ಮರಿಸಬಹುದು.

ಕಾಲು ಶತಮಾನದಿಂದ ಎಡೆಬಿಡದೆ ಅಂಕಣಗಳನ್ನು ರಚಿಸುತ್ತಿರುವ ಎಚ್ಚೆಸ್ಕೆ ಅವರದು ವಿಶಿಷ್ಟ ಶೈಲಿ. 'ವಾರದ ವ್ಯಕ್ತಿ' ಅಂಕಣದಲ್ಲಿ ಹೊಸ ಶೈಲಿಯೊಂದನ್ನು ಪ್ರಯೋಗಿಸಿ ಯಶಸ್ವಿಯಾದರು. ಅವರ ವಾರದವ್ಯಕ್ತಿ (ಸುಧಾ) ಅಂಕಣದ ಛಾಪು ಬರಹ ಓದುಗರನ್ನು ಸೆಳೆದಿತ್ತಲ್ಲದೆ ಚಿಂತನೆಗೂ ದಾರಿ ಮಾಡಿಕೊಟ್ಟಿತು. 'ವಾರದ ವ್ಯಕ್ತಿ' ಅಂಕಣ ಎಷ್ಟು ಜನಪ್ರಿಯವಾಯಿತು ಎಂದರೆ 'ಈ ವಾರದ ವ್ಯಕ್ತಿ ಯಾರು?' ಎಂದು ಜನ ಕುತೂಹಲದಿಂದ ಕಾಯುವ ಹಾಗಾಯಿತು. ೧೯೬೭ರಲ್ಲಿ 'ಪಟಾಡಿಯಾ ನವಾಬ್' ವಾರದ ವ್ಯಕ್ತಿಯಾದಾಗ ಎಚ್ಚೆಸ್ಕೆ ಹೀಗೆ ಬರೆದಿದ್ದರು 'ರಾಜ ಮಹಾರಾಜರುಗಳು, ನವಾಬರು, ಹಿಂದೆ ಬೀಳುತ್ತಿರುವ ಈ ಕಾಲದಲ್ಲಿ ಪಟೌಡಿಯ ನವಾಬ್ ಮುಂದೆ ಬರುತ್ತಿದ್ದರು. ಇದು ವಿಧಿಯ ವೈಚಿತ್ರ್ಯವಲ್ಲ; ಕ್ರಿಕೆಟ್ ವೈಶಿಷ್ಟ್ಯ.

ಪ್ರಜಾವಾಣಿಯ ಟಿಯೆಸ್ಸಾರ್ ಅವರ 'ಛೂಬಾಣ' ಅಂಕಣ ವೈಯೆನ್ಕೆ ಅವರು ಉದಯವಾಣಿಗೆ ಬರೆಯುದ್ದಿದ್ದ 'ವಂಡರ್ ಕಣ್ಣು' ಜನಪ್ರಿಯತೆ ಪಡೆದವು. ಅಂಕಣ ಸಾಹಿತ್ಯಕ್ಕೆ ಜಿ.ಪಿ.ರಾಜರತ್ನಂ ಅವರ ಕೊಡುಗೆ ಅಪಾರ. ಎಲ್ಲ ಕಾಲಕ್ಕೂ ನಿಲ್ಲಬಲ್ಲ ಅವರ 'ವಿಚಾರರಶ್ಮಿ' ಅಂಕಣ, ಕು.ಶಿ. ಹರಿದಾಸಭಟ್ಟರ 'ಲೋಕಾಭಿರಾಮ' ಅಂಕಣ ಉದಯವಾಣಿಯಲ್ಲಿ ಎರಡು ದಶಕಗಳಿಗೂ ಹೆಚ್ಚಿನ ಕಾಲ ಪ್ರಕಟಗೊಂಡಿತ್ತು. ಎಲ್.ಎಸ್. ಶೇಷಗಿರಿರಾಯರ 'ಸಾಹಿತ್ಯ ಸಿಂಚನ' ಮತ್ತು 'ಸಹಚಿಂತನ' ಅಂಕಣಗಳು, ಕೀರ್ತಿನಾಥ ಕುರ್ತಕೋಟಿ ಯವರ 'ಸಾಹಿತ್ಯ ಸ್ಪಂದನ', ಈಶ್ವರ ದೈತೋಟ ಅವರ 'ಅಂತರ ದೃಷ್ಟಿ'

(ಉದಯವಾಣಿ), ಆನಂದರಾವ್ ಅವರ 'ವಾರೆನೋಟ'(ಸುಧಾ), ಸಿ.ಪಿ.ಕೆ. ಅವರ ಚಿತ್ತರಂಗ (ಮಲ್ಲಿಗೆ), ಲಾಂಗೂಲಾಚಾರ್ಯ (ಪಾವೆಂ) ಅವರ 'ನಗೆ ಟಾನಿಕ್', ಓದುಗರೊಡನೆ ಹರಟೆ ಮರೆಯಲು ಸಾಧ್ಯವೇ ಇಲ್ಲ. ಚಿರಂಜೀವಿಯವರ ತುಂತುರು (ತುಷಾರ) ಸಾಹಿತ್ಯ ಲೋಕದಲ್ಲಿ ಹೊಸ ಮಾದರಿಯದ್ದಾಗಿದೆ. ಅಂಕಣ ಬರಹದಲ್ಲಿ ತೊಡಗಿದ ಮೊದಲ ಅಂಕಣಕಾರ್ತಿ ಶ್ರೀಮತಿ ವಿಜಯಾ. ಅವರ 'ಮಾತಿನಿಂದ ಲೇಖಕನಿಗೆ' ಅಂಕಣ ತುಷಾರ ಮಾಸಿಕದಲ್ಲಿ ಪ್ರಕಟಗೊಳ್ಳುತ್ತಿತ್ತು.

ಅಂಕಣಕಾರರಲ್ಲೇ ಪ್ರಸಿದ್ಧರಾದವರು ಡಾ.ಹಾ.ಮಾ. ನಾಯಕರು. ಅಂಕಣ ಸಾಹಿತ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಹಿರಿಮೆ ಅವರದು. ಕನ್ನಡಪ್ರಭ, ಪ್ರಜಾಮತ, ಗ್ರಂಥಲೋಕ, ಪ್ರಜಾವಾಣಿ ಪತ್ರಿಕೆಗಳಲ್ಲಿ ಅಂಕಣಕಾರರಾಗಿ ಅವರು ಮಾಡಿದ ಕೆಲಸ ಅಮೂಲ್ಯವಾದುದು. "ಆ ಮೂಲಕ ಅವರು ನಮ್ಮ ನಾಡಿನ ಸಾಂಸ್ಕೃತಿಕ ಚರಿತ್ರೆ ಬರೆಯುವವರಿಗೆ ಅಗತ್ಯವಾದ ಸಾಮಗ್ರಿಗಳ ಗಣಿಗಳನ್ನೇ ತೆರೆದಿದ್ದಾರೆ. ಅವರ ಅಂಕಣ, ಕನ್ನಡ ಭಾಷೆ, ಸಾಹಿತ್ಯ, ಕಲೆ, ಸಂಗೀತಗಳ ಕೃತಿಗಳನ್ನು ಘಟನೆಗಳನ್ನು ವ್ಯಕ್ತಿವಿಷಯಗಳನ್ನು ಬಳಸಿ ಬರೆದದ್ದು. ನಾಡಿನ ಹೊರಗಿನ ಪ್ರಸಿದ್ಧ ವ್ಯಕ್ತಿಗಳನ್ನು, ಸಂಗತಿಗಳನ್ನು ಅವು ಒಳಗೊಂಡಿವೆ. ಅವರ ಬರಹದ ಮೌಲಿಕತೆ ಆಕರ್ಷಕ ಗುಣಗಳ ಬಗ್ಗೆ ಯಾರೂ ಎರಡು ಹೇಳುವಂತಿಲ್ಲ".[೯]

ಕನ್ನಡದ ಹಿರಿಯ ವಿಮರ್ಶಕರಾದ ಡಾ.ಅಮೂರರು ಡಾ.ಹಾಮಾನಾರ ಅಂಕಣ ಕುರಿತು "ವಿಶ್ವದ ಎಲ್ಲ ವಿಷಯಗಳ ಬಗೆಗೂ ರಾಜಕೀಯ ವ್ಯಕ್ತಿಗಳೇ ಅಧಿಕಾರವಾಣಿಯಿಂದ ಮಾತನಾಡುತ್ತಿರುವ ಇಂದಿನ ನಮ್ಮ ವಿಪರ್ಯಾಸದ ಸಾಂಸ್ಕೃತಿಕ ಸಂದರ್ಭದಲ್ಲಿ, ಭಾಷೆಯು ಸತ್ಯದ ಮುಖವನ್ನು ಮುಚ್ಚುವ ಹಿರಣ್ಮಯ ಪಾತ್ರೆಯಾಗಿಬಿಟ್ಟಿದೆ. ಇಂತಹ ಅವಸ್ಥೆಯನ್ನು ಮೀರಿ ಒಬ್ಬ ವಿಚಾರವಂತ ಪ್ರಚಲಿತ ವ್ಯಕ್ತಿ ವಿಷಯಗಳ ಬಗ್ಗೆ ಪರಿಶ್ರಮ ಮತ್ತು ಚಿಂತನೆಗಳಿಂದ ತಾನು ದೊರಕಿಸಿಕೊಂಡ ತಿಳುವಳಿಕೆಯನ್ನು ಸಾಮಾನ್ಯ ಜನರೊಂದಿಗೆ ಹಂಚಿಕೊಂಡಾಗ ಅದಕ್ಕೆ ವಿಶೇಷ ಮಹತ್ವ ಬರುತ್ತದೆ. ಕೆಲವರಲ್ಲಿ ಈ ತಿಳುವಳಿಕೆ ಇದ್ದರೂ ಅದನ್ನು ಕೊಡಬೇಕು ಎನ್ನುವ ಲವಲವಿಕೆಯಾಗಲಿ ಮತ್ತು ಇಂತಹ ಕಾರ್ಯಕ್ಕೆ ಬೇಕಾದ ಕಲೆಯಾಗಲಿ ಇರುವುದಿಲ್ಲ. ಹಾಮಾನಾರ ವ್ಯಕ್ತಿತ್ವದಲ್ಲಿ ಈ ಎರಡೂ ಗುಣಗಳು ಇರುವುದರಿಂದ ಅದರ ಧ್ವನಿ ಆಕರ್ಷಕವಾಗಿದೆ. ವರ್ಷದುದ್ದಕ್ಕೂ ಪ್ರತಿವಾರ ಈ ದನಿ ಕೇಳಿ ಬಂದರೂ ಅದು ಎಂದೂ ನೀರಸ ಅಥವ ನಿರರ್ಥಕ ಎನಿಸಿದ್ದಿಲ್ಲ. ಇದು ನಾಯಕರ ಶ್ರೇಷ್ಠ ಸಾಧನೆ".[೧೦]

ಪ್ರಸ್ತುತ ಸಂದರ್ಭದಲ್ಲಿ ನಾಡಿನ ಬಹುತೇಕ ದಿನಪತ್ರಿಕೆಗಳು ಭಾನುವಾರದ ಸಾಪ್ತಾಹಿಕಗಳಲ್ಲಿ ಹಾಗು ಪ್ರತಿನಿತ್ಯವೂ (ವಿಜಯ ಕರ್ನಾಟಕ, ಪ್ರಜಾವಾಣಿ) ಅಂಕಣ ಬರಹಕ್ಕೆ ಹೆಚ್ಚು ಅವಕಾಶ ನೀಡುತ್ತ ಬಂದಿವೆ. ಆ ಮೂಲಕ ಕನ್ನಡದ ಬರಹಗಾರರಲ್ಲಿ ಮೂಡುತ್ತಿರುವ ಆಲೋಚನೆ ಚಿಂತನೆ, ಹೊಸ ಹೊಳಪುಗಳನ್ನು ಹಂಚಿಕೊಳ್ಳಲು 'ಅಂಕಣ' ವೇದಿಕೆಯಾಗಿದೆ. ಅಂಕಣ ಬರೆಯುವ ಕಾಲಕ್ಕೆ ಬರಹಗಾರರ ಮನಸ್ಸನ್ನು ತುಂಬಿ ಹೋಗಿರುವ ಸಂಗತಿಗಳನ್ನು ಈ ಅಂಕಣದಲ್ಲಿ ಬರಲಿ ಎಂಬ ಸದಾಶಯ ಪತ್ರಿಕೆಗಳದ್ದಾಗಿದೆ.

೧. ಅಡಿಟಿಪ್ಪಣಿಗಳು

೧. Penguin Dictionary of Literary Terms and Literary Theory
೨. ಸಾಹಿತ್ಯಾವಲೋಕನ, ವಿಮರ್ಶೆ ಸಂಪುಟ ೪, ವೀಸಿ ಸಂಪದ, ಬೆಂಗಳೂರು, ಪುಟ ೪, ೨೦೦೩
೩. ಸಾಹಿತ್ಯಾವಲೋಕನ, ಎಂ.ಎಚ್. ಕೃಷ್ಣಯ್ಯ, ವಿಮರ್ಶೆ ಸಂಪುಟ ೪, ವೀಸಿ ಸಂಪದ ಬೆಂಗಳೂರು, ಪುಟ ೪, ೨೦೦೩
೪. ನಾಡಿಗ ಕೃಷ್ಣಮೂರ್ತಿ, ನಿಯತಕಾಲಿಕಗಳು ಬ್ರಿಟಿಷ್ ಪತ್ರಿಕೋದ್ಯಮ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಪುಟ ೧೪, ೧೫
೫. ಅವಲೋಕನ, ಎಂ.ಎಚ್. ಕೃಷ್ಣಯ್ಯ, ವೀಸೀ ಸಂಪದ, ಪ್ರಸ್ತಾವನೆ, ೨೦೦೩
೬. ಪ್ರಬುದ್ಧ ಕರ್ನಾಟಕ, ಸಿದ್ಧಾರ್ಥಿ ಸಂವತ್ಸರ ೨, ವಿನಾಯಕ ಸಂಚಿಕೆ
೭. ಪ್ರಬುದ್ಧ ಕರ್ನಾಟಕ, ಸಿದ್ಧಾರ್ಥಿ ಸಂವತ್ಸರ, ಯುಗಾದಿ ಸಂಚಿಕೆ ೧
೮. ಪ್ರಬುದ್ಧ ಕರ್ನಾಟಕ, ಸಿದ್ಧಾರ್ಥಿ ಸಂವತ್ಸರ ೨, ವಿನಾಯಕ ಸಂಚಿಕೆ
೯. ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ: 'ಅವರು ಕನ್ನಡ ಕೆಲಸಗಾರ', ವಿಜಯ ಕರ್ನಾಟಕ, ಭಾನುವಾರ ೧೪ನೇ ಸೆಪ್ಟೆಂಬರ್ ೨೦೦೮
೧೦. ಅದೇ

೫.ನವ್ಯೋತ್ತರ ವಿಮರ್ಶೆ ಪತ್ರಿಕೆಗಳಲ್ಲಿ ವ್ಯಕ್ತಗೊಂಡಂತೆ

ನವ್ಯೋತ್ತರದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆ ಸಂಸ್ಕೃತಿ ಚಿಂತನೆಯತ್ತ ಹೊರಳುತ್ತಿರುವುದನ್ನು ಪತ್ರಿಕೆಗಳು ದಾಖಲಿಸುತ್ತಿರುವುದನ್ನು ಗಮನಿಸಬಹುದಾಗಿದೆ. ಮನೋವೈಜ್ಞಾನಿಕ ರೀತಿಯ ವಿಮರ್ಶೆಗಳು, ಡಿಸ್‌ಕೋರ್ಸ್‌ನಂತಹ ಪರಿಕಲ್ಪನೆಗಳು, ಸಾಹಿತ್ಯ ವಿಮರ್ಶೆಯಲ್ಲಿ ದೇಶೀಯ ಚಿಂತನೆ, ಹೀಗೆ ಹತ್ತು ಹಲವು ವಿಚಾರ ಕುರಿತ ಚಿಂತನೆ, ಚರ್ಚೆಗಳು ಪತ್ರಿಕೆಗಳಲ್ಲಿ ನಡೆದಿವೆ. ಇಂತಹವುಗಳನ್ನು ಒಟ್ಟಿಗೆ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಈ ದಿಕ್ಕಿನಲ್ಲಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ, ಪ್ರಜಾವಾಣಿ, ವಿಜಯ ಕರ್ನಾಟಕ, ಸಂಕ್ರಮಣ, ಹೊಸತು ಹಾಗು ಇನ್ನಿತರ ಪತ್ರಿಕೆಗಳು ಹೊಸ ಸಾಹಿತ್ಯದ ತತ್ವಗಳನ್ನು ಕುರಿತು ಅಸಂಖ್ಯ ಲೇಖನಗಳನ್ನು ಪ್ರಕಟಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಿ.ಎನ್. ರಾಮಚಂದ್ರನ್, ಕೆ.ವಿ. ತಿರುಮಲೇಶ್, ರಹಮತ್ ತರೀಕೆರೆ, ಓ.ಎಲ್. ನಾಗಭೂಷಣ ಸ್ವಾಮಿ, ರಾಜೇಂದ್ರ ಚೆನ್ನಿ, ಟಿ.ಪಿ. ಅಶೋಕ್, ಕೇಶವ ಶರ್ಮ, ಮನು ಚಕ್ರವರ್ತಿ, ಕೆ.ವಿ. ನಾರಾಯಣ್, ಮುಂತಾದವರು ಪತ್ರಿಕೆಗಳಲ್ಲಿ ಚರ್ಚೆ, ಸಮೀಕ್ಷೆಗಳನ್ನು ಬೆಳೆಸುತ್ತಿದ್ದಾರೆ.

ಇಂತಹ ಹೊಸ ಚಿಂತನೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಯ ಜಾಯಮಾನಕ್ಕೆ ಎಷ್ಟು ಮತ್ತು ಹೇಗೆ ಒದಗಿ ಬರಬಹುದು ಎಂಬ ಜಿಜ್ಞಾಸೆಯು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಪತ್ರಿಕೆಗಳು ಹೊಸ ಪರಿಕಲ್ಪನೆಗಳನ್ನು ಓದುಗ ಸಮುದಾಯಕ್ಕೆ ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಎಲ್ಲ ಕಾಲಮಾನಗಳಲ್ಲೂ ಇಂತಹ ಪರಿಕಲ್ಪನೆಗಳು ವ್ಯಾಪಕವಾಗಿ ಓದುಗ ಸಮುದಾಯಕ್ಕೆ ಪರಿಚಯಿಸುವ ಪ್ರಯತ್ನ ದಿನ ಪತ್ರಿಕೆಗಳೂ ಸೇರಿದಂತೆ ಇನ್ನಿತರ ಸಾಹಿತ್ಯಿಕ ಪತ್ರಿಕೆಗಳಲ್ಲೂ ನಡೆಯುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಸಂಸ್ಕೃತಿ ಚಿಂತಕರ, ಪಾಶ್ಚಿಮಾತ್ಯ ವಿಮರ್ಶಕರ, ಭಾಷಾಶಾಸ್ತ್ರಜ್ಞರ ಗ್ರಂಥಗಳಲ್ಲಿ **'ಡಿಸ್‌ಕೋರ್ಸ್'** ಎಂಬ ಪರಿಕಲ್ಪನೆ ವಿಶೇಷ ಪ್ರಾಮುಖ್ಯತೆ ಗಳಿಸುತ್ತಿದೆ. discourse ಎಂಬ ಶಬ್ದ latinನ discoursces ಪದದಿಂದ ನಿಷ್ಪನ್ನವಾಗಿದೆ. ಆಕ್ಸ್‌ಫರ್ಡ್ ನಿಘಂಟಿನಲ್ಲಿ running to and for , written or spoken communication or devote ಇತ್ಯಾದಿ ಅರ್ಥಗಳಿವೆ. ಇದು ಕ್ರಿಯಾಪದವಾಗಿ ಬಳಕೆಯಾದಾಗ spoken or write authoritatively about a topic ಎಂಬ ಅರ್ಥ ಬರುತ್ತದೆ.

ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಕನ್ನಡ ನಿಘಂಟು discourse ಎಂಬುದಕ್ಕೆ ಸಂಭಾಷಣೆ, ಸಂವಾದ, ಭಾಷಣ, ಪ್ರಬಂಧ, ವ್ಯಾಖ್ಯಾನ, ಉಪದೇಶ ಇತ್ಯಾದಿಯಾಗಿ ಅರ್ಥೈಸಿದೆ. ಈ

discourse ಪದವನ್ನು ಭಾಷಾಶಾಸ್ತ್ರಜ್ಞರು ಸಾಹಿತ್ಯ ವಿಮರ್ಶಕರು ಹಾಗು ರಾಚನಿಕೋತ್ತರ ಚಿಂತಕರು ವಿವಿಧ ಅರ್ಥಗಳಲ್ಲಿ ಬಳಸುತ್ತಾರೆ ಎಂಬುದನ್ನು ಡಾ.ಸಿ.ಎನ್. ರಾಮಚಂದ್ರನ್ ವಿವರಿದ್ದಾರೆ: ಭಾಷಾಶಾಸ್ತ್ರದಲ್ಲಿ ಪಾರಂಪರಿಕ ವೈಯಾಕರಣಗಳಿಂದ ಪ್ರಾರಂಭಿಸಿ ಈ ಶತಕದ ಮಧ್ಯಭಾಗದ ಚಾಮ್‌ಸ್ಕಿಯೂ ಸೇರಿದಂತೆ ಪಾಶ್ಚಿಮಾತ್ಯ ಭಾಷಾ ಶಾಸ್ತ್ರಜ್ಞರೆಲ್ಲರೂ ವಿಶ್ಲೇಷಣೆಯ/ವ್ಯಾಖ್ಯಾನದ ಕೇಂದ್ರವಾಗಿ ವಾಕ್ಯವನ್ನು ಪರಿಗಣಿಸಿದ್ದಾರೆ ಎಂದರೆ ವಿಶ್ಲೇಷಣೆಯ ಅತ್ಯುಚ್ಚ ಮತ್ತು ಕೊನೆಯ ಘಟಕವೇ ವಾಕ್ಯ. ಇತ್ತೀಚಿನ ಭಾಷಾಶಾಸ್ತ್ರಜ್ಞರು – ಫರ್ತ್, ಹ್ಯಾರಿಸ್, ಲಬೋವ್ ಮೊದಲಾದವರು – ಇಂತಹ ವಾಕ್ಯ ಕೇಂದ್ರಿತ ವ್ಯಾಕರಣಗಳು ತುಂಬ ಸೀಮಿತವಾದುದೆಂದೂ ಮತ್ತು ವಾಕ್ಯವನ್ನು ಮೀರುವ ಘಟಕವು ಭಾಷಾವಿಜ್ಞಾನದ ಕೇಂದ್ರವಾಗಬೇಕೆಂದು ವಾದಿಸುತ್ತಾರೆ. ಇಂತಹ ವಾಕ್ಯವನ್ನು ಮೀರುವ ಘಟಕವನ್ನು ಅವರು 'ಡಿಸ್‌ಕೋರ್ಸ್' ಎಂದು ಕರೆಯುತ್ತಾರೆ.

ಭಾಷಾಶಾಸ್ತ್ರದ ನೆಲೆಯಲ್ಲಿ 'ಸಂವಾದ' ಶಬ್ದವನ್ನು ಮೊದಲ ಬಾರಿಗೆ ಉಪಯೋಗಿಸಿದವನು ಜೆಲಿಗ್ ಹ್ಯಾರಿಸ್ (೧೯೫೨). ಒಂದಕ್ಕಿಂತ ಹೆಚ್ಚಾದ ವಾಕ್ಯಗಳ ಸಮೂಹವನ್ನು ಹ್ಯಾರಿಸ್ 'ಸಂವಾದ' ಎಂದಿದ್ದಾನೆ. "ಯಾವ ಅಧ್ಯಯನವು ಸ್ವತಂತ್ರ ವಾಕ್ಯಗಳಿಗೆ ಮತ್ತು ಭಾಷಾಶಾಸ್ತ್ರಜ್ಞನು ಸೃಷ್ಟಿಸಿದ ವಾಕ್ಯಗಳಿಗೆ ಸೀಮಿತವಾಗಿಲ್ಲವೋ ಮತ್ತು ವಾಕ್ಯಗಳ ಸಂದರ್ಭವನ್ನು ಪ್ರಮುಖವಾಗಿ ಪರಿಗಣಿಸುತ್ತದೆಯೋ ಅದನ್ನು 'ಸಂವಾದ ವಿಶ್ಲೇಷಣೆ'" ಎಂದು ಮೈಕಲ್ ಸ್ಟಬ್ಸ್ (೧೯೮೩) ತನ್ನ 'ಡಿಸ್‌ಕೋರ್ಸ್ ಅನಾಲಿಸಿಸ್' ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾನೆ.

ಸಂವಾದ ವಿಶ್ಲೇಷಕರು ಪಠ್ಯ–ಸಂವಾದ (ಟೆಕ್ಸ್ಟ್ ಹಾಗು ಡಿಸ್‌ಕೋರ್ಸ್) ಗಳ ನಡುವೆ ವ್ಯತ್ಯಾಸ ಇರುವುದನ್ನು ಗುರುತಿಸುತ್ತಾರೆ. ಟೆಕ್ಸ್ಟ್ ಎಂದರೆ ಏನೂ ಅರ್ಥವಿಲ್ಲದ ಒಂದು ಭಾಷಿಕ ರೂಪ. ಈ ರೂಪವು ತನ್ನದೇ ಆದ ಅರ್ಥವನ್ನು ಒಂದು ವಿಶಿಷ್ಟ ಸಂದರ್ಭದಲ್ಲಿ ಪಡೆಯುವ ಪ್ರಕ್ರಿಯೆಯೇ 'ಡಿಸ್‌ಕೋರ್ಸ್'.[೧]

ಸಾಹಿತ್ಯ ವಿಮರ್ಶೆಯಲ್ಲಿ ವಾಚಕ ಕೇಂದ್ರಿತ ವಿಮರ್ಶೆಯಲ್ಲಿ ಅನೇಕ ಡಿಸ್‌ಕೋರ್ಸ್ ಶಬ್ದಗಳನ್ನು ಬಳಸುತ್ತಾರೆ. ಒಂದು ಕೃತಿಯನ್ನು ಸಾಹಿತ್ಯಿಕ ರೀತಿಯಲ್ಲಿ ಓದುವುದು ಎಂದರೆ ಯಾವ ಬಗೆಯ ಪೂರ್ವನಿಶ್ಚಿತ ಧೋರಣೆಗಳಿಲ್ಲದ ಶೂನ್ಯ ಮನಃಸ್ಥಿತಿಯಲ್ಲಿ ಅದನ್ನು ಪ್ರವೇಶಿಸುವುದು ಎಂದು ಅರ್ಥವಲ್ಲ. ಲಿಟರರಿ ಡಿಸ್‌ಕೋರ್ಸ್ ಕೆಲಸ ಮಾಡುವ ರೀತಿ ನೀತಿಗಳ ಸಂಪೂರ್ಣ ಅರಿವಿನಿಂದ ಅದನ್ನು ಓದುವುದು ಎಂದರ್ಥ. ಏಕೆಂದರೆ ಕೃತಿಯಿಂದ ನಾವು ಏನನ್ನು ನಿರೀಕ್ಷಿಸುವೆವೋ ಅಂತಹ ಅಪೇಕ್ಷೆ ನಿರೀಕ್ಷೆಗಳನ್ನೆಲ್ಲ ಹುಟ್ಟು ಹಾಕುವುದು ಡಿಸ್‌ಕೋರ್ಸ್(೧೯೭೫) ಹೀಗೆ 'ಸ್ಟ್ರಕ್ಚರಲ್ ಪೊಯೆಟಿಕ್ಸ್' ಕೃತಿಯಲ್ಲಿ ಜೊನಾಥನ್ ಕಲ್ಲರ್ ವಾದಿಸುತ್ತಾರೆ. ಇಲ್ಲಿ ಅವರು ಬಳಸುವ 'ಡಿಸ್‌ಕೋರ್ಸ್' ಶಬ್ದಕ್ಕೆ ಸಂವಾದಿಯಾಗಿ ನಾವು ಕನ್ನಡಕ್ಕೆ 'ಸಂಹಿತೆ' ಎಂದು ಬಳಸಬಹುದು[೨] ಎನ್ನುತ್ತಾರೆ ಅವರು.

ರಾಚನಿಕೋತ್ತರ ಚಿಂತಕರು ೧೯೮೦ರಿಂದೀಚೆಗೆ ರೂಪಿಸಿರುವ 'ಡಿಸ್‌ಕೋರ್ಸ್' ಪರಿಕಲ್ಪನೆಯನ್ನು ಒಂದು ರಾಜಕೀಯ ಸಾಂಸ್ಕೃತಿಕ ಸಾಮಾಜಿಕ ವಿಶ್ಲೇಷಣೆಯ ಸಂದರ್ಭದಲ್ಲಿ ವ್ಯಾಪಕವಾಗಿ ಬಳಸಿ ಬೆಳೆಸಿದವರು ಫ್ರೆಂಚ್ ಚಿಂತಕ ಮಿಷಲ್ ಫ್ಯೂಕೋ ಮತ್ತು ಅವನ ಶಿಷ್ಯ ಎಡ್ವರ್ಡ್ ಸೈದ್. ಫ್ಯುಕೋನ ಒಟ್ಟು ಅಭಿಪ್ರಾಯವನ್ನು 'ಭಾಷೆ ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧ ಈ ಡಿಸ್‌ಕೋರ್ಸ್' ಎಂದು ಸಂಗ್ರಹಿಸಿ ಹೇಳಬಹುದು. ಇದರರ್ಥ 'ಡಿಸ್‌ಕೋರ್ಸ್' ಎಂದರೆ ವಿಶಿಷ್ಟ ಸೂಚನಾ ಪ್ರಕ್ರಿಯೆಯನ್ನು ಹಾಗು ತತ್ಪರಿಣಾಮವಾಗಿ ಉಂಟಾಗುವ ಜ್ಞಾನದ ವಿಶಿಷ್ಟ ರೂಪಗಳನ್ನು ಸಾಧ್ಯವಗಿಸುವ

ಸಾಂಸ್ಥಿಕ ನಿಯಮ ನಿಬಂಧನೆಗಳನ್ನು ಗುರುತಿಸುವುದು. ಈ ಹೇಳಿಕೆಯಲ್ಲಿ ಅಂತರ್ಗತವಾಗಿರುವ ಗೃಹೀತವೆಂದರೆ ತಮಗೆ ರೂಪು ಕೊಡುವ ಸಂಸ್ಥೆಗಳನ್ನು ಮತ್ತು ಸಾಮಾಜಿಕ ಆಚರಣೆಗಳನ್ನು ಅನುಸರಿಸಿ ಡಿಸ್‌ಕೋರ್ಸ್‌ಗಳು ಬದಲಾಗುತ್ತವೆ. ಸಂವಾದದಲ್ಲಿ/ಚಿಂತನೆಯಲ್ಲಿ ಜನರು ಹೊಂದಿರುವ ಸ್ಥಾನ ಹಾಗು ದೃಷ್ಟಿಕೋನವನ್ನು ಸಾಧ್ಯವಾಗಿಸುವ ಸಂಸ್ಥೆಗಳ ಅಸ್ತಿತ್ವ ಮತ್ತು ಕಾರ್ಯನೀತಿ ಇವುಗಳ ವ್ಯಾಖ್ಯಾನವನ್ನು 'ಡಿಸ್‌ಕೋರ್ಸ್ ಅನಾಲಿಸಿಸ್' ಎಂದು ಗುರುತಿಸಬಹುದು.

ಸಾಂಸ್ಥಿಕ ನಿಯಂತ್ರಣದಿಂದಾಗಿ ಪರಿಣಮಿಸುವ ಭಾಷೆ ಮತ್ತು ನಮ್ಮ ಗ್ರಹಿಕೆಗಳನ್ನು ಫ್ಯುಕೋ ಡಿಸ್‌ಕೋರ್ಸ್ ಎಂದು ಕರೆಯುತ್ತಾನೆ. ಡಿಸ್‌ಕೋರ್ಸ್‌ನಿಂದ ಮುಕ್ತವಾಗಿ –ಸಾಂಸ್ಥಿಕ ನಿಯಂತ್ರಣ ಒತ್ತಡಗಳಿಲ್ಲದ– ಯಾವ ಜ್ಞಾನ/ಜ್ಞಾನಮಾರ್ಗವೂ ಇರಲು ಸಾಧ್ಯವಿಲ್ಲ ಹಾಗು ಯಾವ ರೀತಿಯ ಗ್ರಹಿಕೆಯೂ ಸಾಧ್ಯವಿಲ್ಲ. ಒಂದೇ ಜ್ಞಾನಕ್ಷೇತ್ರದಲ್ಲಿ ಭಿನ್ನವಾದ ಡಿಸ್‌ಕೋರ್ಸ್‌ಗಳು ಇರುವುದು ಸಾಧ್ಯ. ಹೇಗೆಂದರೆ ಆ ಕ್ಷೇತ್ರದ ಭಿನ್ನ ಸಂಸ್ಥೆಗಳು ಭಿನ್ನ ರೀತಿಯ ಒತ್ತಡಗಳನ್ನು ತಂದು ಭಿನ್ನ ಡಿಸ್‌ಕೋರ್ಸ್‌ಗಳಿಗೆ ಕಾರಣವಾಗುತ್ತವೆ. ಉದಾಹರಣೆಗೆ, ಫೆಮಿನಿಸ್ಟ್ ಡಿಸ್‌ಕೋರ್ಸ್. ಫ್ಯುಕೋನ ಡಿಸ್‌ಕೋರ್ಸ್ ಕುರಿತಾದ ಪರಿಕಲ್ಪನೆ ಮತ್ತು ಮಾರ್ಕ್ಸಿಸ್ಟ್ ಪರಿಭಾಷೆಯ 'ಐಡಿಯಾಲಜಿ'ಗೆ ಅನೇಕ ಅಂಶಗಳಲ್ಲಿ ಸಾಮ್ಯತೆ ಇರುವುದನ್ನು ಹಾಗೆಯೇ ವ್ಯತ್ಯಾಸಗಳು ಇರುವುದನ್ನು ರಾಮಚಂದ್ರನ್ ತಮ್ಮ ಲೇಖನದಲ್ಲಿ ಗುರುತಿಸಿದ್ದಾರೆ:[3] ಉದಾರವಾದೀ ಮಾನವತಾವಾದ ಮತ್ತು ಎಲ್ಲ ಆಧುನಿಕ ಪಾಶ್ಚಿಮಾತ್ಯ ಸಂಸ್ಥೆಗಳನ್ನು/ರಚನೆಗಳನ್ನು ವಿರೋಧಿಸುವಲ್ಲಿ ಇವೆರಡರ ನಡುವೆ ಸಾಮ್ಯತೆ ಇದೆ. ಇನ್ನು ವ್ಯತ್ಯಾಸವೆಂದರೆ, ಇವತ್ತಿನ ಸಾಮಾಜಿಕ ಸಾಂಸ್ಕೃತಿಕ ರಾಜಕೀಯ ವ್ಯವಸ್ಥೆಗಳನ್ನು ಮಾರ್ಕ್ಸಿಸ್ಟ್ ಚಿಂತಕರು ತಿರಸ್ಕರಿಸಿದರೂ ಭವಿಷ್ಯತ್ತಿನಲ್ಲಿ ಇದಕ್ಕಿಂತ ಮೇಲಾದ ವ್ಯವಸ್ಥೆ ಜನ್ಮ ತಾಳುವ ಆಶಯವನ್ನು ಹೊಂದಿದ್ದಾರೆ. ಅಂದರೆ, ತಮ್ಮ ವಿಶ್ಲೇಷಣೆಯಲ್ಲಿ ಮೌಲ್ಯ ನಿರ್ಣಯಗಳನ್ನು ನೈತಿಕ ಮೌಲ್ಯ(ವ್ಯಾಲ್ಯೂ ಜಡ್ಜ್‌ಮೆಂಟ್)ವನ್ನೂ ಸೇರಿದಂತೆ ಮುಖ್ಯವಾಗಿ ಪರಿಗಣಿಸುತ್ತವೆ. ಆದರೆ ಫ್ಯುಕೋಗೆ ಮೌಲ್ಯ ನಿರ್ಣಯಗಳಲ್ಲಿ ವಿಶ್ವಾಸವಿಲ್ಲ. ಇಂದಿರುವ ವ್ಯವಸ್ಥೆಯ ಅಥವ ರಚನೆಯ ಬದಲಾಗಿ ಇನ್ನೊಂದು ರಚನೆ ಅಥವ ವ್ಯವಸ್ಥೆ ಬಂದರೆ ಅದೂ ಮೊದಲಿನದರಷ್ಟೇ ಕೆಟ್ಟದಾಗಿರುತ್ತದೆ ಎಂದು ನಂಬುತ್ತಾನೆ.

ಸಾಹಿತ್ಯ ವಿಮರ್ಶೆಯಲ್ಲಿ ಭಾಗಿಯಾಗುವ ಉದಾರವಾದೀ ಮಾನವತಾವಾದದ ಚಿಂತನೆಯ ಕ್ರಮ ಎಂದಿಗೂ ಎಡಪಂಥೀಯ ಚಿಂತನಾ ಕ್ರಮವನ್ನು ಎತ್ತಿ ಹಿಡಿಯುವುದಿಲ್ಲ. ಈ ಉದಾರವಾದೀ ಚಿಂತನಾಕ್ರಮ ಸರಿ–ತಪ್ಪು, ಅಗತ್ಯ–ಅನಗತ್ಯ ಎಂಬ ಕುರಿತು ಹೆಚ್ಚು ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗಾಗಿ ಈ ರೀತಿಯ ವಿಮರ್ಶೆ ನಿರ್ದಿಷ್ಟ ಚಿಂತನಾಧಾರೆಯನ್ನು ಬೆಳೆಸಲಾರದು. ನವೋದಯದ ಸಂದರ್ಭದಲ್ಲಿ ನಾವು ಈ ರೀತಿಯ ಚಿಂತನಾಕ್ರಮವನ್ನು ಕಾಣುತ್ತೇವೆ. ಇದಕ್ಕೆ ಚಾರಿತ್ರಿಕ ಒತ್ತಡಗಳು ಕಾರಣ ಇರಬಹುದು. ಇಲ್ಲಿ ವಿಮರ್ಶೆ ತನಗೆ ಇಷ್ಟವಾದ ಕಾವ್ಯವನ್ನಷ್ಟೇ ವಿವರಿಸುವುದರಿಂದ 'ಸಾಮಾಜಿಕ ಬದಲಾವಣೆಗಾಗಿ ಸಾಹಿತ್ಯ' ಎನ್ನುವ ವೈಚಾರಿಕ ನೆಲೆಗಟ್ಟನ್ನು ತನ್ನೆದುರಿಗೆ ಇಟ್ಟುಕೊಳ್ಳುವುದಿಲ್ಲ.

ಇನ್ನು ನವ್ಯ ವಿಮರ್ಶೆ ಸಾಹಿತ್ಯ ಮತ್ತು ಸಮಾಜಗಳ ನಡುವಣ ಸಂಬಂಧವನ್ನು ಹೆಚ್ಚು ಮಾರ್ಜಿನಲೈಸ್ ಮಾಡಿತು. ಇದು ಸ್ವಂತಿಕೆ ಪರಕೀಯತೆಗಳ ಹಾಗು ವಿಭಜನೆಯ ಪ್ರಕ್ರಿಯೆಯ ಕುರಿತು ಗಾಢವಾಗಿ ಯೋಚಿಸಿತು. ನವ್ಯದ ಯಾವುದೇ ವಿಮರ್ಶೆಯನ್ನು ಗಮನಿಸಿದರೂ ಕಾವ್ಯದ ಪ್ರಸ್ತುತತೆಯ ಪ್ರಶ್ನೆಯು ಈ ರೀತಿಯ ನಿರ್ವಹಣೆಯ ಕ್ರಮವನ್ನೇ ಸೂಚಿಸುತ್ತದೆ. ಈ ರೀತಿಯ ಸಾಹಿತ್ಯ ವಿಮರ್ಶೆಯಲ್ಲಿ ಸಮಾಜ ಎಂಬ ಸಂಗತಿ ತುಂಬ ಗೌಣವಾಗಿಬಿಡುತ್ತದೆ. ಸಮಾಜ ಬೇರೆ, ಕೃತಿ ಬೇರೆ, ಲೇಖಕನ ಮನೋಭಾವ ಬೇರೆ, ಕೃತಿಯ ಭಾಷೆ ಬೇರೆ – ಹೀಗೆ ಎಲ್ಲವನ್ನೂ ಬೇರೆ ಬೇರೆಯಾಗಿ ನೋಡುವ

ಕ್ರಮದಿಂದಾಗಿ ಅನೇಕ ರೀತಿಯ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಸಾಹಿತ್ಯ ಮತ್ತು ಅದರ ಅಭಿವ್ಯಕ್ತಿ ಕ್ರಮಕ್ಕೆ ವಿಪರೀತ ಒತ್ತನ್ನು ಕೊಡುವ ಸಾಹಿತ್ಯ ವಿಮರ್ಶೆಯಿಂದಾಗಿ ಹೊಸ ಹೊಸ ಸಾಧ್ಯತೆಗಳೂ ರೂಪುಗೊಂಡಂತೆ ಕಾಣಿಸುವುದಿಲ್ಲ.

ವಸ್ತು ಮತ್ತು ತಂತ್ರದ ಕುರಿತು ಚರ್ಚಿಸುವುದು ಸಾಹಿತ್ಯ ವಿಮರ್ಶೆಯ ಅಂತಿಮ ಗುರಿ ಎನ್ನುವುದು ನವ್ಯ ವಿಮರ್ಶಕರ ಭಾವನೆಯಾಗಿತ್ತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಸಾಹಿತ್ಯದಲ್ಲಿ ಭಾಷೆಯ ಅನನ್ಯತೆಯ ಬಗ್ಗೆ ತುಂಬ ಮಾತನಾಡಿರುವುದು ನವ್ಯ ಸಾಹಿತ್ಯ. ಪಠ್ಯಕೇಂದ್ರಿತ ವಿಮರ್ಶೆಯ ಈ ಪರಿಕಲ್ಪನೆಯು ಭಾಷೆಯ ಪ್ರಶ್ನೆಯನ್ನು ಕೃತಿಯ ಬಹು ಮುಖ್ಯ ವಾಗ್ವಾದದ ಕೇಂದ್ರದಂತೆ ಭಾವಿಸಿತು. 'ಪ್ರಾಯೋಗಿಕ ವಿಮರ್ಶೆ' ಕೃತಿಯನ್ನು ಒಂದು ಗ್ರಹಿಕೆಯ ಭಾಗವಾಗಿ ಕಂಡಿತು. ಜನಸಾಮಾನ್ಯರ ಭಾಷೆ ಬೇರೆ ಕೃತಿಯ ಭಾಷೆ ಬೇರೆ ಎಂದು ಹೇಳುವಾಗಲೇ ಅಲ್ಲಿ ವಿಭಜಿತ ನೀತಿಯು ಕೆಲಸ ಮಾಡುತ್ತದೆ. ಅಷ್ಟೇ ಅಲ್ಲ, ಅಲ್ಲೊಂದು ಸಾಂಸ್ಕೃತಿಕ ರಾಜಕಾರಣ ರೂಪುಗೊಳ್ಳುತ್ತದೆ. ಇದರ ಪರಿಣಾಮವೆಂದರೆ ಸಾಹಿತ್ಯದ ಭಾಷೆಯೆಂದರೆ ಅದು ಪ್ರತ್ಯೇಕ ವರ್ಗದಿಂದ ಪ್ರತ್ಯೇಕ ವರ್ಗಕ್ಕೆ ಹೇಳಲಾಗುವ ವಾಙ್ಮಯ ರೂಪ. ಹೀಗಾಗಿ ಇಲ್ಲಿ ಸಾಮಾನ್ಯ ಡಿಸ್‌ಕೋರ್ಸ್‌ಗಳು ಮುಖ್ಯವಾಗುವುದಿಲ್ಲ.

ಸಾಹಿತ್ಯ ವಿಮರ್ಶೆಯಲ್ಲಿ ಬದ್ಧತೆಯ ಪ್ರಶ್ನೆ: ಸಾಹಿತ್ಯ ವಿಮರ್ಶೆಯಲ್ಲಿ ಬದ್ಧತೆಯ ಪ್ರಶ್ನೆ ಹುಟ್ಟಿದ್ದು ೧೯೭೦ರ ತರುವಾಯ. ನವ್ಯದ ಅತಿ ವೈಯಕ್ತಿಕತೆ ಈ ಕಾಲದ ಲೇಖಕರಿಗೆ ಅರ್ಥಹೀನವಾಗಿ ಕಂಡಿತು. ರಾಜಕೀಯ ಸಾಂಸ್ಕೃತಿಕ ಸಾಮಾಜಿಕ ಬದಲಾವಣೆಗಾಗಿ ಸಾಹಿತ್ಯ ಎನ್ನುವ ಪರಿಕಲ್ಪನೆ ಸಾಹಿತ್ಯ ವಿಮರ್ಶೆಯಲ್ಲಿ ಕಂಡು ಬಂದದ್ದು ಈ ಸಂದರ್ಭದಲ್ಲೇ. ಎಡಪಂಥೀಯ ಚಿಂತನೆಗಳಿಗೆ ಮನ್ನಣೆ ಸಿಕ್ಕಿದ್ದು ಆಗಲೇ. ಸಾಹಿತ್ಯವನ್ನು ಸಾಮಾಜಿಕ ಹಿನ್ನೆಲೆಯಲ್ಲಿ ಪರಿಶೀಲಿಸುವುದು ಎಡಪಂಥೀಯ ಪ್ರಮುಖ ಚಿಂತನಾ ಕ್ರಮವಾಗಿದೆ. ಇದನ್ನೇ ಪ್ಲೆಖನೋವ್ ಹೀಗೆ ಹೇಳುತ್ತಾನೆ 'ಕಲಾಕಾರ ತನ್ನ ಸಾಮಾಜಿಕ ಪರಿಸರದೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳದ ಕಡೆ 'ಕಲೆಗಾಗಿ ಕಲೆ' ಎಂಬ ನಂಬಿಕೆ ಹುಟ್ಟುತ್ತದೆ. ಹೀಗೆ ಆಗದಿರಬೇಕಾದರೆ ಕಲಾಸೃಷ್ಟಿಯಿಂದ 'ಪ್ರಜ್ಞೆ' ಕೆಲಸ ಮಾಡಬೇಕಾಗುತ್ತದೆ. ಈ ಪ್ರಜ್ಞೆ ಬದುಕನ್ನು ಪರಿಭಾವಿಸುವ ಪ್ರಕ್ರಿಯೆಯಲ್ಲಿ ಮತ್ತು ಅದನ್ನು ಅಭಿವ್ಯಕ್ತಿಸುವ ವಿಧಾನದಲ್ಲಿ ರೂಪುಗೊಳ್ಳುತ್ತದೆ'.

ವ್ಯಕ್ತಿ ತನ್ನ ಸ್ಥಾನವನ್ನು ಮತ್ತು ಇತರರನ್ನು ಕುರಿತಂತೆ ತನ್ನ ಜವಾಬ್ದಾರಿಯನ್ನು ಯೋಚಿಸತೊಡಗಿದಾಗ ಬದ್ಧತೆಯ ಅನಿವಾರ್ಯತೆ ಹುಟ್ಟುತದೆ ಎಂದು ಮ್ಯಾಕ್ಸ್ ಅಡೆರೆತ್ ಹೇಳುತ್ತಾನೆ. ಸೃಷ್ಟಿಕ್ರಿಯೆಯಲ್ಲೇ ಹೊಣೆಗಾರಿಕೆಯ ಅಂಶ ಇರುವುದರಿಂದ ಆತ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಬದ್ಧನಾಗಿರುವುದು ಅನಿವಾರ್ಯ. ಸಾಹಿತ್ಯ ಕೇವಲ ಖುಷಿಗಾಗಿ ಅಲ್ಲವೆಂದಾದ ಮೇಲೆ ಅದು ತನ್ನಲ್ಲಿ ಮತ್ತು ಇತರರಲ್ಲಿ ಉಂಟು ಮಾಡುವ ಪರಿಣಾಮವೂ ಸೃಜನಶೀಲ ಪ್ರಕ್ರಿಯೆಯ ಭಾಗವಾಗುತ್ತದೆ. ಆಗ ತನ್ಮಯತೆ ಮತ್ತು ಪ್ರಜ್ಞಾ ಸ್ಥಿತಿಗಳ ತಿಕ್ಕಾಟದಲ್ಲಿ ಸಾಹಿತ್ಯ ರೂಪುಗೊಳ್ಳುತ್ತದೆ. ತಾನು ಹೊರಡಿಸುವ ಧ್ವನಿಯಲ್ಲಿ ವ್ಯಾಖ್ಯಾನಿಸಿರುವ ವಿಧಾನದಲ್ಲಿ ರೂಪಿಸುವ ಬಂಧದಲ್ಲಿ ಕ್ರಮದಲ್ಲಿ ಈ ಬದ್ಧ ರೂಪ ಅಡಕವಾಗಿರುತ್ತದೆ. ಅದ್ದರಿಂದ ಸಾಹಿತ್ಯದಲ್ಲಿ ಬದ್ಧತೆ ಇದ್ದರೆ ಸಾಹಿತಿಯ ಸೃಜನಶೀಲ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತದೆ ಎಂಬ ಭಾವನೆಗೆ ಬೇರುಗಳಿಲ್ಲ. 'ಮ್ಯಾಕ್ಸ್ ಅಡರೆತ್ ಹೇಳುವಂತೆ ಆಧುನಿಕ ಪರಿಕಲ್ಪನೆಯಾದ ಬದ್ಧತೆಯ ಮಹತ್ವಪೂರ್ಣ ಮೂಲತತ್ವ ಎಂದರೆ ಅದು ಸಾಹಿತ್ಯದ ಅವಿಭಾಜ್ಯ ಅಂಗವಾಗಿರುವುದೇ ಆಗಿದೆ' ಎನ್ನುತ್ತಾರೆ ಬರಗೂರು ರಾಮಚಂದ್ರಪ್ಪ.[9]

೧೯೭೦ರ ದಶಕದ ಪ್ರಮುಖ ಸಾಹಿತ್ಯ ವಿಮರ್ಶೆಯ ವಾಗ್ವಾದಗಳನ್ನು ನೋಡಿದಾಗ ಶಿವರಾಮ ಕಾರಂತರ 'ಚೋಮನದುಡಿ'ಯಲ್ಲಿ ಚೋಮನ ಆಸ್ತಿಯ ಪ್ರಶ್ನೆ, 'ಸಂಸ್ಕಾರ' ಕಾದಂಬರಿಯಲ್ಲಿ ಲೇಖಕರು ಶೂದ್ರ ಹೆಂಗಸನ್ನು ಕಾಮದ ವಸ್ತುವಿನಂತೆ ನೋಡುವ ದೃಷ್ಟಿ, ಬೇಂದ್ರೆಯವರ ಕವಿತೆಗಳು ಅಂತಿಮವಾಗಿ ಪುರೋಹಿತಶಾಹಿ ಮೌಲ್ಯಗಳನ್ನೇ ವಿಜೃಂಭಣೆ ಮಾಡುವುದು – ಈ ರೀತಿಯ ವಾಗ್ವಾದಗಳು ಈಗಾಗಲೇ ಸಾಹಿತ್ಯದ ಪ್ರಮುಖ ಬರಹಗಾರರ ಬರಹಗಳನ್ನು ನಿಷ್ಠುರವಾಗಿ ವ್ಯಾಖ್ಯಾನಿಸಿವೆ. ಇದರೊಂದಿಗೆ ಯಾವುದೇ ಕೃತಿಯ ಚರ್ಚೆ ಎಂದರೆ ಅಂತಿಮವಾಗಿ ಒಂದು ಸಾಂಸ್ಕೃತಿಕ ರಾಜಕಾರಣದ ಫಲ ಎಂಬ ಗಟ್ಟಿಯಾದ ನಿಲುವು ೧೯೭೦ರ ದಶಕದಲ್ಲಿ ಕಾಣಿಸಿಕೊಂಡಿತು.[೫]

ಸಾಹಿತ್ಯ 'ಆದರ್ಶ ಓದುಗ'ರಿಗೆ ನೀಡುವ ಸೂಚನೆಗಳಲ್ಲಿ ಸಾಮಾಜಿಕ ಅನುಭವವನ್ನು ವ್ಯಕ್ತಪಡಿಸುವ ಪ್ರಕ್ರಿಯೆ ಎಂಬುದು ದಲಿತ–ಬಂಡಾಯ ಸಾಹಿತ್ಯದ ನಿಲುವು. ಸಾಹಿತ್ಯ ವಿಮರ್ಶೆಯ ಅಂತಿಮವಾಗಿ ಅಧಿಕಾರಸ್ಥ ರಾಜಕಾರಣದ ಜೊತೆಗೆ ಮುಖಾಮುಖಿಯಾಗುವ ಪ್ರಕ್ರಿಯೆ ಎಂಬ ಕಲ್ಪನೆ ಬಂದದ್ದು ಸಹ ದಲಿತ–ಬಂಡಾಯದ ಘಟ್ಟದಲ್ಲಿ. ಹೀಗಾಗಿ ಸಾಹಿತ್ಯದ ಕೃತಿಯೊಂದನ್ನು ಓದುವುದು ಮತ್ತು ವಿಮರ್ಶಿಸುವುದು ಎರಡೂ ಬಂಡಾಯದ ವಿಮರ್ಶೆಯ ಸಂದರ್ಭದಲ್ಲಿ ಸಾಮಾಜಿಕವಾದದ್ದು ಹಾಗು ರಾಜಕೀಯವಾದದ್ದು.

ಕೃತಿವಿಮರ್ಶೆಯಿಂದ ಕನ್ನಡದಲ್ಲಿ ಸಂಸ್ಕೃತಿಯ ವಿಮರ್ಶೆಯ ಕಡೆಗೆ ಹೊರಳಿದ್ದು ಬಹು ಮುಖ್ಯವಾದ ಪರಿವರ್ತನೆಯಾಗಿದೆ. ಸಾಹಿತ್ಯದ ಪ್ರಶ್ನೆ ಎನ್ನುವುದು ಎಂದಿಗೂ ಸಾಂಸ್ಕೃತಿಕ ಅಭ್ಯಾಸದ ಪ್ರಶ್ನೆಯೇ ಆಗಿರುತ್ತದೆ. ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಸಂಸ್ಕೃತಿಯ ಪ್ರಶ್ನೆಗಳು ಬಂದಾಗಲೂ ಅದರದೇ ನೆಲೆಗಳು ಒಂದಾಗಿಯೇ ಇಲ್ಲ. 'ಕೃತಿ ಸಂಸ್ಕೃತಿ'ಯ ವಾಗ್ವಾದಗಳು ಅಂತಿಮವಾಗಿ ಆಶ್ರಯಿಸಿರುವುದು ಸಂಸ್ಕೃತಿಯನ್ನು ಪಠ್ಯದಲ್ಲಿ ಹುಡುಕುವುದರ ಮುಖಾಂತರ. ಅದರಾಚೆಗೆ ದಾಟಲು ಬೇರೆ ವಿಧದ ಚರ್ಚೆಗಳೇ ಬೇಕಾದವು. ಈಚಿನ ವರ್ಷಗಳಲ್ಲಿ ಸಾಹಿತ್ಯ ವಿಮರ್ಶೆಯಲ್ಲಿ ಚಾಲ್ತಿಗೆ ಬಂದ ಪರ್ಯಾಯ ಸಂಸ್ಕೃತಿ, ಪ್ರತಿ ಸಂಸ್ಕೃತಿ, ಉಪ ಸಂಸ್ಕೃತಿಯ ವಾಗ್ವಾದಗಳು ಬೇರೆ ರೀತಿಯ ಮಾನದಂಡವನ್ನು ತಮ್ಮೆದುರು ಇಟ್ಟುಕೊಂಡಿವೆ. ಇದರ ಪರಿಣಾಮ ಎಂದರೆ ಒಂದು ಸಾಹಿತ್ಯ ಕೃತಿಯನ್ನು ಓದುವುದೆಂದರೆ ಸಂಸ್ಕೃತಿಯೊಂದರ ವಿಭಿನ್ನ ಮಜಲುಗಳನ್ನು ಹುಡುಕುವುದು ಎಂದು ತಿಳಿದಿದ್ದೇವೆ. ಈ ದೃಷ್ಟಿಯಿಂದ ಇದು ಮಹತ್ವದ ಪ್ರಶ್ನೆಯಾಗಿದ್ದು ಇದರ ಹಿಂದಿನ ತಾತ್ವಿಕತೆಯು ಬೇರೆ ಬೇರೆ ರೀತಿಯ ಸಾಂಸ್ಕೃತಿಕ ಪ್ರಸ್ಥಾನಗಳನ್ನು ಒಳಗೊಂಡಿದೆ. ದೇಶೀ ಸಂಸ್ಕೃತಿ ಎಂಬ ತಾತ್ವಿಕ ನೆಲೆಯಿಂದ ಹೊರಡುವ ಈ ರೀತಿಯ ಸಾಂಸ್ಕೃತಿಕ ವಾಗ್ವಾದಗಳು ಏಕತೆಗಿಂತ ಬಹುತ್ವ ಎಂಬುದನ್ನು ಪ್ರತಿಪಾದಿಸುತ್ತವೆ. ಅಖಂಡವಾದ ಒಂದು ಭಾರತ, ಅಖಂಡವಾದ ಒಂದು ಕರ್ನಾಟಕ ಸಂಸ್ಕೃತಿ, ಒಂದು ತಾತ್ವಿಕತೆ, ಒಂದು ಸತ್ಯ ಎಂಬ ತಿಳುವಳಿಕೆಯನ್ನು ಈ ರೀತಿಯ ನಿಲುವುಗಳು ವಿರೋಧಿಸುತ್ತವೆ. ಆದರೆ, ಈ ರೀತಿಯ ಸಾಂಸ್ಕೃತಿಕ ಅಭ್ಯಾಸಗಳ ಹಿಂದಿರುವ ತಾತ್ವಿಕತೆಯು ಪ್ರಗತಿಪರ ವಿಚಾರಧಾರೆಯನ್ನು ಒಳಗೊಂಡಿವೆ ಎಂಬುದು ನಿಜ.[೬]

ಎಲ್ಲ ಕಾಲದ ಸಾಹಿತ್ಯದಲ್ಲಿ ಅನುಭವ ಮತ್ತು ಸಂವೇದನೆಯ ನೆಲೆಯಲ್ಲಿ ವ್ಯತ್ಯಾಸ ಉಂಟು. ಅದಕ್ಕೆ ಆಧುನಿಕ ಕಾಲವೂ ಹೊರತಲ್ಲ. ಕನ್ನಡ ವಿಮರ್ಶೆ ಇದನ್ನು ಗಮನದಲ್ಲಿ ಇಟ್ಟುಕೊಂಡು ಬಂದಿದೆ. ಆ ಮೂಲಕ ಪಶ್ಚಿಮದ ವಿಮರ್ಶಾ ಸಿದ್ಧಾಂತಗಳೊಡನೆ ಮುಖಾಮುಖಿಯಾಗುತ್ತ ಭೂತ ವರ್ತಮಾನ ಭವಿಷ್ಯತ್ತಿನ ಜೊತೆ ಅನುಸಂಧಾನ ನಡೆಸಿದೆ. ಆದ್ದರಿಂದ ಸಾಹಿತ್ಯ ವಿಮರ್ಶೆ ಎಂಬ ಬರಹವನ್ನು ಸಾಂಸ್ಕೃತಿಕ ಅಧ್ಯಯನದ ಜೊತೆ ವಿಲೀನ ಮಾಡಲಾಗಿದೆ. ಸಾಂಸ್ಕೃತಿಕ ಅಧ್ಯಯನವು ವಸಾಹತುಶಾಹಿ ವಸಾಹತೋತ್ತರ ಕಥಾನಕಗಳನ್ನು ವಿಶ್ಲೇಷಿಸಲು ಹೆಚ್ಚು ಕ್ರಿಯಾತ್ಮಕವಾಗಿ ತೊಡಗುತ್ತದೆ ಎಂಬುದು ಇದಕ್ಕೆ

ಮುಖ್ಯ ಕಾರಣ. ಸಮಾಜದ ಬಹುರೂಪಿ ಸ್ಥಿತಿಯನ್ನು ಅರ್ಥೈಸಿಕೊಳ್ಳಲು ಸಾಂಸ್ಕೃತಿಕ ಅಧ್ಯಯನ ಎಂಬ ತಾತ್ವಿಕ ಪದ್ಧತಿ ಹೆಚ್ಚು ಶಕ್ತಿಶಾಲಿ. ಇದು ಸಮಾಜದ ವಿಭಿನ್ನ ಗುಂಪುಗಳ, ಜಾತಿಗಳ ಮತ್ತು ಪದ್ಧತಿಗಳ ನಡುವ ಜ್ವಲಂತ ಕೊಡುಕೊಳ್ಳುವಿಕೆಗಳ ಸಂಬಂಧವಿವೆ ಎಂಬ ಸತ್ಯವನ್ನು ಪೂರ್ಣ ತೆರೆದಿಡುತ್ತದೆ. ವಸಾಹತುಶಾಹಿಗೆ ಒಳಪಟ್ಟ ಸಮಾಜದ ಸಂಕೀರ್ಣ ಸ್ತರಗಳಲ್ಲಿ ಲಭ್ಯವಿರುವ ವಿಪುಲ ಸಾಂಸ್ಕೃತಿಕ ಅಂಶಗಳನ್ನು ಕಂಡುಕೊಳ್ಳಲು ನೆರವಾಗುತ್ತದೆ.[೭]

ಸಾಹಿತ್ಯ ವಿಮರ್ಶೆ ಎದುರಿಸಬೇಕಾದ ಸಾಂಸ್ಕೃತಿಕ ಜವಾಬ್ದಾರಿಗಳೇನು ಅದರ ಪ್ರಮುಖ ಸಾಂಸ್ಕೃತಿಕ ಕಾಳಜಿಗಳು ಯಾವುವು ಎಂಬುದನ್ನು ಮನು ಚಕ್ರವರ್ತಿ ಮತ್ತು ವಿ.ಎಸ್.ಶ್ರೀಧರ್ ಚರ್ಚಿಸಿದ್ದಾರೆ:[೮]

೧. ತೀರ ಸರಳವಾಗಿ ನೋಡಿದಾಗಲೂ ಸಹ ಎಂತಹ ಕಳಪೆ ದರ್ಜೆಯ ಮೇಲ್ಪದರದ ಸಾಹಿತ್ಯದ ಓದು ಕೂಡ ಸಾಹಿತ್ಯದ ಗರ್ಭದಲ್ಲಿರುವ ಸಾಂಸ್ಕೃತಿಕ ಸಂಗತಿಗಳಿಗೆ ಸ್ಪಂದಿಸುತ್ತಿರುತ್ತದೆ. ಹಾಗಾಗಿ ಎಂತಹ ಕೆಳಮಟ್ಟದ ವಿಮರ್ಶೆ ಕೂಡ, ತೀರ ಸಂಕುಚಿತ ಅರ್ಥದಲ್ಲಿ 'ಸಾಂಸ್ಕೃತಿಕ ವಿಮರ್ಶೆ' ಆಗುತ್ತದೆ.

೨. ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆ ನೇರವಾದ ಇತಿಹಾಸ, ಸಮಾಜಶಾಸ್ತ್ರ, ಮಾನವಶಾಸ್ತ್ರ ಅಥವ ತತ್ವಶಾಸ್ತ್ರ ಅಲ್ಲ.

೩. ಒಂದು ಸಂಸ್ಕೃತಿ ಕೇಂದ್ರಿತ ವಿಮರ್ಶೆಯ ಘೋಷಿತ ಅಥವ ಅಘೋಷಿತ ತಾತ್ವಿಕತೆಯನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಡುವ ಇದುವರೆಗಿನ ಯಾವುದೇ ಪ್ರಯತ್ನ ಸಫಲವಾಗಿಲ್ಲ ಹಾಗು ವಿಮರ್ಶೆಯು ಒಂದು ಚೌಕಟ್ಟಿನಲ್ಲಿ ಸಾಗಿದ ಕೂಡಲೆ ತೀರಾ ಸರಳವಾಗಿಬಿಡುವ ಅಥವ ಅಂತಹ ಚೌಕಟ್ಟಿನಿಂದ ಹೊರಗೆ ಉಳಿಯುವ ಇನ್ನೊಂದಕ್ಕೆ ಕುರುಡಾಗುವ ಅಪಾಯವೇ ಹೆಚ್ಚು. ಈ ಪ್ರಶ್ನೆ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಬಹುತೇಕ ವಿಮರ್ಶಕರನ್ನು ಕಾಡಿರುವಂಥದ್ದು.

೪. ಸಾಂಸ್ಕೃತಿಕ ವಿಮರ್ಶೆಯ ಯಾವುದೇ ಪ್ರಕಾರವಿರಲಿ, ಅದು ಉದಾರವಾದಿ ಮಾನವಾಸಕ್ತಿಯ ಮನಃಸ್ಥಿತಿಯನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡಾಗ ಮಾತ್ರ ಇಂತಹ ಮನಃಸ್ಥಿತಿಯ ದೃಷ್ಟಿಯಿಂದ ಮರೆಯಾಗದೇ ಇದ್ದಾಗ ಮಾತ್ರ ತನ್ನ ಜವಾಬ್ದಾರಿಯನ್ನು ಸಮರ್ಪಕವಾಗಿ ನೆರವೇರಿಸಲು ಸಾಧ್ಯ.

ಸಾಹಿತ್ಯವಿಮರ್ಶೆ ಮತ್ತು ದೇಸೀಯತೆ: ಸಮಕಾಲೀನ ಜಾಗತಿಕ ವೈಚಾರಿಕ ರಂಗದಲ್ಲಿ ದೇಶೀಯತೆ, ಪ್ರಾದೇಶಿಕತೆ, ಗ್ರಾಮೀಣತೆ, ಬಹುತ್ವ, ಸತ್ಯಬಾಹುಳ್ಯ, ಅರ್ಥಸಂದಿಗ್ಧತೆ, ಸ್ತ್ರೀವಾದ, ನವವಸಾಹತುಶಾಹಿತ್ವ ಮುಂತಾದ ಕಲ್ಪನೆಗಳು ಈಗ ಎಲ್ಲೆಡೆ ಕೇಳಿಬರುತ್ತಿವೆ. ಆದರೆ ದೇಶೀಯತೆ (ನೇಟಿವಿಸಂ) ಎಂಬ ಸಿದ್ಧಾಂತ ಕನ್ನಡದ ಸಂದರ್ಭದಲ್ಲಿ ಕಂಡುಬಂದದ್ದು ದಲಿತ–ಬಂಡಾಯ ಆರಂಭವಾದಾಗಿನಿಂದ. ಮೊದಮೊದಲು ಸೃಜನಶೀಲ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಕೇಳಿಬಂದ ಈ ಮಾತು ಆಮೇಲೆ ಸಾಹಿತ್ಯ ವಿಮರ್ಶೆ ಮತ್ತು ಸಂಸ್ಕೃತಿ ವಿಮರ್ಶೆಗೆ ಸಂಬಂಧಿಸಿದಂತೆ

ಕೇಳಿಬರಲಾರಂಭಿಸಿತು. ಇದರ ಕುರಿತಂತೆ ಪತ್ರಿಕೆಗಳಲ್ಲಿ ಚರ್ಚೆಯಾಗಿರುವುದು ಕಂಡು ಬರುತ್ತದೆ. ಅಂತಹ ಕೆಲವು ಲೇಖನಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಗಿರಡ್ಡಿ ಗೋವಿಂದರಾಜರು ತಮ್ಮ ಪ್ರಬಂಧ 'ಸಾಹಿತ್ಯದಲ್ಲಿ ದೇಶೀಯತೆ'(೧೯೮೭) ಪ್ರಬಂಧದಲ್ಲಿ ದೇಸೀಯತೆಯ ತುರ್ತು ಅಗತ್ಯವನ್ನು ಹಾಗೆಯೇ ದೇಶೀಯತೆ ಪರಂಪರೆಯ ಅಂಧಾನುಕರಣೆಯಲ್ಲ ಎಂಬ ಅಂಶಗಳನ್ನು ವಿವರಿಸುತ್ತ ಹೋಗುತ್ತಾರೆ.

೧. ಸಾಹಿತ್ಯದಲ್ಲಿ ದೇಶೀವಾದವೆಂದರೆ ಲೇಖಕ ತಾನು ಬೆಳೆದು ಬಂದ ಸಮಾಜ, ಸಂಸ್ಕೃತಿ ಪರಂಪರೆಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುವುದು; ಅವುಗಳೊಂದಿಗೆ ಆತ್ಮೀಯವಾದ ಸೃಜನಶೀಲ ಸಂಬಂಧವನ್ನು ಸ್ಥಾಪಿಸಿಕೊಳ್ಳುವುದು ನಮ್ಮ ಸಾಹಿತ್ಯದ ಪಾಶ್ಚಾತ್ಯೀಕರಣ ತೀವ್ರತೆಯ ಬಗ್ಗೆ ಎಚ್ಚರ ವಹಿಸುವುದು; ಮುಖ್ಯವಾಗಿ ಅಂತರ ರಾಷ್ಟ್ರೀಯತೆಯ ಹೆಸರಿನಲ್ಲಿ ನಾವು ನಮ್ಮ ನೆಲದಲ್ಲಿಯ ಬೇರುಗಳನ್ನೇ ಕಳೆದುಕೊಳ್ಳುವ ಅಪಾಯದಿಂದ ರಕ್ಷಿಸಿಕೊಳ್ಳುವುದು.

೨. ಅವರ ಪ್ರಕಾರ ದೇಸೀವಾದವೆಂದರೆ ನಮ್ಮ ಸಂಸ್ಕೃತಿಯ ಒಳ್ಳೆಯ ಅಂಶಗಳು ಹಾಗು ಅಗತ್ಯಕ್ಕೆ ತಕ್ಕಂತೆ ಹೊರಗಿನ ಅಂಶಗಳು ಇವೆರಡರ ಮಿಶ್ರಣ ಅಂದರೆ ನಮ್ಮದೇ ಆದ ವಿಶಿಷ್ಟ ಸಾಹಿತ್ಯ ಪರಂಪರೆಯೊಂದನ್ನು ನಿರ್ಮಿಸುವುದು.

೩. ಭಾಷೆ ಸಾಹಿತ್ಯ ಸಂಸ್ಕೃತಿಗಳು ಒಂದನ್ನೊಂದು ಪರಸ್ಪರ ಅವಲಂಬಿಸಿರುವುದರಿಂದ ಯಾವುದೇ ಒಂದನ್ನು ನಿರ್ಲಕ್ಷಿಸಿದರೂ ಉಳಿದವು ಕೂಡ ನಿರ್ವೀರ್ಯವಾಗುತ್ತವೆ. ಕೊನೆಗೆ ನಾಶವಾಗುತ್ತವೆ.

೪. ಇಡೀ ಲೇಖನ ಗಿರಡ್ಡಿಯವರ ವಿಮರ್ಶಾ ಚಿಂತನೆ ದೇಶೀಯತೆಯೆಡೆಗೆ ಹೊರಳುತ್ತಿರುವುದರ ಸೂಚನೆಯಾಗಿದೆ.[೯]

ಜಿ.ಎಚ್. ನಾಯಕರು ತಮ್ಮ ವಿಮರ್ಶೆಯಲ್ಲಿ

"ಕಾರಂತರಲ್ಲಿ ಅನುಭವದ ಹರಹು ಹೆಚ್ಚಾಗಿದೆ. ಆದರೆ ಸೃಜನಕ್ರಿಯೆಯ ಸವಾಲನ್ನು ಉನ್ನತಮಟ್ಟದಲ್ಲಿ ಎದುರಿಸುತ್ತಾರೆ. ಆದರೆ ಅಡಿಗರ ಕಾವ್ಯದ ಒಳಗೆ ಬಂದ ಅನುಭವ ತೀವ್ರತೆ ಹೆಚ್ಚಾದರೂ ಹರಹು ಕಡಿಮೆಯಾಗಿದೆ,..ವೈಯಕ್ತಿಕ ಶ್ರದ್ಧೆಯ ಉತ್ಕಟ ಕ್ಷಣಗಳಲ್ಲಿ ಮತ್ತು ಆಗಾಗ ಕಾಡುವ ಅಧ್ಯಾತ್ಮ ಮುಖಿಯಾದ ಅನುಭವದ ಜ್ವಲಂತ ಕ್ಷಣಗಳಲ್ಲಿ ಹಾಗೂ ಆ ಕ್ಷಣಗಳಲ್ಲೇ ನಿಷ್ಠುರವಾಗಿ ನೆಲಕ್ಕೆ ಜಗ್ಗುವ ವಾಸ್ತವಗಳ ಅರಿವಿನ ಕರ್ಷಣ ಕೇಂದ್ರದಲ್ಲಿ ತಳದಲ್ಲಿ ಸಂಪ್ರದಾಯವಾದಿಯಾದ ಅಡಿಗರ ಸೃಜನ ಚೇತನ ಜಾಗೃತವಾಗುವಷ್ಟು ಚುರುಕಾಗುವಷ್ಟು ಪ್ರಮಾಣದಲ್ಲಿ ಬೇರೆ ಕಡೆ ಆಗುವುದಿಲ್ಲ ಎಂದೆನಿಸುತ್ತದೆ".[೧೦]

ಎಂದಿದ್ದಾರೆ. ಇಲ್ಲಿ ದೇಶೀಯ ಸಂಸ್ಕೃತಿಯ ಕಾಳಜಿಗಳೇ ಕಾವ್ಯದ ಮೌಲ್ಯಮಾಪನವನ್ನು ನಿರ್ದೇಶಿಸುತ್ತಿರುವುದನ್ನು ಕಾಣಬಹುದಾಗಿದೆ.

ನವವಸಾಹತುಶಾಹಿಯ ಈ ಸಂದರ್ಭದಲ್ಲಿ ಏನೆಲ್ಲ ಹೇಳಿದ ನಂತರವೂ ಉಳಿದುಕೊಳ್ಳುವ ಪ್ರಶ್ನೆಗಳು ಇದ್ದೇ ಇರುತ್ತವೆ. ಅವೆಲ್ಲ ಈ ಹೊತ್ತಿನಲ್ಲಿ ಎಲ್ಲ ವಿಮರ್ಶಕರ ಚಿಂತಕರ ಸವಾಲಾಗಿ ನಿಂತಿವೆ.

ಕನ್ನಡ ವಿಮರ್ಶೆ ಕೂಡ ಇಂತಹ ಸಂದಿಗ್ಧತೆಗಳನ್ನು ಸವಾಲುಗಳನ್ನು ಎದುರಿಸುತ್ತಿರುವುದಕ್ಕೆ ಉದಾಹರಣೆಯೆಂದರೆ ಜಿ.ಎಚ್.ನಾಯಕರು 'ಕುಸುಮಬಾಲೆ' ಕುರಿತಂತೆ ಆಡಿರುವ ಮಾತುಗಳು. 'ಹೊಸ ರೂಪದ ಸೃಜನಶೀಲ ಕೃತಿಯೊಂದು ತಯಾರಾದಾಗ ಅಂತಹ ಕೃತಿ ಸದ್ಯದಲ್ಲಿ ಬಳಕೆಯಲ್ಲಿರುವ ವಿಮರ್ಶಾ ಪದ್ಧತಿ ಸಾಧನಗಳಿಗೆ ಸವಾಲಾದಾಗ ಮಾನದಂಡಗಳನ್ನೆ ಮರುಪರಿಶೀಲಿಸಬೇಕೋ ಏನೋ ಎಂಬ ಅನಿಸಿಕೆ ಈಗ ಇನ್ನಷ್ಟು ಅವಗಾಹನೆಗೆ ಒಳಗಾಗಬೇಕಾಗಿದೆ.

ಕೆ.ವಿ. ನಾರಾಯಣ ಅವರು ಕನ್ನಡ ಸಾಹಿತ್ಯ ವಿಮರ್ಶೆ ಕುರಿತಂತೆ ಎರಡು ಆಶಯಗಳನ್ನು ಮಂಡಿಸುತ್ತಾರೆ. ಒಂದು, ಕನ್ನಡ ಸಾಹಿತ್ಯವನ್ನೇ ಆಧಾರವಾಗಿಟ್ಟುಕೊಂಡು ಒಂದು ಪರಂಪರೆಯನ್ನು ಕಲ್ಪಿಸುವ ಪ್ರಯತ್ನ ಮಾಡುವುದು. ಎರಡು, ನಮ್ಮ ಸಾಹಿತ್ಯ ಕೃತಿಗಳಲ್ಲೇ ಇರಬಹುದಾದ ವೈಚಾರಿಕ ನೆಲೆಗಟ್ಟನ್ನು ಗುರುತಿಸುವುದು. ಒಟ್ಟಾರೆ ಅನ್ಯದೇಶೀಯ ವಿಮರ್ಶಾ ಮಾದರಿಗಳ ಆಮದನ್ನು ಆದಷ್ಟು ತಡೆಗಟ್ಟುವುದು. ಅಂದರೆ ದೇಶೀ ವಿಮರ್ಶಾ ಮಾರ್ಗವನ್ನು ಬೆಳೆಸಬೇಕು ಎಂಬುದು ಅವರ ವಾದವಾಗಿದೆ. ೧೯೮೮ರಲ್ಲಿ ಬೆಂಗಳೂರಿನಲ್ಲಿ ನಡೆದ 'ಟಿ.ಎಸ್. ಎಲಿಯೆಟ್ ಮತ್ತು ಕನ್ನಡ ನವ್ಯಕಾವ್ಯ ಸಂದರ್ಭ' ಗೋಷ್ಠಿಯಲ್ಲಿ ಕೆ.ವಿ.ನಾರಾಯಣ್ ಅವರು ಸಾಹಿತ್ಯಸೃಷ್ಟಿ ಹಾಗು ಅಧ್ಯಯನಗಳಲ್ಲಿ ಕಾಲ ದೇಶಾತೀತವಾದ ಜಾಗತಿಕ ಮಾದರಿಗಳ ಬೆನ್ನು ಹತ್ತಬೇಕೋ ಅಥವ ಸಂಸ್ಕೃತಿನಿಷ್ಠವಾದ ಒಳಗಿನ ಬೇರುಗಳನ್ನು ಕಂಡುಕೊಳ್ಳಬೇಕೋ ಎಂಬುದು ಒಟ್ಟಾರೆಯಾಗಿ ಈ ಏಳೆಂಟು ದಶಕಗಳಲ್ಲಿ ಮೇಲಿಂದ ಮೇಲೆ ಕನ್ನಡ ಪ್ರಜ್ಞೆಯನ್ನು ಕಾಡಿದೆ ಎಂಬ ದ್ವಂದ್ವವನ್ನು ನಿರೂಪಿಸುತ್ತಾರೆ.[೧೧] ಈ ಜಾಗತಿಕ ಎಂಬ ಮಾತು ನಿಜದಲ್ಲಿ ಅರ್ಥರಹಿತವಾದದ್ದು. ಏಕೆಂದರೆ ನಮ್ಮ ಆಯ್ಕೆಯ ಪ್ರಗತಿಯ ಮಾದರಿಯನ್ನು ಹೊಂದಿರುವ ದೇಶವೇ ಸದ್ಯಕ್ಕೆ ನಮ್ಮ ಜಗತ್ತು ಎನ್ನುವ ವಿಪರ್ಯಾಸ ನಮ್ಮೆದುರು ನಿಂತಿದೆ. ಹಾಗಾಗಿ ಇಲ್ಲಿ ದೇಸೀ ಎಂಬ ಪದದ ಬಳಕೆ ಇಲ್ಲದಿದ್ದರೂ ಅದರ ಆಶಯ ಇದ್ದೇ ಇದೆ.

ಕನ್ನಡದ ಮೊದಮೊದಲಿನ ವಿಮರ್ಶೆಯಲ್ಲಿ ಕೂಡ ದೇಶೀ ಚಿಂತನೆ ಇದ್ದುದು ಕಂಡುಬರುತ್ತದೆ. ರಾಷ್ಟ್ರೀಯವಾದಿ ಪರಂಪರೆ ಮತ್ತು ಅದರ ಸಾಂಸ್ಕೃತಿಕ ಚಿಹ್ನೆಗಳೊಂದಿಗೆ ಈ (ನವೋದಯದ) ವಿಮರ್ಶೆ ಅನುಸಂಧಾನ ಮಾಡಿದೆ. ಇದಕ್ಕೆ ಕುವೆಂಪು ಅವರ 'ಉಪನಿಷತ್ತಿನ ಋಷಿಯ ದರ್ಶನ' ಒಂದು ಉತ್ತಮ ಉದಾಹರಣೆ ಎನ್ನಬಹುದು.

ಕನ್ನಡ ವಸಾಹತು ಸಂದರ್ಭವನ್ನು ಗಮನಿಸಿದಾಗ ವಿಮರ್ಶೆಯಲ್ಲಿನ ಅಭಿರುಚಿಯ ಪ್ರಶ್ನೆಯು ಸುಶಿಕ್ಷಿತ ಮಧ್ಯಮ ವರ್ಗವು ಕೆಲವು ಸವಾಲುಗಳನ್ನು ಎದುರಿಸಬೇಕಾಯಿತು. ಬೇರೊಂದು ಮಾತಿನಲ್ಲಿ ಹೇಳಬೇಕೆಂದರೆ ಅದೊಂದು ಸುಶಿಕ್ಷಿತ ಮಧ್ಯಮವರ್ಗದ ವಿಶಿಷ್ಟವಾದ ಬ್ಲಾಕ್, ಇಂತಹ ವಸಾಹತುಶಾಹಿ ಕಾಲದಲ್ಲಿ ಪತ್ರಿಕೆಗಳು ಪ್ರಾರಂಭವಾದವು. ಪತ್ಕೆಗಳಲ್ಲಿ ಸಾಹಿತ್ಯದ ಚರ್ಚೆಗಳು ಸಂಸ್ಕೃತಿಯ ಚರ್ಚೆಗಳು ಕಾಣಿಸಿಕೊಂಡವು. ನವ ವಿದ್ಯಾವಂತರಿಗೆ ಇಂಗ್ಲಿಷ್ ಪಠ್ಯಗಳ ಪರಿಚಯವಾಯಿತು. ಹೊಸದೊಂದು ಓದುಗ ವರ್ಗ ಉದಯವಾಯಿತು. ಪತ್ರಿಕೆಗಳು ಹೇಗೆ ಹೊಸ್ ಸಾಂಸ್ಕೃತಿಕ ಸಂವಹನ ಮಾಧ್ಯಮಗಳಾಗಿದ್ದವೋ ಅದೇ ರೀತಿ ಸಾಹಿತ್ಯ ವಿಮರ್ಶೆಯ ಹೊಸ ಸಂವಹನದ ಮಾಧ್ಯಮಗಳಾದವು. ಸಂಸ್ಕೃತಿ ಆಗಮನ ಮತ್ತು ವಿದಾಯಗಳ ನಡುವೆ ಸಾಮಾಜಿಕವಾಗಿ ಉನ್ನತವಾದ ಗುಣಗಳು ಯಾವುವಿದೆಯೋ ಅವನ್ನು ಮತ್ತೆ ಕಟ್ಟುವ ಯತ್ನವನ್ನು ಸಾಹಿತ್ಯ ವಿಮರ್ಶೆಯು ಮೊದಮೊದಲಿಗೆ ರೂಪಿಸಲು ತೊಡಗಿತ್ತು.

ಬಿಎಂಶ್ರೀಯವರ 'ಕನ್ನಡ ಮಾತು ತಲೆಯೆತ್ತುವ ಬಗೆ', ಮಾಸ್ತಿಯವರ ' ಸಾಹಿತ್ಯ ವಿಮರ್ಶೆಯ ಕಾರ್ಯ'ದಂತಹ ಲೇಖನಗಳು ಇದಕ್ಕೆ ಅತ್ಯುತ್ತಮ ಸಾಕ್ಷಿಯಾಗಿವೆ. ಯುರೋಪ್ ಮೂಲದ ಶಿಕ್ಷಣ ಕ್ರಮದಲ್ಲಿ ಮತ್ತು ಭಾರತದಲ್ಲಿ ರೂಪುಗೊಂಡ ಸನ್ನಿವೇಶದಲ್ಲಿ ಅದಕ್ಕೆ ನಿರ್ದಿಷ್ಟ ಉದ್ದೇಶಗಳಿದ್ದವು.

ಮೂಲತಃ ಆ ಕಾಲದ ಯುರೋಪಿಯನ್ ಮಾದರಿಯ ಶಿಕ್ಷಣ ಕ್ರಮದಲ್ಲಿ ಮನುಷ್ಯರನ್ನು ನಾಗರೀಕ ಸಮಾಜಕ್ಕೆ ಬೇಕಾದ ರೀತಿಯಲ್ಲಿ ರೂಪಿಸಬೇಕಾಗಿತ್ತು. ಅದೇ ಪರಿಕಲ್ಪನೆ ಭಾರತದಲ್ಲಿ ರೂಪುಗೊಂಡ ಶಿಕ್ಷಣ ಕ್ರಮದಲ್ಲಿಯೂ ಇತ್ತು. ಇದರಿಂದ ಆ ಶಿಕ್ಷಣ ಪದ್ಧತಿಯು ರೂಪಿಸಿದ ಬೌದ್ಧಿಕತೆಯು 'ಯುರೋಪ್ ಸಂಸ್ಕೃತಿ' ಮತ್ತು 'ಭಾರತೀಯ ಸಂಸ್ಕೃತಿ'ಯಲ್ಲಿ ಯಾವುದನ್ನು ಉಳಿಸಿಕೊಳ್ಳಬೇಕು, ಯಾವುದನ್ನು ವಿರೋಧಿಸಬೇಕು ಎಂಬುದನ್ನು ಹೇಳಿಕೊಟ್ಟಿತು. ತುಂಬ ವಿಶಾಲವಾದ ಅರ್ಥದಲ್ಲಿ ಅದನ್ನು 'ಸಾಂಸ್ಕೃತಿಕ ಆಗಮನ', 'ಸಾಂಸ್ಕೃತಿಕ ವಿದಾಯ'ಗಳ ನಡುವಣ ಸಂದಿಗ್ಧತೆಯೆಂದು ಕರೆಯಬಹುದು. ಈ ಸಂದಿಗ್ಧತೆಯೂ ಕೂಡ ಒಂದು ರೀತಿಯಲ್ಲಿ ವಿಮರ್ಶಾತ್ಮಕ ಎಚ್ಚರವನ್ನು ಇಟ್ಟುಕೊಂಡಿತ್ತು.[೨]

ಸಾಂಸ್ಕೃತಿಕ ಸಾಹಿತ್ಯ ವಿಮರ್ಶೆಯ ಮೂಲಧಾತುವಾಗಿ 'ಲಿಬರಲ್' ಪ್ರಜ್ಞೆ ಕೆಲಸ ಮಾಡುವುದನ್ನು ಗುರುತಿಸಿದ ಮೇಲೂ ಉಳಿಯುವ ಮುಖ್ಯ ವಿಚಾರ – ಈ ಧೋರಣೆಯನ್ನು ಕುರಿತದ್ದೇ. ಅದು ಎಷ್ಟೆಂದರೂ ಅನ್ಯದೇಶೀಯ, ಆದ್ದರಿಂದ ಪರಕೀಯ. ಲಿಬರಲ್ ಮನೋವೃತ್ತಿಯೇ ಐರೋಪ್ಯ ರಾಜಕೀಯ ತತ್ವಶಾಸ್ತ್ರದ ಕೂಸು. ಅದು ದೇಶೀಯ ಮೂಲಗಳನ್ನು ಹೊಂದಿಲ್ಲ ಎನ್ನುವುದು. ಜತೆಗೇ ಇದರ ಹಿನ್ನೆಲೆಯಲ್ಲಿ 'ಸಾಂಸ್ಕೃತಿಕ ಸಾರ್ವತ್ರಿಕತೆಯ ಪರಿಕಲ್ಪನೆ'ಯ ಪ್ರಭಾವ ಇದೆ ಎನ್ನುವ ಮತ್ತೊಂದು ಆಕ್ಷೇಪಣೆಯೂ ಇದರೊಂದಿಗೆ ಸೇರಿದೆ.

ನಿರ್ವಸಾಹತೀಕರಣದ ಬಗ್ಗೆ ಮಾತನಾಡುತ್ತಿರುವ ಈ ಸಂದರ್ಭದಲ್ಲಿ ವಸಾಹತೀಕರಣ ತಂದಂತಹ ತವಕ ತಲ್ಲಣಗಳಿಂದ ಹೊರಬರಲಾರದಂತಹ ಸ್ಥಿತಿ ಇದೆ. ದೇಸೀ ಜ್ಞಾನ ಪರಂಪರೆ, ಚಿಂತನಾಧಾರೆಗಳು ಆರ್ಥಿಕ ಉದಾರೀಕರಣ, ಜಾಗತೀಕರಣ, ಗ್ಲೋಬಲ್ ವಿಲೇಜ್ ಪರಿಕಲ್ಪನೆಯಿಂದಾಗಿ ಅದೃಶ್ಯವಾಗತೊಡಗಿವೆ. ನವ ಆಧುನಿಕತೆಯ ವಸಾಹತುಶಾಹಿ ಮತ್ತು ಬೇರೂರುತ್ತಿರುವ ಶಂಕೆ ಚಿಂತಕರನ್ನು ಕಾಡುತ್ತಿದೆ. ಇದರ ಬಗ್ಗೆ ಸಂದೇಹ ವ್ಯಕ್ತಪಡಿಸುವ ಮನು ಚಕ್ರವರ್ತಿ ವಸಾಹತುಶಾಹಿಗೆ ತೋರುವ ಪ್ರತಿರೋಧ ಕೇವಲ ಪಶ್ಚಿಮದ ಜ್ಞಾನದರ್ಪಕ್ಕೆ ತೋರುವ ಪ್ರತಿರೋಧವಲ್ಲ. ಭಾರತದ ಬಹುಮುಖಿತ್ವವನ್ನು ನಾಶ ಮಾಡಿ ಏಕಮುಖಿ ನೆಲೆಯನ್ನು ಸೃಷ್ಟಿಸುವ ಅನೇಕ 'ಒಳಗಿನ' ಶಕ್ತಿಗಳನ್ನು ತಿರಸ್ಕರಿಸುವುದೂ ಇದಕ್ಕೆ ಪೂರಕ ಎಂದಿದ್ದಾರೆ.[೩] ಈ ದಿಸೆಯಲ್ಲಿ ಪರ್ಯಾಯವನ್ನು ಹೊಸ ಆಧುನಿಕತೆಗೆ ಮುಖಾಮುಖಿಯಾಗಿಸಿ ಆಧುನಿಕಪೂರ್ವ ಚಿಂತನಾ ಕ್ರಮವನ್ನು ಎತ್ತಿ ಹಿಡಿಯಬೇಕಾಗಿದೆ. ಈ ದಾರಿ ಮೇಲ್ನೋಟಕ್ಕೆ ವಿಚಿತ್ರವಾಗಿ ಕಾಣಿಸಬಹುದು. ಅದರೆ ಇಂದಿನ ಸಾಂಸ್ಕೃತಿಕ ಬಿಕ್ಕಟ್ಟಿನಲ್ಲಿ ಈ ಬಗೆಯ ಪರ್ಯಾಯ ಚಿಂತನಾ ವಿಧಾನ ಅನಿವಾರ್ಯ.

ದೇಸೀಯತೆಯನ್ನು ಒಂದು ಸಿದ್ಧಾಂತವಾಗಿ ಕಲ್ಪಿಸುವ ಮತ್ತು ಆಚರಿಸುವ ರೀತಿ ಹೇಗೆ ನಮ್ಮನ್ನು ಮುಖ್ಯ ವಿಷಯಗಳಿಂದ ಹಾದಿ ತಪ್ಪಿಸಬಲ್ಲದು ಎಂಬ ಬಗ್ಗೆ ಕೆ.ವಿ. ತಿರುಮಲೇಶ್ ತಮ್ಮ ಲೇಖನ 'ವಿಮರ್ಶೆ ಮತ್ತು ದೇಸೀಯತೆ'ಯಲ್ಲಿ ಚರ್ಚಿಸಿದ್ದಾರೆ. ಗಿರಡ್ಡಿಯವರ 'ಸಾಹಿತ್ಯದಲ್ಲಿ ದೇಸೀಯತೆ' ಹಾಗು ಕೆ.ವಿ. ನಾರಾಯಣರ 'ಎಲಿಯೆಟ್ ಮತ್ತು ಕನ್ನಡ ಸಾಹಿತ್ಯ ವಿಮರ್ಶೆ' ಎಂಬ ದೇಸೀಯತೆ ಕುರಿತ ಲೇಖನಗಳ ಹಿನ್ನೆಲೆಯಲ್ಲಿ ಈ ಲೇಖನವಿದೆ. ಗಿರಡ್ಡಿ ನಮ್ಮ ಪ್ರಾಚೀನ ರಸ–ಧ್ವನಿ ಚರ್ಚೆಯನ್ನು ವಿವೇಚಿಸುತ್ತ ಕೊನೆಗೆ,

> "ಇನ್ನೂ ಒಂದು ವಿಷಯವೂ ನನ್ನ ಗಮನದಲ್ಲಿದೆ. ನಾನಿಲ್ಲಿ ಅನ್ವಯಿಸಿ ನೋಡಿರುವುದು ಕೇವಲ ಸಾಹಿತ್ಯಕ ಮಾನದಂಡಗಳನ್ನು. ಈ ಮಾನದಂಡಗಳ ಆಚೆ ಸಾಹಿತ್ಯವನ್ನು ಬದುಕಿನೊಂದಿಗೆ ನೇರವಾಗಿ ಘರ್ಷಿಸಿ ನೋಡುವ ಬೇರೆ ರೀತಿಗಳೂ ಇವೆ.

ಅವು ಸದ್ಯ ನನ್ನ ಉದ್ದೇಶಕ್ಕೆ ಹೊರತಾಗಿರುವುದರಿಂದ ಅವುಗಳನ್ನು ಇಲ್ಲಿ ಎತ್ತಿಲ್ಲ"(ಸಾತತ್ಯ ಪುಟ ೧೨೩)

ಎನ್ನುತ್ತಾರೆ.

ಪಶ್ಚಿಮದ ಪ್ರಭಾವಕ್ಕೆ ವಿರುದ್ಧವಾಗಿ ಒಂದು ಪ್ರತಿ ವಿಧಾನವನ್ನು ಹೊಸೆಯುವ ದೃಷ್ಟಿಯಿಂದ ಹೊರಟ ಲೇಖನವೊಂದು ಈ ರೀತಿ ಕೊನೆಗೊಂಡುದು ನಿಜಕ್ಕೂ ಆತಂಕಕಾರೀ ವಿಷಯ ಎನ್ನುವ ತಿರುಮಲೇಶರು ಪಠ್ಯಶಿಲ್ಪವನ್ನು ಮಾತ್ರ ಆಧರಿಸಿದ ವಿಶ್ಲೇಷಣೆಯ ಮೂಲಭೂತ ಕೊರತೆ ಇದು. ಇಂತಹ ವಿಶ್ಲೇಷಣೆ ವಿಮರ್ಶನ ಪೂರ್ವಯುಗಕ್ಕೆ ಸೇರಿದ್ದು, ಈ ಮಟ್ಟಿಗೆ ಪಾಶ್ಚಾತ್ಯ ಪೌರ್ವಾತ್ಯ ಭೇದವೇನೂ ಇಲ್ಲ. ಕೇವಲ ಕಾವ್ಯಶಿಲ್ಪವನ್ನು ಒಂದು ಅಂಗಸಾಧನೆಯಂತೆ ವಿಶ್ಲೇಷಿಸುವ ಎಲ್ಲ ವಿಮರ್ಶೆಯ ಕುರಿತೂ ಈ ಮಾತು ಹೇಳಬಹುದು. ಈ ಅಂಗಸಾಧನೆಯನ್ನು ಭಾರತೀಯ ಅಥವ ದೇಶೀಯ ವಿಧಾನದಿಂದ ಮಾಡಲಿ, ಪಾಶ್ಚಿಮಾತ್ಯ ವಿಧಾನದಿಂದ ಮಾಡಲಿ ಅದು ಬರೇ ಅಂಗಸಾಧನೆಯಾಗಿ ಮಾತ್ರವೇ ಉಳಿಯುತ್ತದೆ. ಹೆಚ್ಚೆಂದರೆ ನಮ್ಮ ಪರಂಪರೆಯನ್ನು ಉಳಿಸಿಕೊಂಡಿದ್ದೇವೆ ಎಂದು ತೃಪ್ತಿ ಪಡಬಹುದು.[೧೪]

ಕೆ.ವಿ. ನಾರಾಯಣರು ಹೇಳಿರುವ ನಮ್ಮದೇ ಸಂಸ್ಕೃತಿನಿಷ್ಠ ಒಳಗಿನ ಬೇರುಗಳನ್ನು ಕಂಡುಕೊಳ್ಳಲು ಯಾವ ವಿಧವಾದ ವಿಮರ್ಶಾ ಮಾದರಿಗಳನ್ನು ರೂಪಿಸಿಕೊಳ್ಳಬೇಕು ಎಂಬುದನ್ನು ತಮ್ಮ ಮಾತುಗಳಲ್ಲಿ ಹೇಳುವುದಿಲ್ಲ ಎನ್ನುವ ತಿರುಮಲೇಶ್ ವಿಮರ್ಶೆಗೆ ಅಂತಹ ಯಾವ ಮಾದರಿಯೂ ಸಿಗಲಾರದು. ಹಾಗೆಯೇ ಆ ಮಾದರಿಯನ್ನು ಸ್ಥಾಪಿಸುವುದು ವಿಮರ್ಶೆಯ ವಿಧಾನವಲ್ಲ ಎನ್ನುತ್ತಾರೆ. ಮುಂದುವರೆದು ಗಿರಡ್ಡಿ ಉಲ್ಲೇಖಿಸುವ ಕಾವ್ಯ ಲಾಕ್ಷಣಿಕರ ಕಾಲ್ಯೈಕ್ಯ, ರಸೈಕ್ಯ ಅನುಭಾವ, ವಿಭಾವ, ಔಚಿತ್ಯ ಮುಂತಾದ ಶಬ್ದಗಳು ಪೂರ್ವ ಪಶ್ಚಿಮ ಭೇದವಿರದೆ ವಿಮರ್ಶಾ ಪೂರ್ವದ ಕಾಲಕ್ಕೆ ಸೇರಿದ ಪಾರಿಭಾಷಿಕ ಪದಗಳು. ಇವನ್ನೀಗ ಸಾಹಿತ್ಯ ವಿಮರ್ಶೆಗೆ ಒಗ್ಗಿಸಿಕೊಳ್ಳುವುದು ಸಾಧ್ಯ ಎಂದು ನನಗನ್ನಿಸುವುದಿಲ್ಲ ಎನ್ನುತ್ತಾರೆ.

ದೇಸೀಯತೆಯನ್ನು ಇನ್ನೊಂದು ಅಖಂಡವಾದ, ಈಗಾಗಲೇ ಲಬ್ಧವಾದ ಬಹುತ್ವವಿರೋಧಿ ಪರಿಮಿತ ಪರಂಪರೆಯ ಕಲ್ಪನೆಗೆ ತಳಕು ಹಾಕದೆ ಸಮಕಾಲೀನ ಎಚ್ಚರವಾಗಿ ತೆಗೆದುಕೊಳ್ಳುವುದು ಇಂದಿನ ಸಾಹಿತ್ಯ ವಿಮರ್ಶೆಗೆ ಅಗತ್ಯವಾಗಿದೆ ಎನ್ನುತ್ತಾರೆ ತಿರುಮಲೇಶ್. ಇದೇ ಧಾಟಿಯಲ್ಲಿ ದೇಸೀಯತೆಯನ್ನು ಕುರಿತಂತೆ ಮನು ಚಕ್ರವರ್ತಿ ಹೇಳಿರುವ ಮಾತುಗಳು ಇವತ್ತಿನ ಸಂಸ್ಕೃತಿ ಚಿಂತಕರಿಗೆ ದೇಸೀ ಮಾದರಿಗಳನ್ನು ಸಂಸ್ಕೃತಿ ಮೀಮಾಂಸೆಯಾಗಿಸುವುದರಲ್ಲಿನ ಸವಾಲುಗಳಂತಿವೆ. ಭೂತಕಾಲದ ಜೀವನಕ್ರಮಗಳ ಪುನಃಸ್ಥಾಪನೆಗೂ ಕ್ರಿಯಾತ್ಮಕವಾದ ದೇಸೀ ಬಿಡುಗಡೆಯ ಪರ್ಯಾಯ ಮಾದರಿಗಳಿಗೂ ವ್ಯತ್ಯಾಸ ಉಂಟು. ಹಳೆಯ ಬದುಕಿನ ಕ್ರಮಕ್ಕೂ ಪುರಾತನ ವಿಮೋಚನಾ ಮಾದರಿಗಳಿಗೂ ಇರುವ ವ್ಯತ್ಯಾಸವನ್ನು ಸೃಜನಶೀಲವಾಗಿ ಅರ್ಥ ಮಾಡಿಕೊಂಡು ದೇಸೀ ಮಾದರಿಗಳನ್ನು ಸಂಸ್ಕೃತಿ ಮೀಮಾಂಸೆಯಾಗಿಸುವುದರಲ್ಲಿ ಇಂದಿನ ಸಂಸ್ಕೃತಿ ಚಿಂತಕರಿಗೆ ನಿಜವಾದ ಸವಾಲುಗಳಾಗಿವೆ.[೧೫]

ಅಡಿಟಿಪ್ಪಣಿಗಳು

೧. ಡಾ.ಸಿ.ಎನ್.ರಾಮಚಂದ್ರನ್: ಪ್ರಜಾವಾಣಿ ೨೭ ಮಾರ್ಚ್, ೧೯೯೮, ಪುಟ ೨೧

೨. ಡಾ.ಸಿ.ಎನ್.ರಾಮಚಂದ್ರನ್: ಸಾಹಿತ್ಯ ವಿಮರ್ಶೆ ೧೯೯೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪುಟ ೨೧

೩. ಅದೇ ಪುಟ ೨೨

೪. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು, ೨೦೦೧, ಪುಟ ೯೯

೫. ಡಾ.ಕೆ.ಕೇಶವ ಶರ್ಮ, ಸಾಹಿತ್ಯವಿಮರ್ಶೆ ಮತ್ತು ರಾಜಕಾರಣ, ಸಂಕ್ರಮಣ ೩೨೩, ಜುಲೈ ೧೯೯೯ ಪುಟ ೨೯-೫೦

೬. ಅದೇ, ಪುಟ ೩೧೯

೭. ಆನಂದ ಕೊಡಿಂಬಳ: ಕನ್ನಡ ವಿಮರ್ಶೆ: ಪರಂಪರೆಯ ಸಾತತ್ಯ, ಕನ್ನಡ ಅಧ್ಯಯನ ಸಂಪುಟ ೧೨, ಸಂಚಿಕೆ ೧, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಪುಟ ೬೯

೮. ಮನು ಚಕ್ರವರ್ತಿ ಮತ್ತು ವಿ.ಎಸ್.ಶ್ರೀಧರ್: ಸಾಂಸ್ಕೃತಿಕ ವಿಮರ್ಶೆ ಹಾಗು ಕನ್ನಡ ಸಂದರ್ಭ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪುಟ ೩೨

೯. ಡಾ.ಕೆ.ವಿ.ತಿರುಮಲೇಶ್, ವಿಮರ್ಶೆ ಮತ್ತು ದೇಶೀಯತೆ, ಕನ್ನಡ ಅಧ್ಯಯನ, ಮಾರ್ಚ್ ೧೯೯೯, ಪುಟ ೩೭-೫೦

೧೦. ಮನು ಚಕ್ರವರ್ತಿ ಮತ್ತು ವಿ ಎಸ್. ಶ್ರೀಧರ್, ಸಾಂಸ್ಕೃತಿಕ ವಿಮರ್ಶೆ ಹಾಗು ಕನ್ನಡ ಸಾಹಿತ್ಯ ಸಂದರ್ಭ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩, ಪುಟ ೩೯

೧೧.ಕೆ.ವಿ.ನಾರಾಯಣ್: 'ಟಿ.ಎಸ್. ಎಲಿಯೆಟ್ ಮತ್ತು ಕನ್ನಡ ನವ್ಯಕಾವ್ಯ ಸಂದರ್ಭ', ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೧೯೮೮

೧೨.ಡಾ.ಕೆ. ಕೇಶವ ಶರ್ಮ, ಸಾಹಿತ್ಯ ವಿಮರ್ಶೆಯ ಕಾರ್ಯ, ಹೊಸತು, ನವೆಂಬರ್ ೨೦೦೬

೧೩.ಪ್ರೊ.ಮನುಚಕ್ರವರ್ತಿ, ಪುಸ್ತಕ-ಅರಿವಿನ ಕಥನ, ಕನ್ನಡ ಅಧ್ಯಯನ, ಸಂಚಿಕೆ ೧೨, ಸಂಪುಟ ೧, ಪುಟ ೧೧

೧೪.ಡಾ.ಕೆ.ವಿ. ತಿರುಮಲೇಶ್, ವಿಮರ್ಶೆ ಮತ್ತು ದೇಸೀಯತೆ, ಕನ್ನಡ ಅಧ್ಯಯನ, ಸಂಪುಟ ೫, ಸಂಚಿಕೆ ೨, ಮಾರ್ಚ್ ೧೯೯೯, ಪುಟ ೫೦

೧೫.ಮನು ಚಕ್ರವರ್ತಿ, ಸಾಂಸ್ಕೃತಿಕ ಅನುಸಂಧಾನವಾಗಿ ಸಾಹಿತ್ಯಾಧ್ಯಯನ, ಕನ್ನಡ ಅಧ್ಯಯನ, ಸಂಚಿಕೆ ೫ ಸಂಪುಟ ೨, ಮಾರ್ಚ್ ೧೯೯೯, ಪುಟ ೬೩

ಭಾಗ ೫
೧. ಸಮಾರೋಪ

ಕನ್ನಡ ಸಾಹಿತ್ಯಕ್ಕೆ, ಸಾಹಿತ್ಯ ಚಳುವಳಿಗಳಿಗೆ ಪತ್ರಿಕೆಗಳ ಕೊಡುಗೆಗಳೇನು ಎಂಬುದನ್ನು ಪರಿಶೀಲಿಸುವ ಈ ಪ್ರಯತ್ನದಲ್ಲಿ ಈ ಕೊಡುಗೆಗಳ ಕೆಲವು ಅಂಶಗಳನ್ನಷ್ಟೇ ಗಮನಿಸಲಾಗಿದೆ. ಈ ಬಗೆಯ ಪರಿಶೀಲನೆಗೆ ನಿಶ್ಚಿತ ರೂಪುರೇಷೆ, ಮಾನದಂಡಗಳು ಇರಲು ಸಾಧ್ಯವಿಲ್ಲ. ಪತ್ರಿಕೆಯ ಸಾಧನೆ ಕಣ್ಣಿಗೆ ನೇರವಾಗಿ ಕಾಣುವಂತಿದ್ದರೂ ಆ ಸಾಧನೆಗಳ ಹಿಂದಿರುವ ಪ್ರೇರಣೆಯ ಸ್ವರೂಪ ಎಂತಹುದು ಎಂಬುದು ಸುಲಭವಾಗಿ ತಿಳಿಯುವಂತಹುದಲ್ಲ. 'ಪ್ರಬುದ್ಧ ಕರ್ನಾಟಕ'ದ ಸಾಧನೆಗಳು ಕಣ್ಣಿಗೆ ಕಾಣುವುದಾದರೂ ಅದರ ಹಿಂದಿನ ಪ್ರೇರಣೆ ಏನು ಎಂಬುದು ಸುಲಭವಾಗಿ ಗೊತ್ತಾಗುವುದಿಲ್ಲ, 'ಲಂಕೇಶ್ ಪತ್ರಿಕೆ'ಯ ಸಾಧನೆಗಳು ತಿಳಿಯುವವಾದರೂ ಯಾವೆಲ್ಲ ಒತ್ತಡಗಳು ಲಂಕೇಶರಿಗೆ ಒಂದು ಪತ್ರಿಕೆಯನ್ನು ನಡೆಸಲು ಪ್ರೇರೇಪಿಸಿದವು ಎಂಬುದು ಎಂದಿಗೂ ಮರೆಯಲ್ಲೇ ಇರುತ್ತದೆ. ಅಲ್ಲದೆ ಪತ್ರಿಕೋದ್ಯಮ ಕನ್ನಡವನ್ನು ಬೆಳೆಸುವ, ಸಾಹಿತ್ಯ ಚಳುವಳಿಗಳನ್ನು ಪೋಷಿಸುವ ಉದ್ದೇಶವನ್ನು ಇರಿಸಿಕೊಂಡಿದ್ದರೂ – ಹಾಗೆಂದು ಯಾವ ಪತ್ರಿಕೆಯೂ ಘೋಷಿಸಿಕೊಂಡಿರಲಿಲ್ಲ. ಒಂದು ರಾಜಕೀಯ ಮಸೂದೆಗೂ, ಸಾಂಸ್ಕೃತಿಕ ಸಂಗತಿಗೂ ಇರುವ ಮಹತ್ವ ಒಂದೇ ಆದರೂ ಅವುಗಳ ಸ್ವರೂಪ ಸಂಪೂರ್ಣ ಬೇರೆ. ಅದನ್ನು ಇತಿಹಾಸದಲ್ಲಿ ಯಥಾರ್ಥವಾಗಿ ದಾಖಲಿಸುವಂತೆ, ಸಂಕೀರ್ಣಮಯವಾದ ಸಂಸ್ಕೃತಿ ಸಂಗತಿಯನ್ನು ದಾಖಲಿಸಿದರೆ ಅದು ಅಪೂರ್ಣವೆನಿಸುತ್ತದೆ. ಈ ಉದ್ದೇಶ ಸಾಧನೆಗೆ ಪ್ರತಿಯೊಂದು ಪತ್ರಿಕೆಯೂ ತನ್ನದೇ ಮಾರ್ಗವನ್ನು ರೂಪಿಸಿಕೊಂಡಿತು, ಆ ಮಾರ್ಗದಲ್ಲಿ ದುಡಿಯುವಾಗ ತತ್ಕಾಲದ ಪ್ರೇರಣೆಗಳಿಂದ, ಸನ್ನಿವೇಶಗಳಿಂದ ಪ್ರತಿಯೊಂದು ಪತ್ರಿಕೆಯೂ ತನ್ನ ಮಾರ್ಗಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿತು. ಹಾಗಾಗಿ ಈ ಚಾರಿತ್ರಿಕ ಪರಿಶೀಲನೆಯು ಒಂದು ಊಹಾತ್ಮಕ ಕಥನವೆಂದೂ ಎನಿಸಿಕೊಂಡೀತು.

ಪತ್ರಿಕೋದ್ಯಮ ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಸೀಮಿತವಾದುದು ಎಂದು ಯೋಚಿಸುವುದು ತಪ್ಪಾಗುತ್ತದೆ. ಒಂದು ಪತ್ರಿಕೆ ಸಾಹಿತ್ಯಕ್ಕೋ, ಕೃಷಿಗೋ, ವೈದ್ಯಕೀಯಕ್ಕೋ, ಅಧ್ಯಾತ್ಮಕ್ಕೋ ಮೀಸಲಾದುದು ಎಂದು ಘೋಷಿಸಿಕೊಂಡರೂ ಅದು ತನ್ನ ನಿಶ್ಚಿತ ಕ್ಷೇತ್ರದಲ್ಲಿ ದುಡಿಯುವ ಮೂಲಕ ತನಗರಿವಿಲ್ಲದೆಯೇ ತನ್ನ ಸುತ್ತಣ ಸಮಾಜ, ಸಂಸ್ಕೃತಿಗಳೊಂದಿಗೂ ಸಂವಹನ ನಡೆಸುತ್ತಿರುತ್ತದೆ. ಈ ಮಾತು ಕನ್ನಡ 'ಸಾಹಿತ್ಯಿಕ' ಪತ್ರಿಕೆಗಳ ಮಟ್ಟಿಗಂತೂ ಅಕ್ಷರಶಃ ನಿಜ. ಪ್ರಬುದ್ಧ ಕರ್ನಾಟಕದಂತಹ ಪತ್ರಿಕೆ

ಪ್ರಾರಂಭದಲ್ಲಿ ಕೇವಲ ಸಾಹಿತ್ಯಕ್ಕಷ್ಟೇ ಮೀಸಲಾಗಿದ್ದರೂ, ಕ್ರಮೇಣ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತ ಹೋಯಿತು, ವಿಜ್ಞಾನ, ಪರಿಸರ, ವೈದ್ಯಕೀಯ ಮೊದಲಾದ ಹಲವು ಸಂಚಿಕೆಗಳನ್ನು ತರುವ ಮೂಲಕ ಅದು ತನ್ನ ಶುದ್ಧ ಸಾಹಿತ್ಯಿಕ ಉದ್ದೇಶಗಳನ್ನು ಮೀರಿತು. ನವ್ಯಸಾಹಿತ್ಯವನ್ನು ಪೋಷಿಸಲೆಂದೇ ಹುಟ್ಟಿಕೊಂಡ 'ಸಂಕ್ರಮಣ' ಪತ್ರಿಕೆ ಮುಂದೆ ಬಂಡಾಯ ಚಳುವಳಿಯಿಂದ ಪ್ರೇರಿತವಾಗಿ ತನ್ನ ಸೀಮಿತ ಆಶಯಗಳನ್ನು ಬದಲಾಯಿಸಿಕೊಳ್ಳುವಾಗ ಅದರಲ್ಲಿ ಒಂದು ದೊಡ್ಡ ಬಿರುಕೇ ಉಂಟಾಯಿತು.

ಇದಕ್ಕೆ ಬಹುಶಃ ಮಹಾತ್ಮಾ ಗಾಂಧಿಯವರ ಪತ್ರಿಕೋದ್ಯಮದ ಪ್ರಭಾವ ಕಾರಣವಿರಬಹುದು. ತಮ್ಮ 'ಯಂಗ್ ಇಂಡಿಯಾ', 'ಹರಿಜನ್' ಪತ್ರಿಕೆಗಳ ಮೂಲಕ ಗಾಂಧಿ ತಮ್ಮ ಅಂತರಂಗದ ಪ್ರಯೋಗಗಳನ್ನು ನಿರೂಪಿಸುವ ಕಳಕಳಿಯಿಂದ ಹಿಡಿದು ನಾಡಿನ ಅಂತ್ಯಜ, ಅಲ್ಪ ಸಂಖ್ಯಾತರವರೆಗಿನ ತಮ್ಮ ಕಳಕಳಿಯನ್ನು ವ್ಯಕ್ತ ಪಡಿಸಲು ಈ ಎರಡು ಪತ್ರಿಕೆಗಳನ್ನು ಬಹು ಪರಿಣಾಮಕಾರಿಯಾಗಿ ದುಡಿಸಿಕೊಂಡರು. ಪ್ರಾರಂಭದಲ್ಲಿ ಬ್ರಿಟಿಷರ ಧರ್ಮಪ್ರಸಾರದ ಉದ್ದೇಶದಿಂದ ಹುಟ್ಟಿಕೊಂಡ ಪತ್ರಿಕೋದ್ಯಮ ಮುಂದೆ ಗೋಖಲೆ, ತಿಲಕ್, ಗಾಂಧಿಯಂತಹ ಹಲವು ನಾಯಕರ, ಚಿಂತಕರ ಪ್ರಯೋಗಗಳಿಂದ, ಕ್ರಿಯಾಶೀಲತೆಯಿಂದ ಭಾರತೀಯ ಪತ್ರಿಕೋದ್ಯಮ – ಹಾಗೆಯೇ ಕರ್ನಾಟಕದ ಪತ್ರಿಕೋದ್ಯಮ – ತನ್ನ ಸ್ವರೂಪ ಹಾಗು ಉದ್ದೇಶಗಳನ್ನು ರೂಪಿಸಿಕೊಳ್ಳುತ್ತ ಸಾಗಿತು. ಇನ್ನು ಕನ್ನಡ ಪತ್ರಿಕೋದ್ಯಮದ ಆದ್ಯ ಪ್ರವರ್ತಕರು ಎನಿಸಿಕೊಂಡ ಬಹುಪಾಲು ಲೇಖಕರು, ಗಾಂಧೀ ಚಳುವಳಿಯಲ್ಲಿ ದುಡಿದವರೂ, ಗಾಂಧೀ ವಿಚಾರಗಳನ್ನು ಹರಡಿದವರೂ ಆಗಿದ್ದರು.

ಪ್ರಸ್ತುತ ಪ್ರಬಂಧವು ಕಳೆದೆರಡು ಶತಮಾನಗಳಲ್ಲಿ ಕನ್ನಡ ಪತ್ರಿಕೋದ್ಯಮ ನಡೆದು ಬಂದ ಹಾದಿಯನ್ನು ಸ್ಥೂಲವಾಗಿ ಅಧ್ಯಯಿಸಿರುವುದಾದರೂ ಇದರ ಮುಖ್ಯ ಗಮನವಿರುವುದು ಪತ್ರಿಕೋದ್ಯಮ ಕನ್ನಡ ಸಾಹಿತ್ಯಿಕ ಚಳುವಳಿಗಳೊಡನೆ ಹೇಗೆ ಬೆರೆತಿತ್ತು ಹಾಗು ಕನ್ನಡ ಚಿಂತನೆಯನ್ನು ರೂಪಿಸಲು ಹೇಗೆ ನೆರವಾಯಿತು ಎಂಬುದರ ಕಡೆಗೆ. ಕನ್ನಡ ಸಾಹಿತ್ಯ ಎಂದೊಡನೆ ಅಲ್ಲಿಯೂ ಹಲವು ವೈವಿಧ್ಯಗಳನ್ನು ಕಾಣಬಹುದು. ಕನ್ನಡದ ಸಂದರ್ಭದಲ್ಲಿ ರಂಗಭೂಮಿಗೇ ಸಂಬಂಧಪಟ್ಟ 'ಸೂತ್ರಧಾರ'ದಂತಹ ಪತ್ರಿಕೆಗಳುಂಟು, ಜಾನಪದದಲ್ಲೂ ಯಕ್ಷಗಾನಕ್ಕೆ ಸಂಬಂಧಿಸಿದ ಪತ್ರಿಕೆಗಳುಂಟು, ಇಲ್ಲಿ ನಿಯತ ಕಾಲಿಕಗಳ ಜೊತೆಗೆ ಅನಿಯತ ಕಾಲಿಕೆಗಳೂ ಉಂಟು. ಕೇವಲ ಒಂದೆ ಸಂಚಿಕೆಯಲ್ಲಿ ಬಂದುಹೋದ ಪಿ. ಲಂಕೇಶರ 'ಪಾಂಚಾಲಿ'ಯಂತಹ ಪತ್ರಿಕೆಗಳುಂಟು. ಚಂದ್ರಶೇಖರ ಕಂಬಾರರ 'ಅಕಾವ್ಯ', ಬಾಕಿನ ಅವರ 'ಕವಿತಾ', ಮೊದಲಾದ ಇನ್ನೂ ಬೆಳಕಿಗೆ ಬರದ ಹಲವು ಬಗೆಯ ಪತ್ರಿಕೋದ್ಯಮಗಳುಂಟು ಇಂತಹವನ್ನೆಲ್ಲ ಬೆಳಕಿಗೆ ತರುವ ಉದ್ದೇಶವೂ ಈ ಪ್ರಬಂಧದ ಇನ್ನೊಂದು ಉದ್ದೇಶವಾಗಿದೆ. ಸಂಶೋಧನೆ, ವಿಶ್ಲೇಷಣೆಗಳು ಮಾಹಿತಿ ಸಂಗ್ರಹದ ಅನಂತರ ನಡೆಯುವ ಸಂಗತಿಗಳಾಗಿವೆ. ಹಾಗಾಗಿ ಸಂಶೋಧನೆ, ವಿಶ್ಲೇಷಣೆಗಳಿಗೆ ಪೂರಕವಾದ ಮಾಹಿತಿ ಸಂಗ್ರಹಣೆಯನ್ನೂ ಸಂಶೋಧನೆಯ ಒಂದು ಅಂಗವೆಂದೇ ಪರಿಗಣಿಸಬಹುದು. ಮಾಹಿತಿ ತಂತ್ರಜ್ಞಾನ ಇಂದು ಜಗತ್ತನ್ನೇ ಒಂದೆಡೆ ತಂದು ತೋರಿಸುವ ಮಟ್ಟದಲ್ಲಿ ಬೆಳೆದಿರುವುದಾದರೂ ಪತ್ರಿಕೋದ್ಯಮಕ್ಕೆ ಇದರಿಂದ ಬಾಧೆಯಾಗಿಲ್ಲ, ಪತ್ರಿಕೋದ್ಯಮದ ಪ್ರಾಮುಖ್ಯತೆ ಇನ್ನೂ ಹೆಚ್ಚಾಗುತ್ತಲೇ ಇದೆ. ಜೊತೆಗೆ ಪತ್ರಿಕೋಮದ ಬೆಳವಣಿಗೆಗೆ ನೆರವಾಗಿದೆ. ಮಾಹಿತಿ ತಂತ್ರಜ್ಞಾನದಿಂದ ಅಂತರ್ಜಾಲಕ್ಕೇ ಸೀಮಿತವಾದ ಇ–ಪತ್ರಿಕೋದ್ಯಮ ಮೊದಲಾದವು ಪತ್ರಿಕೋದ್ಯಮಕ್ಕೆ ಹಲವು ಆಯಾಮಗಳನ್ನು ತೋರಿಸುತ್ತಿವೆ.

ಇದು ಪ್ರಧಾನವಾಗಿ ಮಾಹಿತಿಕೇಂದ್ರಿತ ಅಧ್ಯಯನವಾಗಿದೆ. ವಿಮರ್ಶೆಯ ಗುಣಾವಗುಣಗಳನ್ನು ಚರ್ಚಿಸುವ ಉದ್ದೇಶ ಈ ಪ್ರಬಂಧಕ್ಕಿಲ್ಲ. ಏಕೆಂದರೆ ಪತ್ರಿಕೋದ್ಯಮದ ವಿದ್ಯಾರ್ಥಿ ನಿರ್ಮಿಸುತ್ತಿರುವ

ಪ್ರಬಂಧ ಇದಾದ ಕಾರಣ ಪತ್ರಿಕೆ ಹಾಗು ಸಾಹಿತ್ಯದ ಸಂಬಂಧ ಪತ್ರಿಕೆಗಳು ಆರಂಭವಾದ ಕಾಲದಿಂದ ಈತನಕ ನಡೆದುಬಂದಿರುವ ವಿಭಿನ್ನ ನೆಲೆಗಳನ್ನು ಪ್ರಬಂಧದಲ್ಲಿ ವಿಶ್ಲೆಷಿಸಲಾಗಿದೆ. ಕರ್ನಾಟಕದ ವಿಭಿನ್ನ ಭಾಗಗಳಲ್ಲಿ ಅಸಂಖ್ಯ ಪತ್ರಿಕೆಗಳು ಆಯಾ ಕಾಲಕ್ಕೆ ಸನ್ನಿವೇಶಕ್ಕೆ ಅನುಗುಣವಾಗಿ ಹೊರಬಂದಿದೆ. ಅಸಂಖ್ಯ ಪತ್ರಿಕೆಗಳು ಕೆಲವೇ ಸಂಚಿಕೆಗಳನ್ನು ಮಾತ್ರ ಪ್ರಕಟವಾಗಿ ಮತ್ತೆ ಪ್ರಕಟವಾಗಿರುವುದಿಲ್ಲ. ಈ ಎಲ್ಲ ಪತ್ರಿಕೆಗಳನ್ನು ಸಂಕಲನಗೊಳಿಸುವ ಕಾರ್ಯ ಅತಿ ಕಷ್ಟ ಸಾಧ್ಯವಾದದ್ದು. ಸಾಂಸ್ಥಿಕ ಪ್ರಯತ್ನಗಳಿಂದ ಮಾತ್ರ ಈ ಎಲ್ಲವನ್ನೂ ಸಂಘಟಿಸಲು ಸಾಧ್ಯವಾಗಬಹುದು. ಕಳೆದ ಒಂದು ಶತಮಾನದ ಅವಧಿಯಲ್ಲಿ ನಡೆದಿರುವ ಪತ್ರಿಕಾ ವ್ಯವಸಾಯದಲ್ಲಿ ಸಾಹಿತ್ಯಸಂಬಂಧಿಯಾದ ಪರಿಚಯ ಮಾಹಿತಿ, ವಾದ ವಿವಾದ, ಅನ್ಯಭಾಷಾ ಸಾಹಿತ್ಯ ಪರಿಚಯ, ವಿಮರ್ಶೆ, ಕೃತಿಪರಿಚಯ, ಇವುಗಳೆಲ್ಲ ಗಮನಿಸಿದರೆ ಮುದ್ರಣ ಸಂಸ್ಕೃತಿಯಿಂದ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಒದಗಿ ಬಂದಿರುವ ಪ್ರಯೋಜನ ಎಷ್ಟು ವ್ಯಾಪಕವಾದದ್ದು ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಹಾಗೆ ನೋಡಿದರೆ ಸಾಹಿತ್ಯ ಸಂಸ್ಕೃತಿ ಮತ್ತು ಪತ್ರಿಕಾ ಸಂಸ್ಕೃತಿ ಶಿಸ್ತಿನಿಂದ ಭಿನ್ನವಾಗಿ ಕಂಡರೂ ಗಾಢವಾದ ಅಂತರ್‌ಸಂಬಂಧವನ್ನು ಉಳಿಸಿಕೊಂಡು ಬಂದಿದೆ ಎಂಬುದು ವೇದ್ಯವಾಗುತ್ತದೆ. ಈ ದಿಕ್ಕಿನಲ್ಲಿ ಮತ್ತು ಬೇರೆಯ ನೆಲೆಗಳಿಂದ ಅಭ್ಯಾಸ ನಡೆಯಬಹುದಾಗಿದೆ ಎಂಬುದು ನಮ್ಮ ಈ ಅಧ್ಯಯನದ ಧೋರಣೆಯಾಗಿದೆ.

೨. ಗ್ರಂಥಋಣ

೧. ಅನಂತಮೂರ್ತಿ: ಪೂರ್ವಾಪರ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೬, ಪುಟ ೩೬

೨. ಅನಂತನಾರಾಯಣ ಎಸ್, ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ

೩. ಅಡಿಗ: ಸಾಕ್ಷಿ, ಜುಲೈ ಸಂಚಿಕೆ ೪ ೧೯೬೮

೪. ಅನಂತಮೂರ್ತಿ: ಅಭಿಮಾನದಿಂದ ಬೆಳೆದ ಸ್ನೇಹ, ಪ್ರಜಾವಾಣಿ, ಡಿಸೆಂಬರ್ ೨೧, ೨೦೦೮

೫. ಅಡಿಗ: ನೆನಪಿನ ಗಣಿಯಿಂದ, ಅನುಭವ ಕಥನ, ಪ್ರಿಸಂ ಬುಕ್ಸ್ ಪ್ರೈ.ಲಿ., ಬೆಂಗಳೂರು

೬. ಅನಂತಮೂರ್ತಿ: ಸಂಸ್ಕೃತಿ ಮತ್ತು ಅಡಿಗ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಸಂಸ್ಥೆ, ಉಡುಪಿ, ೧೯೯೬

೭. ಅನಕೃ: ಬರಹಗಾರನ ಬದುಕು, ವಿಶ್ವಭಾರತಿ, ಮಡಗಾಂವ್, ೧೯೭೨

೮. ಅನಕೃ: ಸಾಹಿತ್ಯಶ್ರೇಣಿ, ಸಂಪುಟ ೧, ನಾಟಕ ಸಾಹಿತ್ಯ, ಕನ್ನಡ ಸಂಸ್ಕೃತಿ ಇಲಾಖೆ

೯. ಅನಂತಮೂರ್ತಿ ಯು.ಆರ್., ಯುಗಪಲ್ಲಟ, ಕನ್ನಡ ಪುಸ್ತಕ ಪ್ರಾಧಿಕಾರ,

೧೦. ಅ.ನ.ಕೃಷ್ಣರಾಯ: ನನ್ನನ್ನು ನಾನೇ ಕಂಡೆ, ಕುಸುಮಾ ಪ್ರಕಾಶನ ಬೆಂಗಳೂರು ೨೦೦೨

೧೧. ಅಗರಂ ಕೃಷ್ಣಮೂರ್ತಿ: ಕನ್ನಡ ನುಡಿ ಲೇಖನ ಸೂಚಿ, ಕನ್ನಡ ಸಾಹಿತ್ಯ ಪರಿಷತ್,

೧೨. ಅಮೂರ ಜಿ.ಎಸ್.: ಸಂಪಾದಕರು: ಸ್ವಾತಂತ್ರ್ಯೋತ್ತರ ಕನ್ನಡ ಕಥಾಲೋಕ, ಅಂಕಿತ ಪುಸ್ತಕ, ಬೆಂಗಳೂರು ೨೦೦೮

೧೩. ಪ್ರೊ.ಅಭಯ ಕುಮಾರ್ ಕೆ., ಸಂಪಾದಕರು, ಪತ್ರಿಕೆಗಳಲ್ಲಿ ಸಮಕಾಲೀನತೆ, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೬

೧೪. ಅನಂತಮೂರ್ತಿ ಯು.ಆರ್.: ಸಂಸ್ಕೃತಿ ಮತ್ತು ಅಡಿಗ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ ೧೯೯೬

೧೫. ಅನಂತಮೂರ್ತಿ ಯು.ಆರ್.: ಸಮಕ್ಷಮ, ಅಕ್ಷರಪ್ರಕಾಶನ, ಹೆಗ್ಗೋಡು, ಸಾಗರ, ೧೯೯೨

೧೬. ಇಕ್ಬಾಲ್ ಅಹಮದ್ ಕೆ.ಆರ್. ಪತ್ರಿಕೋದ್ಯಮ– ಇಣುಕುನೋಟ, ಲಿಪಿ ಮುದ್ರಣ ಬಸವನಗುಡಿ, ಬೆಂಗಳೂರು ೧೯೯೩

೧೭. ಡಾ.ಉಷಾ ಎಂ.(ಸಂ): ಆಧುನಿಕ ಮಹಿಳಾ ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭

೧೮. ಕೃಷ್ಣಯ್ಯ ಎಂ.ಎಚ್., ಅವಲೋಕನ, ಸಾಹಿತ್ಯಾವಲೋಕನ ವಿಮರ್ಶಾ ಸಂಪುಟ ೪, ವೀಸೀ
೧೯. ಕೃಷ್ಣಮೂರ್ತಿ ಎಂ.ಜಿ., ಕೃತಿ ಸಂಸ್ಕೃತಿ, ರುಜುವಾತು ಪ್ರಕಾಶನ ೧೯೯೪
೨೦.ಕೀರ್ತಿನಾಥ ಕುರ್ತಕೋಟಿ: ಹಣ್ಣಿನೊಳಗಣ ಮರವ ಬಲ್ಲವನೆ ಜಾಣ – ಎ.ಕೆ.ರಾಮಾನುಜನ್ ಕಾವ್ಯಾನುಸಂಧಾನ, ಪ್ರೊ. ಕೀರ್ತಿನಾಥ ಕುರ್ತಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩
೨೧. ಕೃಷ್ಣಶಾಸ್ತ್ರಿ ಎ.ಆರ್. ಭಾಷಣಗಳು ಮತ್ತು ಲೇಖನಗಳು, ಶಾರದಾ ಮಂದಿರ, ಮೈಸೂರು ೧೯೬೦
೨೨. ಡಾ. ಕೇಶವ ಶರ್ಮ, ಸಂಪಾದಕ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩
೨೩. ಕೃಷ್ಣರಾಯ ಶಾ.ಮಂ, ಅ ನ. ಕೃಷ್ಣರಾಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೮೮
೨೪. ಡಾ.ಕೋಮಲವಲ್ಲಿ ಹು.ರಾ: ತರಾಸು ಅವರ ಸಾಮಾಜಿಕ ಕಾದಂಬರಿಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೨೦೦೮
೨೫. ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ, ವರ್ತಮಾನ, ಕನ್ನಡ ಸಾಹಿತ್ಯ ಪರಿಷತ್, ೧೯೯೩
೨೬. ಗಿರಡ್ಡಿ ಗೋವಿಂದರಾಜ, ಸಮಗ್ರವಿಮರ್ಶೆ ೨, ಸಪ್ನ ಬುಕ್ ಹೌಸ್, ೨೦೦೧
೨೭. ಗರುಡನಗಿರಿ ನಾಗರಾಜ್, ಸಂಪಾದಕರು: ಕನ್ನಡ ಪತ್ರಿಕಾಲೋಕದ ಧೀಮಂತರು ೬, ಕನ್ನಡ ಪತ್ರಿಕಾ ಅಕಾಡೆಮಿ, ಬೆಂಗಳೂರು ೨೦೦೧
೨೮. ಗಿರಡ್ಡಿ ಗೋವಿಂದ ರಾಜ: ಸಮಗ್ರ ವಿಮರ್ಶೆ ೧, ಸಪ್ನ ಬುಕ್ ಹೌಸ್, ಬೆಂಗಳೂರು ೨೦೦೧
೨೯. ಗೋಕಾಕ್ ವಿ.ಕೃ: ಸಮಕಾಲೀನ ಭರತೀಯ ಸಾಹಿತ್ಯ, ಕೇಂದ್ರ ಸಾಹಿತ್ಯ ಅಕಾಡೆಮಿ, ಹೊಸದೆಹಲಿ ೧೯೬೮
೩೦.ಗೋವಿಂದ ಪೈ, ಕಂನಾಡ ಸಾಹಿತ್ಯಜ್ಞರ ಆತ್ಮಕಥನ, ಮಿಂಚಿನ ಬಳ್ಳಿ ಪ್ರಕಾಶನ, ೧೯೪೬
೩೧. ಗುಂಡಪ್ಪ ಡಿ.ವಿ., ಜೀವನ ಸೌಂದರ್ಯ ಮತ್ತು ಸಾಹಿತ್ಯ, ಡಿವಿಕೆ ಮೂರ್ತಿ, ಮೈಸೂರು, ೧೯೩೩
೩೨. ಗೋಪಾಲಕೃಷ್ಣ ಅಡಿಗ: ಸಮಗ್ರ ಕಾವ್ಯ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು ೧೯೮೭
೩೩. ಗೋಪಾಲಕೃಷ್ಣ ಅಡಿಗ: ಸಮಗ್ರ ಗದ್ಯ, ಸಾಕ್ಷಿ ಪ್ರಕಾಶನ, ಬೆಂಗಳೂರು ೧೯೭೭
೩೪. ಡಾ.ಗೋವಿಂದರಾಜು ಸಿ.ಆರ್.: ಕರ್ನಾಟಕ ಏಕೀಕರಣ ಚಳವಳಿ ಮತ್ತು ಕನ್ನಡ ಸಾಹಿತ್ಯ, ಎಸ್.ಬಿ.ಎಸ್. ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ಕುಮಾರ ಪಾರ್ಕ್ ಈಸ್ಟ್, ಬೆಂಗಳೂರು ೧೯೯೮
೩೫. ಗೋಪಾಲಕೃಷ್ಣ ಅಡಿಗ ಎಂ: ಸಾಕ್ಷಿಪ್ರಜ್ಞೆ, ಅಡಿಗ ಸಾಹಿತ್ಯ ಸಂಪೂರ್ಣ ಲೇಖನ ಸಂಪುಟ, ಸಪ್ನ ಬುಕ್ ಹೌಸ್, ಬೆಂಗಳೂರು ೨೦೦೪
೩೬. ಗೌರೀಸತ್ಯ: ಪತ್ರಕರ್ತನ ಬರಹಗಳು, ಸುಂದರ್ ಪ್ರಕಾಶನ, ಬೆಂಗಳೂರು ೧೯೮೦

೩೭. ಡಾ. ಚಿದಾನಂದ ಮೂರ್ತಿ ಎಂ: ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ, ಸಾಹಿತಿಗಳ ಕಲಾವಿದರ ಬಳಗ, ಬೆಂಗಳೂರು ೧೯೮೯
೩೮. ಚಂದ್ರಶೇಖರ ಪಾಟೀಲ (ಸಂ): ಸಂಕ್ರಮಣ ಸಾಹಿತ್ಯ, ಸಂಪುಟ ೨, ಸಂಕ್ರಮಣ ಪ್ರಕಾಶನ, ಧಾರವಾಡ, ೧೯೯೩
೩೯. ಚಂದ್ರಶೇಖರ ಪಾಟೀಲ (ಸಂ): ಸಂಕ್ರಮಣ ಸಾಹಿತ್ಯ, ಸಂಪುಟ ೩, ಸಂಕ್ರಮಣ ಪ್ರಕಾಶನ, ಧಾರವಾಡ, ೧೯೯೪
೪೦. ಚದುರಂಗ: ಚದುರಂಗರ ಸಮಗ್ರ ಕಾದಂಬರಿಗಳು ಸಂಪುಟ ೨, ಅಭಿರುಚಿ ಪ್ರಕಾಶನ, ಮೈಸೂರು ೧೯೮೦
೪೧. ಚಂದ್ರಶೇಖರ ಪಾಟೀಲ: ಚಂಪಾಂಕಣ ಸಂಪುಟ ೨, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲ, ಮೈಸೂರು ೨೦೦೭
೪೨. ಡಾ.ಚಿನ್ನಪ್ಪ ಗೌಡ ಮತ್ತು ಡಾ.ಜನಾರ್ದನ ಭಟ್: ಸಂಪಾದಕರು, ಕರಾವಳಿಯ ಪ್ರಬಂಧಗಳು, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೬
೪೩. ಡಾ.ಚಿನ್ನಪ್ಪ ಗೌಡ ಸಂಪಾದಕರು, ಕರಾವಳಿಯ ಕತೆಗಳು, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೬
೪೪. ಜಯಂತ ಕಾಯ್ಕಿಣಿ: ಸಂಸ್ಕೃತಿ–ಅಡಿಗ ಅನುಸಂಧಾನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫
೪೫. ಜಯಶೀಲರಾವ್ ಎಸ್.ವಿ., ಟಿಯೆಸ್ಸಾರ್, ಕನ್ನಡ ಪತ್ರಿಕಾ ಅಕಾಡೆಮಿ, ಬೆಂಗಳೂರು ೨೦೦೦
೪೬. ಡಾ.ಜಯಪ್ರಕಾಶ್ ಮ್ಲಾವಿನಕು(ಸಂ) ಕಾರಂತ ಯುಗಾಂತ, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ವಿವೇಕಾನಂದ ಕಾಲೇಜು, ಪುತ್ತೂರು ೧೯೯೯
೪೭. ಜೋಶಿ ಜಿ.ಬಿ. ಮತ್ತು ಕೀರ್ತಿನಾಥ ಕುರ್ತಕೋಟಿ (ಸಂ): ಪುಟಬಂಗಾರ ಸಂಪುಟ ೫, ಮನೋಹರ ಗ್ರಂಥಮಾಲೆ, ಧಾರವಾಡ ೧೯೮೭
೪೮. ತಾರಾನಾಥ್ ಎನ್.ಎಸ್., ವೀಸೀ ವಿಮರ್ಶೆ ಸಂಪುಟ ೨, ಕಾವ್ಯ–ನಾಟಕ
೪೯. ದೇ.ಜವರೇ ಗೌಡ: ಸಾಹಿತಿಗಳ ಸಂಗದಲ್ಲಿ, ಅಂಕಿತ ಪುಸ್ತಕ, ಬೆಂಗಳೂರು ೧೯೯೯
೫೦. ಡಾ.ದೊಡ್ಡರಂಗೇ ಗೌಡ: ಕನ್ನಡ ನವೋದಯ ಕಾವ್ಯ – ಒಂದು ಪುನರ್‌ಮೌಲ್ಯಮಾಪನ, ಸುಮುಖ ಪ್ರಕಾಶನ, ಬೆಂಗಳೂರು ೨೦೦೪
೫೧. ನಿರಂಜನ ವಾನಳ್ಳಿ, ಕನ್ನಡದಲ್ಲಿ ಕಲೆ ಸಾಹಿತ್ಯ ಪತ್ರಿಕೆಗಳು, ಶಿವರಾಮ ಕಾರಂತ ಅಧ್ಯಯನ ಕೇಂದ್ರ,೨೦೦೧
೫೨. ಡಿ.ಎಲ್.ಎನ್. ಪೀಠಿಕೆಗಳು, ಲೇಖನಗಳು, ಡಿವಿಕೆ ಮೂರ್ತಿ ೧೯೭೧
೫೩. ನಿರಂಜನ: ಬುದ್ಧಿ ಭಾವ ಬದುಕು, ಸ್ಪಂದನ ಪ್ರಕಾಶನ, ಬೆಂಗಳೂರು ೧೯೮೪
೫೪. ನಾಡಿಗ ಕೃಷ್ಣಮೂರ್ತಿ, ನಿಯತಕಾಲಿಕಗಳು ಬ್ರಿಟಿಷ್ ಪತ್ರಿಕೋದ್ಯಮ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
೫೫. ನಾರಾಯಣ್ ಕೆ.ವಿ.: 'ಟಿ.ಎಸ್. ಎಲಿಯೆಟ್ ಮತ್ತು ಕನ್ನಡ ನವ್ಯಕಾವ್ಯ ಸಂದರ್ಭ', ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೧೯೮೮

೫೬. ನಾಡಿಗ ಕೃಷ್ಣಮೂರ್ತಿ: ನಾಡಿಗರ ಬರಹಗಳು, ಉಷಾ ಸಾಹಿತ್ಯ ಮಾಲೆ ಮೈಸೂರು ೧೯೮೧

೫೭. ಡಾ.ನಟರಾಜ್ ಹುಳಿಯಾರ್ (ಸಂ): ಪಿ.ಲಂಕೇಶ್, ಟೀಕೆ ಟಿಪ್ಪಣಿ ಸಂಪುಟ ೧, ಪತ್ರಿಕೆ ಪ್ರಕಾಶನ, ಬೆಂಗಳೂರು ೧೯೯೭

೫೮. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ: ಇಹದ ಪರಿಮಳದ ಹಾದಿ, ಅಂಕಿತ ಪುಸ್ತಕ, ಬೆಂಗಳೂರು ೨೦೦೦

೫೯. ನಿರಂಜನ: ಬುದ್ಧಿ ಭಾವ ಬದುಕು, ರಶ್ಮಿ ಪಬ್ಲಿಷರ್ಸ್, ಜಯನಗರ, ಬೆಂಗಳೂರು ೧೯೮೩

೬೦.ನಾಡಿಗ ಕೃಷ್ಣಮೂರ್ತಿ (ಸಂ): ಮೈಸೂರು ನಗರದ ಪತ್ರಕರ್ತರು, ಸ್ನಾತಕೋತ್ತರ ಪತ್ರಿಕೋದ್ಯಮ ಇಲಾಖೆ, ಮಾನಸ ಗಂಗೋತ್ರಿ, ಮೈಸೂರು ೧೯೭೩

೬೧. ನಾಗರತ್ನ ಕುಮಾರಿ ಬಿ.ಎಸ್. (ಸಂ) ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪

೬೨. ನಾಡಿಗ ಕೃಷ್ಣಮೂರ್ತಿ, ಭಾರತೀಯ ಪತ್ರಿಕೋದ್ಯಮ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ೨೦೦೬

೬೩. ನಾಯಕ ಜಿ.ಎಚ್., ಸಂಪಾದಕ, ಶತಮಾನದ ಕನ್ನಡ ಸಾಹಿತ್ಯ, ಶ್ರೀರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ ೨೦೦೦

೬೪. ನಾಗಮಣಿ ಎಸ್. ರಾವ್, ಸಂಪಾದಕರು: ಪಿ.ಆರ್. ರಾಮಯ್ಯ, ತಾಯಿನಾಡು, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ೧೯೯೫

೬೫. ನಾಗರಾಜ ರಾವ್ ಹ.ವೆಂ. ಸಂಪಾದಕೀಯ, ಪದ್ಮಪ್ರಜ್ಞಾ ಪ್ರಕಾಶನ, ಬೆಂಗಳೂರು ೧೯೮೮,

೬೬. ನಾಡಿಗ ಕೃಷ್ಣಮೂರ್ತಿ, ಬ್ರಿಟಿಷ್ ಪತ್ರಿಕೋದ್ಯಮ, ಸ್ನಾತಕೋತ್ತರ ಪತ್ರಿಕೋದ್ಯಮ ಇಲಾಖೆ, ಮಾನಸಗಂಗೋತ್ರಿ, ಮೈಸೂರು ೧೯೭೯

೬೭. ಪಂಡಿತಾರಾಧ್ಯ (ಸಂ), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೯

೬೮. ಡಾ. ಪ್ರಶಾಂತ ನಾಯಕ್ (ಸಂ), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪

೬೯. ಪುರುಷೋತ್ತಮ ಬಿಳಿಮಲೆ: ಬಂಡಾಯ ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೨

೭೦.ಪರಮಶಿವಯ್ಯ, (ಸಂ): ಆಧುನಿಕ ಭಾರತದಲ್ಲಿ ಪತ್ರಿಕೋದ್ಯಮ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ,

೭೧. ಪಾರ್ವತಿ ಎಚ್.ಎಸ್., ಡಾ. ನಿರುಪಮಾ: ೨೦ನೆಯ ಶತಮಾನದಲ್ಲಿ ಕರ್ನಾಟಕದ ಮಹಿಳೆಯರ ಸಾಧನೆ, ಆರತಿ ಪಬ್ಲಿಕೇಷನ್, ಬೆಂಗಳೂರು

೭೨. ಪುರುಷೋತ್ತಮ ಬಿಳಿಮಲೆ: ಬಂಡಾಯ-ದಲಿತ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ,

೭೩. ಪೂರ್ಣಚಂದ್ರ ತೇಜಸ್ವಿ, ಅಣ್ಣನ ನೆನಪು, ಪುಸ್ತಕ ಪ್ರಕಾಶನ, ಮೈಸೂರು ೨೦೦೬

೨೪. ಬರಗೂರು ರಾಮಚಂದ್ರಪ್ಪ: 'ಸಾಹಿತ್ಯ ಮತ್ತು ರಾಜಕಾರಣ', ಸಮತಾ ಪ್ರಕಾಶನ, ಬೆಂಗಳೂರು

೨೫. ಬಸವರಾಜ ಸಬರದ: ಸಾಹಿತ್ಯ ಸಂಗಾತಿ, ಪಲ್ಲವಿ ಪ್ರಕಾಶನ, ಗುಲಬರ್ಗಾ, ೧೯೯೪

೨೬. ಬರಗೂರು ರಾಮಚಂದ್ರಪ್ಪ (ಪ್ರಧಾನ ಸಂಪಾದಕ): ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ೨೦೦೨

೨೭. ಭಾರತೀದೇವಿ: ಸಂ: ಪುಸ್ತಕಲೋಕದ ಅನನ್ಯರು – ಡಿವಿಕೆ ಮೂರ್ತಿ, ಅಭಿನವ ಪ್ರಕಾಶನ, ಬೆಂಗಳೂರು ೨೦೦೮

೨೮. ಬಸವಾರಾಧ್ಯ ಎನ್ (ಸಂ): ಕನ್ನಡ ಗದ್ಯಾವಲೋಕನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೯೫

೨೯. ಬರಗೂರು ರಾಮಚಂದ್ರಪ್ಪ: ಪ್ರಧಾನ ಸಂಪಾದಕರು, ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೩೦. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು ೨೦೦೧

೩೧. ಬರಗೂರು ರಾಮಚಂದ್ರಪ್ಪ, ಪ್ರಧಾನ ಸಂಪಾದಕರು: ಕನ್ನಡ ಸಾಹಿತ್ಯ ಪತ್ರಿಕೆಗಳು: ಇತಿಹಾಸ ವರ್ತಮಾನ ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೩

೩೨. ಮೂರ್ತಿ ಡಿ.ವಿ.ಕೆ.: ಜೀವನ ಮೌಲ್ಯಗಳು ಮತ್ತು ಸಾಹಿತ್ಯ, ಡಿವಿಕೆ ಮೂರ್ತಿ ಪ್ರಕಾಶಕರು, ಕೃಷ್ಣಮೂರ್ತಿಪುರಂ, ಮೈಸೂರು ೧೯೮೬

೩೩. ಮುಳಿಯ ಮಹಾಬಲ ಭಟ್ಟ: ಕಡೆಂಗೊಡ್ಲು ಅಗ್ರಲೇಖನಗಳು, ಕರ್ನಾಟಕ ಸಂಘ, ಪುತ್ತೂರು, ದಕ್ಷಿಣ ಕನ್ನಡ, ೧೯೯೬

೩೪. ಮಾಸ್ತಿ ವೆಂಕಟೇಶ ಅಯ್ಯಂಗಾರ್: ಜೀವನ ಸಂಪಾದಕೀಯ ೨, ಜೀವನ ಕಾರ್ಯಾಲಯ, ೧೯೬೨

೩೫. ಮುತ್ತಣ್ಣ ಐ.ಎಂ.: ಹತ್ತೊಂಬತ್ತನೆಯ ಶತಮನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ಉಷಾ ಪ್ರೆಸ್, ಮೈಸೂರು ೧೯೭೯

೩೬. ಮನು ಚಕ್ರವರ್ತಿ ಮತ್ತು ವಿ.ಎಸ್.ಶ್ರೀಧರ್, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೩೭. ಮುಗಳಿ ರಂ.ಶ್ರೀ: ಕನ್ನಡ ಸಾಹಿತ್ಯದ ಇತಿಹಾಸ, ಕೇಂದ್ರ ಸಾಹಿತ್ಯ ಅಕಾಡೆಮಿ, ಹೊಸದೆಹಲಿ ೧೯೬೮

೩೮. ಡಾ.ಮಂಗಳಾ ಪ್ರಿಯದರ್ಶಿನಿ: ಆಧುನಿಕ ಕನ್ನಡ ಕಾವ್ಯದ ಸ್ವರೂಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ

೩೯. ಡಾ. ಮಂಗಳಾ ಪ್ರಿಯದರ್ಶಿನಿ, ಸಾಹಿತ್ಯ ಪತ್ರಿಕೆಗಳ ಇತಿಹಾಸ, ಕನ್ನಡ ಸಾಹಿತ್ಯ ಪತ್ರಿಕೆಗಳು ಇತಿಹಾಸ, ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩

೪೦. ಮಾಸ್ತಿ, ಪ್ರಸಂಗ ೧, ಜೀವನ ಕಾರ್ಯಾಲಯ,

೪೧. ರಂಗಾರೆಡ್ಡಿ ಕೋಡಿರಾಂಪುರ, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩,

೯೨. ರಾಜಪ್ಪ ದಳವಾಯಿ: ಆಧುನಿಕ ಕನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨

೯೩. ರಾಮಚಂದ್ರನ್ ಸಿ.ಎನ್.: ಸಾಹಿತ್ಯ ವಿಮರ್ಶೆ – ೧೯೯೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೯೪. ರಾಘವೇಂದ್ರ ರಾವ್ ಎಚ್.ಎಸ್.: ನಿಲುವು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು ೧೯೮೯

೯೫. ಧಾರವಾಡಕರ ರಾ.ಯ.: ಹೊಸಗನ್ನಡ ಸಾಹಿತ್ಯದ ಉದಯ ಕಾಲ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೨

೯೬. ರಂಗನಾಥರಾವ್ ಜಿ.ಎನ್.: ಪತ್ರಿಕೋದ್ಯಮ, ಪರಿಷ್ಕೃತ ಸಮಗ್ರ ಸಂಪುಟ, ಕಾಮಧೇನು ಪ್ರಕಾಶನ, ಶೇಷಾದ್ರಿಪುರಂ, ಬೆಂಗಳೂರು

೯೭. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೮

೯೮. ಪ್ರೊ.ರಾಧಾಕೃಷ್ಣ ಕೆ.ಈ: ಪ್ರಧಾನ ಸಂಪಾದಕರು, ಗೋಪಾಲಕೃಷ್ಣ ಅಡಿಗ: ಸಂಸ್ಕೃತಿ ಅನುಸಂಧಾನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೨೦೦೫

೯೯. ರಾಜೇಗೌಡ ಹ.ಕ. ಸಂಪಾದಕರು, ಚಿತ್ರಗುಪ್ತ ಸ್ಮರಣೆ, ಎಚ್.ಕೆ.ವೀರಣ್ಣಗೌಡ ಸ್ಮಾರಕ ಪ್ರಕಾಶನ, ಮದ್ದೂರು ಮಂಡ್ಯ ಜಿಲ್ಲೆ, ೧೯೯೫

೧೦೦. ರಾಜಪ್ಪ ದಳವಾಯಿ, ಆಧುನಿಕ ಕನ್ನಡ ಸಾಹಿತ್ಯ, ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨

೧೦೧. ಡಾ.ಲೋಲಾಕ್ಷಿ ಎನ್.ಕೆ. ಸಂಪಾದಕರು, ಕನ್ನಡ ಪತ್ರಿಕೆಗಳು ಮತ್ತು ಮಹಿಳೆ, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೬

೧೦೨. ಡಾ.ವಿಜಯಶ್ರೀ ಕೆ. ಕನ್ನಡ ಪತ್ರಿಕೆಗಳು ಮತ್ತು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿವಿ, ಹಂಪಿ, ೨೦೦೦

೧೦೩. ವೆಂಕಟಸುಬ್ಬಯ್ಯ ಜಿ., ಕನ್ನಡವನ್ನು ಉಳಿಸಿ ಬೆಳೆಸಿದವರು, ಕರ್ನಾಟಕ ಸಂಘ, ಪುತ್ತೂರು

೧೦೪. ಸಂಸ ನಾಟಕಗಳು, ಸಂ: ಬಿ.ವಿ. ವೈಕುಂಠರಾಜು, ಮುನ್ನುಡಿ, ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು, ೧೯೮೮

೧೦೫. ವೆಂಕಟಾಚಲಶಾಸ್ತ್ರಿ ಟಿ.ವಿ.: ಎ.ಆರ್.ಕೃಷ್ಣಶಾಸ್ತ್ರಿ, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೨೦೦೦

೧೦೬. ಪ್ರೊ.ವೆಂಕಟಸುಬ್ಬಯ್ಯ ಜಿ: ಕನ್ನಡ ನಿಘಂಟು ಪರಿವಾರ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು ೨೦೦೨

೧೦೭. ಡಾ. ವಿದ್ಯಾಶಂಕರ ಎಸ್., ಸಮಾಹಿತ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು ೨೦೦೮

೧೦೮. ಶ್ರೀನಿವಾಸ ಹಾವನೂರ, ಹೊಸಗನ್ನಡ ಅರುಣೋದಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೮

೧೦೯. ಶಿವಾರೆಡ್ಡಿ ಕೆ.ಸಿ., ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು, ೨೦೦೩

೧೧೦. ಶೇಷಗಿರಿ ರಾವ್ ಎಲ್.ಎಸ್., ಶತಮಾನದ ಕನ್ನಡ ಸಾಹಿತ್ಯ

೧೧೧. ಶಿವರುದ್ರಪ್ಪ ಜಿ.ಎಸ್., ಕನ್ನಡ ಕಾವ್ಯತತ್ವಚಿಂತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೧೧೨. ಶೇಷಗಿರಿ ರಾವ್ ಎಲ್.ಎಸ್., ಶತಮಾನದ ಕನ್ನಡ ಸಾಹಿತ್ಯ
೧೧೩. ಶಿವರುದ್ರಪ್ಪ ಜಿ.ಎಸ್., ಕನ್ನಡ ಕಾವ್ಯತತ್ವಚಿಂತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೧೧೪. ಶೇಷಗಿರಿ ರಾವ್ ಎಲ್.ಎಸ್., ಶತಮಾನದ ಕನ್ನಡ ಸಾಹಿತ್ಯ
೧೧೫. ಶಿವರುದ್ರಪ್ಪ ಜಿ.ಎಸ್., ಕನ್ನಡ ಕಾವ್ಯತತ್ವಚಿಂತನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೧೧೬. ಡಾ.ಶಿವಣ್ಣ ಎಸ್., ಚಂದ್ರಶೇಖರ ಪಾಟೀಲರ ಸಾಹಿತ್ಯದ ಸಮಗ್ರ ಅಧ್ಯಯನ, ಕ.ಸಾ.ಪ., ೨೦೦೮,
೧೧೭. ಶೇಷಗಿರಿ ರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ, ಬೆಂಗಳೂರು
೧೧೮. ಡಾ.ಶಂಕರ್ ಎಸ್., ಕನ್ನಡದಲ್ಲಿ ಪ್ರಾಯೋಗಿಕ ವಿಮರ್ಶೆ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೧೯. ಡಾ.ಶಿವರುದ್ರಪ್ಪ ಜಿ.ಎಸ್.: ಬಂಡಾಯ ಹತ್ತು ವರ್ಷ, ಸಂ: ಆರ್.ಜಿ. ಹಳ್ಳಿ ನಾಗರಾಜ್, ಅನ್ವೇಷಣ ಪ್ರಕಾಶನ, ಬೆಂಗಳೂರು
೧೨೦. ಡಾ.ಶ್ರೀಮತಿ ಎಚ್.ಎಸ್., (ಸಂ), ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಹಂಪಿ, ಕನ್ನಡ ವಿಶ್ವವಿದ್ಯಾಲಯ, ೨೦೦೬
೧೨೧. ಶಂಕರ ನಾರಾಯಣ ತೀ.ನಂ: ತೀನಂಶ್ರೀ, ಸಾಹಿತ್ಯ ಅಕಾಡೆಮಿ, ೨೦೦೭
೧೨೨. ಡಾ. ಶೇಷಗಿರಿ ರಾವ್ ಎಲ್.ಎಸ್., ಪ್ರಧಾನ ಸಂಪಾದಕರು: ಕನ್ನಡದ ಅಳಿವು ಉಳಿವು, ಕನ್ನಡ ಭಾಷಾ ಅಭಿವೃದ್ಧಿಯ ಸಮೀಕ್ಷಾ ಪ್ರಕಾಶನ, ಬೆಂಗಳೂರು ೧೯೮೫
೧೨೩. ಡಾ. ಶಿವರುದ್ರಪ್ಪ ಜಿ.ಎಸ್.: ದಶವಾರ್ಷಿಕ ಸಾಹಿತ್ಯ ಸಮೀಕ್ಷೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೨
೧೨೪. ಪ್ರೊ.ಶೇಕ್ ಅಲಿ ಬಿ: ಪ್ರಧಾನ ಸಂಪಾದಕರು: ಕರ್ನಾಟಕ ಚರಿತ್ರೆ ಸಂಪುಟ ೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭
೧೨೫. ಶೇಷಗಿರಿ ರಾವ್ ಎಲ್.ಎಸ್: ಪ್ರಧಾನ ಸಂಪಾದಕರು: ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಉದಯಭಾನು ಕಲಾಸಂಘ, ಬೆಂಗಳೂರು ೧೯೯೩
೧೨೬. ಡಾ. ಶಿವರಾಮ ಶೆಟ್ಟಿ ಬಿ., ಸಂಪಾದಕರು, ನಾಡು ನುಡಿ ಪ್ರತಿನಿಧೀಕರಣದ ಕಥನ, ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ, ೨೦೦೬
೧೨೭. ಡಾ.ಶಿವರುದ್ರಪ್ಪ ಜಿ.ಎಸ್., ಪ್ರಧಾನ ಸಂಪಾದಕರು, ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೯೩
೧೨೮. ಡಾ. ಶಿವರುದ್ರಪ್ಪ ಜಿ.ಎಸ್., ಕನ್ನಡ ಕಾವ್ಯತತ್ವ ಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭
೧೨೯. ಡಾ.ಶ್ರೀಧರ ವಿ.ಎಸ್., ಸಂಯೋಜನೆ, ಪಿ.ಲಂಕೇಶ್: ಸಾಹಿತಿ ಸಾಹಿತ್ಯ ವಿಮರ್ಶೆ, ಲಂಕೇಶ್ ಪ್ರಕಾಶನ, ಬಸವನಗುಡಿ, ಬೆಂಗಳೂಋ ೨೦೦೮

೧೩೦. ಡಾ.ಶಂಕರ ಎಂ: ಕನ್ನಡ ಸಾಹಿತ್ಯದಲ್ಲಿಪ್ರಾಯೋಗಿಕ ವಿಮರ್ಶೆಯ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೨೦೦೮

೧೩೧. ಡಾ.ಶ್ರೀಕಂಠಯ್ಯ ಕೆ.:ಕವಿ ಕಲಾವಿದರ ಪ್ರಸಂಗಗಳು, ತಾ.ರಾ.ನಾಗರಾಜ್, ಪ್ರಕಾಶಕರು ಬೆಂಗಳೂರು ೨೦೦೨

೧೩೨. ಡಾ. ಸರಜೂ ಕಾಟ್ಕರ್, ಸಾಹಿತ್ಯ ಮತ್ತು ಪತ್ರಿಕೆ ಸಂಬಂಧ, ಪತ್ರಿಕೆ ಮತ್ತು ಸಾಹಿತ್ಯ ಅನ್ವೇಷಣ ಪ್ರಕಾಶನ, ಬೆಂಗಳೂರು

೧೩೩. ಡಾ. ಸರಜೂ ಕಾಟ್ಕರ್, ಪತ್ರಿಕೆ ಮತ್ತು ಸಾಹಿತ್ಯ, ಅನ್ವೇಷಣ ಪ್ರಕಾಶನ, ಬೆಂಗಳೂರು

೧೩೪. ವೆಂಕಟಾಚಲ ಶಾಸ್ತ್ರಿ ಟಿ.ವಿ., ಹೊಸಗನ್ನಡ ಸಾಹಿತ್ಯದ ಕೆಲವು ನೋಟಗಳು, ೧೯೮೨

೧೩೫. ಸುಮತೀಂದ್ರ ನಾಡಿಗ್: ಅಡಿಗ ಸಂಸ್ಕೃತಿ ಅನುಸಂಧಾನ, ಪಾಶ್ಚಾತ್ಯ ನವ್ಯ ಕಲ್ಪನ ಮತ್ತು ನವ್ಯ ಕಾವ್ಯದ ಕಲ್ಪನೆ, ಕ.ಸಾ.ಪ., ಬೆಂಗಳೂರು, ೨೦೦೪

೧೩೬. ಸರಜೂ ಕಾಟ್ಕರ್, ಬಂಡಾಯ ಸಾಹಿತ್ಯ ಪ್ರಸ್ತಾವನೆ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೧೯೯೩

೧೩೭. ಸರಜೂ ಕಾಟ್ಕರ್: ದಲಿತ ಬಂಡಾಯ ಚಳವಳಿ: ಕನ್ನಡ ಮರಾಠಿ ಸಾಹಿತ್ಯದಲ್ಲಿ, ಸಿವಿಜಿ ಪಬ್ಲಿಕೇಷನ್, ಬೆಂಗಳೂರು

೧೩೮. ಸುರೇಂದ್ರ ದಾನಿ: ಸಂ: ಕನ್ನಡ ಪತ್ರಿಕೋದ್ಯಮದ ಹರಿಕಾರ – ಮೊಹರೆ, ಕನ್ನಡ ಪತ್ರಿಕಾ ಅಕಾಡೆಮಿ, ಬೆಂಗಳೂರು ೧೯೯೫

೧೩೯. ಡಾ. ಸರಜೂ ಕಾಟ್ಕರ್: ಕರ್ನಾಟಕದ ಆತ್ಮಗೌರವ ಪಾಟೀಲ ಪುಟ್ಟಪ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ ೨೦೦೬

೧೪೦. ಸೀತಾರಾಮಯ್ಯ ವಿ.: ವ್ಯಕ್ತಿ ಚಿತ್ರ ಸಂಪುಟ ಭಾಗ , ವೀಸೀ ಸಂಪದ, ಬೆಂಗಳೂರು ೧೯೯೬

೧೪೧. ಡಾ. ಸರಜೂ ಕಾಟ್ಕರ್: ಪತ್ರಿಕೆ ಮತ್ತು ಸಾಹಿತ್ಯ, ಅನ್ವೇಷಣೆ ಪ್ರಕಾಶನ ಬೆಂಗಳೂರು

೧೪೨. ಸೀತಾರಾಮಯ್ಯ ವಿ, ವಿಮರ್ಶೆ ಸಂಪುಟ , ಸಾಹಿತ್ಯಾವಲೋಕನ, ವೀಸೀ ಸಂಪದ, ಬೆಂಗಳೂರು ೨೦೦೩

೧೪೩. ಸುಬ್ಬರಾವ್ ವಿ.ಎನ್., ಪ್ರಧಾನ ಸಂಪಾದಕರು, ಸಂವಹನ, ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು ೨೦೦೬

೧೪೪. ಡಾ.ಸೂರ್ಯನಾಥ ಕಾಮತ್, ಕರ್ನಾಟಕತ್ವದ ಜಾಗೃತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೧೯೯೮

೧೪೫. ಸಿದ್ಧವನಹಳ್ಳಿ ಕೃಷ್ಣಶರ್ಮ: ವ್ಯಕ್ತಿ ಶಕ್ತಿ, ಗಾಂಧಿ ಸಾಹಿತ್ಯಸಂಘ, ಬೆಂಗಳೂರು ೧೯೭೬

೧೪೬. ಡಾ. ಹೆಗಡೆ ಎಂ.ಜಿ., ಕಾವ್ಯ ೧೯೦೦–೧೯೫೦, ಶತಮಾನದ ಸಾಹಿತ್ಯ ೨೦೦೦

೧೪೭. ಡಾ. ಹೆಗಡೆ ಎಂ.ಜಿ., ಮಾಸ್ತಿಯವರ ವಿಮರ್ಶೆ: ಒಂದು ಅಧ್ಯಯನ, ೧೯೯೧

೧೪೮. ಹಂಚಿಮನಿ ವೀರಭದ್ರಪ್ಪ: ಇವತ್ತಿನ ಸಾಹಿತ್ಯಿಕ ಪತ್ರಿಕೆಗಳು – ಒಂದು ಸಮೀಕ್ಷೆ, ಕರ್ನಾಟಕ ಸಾಹಿತ್ಯ ಅಕಾಡೆಮಿ

೧೪೯. ಹಾ.ಮಾ.ನಾಯಕ್ ಮತ್ತು ಎಚ್. ತಿಪ್ಪೇರುದ್ರಸ್ವಾಮಿ (ಸಂ): ಎ.ಆರ್.ಕೃ ಜೀವನ ಸಾಧನೆ, ಪ್ರಸಾರಾಂಗ, ಮೈಸೂರು ೧೯೭೧

೧೫೦. ಹರಿಹರಪ್ರಿಯ: ಸಮಗ್ರ ವಿಚಾರ ವಿಮರ್ಶೆ ಸಂಪುಟ ೨, ಸಿವಿಜಿ ಪಬ್ಲಿಕೇಷನ್, ಬೆಂಗಳೂರು

೧೫೧. ಡಾ. ಹಾ.ಮಾ. ನಾಯಕ . ಸಾಹಿತ್ಯ ಸಲ್ಲಾಪ, ಸುರುಚಿ ಪ್ರಕಾಶನ, ಮೈಸೂರು ೧೯೭೨

೧೫೨. ಡಾ. ಹೆಗಡೆ ಜಿ.ಎಂ, ಸಂಪಾದಕರು, ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೮

೧೫೩. ಡಾ.ಹೆಗಡೆ ಜಿ.ಎಂ: ಮಾಸ್ತಿಯವರ ವಿಮರ್ಶೆ: ಒಂದು ಅಧ್ಯಯನ, ಶ್ರೀಮಾತಾ ಪ್ರಕಾಶನ, ಸಾಧನಕೇರಿ, ಧಾರವಡ ೧೯೯೧

೧೫೪. ಹಾಮಾನಾ, ಸಾಹಿತ್ಯ ಸಲ್ಲಾಪ, ಕನ್ನಡಪ್ರಭ, ಮಾರ್ಚ್ ೧೯೬೯

೧೫೫. ಡಾ.ಜಿ.ಎಂ. ಹೆಗಡೆ: ಮಾಸ್ತಿಯವರ ವಿಮರ್ಶೆ – ಒಂದು ಅಧ್ಯಯನ, ಶ್ರೀಮಾತಾ ಪ್ರಕಾಶನ, ಧಾರವಾಡ, ೧೯೯೧